ಕನ್ನಡ ನಿಘಂಟು ಪರಿವಾರ



ಪ್ರೊ. ಜಿ. ವೆಂಕಟಸುಬ್ಬಯ್ಯ

ಆಕರ ಗ್ರಂಥಮಾಲೆ

ಕನ್ನಡ ನಿಘಂಟು ಪರಿವಾರ

ಪ್ರೊ. ಜಿ. ವೆಂಕಟಸುಬ್ಬಯ್ಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

KANNADA NIGHANTU PARIVARA

Author

Prof. G. Venkatasubbiah
Formerly Professor of Kannada
Vijaya College, Bangalore.

Publisher

.The Administrative Officer
Kannada Pustaka Pradhikara
(Kannada Book Authority)
Pampamahakavi Road, Chamarajapet
Bangalore-560018

First Edition : 2002

›s : xvi + 286 Price : Rs. 200/-

ISBN : 81-7713-124-9

Cover Design
Shachidevi V. Suresh

Printer

FRIENDS COM-TECH
Chamarajpet, Bangalore-18
Phone : 6528454

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಹಲವು ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿ ಮುಖ್ಯವಲ್ಲವೆ ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು !

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ

ಸಹಸ್ರಮಾನವಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ ! ಅನೇಕ ತಳವರ್ಗದ ಜನಸ್ಥಾನಗಳು ಮೊದಲ ಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಇದು ಈಗ ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು-ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದ್ಯಮಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ ! ಕನ್ನಡ ಪುಸ್ತಕ ಪ್ರಾಧಿಕಾರವು ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಸರಿಯಷ್ಟೆ. ಆಕರ ಗ್ರಂಥಗಳ ಪ್ರಕಟಣೆ, ಜನಸಾಮಾನ್ಯರೆಲ್ಲ ಓದಬಲ್ಲ ಪ್ರಕಟಣೆ, ಮಕ್ಕಳ ಸಾಹಿತ್ಯ ಪ್ರಕಟಣೆ, ವಿಜ್ಞಾನ ಸಾಹಿತ್ಯ ಪ್ರಕಟಣೆ-ಮೊದಲಾದವುಗಳನ್ನು ವಿವಿಧ ಮಾಲೆಗಳಲ್ಲಿ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿದೆ. ನಾಡಿನ ಜನತೆ ಅತ್ಯಂತ ಪ್ರೀತಿಯಿಂದ ನಮ್ಮ ಪ್ರಕಟಣೆಗಳನ್ನು ಸ್ವಾಗತಿಸುತ್ತಿದೆ. ಉತ್ತಮ ಪ್ರಕಟಣೆಗಳನ್ನು ಹೊರತರುವುದೇ ಪ್ರಾಧಿಕಾರದ ಉದ್ದೇಶವೂ ಆಗಿದೆ. ಇದು ಪುಸ್ತಕ ಸಂಸ್ಕೃತಿಯ ದ್ಯೋತಕವೆಂದು ಪ್ರಾಧಿಕಾರವು ಭಾವಿಸುತ್ತದೆ.

-- ಕನ್ನಡ ಪುಸ್ತಕ ಪ್ರಾಧಿಕಾರವು ಈಗಾಗಲೇ ಕೆಲವು ಅಪರೂಪದ ಆಕರಗ್ರಂಥಗಳನ್ನು ಪ್ರಕಟಿಸುತ್ತಿದೆ. ಇದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ನಿಘಂಟು, ಛಂದಸ್ಸು, ಕಾವ್ಯಚಿಂತನೆ ಮೊದಲಾದ ವಿವಿಧ ವಿಷಯಗಳನ್ನು ಕುರಿತಿದೆ. ಕನ್ನಡ ವಿದ್ವದ್ ಲೋಕವು ಈಗಾಗಲೇ ಈ ಮಾಲೆಯಡಿ ಪ್ರಕಟಗೊಂಡ ಅಪೂರ್ವ ಗ್ರಂಥಗಳನ್ನು ಬಹು ಹೆಮ್ಮೆಯಿಂದ ಸ್ವಾಗತಿಸಿದೆ. ಈ ಮಾಲೆಯಡಿ ಈಗ ಹಿರಿಯ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ 'ಕನ್ನಡ ನಿಘಂಟು ಪರಿವಾರ' ವೆಂಬ ಆಕರಗ್ರಂಥವೊಂದು ಪ್ರಕಟವಾಗುತ್ತಿದೆ. ನಿಘಂಟು ವಿಜ್ಞಾನವು ಕಳೆದ ಶತಮಾನದ ಕೊನೆಕೊನೆಗೆ ಶಾಸ್ತ್ರೀಯ ವಿಧಾನವಾಗಿ ರೂಪು ಪಡೆಯಿತಷ್ಟೆ. ಹೀಗೆ ರೂಪುಗೊಟ್ಟವರಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಸಾಹಸ, ನಡೆಸಿದ ಪ್ರಯತ್ನ, ಮಾಡಿದ ಕೆಲಸ ಸ್ಮರಣೀಯ ಹಾಗೂ ಅನನುಕರಣೀಯ. ತಮ್ಮ ಬಹುಬಗೆಯ ಕೃತಿಗಳ ಮೂಲಕ ಈ ಶಾಸ್ತ್ರವನ್ನು ಕ್ರಿಯಾತ್ಮಕಗೊಳಿಸಿದ್ದಾರೆ, ಕ್ರಿಯಾತ್ಮಕಗೊಳಿಸುತ್ತಿದ್ದಾರೆ. ನಿಘಂಟು ಶಾಸ್ತ್ರವು ಇಂದು ಅನಿವಾರ್ಯವೂ ಅಗತ್ಯವೂ ಆದ ಶಾಸ್ತ್ರವಾಗಿ ಕನ್ನಡ ಸಂಸ್ಕೃತಿ ಸಂದರ್ಭದಲ್ಲಿ ಬೆಳೆಯುತ್ತಿದೆ.

'ಕನ್ನಡ ನಿಘಂಟು ಪರಿವಾರ' ಗ್ರಂಥವು ನಿಘಂಟು ವಿಜ್ಞಾನಕ್ಕೆ ಸಂಬಂಧಿಸಿದ ಬಹುಮುಖ್ಯ ವಿಚಾರಗಳನ್ನು ಕುರಿತು ಬಹು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ, ವ್ಯಾಖ್ಯಾನಿಸುತ್ತದೆ. ಇದು ಪ್ರಧಾನವಾಗಿ ವಿಶ್ಲೇಷಣೆ ಮತ್ತು ವ್ಯಾಖ್ಯಾನವನ್ನು ಹೊಂದಿದೆ. ಇಂದು ನಿಘಂಟು ಶಾಸ್ತ್ರವು ಪರಿಚಯಾತ್ಮಕ ನೆಲೆಯಿಂದ ಹೊರಬಂದಿದೆಯಷ್ಟೆ. ಅದು ವಿವಿಧ ಶಾಸ್ತ್ರಗಳ ಜತೆ ಹೊಸ ಬಗೆಯ ವ್ಯಾಖ್ಯಾನಗಳಿಗೆ ತೊಡಗಿದೆ. ಹಿರಿಯ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರೇ ಹೊಸ ಬಗೆಯ ವ್ಯಾಖ್ಯಾನಗಳಿಗೆ ತೊಡಗಿರುವುದು ವಿಶೇಷ ಅಂಶವಾಗಿದೆ. ಅವರು ಈಗಾಗಲೇ ನಾಡಿನಲ್ಲೇ 'ಇಗೊ ಕನ್ನಡ'ದ ಮೂಲಕ ಮನೆಮಾತಾಗಿ 'ಭಾಷೆ'ಯೆಂಬ ಮಾಧ್ಯಮದ ಮೂಲಕ ಭಾಷೆ ಮತ್ತು ಸಂಸ್ಕೃತಿಗಳ ಅನುಸಂಧಾನ ಕುರಿತು ಚಿಂತಿಸುತ್ತಿದ್ದಾರೆ. ಆ ಚಿಂತನೆಯ ಫಲವನ್ನು ನಾಡು ಪಡೆಯುತ್ತಿದೆ. ಈ ಗ್ರಂಥವು ಇಂಥ ಚಿಂತನದ ಮುಖ್ಯ ಎಳೆಗಳನ್ನೆಲ್ಲ ಒಳಗೊಂಡಿದೆ.

ಇಂಥ ಮಹತ್ವದ ಗ್ರಂಥವು ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಗೊಳ್ಳಲು ಅನುವು ಮಾಡಿಕೊಟ್ಟಿರುವ ಪ್ರೊ. ಜಿ. ವೆಂಕಟಸುಬ್ಬಯ್ಯನವರನ್ನು ನಾನು ಮನಸಾರೆ ಅಭಿವಂದಿಸುತ್ತೇನೆ. ನಮ್ಮ ಪ್ರಾಧಿಕಾರದ ಸದಸ್ಯಮಿತ್ರರು ಈ ಪುಸ್ತಕ ಹೊರಬರುವ ವೇಳೆಯಲ್ಲಿ ನನ್ನೊಡನೆ ಇದ್ದಾರೆ. ಅವರ ಒತ್ತಾಸೆ ನನ್ನ ಮೇಲಿದೆ. ಮುದ್ರಕರಿಗೂ ಮುಖಪುಟ ವಿನ್ಯಾಸಕರಿಗೂ ನನ್ನ ವಂದನೆಗಳು ಸಲ್ಲುತ್ತವೆ. ನಾಡಿನ ಜನ ಈ ಕೃತಿಯನ್ನು ಬರಮಾಡಿಕೊಳ್ಳಬೇಕೆಂದು ಬೇಡುತ್ತೇನೆ.

ಲೇಖಕನ ಅರಿಕೆ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಮಲ್ಲೇಪುರಂ ಜಿ. ವೆಂಕಟೇಶ ಅವರು ನಿಘಂಟು ಕ್ಷೇತ್ರಕ್ಕೆ ಸಂಬಂಧಿಸಿದ ಒಂದು ಪುಸ್ತಕವನ್ನು ರಚಿಸಿಕೊಡಬೇಕೆಂದು ನನಗೆ ಒಮ್ಮೆ ಸೂಚನೆಯನ್ನು ನೀಡಿ, ಪತ್ರವನ್ನು ಬರೆದರು. ಆ ಪ್ರೋತ್ಸಾಹವೇ ನನ್ನನ್ನು ಈ ಧೈರ್ಯದ ಕೆಲಸಕ್ಕೆ ಕೈಹಾಕುವಂತೆ ಮಾಡಿತು. ಇಪ್ಪತ್ತು ವರ್ಷಗಳ ಕಾಲ ನಿಘಂಟು ನಿರ್ಮಾಣದಲ್ಲಿ ತೊಡಗಿದ್ದಾಗ ನಮ್ಮ ದೇಶದ ಇತರ ಭಾಷಾ ವಲಯಗಳಲ್ಲಿ ನೆರವೇರಿದ ನಿಘಂಟು ವಿಚಾರವಾದ ಸಂಕಿರಣಗಳಲ್ಲಿ ಭಾಗವಹಿಸಿ ನಿಘಂಟು ಕ್ಷೇತ್ರದ ವ್ಯಾಪ್ತಿಯ ಪರಿಚಯವನ್ನು ಮಾಡಿಕೊಂಡಿದ್ದೆ. ಅನೇಕ ಸಂಕಿರಣಗಳಲ್ಲಿ ವಿವಿಧ ವಿಷಯಗಳನ್ನು ನಿರೂಪಿಸಿ ಚರ್ಚೆಯಲ್ಲಿ ಪಾಲುಗೊಂಡಿದ್ದೆ. ಈಗ ಅವುಗಳನ್ನೆಲ್ಲ ಕ್ರೋಡೀಕರಿಸಿ ಈ ಪುಸ್ತಕವನ್ನು ರೂಪಿಸಿದ್ದೇನೆ. ನಿಘಂಟುಗಳ ಬಗ್ಗೆ ಕನ್ನಡದಲ್ಲಿ ಗ್ರಂಥಗಳೇ ಇಲ್ಲ. ಆದುದರಿಂದ ನಾನೇ ಒಂದು ಬಗೆಯ ವಿಷಯ ನಿರೂಪಣೆಯ ವ್ಯವಸ್ಥೆಯನ್ನು ಕಲ್ಪಿಸಿ ನಿಘಂಟು ರಚನೆಯ ಸುತ್ತುಮುತ್ತ ಇರುವ ವಿವರಗಳನ್ನು ಸಂಗ್ರಹಿಸಿ ಅವುಗಳನ್ನು ಜೋಡಿಸಿದ್ದೇನೆ. ಇಂಗ್ಲಿಷ್ ಭಾಷೆಯಲ್ಲಿ ನಿಘಂಟು ಶಾಸ್ತ್ರದ ಬಗ್ಗೆ ಎಷ್ಟು ವ್ಯಾಪಕವಾಗಿ ಗ್ರಂಥಗಳು ರಚಿತವಾಗಿವೆ ಎಂಬುದನ್ನು ನೆನೆದಾಗ ನಮಗೆ ಆಶ್ಚರ್ಯವಾಗುತ್ತದೆ. ಇಂಥ ಶಾಸ್ತ್ರದ ಬಗ್ಗೆ ನಮ್ಮಲ್ಲಿ ಒಂದು ಗ್ರಂಥವೂ ಇಲ್ಲದಿರುವುದಕ್ಕೆ ನಮ್ಮ ಆಸಕ್ತಿಯ ಕೊರತೆಯೇ ಕಾರಣ.

ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ನಾನು ನೀಡಿದ ದಿ|| ಶಿ.ಶಿ. ಬಸವನಾಳ ಸ್ಮಾರಕ ಉಪನ್ಯಾಸ, ಧಾರವಾಡದಲ್ಲಿ ನಡೆದ ರೆ. ಕಿಟ್ಟೆಲ್ ಸಂಬಂಧವಾದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಚೆನ್ನೈ ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಪ್ರೊ. ಟಿ. ಮರಿಯಪ್ಪ ಭಟ್ಟ ಸ್ಮಾರಕ ಉಪನ್ಯಾಸಗಳನ್ನು ಪುನಃ ಓದಿ ತಿದ್ದಿ ಇಲ್ಲಿ ಅಳವಡಿಸಿಕೊಂಡಿದ್ದೇನೆ. ಇವಲ್ಲದೆ ನವಕರ್ನಾಟಕ ಪ್ರಕಾಶನದವರು ಪ್ರಕಟಿಸಿರುವ ನನ್ನ ಮೂರು ಪುಸ್ತಕಗಳು - ಇಗೋ ಕನ್ನಡ ೧, ೨ ಮತ್ತು ಎರವಲು ಪದಕೋಶ - ಇವುಗಳ ಪೀಠಿಕಾ ಭಾಗಗಳನ್ನು ಉಪಯೋಗಿಸಿಕೊಂಡಿದ್ದೇನೆ. ಇದನ್ನು ಸಾಧ್ಯಮಾಡಿದ ಅವರಿಗೆಲ್ಲ ನಾನು ಕೃತಜ್ಞನಾಗಿದ್ದೇನೆ.

ನನ್ನ ಗ್ರಂಥವಾಚನ ಸಮಯದಲ್ಲಿ ನನಗೆ ಒಪ್ಪಿಗೆಯಾದ ಅನೇಕ ಲೇಖಕರ ಅಭಿಪ್ರಾಯಗಳನ್ನು ಕುರಿತು ಟಿಪ್ಪಣಿ ಮಾಡಿದ್ದರೂ ಅವರೆಲ್ಲರ ಗ್ರಂಥಗಳ ವಿವರಗಳನ್ನು ಈಗ ನಿರ್ಧರಿಸುವುದು ಅಸಾಧ್ಯವಾಗಿದೆ. ಆದುದರಿಂದ ನಾನು ನಿರೂಪಿಸಿರುವ ಅನೇಕ ಅಭಿಪ್ರಾಯಗಳಿಗೆ ನಿಘಂಟುಶಾಸ್ತ್ರವನ್ನು ಕುರಿತ ಅನೇಕ ಶಾಸ್ತ್ರೀಯ ಗ್ರಂಥಗಳಿಗೆ ನಾನು ಋಣಿಯಾಗಿದ್ದೇನೆ ಎಂದು ತಿಳಿಸಬಯಸುತ್ತೇನೆ.

ನಮ್ಮ ನಾಡಿನಲ್ಲಿ ನಿಘಂಟು ಶಾಸ್ತ್ರ ಈಗೀಗ ಪ್ರಾಧಾನ್ಯವನ್ನು ಪಡೆಯುತ್ತಿದೆ. ವಿವಿಧ ರೀತಿಯ ಸಂಶೋಧನೆಗೆ ಇನ್ನೂ ಅಪಾರವಾದ ಅವಕಾಶವಿದೆ. ಯುವ ವಿದ್ವಾಂಸರು ದೀರ್ಘಕಾಲ ಸಂಶೋಧನೆ ಮಾಡಿ ಈ ಕ್ಷೇತ್ರವನ್ನು ಇನ್ನೂ ಹಸನುಮಾಡಬಹುದು. ಹೊಸ ತಲೆಮಾರಿಗೆ ಬಿಟ್ಟ ವಿಷಯ ಇದು.

ಡಾ। ಮಲ್ಲೇಪುರಂ ಜಿ. ವೆಂಕಟೇಶ ಅವರು ಸ್ವತಃ ದೊಡ್ಡ ವಿದ್ವಾಂಸರು. ಅವರೇ ಮಾಡಬಹುದಾಗಿದ್ದ ಈ ಕಾರ್ಯವನ್ನು ನನ್ನ ಕೈಯಲ್ಲಿ ಮಾಡಿಸಿದ್ದಾರೆ. ಈ ಪುಸ್ತಕಕ್ಕ ಅವರೇ **'ಕನ್ನಡ ನಿಘಂಟು ಪರಿವಾರ'** ಎಂಬ ಹೆಸರನ್ನು ಸೂಚಿಸಿ ಉಪಕರಿಸಿದ್ದಾರೆ. ಇದರ ರಚನೆಯ ಕಾಲದಲ್ಲಿ ಅವರು ನೀಡಿದ ಪ್ರೋತ್ಸಾಹಕ್ಕೆ ನಾನು ಕೃತಜ್ಞ.

ನನ್ನ ಪೂರ್ವ ವಯಸ್ಸಿನಲ್ಲಿ ಸಂಸ್ಕೃತ ನಿಘಂಟನ್ನೂ ನಿರುಕ್ತವನ್ನೂ ಬೋಧಿಸಿ ನಿಘಂಟು ಕ್ಷೇತ್ರದಲ್ಲಿ ವ್ಯಾಪಕ ತಿಳಿವನ್ನು ಮೂಡಿಸಿದ ಹಿರಿಯ ವಿದ್ವಾಂಸರಾಗಿದ್ದ **ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳ** ನೆನಪಿಗೆ ಈ ಪುಸ್ತಕವನ್ನು ವಿನಯದಿಂದ ಅರ್ಪಿಸಿದ್ದೇನೆ.

ಈ ಪುಸ್ತಕವನ್ನು ಬರೆಯುತ್ತಿದ್ದಾಗ ಅನೇಕ ರೀತಿಯಲ್ಲಿ ಸಹಾಯ ಮಾಡಿದ ನನ್ನ ಕಿರಿಯ ಮಗ ಜಿ.ವಿ. ಅರುಣನಿಗೆ ಶುಭವನ್ನು ಹಾರೈಸುತ್ತೇನೆ.

ಜಿ. ವೆಂಕಟಸುಬ್ಬಯ್ಯ

ಮುನ್ನುಡಿ

ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಂ
ಪ್ರವೃತ್ತಾಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ

-ನಾಗವರ್ಮ

ಯಾರ ಮುಖದಿಂದೆಳ್ಳು ನಿಂದಳೊ
ಭಾಷೆಯೆಲ್ಲಕು ದೇವಿ ಸರಸತಿ
ಅಂಥ ದೇವಗೆ ಎಲ್ಲ ಬಲ್ಲಗೆ
ತಮವ ದೂಡುವ ಹೊಳೆವ ಬೆಳಕಿಗೆ
ಇದಿಗೊ ನನ್ನಯ ವಂದನೆ

ಮಾನವನ ಬುದ್ಧಿ ವಿಕಾಸದ ಆರಂಭದ ಕ್ರಿಯೆಗಳನ್ನು ಬೆರಳಿಟ್ಟು ತೋರುವುದರಲ್ಲಿ ಸಂಸ್ಕೃತ ಭಾಷೆಯು ಸದಾ ಸಿದ್ಧವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಿಘಂಟುಗಳ ಚರಿತ್ರೆಯನ್ನು ಅಭ್ಯಾಸ ಮಾಡುವ ಸಂಶೋಧಕನಿಗೂ ಅದೇ ರೀತಿಯಲ್ಲಿ ಸಂಸ್ಕೃತವು ಸಹಾಯಕವಾಗಿದೆ. ವಿಶ್ವದ ಎಲ್ಲ ಪ್ರಮುಖ ಭಾಷೆಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ನಿಘಂಟುಗಳು ರಚಿತವಾಗಿದ್ದರೂ ಅತಿ ಪ್ರಾಚೀನವಾದ ನಿಘಂಟು ದೊರಕುವುದು ಸಂಸ್ಕೃತದಲ್ಲಿಯೇ ! ಆ ಬಳಿಕ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಿಗೆ ಪ್ರಾಚೀನತೆಯ ದೃಷ್ಟಿಯಿಂದ ಎರಡನೆಯ ಸ್ಥಾನ ದೊರಕುತ್ತದೆ. ಇಂಗ್ಲಿಷ್ ಭಾಷೆಯಲ್ಲಂತೂ ಹದಿನಾರನೆಯ ಶತಮಾನದ ತನಕ ಯಾವ ನಿಘಂಟುಗಳೂ ಸಿದ್ಧವಾದಂತೆ ಕಂಡುಬರುವುದಿಲ್ಲ. ಪ್ರಾಚೀನವಾದ ಸಂಸ್ಕೃತದಲ್ಲಿ ಲೌಕಿಕ ನಿಘಂಟುಗಳು ಪದ್ಯರೂಪದಲ್ಲಿದ್ದು ಬಾಯಿಪಾಠ ಮಾಡುವುದಕ್ಕೆ ಸುಲಭವಾಗಿದ್ದವು. ಬಾಲಪಾಠದಲ್ಲಿ ನಿಘಂಟಿಗೆ ಪ್ರಾಧಾನ್ಯವಿದ್ದು ಹಿಂದೆ ಎಷ್ಟೋ ಜನ ವಿದ್ಯಾರ್ಥಿಗಳು ನಿಘಂಟನ್ನು ವಾಚೋವಿಧೇಯವಾಗಿ ಇಟ್ಟುಕೊಂಡಿರುತ್ತಿದ್ದರು. ಸ್ಮರಣ ಶಕ್ತಿಯನ್ನು ನಾಮಾವಶೇಷ ಮಾಡುವ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿಯೂ ಅನೇಕರು ಅಮರಸಿಂಹನ ನಾಮಲಿಂಗಾನುಶಾಸನವನ್ನು ಬಾಯಿಪಾಠ ಮಾಡುತ್ತಾರೆ.

ಸಂಸ್ಕೃತದಲ್ಲಿ ವೈದಿಕ ನಿಘಂಟೇ ಅತಿ ಪ್ರಾಚೀನವಾದುದು. ಇದರ ಕರ್ತೃವಿನ ಬಗ್ಗೆಯಾಗಲಿ ಆತನ ಕಾಲದ ಬಗ್ಗೆಯಾಗಲಿ ನಮಗೆ ಏನೂ ತಿಳಿದಿಲ್ಲ. ಆದರೂ ಇದರ ಬಗ್ಗೆ ಅನೇಕ ವ್ಯಾಖ್ಯಾನಗಳಿರುವುದನ್ನು ನಾವು ಕಾಣಬಹುದು. ಈ ವ್ಯಾಖ್ಯಾನಗಳಲ್ಲೆಲ್ಲಾ ಯಾಸ್ಕನ ನಿರುಕ್ತವೇ ಮೊದಲನೆಯದು. ಅಲ್ಲಿಂದ ಮುಂದೆ ಸಂಸ್ಕೃತದಲ್ಲಿ ನಿಘಂಟು ಶಾಸ್ತ್ರವೂ ನಿಘಂಟು ರಚನೆಯೂ ವ್ಯಾಪಕವಾಗಿ ಬೆಳೆದವು.

ಒಂದು ಶಬ್ದಕ್ಕೆ ಅರ್ಥವನ್ನು ಹುಡುಕುವುದು ಹೇಗೆ ಎಂಬ ವಿಚಾರದಲ್ಲಿ ನಮ್ಮ ಪ್ರಾಚೀನರು ಬಹಳ ವೈಜ್ಞಾನಿಕವಾಗಿ ಆಲೋಚನೆ ಮಾಡಿದ್ದಾರೆ. ಮಕ್ಕಳು ಹಿರಿಯರಾಡುವ ಮಾತಿಗೆ ಅರ್ಥ ಮಾಡಿಕೊಳ್ಳುವುದು ಕೂಡ ಒಂದು ವೈಜ್ಞಾನಿಕವಾದ ಮಾರ್ಗದಿಂದಲೇ ಅಲ್ಲವೆ ? ಮನೆಯಲ್ಲಿ ಹಿರಿಯರಾಡುವ ಮಾತಿಗ ಅರ್ಥವೇನೆಂದು ಮಕ್ಕಳು ಕೇಳುವುದಿಲ್ಲ. ಮಾತುಗಳ ಸಂದರ್ಭದಲ್ಲಿ ಉಂಟಾಗುವ ಕ್ರಿಯೆಯಿಂದಲೋ ಆ ಮಾತುಗಳ ಪ್ರತಿನಿಧಿಗಳಾಗುವ ವಸ್ತುಗಳಿಂದಲೋ ಮಕ್ಕಳು ಅರ್ಥವನ್ನು ಗ್ರಹಿಸುತ್ತಾರೆ. ಸ್ವಲ್ಪ ಮಾತುಗಳನ್ನಾಡುವುದು ಸಾಧ್ಯವಾದ ಮೇಲೆ 'ಅದು ಏನು?' ಎಂದು ಕೇಳಿ ತಿಳಿದುಕೊಳ್ಳುವುದೂ ಉಂಟು.

ದೊಡ್ಡವರ ಶಬ್ದ ಪ್ರಪಂಚ ವಿಸ್ತಾರವಾಗುವುದು ಇದಕ್ಕಿಂತ ಬೇರೆಯಾದ ರೀತಿಯಲ್ಲಿ. ರಾಧಾಕಾಂತದೇವನ ಶಬ್ದಕಲ್ಪದ್ರುಮದಲ್ಲಿ ದುರ್ಗಾದಾಸನ ಮಾತೆಂದು ಹೀಗೆ ಹೇಳಲ್ಪಟ್ಟಿದೆ:-

ಅಸ್ಮಾತ್‌ಶಬ್ದಾದಯಮರ್ಥೋ ಬೋದ್ಧವ್ಯ ಇತಿ ಈಶ್ವರೇಚ್ಛಾ, ಶಕ್ತಿರಿತಿ ತಾರ್ಕಿಕಾಃ ।
ತಜ್ಞಾನಂತು ವ್ಯಾಕರಣಾದಿಭ್ಯಃ ಅತ ಏವ
ಶಕ್ತಿಗ್ರಹಂ ವ್ಯಾಕರಣೋಪಮಾನಕೋಶಾಪ್ತವಾಕ್ಯವ್ಯವಹಾರತಶ್ಚ
ವಾಕ್ಯಸ್ಯ ಶೇಷಾದ್ವಿವೃತೇರ್ವದಂತಿ ಸಾನ್ನಿಧ್ಯತಃ ಸಿದ್ಧಪದಸ್ಯ ವೃದ್ಧಾಃ ॥

ಈ ಪದ್ಯವು ಜಗದೀಶ್ವರನ 'ಶಬ್ದಶಕ್ತಿ ಪ್ರಕಾಶಿಕಾ' ಎಂಬ ಗ್ರಂಥಕ್ಕೆ ಸೇರಿದ್ದು. ಜಗದೀಶ್ವರನು ತರ್ಕದಲ್ಲಿ ಮಹಾವಿದ್ವಾಂಸನಾಗಿದ್ದನು. ಅವನ ಗ್ರಂಥವು ಮುದ್ರಿತವಾಗಿ ಅದರಲ್ಲಿ ಎರಡು ಟೀಕೆಗಳು ಒಟ್ಟಿಗೆ ಪ್ರಕಟವಾಗಿವೆ. ಇದು ಅರ್ಥ ಮಾಡಿಕೊಳ್ಳಲು ಕಷ್ಟವಾದ ಗ್ರಂಥ. ಆದರೆ ಶಬ್ದದ ಅರ್ಥವನ್ನು ತಿಳಿಯಲು ಇದೇ ಸರಿಯಾದ ಮಾರ್ಗವೆಂದು ವಿದ್ವಾಂಸರು ಈ ಪದ್ಯಕ್ಕೆ ಪ್ರಾಧಾನ್ಯವನ್ನು ನೀಡಿದ್ದಾರೆ. ಈ ಪದ್ಯದ ಮೂಲಕ ನಾವು ಗ್ರಹಿಸಬಹುದಾದ ವಿವರಗಳು ಹೀಗಿವೆ.

೧. ವ್ಯಾಕರಣದ ಪ್ರಕ್ರಿಯೆಗಳಿಂದ, ಕರ್ತೃ ಕರ್ಮ ಕ್ರಿಯೆಗಳ ಸಂಬಂಧದಿಂದ ಶಬ್ದಾರ್ಥವನ್ನು ತಿಳಿಯಬಹುದು.

೨. ಹೋಲಿಕೆಗಳಿಂದ ಅರ್ಥ ಸ್ಫುಟವಾಗಬಹುದು.

೩. ನಿಘಂಟುಗಳನ್ನು ನೋಡಿ ಅರಿಯಬಹುದು.

೪. ಹಿರಿಯರಾದ ಆಪ್ತಜನರಿಂದ ಸಹಾಯವನ್ನು ಪಡೆಯಬಹುದು.

೫. ಜನರ ನಡೆ ನುಡಿಯ ವ್ಯವಹಾರದಿಂದ ಊಹಿಸಬಹುದು.

೬. ವಾಕ್ಯದಲ್ಲಿರುವ ಮಿಕ್ಕ ಶಬ್ದಗಳ ಸಹಾಯದಿಂದ ಅರ್ಥವನ್ನು ಹುಡುಕಬಹುದು.

೭. ವಿದ್ವಾಂಸರನ್ನು ಕೇಳಿ ಅವರ ಮಾತಿಗೆ ಬೆಲೆ ಕೊಟ್ಟು ತಿಳಿಯಬಹುದು.

೮. ಆ ವಾಕ್ಯದಲ್ಲಿರುವ, ನಮಗೆ ಅರ್ಥ ತಿಳಿದಿರುವ ಇತರ ಶಬ್ದಗಳ ಸಾನ್ನಿಧ್ಯದಿಂದ ತರ್ಕ ಮಾಡಿ ಅರಿಯಬಹುದು. ಎಲ್ಲ ನಿಘಂಟುಕಾರರೂ ಅನುಸರಿಸುವುದು ಇದೇ ಮಾರ್ಗವನ್ನು.

- ಕಳೆದ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ನಿಘಂಟು ಶಾಸ್ತ್ರವು ಬಹು ವೈಜ್ಞಾನಿಕವಾಗಿ ಬೆಳೆದಿದೆ. ಅದು ಭಾಷಾ ಶಾಸ್ತ್ರದ ಪ್ರಾಯೋಗಿಕ ಅಂಗವಾಗಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗದ ವಿಷಯವಾಗಿದೆ. ನಮ್ಮಲ್ಲಿ ಭಾಷಾಶಾಸ್ತ್ರ ಬೆಳೆಯುತ್ತಿರುವುದು ನಿಜವಾದರೂ ನಿಘಂಟು ಶಾಸ್ತ್ರಕ್ಕೆ ಇನ್ನೂ ಪ್ರಾಧಾನ್ಯ ದೊರೆತಿಲ್ಲ. ಇದಕ್ಕೆ ಕಾರಣವಿಲ್ಲದಿಲ್ಲ. ಈ ಕ್ಷೇತ್ರದಲ್ಲಿ ದುಡಿಯುವವರಿಗೆ ಕೀರ್ತಿಪ್ರತಿಷ್ಠೆಗಳಾಗಲಿ ಅಧಿಕಾರದ್ರವ್ಯಗಳಾಗಲಿ ದೊರಕುವುದಿಲ್ಲ. ಆದುದರಿಂದ ಉತ್ತಮ ಭವಿಷ್ಯವನ್ನು ಬೆನ್ನಟ್ಟಿ ಹೋಗುವ ಯುವಕರು ಇತ್ತಕಡೆ ತಿರುಗಿ ನೋಡುವುದೂ ಇಲ್ಲ. ಇನ್ನೂ ಯಾವ ವಿಶ್ವವಿದ್ಯಾನಿಲಯವೂ ನಿಘಂಟು ರಚನೆಯನ್ನು ವಿಶಿಷ್ಟ ವ್ಯಾಸಂಗ ವಿಷಯವನ್ನಾಗಿ ಗೌರವಿಸಿಲ್ಲ.

ಇಂಗ್ಲಿಷ್ ಭಾಷೆಯ ನಿಘಂಟುಕಾರರಲ್ಲಿ ಬಹು ಪ್ರಸಿದ್ಧನಾದ ಡಾ। ಸ್ಯಾಮ್ಯುಯಲ್ ಜಾನ್‌ಸನ್ ಹೇಳಿರುವ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯುವುದು ಬಹುಸೂಕ್ತವೆಂದು ಕಾಣುತ್ತದೆ :-

It is THE FATE of those who toil at the lower employments of life, to be rather driven by the fear of evil, than attracted by the prospect of good; to be exposed to censure, without hope of praise; to be disgraced by miscarriage, or punished for neglect, where success would have been without applause, and diligence without reward.

Among these unhappy mortals is the writer of dictionaries; whom mankind have considered, not as the pupil, but the slave of science, the pioneer of literature, doomed only to remove rubbish and clear obstructions from the paths of Learning and Genius, who press forward to conquest and glory, without bestowing a smile on the humble drudge that facilitates their progress. Every other authour may aspire to praise; the lexicographer can only hope to escape reproach, and even this negative recompense has been yet granted to very few.

I have, notwithstanding this discouragement, attempted a dictionary of the English language, which, while it was employed in the cultivation of every species of literature, has itself been hitherto neglected, suffered to spread, under the direction of chance, into wild exuberance, resigned to the tyranny of time and fashion, and exposed to the corruptions of ignorance, and caprices of innovation.

ಆದರೂ ನಿಘಂಟು ರಚನೆಯ ಕಾರ್ಯದಲ್ಲಿ ತುಂಬ ಸಂತೋಷವನ್ನು ತರುವ ಅಂಶಗಳು ಅಪಾರವಾಗಿವೆ. ಒಂದು ಶಬ್ದದ ಅರ್ಥನಿರ್ಧಾರಕ್ಕೆ ಖಚಿತವಾದ ಸಹಾಯವನ್ನು ಒದಗಿಸುವ ಕಾವ್ಯಭಾಗಗಳನ್ನು ಆರಿಸುವುದರಲ್ಲಿ ಅಪಾರ ಶ್ರಮವಿದ್ದರೂ ತುಂಬ ಸುಂದರವೂ ಸೂಕ್ತವೂ

ಆದ ಕವಿವಾಕ್ಯ ದೊರೆತಾಗ ಆಗುವ ಸಂತೋಷವನ್ನು ವಿವರಿಸಲಾಗುವುದಿಲ್ಲ. ಕಾವ್ಯಭಾಗದಲ್ಲಿ ಪಾಠಕ್ಲೇಶವಿದ್ದು ಗ್ರಂಥಸಂಪಾದನೆ ಮಾಡುವಲ್ಲಿ ಯಶಸ್ವಿಯಾದರೆ ತುಂಬ ಸಮಾಧಾನವಾಗುತ್ತದೆ. ಶಬ್ದದ ವ್ಯುತ್ಪತ್ತಿಯನ್ನು ನಿರ್ಧಾರ ಮಾಡಬೇಕಾದಾಗ ಕಾವ್ಯಮಯವಾದ ಕವಿವಾಕ್ಯವೇ ಆಧಾರವಾಗಿ ದೊರೆತರೆ ಸ್ಫುರಿಸುವ ಸಂತೃಪ್ತಿ ವರ್ಣನಾತೀತ. ಕೆಲವು ವೇಳೆ ಕವಿವಾಕ್ಯದ ಅರ್ಥವೇ ಸಂದಿಗ್ಧವಾಗಿಯೋ ಅಶುದ್ಧವಾಗಿಯೋ ಇದ್ದಾಗ ಅತ್ಯಪೂರ್ವವಾದ ಒಂದು ಶಬ್ದಸ್ವರೂಪ ನಿರ್ಧಾರವಾದರೆ ಸಮಸ್ಯೆಯನ್ನು ಪರಿಹರಿಸಿದ ಆನಂದ ಮನಸ್ಸನ್ನು ತುಂಬುತ್ತದೆ. ಇವೆಲ್ಲ ನಿಘಂಟು ಕಾರ್ಯದಲ್ಲಿ ದೊರೆಯುವ ಅತ್ಯಪೂರ್ವ ಲಾಭಗಳು.

ನಿಘಂಟು ಕಾರ್ಯ ಎಂದೂ ಪರಿಪೂರ್ಣವಾಗುವುದಿಲ್ಲ. ಭಾಷೆ ಬೆಳೆದಂತೆ ಹಳೆಯ ಶಬ್ದಗಳು ಜನತೆಯ ನೆನಪಿನಿಂದ ಜಾರಿ ಬಿದ್ದುಹೋಗುತ್ತವೆ. ನೂತನ ಶಬ್ದಗಳು ಉತ್ಪತ್ತಿಯಾಗಿ ವೈಭವೋಪೇತವಾಗಿ ಮೆರೆದಾಡುತ್ತವೆ. ಹೊಸ ಶಬ್ದಗಳಿಗೆ ಕೂಡಲೆ ನಿಘಂಟಿನಲ್ಲಿ ಸ್ಥಳ ದೊರಕುವುದಿಲ್ಲ. ಅವು ಕೆಲವು ದಿವ್ಯಗಳಲ್ಲಿ ಗೆದ್ದುಬರಬೇಕು. ಕೆಲವು ನೇರವಾಗಿ ನಿಘಂಟಿನಲ್ಲಿ ಸ್ಥಾನವನ್ನು ಪಡೆದುಬಿಡುತ್ತವೆ, ಅವುಗಳ ಜಾತಕಬಲದಿಂದ. ನಿಘಂಟುಕಾರನು ಬೇಕೆಂದು ತಪ್ಪು ಮಾಡುವುದಿಲ್ಲ. ಆದರೆ ಮಾನವ ಸ್ವಭಾವವಾದ ಅನವಧಾನತೆಯಿಂದ ತಪ್ಪುಗಳು ನುಸುಳುತ್ತವೆ. ಅವನ್ನು ಕೂಡಲೆ ನಿವಾರಣೆ ಮಾಡದಾಗ ಅವು ನಿಂತುಬಿಡುತ್ತವೆ.

ಇಪ್ಪತ್ತು-ಮೂವತ್ತು ವರ್ಷಗಳ ಕಾಲ ಈ ಬಗೆಯ ಸ್ಥಿತಿಗತಿಗಳಲ್ಲಿ ಮುಳುಗಿ ಪಡೆದ ಕೆಲವು ಅನುಭವಗಳಿಂದ ದೊರೆತ ಅಪರಿಪೂರ್ಣವಾದ ಅರಿವನ್ನು ಯುವವಿದ್ವಾಂಸರ ಗಮನಕ್ಕೆ ತರುವ ಏಕೈಕ ದೃಷ್ಟಿಯಿಂದ ಈ ಪುಸ್ತಕವನ್ನು ನಿರ್ಮಾಣ ಮಾಡಿದ್ದೇನೆ. ನಿಘಂಟು ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ವಿವರಗಳು ಇಲ್ಲಿ ದೊರೆಯುತ್ತವೆ. ಆಸಕ್ತರಿಗೆ ಈ ಕ್ಷೇತ್ರದಲ್ಲಿ ಮುಂದುವರಿಯುವ ಆಸೆಯನ್ನು ಉತ್ಪಾದಿಸುವ ಹಲವು ಅಂಶಗಳಿವೆ ಎನ್ನುವುದು ನನ್ನ ಭಾವನೆ.

ನಾನು ಸಿದ್ಧಪಡಿಸಿದ ಎರವಲು ಪದಕೋಶ ಮತ್ತು ಇಗೋ ಕನ್ನಡ (ಸಾಮಾಜಿಕ ನಿಘಂಟಿನ) ಎರಡು ಸಂಪುಟಗಳು ಪ್ರಕಟವಾದ ಮೇಲೆ ಅನೇಕ ಓದುಗರು ನನಗೆ ವಿವರವಾದ ಪತ್ರಗಳನ್ನು ಬರೆದು ನಿಘಂಟುಗಳ ಬಗ್ಗೆಯೇ ವಿಸ್ತಾರವಾದ ಲೇಖನಗಳನ್ನು ಬರೆಯಬೇಕೆಂದು ಸೂಚಿಸಿದ್ದರು. ಈಗ ನನಗಿರುವ ಬಿಡುವೇಳೆಯಲ್ಲಿ ಈ ಬಗ್ಗೆ ಅನೇಕ ವಿವರಗಳನ್ನು ಸಂಗ್ರಹಿಸಿ ಈ ಪುಸ್ತಕವನ್ನು ರಚಿಸಿದ್ದೇನೆ. ಓದುಗರು ಇದನ್ನು ಪರಿಶೀಲಿಸಿ ಇದರಲ್ಲಿರುವ ನ್ಯೂನತಾತಿರೇಕಗಳನ್ನು ನನಗೆ ತಿಳಿಸಿದರೆ ಅವುಗಳನ್ನು ತಿದ್ದಿಕೊಳ್ಳಲು ನನಗೆ ಸದವಕಾಶ ಒದಗುತ್ತದೆ. ಹಾಗೆ ತಿಳಿಸುವವರಿಗೆಲ್ಲ ನಾನು ಸದಾ ಕೃತಜ್ಞನಾಗಿರುತ್ತೇನೆ.

ಬೆಂಗಳೂರು

ಜಿ. ವೆಂಕಟಸುಬ್ಬಯ್ಯ

ವಿಷಯಾನುಕ್ರಮಣಿಕೆ

ಕನ್ನಡ ನಿಘಂಟು ಪರಿವಾರ

೧. ಭಾರತೀಯ ಭಾಷೆಗಳಲ್ಲಿ ನಿಘಂಟು ರಚನೆಗೆ ಇರುವ ಹಿನ್ನೆಲೆ

ನಮ್ಮ ರಾಷ್ಟ್ರದ ಅನೇಕ ಭಾಷೆಗಳಲ್ಲಿ ಶಬ್ದಾಗಮವನ್ನು ಕುರಿತ ಸಾಹಿತ್ಯವು ಅಪಾರವಾಗಿ ಬೆಳೆದಿದೆ. ಇವಕ್ಕೆಲ್ಲ ಸಂಸ್ಕೃತದಲ್ಲಿರುವ ಕೋಶರಚನೆಯ ಕಾರ್ಯವೇ ಮಾರ್ಗದರ್ಶಕ ವಾಗಿದ್ದುದರಿಂದ ಅಂಥ ಗ್ರಂಥ ರಾಶಿಯನ್ನು ನೆನೆದು, ಬಳಿಕ ಕನ್ನಡದಲ್ಲಿ ಬೆಳೆದಿರುವ ಕೋಶಗಳ ವಿಮರ್ಶೆಯನ್ನು ಕೈಗೊಳ್ಳುವುದು ಸೂಕ್ತವಾಗಿದೆ. ವೇದಗಳಲ್ಲಿ ಪ್ರಯೋಗವಾಗಿರುವ ಅಪೂರ್ವವೂ ಕ್ಲಿಷ್ಟವೂ ಆದ ಶಬ್ದಗಳ ಅರ್ಥಗಳನ್ನು ನಿರ್ಧಾರ ಮಾಡುವ ಉದ್ದೇಶದಿಂದ ಸಂಸ್ಕೃತದಲ್ಲಿ ರಚಿತವಾದ ನಿಘಂಟುಗಳೇ ಚಾರಿತ್ರಿಕವಾಗಿ ತುಂಬ ಪ್ರಾಚೀನವಾದವು. ಕೋಶ ಶಬ್ದವನ್ನು ನಿಘಂಟು ಶಬ್ದದಿಂದ ಬೇರೆಯಾಗಿ ಕಾಣುವ ಪರಿಪಾಠ ಸಂಸ್ಕೃತದಲ್ಲಿತ್ತೆಂದು ಕಾಣುತ್ತದೆ. ವೇದಶಬ್ದಗಳ ವಿವರಣೆಗೆ ಮೀಸಲಾದವು ನಿಘಂಟುಗಳೆಂದೂ ಇತರ ಶಬ್ದಾರ್ಥಗಳನ್ನು ಕುರಿತವು ಕೋಶಗಳೆಂದೂ ವ್ಯವಹಾರದಲ್ಲಿ ಪ್ರಚಲಿತವಾಗಿದ್ದವು.

ಕೋಶ, ಕೋಷ ಎಂಬ ಎರಡು ಶಬ್ದಗಳು ಬೇರೆ ಬೇರೆ ರೀತಿಯಲ್ಲಿ ನಿಷ್ಪನ್ನವಾದುವಾದರೂ ಎರಡಕ್ಕೂ ಒಂದೇ ಅರ್ಥವೆಂದು ಸಂಸ್ಕೃತದಲ್ಲಿ ಅಂಗೀಕಾರವಾಗಿದೆ. ಕುಶ್ (ಷ್) ಧಾತುವಿಗೆ ಷುಞಪ್ರತ್ಯಯವು ಸೇರಿ (ಕೋಶ, ಕೋಷ) ನಿಷ್ಪನ್ನ ಎಂದೂ ಅಭಿಪ್ರಾಯವಿದೆ. ಸಾಮಾನ್ಯವಾಗಿ ಪದ್ಯರೂಪದಲ್ಲಿರುವ ಕೋಶಗ್ರಂಥಗಳಿಗೆ ಅನೇಕ ಬಗೆಯ ಹೆಸರುಗಳನ್ನು ನೀಡಲಾಗಿದೆ. **ನಾಮಮಾಲಾ, ಶಬ್ದಾರ್ಣವ, ಶಬ್ದಮಾಲಾ, ಅಭಿಧಾನಕೋಶ, ಸಂಸಾರಾವರ್ತ, ಉತ್ಪಲಿನೀ, ನಾಮಲಿಂಗಾನುಶಾಸನ, ಹಾರಾವಲಿ, ವೈಜಯಂತೀ, ನಾನಾರ್ಥಶಬ್ದಕೋಶ, ನಾನಾರ್ಥರತ್ನಮಾಲಾ, ಕಲ್ಪತರು, ಅನೇಕಾರ್ಥತಿಲಕ**-ಇತ್ಯಾದಿಯಾಗಿ ಬೇರೆ ಬೇರೆ ಹೆಸರುಗಳಿವೆ. ಇಂಥ ಕೋಶಗಳಿಗೆ ಅನೇಕ ಟೀಕೆಗಳಿವೆ. ತಮ್ಮ ಗ್ರಂಥಗಳಿಗೆ ತಾವೇ ಟೀಕೆಯನ್ನು ರಚಿಸಿದ ಕೋಶಗಾರರೂ ಇದ್ದಾರೆ. **ಬಾಣ, ಶ್ರೀಹರ್ಷ, ಬಿಲ್ಹಣ, ಅಮರಸಿಂಹ** ಮುಂತಾದ ಕವಿಗಳೂ ಕೋಶಗಳನ್ನು ರಚಿಸಿದ್ದಾರೆ. ಶ್ರೀಹರ್ಷನು ರಚಿಸಿದ ನಾನಾರ್ಥಕೋಶಕ್ಕೆ ಶ್ಲೇಷಾರ್ಥ ಪದಸಂಗ್ರಹ ಎಂಬ ಹೆಸರಿದೆ. ಇವುಗಳಲ್ಲೆಲ್ಲ ಅಮರಸಿಂಹನ **ನಾಮಲಿಂಗಾನುಶಾಸನ** ಅಥವಾ **ಅಮರಕೋಶವು** ಬಹಳ ಜನಪ್ರಿಯವಾದ ಕೋಶವಾಗಿದೆ.

ಸಂಸ್ಕೃತದ ಎಲ್ಲ ಕೋಶಗಳೂ ದೊಡ್ಡವಲ್ಲ. ಕಾತ್ಯಾಯನನ **ನಾಮಮಾಲಾ**, ವಾಚಸ್ಪತಿಯ **ಶಬ್ದಾರ್ಣವ**, ವಿಕ್ರಮಾದಿತ್ಯನ **ಸಂಸಾರಾವರ್ತ**, ವ್ಯಾಡಿಯ **ಉತ್ಪಲಿನೀ** ಮುಂತಾದವುಗಳ

ಹೆಸರುಗಳು ಪ್ರಸಿದ್ಧವಾಗಿದ್ದರೂ ಅಮರಸಿಂಹನ ನಾಮಲಿಂಗಾನುಶಾಸನಕ್ಕೆ ದೊರೆತ ಪ್ರಾಧಾನ್ಯ ಅವುಗಳಿಗೆ ದೊರಕಲಿಲ್ಲ. ಈ ಅಮರಕೋಶಕ್ಕೆ ಸುಮಾರು ಐವತ್ತು ಟೀಕೆಗಳಿವೆ. ಇವುಗಳಲ್ಲಿ ಕ್ಷೀರಸ್ವಾಮಿಯ **ಅಮರಕೋಶೋದ್ಘಾಟನ**, ಭಾನುಜೀದೀಕ್ಷಿತನ **ವ್ಯಾಖ್ಯಾಸುಧಾ**, **ಗುರುಬಾಲಪ್ರಬೋಧಿಕಾ**, ಮಲ್ಲಿನಾಥನ **ಅಮರಪಾರಿಜಾತ**, **ಲಿಂಗಾಭಟಕೃತಾಟೀಕಾ**, ಬೊಮ್ಮಗಂಟಿ ಅಪ್ಪಯಾರ್ಯನ **ಅಮರಟೀಕೆ** ಇವು ವಿದ್ವಾಂಸರಿಂದ ಮೆಚ್ಚಿಗೆ ಪಡೆದ ಕೃತಿಗಳಾಗಿವೆ. ಕನ್ನಡದಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಯು ಬರೆದ **ಸಟೀಕಾ ಅಮರಕೋಶವೂ**, ಲಿಂಗಾಭಟ್ಟನ **ಗುರುಬಾಲಪ್ರಬೋಧಿಕೆಯೂ** ಪ್ರಸಿದ್ಧವಾಗಿವೆ.

ಕ್ರಿ.ಶ. ೧೮೦೮ರಲ್ಲಿ ಕೋಲ್‌ಬ್ರುಕ್ (Colebrooke) ಎಂಬ ವಿದ್ವಾಂಸನು ಅಮರಕೋಶದ ಆಂಗ್ಲ ಅನುವಾದವನ್ನು ತಯಾರಿಸಿದನು. ಅಲ್ಲದೆ ಇಂಗ್ಲೀಷಿನಲ್ಲಿ Thesaurus ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಗ್ರಂಥವನ್ನು ಸಿದ್ಧಪಡಿಸುವುದಕ್ಕೆ ಈ ಅಮರಕೋಶವೇ ಪ್ರಭಾವವಾಗಿರಬಹುದು. ಅದರ ಕರ್ತೃವಾದ ಪಿ.ಎಂ. ರಾಜೆಟ್ (P.M. Roget) ಎಂಬವನು ಅವನ ಗ್ರಂಥದ ಪೀಠಿಕೆಯಲ್ಲಿ ಅಮರಕೋಶವನ್ನು Amercosha or Vocabulary of the Sanscrit Language ಎಂದು ಹೆಸರಿಸಿ "ಒಂದು ವ್ಯವಸ್ಥಿತ ವಿಷಯಾನುಕ್ರಮನ್ನು ಅನುಸರಿಸಿ ಅವುಗಳಿಗೆ ಹೊಂದುವ ಶಬ್ದಗಳನ್ನು ಪಟ್ಟಿ ಮಾಡಿದುದರಲ್ಲಿ ಅಮರಕೋಶವೇ ಮೊದಲನೆಯದಿರಬೇಕೆಂದು" ಹೇಳಿದ್ದಾನೆ (ಪು. XXVI, 1936 edn). ೬ನೆಯ ಶತಮಾನದಲ್ಲಿ **ಗುಣರಾತ** ಎಂಬಾತನು ಅಮರಕೋಶವನ್ನು ಚೀನೀ ಭಾಷೆಗೆ ಅನುವಾದ ಮಾಡಿದ್ದಾನೆ. ಇದರಿಂದಲೂ ಅಮರಕೋಶದ ಪ್ರಾಧಾನ್ಯವನ್ನೂ ಪ್ರಾಚೀನತೆಯನ್ನೂ ಸಾಧಿಸುವುದು ಸುಲಭ. ಅಮರಕೋಶವನ್ನು ಬಾಲಕರು ಬಾಯಿಪಾಠ ಮಾಡಬೇಕೆಂಬುದು ಹಿಂದಿನ ಕಾಲದ ವಿದ್ಯಾಭ್ಯಾಸದ ಪ್ರಮುಖ ತತ್ವವಾಗಿತ್ತು. "ಅಮರೋಽಯಂ ಸನಾತನಃ", "ಅಮರಸಿಂಹೋ ಹಿ ಪಾಪೀಯಾನ್ ಸರ್ವಂ ಭಾಷ್ಯಮಚೂಚುರತ್" ಎಂಬ ಕೀರ್ತಿಗೆ ಕಾರಣವಾಗಿರುವ ಅಮರಸಿಂಹನ ಗ್ರಂಥವನ್ನು ಇಂದೂ ವಿದ್ವಾಂಸರು ಗೌರವಿಸುತ್ತಿದ್ದಾರೆ.

ಅಮರಕೋಶದ ಪ್ರಾರಂಭದಲ್ಲಿ ಗ್ರಂಥಕರ್ತನೇ ನೀಡಿರುವ ಕೆಲವು ವಿವರಗಳಿಂದ ಆ ಗ್ರಂಥದ ವ್ಯಾಪ್ತಿ ಸ್ಥಾಪಿತವಾಗುತ್ತದೆ. ಈ ಗ್ರಂಥವು ವರರುಚಿ, ಭಾಗುರಿ ಮೊದಲಾದವರ ಕೋಶಗಳು ಬಹಳ ದೊಡ್ಡವಾಗಿದ್ದದ್ದರಿಂದ ಅವುಗಳನ್ನು ಸಂಗ್ರಹಿಸಿ ವರ್ಗೀಕರಿಸಿರುವುದಾಗಿದೆ. ಧನ್ವಂತರಿ ಮೊದಲಾದವರು ರಚಿಸಿರುವ ಸಸ್ಯವಿಜ್ಞಾನ ಮತ್ತು ವೈದ್ಯಕೀಯ ಗ್ರಂಥಗಳ ಸಹಾಯವನ್ನೂ ಪಡೆಯಲಾಗಿದೆ. ಶಬ್ದಗಳ ಲಿಂಗ ನಿರ್ಧಾರಕ್ಕೆ ಸೂಕ್ತ ಸಹಾಯವನ್ನು ನೀಡಲಾಗಿದೆ. ಅಪ್ರಕೃತ ಶಬ್ದಗಳ ಸಾಂಕರ್ಯವನ್ನು ಉಂಟುಮಾಡಿಲ್ಲ. ಅಪ್ರಸಿದ್ಧ ಶಬ್ದಗಳನ್ನು ಮಾತ್ರ ಕೈಬಿಡಲಾಗಿದೆ. ಹೀಗಿರುವುದರಿಂದಲೂ ಬಹು ಜನಪ್ರಿಯವಾದುದರಿಂದಲೂ ಈ ಗ್ರಂಥದಲ್ಲಿ ಕಾಲಕ್ರಮದಲ್ಲಿ ಅಪಪಾಠಗಳು ತಲೆದೋರಿವೆ. ಯಾರೋ ಕೆಲವರು ಅರ್ಧಶ್ಲೋಕಗಳನ್ನೇ ಸೇರಿಸಿಬಿಟ್ಟಿದ್ದಾರೆ (Hemistich). ಕೆಲವರು ಅಮರಕೋಶವು ಸಂಪೂರ್ಣವಲ್ಲ ಎಂದು ಹೇಳುತ್ತಾರೆ. ಅವರಿಗೆ ಅಮರಸಿಂಹನೇ ತನ್ನ ಗ್ರಂಥದಲ್ಲಿ ಹೇಳಿರುವ 'ಶೇಷಂ ತು ಜ್ಞೇಯಂ ಶಿಷ್ಟ ಪ್ರಯೋಗತಃ' ಎಂಬ ಮಾತೇ ಉತ್ತರವಾಗಿದೆ.

ಸಂಸ್ಕೃತದ ಕೋಶಗಳಲ್ಲದೆ ಪಾಇಯ ಲಚ್ಛೀ (ಪ್ರಾಕೃತ ಲಕ್ಷ್ಮೀ) ಎಂಬ ಪ್ರಾಕೃತ ಕೋಶವೂ ಪಾರಸೀ ಪ್ರಕಾಶವೆಂಬ ಪರ್ಷಿಯನ್-ಸಂಸ್ಕೃತ ಶಬ್ದಕೋಶವೂ ಪ್ರಸಿದ್ಧವಾಗಿವೆ. ಬೇರೆ ಬೇರೆ ಶಾಸ್ತ್ರಗಳಿಗೆ ಸಂಬಂಧಿಸಿದ ಇತರ ಕೋಶಗಳೂ ಇವೆ. ಧನ್ವಂತರಿನಿಘಂಟು, ಮದನವಿನೋದನಿಘಂಟು, ಪಥ್ಯಾಪಥ್ಯನಿಘಂಟು ಮುಂತಾದ ವೈದ್ಯಕೀಯ ನಿಘಂಟುಗಳು ಸಸ್ಯ, ಪ್ರಾಣಿ, ರಸೌಷಧಗಳ ಬಗ್ಗೆ ವಿವರಗಳನ್ನು ನೀಡುತ್ತವೆಂಬುದನ್ನು ಈ ಸಂದರ್ಭದಲ್ಲಿ ನೆನಪಿಡುವುದು ಅಗತ್ಯವಾಗುತ್ತದೆ.

ಇಂಥ ಸಂಪನ್ನವಾದ ಗ್ರಂಥರಾಶಿಯ ಪ್ರಭಾವದಿಂದಲೂ ಸಹಾಯದಿಂದಲೂ ಕನ್ನಡ ಕೋಶಗಳ ರಚನೆ ಬೆಳೆದುಬಂದಿದೆ. ಕೋಶ ರಚನೆಯೇ ಬೇರೆ ಶಾಸ್ತ್ರವಾಗಿ ಬೆಳೆದು ಬಂದಿರುವ ಈಗಿನ ಕಾಲದಲ್ಲಿ ಆ ಶಾಸ್ತ್ರವನ್ನು ಪರಿಚಯ ಮಾಡಿಕೊಳ್ಳುವುದು ಬಹು ಮುಖ್ಯವಾದ ಆಸಕ್ತಿಯಾಗಬೇಕು. ಈ ದೃಷ್ಟಿಯಿಂದ ಈ ಕಿರುಬರಹದಲ್ಲಿ ನಿಘಂಟುಶಾಸ್ತ್ರ, ನಿಘಂಟು ರಚನೆ ಎಂಬ ಎರಡು ವಿಭಾಗಗಳನ್ನು ಮಾಡಿಕೊಂಡು ವಿಷಯಗಳನ್ನು ವಿವರಿಸಲು ಪ್ರಯತ್ನವನ್ನು ಮಾಡಲಾಗಿದೆ.

ನಿಘಂಟು ಶಾಸ್ತ್ರ

ಭಾರತದ ವೇದಗಳು ಗಹನವಾದ ಅಂತಸ್ಸತ್ವಗಳಿಂದ ಕೂಡಿವೆ. ಇವುಗಳಲ್ಲಿರುವ ರಹಸ್ಯವಾದ ಅರ್ಥಗಳನ್ನು ಜನರಿಗೆ ತಿಳಿಯಪಡಿಸುವ ಉದ್ದೇಶದಿಂದ ಪ್ರಾಚೀನರೇ ಆರು ಬಗೆಯ ಸಾಧನಗಳನ್ನು ಉಪಯೋಗಿಸಿದರು. ಇವಕ್ಕೆ ಷಡಂಗಗಳೆಂದು ಹೆಸರು. ಶಿಕ್ಷಾ, ವ್ಯಾಕರಣ, ಛಂದಸ್ಸು, ಜ್ಯೋತಿಷ, ಕಲ್ಪ ಮತ್ತು ನಿರುಕ್ತ ಎಂಬವೇ ಆ ಅಂಗಗಳು. ಶಿಕ್ಷಾ ಶಾಸ್ತ್ರವು ವೇದಗಳ ಸ್ವರವ್ಯಂಜನಗಳನ್ನು ಅಭಿವ್ಯಕ್ತಪಡಿಸುವ ತಿಳಿವಳಿಕೆಯನ್ನು ನೀಡುತ್ತದೆ. ವೇದಘೋಷದಲ್ಲಿ ಸ್ವರ ತಪ್ಪಿದರೆ ಹೇಗೆ ಯಜಮಾನನಿಗೆ ಅಪಾಯ ಉಂಟಾಗುತ್ತದೆಂಬ ವಿಷಯವನ್ನು ತಿಳಿಸಿ ಸ್ವರಾದಿಗಳ ಉಚ್ಚಾರಣೆಯ ಪ್ರಾಧಾನ್ಯವನ್ನು ಸ್ಪಷ್ಟಪಡಿಸುತ್ತದೆ. ವ್ಯಾಕರಣವು ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳ ಶುದ್ಧವಾದ ಪ್ರಯೋಗ ಕ್ರಮವನ್ನೂ ನಿರೂಪಿಸುತ್ತದೆ. ಛಂದಸ್ಸು ಆಯಾ ಮಂತ್ರಗಳ ಅಕ್ಷರ, ಪಾದವ್ಯವಸ್ಥೆ ಮುಂತಾದವುಗಳನ್ನು ತಿಳಿಸಿ ಆಯಾ ಋಷಿಗಳ ಹೆಸರನ್ನು ಪರಿಚಯ ಮಾಡಿಕೊಡುತ್ತದೆ. ಕಲ್ಪವೆಂಬುದು ಮಂತ್ರಗಳ ವಿನಿಯೋಗ ಕ್ರಮವನ್ನು ವಿಧಿಸುತ್ತದೆ. ಜ್ಯೋತಿಷವು ವಿವಿಧ ಕರ್ಮಗಳಿಗೆ ಸೂಕ್ತವೂ ಶುಭವೂ ಆದ ಕಾಲವನ್ನು ನಿರ್ಣಯಿಸಿಕೊಡುತ್ತದೆ. ನಿರುಕ್ತವು ವೇದಗಳ ಅರ್ಥ ನಿರ್ಧಾರಕ್ಕಾಗಿಯೇ ನಿರ್ಮಾಣವಾದ ವೇದಾಂಗ. ಇದರ ಪ್ರಾಮುಖ್ಯವನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ನಿರುಕ್ತ ಶಬ್ದಕ್ಕೆ ಅರ್ಥವನ್ನು ವಿವರಿಸುತ್ತಾ ಪ್ರಾಚೀನರು, "ನಿಶ್ಚಯ ಮಾಡಿ ಅರ್ಥವನ್ನು ಹೇಳುವುದರಿಂದ ಅದು ನಿರುಕ್ತ" ಎಂದು ತಿಳಿಸುತ್ತಾರೆ. ನಿರುಚ್ಯತೇ ಅನೇನ ಇತಿ ನಿರುಕ್ತಂ ಅಥವಾ ನಿಃ ನಿಶ್ಚಯೇನ ಉಕ್ತಂ ನಿರುಕ್ತಂ ಎಂಬುದು ಆ ಶಬ್ದದ ವಿವರಣೆ. ಈ ನಿರುಕ್ತ ಭಾಗವು ನಿಘಂಟುಗಳೆಂಬ ಗ್ರಂಥದ ಅರ್ಥವನ್ನು ವಿವರಿಸುತ್ತದೆ. ಈ ನಿರುಕ್ತವನ್ನು ರಚಿಸಿದವನು ಯಾಸ್ಕ. ಪಾಣಿನಿಗಿಂತಲೂ ಹೆಚ್ಚು ಪ್ರಾಚೀನನಾದ ಇವನು ಕ್ರಿ.ಪೂ. ೭೦೦ ರಿಂದ ಹಿಡಿದು ಕ್ರಿ.ಪೂ. ೫೦೦ರ ಒಳಗಿನ ಕಾಲದಲ್ಲಿದ್ದಿರಬೇಕು. ಯಾಸ್ಕ

ಪಾಣಿನಿಗಳಲ್ಲಿ ಯಾರು ಪ್ರಾಚೀನರೆನ್ನುವುದು ಚರ್ಚಾಸ್ಪದ. ಪತಂಜಲಿ ಯಾಸ್ಕನ ಹೆಸರನ್ನು ಹೇಳಿದ್ದಾನೆ. ಪಾಣಿನಿ ಹೇಳಿಲ್ಲ.

ನಿರುಕ್ತ

ನಿರುಕ್ತವು ನಿಘಂಟುಗಳ ಶಬ್ದಗಳ ಅರ್ಥವನ್ನು ವಿವರಿಸುವುದಾದರೆ ನಿಘಂಟು ಎಂಬುದೇನು ಎಂದು ಕೆಲವರು ಕೇಳುವುದುಂಟು. ಇದನ್ನು ವಿವರಿಸುವ ಕೆಲವು ಸಂಸ್ಕೃತ ವಾಕ್ಯಗಳುಂಟು. ಅವುಗಳ ಆಧಾರದ ಮೇಲೆ ನಾವು ನಿಘಂಟು ಶಬ್ದಕ್ಕೆ ಅರ್ಥವನ್ನು ಹೇಳಬೇಕು. "ಯಸ್ಮಾದರ್ಥಾನ್ನಿಘಂಟಯತಿ ತಸ್ಮಾನ್ನಿಘಂಟುಃ." ಎಂದು ವ್ಯಾಡಿಯ ವಾಕ್ಯ. (ಸಂಸ್ಕೃತಕೋಶ ೧-೬-೫). "ಸಮಾಮ್ನಾಯಃ ಸಮಾಮ್ನಾತಃ ಸವ್ಯಾಖ್ಯಾತವ್ಯಃ ತಮಿಮಂ ಸಮಾಮ್ನಾಯಂ ನಿಘಂಟು ಇತ್ಯಾಚಕ್ಷತೇ" ಎಂದು ಯಾಸ್ಕನ ನಿರುಕ್ತದಲ್ಲಿದೆ, (೧-೧-೫). ವಾಚಸ್ಪತಿ ಹೇಳಿರುವ ಮಾತು : "ಪ್ರಾಯೇಣೋಪದಿಶ್ಯತೇ ತತ್ರ ನಿಘಂಟು ಶಬ್ದಃ ಪ್ರಸಿದ್ಧಃ". ಭರತನ ನಾಟ್ಯಶಾಸ್ತ್ರದಲ್ಲಿ ಒಂದು ಶ್ಲೋಕವೇ ಇದೆ :

ನಾನಾ ನಾಮಾಶ್ರಯೋತ್ಪನ್ನಂ ನಿಘಂಟುಂ ನಿಗಮಾನ್ವಿತಂ
ಧಾತ್ವರ್ಥ ಹೇತುಸಂಯುಕ್ತಂ ನಾನಾ ಸಿದ್ಧಾಂತ ಸಾಧಿತಂ ॥

ಅಮರದ ಕೆಲವು ಟೀಕೆಗಳಲ್ಲಿ ಈ ಕೆಳಗಿನ ಮಾತುಗಳು ಬರುತ್ತವೆ : ೧) ನಿಶ್ಚಯೇನಾಧಿಕಂ ವಾ ನಿಗೂಢಾರ್ಥಾಃ ಏತೇಪರಿಜ್ಞಾತಾಃ ಸಂತೋ ಮಂತ್ರಾರ್ಥಾನ್ ಗಮಯಂತಿ ಜ್ಞಾಪಯಂತಿ, ೨) ನಿಗಮನಾತ್ ನಿಘಂಟವಃ, ೩) ನಾಮಶಾಸ್ತ್ರಂ ನಿಘಂಟುರಿತ್ಯುಚ್ಯತೇ. ಹೀಗೆಲ್ಲ ವಿವರಣೆ ಇರುವುದರಿಂದ ನಿಘಂಟುಗಳು ವೇದಗಳಲ್ಲಿರುವ ನಿಗೂಢಾರ್ಥದ ಶಬ್ದಗಳ ಪಟ್ಟಿ ಮತ್ತು ಅವುಗಳ ಅರ್ಥ ಎಂಬುದು ಸ್ಪಷ್ಟ.

ನಿಘಂಟುವಿಗೆ ರಚಿತವಾಗಿರುವ ನಿರುಕ್ತವು ಒಂದು ಬಗೆಯ ಸೂತ್ರಗ್ರಂಥ. ಈ ಗ್ರಂಥದಲ್ಲಿ ನಿಘಂಟುವಿಗೆ ಅರ್ಥ ಹೇಳುವುದರಲ್ಲಿ ಮಾತ್ರ ಯಾಸ್ಕನು ತೃಪ್ತಿಪಟ್ಟು ಸುಮ್ಮನಾಗಿಲ್ಲ; ಶಬ್ದವು ನಿತ್ಯವೇ ಅನಿತ್ಯವೇ ? ನಿರುಕ್ತವನ್ನು ಹೇಳುವುದು ಹೇಗೆ ? ಮಂತ್ರಗಳಿಗೆ ಅರ್ಥವುಂಟೇ ? ಮಂತ್ರದರ್ಶನದ ಸಂದರ್ಭಗಳಾವುವು ? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ವೈದಿಕ ಸಾಹಿತ್ಯದ ಪೂರ್ಣಪರಿಚಯವನ್ನು ಮಾಡಿಕೊಡುತ್ತಾನೆ. ಹೀಗೆ ನಿರುಕ್ತವು ವೇದಕ್ಕೆ ಭಾಷ್ಯವೂ ವೇದದ ಭಾಷೆಗೆ ವ್ಯಾಕರಣವೂ ವೈದಿಕ ಸಾಹಿತ್ಯಕ್ಕೆ ವಿಮರ್ಶೆಯೂ ಆಗಿ ಮುಪ್ಪಟ್ಟು ಪ್ರಾಮುಖ್ಯವನ್ನು ಗಳಿಸಿದೆ. ನಿರುಕ್ತದ ಅಭ್ಯಾಸದಿಂದ ವೇದದ ಸಂಸ್ಕೃತವೇ ಬೆಳೆದು ಮುಂದಿನ ಕಾಲದಲ್ಲಿ ವ್ಯಾವಹಾರಿಕ ಪ್ರಯೋಗಕ್ಕೂ ಒದಗಿಬಂತು ಎಂಬುದು ತಿಳಿಯಬರುತ್ತದೆ.

ನಿರುಕ್ತವಲ್ಲಿ ಬರುವ ಎಲ್ಲ ನಿರ್ವಚನಗಳನ್ನೂ ಎಲ್ಲರೂ ಒಪ್ಪುತ್ತಾರೆಂದೇನೂ ಇಲ್ಲ. ಆದರೂ ಅದರ ವ್ಯಾಪಕವಾದ ಪ್ರಭಾವ ಮಾತ್ರ ಸಂಸ್ಕೃತ ಸಾಹಿತ್ಯದಲ್ಲಿ ಕಡಿಮೆಯಾಗಿಲ್ಲ.

ಭಾಷಾಶಾಸ್ತ್ರದ ಬೆಳವಣಿಗೆಯ ಪ್ರಭಾವ

ಭಾರತದಲ್ಲಿ ಭಾಷಾಶಾಸ್ತ್ರದ ವಿಶಿಷ್ಟವಾದ ಅಧ್ಯಯನ ಪ್ರಾರಂಭವಾದುದು ಹಿಂದಿನ ಶತಮಾನದ ಆದಿಯಲ್ಲಿ. ವಿಶ್ವವಿದ್ಯಾನಿಲಯಗಳಲ್ಲಿ ಆದ ಪಾಶ್ಚಾತ್ಯರ ಗಾಢವಾದ ವ್ಯಾಸಂಗಗಳ ಪ್ರಭಾವದಿಂದ ಕೆಲವು ವಿಶ್ವವಿದ್ಯಾನಿಲಯಗಳೂ ಭಾಷಾಶಾಸ್ತ್ರದ ವ್ಯಾಸಂಗಕ್ಕೆಂದೇ ಬೇರೆಯ ಇಲಾಖೆಯನ್ನೇ ತೆರೆದವು. ಈಗ ಭಾರತದ ಎಲ್ಲ ಭಾಗಗಳಲ್ಲಿಯೂ ಭಾಷಾಶಾಸ್ತ್ರದ ಅಭ್ಯಾಸ ಶಿಸ್ತಿನಿಂದ ನಡೆಯುತ್ತಿದೆ. ಹೀಗೆ ಭಾಷಾಶಾಸ್ತ್ರದ ಆಳವಾದ ವ್ಯಾಸಂಗವು ಹೆಚ್ಚಾದಂತೆ ಅದರಲ್ಲಿಯೂ ಒಳಭಾಗಗಳನ್ನು ಗುರುತಿಸಲಾಗಿದೆ. ನಿಘಂಟಿಗೆ ಸಂಬಂಧಪಟ್ಟಂತೆ ಎರಡು ಮುಖ್ಯ ವಿಭಾಗಗಳನ್ನು ಗುರುತಿಸಲಾಗಿದೆ. ೧. ನಿಘಂಟು ಶಾಸ್ತ್ರ (Lexicology). ೨. ನಿಘಂಟು ರಚನೆ (Lexicography). ಇವುಗಳಲ್ಲಿ ಮೊದಲನೆಯದರಲ್ಲಿ ನಿಘಂಟುಗಳಿಗೆ ಸಂಬಂಧಿಸಿದ ಮೂಲ ತತ್ವಗಳನ್ನು ವೈಜ್ಞಾನಿಕವಾಗಿ ನಿರೂಪಿಸಲಾಗುತ್ತದೆ. ಎರಡನೆಯದರಲ್ಲಿ ನಿಘಂಟು ರಚನೆಯ ಕ್ರಮವನ್ನು ಪಟ್ಟಿ ಮಾಡಿ ವಿವರಿಸಲಾಗುತ್ತದೆ.

ಹಾಗೆಂದ ಮಾತ್ರಕ್ಕೆ ಈ ಎರಡು ವಿಭಾಗಗಳೂ ಸಂಪೂರ್ಣವಾಗಿ ಬೇರೆ ಬೇರೆ ಎಂದು ಅರ್ಥವಲ್ಲ. ನಿಘಂಟು ರಚನೆ ಎಂಬುದು ಪ್ರಾಯೋಗಿಕ ನಿಘಂಟುಶಾಸ್ತ್ರ (Applied Lexicology or Applied Linguistics). ಶಬ್ದ ಎನ್ನುವುದು ಈ ಎರಡಕ್ಕೂ ಮೂಲ ದ್ರವ್ಯ. ಒಂದು ಭಾಷೆಯಲ್ಲಿರುವ ಶಬ್ದ ಸಮೂಹವೆಲ್ಲ ಆ ಭಾಷೆಯ ಶಬ್ದ ವ್ಯವಸ್ಥೆಗೆ ಒಳಗಾದದ್ದು. ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥವಿದೆ, ಒಂದು ಉಚ್ಚಾರಣೆ ಇದೆ, ಒಂದು ವ್ಯಾಕರಣ ಸಂಪ್ರದಾಯದ ನಂಟು ಇದೆ. ನಿಘಂಟು ಶಾಸ್ತ್ರವೆನ್ನುವುದು ಈ ಎಲ್ಲ ಮುಖಗಳಲ್ಲಿ ಅದನ್ನು ಅಭ್ಯಾಸ ಮಾಡುತ್ತದೆ. ಅಂದರೆ ಒಂದು ಶಬ್ದದ ಸ್ವರೂಪ, ವ್ಯಾಕರಣದ ಸಂಬಂಧ, ಉಚ್ಚಾರಣಾಕ್ರಮ ಮತ್ತು ಅದು ಪ್ರಯೋಗವಾಗಿರುವ ಸಂದರ್ಭ ಇವುಗಳ ವಿವರಗಳನ್ನು ಪರಿಶೀಲಿಸಬೇಕು ಎಂದರ್ಥ.

ಒಂದು ಶಬ್ದಕ್ಕೆ ಒಂದು ಅರ್ಥವಿದೆ ಎಂದರೆ, ಆ ಅರ್ಥವೂ ಸರ್ವಕಾಲಕ್ಕೂ ಒಂದೇ ಆಗಿರುವುದಿಲ್ಲ. ಸಂದರ್ಭಾನುಸಾರವಾಗಿ ಶಬ್ದದ ಅರ್ಥಗಳಲ್ಲಿ ವ್ಯತ್ಯಾಸಗಳುಂಟಾಗುತ್ತವೆ.

ಆದುದರಿಂದ ಪ್ರತಿಯೊಂದು ಶಬ್ದದ ವ್ಯುತ್ಪತ್ತಿ, ಅದು ಬದಲಾವಣೆ ಹೊಂದಿದ ಬೇರೆ ಬೇರೆಯ ರೂಪಗಳು, ಸದ್ಯದಲ್ಲಿ ಅದು ಹೊಂದಿರುವ ರೂಪ, ಮಿಕ್ಕ ಶಬ್ದಗಳ ಜೊತೆಯಲ್ಲಿ ಹೋಲಿಸಿದರ ಕಂಡುಬರುವ ಸಾಮ್ಯವೈಷಮ್ಯಗಳು ಮುಂತಾದುವನ್ನೆಲ್ಲ ಅಭ್ಯಾಸ ಮಾಡಬೇಕಾಗುತ್ತದೆ. ಕೆಲವು ವೇಳೆ ಒಂದೊಂದು ಶಬ್ದ ಬಿಡಿಯಾಗಿ ಪ್ರಯೋಗಗಳಲ್ಲಿ ದೊರೆಯದೇ ಹೋಗಬಹುದು. ಆಗ ಯಾವುದಾದರೂ ಗಾದೆಗಳಲ್ಲಿ, ನುಡಿಗಟ್ಟುಗಳಲ್ಲಿ, ವಾಗ್ರೂಢಿಗಳಲ್ಲಿ ಅದರ ಸುಳಿವು ಕಾಣಬರುತ್ತದೆಯೆ ಎಬುದನ್ನು ಪರಿಶೀಲಿಸಬೇಕಾಗುತ್ತದೆ. ಇದೇ ಆಳವಾದ ಸಂಶೋಧನೆಯಾಗಬಹುದು.

ಒಂದು ಭಾಷೆಯ ಚರಿತ್ರೆಯನ್ನು ಅಭ್ಯಾಸ ಮಾಡುವಾಗ ಆ ಭಾಷೆಯ ಬೆಳವಣಿಗೆಯ ಬೇರೆ ಬೇರೆ ಯುಗಗಳನ್ನು ಗುರುತಿಸಬೇಕಾಗುತ್ತದ. ಉದಾಹರಣೆಗೆ ಕನ್ನಡ ಭಾಷಾ ಚರಿತ್ರೆಯಲ್ಲಿ ಈಗ ಎಲ್ಲರಿಗೂ ಗೊತ್ತಿರುವಂತೆ ೧. ಪೂರ್ವದ ಹಳಗನ್ನಡ, ೨. ಹಳಗನ್ನಡ, ೩. ನಡುಗನ್ನಡ, ೪. ಹೊಸಗನ್ನಡ ಎಂಬ ವಿಶಿಷ್ಟ ಯುಗಗಳನ್ನು ವಿದ್ವಾಂಸರು ಸರಿಯಾಗಿಯೇ ಗುರುತಿಸಿದ್ದಾರೆ. ಕೈಲಾಸಂ ಅವರ ನಾಟಕಗಳಲ್ಲಿ ಬರುವ ಭಾಷೆಯ 'Code mixing' ಎಂಬ ಹೆಸರುಳ್ಳ ಸ್ವರೂಪವನ್ನೂ, ದೇವನೂರು ಮಹಾದೇವರ ಗ್ರಂಥಗಳಲ್ಲಿ ಬರುವ ಸಂಪೂರ್ಣ ಗ್ರಾಮ್ಯಪ್ರಯೋಗದ ಪರಿಣಾಮವನ್ನೂ ಪ್ರಾದೇಶಿಕ ಶಬ್ದ ಸ್ವರೂಪಗಳ ವೈಶಿಷ್ಟ್ಯವನ್ನೂ ಬಿಡಿ ಬಿಡಿಯಾಗಿ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಒಂದೇ ಕುಟುಂಬಕ್ಕೆ ಸೇರಿದ ಭಾಷೆಗಳ ಜ್ಞಾತಿಸಂಬಂಧದ ಅಭ್ಯಾಸವೂ ಅಗತ್ಯವಾಗುತ್ತದೆ. ಶಬ್ದಗಳ ನಾನಾರ್ಥ, ರೂಪಸಾಮ್ಯ, ಸಮಾನಾರ್ಥಗಳು, ವಿರುದ್ಧಾರ್ಥಗಳು, ಸಮೀಪಾರ್ಥಗಳು, ಇವುಗಳ ಚರಿತ್ರೆ ಮುಂತಾದುವೆಲ್ಲ ನಿಘಂಟು ರಚನೆಯಲ್ಲಿ ಪ್ರಧಾನಪಾತ್ರ ವಹಿಸುತ್ತವೆ. ಇಂಥ ವಿಷಯಗಳಲ್ಲಿ ಸಂಶೋಧನೆ ನಡೆಯಲೇಬೇಕಾಗುತ್ತದೆ.

ವ್ಯಾಕರಣದ ದೃಷ್ಟಿಯಿಂದ ಶಬ್ದಗಳು ಯಾವ ಯಾವ ರೂಪಗಳನ್ನು ಪಡೆಯುತ್ತವೆ ಎಂಬ ಅಭ್ಯಾಸ ತುಂಬ ಪ್ರಯೋಜನಕಾರಿ. ಕೆಲವು ಶಬ್ದಗಳು ವ್ಯಾಕರಣ ಸೂತ್ರಗಳಿಗೆ ಅನುಸಾರವಾಗಿ ಹೊಸ ರೂಪಗಳನ್ನು ಪಡೆಯುತ್ತವೆ. ಮತ್ತೆ ಕೆಲವು ಸೂತ್ರಗಳ ಅಧಿಕಾರವನ್ನು ಲಕ್ಷಿಸುವುದಿಲ್ಲ. ಈ ಅವಿಧೇಯ ಶಬ್ದಗಳ ಸ್ವಭಾವವೆಂಥದು, ಅದರ ಅವಿಧೇಯತೆಗೆ ಕಾರಣವೇನು ಎಂಬುದನ್ನು ಅನ್ವೇಷಿಸುವ ಅಗತ್ಯವಿದೆ.

ಒಂದು ಭಾಷೆಯನ್ನು ಆಡುವ ಜನರು ವಾಸಿಸುವ ಪ್ರದೇಶದಲ್ಲಿ ಮೈತಳೆಯುವ ಸಾಮಾಜಿಕ, ರಾಜಕೀಯ ಮತ್ತು ಮತೀಯ ಬೆಳವಣಿಗೆಗಳಿಂದ ಅನೇಕ ಹೊಸ ಶಬ್ದಗಳು ಉತ್ಪತ್ತಿಯಾಗುತ್ತವೆ. ವಿಜ್ಞಾನದ ಪ್ರಗತಿ, ಕೈಗಾರಿಕೆಗಳ ಪ್ರಭಾವ, ಯಂತ್ರಕೌಶಲ, ತಂತ್ರಕೌಶಲಗಳ ವ್ಯಾಪಕವಾದ ಉಪಯೋಗ ಇವುಗಳಿಂದಲೂ ಈ ಶಬ್ದಜಾಲ ಬೆಳೆಯುತ್ತದೆ. ನಿಘಂಟುಶಾಸ್ತ್ರವು ಇವುಗಳನ್ನೆಲ್ಲ ಅಳವಡಿಸಿಕೊಂಡು ತನ್ನ ಭಾಷೆಯೊಳಗೆ ಅಭ್ಯಾಸವನ್ನು ಮುಂದುವರಿಸಬೇಕಾಗುತ್ತದೆ.

ಒಂದು ಶಬ್ದದ ನಾನಾರ್ಥಗಳು ಬೆಳೆದುಬಂದ ಬಗೆ ಯಾವುದು ? ಇದಕ್ಕೆ ಕಾರಣಗಳೇನು ? ಆ ಭಿನ್ನ ಭಿನ್ನ ಅರ್ಥಗಳಿಗೆ ಯಾವುದಾದರೂ ಸಂಬಂಧ ಸೂತ್ರವಿದೆಯೇ ? ಇವುಗಳ ಹಿಂದೆ ಇರುವ ತರ್ಕ ಎಂಥದು ? ನಿಘಂಟು ರಚನೆಯಲ್ಲಿ ಈ ಎಲ್ಲ ಶಬ್ದಾರ್ಥಗಳ ಸಕಲ ವಿವರಗಳನ್ನೂ ಸೇರಿಸಬೇಕಾದ ಅಗತ್ಯವನ್ನು ನಿಘಂಟು ಶಾಸ್ತ್ರ ನಿರೂಪಿಸುತ್ತದೆ.

ನಿಘಂಟು ಶಾಸ್ತ್ರ ಎಲ್ಲ ಭಾಷೆಗಳಿಗೆ ಸಂಬಂಧಪಟ್ಟದ್ದು. ನಿಘಂಟು ರಚನೆ, ಮೂಲವಾಗಿ ಒಂದು ಭಾಷೆಗೆ ಸಂಬಂಧಪಟ್ಟದ್ದು.

ಕನ್ನಡ ಭಾಷೆಗೆ ಸಂಬಂಧಪಟ್ಟಂತೆ ಈ ವಿಧವಾದ ಅಭ್ಯಾಸ ಹೆಚ್ಚಾಗಿ ನಡೆದಿಲ್ಲ. ಕೆಲವರು ವಿದ್ವಾಂಸರು ಈ ಬಗ್ಗೆ ಆಳವಾಗಿ ಆಲೋಚಿಸುತ್ತಿರುವುದು ನಿಜವಾದರೂ ಬರಹದಲ್ಲಿ

ಆ ಆಲೋಚನೆಯ ಫಲಗಳು ನಿರೂಪಿತವಾಗಿಲ್ಲ. ನಿಘಂಟು ರಚನೆಯೇನೋ ಸಾಕಾವಷ್ಟು ನಡೆದಿದೆ.

ನಿಘಂಟುಗಳು ಏಕೆ ಅಗತ್ಯವೆಂಬುದನ್ನು ಜನರು ಬೇಗ ಅರ್ಥ ಮಾಡಿಕೊಳ್ಳಲಾರರು. ಯಾವುದಾದರೂ ಶಬ್ದಕ್ಕೆ ಇರುವ ಅರ್ಥ ತಿಳಿಯದೆ ಇದ್ದಾಗ, ತಿಳಿದ ಯಾರನ್ನಾದರೂ ಕೇಳಿ ಅಷ್ಟರಲ್ಲಿಯೇ ತೃಪ್ತಿಪಡುವ ಜನರೇ ಹೆಚ್ಚು. ಆದರೆ ತಿಳಿಯದ ಅರ್ಥವನ್ನು ನಿಘಂಟಿನಲ್ಲಿ ಹುಡುಕುವ ಪ್ರಯತ್ನ ಮಾಡಿದರೆ ಆಗ ಅಂಥವರಿಗೆ ದೊರೆಯುವ ಶಬ್ದಬೋಧ ಎಷ್ಟು ವ್ಯಾಪಕವಾಗಿರುತ್ತದೆಂಬುದನ್ನು ಆ ಪ್ರಯತ್ನ ಪಟ್ಟವರು ಮಾತ್ರ ತಿಳಿಯಬಲ್ಲರು. ಆಗ ಅಂಥವರಿಗೆ ಮತ್ತೊಬ್ಬರಿಂದ ತಿಳಿಯುವ ಅರ್ಥದಲ್ಲಿ ವಿಶ್ವಾಸ ಕಡಿಮೆಯಾಗುತ್ತದೆ. ಭಾಷೆಯ ವಿಚಾರದಲ್ಲಿ ಸ್ವಂತ ಸಾಮರ್ಥ್ಯವನ್ನು ಬೆಳೆಸಬೇಕಾದರೆ ನಿಘಂಟನ್ನು ಮರೆಹೋಗುವುದು ಒಂದೇ ದಾರಿ. ಆದುದರಿಂದ ನಿಘಂಟುಶಾಸ್ತ್ರದ ಬಗ್ಗೆಯೂ ಸಾಮಾನ್ಯ ಜನತೆಗೆ ಸ್ವಲ್ಪವಾದರೂ ಪರಿಚಯವಿರಬೇಕು.

ನಿಘಂಟು ಶಾಸ್ತ್ರ ತತ್ವಮೂಲಗಳನ್ನು ಶೋಧಿಸಿ ಅವುಗಳ ವೈಜ್ಞಾನಿಕವಾದ ನಿರೂಪಣೆಯನ್ನು ಮಾಡುತ್ತದೆ. ನಿಘಂಟುರಚನೆ ಆ ತತ್ವಗಳನ್ನು ಅನುಸರಿಸಿ ಕ್ರಿಯಾಮುಖವಾಗುತ್ತದೆ.

ಎಷ್ಟು ಸೂತ್ರಗಳನ್ನು ನಿರ್ಮಾಣ ಮಾಡಿದರೂ ನಿಘಂಟು ರಚನೆಗೆ ಬೇಕಾದ ವಿಷಯ ಸಂಗ್ರಹವನ್ನು ಮಾಡುವ ಕೆಲಸ ತುಂಬ ಕಷ್ಟಸಾಧ್ಯವಾದುದು. ಎಷ್ಟು ಶಾಸ್ತ್ರಗಳಿಂದ, ಎಷ್ಟು ಚರಿತ್ರೆಗಳಿಂದ ವಿಷಯ ಸಂಗ್ರಹ ಮಾಡಿದರೂ ಈ ಸಂಗ್ರಹಕಾರ್ಯಕ್ಕೆ ಕೊನೆಯೆಂಬುದು ಇಲ್ಲವೇ ಇಲ್ಲ. ಮಾನವನು ಮಾತನಾಡುತ್ತಿರುವ ತನಕ ಬೆಳೆಯುತ್ತಲೇ ಇರುವ ಕಲೆ+ವಿಜ್ಞಾನ ಇದು. ಆದರೂ ಭಾಷಾಶಾಸ್ತ್ರವು ಈಗ ಬೆಳೆಯುತ್ತಿರುವ ರೀತಿಯಲ್ಲಿ ನಿಘಂಟು ರಚನೆಗೆ ತುಂಬ ಸಹಾಯಕವಾಗಿದೆ. ಶಬ್ದಗಳನ್ನು ಆರಿಸುವುದರಿಂದ ಹಿಡಿದು, ಶಬ್ದಗಳ ಅರ್ಥನಿರ್ಣಯ, ಅರ್ಥಗಳ ಅನುಕ್ರಮ, ಜ್ಞಾತಿಶಬ್ದಗಳ ಉಲ್ಲೇಖ ಮತ್ತು ಅರ್ಥನಿರೂಪಣೆಯ ಮಾರ್ಗ ಇತ್ಯಾದಿಗಳಲ್ಲೆಲ್ಲ ಭಾಷಾಶಾಸ್ತ್ರದ ತಿಳಿವಳಿಕೆ ಬಹಳ ಸಹಾಯಕಾರಿ.

ಈ ಸಂದರ್ಭದಲ್ಲಿ ಒಂದಂಶವನ್ನು ವಿವರಿಸುವುದು ಅಗತ್ಯ. ಯಾವ ನಿಘಂಟನ್ನೂ ಸಹಾಯಕ್ಕೆ ತೆಗೆದುಕೊಳ್ಳದೆಯೇ ಒಬ್ಬ ವ್ಯಕ್ತಿ ಆಜೀವಪರ್ಯಂತ ಭಾಷೆಯನ್ನು ಉಪಯೋಗಿಸಿ ಪ್ರಯೋಜನಕರವಾದ ಬಾಳನ್ನು ಬದುಕುವುದಕ್ಕೆ ಬೇಕಾದ ವೈಯಕ್ತಿಕ ನಿಘಂಟನ್ನು ತನ್ನ ಮನಸ್ಸಿನಲ್ಲಿ ಸದಾ ಸಿದ್ಧತೆಯಲ್ಲಿಟ್ಟಿರುತ್ತಾನೆ. ಇದೇ ಸಮಾಜದ ಸಹಾಯಕ್ಕೆ ಬರುವ ನಿಘಂಟು. ವಿದ್ವಾಂಸರು ಸೇರಿ ಸಿದ್ಧಪಡಿಸುವ ನಿಘಂಟು ವಿಶೇಷ ಸಂದರ್ಭಗಳಿಗೆ ಸಹಾಯಕ್ಕ ಬರುವ ನಿಘಂಟು. ಒಂದರಲ್ಲಿ ವೈಯಕ್ತಿಕ ಸಂಸ್ಕೃತಿ ಅಡಕವಾಗಿರುತ್ತದೆ. ಇನ್ನೊಂದರಲ್ಲಿ ಸಮಾಜದ ಸಂಸ್ಕೃತಿ ಅಳವಡಿಸಲ್ಪಟ್ಟಿರುತ್ತದೆ.

೨. ನಿಘಂಟು ರಚನೆಯ ಶಾಸ್ತ್ರ

ನಿಘಂಟು ಎಂದರೇನು ? ಒಂದು ಭಾಷೆಯ ಎಲ್ಲ ಶಬ್ದಗಳನ್ನು ಆಕಾರಾದಿಯಾಗಿ ಪಟ್ಟಿ ಮಾಡಿ, ಆ ಶಬ್ದಗಳ ಅರ್ಥಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿಹೊಂದಿರುವ ಪ್ರಾಚೀನ ನವೀನ ಪ್ರಯೋಗಗಳನ್ನು ಉಲ್ಲೇಖಿಸಿ, ಆ ಶಬ್ದದ ವ್ಯಾಕರಣ ವಿವರಗಳನ್ನು ಸೇರಿಸಿ, ರಚಿಸಿರುವ ಪುಸ್ತಕ. ಇದರಲ್ಲಿ ಶಬ್ದಗಳಿಗೆ ಹಣೆಪಟ್ಟಿಗಳನ್ನೂ ಜೋಡಿಸಿ ಮಾನವ ಜೀವನದ ಯಾವ ಕ್ಷೇತ್ರಕ್ಕೆ ಅದು ಸಂಬಂಧಿಸಿದೆ ಎಂಬುದನ್ನೂ ಇತರ ವಿವರಗಳನ್ನೂ ಆ ಶಬ್ದದ ಅಡಿಯಲ್ಲಿ ನೀಡಿರುತ್ತದೆ. ಸ್ಥೂಲವಾಗಿ ನಿಘಂಟು ಎಂದರೆ ಇಷ್ಟನ್ನು ಹೇಳಬಹುದು. ಇದರ ಜೊತೆಗೆ ಆ ಶಬ್ದಗಳ ಕಾಗುಣಿತ, ಉಚ್ಚಾರಣೆ, ಅವುಗಳ ಸಮಾನಾರ್ಥಕ ಶಬ್ದಗಳು, ವಿರುದ್ಧಾರ್ಥ ಶಬ್ದಗಳು ಅವುಗಳ ವ್ಯುತ್ಪತ್ತಿ, ಜ್ಞಾತಿ ಶಬ್ದಗಳು, ಮತ್ತು ಶಬ್ದಗಳ ಚರಿತ್ರೆ ಇತ್ಯಾದಿಗಳನ್ನೂ ಸೇರಿಸಿರುತ್ತಾರೆ. ಕನ್ನಡ ಭಾಷೆಯ ಅಕ್ಷರಗಳು ಕನ್ನಡದ ಉಚ್ಚಾರಣೆಯನ್ನು ಸ್ಪಷ್ಟವಾಗಿ ತಿಳಿಸುವುದರಿಂದ ನಿಘಂಟಿನಲ್ಲಿ ಉಚ್ಚಾರಣೆಯ ವಿಚಾರವನ್ನೂ ತಿಳಿಸಬೇಕಾಗಿಲ್ಲ. ಇತರ ಭಾಷೆಗಳಿಗೆ ಆ ಭಾಗ ಬೇಕಾಗಬಹುದು. ಆದರೆ ಕನ್ನಡದ ಮೇಲೆ ಆಂಗ್ಲ ಭಾಷೆಯ ಪ್ರಭಾವವು ಹೆಚ್ಚಾಗಿರುವುದರಿಂದ ಇಂಗ್ಲಿಷಿನ ಕೆಲವು ಉಚ್ಚಾರಣೆಗಳನ್ನೂ ನಾವು ಸೇರಿಸಿಕೊಳ್ಳಬೇಕಾಗ ಬಹುದು. F, Z ಎಂಬ ಎರಡು ಅಕ್ಷರಗಳ ಉಚ್ಚಾರಕ್ಕೆ ನಮ್ಮಲ್ಲಿ ಲಿಪಿ ಇಲ್ಲದಿರುವುದರಿಂದ ಹೊಸ ಎರಡು ಅಕ್ಷರಗಳನ್ನೂ ಸೃಷ್ಟಿ ಮಾಡಿಕೊಳ್ಳಲಾಗಿದೆ. ಅದು ಸಂಪೂರ್ಣವಾಗಿ ಹೊಸದೇನೂ ಅಲ್ಲ. ಇರುವ ಅಕ್ಷರಗಳಿಗೆ ಸ್ವಲ್ಪ ಬದಲಾವಣೆ ಮಾಡಿರತಕ್ಕವು. "F = ಫ಼, Z = ಜ಼" ಎಂಬೆರಡನ್ನೂ ಕೆಲವರು ಬರವಣಿಗೆಯಲ್ಲಿ ಉಪಯೋಗಿಸುತ್ತಿದ್ದಾರೆ. ಆದರೆ ಇನ್ನೂ ಸಾಮಾನ್ಯರ ಬರವಣಿಗೆಗೆ ಅದರ ಸೋಂಕು ತಟ್ಟಿಲ್ಲ. CAT, MAT, BAT ಎಂಬ ಇಂಗ್ಲಿಷ್ ಶಬ್ದಗಳಲ್ಲಿರುವ A ಅಕ್ಷರದ ಉಚ್ಚಾರಣೆಯನ್ನು ಸೂಚಿಸಲು ಶ ಎಂಬ ಚಿಹ್ನೆಯನ್ನೂ ಉಪಯೋಗಿಸುತ್ತಾರೆ. ಆದರೆ when, what ಎಂಬ ಶಬ್ದಗಳ ಉಚ್ಚಾರಣೆಯಲ್ಲಿ ಪ್ರಾದೇಶಿಕವಾಗಿ ಭೇದವಿದ್ದರೂ ಅದನ್ನು ಲಿಪಿಯಲ್ಲಿ ಸೂಚಿಸುವುದು ಸಾಧ್ಯವಾಗಿಲ್ಲ.

ನಿಘಂಟುಗಳಲ್ಲಿ ಅನೇಕ ಬಗೆಗಳಿವೆ. ನಿಘಂಟುಗಳಲ್ಲಿ ಎಷ್ಟು ಶಬ್ದಗಳಿವೆ ಎಂಬುದನ್ನು ಪರಿಶೀಲಿಸಿ, ಅದರಲ್ಲಿ ಗ್ರಾಮ್ಯ, ಪ್ರಾದೇಶಿಕ, ಶಿಷ್ಟ, ಅಶಿಷ್ಟ, ಪ್ರಾಚೀನ ಮುಂತಾದವು ಎಷ್ಟು ಸೇರಿವೆ ಎಂಬುದನ್ನು ಗಮನಿಸಿ ಅದರ ಪ್ರಾಧಾನ್ಯವನ್ನು ನಿರ್ಣಯಿಸಬೇಕು. ಎಷ್ಟು ಭಾಷೆಗಳಿಗಾಗಿ ಆ ನಿಘಂಟು ಸಿದ್ಧವಾಗಿದೆ ಎಂಬುದಕ್ಕೆ ಅನುಸಾರವಾಗಿ ಅದು ದ್ವಿಭಾಷಾ ನಿಘಂಟು, ತ್ರಿಭಾಷಾ ನಿಘಂಟು ಎಂಬುದನ್ನು ತೀರ್ಮಾನಿಸಬೇಕು. ಆಶ್ಚರ್ಯವೆಂದರೆ ಕೊಟ್ಟಾಯಂ ಎಂಬ ಊರಿನಲ್ಲಿ

೧೯೮೬ರಲ್ಲಿ ಮುದ್ರಣವಾಗಿರುವ ವಿದ್ವಾನ್ ಮುಟ್ಟುತ್ತುಪಿದಂ ಎಂಬವರಿಂದ ಸಂಪಾದಿತವಾದ English Malayalam Multilingual Dictionary ಎಂಬ ನಿಘಂಟಿನಲ್ಲಿ ಒಂದು ಇಂಗ್ಲಿಷ್ ಶಬ್ದಕ್ಕೆ ಪ್ರಪಂಚದ ೬೨ ಭಾಷೆಗಳಲ್ಲಿ ಯಾವುದರಲ್ಲಿ ಸಮಾನಾರ್ಥ ಸಿಕ್ಕಿದರೂ ಗುರುತಿಸಲಾಗಿದೆ. ೩೦೦೦ ಪುಟಗಳ ಈ ನಿಘಂಟು ಇಂಥ ಕಾರ್ಯದಲ್ಲಿ ಒಂದು ದೊಡ್ಡ ದಾಖಲೆಯಾಗಿದೆ. ಕೆಲವು ನಿಘಂಟುಗಳು ಕೇವಲ ವಿಶ್ವಕೋಶದಂತೆ ವಿಸ್ತಾರವಾದ ನಿರೂಪಣೆಗಳನ್ನೂ ಒಳಗೊಂಡಿವೆ. ಕೆಲವು ಶಬ್ದಗಳ ಚಾರಿತ್ರಿಕ ಬೆಳವಣಿಗೆಯನ್ನೂ ತಿಳಿಸಿದರೆ ಮತ್ತೆ ಕೆಲವು ಇಂದಿನ ಅರ್ಥವನ್ನು ಮಾತ್ರ ನೀಡುತ್ತವೆ. ಹೀಗಿರುವುದರಿಂದ ಈಗಿರುವ ನಿಘಂಟುಗಳನ್ನು ಯಾವುದಾದರೂ ವೈಜ್ಞಾನಿಕವಾದ ವಿಭಾಗಗಳಾಗಿ ವಿಂಗಡಿಸುವುದು ಕಷ್ಟಸಾಧ್ಯ.

ಆದರೂ ನಿಘಂಟು ನಿರ್ಮಾಣ ಮಾಡಬೇಕೆನ್ನುವವರ ಸಹಾಯಕ್ಕಾಗಿ ಎರಡು ಮುಖ್ಯ ಮಾದರಿಗಳನ್ನು ಗುರುತಿಸಬಹುದು.

೧. **ಸಾಮಾನ್ಯ ನಿಘಂಟು** : ಈ ಬಗೆಯ ನಿಘಂಟುಗಳಲ್ಲಿ ಒಂದು ಭಾಷೆಯ ಶಬ್ದ, ಅದರ ಪರ್ಯಾಯರೂಪಗಳು, ಅರ್ಥವಿವರಣೆ, ವ್ಯುತ್ಪತ್ತಿ, ವ್ಯಾಕರಣಾಂಶಗಳು ಎಂಬ ಮುಖ್ಯ ಅಂಶಗಳು ಗುರುತಿಸಲ್ಪಡುತ್ತವೆ. ಉದಾಹರಣೆ : **ಪೆರ್ಗಣ, ಪೆಗ್ಗಣ, ಹೆಗ್ಗಣ,** (ನಾ=ನಾಮಪದ), ಇಲಿಯ ಜಾತಿಗೆ ಸೇರಿದ ಒಂದು ಪ್ರಾಣಿ, ಬತ್ತ ಮುಂತಾದ ಪೈರುಗಳನ್ನು ತಿಂದು ನಾಶಮಾಡುವ ಪ್ರಾಣಿ. (ಪ್ರಯೋಗ) ಪೆರ್ಗಣಮನಿಕ್ಕಿ ಮನೆ ಮಾಡುವಂದವಕ್ಕುಂ (ಧರ್ಮಾಮೃತ ೩-೧೨೨). **ಪೆಗ್ಗಣ** : ಖನಕ ಮುಂದುರುವೆನಲು ಪೆಗ್ಗಣಂ (ಮಂಗರಾ ೪೯-೧೨). ಹೆಗ್ಗಣ : ಹೆತ್ತವಳಿಗೆ ಹೆಗ್ಗಣ ಮುದ್ದು (ಗಾದೆ). (ವ್ಯುತ್ಪತ್ತಿ : ದೇಶ್ಯ, ತುಳು : ಪೆರ್ಗುಡೆ, ಕೊತ : ಪೆಗಣ್, ತೊದ: ಎಗಣ್, ಎಗನ್). ವಿಶೇಷ ವಿಚಾರ : ಈ ಶಬ್ದದಲ್ಲಿರುವ ಪೆರ್ ಎಂಬ ಭಾಗ ಪಿರಿದು, ಹಿರಿದು ಎಂಬ ಶಬ್ದಕ್ಕೆ ಸಂಬಂಧಪಟ್ಟದ್ದಲ್ಲ. ಪೆರ್ಗಣ ಎಂಬ ರೂಪವೇ ಆ ಶಬ್ದಕ್ಕೆ ಸಂಬಂಧವಿದ್ದಿರಬಹುದೆಂಬ ಊಹೆಯಿಂದ ಬಂದದ್ದಿರಬಹುದು. ತೆಲುಗು, ತಮಿಳುಗಳಲ್ಲಿ ಈ ಶಬ್ದಕ್ಕೆ ಜ್ಞಾತಿ ಶಬ್ದವಿಲ್ಲದಿರುವುದು ಈ ಅನುಮಾನವನ್ನು ಬಲಪಡಿಸುತ್ತದೆ.

೨. **ವಿಶ್ವಕೋಶದ ಮಾದರಿಯ ನಿಘಂಟು** : ಇಂಥ ನಿಘಂಟುಗಳಲ್ಲಿ ಸಾಮಾನ್ಯ ನಿಘಂಟುಗಳಲ್ಲಿ ಬರುವ ಭಾಷಾವಿಷಯಕವಾದ ಅಂಶಗಳ ಜೊತೆಗೆ ಸಾಮಾಜಿಕ ಸಂಸ್ಕೃತಿಗೆ ಸಂಬಂಧಿಸಿದ ಇತರ ವಿವರಗಳನ್ನೂ ಕೊಡಬೇಕಾಗುತ್ತದೆ. ಉದಾಹರಣೆ :

ಅಂಗಾರ (ನಾ = ನಾಮಪದ). ೧. ಕೆಂಡ, ೨. ಇದ್ದಲು, ೩. ಮಂಗಳಗ್ರಹ, ಅಂಗಾರಕ, ೪. ದೇವರ ಧೂಪಾರತಿಯ ಕೆಂಡವನ್ನು ನೀರಿನಲ್ಲಿ ಆರಿಸಿ, ಅದರಿಂದ ಮಾಧ್ವರು ಹಣೆಯಲ್ಲಿ ಧರಿಸುವ ಊರ್ಧ್ವರೇಖೆ ; ಪ್ರಯೋಗ : ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು; ಮೈಯನ್ನು ಮುಚ್ಚಿತ್ತು ಕೆಂಪುಸೀರೆ (ಸಖೀಗೀತ ೫೪-೯) ವೈಷ್ಣವರ ಮಕ್ಕಳಿಗೆ ಅಂಗಾರವೇ ಬಂಗಾರ, ಸ್ಮಾರ್ತರ ಮಕ್ಕಳಿಗೆ ಗಂಧವೇ ಚಂದ (ಗಾದೆ), ೫. (ಉ.ಕ.) ಬೂದಿ (ಕಸ್ತೂರಿ), ೬. (ಉ.ಕ.) ದೇವರ ಧೂಪಾರತಿಯ ಬೂದಿ; ದೇವಸ್ಥಾನದಲ್ಲಿ ಅಭಿಮಂತ್ರಿಸಿ ಇಟ್ಟಿರುವ ಬೂದಿ; ಪುರೋಹಿತರು, ಜೋಯಿಸರು ಮೊದಲಾದವರು ಅಭಿಮಂತ್ರಿಸಿ ಕೊಡುವ ಬೂದಿ. ರಾಯರ

ಸನಾತನ ಬಾಲಮಿತ್ರ ಅವರಿಗೆ ದೇವರ ಅಂಗಾರ ಕೂಡ ಹಚ್ಚಿಹೋದ (ನಿರಾಭರಣಸುಂದರಿ ೭೪-೭); ದನಗಳಿಗೆ ಬೇನೆ ಬಂದರೆ ಭಟ್ಟರ ಅಂಗಾರದಿಂದ ಅವಕ್ಕೆ ಗುಣವಾಗುತ್ತಿತ್ತು. (ಹುಚ್ಚಿದಬಳ್ಳಿ ೨೫), ೭. ಇಂಗಾಲ (Carbon): ನಿಜವಾದ ವಜ್ರವು ಬಹು ಅಂಗಾರದ ಪರಮಾಣುಗಳ ಸಮೂಹವಾದುದರಿಂದ, ಅವು ಎಕ್ಸ್‌ರೇಗೆ ಸಂಪೂರ್ಣ ಪಾರದರ್ಶಕಗಳು (ಎಕ್ಸ್‌ರೇ ೫೪); ಇದ್ದಲು ಒಲೆಯಲ್ಲಿ ಹೊಗೆಯೇಳದಿದ್ದರೂ, ಸರಿಯಾಗಿ ಉರಿಯದೆ ಅಂಗಾರ ಉತ್ಪನ್ನವಾಗಿ ವಾಯು ಸಂಚಾರದ ವ್ಯವಸ್ಥೆಯಿಲ್ಲದಿದ್ದರೆ ವಾತಾವರಣ ವಿಷವಾಗುವ ಸಂಭವವಿದೆ (ಅಡುಗೆ ಮನೆಯ ಸೌಭಾಗ್ಯ-೧೬).

ಅಂಗಾರ ಆಗು : ಅಂಗಾರವಾಗು = ೧. ಕೆಂಡದಂತೆ ಆಗು ; ರೇಗು : ನನ್ನ ಯೋಗ್ಯತಾಕ್ಕ ಈ ಜಾಗ ತಕ್ಕದಲ್ಲ ಅಂತ ಹೇಳಿದಾಗ ನಮ್ಮ ತೀರ್ಥರೂಪರು ಅಂಗಾರ ಆಗಿದ್ದರು ನನ್ನ ಮ್ಯಾಲ. (ಅಶ್ವಮೇಧ-೧೧), ೨. ಸುಟ್ಟು ಬೂದಿಯಾಗು, ನಾಶವಾಗು: ಹಿಂದಿರುವ ಹಗೆಯೀಗ ಅಂಗಾರವಾಯ್ತು ಮುಂದಿರುವ ಗೆಳೆತನದ ಸಿಂಗಾರವಾಯ್ತು (ಗರಿ ೪೧-೧೫) [ವ್ಯುತ್ಪತ್ತಿ ಸಂ= ಸಂಸ್ಕೃತ].

ಹೀಗಲ್ಲದೆ ನವಮಣಿ, ಚತುರ್ಯುಗ, ಚತುಷ್ಷಷ್ಟಿಕಲೆ ಮುಂತಾದ ಶಬ್ದಗಳು ಬಂದಾಗ ಅಷ್ಟು ಸಂಖ್ಯೆಯ ವಿವರಗಳನ್ನು, ಅವುಗಳಲ್ಲಿ ವ್ಯತ್ಯಾಸವಿದ್ದರೆ, ಆಧಾರ ಸಹಿತವಾಗಿ ಅವುಗಳನ್ನು ಉದ್ಧಾರ ಮಾಡಬೇಕು.

ಬೃಹನ್ನಿಘಂಟುಗಳಲ್ಲಿ ಮಾತ್ರ ವ್ಯಾಪಕವಾದ ಇಂಥ ವಿವರಗಳನ್ನು ನೀಡುವುದು ಸಾಧ್ಯ. ವಿವರಗಳನ್ನು ನಿರೀಕ್ಷಿಸುವ ಶಬ್ದಗಳು ಹೀಗೆಯೇ ಅನೇಕವಿರುತ್ತವೆ. ಕನ್ನಡದ ಸಂಸ್ಕೃತಿ ವಿಸ್ತಾರವಾದ ಪ್ರದೇಶದಲ್ಲಿ ಹರಡಿದೆ. ಅಲ್ಲಲ್ಲ ಇರುವ ಸಂಸ್ಕೃತಿ ಸಂಬಂಧದ ಶಬ್ದಗಳನ್ನು ಕ್ರೋಡೀಕರಿಸಿ ಅವಕ್ಕೆ ಅರ್ಥಗಳನ್ನು ಅಳವಡಿಸಿ ಶೇಖರಿಸದೆ ಹೋದರೆ ಕೆಲವು ಕಾಲದ ಅನಂತರ ಅವೆಲ್ಲ ನಿರ್ನಾಮವಾಗುತ್ತವೆ. ಈ ದೃಷ್ಟಿಯಿಂದ ಜಾನಪದ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಕನ್ನಡ ದೇಶದಲ್ಲಿ ನಡೆಯುತ್ತಿರುವ ಸಂಗ್ರಹ ಕಾರ್ಯ ತುಂಬ ಪ್ರಧಾನವಾದುದು. ಈ ಕ್ಷೇತ್ರದ ಭಾಷಾ ವೈವಿಧ್ಯದ ಸಂಗ್ರಹ, ಕೂಡಲೆ ಆಗಬೇಕು.

ಕನ್ನಡದ ಪ್ರಾಚೀನ ಗ್ರಂಥಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಗ್ರಂಥಗಳಿವೆ. ಅಶ್ವಶಾಸ್ತ್ರ ಅಥವಾ ಶಾಲಿಹೋತ್ರ, ಗಜಶಾಸ್ತ್ರ ಅಥವಾ ಪಾಲಕಾಪ್ಯ, ಅಡುಗೆಯ ವಿಜ್ಞಾನ ಅಥವಾ ಸೂಪಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಶಿಲ್ಪಶಾಸ್ತ್ರ, ನಾಟ್ಯಶಾಸ್ತ್ರ, ಸಂಗೀತಶಾಸ್ತ್ರ, ಜೀವಶಾಸ್ತ್ರ, ಗಣಿತ, ಜ್ಯೋತಿಷ, ಆಯುರ್ವೇದ, ಯುನಾನಿ, ವೇದಾಂತ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ-ಇತ್ಯಾದಿ ಅನೇಕ ಶಾಸ್ತ್ರಗಳಲ್ಲಿರುವ ಶಬ್ದಗಳನ್ನು ಕುರಿತು ಬರೆಯುವಾಗ ಆಯಾ ಉಲ್ಲೇಖಗಳಲ್ಲಿ ಈ ಶಾಸ್ತ್ರಗಳ ಹೆಸರನ್ನು ಹೇಳಬೇಕು.

ಒಂದು ವೇಳೆ ಯಾವುದಾದರೂ ಶಬ್ದಕ್ಕೆ ವಿಶೇಷ ವಿಚಾರವೆಂದು ಅದು ಪ್ರಾಚೀನವೋ, ಅಪೂರ್ವವೋ, ಅಲ್ಪಪ್ರಯುಕ್ತವೋ, ಅಪ್ರಯುಕ್ತವೋ ಆ ಚಾರಿತ್ರಿಕ ವಿವರಗಳನ್ನು ನೀಡಬೇಕು.

ಶಬ್ದಗಳ ವ್ಯುತ್ಪತ್ತಿಯನ್ನು ಎರಡು ರೀತಿಯಲ್ಲಿ ತಿಳಿಸಬಹುದು. ಅತಿ ಪ್ರಾಚೀನ ರೂಪದಿಂದ ಅತ್ಯಾಧುನಿಕ ರೂಪದವರೆಗೆ ಅನುಲೋಮವಾಗಿ ತಿಳಿಸಿದರೂ ಸರಿ. ಇಲ್ಲದಿದ್ದರೆ ಅತ್ಯಾಧುನಿಕ ರೂಪದಿಂದ ಅತಿ ಪ್ರಾಚೀನ ರೂಪದವರೆಗೆ ವಿಲೋಮವಾಗಿ ತಿಳಿಸಿದರೂ ಸರಿ. ಆದರೆ ಚಾರಿತ್ರಿಕ ಕ್ರಮದಲ್ಲಿ ಲೋಪ ಬರದಂತೆ ನೋಡಿಕೊಳ್ಳಬೇಕು.

ಕೆಲವು ವೇಳೆ ಅತಿ ಪ್ರಾಚೀನ ರೂಪವು ನಮ್ಮ ಅನ್ವೇಷಣೆಗೆ ಸಿಕ್ಕದೆ ಹೋಗಬಹುದು. ಅಂಥ ಕಡೆ ಭಾಷಾಶಾಸ್ತ್ರದ ತರ್ಕಕ್ಕೆ ದೊರಕುವ ರೂಪ ಇದ್ದರೆ ಅದನ್ನೂ ಎತ್ತಿ ಪ್ರಕಟಿಸಬಹುದು. ಒಂದು ಉದಾಹರಣೆಯನ್ನೂ ನೀಡುತ್ತೇನೆ. ಹೆಂಗಸು, ಗಂಡಸು ಎಂಬ ಇಂದಿನ ಶಬ್ದಗಳ ಚರಿತ್ರೆಯನ್ನು ಗಮನಿಸಿ :

ಪೆಣ್ಗೂಸು	ಗಂಡುಗೂಸು
ಪೆಂಗೂಸು	ಗಂಡುಕೂಸು
ಪೆಂಗುಸು	ಗಂಡುಸು
ಹೆಂಗೂಸು	ಗಂಡಸು
ಹೆಂಗುಸು	
ಹೆಂಗಸು	
(ಹೆಣ್ಣುಕೂಸು, ಹೆಣ್ಣುಗೂಸು)	

ಈ ಶಬ್ದಗಳಿಗೆ ಪ್ರಾರಂಭದ ರೂಪಕ್ಕೆ ಪಂಪ ಭಾರತದಲ್ಲಿಯೇ ಆಧಾರ ಸಿಕ್ಕುತ್ತದೆ. "ಮುನೀಂದ್ರನಿಂದ್ರಿಯದೊಳೊಗೆದ ಪೆಣ್ಗೂಸುಮಂ ಗಂಡುಗೂಸುಮನವಱ ಕೆಲದೊಳಿರ್ದ ದಿವ್ಯ ಶರಾಸನಶರಂಗಳುಮಂ ಕಂಡು ಕೊಂಡುಪೋಗಿ" (ಪಂಪಭಾರತ ೨-೩೩). ಇದು ಶಂತನು ಮಹಾರಾಜನು ಶರದ್ವತನ ಕಡೆಯಿಂದ ಜನಿಸಿದ ಒಂದು ಹೆಣ್ಣುಕೂಸನ್ನೂ ಒಂದು ಗಂಡುಕೂಸನ್ನೂ ಮನೆಗೆ ತಂದು ಕಾಪಾಡಿ ದೊಡ್ಡವರನ್ನಾಗಿ ಮಾಡುತ್ತಾನೆ. ಶಂತನುವಿನ ಕೃಪೆಯಿಂದ ಬೆಳೆದವರಾದುದರಿಂದ ಅವರು ಕೃಪ ಮತ್ತು ಕೃಪೆ ಎಂಬ ಹೆಸರನ್ನು ಪಡೆಯುತ್ತಾರೆ. ಕೃಪನೇ ಮುಂದೆ ತಂದೆಯಿಂದ ಧನುರ್ವೇದವನ್ನು ಕಲಿತು ಕೃಪಾಚಾರ್ಯನಾಗುತ್ತಾನೆ. ಕಥೆ ಹಾಗಿರಲಿ.

ಈ ಶಬ್ದಗಳಲ್ಲಿ 'ಪೆಣ್ಗೂಸು' ಎಂಬುದು ಹೆಚ್ಚು ರೂಪಗಳನ್ನು ಪಡೆದಿದೆ. ಗಂಡುಗೂಸು ಶಬ್ದಕ್ಕೆ ಕೇವಲ ನಾಲ್ಕೇ ರೂಪಗಳು. ಇಲ್ಲಿ ಈ ಶಬ್ದಗಳು ಎರಡು ಭಾಗದಿಂದ ಕೂಡಿವೆ. ಪೆಣ್ಣು + ಕೂಸು ; ಗಂಡು + ಕೂಸು. ಪೆಣ್ಣು ಎಂಬ ಶಬ್ದಕ್ಕೆ ಮೂಲ ಪೆಣ್ ಎಂಬುದು ಸ್ಪಷ್ಟ. ಗಂಡು ಶಬ್ದಕ್ಕೆ ಹೀಗೆಯೇ ಮೂಲ ಬೇರೊಂದಿರಬೇಕಲ್ಲವೇ ? ಇದ್ದರೆ ಅದು ಗಣ್ ಎಂದು ತಾನೇ ಇರಬೇಕು ಎಂಬುದು ತರ್ಕ. ಆದರೆ ಗಣ್ ಎಂಬ ರೂಪ ನಮಗೆ ಎಲ್ಲಿಯೂ ಸಿಕ್ಕಿಲ್ಲ. ನಿಘಂಟುಕಾರನು ಇದನ್ನು ಕುರಿತು ಚರ್ಚಿಸುವಾಗ ತಟ್ಟನೆ ನಿರ್ಧಾರವನ್ನು ಕೈಗೊಳ್ಳಲಾಗುವುದಿಲ್ಲ.

ಈ ಶಬ್ದಗಳ ಉತ್ತರಾರ್ಧವಾದ ಕೂಸು ಶಬ್ದಕ್ಕೆ ಹೆಣ್ಣು ಎಂದು ಮಾತ್ರ ಅರ್ಥವಿರುವ ಪ್ರಯೋಗಗಳು ನಮ್ಮಲ್ಲಿ ಅನೇಕವಿವೆ. ಗಂಡು ಮಗು ಎಂಬರ್ಥ ಬರುವ ಕವಿರಾಜಮಾರ್ಗದ (೨-೬) ವಡ್ಡಾರಾಧನೆಯ (೬೭-೨೦) ಪ್ರಯೋಗಗಳೂ ಇವೆ. ಪೆಂಗಳ, ಹೆಂಗಳ್, ಹೆಂಗಳು, ಪೆಂಡಿರ್, ಪೆಂಡಿರು, ಪೆಂಡರ್, ಹೆಂಡಿರ್, ಹೆಂಡಿರು ಎಂಬ ರೂಪಗಳು ಹೆಣ್ಣು ಹೆಂಗಸು ಎಂಬ ಜೋಡುನುಡಿಯೂ ಇವೆ. ಅದೇ ಗಂಡಸು ಶಬ್ದಕ್ಕೆ ಗಂಡ್ಗಳ್, ರೂಪವಿದೆ. ಗಂಡುಗಳು ಎಂದರೆ ಮದುವೆಗೆ ವರನಾಗಲಿರುವವರು ಎಂಬ ಅರ್ಥದಲ್ಲಿ ಪ್ರಯೋಗವಿದೆ. ಗಂಡ ಶಬ್ದವೇ ಬೇರೆ. ಅದಕ್ಕೆ ಪರಾಕ್ರಮ, ತುಳಿಲಾಳು ಎಂದರ್ಥ. ಅದು ಗಂಡರ್ ಎಂಬ ಬಹುವಚನದ ರೂಪವನ್ನು ಪಡೆಯುತ್ತದೆ. ಹೀಗಿರುವುದರಿಂದ ಗಂಡು ಶಬ್ದಕ್ಕೆ ಮೂಲ ಯಾವುದು ಎಂದು ಅನ್ವೇಷಣೆ ಮಾಡಿದಾಗ ಗಣ್ ಇರಬಹುದು ಎಂಬ ಅನಿಶ್ಚಯದ ಮಾತೇ ಕೊನೆಯಾಗುತ್ತದೆ. ಅಂದರೆ ಭಾಷಾಶಾಸ್ತ್ರದ ಪ್ರಕಾರ ಅದು ಸಾಧ್ಯವಿರಬೇಕೆಂಬ ಅಂಶ ಕಾಡುತ್ತಲೇ ಇರುತ್ತದೆ. ತಮಿಳು ಮಲೆಯಾಳಗಳ ಜ್ಞಾತಿ ಶಬ್ದ 'ಗಣ್ಡ' ದಿಂದ ಯಾವ ನಿರ್ಧಾರಕ್ಕೂ ಹೆಚ್ಚು ಪ್ರಯೋಜನವಿಲ್ಲ.

ನಮ್ಮ ಭಾಷೆಗೆ ಕಾಲಾನುಕ್ರಮದಲ್ಲಿ ಇತರ ಅನೇಕ ಭಾಷೆಗಳಿಂದ ಶಬ್ದಗಳು ಬಂದಿವೆ. ಇವೆಲ್ಲವನ್ನೂ ನಾವು ಎರವಲು ಪಡೆದು ನಮ್ಮದನ್ನಾಗಿ ಮಾಡಿಕೊಂಡಿರುವುದರಿಂದ ಅವು ನಮ್ಮ ಸ್ವತ್ತಾಗಿವೆ. ಅನ್ಯದೇಶ್ಯ ಎಂದು ಕರೆಯುವುದೂ ತಪ್ಪೇನೋ ಎನ್ನುವಮಟ್ಟಿಗೆ ಅವು ನಮ್ಮದೇ ಆಗಿವೆ. ಅವುಗಳಿಗೆ ಬದಲು ಶಬ್ದಗಳನ್ನು ಆರಿಸುವುದೇ ಕಷ್ಟವಾಗಿದೆ. ಲುಂಗಿ, ಶಾಲು, ಇಜಾರಿ, ಜುಬ್ಬ, ಅತ್ತರು, ಗುಲಾಬಿ, ಕೂಜ, ಚಂಚ, ಮಸಾಲೆ, ಕರಬೂಜ, ಜೀರಿಗೆ, ಕುರ್ಚಿ, ಹತ್ಯಾರು, ಬೇಕೂಫ ಇತ್ಯಾದಿ ಪದಗಳನ್ನು ನೋಡಿ. ಒಂದು ಭಾಷೆ ಬೇರೆಯ ಭಾಷೆಗಳಿಂದ ಶಬ್ದಗಳನ್ನು ಎರವಲು ಪಡೆಯಬೇಕಾದರೆ ಕೆಲವು ಕಾರಣಗಳಿರುತ್ತವೆ. ಸಾಮಾಜಿಕವಾಗಿ ಇತರ ಭಾಷೆಗಳನ್ನೂ ಮಾತನಾಡುವ ಅವಕಾಶ ಹೆಚ್ಚಾಗಿದ್ದರೆ ಪರಸ್ಪರವಾಗಿ ಶಬ್ದಗಳನ್ನು ಕೊಟ್ಟು ಕೊಂಡು ಬಾಳುವುದು ಸಾಮಾನ್ಯ. ಆದರೆ ಭಾರತದಲ್ಲಿ ಇರುವ ಭಾಷೆಗಳಿಗೆ ಪರ್ಷಿಯನ್ ಮತ್ತು ಅರಾಬಿಕ್ ಶಬ್ದಗಳು ಬಂದು ಸೇರಿರುವುದಕ್ಕೆ ಬೇರೆಯೇ ಕಾರಣವಿದೆ.

ಕ್ರಿಸ್ತಶಕ ಎರಡನೆಯ ಶತಮಾನದಲ್ಲಿಯೇ ನಮ್ಮ ದೇಶದೊಡನೆ ಗ್ರೀಕರು ವ್ಯಾಪಾರದ ಬಾಂಧವ್ಯವನ್ನು ಹೊಂದಿದ್ದರು. ಆಗಲೇ ಸಂಸ್ಕೃತಕ್ಕೆ ಹೋರಾ, ಜ್ಯಾಮಿತಿ, ಸುರಂಗ ಮುಂತಾದ ಶಬ್ದಗಳು ಬಂದುವು. ಪುಲಕೇಶಿಯ ಕಾಲದಲ್ಲಿ ಪರ್ಷಿಯದ ಖುಸ್ರು II ಎಂಬ ರಾಜನೊಡನೆ ರಾಯಭಾರ ಸಂಬಂಧವಿತ್ತು. ಅರಬ್ಬರು ೭ನೆಯ ಶತಮಾನದಲ್ಲಿ ಬೊಂಬಾಯಿಯ ಬಳಿ ಆಕ್ರಮಣಕ್ಕೆ ಪ್ರಯತ್ನಪಟ್ಟರು. ಮಹಮ್ಮದ್ ಘೋರಿಯು ದೆಹಲಿಗೆ ಬಂದು ನೆಲೆಸಿದ. ಕ್ರಿ.ಶ. ೧೧೯೩ರಿಂದ ೧೮೫೭ರವರೆಗೆ ದೆಹಲಿಯಲ್ಲಿ ಮಹಮದೀಯ ದೊರೆಯೊಬ್ಬ ಹೆಸರಿಗಾದರೂ ಸಿಂಹಾಸನದ ಮೇಲೆ ಕುಳಿತಿದ್ದನು. ಆದುದರಿಂದ ಆಡಳಿತದ ಪ್ರಾಧಾನ್ಯ ಹೆಚ್ಚಿ, ಅರಸಿನ ದರಬಾರಿನಲ್ಲಿದ್ದ ವಿದ್ವಾಂಸರಿಂದ ಪರ್ಷಿಯನ್ ಭಾಷೆಯ ಅಭ್ಯಾಸ ಮತ್ತು ಆ ಭಾಷೆಯ ಶಬ್ದಗಳ ಪ್ರಯೋಗ ಇವುಗಳು ಜನಸಾಮಾನ್ಯರಿಗೆ ಮಾದರಿಗಳಾದುವು. ವಿಜಯನಗರದ

ಕಾಲದಲ್ಲಿ ಮಂಗಳೂರಿನ ಸುತ್ತಮುತ್ತ ಸಾವಿರಾರು ಜನ ಅರಬ್ಬೀ ವ್ಯಾಪಾರಗಾರರಿದ್ದರು. ಹೀಗೆಯೇ ಕರ್ನಾಟಕಕ್ಕೆ ಪೋರ್ಚುಗೀಸರ, ಡಚ್ಚರ ಸಂಬಂಧ ಬೆಳೆಯಿತು. ಆ ಬಳಿಕ ಸ್ವಾತಂತ್ರ್ಯವು ಬರುವವರೆಗೂ ಬ್ರಿಟಿಷರ ಆಡಳಿತದಲ್ಲಿ ಆಂಗ್ಲಭಾಷೆಯ ಪ್ರಭಾವ. ಈ ಮಧ್ಯೆ ಮೈಸೂರು ರಾಜ್ಯದಲ್ಲಿ ಹೈದರ್ ಟಿಪ್ಪೂಗಳ ರಾಜ್ಯಭಾರದಲ್ಲಿ ಅನೇಕ ಉರ್ದು ಶಬ್ದಗಳು ಸೇರಿದುವು. ಈ ಎಲ್ಲ ಭಾಷೆಗಳ ಪ್ರಭಾವದಿಂದ ಕನ್ನಡ ಶಬ್ದ ಸಂಪತ್ತು ಹೆಚ್ಚಿದೆ. ಆ ಶಬ್ದಗಳ ಚರಿತ್ರೆಯನ್ನು ಅಭ್ಯಾಸ ಮಾಡುವುದೇ ಒಂದು ಸಂಶೋಧನೆಯ ಅಂಶವಾಗಿದೆ.

ಸದ್ಯಕ್ಕೆ ೧೨ನೆಯ ಶತಮಾನದಲ್ಲಿ ಬಸವೇಶ್ವರ ವಚನದಲ್ಲಿ ಪ್ರಯೋಗವಾಗಿರುವ **ರಬ್ಬು** ಎಂಬ ಶಬ್ದವೇ ಕನ್ನಡಕ್ಕೆ ಬಂದ ಮೊದಲನೆಯ ಅನ್ಯದೇಶ್ಯ ಶಬ್ದ ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. (Foreign Loanwords in Kannada. G.A. Shanker Kedilaya, Madras University - 1970). ಆದರೆ ನನಗೆ ಈ ಶಬ್ದ ಇರುವ ವಚನ ಸಿಕ್ಕಿಲ್ಲ. ಆದರೆ ನೂರೊಂದಯ್ಯ ಎಂಬ ಕವಿ ರಚಿಸಿರುವ ಸೌಂದರ್ಯ ಕಾವ್ಯದಲ್ಲಿ ರಬ್ಬು ಎಂಬ ಶಬ್ದವು ದೊರಕಿದೆ. ಇದರ ಕಾಲ ಸು. ೧೭೪೦ ಈ ಶಬ್ದವು ಕನ್ನಡದ ರೊಬ್ಬು ಎಂಬ ಪ್ರಾಚೀನ ರೂಪಕ್ಕೆ ಪರ್ಯಾಯವಾಗಿರಬಹುದು ಎಂದು ನನ್ನ ಸಂದೇಹ. ಆ ವಾಕ್ಯ ಹೀಗಿದೆ :

"ಹಬ್ಬಿತು ಗಗನ ಕೆಂಧೂಳು ಮುಸುಕಿ ಬಹ
ಹಬ್ಬಸಿಗಳು ಪರಂಗಿಗಳು
ರಬ್ಬುದೋರುತ ಅರಬ್ಬೆಗಳು ಭೂತಗಳಂತೆ
ಗರ್ಭನಿರ್ಭೇದ ಮಾಡುವರೆ ॥

ಇದೊಂದು ಸಾಂಗತ್ಯ ಗ್ರಂಥ. ಇಲ್ಲಿರುವ ರಬ್ಬು> ರೊಬ್ಬು ಶಬ್ದಕ್ಕೆ ಆಡಂಬರ, ಕಾಂತಿ, ವೈಭವ ಪ್ರದರ್ಶನ ಎಂಬ ಅರ್ಥ ಇರುತ್ತದೆ. ಅಜಿತ ಪುರಾಣದ ಈ ವಚನಭಾಗವನ್ನು ಪರಿಶೀಲಿಸಿ: ವಿಚಿತ್ರ ವಸ್ತ್ರವಿತಾನದಿಂ, ಯಕ್ಷಕರ್ದಮದ ಸಾರಣೆಯಿಂ, ಬಿಡುಮುತ್ತಿನ ರಂಗವಲ್ಲಿಯಿಂ, ಸುರತರು ಕುಸುಮದ ಪೂವಲಿಯಂ, ರೊಬ್ಬಿನ ಸೊಡರ್ಗುಡಿಯಿಂ, ಕಾಳಾಗುರುವಿನ ಧೂಪದ ಕರ್ಬೊಗೆಯಿನೆಸೆವ ದಿವ್ಯ ಶಯನಗೃಹದ ಪರ್ಯಂಕದೊಳ್ ಪವಡಿಸಿರ್ದು. (೩-೧೧ ವಚನ). ಆದುದರಿಂದ ಅನ್ಯದೇಶಗಳಲ್ಲಿ ಮೊದಲು ಬಂದ ಶಬ್ದ ಯಾವುದು ಎನ್ನುವುದನ್ನು ಇನ್ನೂ ಮುಂದೆ ತೀರ್ಮಾನಿಸಬೇಕಾಗಿದೆ. ಆದರೆ ವಚನಗಳಲ್ಲಿಯೇ ಈ ಬಗೆಯ ಶಬ್ದಗಳು ಮೊದಲು ತಲೆದೋರಿರುವ ಸಾಧ್ಯತೆ ಇದೆ. ಈ ಕಾರ್ಯ ೧೨ನೆಯ ಶತಮಾನದ ಗ್ರಂಥಗಳಲ್ಲಿ ಕಂಡುಬರುತ್ತದೆ. ಶಾಸನಗಳಲ್ಲಿಯೂ ರಾವುತ, ಮಾವುತ ಮುಂತಾದ ಶಬ್ದಗಳು ಕಂಡುಬರುತ್ತವೆ. ಬಸವವಚನದಲ್ಲಿ ರಾವುತಿಕೆ ಎಂಬ ಶಬ್ದವಿದೆ. ಇವೆಲ್ಲ ಅನ್ಯದೇಶ್ಯಗಳು ಕನ್ನಡಕ್ಕೆ ಪ್ರವೇಶಿಸಿದ ಕಾಲಮಾನದ ಸೂಚನೆಗಳು.

ಚಾರಿತ್ರಿಕವಾದ ಆ ವಿಚಾರವು ಹಾಗಿರಲಿ. ನಮಗೆ ಮುಖ್ಯವಾದ ವಿಚಾರವೆಂದರೆ ಅನ್ಯದೇಶ್ಯ ಶಬ್ದಗಳಲ್ಲಿ ಮೂಲದ ರೂಪವನ್ನೇ ಹೊಂದಿರುವ ಕೆಲವು ಶಬ್ದಗಳಿವೆ. ಅನೇಕ

ಪರ್ಯಾಯ ರೂಪಗಳು ಇರುವ ಶಬ್ದಗಳಿವೆ. ನಿಘಂಟಿನಲ್ಲಿ ಇಂಥ ಶಬ್ದಗಳಿಗಿರುವ ಮೂಲಾರ್ಥವನ್ನು ನಮ್ಮ ಭಾಷೆಗೆ ಸೇರಿದ ಮೇಲೆ ಪಡೆದಿರುವ ಇತರ ಅರ್ಥಗಳನ್ನೂ ಸೇರಿಸಿರಬೇಕು. ಆಗ ಅರ್ಥಗಳು ಹೇಗೆ ತಾರ್ಕಿಕವಾಗಿ ಬೆಳೆದಿವೆ ಎಂಬುದನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ನಾನಾರ್ಥಗಳ ತಾರ್ಕಿಕ ಬೆಳವಣಿಗೆಯನ್ನು ತೀರ್ಮಾನಿಸುವುದು ನಿಘಂಟುಕಾರನ ಮುಖ್ಯವಾದ ಕೆಲಸ. ಏಕೆಂದರೆ ಒಂದೇ ರೂಪದ ಎರಡು ಶಬ್ದಗಳಿಗೆ ಬೇರೆ ಬೇರೆ ಮೂಲವಿರಬಹುದೆಂಬುದನ್ನು ಅವನು ಅರಿತಿರುತ್ತಾನೆ. ಒಂದು ಉದಾಹರಣೆಯನ್ನು ನೀಡಬಹುದು. ಪಂಕ ಇದು ಸಂಸ್ಕೃತ ಶಬ್ದ; ಅರ್ಥ ಕೆಸರು, ರಾಡಿ. ಇನ್ನೊಂದು ಪಂಕ ಇದೆ. ಇದು ಸಂಸ್ಕೃತದ್ದೇ. ಆದರೆ ಪಕ್ಷ=ರೆಕ್ಕೆ ಎಂಬುದರ ತದ್ಭವ. ಇದು ಪ್ರಾಕೃತದಲ್ಲಿ ಪಂಖ ಎಂದಾಗುತ್ತದೆ. ಆ ಬಳಿಕ ಹಿಂದೀ ಮತ್ತು ಮರಾಠಿಯ ಮೂಲಕ ಕನ್ನಡಕ್ಕೆ ಬಂದಿದೆ. ಈ ಪಂಖವೇ ಪಂಕ ಎಂಬ ರೂಪದಲ್ಲಿಯೂ ಕನ್ನಡವಲ್ಲಿ ಉಪಯೋಗದಲ್ಲಿದೆ. ಇದು ಸಂಸ್ಕೃತದ ಮಾತಾಯಿತು.

ತರ ಎಂಬ ಶಬ್ದವನ್ನು ನೋಡಿ. ಇದು ಮೂರು ಬಗೆಯಾದ ಮೂಲಗಳನ್ನು ಹೊಂದಿದೆ. ೧. ದೇಶ್ಯ ಅರ್ಥಗಳು : ಕ್ರಮ, ಸರಿಯಾದುದು, ಯೋಗ್ಯತೆ, ಸೌಂದರ್ಯ, ಉದಾಹರಣೆ : ಈ ತರದ ನಡವಳಿಕೆ ಸರಿಯಲ್ಲ. ತರ < ತೆರ ಎಂಬುದು ವ್ಯುತ್ಪತ್ತಿ, ೨. ಸಂಸ್ಕೃತ : ತರಪ್ ಪ್ರತ್ಯಯ. ಉದಾಹರಣೆ ಸುಂದರತರ, ೩. ಅರಬ್ಬಿ : ತರಹ್ ಶಬ್ದದಿಂದ ಕನ್ನಡದಲ್ಲಿ ತರ, ತರಹ, ಎಂಬ ಎರಡು ರೂಪಗಳಲ್ಲಿ ಉಪಯೋಗದಲ್ಲಿದೆ. ಒಂದು ಬಗೆ, ರೀತಿ ಎಂದರ್ಥ. ತರ ಎಂಬ ರೂಪ ತೆರ ಎಂಬ ಕನ್ನಡ ಪದದಿಂದಲೂ ತರಹ್ ಎಂಬ ಅರಬ್ಬಿ ಪದದಿಂದಲೂ ಬಂದಿದೆ. ಎಲ್ಲೆಲ್ಲಿ ಯಾವುದು ಮೂಲ ಎಂಬುದನ್ನು ನಿರ್ಧರಿಸಬೇಕು. ಈ ಮೂರರ ಮೂಲವನ್ನೂ ಬೇರೆ ಬೇರೆಯಾಗಿಯೇ ತೋರಿಸಬೇಕು, ನಿಘಂಟಿನಲ್ಲಿ. ಹೀಗೆ ಬಂದ ಅನ್ಯದೇಶ್ಯಗಳಿಗೆ ಕನ್ನಡದಲ್ಲಿ ಬೇರೆಯ ಅರ್ಥಗಳು ಬಂದಿರುತ್ತವೆ. ಕೆಲವನ್ನು ಈ ಕೆಳಗೆ ಗುರುತಿಸಲಾಗಿದೆ :

ಅರಬ್ಬಿ ಶಬ್ದ ಮತ್ತು ಅರ್ಥ	ಕನ್ನಡ ಶಬ್ದರೂಪ ಮತ್ತು ಅರ್ಥ
೧. ಇರಸಾಲ್ = ಕಳುಹಿಸುವುದು	ಇರಸಾಲು, ಇರಿಸಾಲು = ಸರಕಾರದ ಖಜಾನೆಗೆ ಹಣ ಕಟ್ಟುವುದು.
೨. ಕದೀಮ್ = ಗಂಡಾಳು	ಖದೀಮ = ಅನುಭವಸ್ಥ.
೩. ಕವಾಯಿದ್ = ನಿಯಮವನ್ನು ಅನುಸರಿಸುವುದು	ಕವಾಯತು = ಸೈನ್ಯದ ವ್ಯಾಯಾಮ.
೪. ತನಿಕಿಹ್ = ವಸ್ತುಗಳನ್ನು ಬೇರ್ಪಡಿಸುವುದು	ತನಿಖೆ = ಪರೀಕ್ಷೆ, ತಪಾಸು.
೫. ವರಕ್ = ಎಲೆ	ವರೇಕು = ಚಿನ್ನದ ತೆಳ್ಳನೆಯ ಹೊದಿಕೆ, ಗಿಲೀಟು.
೬. ಅಮಲ್ = ಕಾರ್ಯ	ಅಮಲು = ಮದ, ಕುಡಿದ ಮತ್ತು.

ನಿಘಂಟಿನಲ್ಲಿ ಪ್ರಾದೇಶಿಕತೆಯ ಗುಣವುಳ್ಳ ಶಬ್ದಗಳನ್ನು ಸೇರಿಸಬೇಕೆ ಬೇಡವೇ ಎಂಬ ಪ್ರಶ್ನೆ ಬಹುಮುಖ್ಯವಾದದ್ದು. ನಿಘಂಟಿನ ಗಾತ್ರವನ್ನು ಅನುಸರಿಸಿ ಈ ವಿಚಾರದಲ್ಲಿ ನಿರ್ಧಾರವನ್ನು ಕೈಗೊಳ್ಳಬೇಕು. ಗ್ರಾಮ್ಯ ಭಾಷೆಯ ಶಬ್ದಗಳ ವಿಚಾರವೂ ಅಷ್ಟೇ. ಗ್ರಾಮ್ಯ ಶಬ್ದಗಳಿಗೇ ಬೇರೆ ನಿಘಂಟುಗಳನ್ನು ಸಿದ್ಧ ಮಾಡುವುದು ಒಳ್ಳೆಯದು. ಎದಾರು, ಅಕ್ಕುಸ್ತೆ ಮುಂತಾದ ಶಬ್ದಗಳನ್ನು ಶಿಷ್ಟಭಾಷೆಯ ನಿಘಂಟುಗಳಲ್ಲಿ ಸೇರಿಸಿದರೆ ನಿಘಂಟಿನ ಗಾತ್ರ ಹಿಡಿತಕ್ಕೆ ಸಿಕ್ಕುವುದಿಲ್ಲ. ಎದಾರು= ಎದೆ ಹಾರು, ಅಕ್ಕುಸ್ತೆ = ಅಕ್ಷತೆ. ಈ ವ್ಯುತ್ಪತ್ತಿಯನ್ನು ತಿಳಿಸುವುದು ಭಾಷಾ ಶಾಸ್ತ್ರಜ್ಞರಿಗೆ ಸುಲಭವಾದರೂ ಆ ಶಬ್ದಗಳು ಸಾಮಾನ್ಯ ನಿಘಂಟುಗಳಿಗೆ ಭಾರವಾಗುತ್ತವೆ.

ಇನ್ನು, ಯಂತ್ರಸಂಬಂಧಿಯಾದ ತಂತ್ರಸಂಬಂಧಿಯಾದ (Scientific and Technological Terms) ಶಬ್ದಗಳನ್ನು ಬೇರೆಯ ನಿಘಂಟುಗಳಾಗಿಯೇ ಸಿದ್ಧಪಡಿಸುವುದು ಒಳ್ಳೆಯದು.

ಇಂಗ್ಲಿಷ್ ಭಾಷೆಗೆ ಇಲ್ಲದ ಒಂದು ಅನುಕೂಲ್ಯ ಕನ್ನಡ ಭಾಷೆಗೆ ಇದೆ. ನಮ್ಮಲ್ಲಿ ಕಾಗುಣಿತವನ್ನೂ ಉಚ್ಚಾರಣೆಯನ್ನೂ ಕುರಿತು ನಿಘಂಟುಗಳಲ್ಲಿ ವಿವರಣೆಗಳನ್ನು ನೀಡಬೇಕಾಗಿಲ್ಲ.

ವ್ಯಾಕರಣ ಕ್ರಿಯೆಗಳನ್ನು ಅನುಸರಿಸಿ ಶಬ್ದಗಳು ಪಡೆಯುವ ಎಲ್ಲ ರೂಪಗಳನ್ನೂ ಮಾದರಿಗಳಾಗಿ ಸಿದ್ಧಪಡಿಸುವ ನಿಘಂಟುಗಳು ಪಾಶ್ಚಾತ್ಯ ಭಾಷೆಗಳಲ್ಲಿ ಇವೆ. ಅವು ಉಪಾಧ್ಯಾಯರಿಗೆ ಶಬ್ದಬೋಧೆಯನ್ನು ಮಾಡಲು ಸಹಾಯಕವಾಗಿವೆ. ಕನ್ನಡದಲ್ಲಿ ಅಂಥ ಪ್ರಯತ್ನಗಳೇ ನಡೆದಿಲ್ಲ. ಒಂದು ನಾಮಪದ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸಿದಾಗ ಪಡೆಯುವ ರೂಪಗಳನ್ನೂ, ಒಂದು ಧಾತು ಅಖ್ಯಾತ ಪ್ರತ್ಯಯಗಳನ್ನು ಹತ್ತಿಸಿದಾಗ ಹೊಂದುವ ರೂಪಗಳನ್ನೂ, ನಾಮಪದವನ್ನು ಕ್ರಿಯಾಪದ ಮಾಡುವ, ಕ್ರಿಯಾಪದವನ್ನು ನಾಮಪದವಾಗಿ ಪರಿವರ್ತಿಸುವ ಉಪಯಗಳನ್ನೂ ಅವು ಕಲಿಸುತ್ತವೆ. ಶಿಕ್ಷಕರಾಗಿರುವವರು ಈ ದಿಕ್ಕಿನಲ್ಲಿ ಕೆಲಸ ಮಾಡಬೇಕು.

ಇಂಗ್ಲಿಷಿನಲ್ಲಿ Reverse Dictionary ಎಂಬ ಹೆಸರಿನ ನಿಘಂಟುಗಳನ್ನೂ ಸಿದ್ಧಪಡಿಸುತ್ತಾರೆ. ಇಂಥ ನಿಘಂಟಿನಲ್ಲಿ ಶಬ್ದಗಳ ಕೊನೆಯ ಅಕ್ಷರವನ್ನು ಹಿಡಿದು ಅಕಾರಾದಿಯಾಗಿ ಶಬ್ದ ಪಟ್ಟಿ ಮಾಡುತ್ತಾರೆ. ಇವುಗಳಲ್ಲಿ ಪ್ರತ್ಯಯಗಳೇ ಮುಖ್ಯವಾಗಿರುತ್ತವೆ. ಇಸು, ಇಕೆ, ಮೆ, ಪು, ಫು ಮುಂತಾದ ಪ್ರತ್ಯಯಗಳು ಹತ್ತುವ ಶಬ್ದಗಳೆಲ್ಲ ಒಂದೇ ಕಡೆ ಸಿಕ್ಕುವುದರಿಂದ ಪದ್ಯ ಬರೆಯುವವರಿಗ ಪ್ರಾಸ ಹುಡುಕುವವರಿಗೆ ಇಂಥ ನಿಘಂಟು ಬಹು ಸಹಾಯವಾಗುತ್ತದೆ. ಶಿಕ್ಷಕರಿಗೆ ಬೇಕಾದ ದೃಷ್ಟಾಂತಗಳನ್ನು ಬೇಗ ಹುಡುಕಲು ತುಂಬ ಸುಲಭ. ಈ ಬಗೆಯ ನಿಘಂಟುಗಳ ಬಗ್ಗೆ ನಮ್ಮ ಶಿಕ್ಷಕರಿಗೆ ಇನ್ನೂ ತಿಳಿವಳಿಕೆಯಿಲ್ಲ.

ಕನ್ನಡದಲ್ಲಿ ಶಬ್ದೋತ್ಪತ್ತಿಯ ಕ್ರಮ : ಕನ್ನಡವನ್ನು ಆಧುನಿಕ ಭಾಷಾಶಾಸ್ತ್ರದಲ್ಲಿ Agglutinative ಭಾಷೆಗಳ ಗುಂಪಿಗೆ ಸೇರಿಸುತ್ತಾರೆ. ಈ Agglutination ಎಂಬುದನ್ನು ಕನ್ನಡದಲ್ಲಿ ಸಂಶ್ಲೇಷಣೆ ಎಂದು ಕರೆಯಬಹುದು. ಸಂಶ್ಲೇಷ ಎಂಬ ರೂಪವೂ ಸಾಧುವಾಗುತ್ತದೆ. ಸಂಶ್ಲೇಷಣ ಎಂದರೆ

ಪ್ರತ್ಯಯಗಳನ್ನು ಸೇರಿಸುವುದು. ಹಾಗೆ ಸೇರಿದ ಪ್ರತ್ಯಯವು ಶಬ್ದದ ಒಂದಂಶವಾಗಿ ಹೊಂದಿಕೊಳ್ಳುವುದು ಎಂದರ್ಥ. ಶಬ್ದಕ್ಕೆ ಹಿಂದೆ ಅಥವಾ ಮುಂದೆ ಈ ಹೊಸ ಅಂಶವು ಸೇರಬಹುದು. ಹಿಂದೆ ಸೇರುವ ಅಂಶವನ್ನು ಉಪಸರ್ಗ ಎಂದೂ ಮುಂದೆ ಸೇರುವುದನ್ನು ಪ್ರತ್ಯಯ ಎಂದೂ ಕರೆಯುತ್ತಾರೆ. ಕನ್ನಡವು ಮುಖ್ಯವಾಗಿ ಪ್ರತ್ಯಯವು ಸೇರಿ ಶಬ್ದಗಳನ್ನು ಉತ್ಪತ್ತಿ ಮಾಡುವ ಭಾಷೆ.

ಮೊದಲು ಶಬ್ದವೆಂದರೆ ಏನು ಎಂದು ವಿವರವಾಗಿ ತಿಳಿಯೋಣ. ಒಂದು ಭಾಷೆಯನ್ನು ಜನರು ಆಡುವ ಪ್ರದೇಶದಲ್ಲಿ ಕಾಲಾನುಕ್ರಮದಲ್ಲಿ ಕೆಲವು ಸ್ವನಸಮೂಹಗಳು ರೂಢಿಯಲ್ಲಿ ಬೇರೂರಿರುತ್ತವೆ. ಅವಕ್ಕೆ ಪ್ರತಿಯೊಂದಕ್ಕೂ ಒಂದು ನಿರ್ದಿಷ್ಟವಾದ ಅರ್ಥವಿರುತ್ತದೆ. ಈ ಅರ್ಥವು ಆ ಮಾತನ್ನು ಆಡುವ ಎಲ್ಲರ ಮನಸ್ಸಿನಲ್ಲಿಯೂ ಅಂಗೀಕೃತವಾಗಿರುತ್ತದೆ. ಅಂಥ ಒಂದೊಂದು ಸ್ವನ ಸಮುದಾಯವನ್ನೂ ನಾವು ಶಬ್ದ ಎಂದು ಕರೆಯಬಹುದು. ಹೀಗೆ ಹಿಂದಿನಿಂದ ಅಂಟಿಕೊಂಡಿರುವ ಅರ್ಥ ಯಾವಾಗ ರೂಢಿಗೆ ಬಂದಿತು ಎಂದು ಯಾರೂ ಹೇಳಲಾರರು. ಅದು ಅನಾದಿ. ಮಾತಿನಲ್ಲಿ ಹೇಳಬಹುದಾದ ಚಿಂತನೆಯನ್ನು ಹೊಂದಿರುವ ಅತಿ ಕನಿಷ್ಠ ಅಂಶವನ್ನೇ ಶಬ್ದ ಎನ್ನುವುದು. ಈ ಶಬ್ದಕ್ಕೆ ಪ್ರತ್ಯಯಗಳು ಸೇರಿ ಮಾತಿನ ವಿಸ್ತಾರವನ್ನು ಬೆಳೆಸುತ್ತವೆ.

ಹಳಗನ್ನಡದಿಂದ ಹೊಸಗನ್ನಡಕ್ಕೆ ಶಬ್ದವು ಮಾರ್ಪಡುವಾಗ ಉ ಎಂಬ ಬಹುಮುಖ್ಯವಾದ ಪ್ರತ್ಯಯವು ಹತ್ತುತ್ತದೆ. ವ್ಯಂಜನಾಂತವಾದ ಎಲ್ಲ ಹಳಗನ್ನಡ ಶಬ್ದಗಳೂ ಹೀಗೆ ಉಕಾರಾಂತವಾಗಿ ಬದಲಾವಣೆ ಹೊಂದುತ್ತದೆ. ಬೆರಳ್ - ಬೆರಳು, ಕೂಂದಲ್ - ಕೂದಲ್ - ಕೂದಲು, ತಳಿರು, ಬಿಸಿಲು, ಮುಗಿಲು, ಇತ್ಯಾದಿ.

ಧಾತುಗಳಿಂದ ನಾಮಪದವೂ ಗುಣವಾಚಕವೂ ಸಿದ್ಧಿಸಬಹುದು. ಮೀ = ಸ್ನಾನಮಾಡು; ಮೀಹ = ಸ್ನಾನ, ಅಣ್ಮು = ಪರಾಕ್ರಮವನ್ನು ತೋರಿಸು, ಅಣ್ಮು = ಪರಾಕ್ರಮ, ಅಣ್ಮುನುಡಿ = ಪರಾಕ್ರಮದ ಮಾತು, ಮೂದಲೆ ಇತ್ಯಾದಿ. ಅಣ್ ಎಂಬ ಶಬ್ದಕ್ಕೆ ಬೇರೆ ಬೇರೆ ಪ್ರತ್ಯಯಗಳು ಸೇರಿ ಅಂಟು, ಅಣ್ಕೆ ಆಗಬಹುದು.

ಆದಿದೀರ್ಘದಿಂದ ಧಾತು ನಾಮಪದವಾಗಬಹುದು.

ಪಡು - ಪಾಡು,	ಇಡು - ಈಡು,
ಸುಡು - ಸೂಡು	ಕಿಡು -ಕೇಡು
ಇಸು - ಏಸು,	ತುಡು - ತೋಡು

ಕುಡು - ಕೋಡು (ಇಲ್ಲಿ ಅಕಾರ ಆಕಾರವಾಗಿ ಇಕಾರ ಏಕಾರವಾಗಿ ಉಕಾರ ಓಕಾರವಾಗಿ ಧಾತುಗಳು ನಾಮಪದಗಳಾಗಿವೆ).

ಎರಡು ಧಾತುಗಳು ಸೇರಿ ಒಂದು ಸಂಯುಕ್ತ ಧಾತುವಾಗಬಹುದು. ಕಾಪಿಡು ಈ ಶಬ್ದವನ್ನು ಕಾಪು + ಇಡು ಎಂದೂ ಕಾಪ + ಇಡು ಎಂದು ಬಿಡಿಸಬಹುದು.

ಹೀಗೆ ಕನ್ನಡದಲ್ಲಿ ಪು, ಉಗ, ಅ, ಟ್, ಅತ್, ಇತ್ ಮುಂತಾಗಿ ಅನೇಕ ಪ್ರತ್ಯಯಗಳಿವೆ. ಇವುಗಳ ಸಂಪರ್ಕದಿಂದ ಹೊಸ ಶಬ್ದಗಳು ಉತ್ಪತ್ತಿಯಾಗುತ್ತವೆ. ನುಣ್ + ಪು = ನುಣ್ಪು, ಕೇಳ್ + ಉಗ = ಕೇಳುಗ, ಆಡು + ಅ = ಆಟ, ಇತ್ಯಾದಿ.

ಕಾಲಸೂಚಕ ಪ್ರತ್ಯಯಗಳೂ, ಕೃತ್ಪ್ರತ್ಯಯಗಳೂ ಅನೇಕವಿವೆ. ದ. ದಪ, ವ, ಇಸು, ಚು, ಪು, ಅ, ಅವು, ಅವೆ, ಇವೆ, ತ, ಮೆ, ತೆ, ಗುಳ, ಸು, ಎ, ದತ್, ದಲೆ, ವಳ, ವಳ್ಳ, ವಾಳ, ಇತ್ಯಾದಿ, ಅವುಗಳ ಸಹಾಯದಿಂದಲೂ ಶಬ್ದ ಸಂಪತ್ತನ್ನು ಹೆಚ್ಚಿಸಬಹುದು.

ಸ್ತ್ರೀಲಿಂಗದ ತಿ, ಇತಿ, ಇತ್ತಿ ಎಂಬ ಪ್ರತ್ಯಯಗಳಿಂದ ಸ್ತ್ರೀಲಿಂಗ ಶಬ್ದಗಳನ್ನು ಸಾಧಿಸಬಹುದು. ಇವಲ್ಲದೆ ಕಾರ, ಗಾರ, ಗುಳಿ, ಕಾಲಿ, ಇಚ, ಅಯಿಲ, ವಂತ, ಮಂತ ಮುಂತಾದ ಇತರ ಪ್ರತ್ಯಯಗಳೂ ಇವೆ.

ಸಮಾಸಗಳನ್ನು ಮಾಡಿ ಹೊಸ ಹೊಸ ಶಬ್ದ ನಿರ್ಮಾಣ ಸಾಧ್ಯ. ಇಗ್ಗಾಲಿ, ಮೂಗಾಲಿ ಇತ್ಯಾದಿ.

ಇವಲ್ಲದೆ ಶಬ್ದ ಸೃಷ್ಟಿಗೆ ಬೇರೆ ಬೇರೆ ಮಾರ್ಗಗಳಿವೆ. ಇವುಗಳ ಕಡೆಗೆ ನಮ್ಮ ಗಮನ ಹರಿಯಬೇಕು.

ಇತರ ಭಾಷೆಗಳಿಂದ ಶಬ್ದಗಳನ್ನು ಎರವಲು ಪಡೆಯುವುದು : ಒಂದು ಭಾಷೆಯನ್ನು ಆಡುವ ಜನ ರಾಜಕೀಯವಾದ ಆಕ್ರಮಣ, ವ್ಯಾಪಾರ, ಅನ್ವೇಷಣೆ, ಸಾಂಸ್ಕೃತಿಕ ಸಂಪರ್ಕ, ಇತ್ಯಾದಿಗಳ ದೆಸೆಯಿಂದ ಹೊಸ ಹೊಸ ಶಬ್ದಗಳನ್ನು ತಮ್ಮ ಭಾಷೆಗೆ ಆಮದು ಮಾಡಿಕೊಂಡು ತಮ್ಮದನ್ನಾಗಿಸಿಕೊಳ್ಳುತ್ತಾರೆ. ಆದುದರಿಂದ ನಮ್ಮ ಭಾಷಗೆ ಬಂದು ಸೇರುವ ಪ್ರತಿಯೊಂದು ಶಬ್ದದ ಹಿಂದೆ ನಮ್ಮ ಭಾಷೆಯ ಚರಿತ್ರೆಯೇ ಅಡಗಿದೆ. ಇದರಿಂದ ನಮ್ಮ ಜನರ ಚರಿತ್ರೆಯನ್ನು ಕೂಡ ನಾವು ಪುನಃ ರಚಿಸಬಹುದು. ಕನ್ನಡಕ್ಕೆ ಹೀಗೆ ನಾವು ಆಮದು ಮಾಡಿಕೊಂಡಿರುವ ಶಬ್ದಗಳಲ್ಲಿ ಬಹು ಹೆಚ್ಚಾಗಿರುವವು ಸಂಸ್ಕೃತ ಶಬ್ದಗಳು. ನಮ್ಮ ಆವರಣವು ಸಂಸ್ಕೃತಮಯ ವಾಗಿದ್ದುದೇ ಇದಕ್ಕೆ ಕಾರಣ. ಕನ್ನಡ ಯಾವುದು ಸಂಸ್ಕೃತ ಯಾವುದು ಎನ್ನುವುದನ್ನು ಸಾಮಾನ್ಯರು ತಿಳಿಯುವುದಕ್ಕೆ ಆಗದಿರುವಷ್ಟು ಸಂಸ್ಕೃತ ಶಬ್ದಗಳು ನಮ್ಮಲ್ಲಿ ಸೇರಿವೆ. ಇದರ ಚರಿತ್ರೆಯನ್ನು ಬೇರೆಯ ದೃಷ್ಟಿಯಿಂದ ನಾವು ನಿರೂಪಿಸಬೇಕು. ಪರ್ಷಿಯನ್, ಅರಾಬಿಕ್ ಶಬ್ದಗಳು ನಮಗೆ ಬರಲು ಮುಖ್ಯವಾದ ಕಾರಣ ನಮ್ಮ ರಾಜ್ಯವನ್ನು ಮುಘಲರು ಆಳಿದ್ದು. ಆ ಕಾಲದಿಂದ ರಾಜ್ಯದ ಆಡಳಿತದ ಎಲ್ಲ ಹಂತಗಳಲ್ಲಿಯೂ ಅನೇಕ ಶಬ್ದಗಳು ಬಂದು ಸೇರಿವೆ. ಉರ್ದು ಮೂಲಕವೂ ಹೀಗೆಯೇ ಅನೇಕ ಶಬ್ದಗಳು ಬಂದಿವೆ. ಆಂಗ್ಲರು, ಫ್ರೆಂಚರು, ಪೋರ್ಚುಗೀಸರು ನಮ್ಮ ದೇಶವನ್ನು ಕೆಲವು ಭಾಗಗಳಲ್ಲಿ ಆಳುತ್ತಿದ್ದರು. ಇಂಗ್ಲಿಷರಂತೂ ನಮ್ಮನ್ನು ೨೦೦ ವರ್ಷಗಳ ಕಾಲ ಗುಲಾಮರನ್ನಾಗಿ ಮಾಡಿ ಆಡಳಿತ ನಡೆಸಿದರು. ಆ ಕಾಲದಲ್ಲಿ ಈ ಮೂರು ಭಾಷೆಗಳ ಮೂಲಕ ಸಾವಿರಾರು ಶಬ್ದಗಳು ನಮ್ಮ ಭಾಷೆಗೆ ಬಂದು ಸೇರಿವೆ.

ಇವನ್ನೆಲ್ಲ ನಮ್ಮ ಶಬ್ದ ಪ್ರಪಂಚದ ಅತಿಥಿಗಳೆಂದು ನಾವು ತಿಳಿದಿದ್ದೇವೆ. ಆದರೂ ಇಂಗ್ಲಿಷ್ ಭಾಷೆಯಲ್ಲಿ ಹೊಸ ಶಬ್ದಗಳನ್ನು ನಿರ್ಮಾಣ ಮಾಡಿ ಪ್ರಯೋಗಕ್ಕೆ ತರುವಂತೆ ಮಾಡಲು ನಾವು ಹಿಂಜರಿಯುತ್ತೇವೆ. Motel ಎಂಬ ಪದವನ್ನು ನೋಡಿ ; Motorist Hotel ಎಂಬುದರ ಸಂಕ್ಷಿಪ್ತ ಅದು. ನಮ್ಮಲ್ಲಿಯೂ ಮೋಟೆಲ್ ಈಗ ಪ್ರಚಾರದಲ್ಲಿದೆ. Medicare ಇದು Medical care ಎಂಬುದರ ಸಂಕ್ಷಿಪ್ತ. Bike, Auto, Car, Taxi ಈ ಶಬ್ದಗಳೆಲ್ಲ ದೊಡ್ಡ ಶಬ್ದಗಳ ರೆಕ್ಕೆ ಪುಕ್ಕಗಳನ್ನು ಕತ್ತರಿಸಿ ರೂಪಿಸಿದ ಶಬ್ದಗಳು. ಈ ಕಾರ್ಯವನ್ನು Clipping ಎಂದು ಕರೆಯುತ್ತಾರೆ. ಕನ್ನಡದಲ್ಲಿ ಈ ಶಬ್ದಗಳು ರೂಢಿಯಲ್ಲಿವೆ. ಆದರೆ ಇಂಥ ಶಬ್ದಗಳನ್ನು ಸೃಷ್ಟಿಸಲು ನಾವು ಹಿಂಜರಿಯುತ್ತೇವೆ. ಕೆಲವು ಕಾಲದ ಹಿಂದೆ Doubel Decker ಗೆ ಮಾಡಿಬಸ್ ಎಂದೂ ಹೊಟೇಲುಗಳಲ್ಲಿ ತಿನಿಸುಗಳ ಆಕಾರವನ್ನ ಚಿಕ್ಕದು ಮಾಡಿದಾಗ ಮಿನಿವಡೆ, ಮಿನಿಇಡ್ಲಿ ಎಂಬ ಶಬ್ದಗಳೂ ಪ್ರಚಾರಕ್ಕೆ ಬಂದರೂ ಅವು ಉಳಿಯಲಿಲ್ಲ. ಆದರೂ ಮಿನಿ, ಮ್ಯಾಕ್ಸಿ ಎಂಬ ಶಬ್ದಗಳ ಉಪಯೋಗ ಹೆಚ್ಚಿದೆ. ಈ ಕ್ಲಿಪಿಂಗ್ ಬಗೆಯ ಶಬ್ದಗಳು ಕನ್ನಡದಲ್ಲಿ ಕಡಿಮೆ. ಇಂಗ್ಲಿಷಿನಿಂದ ಬಂದವು ಮಾತ್ರ ನಮ್ಮಲ್ಲಿ ಉಳಿದಿವೆ.

ಇಂಗ್ಲಿಷಿನಲ್ಲಿ ಅಂಕಿತನಾಮಗಳು ಬೇರೆ ಅರ್ಥದಲ್ಲಿ ಪ್ರಯೋಗವಾಗುತ್ತವೆ. Sandwich, Pasteurize, Mesmerism ಮುಂತಾದವು ಉದಾಹರಣೆಗಳು.

John Montagu (1718-92) ಎಂಬಾತನು Sandwich ಪ್ರದೇಶಕ್ಕೆ (Earl) ಪ್ರಭುವಾಗಿದ್ದ ಕಾಲದಲ್ಲಿ ಅವನು ಜೂಜಾಟದಲ್ಲಿ ಪ್ರಸಿದ್ಧನಾಗಿದ್ದನು. ಅವನು ಜೂಜಾಟವನ್ನು ಬಿಟ್ಟು ಊಟಕ್ಕೆ ಬಂದರೆ ಅಷ್ಟು ಹೊತ್ತು ನಷ್ಟವಾಗುತ್ತದೆಂದು ಜೂಜಿನ ಮಧ್ಯೆ ಉಪಹಾರವನ್ನು ಸ್ವೀಕರಿಸುತ್ತಿದ್ದನಂತೆ. ಉಪಹಾರವೆಂದರೆ ಬ್ರೆಡ್ಡಿನ ಎರಡು ಚೂರುಗಳ ನಡುವೆ ಮೀನು ಅಥವಾ ಮಾಂಸ ಅಥವಾ ಸಾಲಡ್ ಅಥವಾ ತರಕಾರಿಗಳನ್ನು ಇಡಿಸಿ ತಿನ್ನುತ್ತಿದ್ದನಂತೆ. ಕ್ರಮೇಣ ಆ ತಿನಿಸಿಗೆ Sandwich ಎಂಬ ಹೆಸರೇ ಅಂಟಿಕೊಂಡಿತು. Louis Pasteur (1822-95) ಎಂಬ ವಿಜ್ಞಾನಿಯು ವೈಜ್ಞಾನಿಕವಾಗಿ ಕಂಡುಹಿಡಿದ ಕ್ರಮಗಳಿಂದ Pasteurize ಎಂಬ ಕ್ರಿಯಾಪದ ಉಂಟಾಯಿತು. ಹಾಗೇಯೇ F.A. Mesmer (1734-1815) ಎಂಬ ಆಸ್ಟ್ರಿಯಾದ ವೈದ್ಯನು ಹಿಪ್ನಾಟಿಸಮ್ ಮೂಲಕ ರೋಗಿಗಳನ್ನು ಗುಣಪಡಿಸುತ್ತಿದ್ದನು. ಅದರಿಂದ Mesmerism ಎಂಬ ಶಬ್ದ ಬಂತು. Reganomics, Clintonomics ಮುಂತಾದ ಶಬ್ದಗಳನ್ನು ನೀರು ಕುಡಿದಷ್ಟು ಸುಲಭವಾಗಿ ಇಂಗ್ಲಿಷಿನಲ್ಲಿ ಸೃಷ್ಟಿ ಮಾಡಲಾಗುತ್ತದೆ. ಮನಮೋಹನಾಮಿಕ್ಸ್ (Manamohanomics) ಕೂಡ ಇಂಗ್ಲಿಷಿನಲ್ಲಿ ಬರಬಹುದು. ಕನ್ನಡದಲ್ಲಿ ನಾವು ಪ್ರಯತ್ನವನ್ನೇ ಮಾಡಿಲ್ಲ. ಇಂಥ ಶಬ್ದಗಳ ಪ್ರಚಾರ ಕನ್ನಡದಲ್ಲಿ ಇನ್ನೂ ಹೆಚ್ಚಾಗಿಲ್ಲ. ಆದರೆ ಹೆಚ್ಚಾಗುವ ಸಾಧ್ಯತೆ ಇದೆ. ಈ ಬಗೆಯ ಶಬ್ದ ನಿರ್ಮಾಣವೂ ನಮ್ಮಲ್ಲಿ ಪ್ರಯೋಗದಲ್ಲಿಲ್ಲ. ಕುಂಭಕರ್ಣ ಎಂದರೆ ನಿದ್ದೆಬುರುಕ ಎಂದು ಅರ್ಥಮಾಡಿದರೂ ಜಡಭರತ, ಅಷ್ಟಾವಕ್ರ ಎಂಬ ಅಂಕಿತನಾಮಗಳನ್ನು ಬೇರೆ ಅರ್ಥದಲ್ಲಿ ಉಪಯೋಗಿಸಿದರೂ ಸತ್ಯಹರಿಶ್ಚಂದ್ರ, ದಾನಶೂರಕರ್ಣ, ಶಕಾರ ಮುಂತಾದುವು ಪ್ರಯೋಗದಲ್ಲಿದ್ದರೂ ತೆನಾಲಿರಾಮಕೃಷ್ಣ, ಬೀರಬಲ್, ಚಾಣಾಕ್ಯ,

ಶಕುನಿ, ಮುಂತಾದ ಅಂಕಿತನಾಮಗಳನ್ನು ಆಗಾಗ ಆಯಾ ವ್ಯಕ್ತಿಗಳ ಗುಣಗಳ ವ್ಯಂಗ್ಯವಾದ ಆರೋಪಕ್ಕೆಂದು ಪ್ರಸಾರದಲ್ಲಿದ್ದರೂ ಆಧುನಿಕರ ಹೆಸರುಗಳನ್ನು ಈ ರೀತಿಯಲ್ಲಿ ಉಪಯೋಗಿಸುವ ಅಭ್ಯಾಸವಿಲ್ಲ. ನಮ್ಮ ಭಾಷೆಯ ಸ್ವಭಾವಕ್ಕೆ ಅದು ಇನ್ನೂ ಅಂಟಿ ಬಂದಿಲ್ಲ. ಗಾಂಧೀತತ್ವ ಎಂಬಂತೆ ಎಷ್ಟು ಹೆಸರುಗಳನ್ನು ನಾವು ಪ್ರಚಾರದಲ್ಲಿ ತಂದಿದ್ದೇವೆ ? ಇದು ಆಲೋಚಿಸಬೇಕಾದ ವಿಷಯ.

ನಮ್ಮ ಜೀವನದಲ್ಲಿಯೇ ಈಗ ನಾವು ಇಂಗ್ಲಿಷ್ ಸಮಾಸಗಳನ್ನು ಉಪಯೋಗಿಸುತ್ತೇವೆ. Eat-out, Fly-over, Drive-in, Drop-out ಮುಂತಾದವು ವಿದ್ಯಾರ್ಥಿಗಳು ಆಡುಮಾತಿನಲ್ಲಿ ಎಷ್ಟು ಸಾಧಾರಣವಾಗಿಹೋಗಿವೆ. ಆದರೆ ಇಂಥ ಹೊಸ ಕನ್ನಡ ಸಮಾಸಗಳನ್ನು ನಾವು ಸೃಷ್ಟಿ ಮಾಡುತ್ತಿಲ್ಲ. ಭೂರಿಭೋಜನವನ್ನು ಮಾಡುವ ನಾವು **ಬಹಿಂರ್ಭೋಜನವನ್ನೂ** ಮಾಡಬಹುದು. **ಮೇಲ್ದಾರಿ, ಒಳಸೇತುವೆ, ಹೊರಬೀಳು** ಮುಂತಾದವನ್ನು ಪ್ರಯೋಗಕ್ಕಾಗಿಯೂ ನಾವು ಉಪಯೋಗಿಸುವುದಿಲ್ಲ.

ಆದರೆ ಇಂಗ್ಲಿಷಿನಲ್ಲಿರುವಂತೆ ರೂಪಕಗಳನ್ನು ನಿರ್ಮಾಣ ಮಾಡುವುದರಲ್ಲಿ ನಾವು ಸ್ವಲ್ಪ ಮುಂದುವರಿದಿದ್ದೇವೆ.

Summit ಎಂಬುದಕ್ಕೆ **ಶೃಂಗ** ಅಥವಾ **ಶೃಂಗಸಭೆ** ಎಂದೂ Cold war ಎಂಬುದಕ್ಕೆ **ಶೀತಸಮರ** ಎಂದೂ **ಕುಳಿರ್ಗಾಳಗ** ಎಂದೂ, Butter ಎನ್ನುವುದನ್ನು **ಬೆಣ್ಣೆ ಹಚ್ಚು** ಎಂದೂ Butcher ಎನ್ನುವುದನ್ನು **ಹಂತಕ** ಎಂದೂ Crack ಎನ್ನುವುದನ್ನು **ತಲೆಕೆಟ್ಟವ** ಎಂದೂ ಪ್ರಯೋಗದಲ್ಲಿ ತಂದಿದ್ದೇವೆ. ಆದರೆ Seeing red, feeling blue ಎಂಬಂಥ ರೂಪಕಗಳಿಗೆ ಸಮಾನ ಶಬ್ದಗಳ ನಿರ್ಮಾಣವಾಗಿಲ್ಲ. blue eyed boy ಎನ್ನುವುದಕ್ಕೆ **ಕಣ್ಮಣಿ** ಎಂದು ಮಾಡಬಹುದು.

ವ್ಯಂಗ್ಯದಲ್ಲಿ ನಾವು ಹಿಂದೆ ಬಿದ್ದಿಲ್ಲ. **ಅಂಗವಸ್ತ್ರ, ಪಾದಪೂಜೆ, ಸಹಸ್ರನಾಮ, ಚತುರ್ಭುಜ, ಪಟ್ಟಾಭಿಷೇಕ** ಮುಂತಾದ ಶಬ್ದಗಳನ್ನು ಬೇರೆ ಅರ್ಥದಲ್ಲಿ ಪ್ರಯೋಗ ಮಾಡುವುದು ನಮಗೆಲ್ಲ ತಿಳಿದಿದೆ.

ಕನ್ನಡಕ್ಕೆ ಉಪಸರ್ಗ ಸಾಮಾನ್ಯವಾಗಿ ಸೇರುವುದಿಲ್ಲ. **ಉದ್ವೇಗ** ಎಂಬ ಶಬ್ದ **ಉಬ್ಬೆಗ** ಎಂದು ಆದಾಗ ಅದು ಒಟ್ಟು ಶಬ್ದದ ತದ್ಭವ. ಅದರಲ್ಲಿ ಉತ್ ಎಂಬ ಉಪಸರ್ಗದ ನೆನಪೇ ನಮಗಿರುವುದಿಲ್ಲ. ಆದರೆ **ಉಷ್ಪವಡಿಸು** ಹಾಗಲ್ಲ. ಅದರಲ್ಲಿ ಉತ್ ಎಂಬ ಉಪಸರ್ಗವಿರುವುದು ಸ್ಪಷ್ಟ. ಹಳಗನ್ನಡದಲ್ಲಿ ಇಂಥ ಶಬ್ದಗಳು ಅಪೂರ್ವ. ವಚನಕಾರರು **ನಿರ್ವಯಲು, ನಿಬ್ಬಯಲು** ಮುಂತಾದ ಶಬ್ದಗಳಲ್ಲಿ ಇಂಥ ಉಪಸರ್ಗ ಸೇರಿದ ಶಬ್ದಗಳನ್ನು ಪ್ರಚಾರಕ್ಕೆ ತಂದರು. ಆಧುನಿಕ ಕನ್ನಡದಲ್ಲಿ **ದುರ್ನಡತೆ, ದುಶ್ಚಟ, ದುರ್ಬಳಕೆ, ದುರ್ಜನಿಕೆ, ದುರ್ನಡೆ, ದುರ್ನಾತ, ದುರ್ನಾಲಗೆ, ದುರ್ನೋಟ, ದುರ್ಮಾರಿ, ದುರ್ಮಿಲ** ಮುಂತಾದ ಶಬ್ದಗಳು ಪ್ರಚಾರಕ್ಕೆ ಬಂದಿವೆ. ಹೀಗೆಯೆ ಇತರ ಸಂಸ್ಕೃತದ ಉಪಸರ್ಗಗಳನ್ನು ಪ್ರಯೋಜನಕರವಾಗುವಂತೆ

ಉಪಯೋಗಿಸುವ ಪ್ರಯೋಗಶೀಲತೆಯನ್ನು ನಾವು ಹೊಂದುವ, ಯಾವ ಯಾವ ಹೊಸ ಪ್ರಯೋಗಗಳನ್ನು ಮಾಡಬಹುದೋ ಅಂಥ ಎಲ್ಲ ಪ್ರಯತ್ನಗಳನ್ನೂ ಮಾಡುವ ಭಾರ ನಮ್ಮ ಪ್ರಸಿದ್ಧ ಲೇಖಕರ ಮೇಲಿದೆ.

ಒಂದೇ ಮೂಲದಿಂದ ಬೇರೆ ಬೇರೆ ಪ್ರತ್ಯಯಗಳು ಹತ್ತಿ ಆಗುವ ಶಬ್ದಗಳನ್ನು ಇಂಗ್ಲಿಷಿನಲ್ಲಿ Paronym ಎಂದು ಕರೆಯುತ್ತಾರೆ. **ಹುಡುಗ** ಎಂಬ ಶಬ್ದದಿಂದ **ಹುಡುಗತನ, ಹುಡುಗಾಟ, ಹುಡುಗಾಟಿಕೆ** ಇವು ಎಲ್ಲ Paronym = ಒಂದೇ ಮೂಲದ ಶಬ್ದಗಳು.

ದೊಡ್ಡ ದೊಡ್ಡ ಶಬ್ದಗಳಿಗೆ ಸಂಕ್ಷಿಪ್ತ ರೂಪಗಳಿರುತ್ತವೆ. ಅವುಗಳನ್ನು ಸಂಕ್ಷಿಪ್ತಗಳೆಂದು (Abbreviations) ಎಂದು ಕರೆಯಬಹುದು. ಇನ್ನೊಂದು ಬಗೆಯ ಸಂಕ್ಷಿಪ್ತಗಳಿವೆ. ಇವುಗಳನ್ನು ಇಂಗ್ಲಿಷಿನಲ್ಲಿ Acronym ಎನ್ನುತ್ತಾರೆ. ಕೆಲವು ಶಬ್ದಗಳ ಮೊದಲಕ್ಷರಗಳನ್ನು ಸೇರಿಸಿ ಮಾಡಿದ ಪದ ಇದು. UNO, WHO, NATO ಮುಂತಾದುವು Acronymಗಳು. ಕನ್ನಡದಲ್ಲಿ **ಕಸಾಪ** ಅಂದರೆ **ಕನ್ನಡ ಸಾಹಿತ್ಯಪರಿಷತ್ತು, ಕವಿಕಾ = ಕರ್ನಾಟಕ ವಿದ್ಯುತ್ ಕಾರ್ಖಾನೆ.** ಮುಂತಾದವು ಕೂಡ ಸಂಕ್ಷಿಪ್ತಗಳೇ. ಸರಸ್ವತೀಪುರದ ಮನೆಯಮುಂದಿನ ತೆಂಗಿನ ತೋಟ ಎಂಬುದನ್ನು ಸಂಕ್ಷಿಪ್ತಗೊಳಿಸಿ **ಸಮತೆಂತೋ** ಎಂಬ ಹೆಸರಿನ ನಾಟಕ ಮಂಡಲಿಯನ್ನು ಮಾಡಿಕೊಂಡಿದ್ದಾರೆ. **ಕುವೆಂಪು, ಪುತಿನ, ಅನಕೃ, ಪಾಪು, ಚಂಪಾ** ಇಂಥ ಶಬ್ದಗಳನ್ನು ವಿಶಿಷ್ಟ ಶಬ್ದಗಳನ್ನಾಗಿ ಪರಿಗಣಿಸುವ ಪರಿಪಾಟ ಕನ್ನಡದಲ್ಲಿ ಬಂದಿಲ್ಲ. ಸಂಕ್ಷಿಪ್ತಗಳ ನಿಘಂಟು ಎಂಬ ಒಂದು ಸಣ್ಣ ನಿಘಂಟು ಕೂಡ ಕನ್ನಡದಲ್ಲಿ ಪ್ರಕಟವಾಗಿದೆ. ಈ ವಿವರಗಳೆಲ್ಲ ವಿಶ್ವಕೋಶದ ಮಾದರಿಯ ನಿಘಂಟಿನಲ್ಲಿ ಸೇರಬೇಕು.

೩. ಎಷ್ಟು ಬಗೆಯ ಇತರ ನಿಘಂಟುಗಳು ?

ಒಂದು ಭಾಷೆಯಲ್ಲಿ ಬರುವ ನಿಘಂಟುಗಳನ್ನು ಪರಿಶೀಲಿಸಿದರೆ ಸಂಖ್ಯೆಯ ದೃಷ್ಟಿಯಿಂದ ಹೆಚ್ಚಾಗಿ ಕಂಡರೂ ಒಂದೊಂದು ನಿಘಂಟೂ ಯಾವ ಗುಂಪಿಗೆ ಸೇರುತ್ತದೆ ಎಂದು ನಿರ್ಧರಿಸುವುದೇ ಕಷ್ಟವಾಗುತ್ತದೆ. ಏಕೆಂದರೆ ನಮ್ಮ ನಿಘಂಟುಗಳಲ್ಲಿ ಯಾವ ಉದ್ದೇಶವೂ ಇಲ್ಲದೆ ಶಬ್ದಕ್ಕೆ ಅರ್ಥವನ್ನು ನೀಡುವುದೊಂದೇ ಗಮನವಿರುವಂತಿದೆ. ಬೇರೆ ಬೇರೆ ಬಗೆಯ ನಿಘಂಟುಗಳಲ್ಲಿ ಬರುವ ಶಬ್ದಗಳೆಲ್ಲ ಕೆಲವು ವೇಳೆ ಒಂದೇ ನಿಘಂಟಿನಲ್ಲಿ ಸೇರಿರುತ್ತವೆ. ಈಚೀಚೆಗೆ ವಿಶಿಷ್ಟವಾದ ಉದ್ದೇಶವುಳ್ಳ ನಿಘಂಟುಗಳು ರಚಿತವಾಗುತ್ತಿರುವುದು ಕನ್ನಡದ ಪುರೋಭಿವೃದ್ಧಿಗೆ ತೋರುಗಂಬವಾಗಿದೆ. ಅಂಥವುಗಳಲ್ಲಿ ಕೆಲವನ್ನು ಪರಿಶೀಲಿಸಬಹುದು :

೧. ಆಡಳಿತ ಪದಕೋಶ

ಸರಕಾರದ ಕಚೇರಿಗಳಲ್ಲಿ ಕನ್ನಡ ಭಾಷೆಯನ್ನು ಆಡಳಿತದ ಮಾಧ್ಯಮವನ್ನಾಗಿ ಮಾಡುವ ಉದ್ದೇಶದಿಂದ ಈ ಪದಕೋಶ ೧೯೬೭ರಲ್ಲಿ ಮೊದಲು ಪ್ರಕಟವಾಯಿತು. ಆಗಲೇ ಕಚೇರಿಗಳಲ್ಲಿ **ಆರಕ್ಷಕ, ಅಭಿಯಂತರ** ಮುಂತಾದ ವಿಚಿತ್ರ ಶಬ್ದಗಳು ಪ್ರಚಾರಕ್ಕೆ ಬಂದದ್ದು. ಅಂಥ ಶಬ್ದಗಳ ಬಗ್ಗೆ ಕಟುವಾದ ಟೀಕೆಗಳು ಸಾರ್ವಜನಿಕರಿಂದಲೂ ವಿದ್ವಾಂಸರಿಂದಲೂ ಪ್ರಕಟವಾದ ಮೇಲೆ ಸರಕಾರವೇ ಒಂದು ಸರಳೀಕರಣ ಸಮಿತಿಯನ್ನು ನೇಮಿಸಿ ಸೂಕ್ತ ಶಬ್ದಗಳನ್ನು ಅಳವಡಿಸಿ ಈ ಕೋಶವನ್ನು ಮತ್ತೆ ಪ್ರಕಟಿಸಿದೆ. (೧೯೮೯) ಇದು ನಾಲ್ಕನೆಯ ಆವೃತ್ತಿ. ಇದರಲ್ಲಿ ಆರಕ್ಷಕ ತೊಲಗಿ ಮತ್ತೆ ಪೊಲೀಸನೇ ತಲೆದೋರಿದ್ದಾನೆ. ಇಂಜಿನಿಯರು ಹಿಂದಿರುಗಿದ್ದಾನೆ. ಈ ಕೋಶ ತುಂಬ ಉಪಯುಕ್ತವಾಗಿ ಹೊರಬಂದಿದೆ. ಇದರ ಉಪಯೋಗ ಹೆಚ್ಚಬೇಕು.

೨. ಇಂಗ್ಲಿಷ್-ಕನ್ನಡ ವೈದ್ಯ ಪದಕೋಶ

ಡಾ. ಡಿ.ಎಸ್. ಶಿವಪ್ಪನವರು ರಚಿಸಿರುವ ಈ ಕೋಶ ೧೯೭೩ರಲ್ಲಿ ಪ್ರಕಟವಾಯಿತು. ೧೯೮೭ರಲ್ಲಿ ಮತ್ತೆ ಪ್ರಕಟವಾಗಿದೆ. ಇದೊಂದು ಬಗೆಯ ವಿಶಿಷ್ಟ ರಚನೆ. ಸಾಧ್ಯವಾದಷ್ಟೂ ಕನ್ನಡ ಶಬ್ದಗಳಿಂದಲೇ ರಚಿಸಿರುವ ಈ ನಿಘಂಟನ್ನು ಇನ್ನೂ ವ್ಯಾಪಕವಾಗಿ ಉಪಯೋಗಿಸಬಹುದು. ಈ ನಿಘಂಟಿನ ಸ್ವಾರಸ್ಯವೇನೆಂದರೆ ಕನ್ನಡ ಶಬ್ದದಿಂದ ಇಂಗ್ಲಿಷ್ ಶಬ್ದದ ಅರ್ಥ ಬೇಗ ಅರಿವಿಗೆ ಬರುತ್ತದೆ. ಸಂಸ್ಕೃತವನ್ನು ಅನವಶ್ಯಕವಾಗಿ ಉಪಯೋಗಿಸಿಲ್ಲ. ಶಬ್ದಗಳು ಸಮಾಸಗಳಂತೆ ಕಂಡರೂ ಅವುಗಳ ಪ್ರಯೋಜನ ಹೆಚ್ಚಾಗಿರುವಂತೆ ಕಾಣಿಸುತ್ತದೆ. ವೈದ್ಯಶಾಸ್ತ್ರದ ಬಗ್ಗೆ ರಚಿಸುವ ಕನ್ನಡ ಗ್ರಂಥಗಳಿಗೆ ಇದು ಸಹಾಯಕವಾಗಿದೆ.

೩. ಬ್ಯಾಂಕಿಂಗ್ ನಿಘಂಟು

ಭಾರತೀಯ ಸ್ಟೇಟ್ ಬ್ಯಾಂಕು ತನ್ನ ಕನ್ನಡ ಸಂಘಗಳ ಕಡೆಯಿಂದ ಒಂದು ಸಮನ್ವಯ ಸಮಿತಿಯನ್ನು ಏರ್ಪಡಿಸಿಕೊಂಡಿದೆ. ಅದರ ಆಶ್ರಯದಲ್ಲಿ ಬ್ಯಾಂಕಿಂಗ್ ಪ್ರಪಂಚ ಎಂಬ ಅರ್ಧವಾರ್ಷಿಕ ಪತ್ರಿಕೆಯನ್ನೂ ನಡೆಸಲಾಗುತ್ತದೆ. ಈ ಪತ್ರಿಕೆಯ ಸಂಪಾದಕರಾಗಿ, ಪ್ರಸಿದ್ಧ ಲೇಖಕರಾದ ಎಚ್ಚೆಸ್ಕೆ ದುಡಿಯುತ್ತಿದ್ದಾರೆ. ಅವರ ಸಂಪಾದಕತ್ವದಲ್ಲಿ ಸಿದ್ಧವಾಗಿರುವ ಈ ನಿಘಂಟು ೧೯೮೫ರಲ್ಲಿ ಪ್ರಕಟವಾಯಿತು. ಈ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಮೇ. ಕೃ. ಅನಂತಸ್ವಾಮಿಯವರೂ ಸಂಪಾದಕರಾಗಿ ಎಚ್ಚೆಸ್ಕೆಯವರೂ ಮಾಡಿರುವ ಕೆಲಸ ಅತ್ಯುತ್ತಮವಾಗಿದೆ.

"ಪ್ರಕೃತ ನಿಘಂಟು ಬ್ಯಾಂಕಿಂಗ್ ವಿಷಯಕವಾದದ್ದರಿಂದ ಒಂದೊಂದೂ ಪದದ ಪರಿಕಲ್ಪನೆ, ಅರ್ಥವಿವರಣೆ, ಅದನ್ನು ಯಾವ ಸಂದರ್ಭದಲ್ಲಿ ಬಳಸಲಾಗುತ್ತದೆಂಬ ವಿಚಾರ, ಕಾನೂನು ಹಾಗೂ ಆಚರಣೆಗೆ ಸಂಬಂಧಿಸಿದ ಅಂಶಗಳು ಇವನ್ನೆಲ್ಲ ಇದು ಒಳಗೊಂಡಿದೆ. ಬ್ಯಾಂಕುಗಳ ನಿತ್ಯ ವ್ಯವಹಾರದ ನಾನಾ ಪರಿಕರ್ಮಗಳನ್ನೂ ಕುರಿತ ಪದಗಳೇ ಅಲ್ಲದೆ ಈ ವ್ಯವಹಾರಕ್ಕೆ ಸಂಬಂಧಿಸಿದ ಕಾನೂನು, ವಾಣಿಜ್ಯ, ಕೈಗಾರಿಕೆ, ಆಡಳಿತ, ಅರ್ಥಶಾಸ್ತ್ರ ಮುಂತಾದ ಕ್ಷೇತ್ರಗಳ ಪದಗಳನ್ನು ಕೊಡಲಾಗಿದೆ. ಬ್ಯಾಂಕ್ ವ್ಯವಹಾರ ಮಾಡುವವರು ಈ ಪದಗಳ ಸ್ಪಷ್ಟ ಕಲ್ಪನೆಗಳನ್ನು ಹೊಂದಿರುವುದೂ ಅವಶ್ಯ. ಹೀಗಾಗಿ ಈ ನಿಘಂಟು ಬ್ಯಾಂಕಿಂಗ್ ಹಾಗೂ ಅದರೊಂದಿಗೆ ಸಂಬಂಧ ಹೊಂದಿದ ಕ್ಷೇತ್ರಗಳನ್ನು ಕುರಿತ ಪರಿಚಯಾತ್ಮಕ ಗ್ರಂಥ ಎನ್ನಬಹುದು. ಇದೊಂದು ಪುಟ್ಟ ವಿಶ್ವಕೋಶ ಎಂದರೆ ತಪ್ಪಾಗಲಾರದು".

ಸಂಪಾದಕರು ಹೇಳುವ ಈ ಮಾತುಗಳು ಈ ಗ್ರಂಥಕ್ಕೆ ಅಚ್ಚುಕಟ್ಟಾಗಿ ಹೊಂದುತ್ತವೆ. ಸರಳವಾದ ಪದಗಳು, ಈಗಾಗಲೇ ಹೆಚ್ಚು ಬಳಕೆಯಲ್ಲಿರುವ ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಯ ಪದಗಳು ಜೊತೆಗೆ ಹಿಂದೀ ಭಾಷೆಯ ಪದಗಳು. ಹೀಗೆ ಶಬ್ದಗಳ ಉಪಯೋಗದ ಪ್ರಯೋಜನದ ದೃಷ್ಟಿಯಿಂದ ಸಿದ್ಧವಾಗಿರುವ ನಿಘಂಟು ಇದು. ಜನಜೀವನದ ಇತರ ಎಲ್ಲ ಕ್ಷೇತ್ರಗಳಿಗೆ ಮಾದರಿಯಾಗಿರುವ ನಿಘಂಟಾಗಿದೆ.

೪. ಇಂಗ್ಲಿಷ್ - ಕನ್ನಡ ವಿಜ್ಞಾನ ಶಬ್ದಕೋಶ

ಇದನ್ನು ಸಿದ್ಧಪಡಿಸಿರುವವರು ಶ್ರೀಯುತರಾದ ಜೆ.ಆರ್. ಲಕ್ಷ್ಮಣರಾವ್ ಮತ್ತು ಅಡ್ಯನಡ್ಕ ಕೃಷ್ಣಭಟ್. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಇದನ್ನು ಪ್ರಕಟಿಸಿದೆ. ಇದರ ಪ್ರಕಟಣೆಗೆ The National Council for Science and Technology Communication ಧನ ಸಹಾಯ ಮಾಡಿದೆ. ಇದು ಪ್ರಕಟವಾದದ್ದು ೧೯೯೦ರಲ್ಲಿ.

ಈ ಕೋಶವನ್ನು ಸಿದ್ಧಪಡಿಸುವಾಗ ಸಂಪಾದಕರು ಕೆಲವು ಸೂತ್ರಗಳನ್ನು ಮುಂದಿಟ್ಟುಕೊಂಡಿದ್ದಾರೆ. ಅವುಗಳನ್ನು ಅವರ ಮಾತಿನಲ್ಲಿಯೇ ತಿಳಿಸುವುದು ಸೂಕ್ತ.

"ವಿಶೇಷ ಶಾಸ್ತ್ರೀಯ ಅರ್ಥವುಳ್ಳ ಇಂಗ್ಲಿಷ್ ಶಬ್ದಗಳಿಗೆ ಸಮಾನ ಶಬ್ದಗಳನ್ನು ಆರಿಸಬೇಕಾದಾಗ, ಕನ್ನಡ ಭಾಷೆಯದೇ ಆದ ಶಬ್ದಗಳನ್ನು ಆಯ್ಕೆ ಮಾಡಬಾರದು ಎಂಬುದು

ಒಂದು ನಿರ್ಧಾರ. ಹಾಗಾದರೆ ಇಂಗ್ಲಿಷಿನಲ್ಲಿ ಬಳಸುವ ಶಬ್ದವನ್ನು ಹಾಗೆಯೇ ತೆಗೆದುಕೊಳ್ಳಬಾರದೇಕೆ ಎಂಬ ಪ್ರಶ್ನೆ ಏಳುವುದು ಸಹಜ. ಖಂಡಿತ ಆಗಬಹುದು; ಆದರೆ ಅದು ಕನ್ನಡದ ಜಾಯಮಾನಕ್ಕೆ ಒಗ್ಗದ ಕ್ಲಿಷ್ಟ ಸಂಯುಕ್ತಾಕ್ಷರಗಳಿಂದ ಕೂಡಿದ್ದು, ನಮ್ಮ ಭಾಷೆಗೆ ವಿಜಾತೀಯವಾಗಿ ಕಂಡರೆ ಅದರ ಬಗ್ಗೆ ಯೋಚಿಸಬೇಕಾಗುವುದು. ಹಾಗಿಲ್ಲದೆ ಅದು ನಮ್ಮ ಭಾಷೆಯೊಡನೆ ಸುಲಭವಾಗಿ ಬೆರೆತುಕೊಳ್ಳಬಲ್ಲ ಸರಳ ಪದವಾಗಿದ್ದರೆ, ಅದನ್ನು ಹಾಗೆಯೇ ಎರವಲು ಪಡೆಯುವುದು ಅತ್ಯುತ್ತಮ ಮಾರ್ಗ ಎಂದು ತೀರ್ಮಾನಿಸಲಾಯಿತು. ಅಂತಹ ಸರಳ ಶಬ್ದಗಳಿಗೆ ಉದಾಹರಣೆ: ಅಯಾನು, ವೇಲೆನ್ಸಿ, ಅಲರ್ಜಿ ಇತ್ಯಾದಿ. ಯಾವುದೇ ಶಬ್ದ ಸರಳವಾಗಿರದೆ, ನಮ್ಮ ಭಾಷೆಗೆ ವಿಜಾತೀಯವಾಗಿದೆ ಎನ್ನಿ, ಆಗಲೂ ಅದು ಅತ್ಯಂತ ಪಾರಿಭಾಷಿಕವಾಗಿದ್ದು, ಶಾಸ್ತ್ರ ಸಾಹಿತ್ಯದಲ್ಲಿ ಮಾತ್ರ ಬಳಸುವಂಥದ್ದಾಗಿದ್ದರೆ ಮತ್ತು ಅದರಿಂದ ಪಡೆಯುವ ಜನ್ಯಪದಗಳ ಅಗತ್ಯ ಹೆಚ್ಚಾಗಿಲ್ಲದಿದ್ದರೆ (ಎಂಟ್ರಪಿ, ಯುಟೆಕ್ಟಿಕ್, ಇತ್ಯಾದಿ) ಇಲ್ಲವೇ ಪದಾರ್ಥಗಳ, ವಸ್ತುಗಳ, ಅವುಗಳ ಅಂಗಗಳ ಹೆಸರಾಗಿದ್ದರೆ (ಡಿಸ್ಪ್ರೋಸಿಯಮ್, ನ್ಯಾಪ್ಥಲೀನ್, ಪ್ರೋಟಾನ್, ನ್ಯೂಟ್ರಾನ್, ಮೈಟೊಕಾಂಡ್ರಿಯ, ರೈಬೊಸೋಮ್ ಇತ್ಯಾದಿ) ಆಗಲೂ ಅವುಗಳನ್ನು ಹಾಗೆಯೇ ಎರವಲು ತೆಗೆದುಕೊಳ್ಳುವುದು ಒಳ್ಳೆಯದೆಂದು ತೀರ್ಮಾನಿಸಲಾಯಿತು".

"ಮೇಲಿನ ಉಪಾಧಿಗಳಿಗೆ ಒಳಪಡದಿರುವ ಶಬ್ದಗಳಿಗೆ ಮಾತ್ರ ಕನ್ನಡ ಭಾಷೆಗೆ ಹೊಂದಿಕೊಳ್ಳಬಲ್ಲ ಸಮಾನ ಶಬ್ದಗಳನ್ನು ಸೃಷ್ಟಿಸಬೇಕೆಂದು ನಿರ್ಧರಿಸಲಾಯಿತು. ಸ್ಥೂಲವಾಗಿ ಹೇಳುವುದಾದರೆ, ಭಾವನಾತ್ಮಕ ಪದಗಳು (symmetry, relativity, gravity, ಇತ್ಯಾದಿ) ಕ್ರಿಯೆ ಅಥವಾ ಪ್ರಕ್ರಿಯೆಗಳನ್ನು ಸೂಚಿಸುವ ಪದಗಳು (co-ordination, dissociation, absorption ಇತ್ಯಾದಿ), ಮೂಲರೂಪದಲ್ಲಿ ಮಾತ್ರವಲ್ಲದೆ ಅವುಗಳಿಂದ ಪಡೆದ ಜನ್ಯ ಪದಗಳೂ ಅಗತ್ಯವಾಗುವಂಥ ಪದಗಳು (pole, polar, polarize, polarization, polarizable ಹೀಗೆ), ಕೇವಲ ಶಾಸ್ತ್ರಸಾಹಿತ್ಯಕ್ಕೆ ಸೀಮಿತವಾಗಿರದೆ ಬೇರೆ ಕ್ಷೇತ್ರಗಳಿಗೆ ಅಥವಾ ಸಾಮಾನ್ಯ ಭಾಷೆಗೆ ವಲಸೆ ಹೋಗುವಂಥ ಪದಗಳು (acceleration, temperature, desalination ಇತ್ಯಾದಿ) - ಈ ಬಗೆಯವು ವಿಜಾತೀಯವಾಗಿದ್ದು ಕನ್ನಡಕ್ಕೆ ಹೊಂದಿಕೊಳ್ಳದೆ ಹೋದರೆ, ಆಗ ಮಾತ್ರ ಸಮಾನ ಶಬ್ದಗಳ ಸೃಷ್ಟಿ ಅಗತ್ಯ".

"ಹೊಸ ಪದದ ಸೃಷ್ಟಿ ಅಗತ್ಯವೆಂದು ನಿರ್ಧರಿಸಿದ ನಂತರ ಅದನ್ನು ಹೇಗೆ ಸೃಷ್ಟಿಸಬೇಕೆಂಬ ಬಗ್ಗೆಯೂ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಯಿತು. ಶಬ್ದದ ಅರ್ಥವನ್ನು ಗ್ರಹಿಸಿ ಆ ಅರ್ಥವನ್ನು ವ್ಯಕ್ತಪಡಿಸಬಲ್ಲ ಸಮಾನ ಶಬ್ದವನ್ನು ಸೃಷ್ಟಿಸುವ ಯತ್ನ ಅನಪೇಕ್ಷಣೀಯ ಎಂದು ತೀರ್ಮಾನಿಸಲಾಯಿತು. ಏಕೆಂದರೆ, ನಮ್ಮ ಗ್ರಹಿಕೆಯಲ್ಲಿ ಅವ್ಯಾಪ್ತಿ ಅಥವಾ ಅತಿವ್ಯಾಪ್ತಿ ದೋಷವಿರಬಹುದು. ಆದುದರಿಂದ ಅರ್ಥಕ್ಕಿಂತ ಮಿಗಿಲಾಗಿ, ಪದದ ವ್ಯುತ್ಪತ್ತಿಗೆ ಹೆಚ್ಚು ಪ್ರಾಶಸ್ತ್ಯ ನೀಡಿ, ಅದು ಯಾವ ಲ್ಯಾಟಿನ್ ಅಥವಾ ಗ್ರೀಕ್ ತುಂಡು ಶಬ್ದಗಳಿಂದ ರಚಿತವಾಗಿದೆಯೋ ಆ ತುಂಡು ಶಬ್ದಗಳಿಗೆ ಸಮಾನವಾದ ಸಂಸ್ಕೃತ ತುಂಡು ಶಬ್ದಗಳನ್ನು ಬಳಸಿಕೊಂಡು ಹೊಸ ಶಬ್ದಗಳನ್ನು ಹೊಸೆಯಲು ಪ್ರಯತ್ನಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೊಂದು ಒಳ್ಳೆಯ

ಉದಾಹರಣೆಯನ್ನು ಕೊಡಬಹುದು. symmetry ಪದದ ಅರ್ಥವನ್ನು ಬೇರೆ ಬೇರೆ ರೀತಿಯಲ್ಲಿ ಗ್ರಹಿಸಿದ ಬೇರೆ ಬೇರೆಯವರು ಸಮಾಂಗತೆ, ಸಮಪಾರ್ಶ್ವತೆ, ಸಮರೂಪತೆ, ಸುಪ್ರಮಾಣತೆ, ಸೌಷ್ಠವ ಮುಂತಾದ ಪದಗಳನ್ನು ಬಳಸಿ ಗಲಿಬಿಲಿ ಉಂಟು ಮಾಡಿದ್ದಾರೆ. ಈ ಪದದ ವ್ಯುತ್ಪತ್ತಿಯನ್ನು (syn-metros) ಪರಿಗಣಿಸಿದ್ದೇ ಆದರೆ, ಸಮಮಿತಿ (ಅಥವಾ ಸಮ್ಮಿತಿ) ಎಂಬ ಶಬ್ದ ಯುಕ್ತವೆನಿಸುತ್ತದೆ. ಸಾಧ್ಯವಾದ ಮಟ್ಟಿಗೆ ಈ ಮಾರ್ಗವನ್ನೇ ಅನುಸರಿಸಬೇಕೆದು ನಿರ್ಧರಿಸಲಾಯಿತು. ಈ ನಿರ್ಧಾರವನ್ನು ಗಣನೆಗೆ ತೆಗೆದುಕೊಂಡು, ಈ ಶಬ್ದಕೋಶದಲ್ಲಿ ಆಕಸ್ಮಾತ್ ಬಿಟ್ಟುಹೋಗಿರುವ ಯಾವುದಾದರೊಂದು ಶಬ್ದಕ್ಕೆ ಸಮಾನ ಶಬ್ದವನ್ನು ಸೃಷ್ಟಿಸಬಯಸುವವರಿಗೆ ನೆರವಾಗುವ ಉದ್ದೇಶದಿಂದ, ಇಂಗ್ಲಿಷ್ ಪಾರಿಭಾಷಿಕ ಶಬ್ದಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ಹಲವು ನೂರು ಲ್ಯಾಟಿನ್ ಮತ್ತು ಗ್ರೀಕ್ ತುಂಡು ಪದಗಳನ್ನು ಸಂಗ್ರಹಿಸಿ, ಅವಕ್ಕೆ ಸಮಾನವಾಗಿ ಉಪಯೋಗಿಸಬಹುದಾದ ಸಂಸ್ಕೃತ ಅಥವಾ ಇನ್ನಿತರ ತುಂಡು ಪದಗಳನ್ನು ಸೂಚಿಸಿ ಅನುಬಂಧದಲ್ಲಿ ಕೊಡಲಾಗಿದೆ".

ಸಂಪಾದಕರು ತಿಳಿಸಿರುವ ವಿವರಗಳನ್ನು ಅವರ ಮಾತಿನಲ್ಲಿ ತಿಳಿಸುವುದು ಸಾಧ್ಯವಾಗಿರುವುದು ಉತ್ತಮ. ಈ ಮಾರ್ಗದಲ್ಲಿ ರಚಿತವಾದ ಪಾರಿಭಾಷಿಕ ಕನ್ನಡ ನಿಘಂಟುಗಳಲ್ಲಿ ಇದು ಅತ್ಯುತ್ತಮವಾಗಿದೆ. ಯಾವ ಪೂರ್ವಗ್ರಹಗಳಿಲ್ಲದೆ ಪ್ರಯೋಜನವೊಂದನ್ನೇ ಗುರಿಯಾಗಿಟ್ಟು ಸಿದ್ಧಪಡಿಸಿರುವ ಈ ನಿಘಂಟನ್ನು ಮಾದರಿಯನ್ನಾಗಿಟ್ಟುಕೊಂಡು ಇತರ ಎಲ್ಲ ಕ್ಷೇತ್ರಗಳಿಗೂ ಇಂಥ ನಿಘಂಟನ್ನೇ ಸಿದ್ಧಪಡಿಸಿದರೆ ಕನ್ನಡ ಭಾಷೆಗೂ ವೈಜ್ಞಾನಿಕ ವಿಷಯಗಳ ಲೇಖಕರಿಗೂ ಬಹಳ ಸಹಾಯವೊದಗುತ್ತದೆ.

ಈ ನಿಘಂಟುಗಳ ಪರಿಚಯದಿಂದ ಕನ್ನಡಕ್ಕೆ ಎಷ್ಟು ಬಗೆಯ ನಿಘಂಟುಗಳು ಬೇಕಾಗಿವೆ ಎಂಬುದರ ಬಗ್ಗೆ ತಿಳಿವು ಮೂಡುತ್ತದೆ.

ನಿಘಂಟುಗಳನ್ನು ಉಪಯೋಗಿಸುವವರ ದೃಷ್ಟಿಯಿಂದ ನಿಘಂಟುಗಳು ತಯಾರಾಗಬೇಕು. ವಿಶ್ವಕೋಶದ ಮಾದರಿಯ ನಿಘಂಟು ಒಂದು ಮೊದಲು ಸಿದ್ಧವಾಗಬೇಕಾದದ್ದು ತುಂಬ ಆವಶ್ಯಕ. ಈ ಪುಸ್ತಕದಲ್ಲಿ ಅಂಥ ನಿಘಂಟನ್ನು ಕುರಿತು ಹೆಚ್ಚು ವಿವರಗಳಿವೆ. ಅಂಥ ನಿಘಂಟೊಂದು ಸಿದ್ಧವಾದ ಮೇಲೆ ವಿದ್ವಾಂಸರು ಮಾಡಬೇಕಾದ ಕಾರ್ಯ ಅಗಾಧವಾಗಿದೆ. ನೂರಾರು ಬಗೆಯ ನಿಘಂಟುಗಳನ್ನು ನಿರ್ಮಾಣ ಮಾಡಬೇಕಾದ ಅಗತ್ಯವಿದೆ. ಪಾಶ್ಚಾತ್ಯ ದೇಶಗಳಲ್ಲಿ ಪುಸ್ತಕದ ಅಂಗಡಿಗಳಿಗೆ ಹೋದರೆ ನಿಘಂಟುಗಳ ಬೇರೊಂದು ವಿಭಾಗವನ್ನೇ ಅಳವಡಿಸಿರುತ್ತಾರೆ. (ಅಂಥ ಒಂದು ಪುಸ್ತಕದ ಅಂಗಡಿಯಲ್ಲಿ ನಾನು ನಿಘಂಟುಗಳನ್ನು ಪರಿಶೀಲಿಸುತ್ತಿದ್ದಾಗ ನನ್ನ ವಿದ್ಯಾರ್ಥಿನಿಯೊಬ್ಬರು ನನ್ನ ಆ ಸ್ಥಿತಿಯನ್ನು ಕ್ಯಾಮರಾದಲ್ಲಿ "ಕ್ಲಿಕ್ಕಿಸಿ" ಆ ಚಿತ್ರದ ಪ್ರತಿಯನ್ನು ನನಗೆ ಉಡುಗೊರೆಯಾಗಿ ಕಳಿಸಿದ್ದಾರೆ)

ಅಲ್ಲಿ ನಾನು ಕಂಡ ಇಂಗ್ಲಿಷ್ ಭಾಷೆಯ ನಿಘಂಟುಗಳನ್ನು ಗಣನೆಗೆ ತಂದು ಈಗ ನೆನಪಿನಲ್ಲಿ ಉಳಿದಿರುವ ನಿಘಂಟುಗಳ ಬಗೆಗಳನ್ನು ಇಲ್ಲಿ ಹೆಸರಿಸುತ್ತೇನೆ ಮಾತ್ರ. ಅವುಗಳ ಬಗ್ಗೆ ಎಷ್ಟು ವಿವರಗಳನ್ನು ದಾಖಲು ಮಾಡಬೇಕೆಂಬುದನ್ನು ಬಲ್ಲ ನಾನು ಆ ವಿವರಕ್ಕೆ ಇಲ್ಲಿ

ಹೋಗುವುದಿಲ್ಲ. ಅದೇ ಬೇರೊಂದು ಕಿರು ಹೊತ್ತಿಗೆಯಾಗುವ ಸಂಭವವಿದೆ. ಆದರೂ ಅಂಥ ಎರಡು ನಿಘಂಟುಗಳ ಬಗ್ಗೆ ಸ್ವಲ್ಪ ಮಾತ್ರ ವಿವರಗಳನ್ನು ನೀಡಿ ಮಿಕ್ಕ ನಿಘಂಟುಗಳ ಪಟ್ಟಿಯನ್ನು ಓದುಗರ ಗಮನಕ್ಕೆ ತರುತ್ತೇನೆ. ಈ ಪಟ್ಟಿಯೇನೂ ಸಂಪೂರ್ಣವಾದುದಲ್ಲ. ಓದುಗರಲ್ಲಿ ಕೆಲವರು ತಾವೇ ಹೊಸ ಹೊಸ ಹೆಸರುಗಳನ್ನು ಸೂಚಿಸಬಹುದು.

೧. ಚರಿತ್ರ ಪದಕೋಶ :

ನಮ್ಮ ದೇಶದಲ್ಲಿ ಚರಿತ್ರೆಯಲ್ಲಿ ಆಗಿಹೋದ ಅನೇಕ ವಿಚಾರಗಳು ಬರುತ್ತವೆ. ನಮ್ಮ ಶಾಸನಗಳಿಗೆ ಸಾವಿರ ವರ್ಷಕ್ಕೂ ಮೀರಿದ ಕಾಲಮಾನದ ಪ್ರಾಚೀನತೆಯಿದೆ. ಇವುಗಳಲ್ಲಿ ಬರುವ ಕೃಷಿ, ತೆರಿಗೆ, ದಾನ, ವಂಶಗಳು, ವ್ಯಕ್ತಿನಾಮಗಳು ಮುಂತಾಗಿ ದಾಖಲಾಗಿರುವ ಎಷ್ಟೋ ವಿಷಯಗಳಿವೆ. ಇವುಗಳಲ್ಲಿ ಕೆಲವು ಶಬ್ದಗಳ ಅರ್ಥವೇನೆಂಬುದು ಇಂದಿಗೂ ಸಂದಿಗ್ಧವಾದ ಸಂಗತಿಯಾಗಿದೆ. ಇದನ್ನು ಸಂಶೋಧನೆಯ ಮೂಲಕವಾಗಿ ನಿರ್ಧರಿಸಬೇಕಾದ ಕಾಲ ಈಗ ಬಂದಿದೆ. ವಿದ್ವಾಂಸರಿಗೆ ಸವಾಲಾಗಿರುವ ಯಾವೊಂದು ಅಂಶವನ್ನು ಆಮೂಲಾಗ್ರವಾಗಿ ಪರಿಶೋಧಿಸಿದರೂ ಎಷ್ಟೋ ಅನುಕೂಲವಾಗಿ ಅನೇಕ ಗಂಟುಗಳನ್ನು ಬಿಡಿಸಿದಂತಾಗುತ್ತದೆ. ಇಂಥ ಕೆಲಸಕ್ಕೆ ಹತ್ತು ಜನ ವಿದ್ವಾಂಸರ ಹತ್ತು ವರ್ಷದ ಕೆಲಸ ಸಾಲದಾದೀತು.

೨. ವೃತ್ತಿ ಪದಕೋಶ :

ತೆಲುಗು ಭಾಷೆಯಲ್ಲಿ ಶ್ರೇಷ್ಠ ವಿದ್ವಾಂಸರ ಸಹಾಯದಿಂದ ಸಿದ್ಧವಾಗಿರುವ ವೃತ್ತಿಪದಕೋಶದ ೫ ಸಂಪುಟಗಳು ಪ್ರಕಟವಾಗಿವೆ. ಮಾನವ ಜೀವನದಲ್ಲಿ ಕಾಣಬರುವ ಅನೇಕ ವೃತ್ತಿಗಳಿಗೆ (ಕಸಬುಗಳಿಗೆ) ಅಂದರೆ ಕೃಷಿ, ಬಡಗಿಯ ಕೆಲಸ, ಕಮ್ಮಾರ, ಚಮ್ಮಾರರ ಕೆಲಸ, ಮನೆ ಕಟ್ಟುವವನ ವೃತ್ತಿ, ನಾಯಿಂದ, ಅಕ್ಕಸಾಲಿಗ, ಗಾಣಿಗ, ಪೂಜಾರಿ, ಇತ್ಯಾದಿ ವೃತ್ತಿಗಳಲ್ಲಿ ಪ್ರಯೋಗವಾಗುವ ವಿಶಿಷ್ಟ ಶಬ್ದಗಳಿವೆ. ಈಗೀಗ ಈ ಶಬ್ದಗಳು ಕಣ್ಮರೆಯಾಗುತ್ತ ಇವೆ. ಸಾಧ್ಯವಾದಷ್ಟು ಬೇಗ ಈ ಶಬ್ದಗಳು ಲುಪ್ತವಾಗದಂತೆ ಕಾಪಾಡಬೇಕು. ಇಂಥ ಕಾರ್ಯಕ್ಕೆ ವಿಶೇಷ ಪರಿಣತಿಯ ವಿದ್ವಾಂಸರನ್ನು ತರಬೇತು ಮಾಡಬೇಕು. ಆಂಧ್ರದಲ್ಲಿ ಡಾ. ಭದ್ರಿರಾಜು ಕೃಷ್ಣಮೂರ್ತಿಯವರು ನೀಡಿದ ತರಬೇತಿಯಿಂದ ಕೃಷಿ ಶಬ್ದಕೋಶದಲ್ಲಿ ಕೆಲಸ ಮಾಡಿದ ಡಾ. ಬೂದಿರಾಜು ರಾಧಾಕೃಷ್ಣ ಅವರು ಪಟ್ಟ ಶ್ರಮವನ್ನು ನಾನು ಸ್ವತಃ ಬಲ್ಲೆ. ಈ ಇಬ್ಬರು ವಿದ್ವಾಂಸರನ್ನೂ ಚೆನ್ನಾಗಿ ಬಲ್ಲ ನಾನು ಅಂಥವರ ಅನುಭವವನ್ನು ಅರಿತು ಕನ್ನಡದಲ್ಲಿ ಅಂಥ ಕಾರ್ಯವನ್ನೇ ಕೈಗೊಳ್ಳಬೇಕೆಂದು ಇಪ್ಪತ್ತು ವರ್ಷಗಳ ಕಾಲ ಅನೇಕ ಸೆಮಿನಾರುಗಳಲ್ಲಿ ಪ್ರತಿಪಾದಿಸಿದ್ದೇನೆ. ಆದರೆ ಪ್ರತಿಪಾದನೆ ಒಂದೇ ಸಾಲದಲ್ಲ ! ಪ್ರತಿಸಾಧನೆ ಬೇಕು. ನಮ್ಮ ನಾಡಿನಲ್ಲಿ ಅಂಥ ಕಾಲ ಬೇಗ ಬರಲಿ ಎಂದು ನಿರೀಕ್ಷೆಯಲ್ಲಿರಬೇಕಷ್ಟೇ ! ಈಗೀಗ ಕೆಲವರು ಯುವಕ ವಿದ್ವಾಂಸರು ಇಂಥ ಕೆಲಸವನ್ನು ಮಾಡುತ್ತಿರುವುದು ಸಂತೋಷದ ವಿಚಾರ.

೩. **ನಾನಾರ್ಥ ಪದಕೋಶ**

೪. **ಗ್ರಾಮ್ಯ ಪದಕೋಶ**

೫. **ಪಾರಿಭಾಷಿಕ ಕೋಶಗಳು (ವೈಜ್ಞಾನಿಕ)**

೬. **ನ್ಯಾಯ ಪದಕೋಶ**

೭. **ಆಡಳಿತ ಪದಕೋಶ**

೮. **ಜ್ಞಾತಿಶಬ್ದಕೋಶ**

೯. **ಆಗಮ, ಶಿಲ್ಪ, ನಾಟ್ಯ, ಸಂಗೀತ, ಚಿತ್ರಕಲೆ, ಆಯುರ್ವೇದ ಮುಂತಾದ ಶಾಸ್ತ್ರಗಳ ಕೋಶಗಳು.**

೧೦. **ಗಾದೆಗಳ ಕೋಶ**

೧೧. **ನುಡಿಗಟ್ಟುಗಳ ಕೋಶ**

೧೨. **ವಾಗ್ರೂಢಿಗಳ ಕೋಶ**

೧೩. **ಸಮಾನಾರ್ಥ ಪದಕೋಶ**

೧೪. **ನೂತನ ಶಬ್ದಗಳ ಶಬ್ದಕೋಶ**

೧೫. **ಎರವಲು ತಂದಿರುವ ಶಬ್ದಗಳ ಕೋಶ**

೧೬. **ಕಲಿಸುವವರ ಕಲಿಯುವವರ ಹಂತ ಹಂತದ ಕೋಶಗಳು**

೧೭. **ವಿಶಿಷ್ಟ ವರ್ಗಗಳ ಶಬ್ದಕೋಶ** (Argot Dictionary ಇತ್ಯಾದಿ) (ಇದು ಕಳ್ಳತನ, ಜೇಬುಗಳ್ಳತನ, ದರೋಡೆ ಮುಂತಾದ ಕುಖ್ಯಾತ ವೃತ್ತಿಗಳವರು ಉಪಯೋಗಿಸುವ ಶಬ್ದಗಳಿಗೆ ಸಂಬಂಧಪಟ್ಟದ್ದು)

ಪಟ್ಟಿಯನ್ನು ನಿಲ್ಲಿಸಿದ ಮಾತ್ರಕ್ಕೆ ಕೆಲಸ ಪೂರೈಸಿದಂತಲ್ಲ. ಇದು ಕೆಲಸದ ವೈಶಾಲ್ಯಕ್ಕೆ ಇರುವ ತೋರುಗೈ ಅಷ್ಟೇ!

ಇಂಗ್ಲಿಷ್ ಭಾಷೆಯಲ್ಲಿ ಸಿದ್ಧವಾಗಿರುವ ನಿಘಂಟುಗಳ ವ್ಯಾಪ್ತಿಯನ್ನೂ ಸಂಖ್ಯೆಯನ್ನೂ ಗಮನಿಸಿದರೆ ನಮಗೆ ಆಶ್ಚರ್ಯವಾಗುತ್ತದೆ. ಎರಡು ಉದಾಹರಣೆಯನ್ನು ಮಾತ್ರ ನೀಡುತ್ತೇನೆ.

೧. A Dictionary of Espionage.

೨. A Dictionary of Diseased words.

ಇವುಗಳಲ್ಲಿ ಕ್ರಮವಾಗಿ ೧. ಗೂಢಾಚಾರ ವೃತ್ತಿಯಲ್ಲಿ ನಿರತರಾಗಿರುವವರು ಉಪಯೋಗಿಸುವ ಶಬ್ದಗಳ ವೈವಿಧ್ಯವೂ, ಅವರು ಸೃಷ್ಟಿಸುವ ನೂತನ ಶಬ್ದಗಳ ರೀತಿಯೂ,

೨. ಇಂಗ್ಲಿಷ್ ಭಾಷೆಯಲ್ಲಿ ಶಬ್ದ ಪ್ರಯೋಗದಲ್ಲಿ ನಡೆದಿರುವ ದುರವಸ್ಥೆಯೂ ಚಿತ್ರಿತವಾಗಿವೆ. ಓದಲು ಕಥೆಗಳಂತೆ ರಮ್ಯವಾಗಿರುವ ಈ ರೀತಿಯ ನಿಘಂಟು ರಚನೆಗೆ ಭದ್ರವಾದ ಬುನಾದಿಯನ್ನು ನಾವು ಆದಷ್ಟು ಶೀಘ್ರವಾಗಿ ಸಿದ್ಧಪಡಿಸಬೇಕು.

೧೮. ಸರ್ವಪದಪ್ರಯೋಗ ಕೋಶಗಳು

ಒಬ್ಬ ಕವಿಯ ಒಂದು ಗ್ರಂಥದ ಎಲ್ಲ ಶಬ್ದ ಪ್ರಯೋಗಗಳನ್ನೂ ಕ್ರೋಡೀಕರಿಸಿ, ಅಂಥ ಶಬ್ದಗಳನ್ನು ಆ ಕವಿ ಎಷ್ಟು ಅರ್ಥಗಳಲ್ಲಿ ಪ್ರಯೋಗಿಸಿದ್ದಾನೆ, ಆತನ ವಿಶಿಷ್ಟ ಶಬ್ದಗಳು ಯಾವುವು, ಎಷ್ಟು ಅಪೂರ್ವ ಶಬ್ದಗಳ ಪ್ರಯೋಗಗಳು ದೊರಕುತ್ತವೆ. ಆತನಲ್ಲಿ ಪ್ರಾಚೀನ ಶಬ್ದಗಳ ಪ್ರಯೋಗ ಹೆಚ್ಚೋ, ಆಧುನಿಕ ಶಬ್ದಗಳಿವೆಯೋ, ಸಂಸ್ಕೃತ ಪ್ರಾಚುರ್ಯವುಳ್ಳದ್ದೋ, ಕನ್ನಡ ಶಬ್ದಗಳಿಗೆ ತಕ್ಕ ಸ್ಥಾನ ದೊರಕಿದೆಯೋ ಮುಂತಾದ ಶೈಲಿಶಾಸ್ತ್ರದ ಸಂಶೋಧನೆಗೆ ಸಹಾಯಕವಾಗುವ ಪದಪ್ರಯೋಗ ಕೋಶಗಳನ್ನು ಸಿದ್ಧಪಡಿಸಬೇಕು. ಇಂಥ ನಿಘಂಟುಗಳನ್ನು ಇಂಗ್ಲಿಷಿನಲ್ಲಿ Exegetic Dictionaries ಎಂದು ಕರೆಯುತ್ತಾರೆ. ಕನ್ನಡದಲ್ಲಿ ಇಂಥವು ಕೆಲವು ನಿಘಂಟುಗಳಿವೆ. ಇಂಗ್ಲಿಷಿನಲ್ಲಿರುವ ಡಾ. ಬಿ. ರಾಮಚಂದ್ರರಾವ್ ಅವರ 'A Descriptive Grammar of Pampa Bharata' ಎಂಬುದು ಈ ರೀತಿಯಲ್ಲಿ ಸಿದ್ಧವಾದ ಮೊದಲ ಗ್ರಂಥ. ಈ ಗ್ರಂಥದಲ್ಲಿ ಎರಡನೆಯ ಭಾಗವಾಗಿ ಪಂಪ ಭಾರತದ ಸರ್ವಪದಪ್ರಯೋಗ ಕೋಶವು ಸೇರಿಕೊಂಡಿದೆ. ಪಂಪನ ಆದಿಪುರಾಣದ ಶಬ್ದಗಳು ಇದರಲ್ಲಿ ಸೇರಿಲ್ಲ. ಅದು ಸೇರುವ ತನಕ ಪಂಪನ ಸರ್ವಶಬ್ದಗಳ ನಿಘಂಟು ತಯಾರಾದ ಹಾಗಾಗುವುದಿಲ್ಲ. ಹಿಂದಿಯಲ್ಲಿ ತುಲಸಿಯ ಮಾನಸಕೋಶದಂತೆ, ಇಂಗ್ಲೀಷಿನಲ್ಲಿ Dictionary of Shakespeare ಗ್ರಂಥದಂತೆ ಈ ಕೋಶಗಳು ಸಿದ್ಧವಾಗಬೇಕು. ಪ್ರೊ. ಡಿ.ಎಲ್. ನರಸಿಂಹಾಚಾರ್ಯರು ರುಗ್ಣ ಶಯ್ಯೆಯಲ್ಲಿ ಸಿದ್ಧಪಡಿಸಿದ ಪಂಪಭಾರತ ದೀಪಿಕೆಯೂ ಹೀಗೆಯೇ ಅಪೂರ್ಣವಾಗಿ ನಿಂತುಕೊಂಡಿತು. ಅವರ ವಡ್ಡಾರಾಧನೆಯನ್ನು ಕುರಿತ ಗ್ರಂಥ ಸರ್ವಪದಪ್ರಯೋಗ ಕೋಶವಾಗಿದೆ. 'ಮಹಾಕವಿ ಹರಿಹರನ ಕೃತಿಗಳ ಪದಕೋಶ' ಎಂಬ ಡಾ. ಬಸವರಾಜ ಮಲಶೆಟ್ಟಿ ಅವರ ಗ್ರಂಥವೊಂದು ತಯಾರಾಗಿದೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಪದಪ್ರಯೋಗ ಕೋಶವನ್ನು ಶ್ರೀ ಟಿ.ಎಲ್. ಬ್ಯಾಡಗಿ ಮತ್ತು ಶ್ರೀ ಎಸ್.ಆರ್. ಗುಂಜಾಳ ಅವರು ಸಿದ್ಧಪಡಿಸಿದ್ದಾರೆ. ಶ್ರೀ ಗುಂಜಾಳರ ಬಸವಣ್ಣನವರ ವಚನ ಪದಪ್ರಯೋಗ ಕೋಶವು ಬಹು ಹಿಂದೆಯೇ ಪ್ರಕಟವಾಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಇವು ಒಬ್ಬ ಲೇಖಕನ ಸರ್ವಪದಪ್ರಯೋಗಗಳ ಕೋಶ. ಇನ್ನು ಈ ಪ್ರಯೋಗಗಳಿಗೆ ಅರ್ಥವನ್ನು ಹುಡುಕುವ ಕೆಲಸವನ್ನು ಮತ್ತೆ ಕೈಗೊಳ್ಳಬೇಕು. ಆ ಕಾರ್ಯ ಇನ್ನೂ ಕಷ್ಟಕರವಾದ ಕಾರ್ಯ. ಒಂದು ಭಾಷೆಯಲ್ಲಿ ಸಿಕ್ಕುವ ಎಲ್ಲ ಶಬ್ದಗಳ ಸಂಪೂರ್ಣ ಕೋಶವನ್ನು ಸಿದ್ಧಪಡಿಸಬೇಕಾದರೆ ಆ ಭಾಷೆಯ ಎಲ್ಲ ಪ್ರಧಾನಗ್ರಂಥಗಳಿಗೂ ಇಂಥ ಕೋಶಗಳನ್ನು ಮೊದಲು ಸಿದ್ಧಪಡಿಸಬೇಕು. ಇಂಗ್ಲಿಷಿನಲ್ಲಿ concordance ಎಂಬ ಶಬ್ದಕ್ಕೆ ಒಬ್ಬ ಕವಿಯ ಎಲ್ಲ ಶಬ್ದ ಪ್ರಯೋಗಗಳ ಪಟ್ಟಿ ಎಂದೇ ಅರ್ಥ. ಶಬ್ದ, ಆ ಶಬ್ದ ಬರುವ ಪ್ರಯೋಗ ಇವುಗಳನ್ನು ತಿಳಿಸುವುದು ಮಾತ್ರ ಅದರ ಕೆಲಸ. ಆದರೆ ಅಂಥ ಗ್ರಂಥಗಳಲ್ಲಿ ಶಬ್ದಗಳ ಅರ್ಥವೂ ಸೇರಿದರೆ

ಅವು (Exegetic Dictionary) ಸರ್ವಶಬ್ದ ಪ್ರಯೋಗಾರ್ಥಗಳ ನಿಘಂಟುಗಳಾಗುತ್ತವೆ. ಇಂಥ ಕೆಲಸ ನಮ್ಮಲ್ಲಿ ಆಗಿರುವುದು ಕಡಿಮೆ. ಒಂದು Exegetic Dictionmary, ಸಂಪೂರ್ಣವಾಗಬೇಕಾದರೆ ಅದರಲ್ಲಿ ಆ ಗ್ರಂಥದ ಎಲ್ಲ ಶಬ್ದಗಳನ್ನೂ ಉಲ್ಲೇಖ ಮಾಡಿರಬೇಕು. ಅಂಥ ಶಬ್ದಗಳಿಗೆ ಬರುವ ಎಲ್ಲ ಅರ್ಥಗಳನ್ನೂ ಪ್ರಯೋಗ ಸಹಿತ ಸೂಚಿಸಿರಬೇಕು. ಪ್ರಯೋಗಗಳ ಸಂದರ್ಭಗಳನ್ನು ಸಂಧಿ, ಅಧ್ಯಾಯ, ಸರ್ಗ ಇವುಗಳ ಸಂಖ್ಯೆಯೊಡನೆ ಪದ್ಯ ಸಂಖ್ಯೆಯನ್ನು ಸೇರಿಸಿರಬೇಕು. ಗದ್ಯ ಗ್ರಂಥವಾದರೆ ಗ್ರಂಥದ ಪುಟ ಮತ್ತು ಆ ಶಬ್ದ ಬರುವ ಸಾಲು-ಇವುಗಳ ಸಂಖ್ಯೆಯನ್ನು ಗುರುತಿಸಿರಬೇಕು. ಕೆಲವು ವೇಳೆ ಶಬ್ದಗಳು ಎಷ್ಟು ಬಾರಿ ಪ್ರಯೋಗವಾಗಿವೆ ಎಂಬುದನ್ನು ತಿಳಿಸಿ ಶಬ್ದದ ಪುನರಾವೃತ್ತಿಯನ್ನೂ ಹೇಳಬೇಕಾಗುತ್ತದೆ. ಇಂಥ ನಿಘಂಟುಗಳಲ್ಲಿ ಮುಖ್ಯೋಲ್ಲೇಖಗಳ ಅರ್ಥವನ್ನು ನೀಡಿ ನಿಘಂಟುಕಾರರು ವಿರಮಿಸುವುದಿಲ್ಲ. ಆ ಶಬ್ದದ ಬಗ್ಗೆ ವಿಶ್ವಕೋಶದ ಮಾದರಿಯಲ್ಲಿ ಏನೇನು ವಿವರಗಳು ದೊರಕುತ್ತವೆಯೋ ಅವೆಲ್ಲವನ್ನೂ ದಾಖಲಿಸಿರುತ್ತಾರೆ. ಅಂಕಿತನಾಮಗಳನ್ನೂ ನಿಘಂಟುಗಳಲ್ಲಿ ಬಿಡುವುದು ಸಾಮಾನ್ಯವಾದರೂ ಇಂಥ ನಿಘಂಟುಗಳಲ್ಲಿ ಅವನ್ನೂ ಉಲ್ಲೇಖಿಸಬೇಕು. The New Lexicon-Webster's Dictionary of The English Lanmguageನಲ್ಲಿ ಹೀಗೆ ಪ್ರಮುಖ ಅಂಕಿತನಾಮಗಳನ್ನೆಲ್ಲ ಸೇರಿಸಲಾಗಿದೆ. ಆಯಾ ಗ್ರಂಥಕ್ಕೆ ವಿಶೇಷವಾಗಿರುವ ನೂತನ ಶಬ್ದಗಳನ್ನೂ ಎತ್ತಿ ತೋರಿಸಲಾಗುತ್ತದೆ. ಉದಾಹರಣೆಗೆ ದರ್ಪ, ದರ್ಪಕ ಎಂಬ ಸಂಸ್ಕೃತ ಶಬ್ದಗಳಿಗೆ ತದ್ಭವಗಳನ್ನು ಮಾಡಿ ದಪ್ಪ, ದಪ್ಪಗ ಎಂದು ಉಪಯೋಗಿಸುವ ಕಬ್ಬಿಗರ ಕಾವದ ಅಂಡಯ್ಯನಿಗೆ ಒಂದು ವಿಶೇಷ ಸ್ಥಾನ ದೊರಕುತ್ತದೆ. ಭಾಷೆಯ ಚಾರಿತ್ರಿಕ ನಿಘಂಟನ್ನು ಸಿದ್ಧಪಡಿಸಲು ಇಂಥ ಉಲ್ಲೇಖಗಳು ಅತಿಹೆಚ್ಚಿನ ಸಹಾಯವನ್ನು ನೀಡುತ್ತವೆ.

೧೯. ಏಕ ಭಾಷಾ ನಿಘಂಟುಗಳು (Monolingual Dictionaries) ಶಬ್ದೋಲ್ಲೇಖಕ್ಕೂ ಅರ್ಥನಿರೂಪಣೆಗೂ ಒಂದೇ ಭಾಷೆಯನ್ನು ಉಪಯೋಗಿಸಬೇಕಾದುದು ಸರಿಯೇ ತಾನೆ ! ಇಂಥ ನಿಘಂಟುಗಳನ್ನು ನಾವು ವಿವರಣಾತ್ಮಕ ನಿಘಂಟುಗಳು ಎಂದು ಕರೆಯಬಹುದು. ಏಕೆಂದರೆ ಅಂಥ ನಿಘಂಟುಗಳಲ್ಲಿ ಶಬ್ದದ ಕಾಗುಣಿತ, ವ್ಯಾಕರಣದ ವಿಶೇಷಾಂಶಗಳು, ಅರ್ಥ ವ್ಯುತ್ಪತ್ತಿ-ಇವುಗಳನ್ನು ಸಮರ್ಥಿಸಲು ಬೇಕಾದ ಅನೇಕ ಕವಿ ಪ್ರಯೋಗಗಳು ಇವೆಲ್ಲವನ್ನೂ ನೀಡಲಾಗುತ್ತದೆ. ವಿಶ್ವಕೋಶದ ಮಾದರಿಯ ಅನೇಕ ವಿವರಗಳನ್ನು ಸೇರಿಸಬೇಕಾಗುತ್ತದೆ. ವಾರ್ತಾಪತ್ರಿಕೆಗಳು, ಮಾಸಪತ್ರಿಕೆಗಳು, ವಾರಪತ್ರಿಕೆಗಳು-ಅಲ್ಲಿ ಬರುವ ಶಬ್ದಗಳೂ ಮುಖ್ಯ. ಕನ್ನಡದಂಥ ಭಾಷೆಗೆ ಸಿದ್ಧಪಡಿಸಲಾಗುವ ಬೃಹನ್ನಿಘಂಟಿನಲ್ಲಿ ಇಂಥ ಎಲ್ಲ ವಿಷಯಗಳೂ ಸೇರಿರಲೇಬೇಕು. ಒಂದು ಕಡೆ ಇಂಥ ದೊಡ್ಡ ಖಜಾನೆ ಸಿದ್ಧವಾದರೆ ಬಳಿಕ ಇದರಿಂದ ಬೇಕಾದಾಗ ಬೇಕಾದಷ್ಟು ಶಬ್ದನಾಣ್ಯಗಳನ್ನು ಬಳಸಲು ಸಾಧ್ಯವಾಗುತ್ತದೆ.

೪. ಗ್ರಂಥ ಸಂಪಾದನೆಯ ಪ್ರಾಮುಖ್ಯ

ಗ್ರಂಥ ಸಂಪಾದನೆಯು ಸರಿಯಾಗಿ ಆಗದಿದ್ದರೆ ತಪ್ಪುಗಳು ಹೇಗೆ ಉಳಿದುಕೊಳ್ಳುತ್ತವೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಪಂಪನ ಆದಿಪುರಾಣದ ಹದಿನಾಲ್ಕನೆಯ ಆಶ್ವಾಸದಲ್ಲಿ ಬರುವ ೮೪ನೆಯ ಪದ್ಯ ಹೀಗಿದೆ :

ನಿನಗೀ ಷಟ್ಖಂಡ ಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ **ಸೌಂದರ್ಯ**ಮಂ ಕಾದ ಪೆಂಪೀ
ವನಧಿದ್ವೀಪಾಂತರಾಳಕ್ಷಿತಿಯೊಳೆಸೆಗುಮಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ.

ಭರತ ಚಕ್ರವರ್ತಿಯು ತಮ್ಮನಾದ ಬಾಹುಬಲಿಯ ಬಳಿಗೆ ದೂತನನ್ನು ಕಳುಹಿಸಿ "ಈಶ ಶಾಸನಮಂ ನೆತ್ತಿಯೊಳಾಂತು ಬನ್ನಿಂ ಎರಗಿಂ ಚಕ್ರೇಶಪಾದಾಬ್ಜದೊಳ್" ಎಂಬ ವರ್ತಮಾನವನ್ನು ಮುಟ್ಟಿಸಿದಾಗ ಬಾಹುಬಲಿ "ಸಂಗರ ನಿಷದೊಳ್ ಎಮ್ಮಂದಮಂ ನೀನೆ ಕಾಣ್ಬಯ್" ಎಂದು ಉತ್ತರವನ್ನು ಕೊಟ್ಟು ಅವನನ್ನು ಹಿಂದಕ್ಕೆ ಕಳುಹಿಸಿದನು. ಅವನು ಹಿಂದಿರುಗಿ ಭರತ ಚಕ್ರವರ್ತಿಗೆ ತಿಳಿಸಿದ ಬುದ್ಧಿವಾದದ ಮಾತು ಮೇಲಿನ ಪದ್ಯದಲ್ಲಿದೆ.

ಈ ಪದ್ಯದಲ್ಲಿರುವ **ಸೌಂದರ್ಯ** ಎಂಬ ಶಬ್ದಕ್ಕೆ ಅರ್ಥವೇ ಇಲ್ಲ. ಶ್ರೀ ಎಲ್. ಗುಂಡಪ್ಪನವರು ಆದಿಪುರಾಣವನ್ನು ಸಂಗ್ರಹಿಸಿದಾಗಲೂ ಈ ಪದ್ಯ ಈ ಪದ ಹಾಗೆಯೇ ಉಳಿದು ಬಂತು. ಚೆನ್ನಾಗಿ ಪರಿಶೀಲಿಸಿದರೆ ಇಲ್ಲಿರುವ ಶಬ್ದ **ಸೌದರ್ಯ**. ಸೌದರ್ಯ ಎಂದರೆ ಸೋದರಭಾವ. ಸಹೋದರತ್ವ. ಈ ಶಬ್ದ ಸಾಮಾನ್ಯವಾಗಿ ಉಪಯೋಗದಲ್ಲಿಲ್ಲ. ಜನರು ಕೇಳಿರದ ಶಬ್ದ. ಆದುದರಿಂದ ಲಿಪಿಕಾರ ಆ ಶಬ್ದವಿರಬೇಕಾದ ಕಡೆ ಜನರಿಗೆಲ್ಲರಿಗೂ ಗೊತ್ತಿರುವ ಸೌಂದರ್ಯ ಎಂಬ ಶಬ್ದವನ್ನು ಮೂಡಿಸಿಬಿಟ್ಟ. ಆ ತಪ್ಪು ಅನೇಕ ವರ್ಷಗಳು ಹಾಗೆಯೇ ಉಳಿದುಕೊಂಡು ಬಂತು. ಸೌದರ್ಯ ಎಂಬ ಶಬ್ದದಿಂದ ಆ ಪದ್ಯಕ್ಕೆ ಬರುವ ಭಾವಪೂರ್ಣತೆ ಸೌಂದರ್ಯಕ್ಕೆ ಬರುವುದಿಲ್ಲ. ಇಂಥ ಕಡೆಗಳಲ್ಲಿ ಯಾವ ಅನುಮಾನವೂ ಇಲ್ಲದೆ ಆ ಶಬ್ದವನ್ನೇ **ಸೌದರ್ಯ**ವೆಂದು ತಿದ್ದಬಹುದು.

ಮತ್ತೊಂದು ದೃಷ್ಟಾಂತವನ್ನು ನೀಡಬಹುದು. ಹನ್ನೊಂದನೆಯ ಶತಮಾನದ ಶಾಸನವೊಂದರಲ್ಲಿ (ಸೌ.ಇ.ಇ. ೧-೧) ಒಂದು ಭಾಗ ಹೀಗೆ ಬರುತ್ತದೆ : "ಕುರುಳ ಮುಡಿಯಂ ದಂತಮನುರಮಂ ಕುಗೆಯನೂರುವಂ ಬೆರಳಂ ದೇಮರಸಂಗೆ ಕೊಟ್ಟು ಸತಿಯರ್ವರೆ." ಇಲ್ಲಿ

ದೇಮರಸನಿಗೆ ಸತಿಯರು ತಮ್ಮ ಸರ್ವಸ್ವವನ್ನು ಒಪ್ಪಿಸುವ ಮಾತು ಬರುತ್ತದೆ. ಕುರುಳು, ಮುಡಿ, ದಂತ, **ಕುಗೆ**, **ಊರು**, ಬೆರಳು, ಇತ್ಯಾದಿ. ಇಲ್ಲಿ ಕುಗೆ ಶಬ್ದಕ್ಕೆ ಅರ್ಥ ಮಾಡುವುದು ಕಷ್ಟ. ಈ ಶಬ್ದಕ್ಕೆ ಜ್ಞಾತಿಶಬ್ದಗಳಿವೆಯೇ ಎಂದು ಹುಡುಕಿದಾಗ ತಮಿಳಿನ ಕೊಂಗೈ ಶಬ್ದ ಸಿಕ್ಕಿತು. ಮಲಯಾಳದಲ್ಲಿ ಕೊಂಗ ಶಬ್ದ ಸಿಕ್ಕಿತು. ಕುಇ ಭಾಷೆಯಲ್ಲಿ ಕಂಗುರಿ ಸಿಕ್ಕಿತು. ಈ ಎಲ್ಲ ಶಬ್ದಗಳಿಗೂ ಸ್ತನ ಎಂದು ಅರ್ಥ. ಆದುದರಿಂದ ಇಲ್ಲಿರುವ ಶಬ್ದ ಕುಂಗೆ ಇರಬೇಕೆಂದು ತೀರ್ಮಾನಿಸುವುದು ಸುಲಭವಾಯಿತು. ಇಂಥ ಸಂದರ್ಭಗಳಲ್ಲಿ ಒಂದು ದಿನವೆಲ್ಲ ಈ ಹುಡುಕಾಟದಲ್ಲಿ ಕಳೆದುಹೋಗುತ್ತದೆ. ಅದಕ್ಕೆ ಅಗತ್ಯವಾದ ತಾಳ್ಮೆಯನ್ನು ನಿಘಂಟುಕಾರ ಹೊಂದಿರಬೇಕು. ಕನ್ನಡದಲ್ಲಿ **ಕುಂಗೆ** ಶಬ್ದಕ್ಕೆ ಉತ್ತರ ಕನ್ನಡದಲ್ಲಿ **ಹೆಗಲು** ಎಂಬ ಅರ್ಥವಿದೆ. ಖಚಿತವಾಗಿ ಈ ಪದ್ಯದಲ್ಲಿ ಇದೇ ಸರಿಯಾದ ಅರ್ಥವಾಗುತ್ತದೆ.

ಸಂಸ್ಕೃತದಲ್ಲಿ ಅರ್ಕ ಶಬ್ದಕ್ಕೆ ಸೂರ್ಯ ಮುಂತಾದ ಅರ್ಥಗಳ ಜೊತೆಯಲ್ಲಿ ರಸ ಎಂಬ ಅರ್ಥವಿದೆ. ಇದಕ್ಕೆ ಪ್ರಾಚೀನವಾದ ಉಲ್ಲೇಖಗಳಿಲ್ಲ. ಆಯುರ್ವೇದದ ಔಷಧಗಳಲ್ಲಿ ಅರ್ಕ ಎಂಬ ಶಬ್ದ ಸಿಕ್ಕುತ್ತದೆ. ಈ ಅರ್ಕವು ಅರಬ್ಬಿಯ ಅರಕ್ = ಮರದಿಂದ ತೆಗೆದ ಮದ್ಯ ಕಷಾಯ ಎಂಬರ್ಥದ ಶಬ್ದದಿಂದ ಬಂದಿದೆ ಎಂದು ಹೇಳುವ ವಿದ್ವಾಂಸರಿದ್ದಾರೆ. ಅಫೀಮು ಎಂಬುದಕ್ಕೆ ಸಂಸ್ಕೃತದಲ್ಲಿ ಉಪಯೋಗಿಸುವ ಅಫೇನ ಅಥವಾ ಅಹಿಫೇನ ಎಂಬುದು ಸಂಸ್ಕೃತವಲ್ಲ. ಅದಕ್ಕೆ ಮೂಲ ಗ್ರೀಕ್ ಭಾಷೆಯ 'ಒಫಿಯೋನ್' ಎನ್ನುತ್ತಾರೆ. ಇಂಥ ವಿಚಾರಗಳನ್ನು ನಿಘಂಟುಕಾರ ವಿಮರ್ಶಿಸಬೇಕು.

ಕೆಲವು ವೇಳೆ ಆಡುಮಾತಿನಲ್ಲಿರುವ ತಪ್ಪುಗಳನ್ನು ನಾವು ಎತ್ತಿ ತೋರಿಸಬೇಕಾಗುತ್ತದೆ. ಒಂದು ದೃಷ್ಟಾಂತವನ್ನು ನೋಡೋಣ : ನಾವು, ಜನರು ಆಡುಮಾತಿನಲ್ಲಿ ಆ ಹುಡುಗಿಗೆ 'ಲಂಗಿಲ್ಲ ಲಗಾಮಿಲ್ಲ' ಎನ್ನುವುದನ್ನು ಕೇಳಿದ್ದೇವೆ. ಇದಕ್ಕೇನು ಅರ್ಥ? **ಲಂಗಿಲ್ಲ** ಎಂಬ ಶಬ್ದದಲ್ಲಿರುವ ಸಂಧಿಯನ್ನು ಬಿಡಿಸಿದರೆ ಅದು ಲಂಗು + ಇಲ್ಲ=ಲಂಗಿಲ್ಲ ಅಥವಾ ಲಂಗ + ಇಲ್ಲ=ಲಂಗಿಲ್ಲ ಎಂದಾಗಬೇಕು. ಈ ಆಡುಮಾತಿನಲ್ಲಿ ಲಂಗದ ಮಾತಾಗಲಿ ಅರ್ಥವಿಲ್ಲದ ಲಂಗು ಶಬ್ದದ ಸಂಬಂಧವಾಗಲಿ ಇರಲಾರದು. ಹಾಗಾದರೆ ಮತ್ತೇನು ? ಎಂಬ ಪ್ರಶ್ನೆ ಮುಂದೆ ಬರುತ್ತದೆ. ಇದನ್ನು ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಲಗಾಮು ಶಬ್ದದಿಂದ ಪ್ರಯೋಜನವಾಗಬೇಕು. ಲಗಾಮು ಕುದುರೆಯನ್ನು ಹತೋಟಿಗೆ ತರುವ ಸಾಧನ. ಹಾಗೆಯೇ ಅದರ ಜೊತೆಯ ಶಬ್ದವಾಗಿರುವ 'ಲಂಗಿಲ್ಲ' ಎಂಬಲ್ಲಿ ಅಡಗಿರುವ ಶಬ್ದವೂ ಅದೇ ಬಗೆಯ ಅರ್ಥವನ್ನು ಕೊಡಬೇಕಾಗುತ್ತದೆ. ಲಗಾಮಿಲ್ಲ ಎಂದರೆ ಹಿಡಿತವಿಲ್ಲ. ಆದುದರಿಂದ ಲಂಗಿಲ್ಲ ಎಂಬುದು ಅದೇ ಅರ್ಥವನ್ನು ಹೊಂದಿರಬೇಕು. ಆಗ ನಮಗೆ ಹೊಳೆಯುತ್ತದೆ. ಆ ಶಬ್ದ ಲಂಗಿಲ್ಲ ಎಂಬುದಲ್ಲ. ಅದು ಲಂಗರಿಲ್ಲ. **ಲಂಗರ್** ಹಡಗು ಅಥವಾ ದೋಣಿಯನ್ನು ಚಲಿಸದಂತೆ ಹತೋಟಿಯಲ್ಲಿಡುವ ಸಾಧನ. ಲಂಗರಿಲ್ಲ ಎನ್ನುವ ಶಬ್ದ ಲಂಗಿಲ್ಲ ಆಗಿ ಪ್ರಯೋಗವಾಗುತ್ತ ಇದೆ. ಹೀಗಾಗಿ ಲಂಗಿಲ್ಲ ಲಗಾಮಿಲ್ಲ ಎಂಬ ಮಾತಿನ ಅರ್ಥ ಎಲ್ಲರಿಗೂ ತಿಳಿದಿದ್ದರೂ ಅದರ ಸರಿಯಾದ ಸ್ವರೂಪ ಯಾರಿಗೂ ತಿಳಿದಿಲ್ಲ ಎಂಬುದೂ ಸ್ಪಷ್ಟವಾಗುತ್ತದೆ.

ಇಂಥ ಅಡುಮಾತಿನ ಪ್ರಮಾದಗಳನ್ನು ತಿದ್ದುವ ಕಾರ್ಯವೇ ಒಂದು ಸಂಶೋಧನೆಯ ಕ್ಷೇತ್ರವಾಗಿದೆ, ಈಗ.

ಆಧುನೀಕರಣ, ಪಾಶ್ಚೀಕರಣ ಎಂಬ ವಿಚಿತ್ರ ಪದಗಳನ್ನು ಪರಿಶೀಲಿಸೋಣ. ಆಧುನಿಕ= ಈಗಿನ ಕಾಲದ. ಈ ಶಬ್ದದಿಂದ ಈಗಿನ ಕಾಲದ್ದಾಗಿ ಮಾಡುವಿಕೆ ಎಂಬ ಅರ್ಥ ಬರಬೇಕಾದರೆ ಅದು ಆಧುನಿಕೀಕರಣ ಎಂದೇ ಆಗಬೇಕು. ಬೇಕಾದರೆ ಅದ್ಯತನಕರಣ ಎಂಬ ಬೇರೆ ಶಬ್ದವನ್ನು ಉಪಯೋಗಿಸಬಹುದು. ಆಧುನಿಕಗೊಳಿಸುವಿಕೆ ಎಂದೂ ಹೇಳಬಹುದು.

ಪಾಶ್ಚೀಕರಣಕ್ಕೆ ಅರ್ಥವೇ ಇಲ್ಲ. ಅದು **ಪಾಶ್ಚರೀಕರಣ** ಆಗಬೇಕು. ಪಾಶ್ಚರ್ ಎಂಬ ವಿಜ್ಞಾನಿಯ ಸಂಶೋಧನೆಯ ಫಲವನ್ನು ಕುರಿತು ಉಪಯೋಗಿಸುವ ಶಬ್ದವನ್ನು ಏತಕ್ಕೆ ಮೊಟಕುಗೊಳಿಸಬೇಕು ? ಬರಬರುತ್ತಾ ಅದು ಪಾಚೀಕರಣವಾದರೆ ಗತಿ ಏನು ?

ನಿಘಂಟುಕಾರನು ಇವುಗಳನ್ನು ಸ್ಪಷ್ಟವಾಗಿ ತನ್ನ ನಿಘಂಟಿನಲ್ಲಿ ತೋರಿಸಬೇಕು.

ಕೆಲವು ತಪ್ಪು ಶಬ್ದಗಳು ಭಾಷೆಯಲ್ಲಿ ಗಟ್ಟಿಯಾಗಿ ತಳವೂರಿಬಿಡುತ್ತವೆ. ಅವುಗಳನ್ನು ಅಲ್ಲಾಡಿಸಲಾಗುವುದಿಲ್ಲ. ಇದಕ್ಕೆ ಕಾರಣ ಅನೇಕ ಲೇಖಕರು ಆ ಶಬ್ದಕ್ಕೆ ಅಂಟಿಬಿಡುತ್ತಾರೆ. ಅಂಥ ಶಬ್ದ **ಸೃಜನಶೀಲ**. ಸೃಜ್ ಧಾತುವಿನಿಂದ ಸರ್ಜನ ಎಂಬ ರೂಪಸಾಧಿಸುತ್ತದೆ. ಮೃದ್ ಶಬ್ದದಿಂದ ಮರ್ದನ. ಮೃಜ್ ಶಬ್ದದಿಂದ ಮಾರ್ಜನ ಆದಹಾಗೆ. ಗೃಜ್ ಧಾತುವಿನಿಂದ ಗರ್ಜನ ಆದ ಹಾಗೆ. ಆದರೆ ಸೃಜನಶೀಲ ಶಬ್ದವನ್ನು ಈಗ ನಾವಾರೂ ಮುಟ್ಟುವ ಹಾಗಿಲ್ಲ. ಅದು **ಜಾತ್ಯಾತೀತ, ಕೂಲಂಕುಷ, ಮನರಂಜನೆ, ಜಗದೋದ್ಧಾರ, ಶನೀಶ್ವರ, ಯೋಗೇಶ್ವರ, ಚಂದ್ರಮೌಳೇಶ್ವರ** ಎಂಬ ಅಧಿಕಾರಾರೂಢ ಅಪಶಬ್ದಗಳ ಬಳಿ ಪಟ್ಟಭದ್ರವಾಗಿ ಸ್ಥಾಪಿತವಾಗಿದೆ.

೫. ನಿಘಂಟು ರಚನೆಯ ವಿವಿಧ ಹಂತಗಳು

೧. **ಶಬ್ದ ಸಂಗ್ರಹ** : ಇದು ಮೊದಲ ಹಂತ. ಶಬ್ದ ಸಂಗ್ರಹ ಮಾಡಬೇಕಾದರೆ ಕೆಲವು ಸೂಕ್ತವಾದ ಮಾರ್ಗಗಳಿವೆ. ಹಿಂದೆ ಯಾವುದಾದರೂ ನಿಘಂಟುಗಳು ಸಿದ್ಧವಾಗಿದ್ದರೆ ಅವುಗಳಲ್ಲಿರುವ ಎಲ್ಲ ಶಬ್ದಗಳನ್ನೂ ಪಟ್ಟಿಕೆಗಳಲ್ಲಿ ಬರೆಯಬೇಕು. ಪಟ್ಟಿಕೆ ಈ ರೀತಿಯಾಗಿರಬಹುದು:

ಶಬ್ದ	**ಅರ್ಥ**
ಆಕರ	**ವಿಶೇಷಾಂಶ**
ಪ್ರಯೋಗ	

ಹೀಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿಗಾಗಿ ಲಿಖಿತ ರೂಪದಲ್ಲಿರುವ ಎಲ್ಲ ಆಕರಗಳನ್ನೂ ಉಪಯೋಗಿಸಲಾಗಿದೆ. ೧೯೦೦ರ ವರೆಗೆ ಮುದ್ರಿತವಾದ ಎಲ್ಲ ಪ್ರಮುಖ ಗ್ರಂಥಗಳಿಂದಲೂ ಎಲ್ಲ ಶಬ್ದಗಳನ್ನೂ ಆರಿಸಲಾಗಿದೆ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಹಿಡಿದು ಮುದ್ರಿತವಾದ ಎಲ್ಲ ಶಾಸನಗಳಿಂದಲೂ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಈಚೆಗೆ ೧೯೭೦ರವರೆಗೆ ಪ್ರಕಟವಾದ ಮುಖ್ಯವಾದ ಗ್ರಂಥಗಳನ್ನೆಲ್ಲ ಶೋಧಿಸಲಾಗಿದೆ. ಕಿಟ್ಟೆಲನ ನಿಘಂಟಿನಲ್ಲಿರುವ ಎಲ್ಲ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಅನೇಕ ಹಸ್ತಪ್ರತಿಗಳಿಂದ ಶಬ್ದಗಳನ್ನು ಆಯ್ಕೆ ಮಾಡಲಾಗಿದೆ. ಹೀಗೆ ಇನ್ನೂ ಸಂಗ್ರಹಿಸಬೇಕಾದ ಶಬ್ದಗಳಿವೆ.

ಶಬ್ದಗಳ ಸಂಗ್ರಹ ಪೂರ್ತಿಯಾಗಲಿಲ್ಲವೆಂಬ ಕಾರಣದಿಂದ ನಿಘಂಟು ರಚನೆಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಶಬ್ದಗಳು ಹೊಸ ಹೊಸದಾಗಿ ಸೃಷ್ಟಿಯಾಗುತ್ತಲೇ ಇರುತ್ತವೆ. ಅಂಥ ಶಬ್ದಗಳನ್ನು ಪೂರಕ ಸಂಪುಟಗಳಲ್ಲಿ ಸೇರಿಸಬೇಕು. ಕನ್ನಡ ನಿಘಂಟಿಗೆ ಸುಮಾರು ೨೦೦೦ ಗ್ರಂಥಗಳಿಂದಲೂ ಸುಮಾರು ೧೦,೦೦೦ ಶಾಸನಗಳಿಂದಲೂ ಶಬ್ದಗಳನ್ನು ಸಂಗ್ರಹಿಸಲಾಗಿದೆ. ೧೯೪೩ ರಿಂದ ಆದ ಶಬ್ದ ಸಂಗ್ರಹಗಳನ್ನು ಅಕಾರಾದಿಯಾಗಿ ವಿಂಗಡಿಸುವ ಕ್ರಮ ೧೯೫೧ರಲ್ಲಿ ಪ್ರಾರಂಭವಾಯಿತು. ಆ ಬಳಿಕ ಮೊದಲ ಹಸ್ತಪ್ರತಿಯನ್ನು ಬರೆಯುವ ಕಾರ್ಯ ಮೊದಲಾದುದು ೧೯೫೪ರಲ್ಲಿ. ಹೀಗೆ ಶಬ್ದ ಸಂಗ್ರಹದ ಕಾರ್ಯ ಬಹುಕಾಲವನ್ನು ತೆಗೆದುಕೊಳ್ಳುತ್ತದೆ.

ಶಬ್ದ ಸಂಗ್ರಹ ಮಾಡುವಾಗ ಪ್ರಾಚೀನ ಭಾಷೆ, ಜ್ಞಾತಿ ಭಾಷೆ, ಆಡು ಭಾಷೆ, ಉಪಭಾಷೆ, ಶಬ್ದಗಳನ್ನು ಎರವಲು ಪಡೆದ ಭಾಷೆ ಇತ್ಯಾದಿ ಭಾಷೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಕನ್ನಡದಲ್ಲಿ ಸಾಹಿತ್ಯ, ಶಾಸ್ತ್ರ ಗ್ರಂಥಗಳು, ವ್ಯಾಕರಣಗಳು, ಶಾಸನಗಳು, ಶೈಕ್ಷಣಿಕ ಪುಸ್ತಕಗಳು ಇವುಗಳಿಂದ ಶಬ್ದಗಳನ್ನು ಆಯಬೇಕು. ಆಯುವ ಕೆಲಸವನ್ನು ಮಾಡಲು

ಆ ಕೆಲಸ ಮಾಡುವವರಿಗೆ ಪೂರ್ವವಾಗಿ ಒಂದು ತರಬೇತಿಯನ್ನು ನೀಡಬೇಕು. ಇಲ್ಲದಿದ್ದರೆ ಅಪಶಬ್ದಗಳನ್ನು ಅವರು ನಿರ್ಮಾಣ ಮಾಡಿಬಿಡುತ್ತಾರೆ. ಪಟ್ಟಿಕೆಗಳಿಗೆ ಸಂಖ್ಯೆಯನ್ನು ಕೊಡುವುದು ಒಳ್ಳೆಯದು. ಆದರೆ ಈ ಸಂಖ್ಯೆಯನ್ನು ಗುರುತಿಸುವ ಕೆಲಸ ಆ ಪಟ್ಟಿಕೆಗಳನ್ನು ಅಕಾರಾದಿಯಾಗಿ ವಿಂಗಡಿಸಿದ ಬಳಿಕ ಮಾಡಬೇಕು. ಇಂಥ ಪಟ್ಟಿಕೆಗಳಲ್ಲಿ ಆಕರದ ಹೆಸರು, ಕಾಲ, ಹೊಳೆಯುವ ಅರ್ಥ, ಆ ಶಬ್ದದ ಅರ್ಥವನ್ನು ತಿಳಿಸುವುದಕ್ಕೆ ಸಹಾಯಕವಾಗುವಷ್ಟು ಪ್ರಯೋಗ, ಮತ್ತೇನಾದರೂ ವಿಶೇಷಾಂಶಗಳು ಹೊಳೆದರೆ ಅವು-ಇಷ್ಟನ್ನೂ ಗುರುತಿಸಿರಬೇಕು. ಕೆಲವು ವೇಳೆ ಒಂದು ಶಬ್ದದ ಅರ್ಥ ನಿರ್ಧಾರಕ್ಕೆ ಒಟ್ಟು ಒಂದು ಪದ್ಯವನ್ನೇ ಬರೆಯಬೇಕಾಗಬಹುದು. ಇದರಲ್ಲಿ ಎಚ್ಚರಿಕೆ ವಹಿಸಬೇಕು. ಶಬ್ದಗಳನ್ನು ಯಾವ ಆಯ್ಕೆಗಾರನೂ ತನ್ನ ತೀರ್ಮಾನದಿಂದ ಬಿಡಬಾರದು. ಬಿಡುವ ಕೆಲಸ ಕೊನೆಯದು.

ಈ ಪಟ್ಟಿಕೆಗಳಲ್ಲಿ, ಆಯ್ಕೆಗಾರನಿಗೆ ಸಾಮರ್ಥ್ಯವಿದ್ದರೆ, ಸಮಾನಾರ್ಥ ಶಬ್ದಗಳನ್ನೂ ವಿರುದ್ಧಾರ್ಥ ಶಬ್ದಗಳನ್ನೂ ಗುರುತಿಸಬಹುದು. ಹೀಗೆ ಸಿದ್ಧವಾದುದೇ ಶಬ್ದಭಂಡಾರ (Scriptorium). ಇದರ ಬೆಲೆ ಅಗಾಧ. ಇದನ್ನು ದೊಡ್ಡ ಆಸ್ತಿಯನ್ನು ರಕ್ಷಿಸುವಂತೆ ರಕ್ಷಿಸಬೇಕು. ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿಗೆ ಮಾಡಿದ ಶಬ್ದ ಸಂಗ್ರಹದ ರಾಶಿಯಲ್ಲಿ ಇಲಿಗಳು ನುಗ್ಗಿ ಹಾಳು ಮಾಡಿದ ಕಥೆಯನ್ನು ಆ ಗ್ರಂಥದ ಮೊದಲನೆಯ ಪ್ರಧಾನ ಸಂಪಾದಕನಾದ James A.H. Murrayಯ ಮೊಮ್ಮಗಳಾದ K.M. Elizabeth Murray ತನ್ನ Caught in the Web of Words ಎಂಬ ಗ್ರಂಥದಲ್ಲಿ ತುಂಬ ಚೆನ್ನಾಗಿ ವರ್ಣಿಸಿದ್ದಾಳೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಚೇರಿಯಲ್ಲಿ ಪಾರಿವಾಳಗಳು ಮನೆ ಮಾಡಿಕೊಂಡು ಅಲ್ಲಿನ ಕಾಗದಪತ್ರಗಳನ್ನು ನಾಶ ಮಾಡಿದುದನ್ನು ನಾನೇ ಕಂಡು ಅನುಭವಿಸಿದ್ದೇನೆ.

ಆದುದರಿಂದಲೇ ಇಂಗ್ಲೆಂಡಿನಲ್ಲಿಯೂ ಅಮೇರಿಕದಲ್ಲಿಯೂ ಹೀಗೆ ಸಂಗ್ರಹಿಸಿದ ಶಬ್ದ ಭಂಡಾರವನ್ನು National Archives ಮಾದರಿಯಲ್ಲಿ ರಕ್ಷಿಸಿ ಸಂಶೋಧಕರಿಗೆ ಸಹಾಯ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಎಲ್ಲ ಭಾಷೆಯ ಶಬ್ದ ಸಂಗ್ರಹಗಳಿಗೂ ಹೀಗೆ ರಕ್ಷಣೆ ಮಾಡುವ, Micro Film ಮಾಡಿಸಿ ಇಡುವ, ಪ್ರಯತ್ನ ನಡೆಯಬೇಕು. ಈಗ ಕಂಪ್ಯೂಟರ್ ಸಹಾಯದಿಂದ ಸ್ಕ್ಯಾನ್ ಮಾಡಿ CDಯಲ್ಲಿ ಶೇಖರಿಸಿಡಬಹುದು. ಇವುಗಳಿಂದ ಅನೇಕ ಪ್ರತಿಗಳನ್ನು ತಯಾರಿಸುವುದು ಸುಲಭ. ಬೇರೆ ಬೇರೆ ಕಡೆ ಇರುವ ಸಂಶೋಧಕರಿಗೆ ಇದರಿಂದ ಸಹಾಯವಾಗುತ್ತದೆ. ಬರಬರುತ್ತಾ ಭಾಷಾಶಾಸ್ತ್ರದ ಸಂಶೋಧಕರಿಗೆ ಇದು, ಭಕ್ತರಿಗೆ ಕಾಶಿ ರಾಮೇಶ್ವರ ಕೇದಾರಗಳಂತೆ ಪವಿತ್ರ ಸ್ಥಳವಾಗಿ ಪರಿಣಮಿಸುತ್ತದೆ. ಈ ಅಂಶವನ್ನು ಗಮನಿಸಿ ಈ ಕಡೆ ಕೆಲಸ ಮಾಡುವ ಕಾರ್ಯಕರ್ತರನ್ನು ತಯಾರಿಸಬೇಕು.

ಇಂಥ ಸಂಗ್ರಹದಲ್ಲಿ ಅಂಕಿತನಾಮಗಳನ್ನು ಶೇಖರಿಸಬೇಕೇ ಬೇಡವೆ ಎಂಬುದು ಒಂದು ಮುಖ್ಯವಾದ ಪ್ರಶ್ನೆ. ಸಾಮಾನ್ಯವಾಗಿ ಅಂಕಿತ ನಾಮಗಳನ್ನು ಸೇರಿಸುವುದಿಲ್ಲ. ಆದರೆ ಬೇರೆಯ ಅರ್ಥಗಳು ಇರುವ ಅಂಕಿತನಾಮಗಳು ಸೇರಿಬಿಡುತ್ತವೆ. ಕನ್ನಡ ನಿಘಂಟಿನಲ್ಲಿ ಪಂಪನ ಹೆಸರು ಬರದಿರಬಹುದು; ಆದರೆ ರನ್ನ, ಜನ್ನ, ಬಸವ, ಪುರಂದರ, ಇವರು ಬಂದುಬಿಡುತ್ತಾರೆ.

ಓಬೀರಾಯ ಯಾರೋ ತಿಳಿಯದು. ಆದರೆ ಅವನ ಹೆಸರು ದಾಖಲಾಗಿ ಬಿಡುತ್ತದೆ. ಚಾಣಕ್ಯನ ಹೆಸರು ಉಳಿಯುತ್ತದೆ. ಶಕುನಿ ಖಂಡಿತ ಕಾಣಿಸಿಕೊಳ್ಳುತ್ತಾನೆ.

ಕೇವಲ ಉಪಸರ್ಗಗಳು ನಿತ್, ಉಪ, ದುರ್, ಸು, ಸಮ ಮುಂತಾದವೂ ಕೃ, ಕೆ, ಸ್ಥ ಮುಂತಾದ ಪ್ರತ್ಯಯಗಳೂ ಉಳಿದುಬಿಡುತ್ತವೆ. ಕನ್ನಡದ ಇಸು, ಇಕೆ, ಇ ಇತ್ಯಾದಿ ಎಲ್ಲ ಪ್ರತ್ಯಯಗಳಂತೂ ಇರಲೇಬೇಕು. ಇವುಗಳು ಗ್ರಂಥಗಳಲ್ಲಿ ಸಿಕ್ಕುವುದಿಲ್ಲ. ಇವುಗಳಿಗಾಗಿ ವ್ಯಾಕರಣಗಳ ಮರೆ ಹೋಗಬೇಕು.

ಸಮಾಸ ಶಬ್ದಗಳನ್ನು ದಾಖಲಿಸುವಾಗ ದ್ವಂದ್ವವನ್ನು ಬಿಟ್ಟು ಮಿಕ್ಕ ಸಮಾಸಗಳಲ್ಲಿ ಎರಡಂಶಗಳುಳ್ಳ ಸಮಾಸಗಳನ್ನು ಮಾತ್ರ ಸೇರಿಸುವುದು ಉತ್ತಮ. ವಿಶೇಷ ಸಂದರ್ಭಗಳಲ್ಲಿ ವಿವೇಚನೆಯಿಂದ ತೀರ್ಮಾನವನ್ನು ಕೈಗೊಳ್ಳಬೇಕು. ಗಾದೆಗಳು, ನುಡಿಗಟ್ಟುಗಳು, ವಾಗ್ರೂಢಿಗಳು, ಜೋಡುನುಡಿಗಳು ಇವೆಲ್ಲ ಬರಲೇಬೇಕು. ಇವುಗಳನ್ನು ಮುಖ್ಯ ಉಲ್ಲೇಖದ ಅಡಿಯಲ್ಲಿ ಗುರುತಿಸಬೇಕು. ಕೆಂಪುಪಟ್ಟಿ, ಹಸಿರುನಿಶಾನೆ, ಕೆಂಪುದೀಪ, ಶೂನ್ಯವೇಳೆ ಇತ್ಯಾದಿಗಳನ್ನು ಸೇರಿಸಬೇಕು.

ಬೈಗುಳದ ಶಬ್ದಗಳೂ ಕನ್ನಡದ ನಿಘಂಟಿನಲ್ಲಿ ಸೇರಿವೆ. ಇವನ್ನೂ ಸೇರಿಸಬೇಕೆ ಬೇಡವೇ ಎಂಬ ಪ್ರಶ್ನೆ ಕೆಲವು ಕಾಲ ಚರ್ಚೆಯಲ್ಲಿತ್ತು. ಈಗ ಚರ್ಚೆ ಸತ್ತಿದೆ. ಇತರ ಭಾಷೆಗಳಲ್ಲಿ ಇಂಥ ಶಬ್ದಗಳನ್ನು ನಿಘಂಟುಗಳಲ್ಲಿ ಸೇರಿಸಿದ್ದಾರೆ. ಪ್ರಸಿದ್ಧ ಪತ್ರಿಕಾ ಲೇಖಕರೂ ಗ್ರಂಥಕರ್ತರೂ ಆದ ಖುಷವಂತಸಿಂಗರು ತಮ್ಮ ಅನುಭವವನ್ನು ಒಂದು ಲೇಖನದಲ್ಲಿ ತಿಳಿಸಿದ್ದಾರೆ. "With my own eyes I have seen a committee room of a club in London exclusively meant for retired governors, senior civil servants and boxwallahs with a board reading 'barnsoords only'. The room was meant only for the use of members referred to the nobs (nabour) as barnsoords, an English rendering of bhainchodea (Hindi) ಇದೆ ಕನ್ನಡದ ಬಾಂಚೋತ್.

ಗ್ರಾಮ್ಯ ಮತ್ತು ವಿಶಿಷ್ಟ ಶಬ್ದಗಳನ್ನು ನಿಘಂಟಿಗೆ ಸೇರಿಸುವಾಗ ತುಂಬ ಎಚ್ಚರಿಕೆಯಿಂದ ಇರಬೇಕು. ಬೈಗುಳ ನಿಘಂಟಿನಲ್ಲಿ ಎಲ್ಲ ಶಬ್ದಗಳು ಬರಲಿ. ಆದರೆ ಸಾಮಾನ್ಯ ನಿಘಂಟುಗಳಲ್ಲಿ ಅವುಗಳ ಸ್ಥಾನವೇನು ಎಂಬುದು ತುಂಬ ಸವಿರಾದ ವಿಷಯ.

೨. **ಮುಖ್ಯೋಲ್ಲೇಖಗಳ ಪರೀಕ್ಷೆ** ಎಂಬುದು ಎರಡನೆಯ ಹಂತ. ಕನ್ನಡ ನಿಘಂಟಿನ ಅನುಭವದಿಂದ ಹೇಳುವುದಾದರೆ ಈ ಭಾಗದಲ್ಲಿ ಆಯ್ಕೆ ಮಾಡುವವರು ತಾವೇ ಶಬ್ದವನ್ನು ತಪ್ಪು ಎಂದು ತಿಳಿದು ಬಿಡುವುದಕ್ಕಿಂತ ಅಂಥ ಶಬ್ದಗಳನ್ನು ಇಟ್ಟಿರುವುದು ಮೇಲು. ನಿಧಾನವಾಗಿ ಅವುಗಳ ತಪ್ಪು ಸರಿಗಳನ್ನು ಸಂಪಾದಕರೇ ಪರಿಶೀಲಿಸಬಹುದು. ಒಂದೆರಡು ದೃಷ್ಟಾಂತಗಳಿಂದ ಈ ಅಂಶವನ್ನು ಸ್ಪಷ್ಟಪಡಿಸುತ್ತೇನೆ : ನಾನು ಕೊನೆಯ ಹಸ್ತಪ್ರತಿಯನ್ನು ಪರಿಶೀಲಿಸುವುದಕ್ಕೆ ಮೊದಲು ಮಾಡಿದಾಗ ಕೆಲವು ಶಬ್ದಗಳು ಆಶ್ಚರ್ಯಕರ ಸ್ವರೂಪವುಳ್ಳವಾಗಿ ನನಗೆ ಕಂಡುಬಂದುವು. ೧. ರಚ್ಚೆ ೨. ಖುಬುಕಿ, ೩. ಚದುರರಸ, ಪಟ್ಟಿಕೆಗಳನ್ನು ಪರಿಶೀಲಿಸಿವಾಗ

ಆಗಿದ್ದ ಲೋಪ ಯಾವುದು ಎಂಬುದು ಸ್ಪಷ್ಟವಾಯಿತು. ಮೊದಲನೆಯದಕ್ಕೆ ಕಾರಣ ವಾಚನದ ದೋಷ. ರಬ್ಬೆ ಎಂಬ ಶಬ್ದವೇ ಅಲ್ಲಿರಲಿಲ್ಲ. 'ಸೂಳೆಯರಬ್ಬೆಗೆ' ಎಂಬ ಭಾಗ ಮೊದಲ ಸಾಲಿನ ಕೊನೆಯಲ್ಲಿ ಸೂಳೆಯ ಎಂದು ನಿಂತು ಮುಂದಿನ ಸಾಲಿನಲ್ಲಿ ರಬ್ಬೆಗೆ ಎಂದಿದೆ. ಓದುವವರು ಅದನ್ನು ಸೂಳೆಯರ ಅಬ್ಬೆಗೆ ಎಂದು ವಿಭಾಗ ಮಾಡಿಕೊಳ್ಳದೆ ಹೋದುದರಿಂದ ಒಂದು ಅಪ ಶಬ್ದ ತಲೆ ಎತ್ತಿತ್ತು. ಎರಡನೆಯ ಶಬ್ದ ಸಂಪಾದಕ ಸಭೆಯ ಒಪ್ಪಿಗೆ ಪಡೆದು ಖುಬುಕಿ ಒಂದು ಪ್ರಾಣಿ ಎಂದು ದಾಖಲಾಗಿತ್ತು. ಗ್ರಂಥ ಪಂಚತಂತ್ರ. ಆ ಶಬ್ದದ ಆಕರವನ್ನು ಓದಿದಾಗ ಅಲ್ಲಿ ಅದು **ಆ ಖುಬುಕಿ** ಎಂದು ಬಿಡಿಸಿ ಅಚ್ಚಾಗಿತ್ತು. ಅದು ಪ್ರಸಿದ್ಧವಾದ ರಾಜನ ಮಗಳ ಚಿನ್ನದ ಹಾರ ಮತ್ತು ಕಾಗೆಯ ಕಥೆಗೆ ಸಂಬಂಧಪಟ್ಟದ್ದು. ಆ ಮತ್ತು ಖುಬುಕಿ ಶಬ್ದಗಳ ನಡುವಿನ ಅಂತರವನ್ನು ತೆಗೆದು ಹಾಕಿದಾಗ ಅದು **ಆಖುಬುಕಿ** ಎಂದಾಯಿತು ಅರ್ಥ ಸ್ವಯಂ ಸ್ಪಷ್ಟವಾಯಿತು. ಆಖು =ಇಲಿ, ಭುಕ್ =ತಿನ್ನುವುದು. ಕಾಗೆ + ಇ ಸ್ತ್ರೀಲಿಂಗ ಪ್ರತ್ಯಯ =ಹೆಣ್ಣು ಕಾಗೆ. ಇದನ್ನು ನಾನು ವಿವರಿಸಿದಾಗ ಸಭೆ ಬಿದ್ದು ಬಿದ್ದು ನಕ್ಕಿತು. ಆಶ್ಚರ್ಯವೆಂದರೆ ಖುಬುಕ್ ಎಂಬ ಹೆಸರಿನ ಪ್ರಾಣಿಯ ವಿಚಾರವನ್ನು ಅರಬ್ಬಿ ಫಾರಸಿ ನಿಘಂಟು ಉಲ್ಲೇಖಿಸುತ್ತದೆ.

ಮೂರನೆಯ ಶಬ್ದ **ಚದುರರಸ** ಇದು ಅಂಬಿಗರ ಚೌಡಯ್ಯನ ವಚನದಲ್ಲಿ ಬರುತ್ತದೆ. "ಬೆಲ್ಲಕ್ಕೆ ಚದುರರಸ ಉಂಟಲ್ಲದೆ ಸಿಹಿಗೆ ಉಂಟೆ ?" (ಅಂಬಿಗರ ಚೌಡಯ್ಯ-೩೯೧- ೪೯). ಇಲ್ಲಿ ಏನೋ ತಪ್ಪಿದೆ ಎಂದು ಗೊತ್ತಾದರೂ ಕೂಡಲೆ ಉತ್ತರ ತಿಳಿಯಲಿಲ್ಲ. ನಿಧಾನವಾಗಿ ಪರಿಶೀಲಿಸಿದಾಗ ಒಂದು ಶಬ್ದಕ್ಕೆ ಅರ್ಥ ತಿಳಿಯದೆ ಯಾರೋ ಇನ್ನೊಂದು ರ ಕಾರವನ್ನು ಸೇರಿಸಿ ಹೊಸ ಶಬ್ದವನ್ನು ಸೃಷ್ಟಿ ಮಾಡಿರುವುದು ಸ್ಪಷ್ಟವಾಯ್ತು. ಅದು ಚದುರಸ. ಈ ಶಬ್ದ ಸಂಸ್ಕೃತದ ಚತುರಶ್ರ ಎಂಬುದರ ತದ್ಭವ. ಚದುರಸ ಶಬ್ದವನ್ನು ಹುಡುಕಿದಾಗ ಅಲ್ಲಿ ಚತುರಸ, ಚದುರಸ ಎಂಬ ಎರಡು ರೂಪಗಳು ವಚನಗಳಲ್ಲಿರುವುದು ಗೊತ್ತಾಯಿತು. ಅಲ್ಲದೆ ಸುಮಾರು ೧೧೪೯ರ ಒಂದು ಶಾಸನದಲ್ಲಿ "ಕೆನ್ನೆಲ ಚದುರಸ ಮತ್ತರು" ನ್ನು ದಾನ ಮಾಡಿದ ಉಲ್ಲೇಖ ದೊರಕಿತು. ಹೀಗೆ ಎಷ್ಟೋ ವೇಳೆ ತಪ್ಪು ಶಬ್ದ ಪಟ್ಟಿಕೆಯಲ್ಲಿ ಬಂದಿದ್ದರೂ ಸರಿಯಾದ ಶಬ್ದ ರೂಪವನ್ನು ಪರಿಶೀಲನೆಯಿಂದ ಎತ್ತಿ ತೆಗೆಯುವ ಸಾಧ್ಯತೆಯಿದೆ. ಇಂಥ ದೃಷ್ಟಾಂತಗಳು ನೂರಾರು ಪಟ್ಟಿಕೆಗಳಲ್ಲಿ ದೊರಕುತ್ತವೆ. ಆದುದರಿಂದ ಮುಖ್ಯೋಲ್ಲೇಖವನ್ನು ನಿರ್ಧರಿಸುವಾಗ ಬಹಳ ಎಚ್ಚರಿಕೆಯಿಂದ ತೀರ್ಮಾನ ಮಾಡಬೇಕು.

೩. ಪರ್ಯಾಯ ರೂಪಗಳನ್ನು ಜೋಡಿಸಿ ವ್ಯಾಕರಣದ ಸಂಬಂಧವನ್ನು ನಿರ್ದೇಶಿಸುವುದು:

ಮುಖ್ಯ ಉಲ್ಲೇಖವನ್ನು ಆರಿಸಿದ ಮೇಲೆ ಆ ಶಬ್ದಕ್ಕೆ ಯಾವುದಾದರೂ ಪರ್ಯಾಯ ರೂಪಗಳಿದ್ದರೆ ಅವುಗಳೆಲ್ಲವನ್ನೂ ಗುರುತಿಸಿ ಮುಖ್ಯ ಉಲ್ಲೇಖದ ಜೊತೆಯಲ್ಲಿ ಆ ರೂಪಗಳನ್ನು ಅಕಾರಾದಿಯಾಗಿ ಜೋಡಿಸಬೇಕು. ಬಳಿಕ ಅದು ವ್ಯಾಕರಣದ ದೃಷ್ಟಿಯಲ್ಲಿ ಯಾವ ವಿಭಾಗಕ್ಕೆ ಸೇರುತ್ತದೆ, ಕ್ರಿಯಾಪದವೋ, ನಾಮಪದವೋ, ಅವ್ಯಯವೋ, ಗುಣವಾಚಕವೋ, ಸಂಖ್ಯಾವಾಚಕವೋ ಎಂಬುದನ್ನು ನಿರ್ದೇಶಿಸಬೇಕು. ಅದು ಉಪಸರ್ಗವಾಗಿದ್ದರೆ ಅದನ್ನೂ ಸಮಾಸದಲ್ಲಿ ಪಡೆಯುವ ಆದೇಶ ರೂಪವಾದರೆ ಅದನ್ನೂ ನಿರ್ದೇಶಿಸಬೇಕು. ಬಳಿಕ ಅವು

ಪಡೆಯುವ ಬಹುವಚನದ ರೂಪವನ್ನು ತಿಳಿಸಬೇಕು. ಕ್ರಿಯಾಪದವಾದರೆ ವಿಶಿಷ್ಟವಾದ ಕೃದಂತ ರೂಪವನ್ನು ದಾಖಲಿಸಬೇಕು. ಉದಾಹರಣೆ, ಉಳು-ಉತ್ತು; ಕಳ್, ಕಳು-ಕದ್ದು, ಕಳ್ದು. ಇದು ವಿಶೇಷವಾದ ಕ್ರಿಯಾಪದವಾದದ್ದರಿಂದ ಈ ಶಬ್ದವು ಆಧುನಿಕ ಕನ್ನಡದಲ್ಲಿ ಪಡೆಯುವ ಕದಿ ಎನ್ನುವ ಧಾತು ರೂಪವನ್ನು ಈ ಶಬ್ದದ ಅರ್ಥಗಳ ವಿವರಣೆಯಾದ ಬಳಿಕ ಸೂಚಿಸಬೇಕು. ಇಂಥದೇ ಭಾಷಾ ರೂಪಗಳು ಮತ್ತೆ ಕೆಲವಿದ್ದರೆ ಅವುಗಳನ್ನು ಹೋಲಿಸುವಂತೆ ಸೂಚಿಸಬೇಕು. ಉದಾಹರಣೆಗೆ ಗೆದಿ, ಹೋ ಎಂದು ಬರೆಯಬೇಕು. ಹೋ : ಹೋಲಿಸು.

೪. ಅರ್ಥ ನಿರ್ಧಾರವೇ ನಾಲ್ಕನೆಯ ಕ್ಲಿಷ್ಟಕರವಾದ ಹಂತ :

ಶಬ್ದಾರ್ಥವನ್ನು ತಿಳಿಸುವ ಕೆಲವು ಬೇರೆ ಬೇರೆ ಮಾರ್ಗಗಳಿವೆ. ೧. ವಿವರಿಸುವುದು ಮತ್ತು ಸೂತ್ರಪ್ರಾಯವಾಗಿ ನಿರೂಪಿಸುವುದು. ೨. ನಿಘಂಟಿನಲ್ಲಿರುವ ಇತರ ಶಬ್ದಗಳನ್ನು ಸಮಾನಾರ್ಥಕವಾಗಿ ಸೂಚಿಸುವುದು. ೩. ಅರ್ಥಸ್ಫುಟೀಕರಣಕ್ಕಾಗಿ ದೃಷ್ಟಾಂತಗಳನ್ನು ನೀಡುವುದು. ೪. ಚಿತ್ರಗಳನ್ನು ಮುದ್ರಿಸುವುದು. ಒಳ್ಳೆಯ ಅರ್ಥವೆಂಬುದು ಸಂಗ್ರಹವಾಗಿ, ನಿರ್ಧಾರಿತವಾಗಿ, ಸ್ಪಷ್ಟವಾಗಿ ಇರಬೇಕು. ಓದುವವರಿಗೆ ಸಂಪೂರ್ಣವಾಗಿ ತಿಳಿಯುವಂತಿರಬೇಕು. ಅನೇಕಾರ್ಥಗಳಿದ್ದರೆ ಅವುಗಳ ಪರಸ್ಪರ ಸಂಬಂಧ ತಿಳಿಯುವಂತಿರಬೇಕು. ಇವುಗಳ ನಿರೂಪಣೆಯಲ್ಲಿ ಯಾವುದಾದರೂ ಒಂದು ಕ್ರಮವಿರಬೇಕು. ಈ ವಿಷಯವನ್ನು ತಿಳಿಸುವ ಒಂದು ಸೊಗಸಾದ ಸಂಸ್ಕೃತ ಶ್ಲೋಕವಿದೆ.

ಅಲ್ಪಾಕ್ಷರಂ ಅಸಂದಿಗ್ಧಂ ಸಾರವದ್ವಿಶ್ವತೋಮುಖಂ
ಅಸ್ತೋಭಂ ಅನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ

ಸೂತ್ರವೇನು ಎಂದು ತಿಳಿಸುವ ಈ ಶ್ಲೋಕವು ನಿಘಂಟುಗಳಲ್ಲಿ ಇರಬೇಕಾದ ಅರ್ಥಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಅದರಲ್ಲಿ ೧. ಸಂಗ್ರಹಗುಣ, ೨. ಅನುಮಾನವಿಲ್ಲದಿರುವಿಕೆ, ೩. ಸಾರವತ್ತಾಗಿರುವುದು, ೪. ಎಲ್ಲವನ್ನೂ ಒಳಗೊಂಡಿರುವುದು, ೫. ಅನಗತ್ಯವಾದುದು ಯಾವುದೂ ಇರದಿರುವಿಕೆ ಮತ್ತು ೬. ತಪ್ಪಿಲ್ಲದುದು, ಅರ್ಥದೋಷವಿಲ್ಲದಿರುವಿಕೆ. ಈ ಗುಣಗಳಿಂದ ಕೂಡಿರುವುದೇ ಸೂತ್ರ.

ಶಬ್ದಾರ್ಥವು ಈ ಸೂತ್ರದಂತೆ ಇರಬೇಕು ಎಂಬುದು ಸರ್ವಸಮ್ಮತವಾದ ದೃಷ್ಟಿ. ಆದರೆ ಇದನ್ನು ಸಾಧಿಸುವುದು ಮಾತ್ರ ಮಹಾ ಕಷ್ಟಕರವಾದದ್ದು. ಅರ್ಥನಿರ್ಧಾರಕ್ಕಾಗಿ ಇರುವ, ಮೇಲೆ ತಿಳಿಸಿರುವ, ನಾಲ್ಕು ಮಾರ್ಗಗಳಲ್ಲಿ ಇದೇ ಅತ್ಯುತ್ತಮವಾದುದು. ಇದರ ಜೊತೆಗೆ ೨ ಮತ್ತು ೩ನೆಯ ಉಪಾಯಗಳನ್ನೂ ಸಹಾಯಕ್ಕೆಂದು ಪಡೆಯಬಹುದು. ಇದರಿಂದ ಅರ್ಥ ಸ್ಪಷ್ಟತೆಗೆ ಸಹಾಯವಾಗುವುದು ನಿಜ. ಆದರೆ ೪ನೆಯದಾದ ಚಿತ್ರವನ್ನು ನೀಡುವುದು ಎಲ್ಲಕ್ಕಿಂತ ಹೆಚ್ಚು ಸಹಾಯಕ. ಆದರೆ ಎಲ್ಲ ಶಬ್ದಗಳನ್ನೂ ಚಿತ್ರದ ಮೂಲಕ ತೋರಿಸಲಾಗುವುದಿಲ್ಲ. ಕಳ್ಳನನ್ನು ಚಿತ್ರದಲ್ಲಿ ತೋರಿಸಬಹುದು. ಕಳ್ಳತನವನ್ನು ಹೇಗೆ ತೋರಿಸುವುದು. ಭಕ್ತಿ, ಸತ್ಯ, ಸ್ವಾತಂತ್ರ್ಯ ಇತ್ಯಾದಿ ಶಬ್ದಗಳಿಗೆ ಚಿತ್ರಗಳು ಅರ್ಥವನ್ನು ನೀಡಲಾರವು. ಆದುದರಿಂದ ಚಿತ್ರಗಳನ್ನು ಸೂಕ್ತವಾದ ಕಡೆಗಳಲ್ಲಿ ಮಾತ್ರ ಉಪಯೋಗಿಸಬೇಕಾಗುತ್ತದೆ.

ಅರ್ಥ ನಿರ್ಧಾರವೆಂದರೆ ನಮಗಿಂತ ಹಿಂದಿನ ಜನರು, ಕವಿಗಳು, ವಿದ್ವಾಂಸರು, ಲೇಖಕರು ಮುಂತಾದವರು ಒಂದು ಶಬ್ದಕ್ಕೆ ಏನು ಅರ್ಥವಿದೆಯೆಂದು ತಿಳಿದು ಅದನ್ನು ಉಪಯೋಗಿಸಿದ್ದಾರೆಯೋ ಅದನ್ನು ನಿರ್ಧಾರವಾಗಿ ಹೇಳುವುದು ಎಂದು ಅರ್ಥ. ಇದರ ಅರ್ಥ ಹೀಗಿರಬೇಕು ಎಂದು ತೀರ್ಮಾನ ಮಾಡುವುದಲ್ಲ. ನಿಘಂಟುಕಾರನು ಶಬ್ದಗಳ ಚರಿತ್ರಕಾರ. ಅವನೇನು ಶಬ್ದಬೋಧೆಯ ಸರ್ವಾಧಿಕಾರಿಯಲ್ಲ. ಆದುದರಿಂದಲೇ ಎಷ್ಟೋ ವೇಳೆ ಇದು ವಿವರಣೆಯಾಗುತ್ತದೆ. ಭಾಷೆಯಲ್ಲಿ ತುಂಬ ಸರಳವೂ ಸುಲಭವೂ ಆದ ಶಬ್ದಗಳಿಗೆ ಅರ್ಥವನ್ನು ಬರೆಯಬೇಕಾದರೆ ಆ ಶಬ್ದಗಳಿಗಿಂತ ಹೆಚ್ಚು ಸರಳ ಮತ್ತು ಸುಲಭ ಆದ ಶಬ್ದಗಳನ್ನು ಹುಡುಕವುದಕ್ಕೆ ಆಗುವುದೇ ಇಲ್ಲ. **ಇಲಿ, ಊಟ, ಕೋಲು** ಮುಂತಾದ ಶಬ್ದಗಳಿಗೆ ಅರ್ಥವನ್ನು ಬರೆಯಬೇಕಾದರೆ ಮೂಷಕ, ಭೋಜನ, ದಂಡ ಎಂದೇ ಬರೆಯಬೇಕಲ್ಲವೇ ? ಇದು ನಿಘಂಟುಕಾರನನ್ನು ಎದುರಿಸುವ ಪ್ರಶ್ನೆ. ಇದೇನೂ ಹೊಸದಲ್ಲ. ಹಿಂದಿನ ಕಾಲದಲ್ಲಿ, ನಮ್ಮ ಬಾಲ್ಯದಲ್ಲಿ ಕೇಳಿದ ಕತೆ ಒಂದಿದೆ. ಶಾಲೆಯಲ್ಲಿ ಪಾಠ ಹೇಳುವ ಉಪಾಧ್ಯಾಯನು "ಬಡವನೊಬ್ಬನು ಕೊಡಲಿಯನು ತರಲಡವಿಗೈದಿಯೆ" ಎಂದು ಪ್ರಾರಂಭವಾಗುವ ಪದ್ಯದ ಅರ್ಥ ಹೇಳುತ್ತಿದ್ದ ಕ್ರಮ ಹೀಗಿತ್ತಂತೆ : ಬಡವನು = ದರಿದ್ರನು, ಒಬ್ಬನು = ಏಕಮೇವ, ಕೊಡಲಿಯನು = ಪರಶುವನ್ನು, ತರಲು = ಆನೀಯ ಮಾಡಲು, ಅಡವಿಗೆ = ಅರಣ್ಯಕ್ಕೆ ಐದಿಯ = ಗಮಿಸಿ" ಇತ್ಯಾದಿ. ಇಂಥ ಕಡೆಗಳಲ್ಲಿ ಸಮಾಜದ ಸಂಸ್ಕೃತಿಗೆ ಸಂಬಂಧಿಸಿದ ಶಬ್ದಗಳು ಬಂದರೆ ವಿವರಣೆಯನ್ನು ವಿಶ್ವಕೋಶದ ಮಾದರಿಯಲ್ಲಿ ನೀಡಬೇಕಾಗುತ್ತದೆ. ಉದಾಹರಣೆ: **ಮೈಲಿಗೆ, ಸೂತಕ, ಪುರುಡು, ಸೀಮಂತ, ಧರ್ಮೋದಕ, ಸಿದ್ದಿಗೆ.** ಹೀಗೆ ವಿವರಣೆ ಮಾಡುವಾಗ ಒಂದು ಎಚ್ಚರ ವಹಿಸಬೇಕು. ಆ ವಿವರಣೆಯಲ್ಲಿ ಬರುವ ಎಲ್ಲ ಶಬ್ದಗಳೂ ನಿಘಂಟಿನಲ್ಲಿ ಉಲ್ಲೇಖ ಹೊಂದಿರಬೇಕು. ಶಬ್ದವನ್ನಂತೂ ದಾಖಲಿಸಿಯೇ ಇರಬೇಕು. ಒಂದು ಶಬ್ದಕ್ಕೆ ಇನ್ನೊಂದು ಶಬ್ದವನ್ನು ನೀಡಿ ಅದೇ ಶಬ್ದಕ್ಕೆ ಮತ್ತೆ ಇದೇ ಶಬ್ದದ ಅರ್ಥವನ್ನೂ ನೀಡಿ ನಿಘಂಟನ್ನು ನೋಡುವವರು ಚಕ್ರ ಪರಿಭ್ರಣಕ್ಕೆ ಒಳಗಾಗುವಂತೆ ಮಾಡಬಾರದು. ಆನೆ = ಗಜ, ಗಜ = ವಾರಣ. ವಾರಣ = ದ್ವಿಪ, ದ್ವಿಪ = ನಾಗ, ನಾಗ = ಇಭ. ಇಭ = ಗಜ. ಹೀಗೆ ಮಾಡಬಾರದು. ಇದನ್ನು ಇಂಗ್ಲಿಷಿನಲ್ಲಿ Circularity ಎಂದು ಕರೆಯುತ್ತಾರೆ. ಇದೇ ಚಕ್ರಭ್ರಮಣ. ಡಾ. ಜಾನ್ಸನ್‌ಗಿಂತ ದೊಡ್ಡ ವಿದ್ವಾಂಸರು ಬೇಕೆ. ಆದರೆ ಆತನೇ ಕೆಲವು ಕಡೆಗಳಲ್ಲಿ Circularity ಯನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಾನೆ. "Thus some explanations are unavoidable reciprocal or circular, as hind, the female of the stag, stag, the male of the hind". ಇದು ಅಪವಾದ (exception) ಆಗಬೇಕೇ ಹೊರತು ಅದೇ ನಿಯಮವಾಗಿ ಬಿಡಬಾರದು.

ಉಪ್ಪು, ಕಾರ, ಹುಳಿ, ಕಹಿ ಮುಂತಾದ ರುಚಿಗೆ ಸಂಬಂಧಿಸಿದ ಶಬ್ದಗಳಿಗೆ ವಿವರ ನೀಡದೆ ಅರ್ಥವಿವರಣೆ ಮಾಡುವುದು ಹೇಗೆ. ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನಲ್ಲಿ ಉಪ್ಪು ಎಂಬುದಕ್ಕೆ "ಆಹಾರ ಪದಾರ್ಥಗಳನ್ನು ರುಚಿಗೊಳಿಸಲು ಬಳಸುವ ಪದಾರ್ಥ. ಲವಣ" ಎಂದು ಸೂಚಿಸಲಾಗಿದೆ. ಇದು ಸಾಲದು. ಅಲ್ಲದೆ ಹುಳಿ, ಸಿಹಿ, ಕಹಿಗಳಿಗೂ ಹೀಗೆಯೇ ಅರ್ಥವನ್ನು ಕೊಡಬಹುದು; ನಿಷ್ಕರ್ಷೆಯಾಗುವುದಿಲ್ಲ.

ಈಚಿನ ಇಂಗ್ಲಿಷ್ ನಿಘಂಟುಗಳಲ್ಲಿ SALT ಎಂಬ ಶಬ್ದಕ್ಕೆ ಹೀಗೆ ವಿವರಣೆ ನೀಡಿದ್ದಾರೆ: "a crystaline compound of sodium and chlorine, occuring as a mineral, a constituent of sea-water etc. and used for seasoning or preserving food" ಇಷ್ಟಲ್ಲದೆ ಆ ಶಬ್ದಕ್ಕೆ ಇಂಗ್ಲಿಷಿನಲ್ಲಿರುವ ಇತರ ಅರ್ಥಗಳನ್ನು ಹೇಳಿದ್ದಾರೆ. (The Random House Dictionary p. 791) Encyclopedic Dictionary ಗಳಲ್ಲಿ ಇನ್ನೂ ವಿವರವಾದ ಬರಹವಿರುತ್ತದೆ.

೫. ನಾನಾರ್ಥ ಶಬ್ದಗಳು :

ಒಂದು ಶಬ್ದಕ್ಕೆ ಕೆಲವು ವೇಳೆ ಬೇರೆ ಬೇರೆ ಅರ್ಥಗಳಿರುತ್ತವೆ. ಆ ಎಲ್ಲ ಅರ್ಥಗಳಿಗೂ ಪ್ರಯೋಗಗಳಿರುತ್ತವೆ. ಇಂಥ ಸಮಯದಲ್ಲಿ ಆ ಎಲ್ಲ ಅರ್ಥಗಳನ್ನೂ ಗಮನಿಸಿ ಅವುಗಳನ್ನು ಎರಡು ದೃಷ್ಟಿಯಿಂದ ಅನುಕ್ರಮವಾಗಿ ಬರೆಯಬಹುದು. ಒಂದು ಚಾರಿತ್ರಿಕ ದೃಷ್ಟಿಯಿಂದ ಕಾಲಾನುಕ್ರಮದಲ್ಲಿ ಪ್ರಯೋಗಗಳನ್ನು ಗುರುತಿಸಿ ಅರ್ಥಗಳನ್ನು ನಿರ್ಧಾರ ಮಾಡುವುದು. ಎರಡು ತಾರ್ಕಿಕವಾಗಿ ಯಾವುದು ಮೊದಲು ಯಾವುದು ಆ ಬಳಿಕ ಬೆಳೆದದ್ದು ಎಂದು ತೀರ್ಮಾನಿಸಬಹುದು. ಕೆಲವು ವೇಳೆ ಈ ಎರಡು ಮಾರ್ಗಗಳೂ ಹೊಂದಿಕೊಳ್ಳುವುದುಂಟು. ಆಗ ತೊಂದರೆಯೇ ಇಲ್ಲ. ಅವು ಹೊಂದಿಕೊಳ್ಳದೇ ಇದ್ದಾಗ ತಾರ್ಕಿಕವಾದ ಮಾರ್ಗದಿಂದ ಅನುಕ್ರಮವಾಗಿ ಅರ್ಥವನ್ನು ನಿರ್ಧಾರ ಮಾಡುವುದೇ ಸರಿ. ಇದಕ್ಕೆ ಏನು ಕಾರಣವೆಂದರೆ ನಮಗೆ ಚಾರಿತ್ರಿಕವಾದ ಎಲ್ಲ ಪ್ರಯೋಗಗಳೂ ದೊರೆಯದೆ ಹೋಗಿರಬಹುದು. ನಮ್ಮ ಶಬ್ದ ಸಂಗ್ರಹ ಸಂಪೂರ್ಣವಾಗಿಲ್ಲದೇ ಹೋಗಿರಬಹುದು. ತರ್ಕವಂತೂ ಒಂದು ವೈಜ್ಞಾನಿಕವಾದ ಕ್ರಮ. ಹೀಗೆ ತಿಳಿದು ಆ ಕ್ರಮವನ್ನು ಅನುಸರಿಸಬಹುದು.

ಕೆಲವು ವೇಳೆ ಒಂದೇ ಸ್ವರೂಪದ ಬೇರೆ ಬೇರೆ ಶಬ್ದಗಳಿರಬಹುದು. ಅವುಗಳ ಉಚ್ಚಾರಣೆ ಒಂದೇ. ಲಿಪಿ ಒಂದೇ (Homonym and Homograph). ಆದರೆ ಅವುಗಳಿಗೆ ಬೇರೆ ಬೇರೆ ಅರ್ಥಗಳಿರುತ್ತವೆ. ಅಂಥ ಶಬ್ದಗಳನ್ನು ಅವುಗಳ ಪಕ್ಕದಲ್ಲಿ ೧, ೨, ಎಂಬ ಅಂಕಿಗಳನ್ನು ಕೊಟ್ಟು ಅವು ಬೇರೆ ಬೇರೆ ಎಂಬುದನ್ನು ಸೂಚಿಸಬಹುದು. ಹೀಗೆ ಸೂಚಿಸಬೇಕಾದರೆ ಅವೆರಡರ ವ್ಯುತ್ಪತ್ತಿಯೂ ಬೇರೆ ಬೇರೆ ಎಂದು ಪರೀಕ್ಷಿಸಿ ತೀರ್ಮಾನ ಮಾಡಿರಬೇಕು. ಒಂದೆರಡು ದೃಷ್ಟಾಂತಗಳನ್ನು ನೋಡೋಣ :

I.	ಕಂತು ಕನ್ನಡ	೧. ಕ್ರಿಯಾಪದ ಅರ್ಥ :	ಸೂರ್ಯ ಕಂತಿತು, ಬಿಸಿಲು ಕಂತಿತು. ಕಡಿಮೆಯಾಗು, ಅಡಗು
		೨. ನಾಮಪದ ಅರ್ಥ :	ಸಾಲ ಹಿಂದಿರುಗಿಸುವ ವಾಯಿದೆ, ಗಡು. ಆ ಗಡುವಿಗೆ ಕೊಡಬೇಕಾದ ಹಣ
	ಸಂಸ್ಕೃತ	೩. ನಾಮಪದ ಅರ್ಥ :	ಮನ್ಮಥ
II.	ಕಂತೆ	ಕನ್ನಡ ಅರ್ಥ	೧. ಹೊರೆ, ಕಟ್ಟು, ಹುಲ್ಲಿನ ಕಂತೆ

	ತದ್ಭವ	೨.	ಚಿಂದಿಬಟ್ಟೆ, ಕಂಥಾ ಎಂಬ ಸಂಸ್ಕೃತ ಶಬ್ದದಿಂದ ಬಂದದ್ದು.
III. ಅಲೆ	೧. ಕ್ರಿಯಾಪದ ಅರ್ಥ :	ತಿರುಗಾಡು	
	೨. ಕ್ರಿಯಾಪದ ಅರ್ಥ :	ಹಿಂಸೆ ಮಾಡು	
	೩. ನಾಮಪದ ಅರ್ಥ :	ತೆರೆ, ತರಂಗ	
IV. ಎಸಳು	೧. ನಾಮಪದ ಅರ್ಥ :	೧.	ಹೂವಿನ ಪಕಳೆ, ದಳ
		೨.	ಬೀಗದ ಕೈ
V. ಕಂದು	೧. ಕ್ರಿಯಾಪದ ಅರ್ಥ :	೧.	ಮಾಸು, ಬಣ್ಣ ಕಡಿಮೆಯಾಗು
	೨. ನಾಮಪದ ಅರ್ಥ :	೨.	ಒಂದು ಬಣ್ಣ, ಕೆಂಪು ಸೇರಿದ ಕಪ್ಪು ಬಣ್ಣ
		೩.	ಅರೆಯುವ ಗುಂಡು
		೪.	ಒಂದು ಧಾನ್ಯ
		೫.	ಆಕಳ ಕರು
		೬.	ಬಾಳೆಯ ಸಸಿ
		೭.	ದೋಸೆ ಬೇಯಿಸುವ ಕಾವಲಿ, ಹೆಂಚು
VI. ಪಾವುಡ	೧. ನಾಮಪದ ಅರ್ಥ :	೧.	ಬಟ್ಟೆ, ತಲೆಗೆ ಸುತ್ತುವ ಬಟ್ಟೆ, ಪಾಗುಡ, ಪಾಗು, ಲಂಗ, ಹೆಂಗಸರ ಒಳ ಉಡುಪು
ಪಾವುಡ	೧. ನಾಮಪದ ಅರ್ಥ :	೨.	ಉಡುಗೊರೆ ಉಪಾಯನ

ಇದು ಸಂಸ್ಕೃತದ ಪ್ರಾಭೃತ ಎಂಬ ಶಬ್ದ ಪ್ರಾಕೃತದಲ್ಲಿ ಪಾಹುಡ ಆಗಿ ಕನ್ನಡದಲ್ಲಿ ಪಾವುಡ ಆಗಿದೆ.

ಹೀಗೆ ನೂರಾರು ಶಬ್ದಗಳು ನಿಘಂಟುಕಾರನಿಗೆ ಎದುರು ಬೀಳುತ್ತವೆ. ಅವುಗಳ ಮೂಲವನ್ನು ಹುಡುಕಿ ಅರ್ಥ ವ್ಯತ್ಯಾಸಗಳನ್ನು ನಿರ್ಧಾರ ಮಾಡಿ ಬೇರೆ ಬೇರೆಯಾಗಿ ಅವುಗಳನ್ನು ನಿರೂಪಿಸಬೇಕು.

ಕೆಲವು ವೇಳೆ ಸಂಸ್ಕೃತದ ಶಬ್ದಗಳು ಕನ್ನಡಕ್ಕೆ ಬರುವಾಗ ಕಾಗುಣಿತದ ತಪ್ಪು ಉಳಿದುಕೊಂಡು ಬರುತ್ತವೆ. ಸಂಸ್ಕೃತದ ಪುತ್ತಲಿ-ಕನ್ನಡದಲ್ಲಿ ಪುತ್ತಳಿ ಆಗಬಹುದು. ಆದರೆ ಸಾಹಿತ್ಯದ ಪ್ರಾಚೀನ ಗ್ರಂಥಗಳಲ್ಲಿ ಕೂಡ ಪುತ್ಥಳಿ ಎಂದೇ ಉಳಿದು ಬಂದಿದೆ. ಇಂಥ ಶಬ್ದಗಳು ಚಾರಿತ್ರಿಕ ದೃಷ್ಟಿಯಿಂದ ಉಳಿದುಕೊಂಡುಬಿಡುತ್ತವೆ. ಅವುಗಳನ್ನು ಬಿಡಬಾರದು.

ಕೆಲವು ಸಲ ನಮ್ಮನ್ನು ಎದುರಿಸುವ ಶಬ್ದಗಳಿಗೆ ಅರ್ಥವೇ ಹೊಳೆಯುವುದಿಲ್ಲ. ಮತ್ತಾವುದೋ ಶಬ್ದದ ಅನ್ವೇಷಣೆಯಲ್ಲಿದ್ದಾಗ ಇದ್ದಕ್ಕಿದ್ದಂತೆ ಅಂಥ ಶಬ್ದಗಳ ಅರ್ಥ ಸ್ಪಷ್ಟವಾಗಿ ಬಿಡುತ್ತದೆ. ಚಂದ್ರಪ್ರಭ ಪುರಾಣದ ಒಂದು ಪದ್ಯದಲ್ಲಿ **ಮುಖಮಂಡನಕ್ರೀಡೆ** ಎಂಬ ಶಬ್ದ ಬರುತ್ತದೆ. ಆ ವಾಕ್ಯ ಹೀಗಿದೆ. "ಗಗನ ಮಂಡಲಮಂ ಚಕ್ರವರ್ತಿ ಮುಖಮಂಡನ ಕ್ರೀಡೆಯಿಂ ನೋಡುತ್ತಿರ್ಪನ್ನೆಗಂ" (೯-೪ ವಚನ) ಈ ಶಬ್ದದ ಅರ್ಥ ಕೂಡಲೆ ಗೊತ್ತಾಗಲಿಲ್ಲ. ಸಂಸ್ಕೃತದ ನಿಘಂಟುಗಳಲ್ಲಿ ಮುಖಮಂಡನ ಎಂಬ ಶಬ್ದಕ್ಕೆ ಅರ್ಥ ೧. ಮುಖದ ಅಲಂಕಾರ ಎಂದೂ, ೨. ಒಂದು ಬಗೆಯ ಸಸ್ಯ ಎಂದೂ ಕಾಣಬರುತ್ತದೆ. ಸಮಸ್ಯೆ ಪರಿಹಾರವಾಗದೆ ಅದರ ಪರಿಶೀಲನೆಯನ್ನು ಮುಂದೆ ತಳ್ಳಿದ್ದೆ. ಇನ್ನಾವುದೋ ಶಬ್ದಕ್ಕಾಗಿ ಅಮರದ ಕೆಲವು ಟೀಕೆಗಳನ್ನು ಹುಡುಕುತ್ತಿದ್ದೆ. ಆಗ ಆಂಧ್ರ ಪ್ರದೇಶದ ಮಲ್ಲಿನಾಥನೆಂಬ ವಿದ್ವಾಂಸನ ಅಮರಪದಪಾರಿಜಾತ ಎಂಬ ಟೀಕೆಯನ್ನು ಪರಿಶೀಲಿಸುತ್ತಿದ್ದಾಗ ಅಲ್ಲಿ ಒಂದು ಕುಂಟು ಪಂಕ್ತಿಯಲ್ಲಿ "ತಾಂಬೂಲಂ ವೀಟಿಕಾಸ್ತ್ರೀ ತಾಂಬೂಲಂ ಮುಖಭೂಷಣಂ" ಎಂಬ ಬರಹ ಕಂಡುಬಂತು. ಕೂಡಲೆ ಚಂದ್ರಪ್ರಭ ಪುರಾಣವನ್ನು ತೆಗೆದು ಅರ್ಥವನ್ನು ಹೊಂದಿಸಿ ನೋಡಿದೆ. ಅರ್ಥ ಸೊಗಸಾಗಿ ಕೂಡಿ ಬಂತು. ಮುಖಭೂಷಣ, ಮುಖಮಂಡನ ಎರಡೂ ಒಂದೇ. ತಾಂಬೂಲವನ್ನು ಚರ್ವಣ ಮಾಡುವುದೇ ಈ ಕ್ರೀಡೆ. ಇದು ಹೇಗೆ ಮುಖಮಂಡನ ಎಂದರೆ ಮುಖಕ್ಕೆ ಅಂದರೆ ಬಾಯಿಗೆ ಇದು ಮಂಡನ ಕೆಂಪು ಬಣ್ಣದ ಅಲಂಕಾರವನ್ನು ನೀಡುತ್ತದೆ. ಹೀಗಾಗಿ ನಿಘಂಟಿನಲ್ಲಿ **ಮುಖಮಂಡನ ಕ್ರೀಡೆ** ಎಂದರೆ ತಾಂಬೂಲ ಚರ್ವಣ ಎಂದೂ ಮುಖಮಂಡನ ಎಂದರೆ ತಾಂಬೂಲ ಎಂದೂ ದಾಖಲು ಮಾಡಲು ಅನುಕೂಲವಾಯಿತು. ನನಗೆ ಡಾ। ಜಾನ್ಸನ್‌ನ ಮಾತು ನೆನಪಿಗೆ ಬಂತು : "who will consider....that what is obvious is not always known, and what is known is not always present, that sudden fits of inadvertency will surprize vigilance, slight avocations will seduce attention, and casual eclipses of the mind will darken learning, and that the writer shall often in vain trace his memory at the moment of need, for that which yesterday he knew with intuitive readiness, and which will come uncalled into his thoughts tomorrow". ಆ ಮಹಾ ನಿಘಂಟುಕಾರನ ಅನುಭವವನ್ನು ಎಷ್ಟು ಹೊಗಳಿದರೂ ಸಾಲದು.

ಇದೇ ಸಂದರ್ಭದಲ್ಲಿ ನನಗೆ ಆಗ ಬೇಡದೇ ಇದ್ದ ಇತರ ವಿವರಗಳೂ ದೊರಕಿದವು. ತಾಂಬೂಲಕ್ಕೆ ತಾಂಬೂಲೀ ಎಂದೂ ಹೆಸರಿದೆ. ತಾಂಬೂಲವಲ್ಲೀ ಎಂದೂ ಹೆಸರಿದೆ. ಇದಕ್ಕೆ ನಾಗವಲ್ಲೀ ಎಂದೂ ಹೆಸರು. **'ನಾಗಲೋಕಾದಾಹೃತಾ ನಾಗವಲ್ಲೀ'** ಎಂದೂ **'ನಾಗಾಲಾನೇಯತೋ ಜಾತಾ ನಾಗವಲ್ಲೀ ಭವಿಷ್ಯತಿ'**. ಎಂದರೆ **'ನಾಗಸ್ಯ ಐರಾವತಸ್ಯ ಆಲಾನೇ ಜಾತತ್ವಾತ್ ನಾಗವಲ್ಲೀ'** ಎಂದೂ ವಿವರಣೆಗಳು ದೊರೆತವು. ನಾಗಲೋಕದಿಂದ ತಂದಿದ್ದು, ಆದರಿಂದ ನಾಗವಲ್ಲೀ ಎಂಬ, ಹೆಸರು ; ಐರಾವತವನ್ನು ಕಟ್ಟಿ ಹಾಕಿರುವ ಕಂಬದಿಂದ ಚಿಗುರಿ ಬೆಳೆದಿದ್ದು, ಎಂದು ನಾಗವಲ್ಲೀ ಎಂದು, ಹೆಸರು, ಎಂಬುದು ತುಂಬ ಕಾವ್ಯಮಯವಾದ ಊಹೆಗಳು. ಓದಿ ನನಗೆ ಸಂತೋಷವಾಯಿತು. ಆದರೆ ಆ ಅರ್ಥಗಳು ಸತ್ಯವಲ್ಲವೆಂದು ಮನಸ್ಸು ಹೇಳುತ್ತಿದೆ.

ಶ್ರೀಧರ ಎಂಬ ಶಬ್ದದ ಅರ್ಥವನ್ನು ನೋಡೋಣ. ಈ ಶಬ್ದದ ಚರಿತ್ರೆ ತುಂಬ ಸ್ವಾರಸ್ಯವಾಗಿದೆ. ರುದ್ರಭಟ್ಟನ ಜಗನ್ನಾಥವಿಜಯಂ ಕಾವ್ಯದಲ್ಲಿ (೯-೫೩ ವಚನ) ದಂತವಕ್ತ್ರನೆಂಬ ರಾಕ್ಷಸನು ಜೀಮೂತನಾದನೆಂಬ ದೂತನನ್ನು ಕೃಷ್ಣನೊಡನೆ ಗದಾಯುದ್ಧ ಮಾಡಲು ಕಳುಹಿಸಿದ ಸನ್ನಿವೇಶವಿದೆ. ಅಲ್ಲಿ ದಂತವಕ್ತ್ರನಿಗೆ ಇರುವ ವಿಷ್ಣುವೈರವನ್ನು ವಿವರಿಸುವ ಅವನ ಮಾತುಗಳಲ್ಲಿ ಕೆಲವು ಶಬ್ದಗಳಿವೆ :

"ಕುಂಭಕರ್ಣಾವತಾರಂ ದಂತವಕ್ತ್ರಂ ನಿಸರ್ಗವೈರದಿಂದಸುರವೈರಿಯ ಪೆಸರ್ಗಳೆ ತನಗ ಸಹ್ಯಂಗಳಾಗೆ ಪರಿಣಾಮಯುಕ್ತನೆಂದು ಶಕ್ರನನಾಕ್ರಮಿಸಿಯುಂ, ಪೀತಾಂಶುಕನೆಂದು ಪಾವಕನಂ ಮೂವಿದಿವಡಿಸಿಯುಂ, ಗೋಪನಂದನನೆಂದು ದಂಡಧರನನಂಡಲೆದುಂ, ನಾಗನಿಳಯನೆಂದು ನೈಋತಿಯ ನಿರಾಕರಿಸಿಯುಂ, ವನಮಾಲಾಸ್ಪದನೆಂದು ಯಾದಃಪತಿಯನದಿರ್ಪಿಯುಂ, ಅದ್ರಿಧರನೆಂದು ಪವಮಾನನವಮಾನಿಸಿಯುಂ, ರಾವಣದ್ವೇಷಿಯೆಂದು ಕುಬೇರನಂ ದೂಷಿಸಿಯುಂ, ಶ್ರೀಧರನೆಂದು ಶಂಕರನಂ ಮಾಂಕರಿಸಿಯುಂ" ಇತ್ಯಾದಿ. ಶ್ಲೇಷಮಯವಾದ ಸಂಸ್ಕೃತದ ವಾಕ್ಸರಣಿಯಿದು. (ಜಗನ್ನಾಥವಿಜಯ ೯-೫೩ ವಚನ)

ದಂತವಕ್ತ್ರನು ಶಂಕರನನ್ನು ಹೀಯಾಳಿಸುತ್ತಿದ್ದಾನೆ. 'ಶ್ರೀಧರನೆಂದು ಶಂಕರನಂ ಮಾಂಕರಿಸಿಯುಂ' ಎಂಬುದು ವಾಕ್ಯಭಾಗ. ನಾನು ವಿದ್ಯಾರ್ಥಿಯಾಗಿದ್ದಾಗ ಈ ಭಾಗದಲ್ಲಿ ಬರುವ **ಶ್ರೀಧರ** ಶಬ್ದಕ್ಕೆ **ವಿಷಧರ** ಎಂದು ಅರ್ಥವನ್ನು ಹೇಳಿ ತಿಳಿಸಲಾಗಿತ್ತು. ನಾನು ಅದನ್ನೇ ನನ್ನ ವಿದ್ಯಾರ್ಥಿಗಳಿಗೂ ಬೋಧೆ ಮಾಡಿದ್ದೆ, ಕೆಲವು ಸಲ. ಆದರೆ ನಿಘಂಟಿನಲ್ಲಿ ಶ್ರೀಧರ ಶಬ್ದಕ್ಕೆ ಅರ್ಥ ಮಾಡಬೇಕಾದಾಗ ನನಗೆ ಇಪ್ಪತ್ತು ವರ್ಷಗಳೂ ತಪ್ಪಿಸಿಕೊಂಡಿದ್ದ ಅರ್ಥ ಹೊಳೆಯಿತು. ಶ್ರೀಧರ ಎಂಬ ಶಬ್ದಕ್ಕೆ ವಿಷಧರ ಎಂದು ಅರ್ಥ ಮಾಡುವುದೇ ತಪ್ಪು. ವಿಷಧರ ಎಂದರೆ ಹಾವು. ಶಿವನು ವಿಷಧರಧರನೇ ಹೊರತು ವಿಷಧರನಲ್ಲ. ಅವನು ವಿಷಕಂಠ. ವಿಷಕಂಠನಾಗಿರುವುದು ಹೀಯಾಳಿಸಲು ಉಚಿತವಾದ ಕೆಲಸವಲ್ಲ. ಪ್ರಪಂಚನಾಶಕಾರಕವಾದ ವಿಷವನ್ನು ಅಧೀನದಲ್ಲಿಟ್ಟು ಪ್ರಪಂಚವನ್ನು ಕಾಪಾಡಿದ್ದು ತುಚ್ಛವಾದ ಕೆಲಸವಲ್ಲ. ಅದಕ್ಕೆ ಅವನನ್ನು ಹೊಗಳಬೇಕು. ನಂಜುಂಡನು ವಿಶ್ವರಕ್ಷಕ. ಆದುದರಿಂದ ಶ್ರೀಧರ ಎಂಬ ಶಬ್ದಕ್ಕೆ ಬೇರೆ ಅರ್ಥವಿರಬೇಕು ಎಂಬ ತೀರ್ಮಾನಕ್ಕೆ ಬಂದೆ. ಅಲ್ಲದೇ ಶ್ರೀ ಎಂಬ ಶಬ್ದಕ್ಕೆ ವಿಷ ಎಂಬ ಅರ್ಥವೇ ಇಲ್ಲ ಸಂಸ್ಕೃತದಲ್ಲಿ. ಹೀಗಿರುವುದರಿಂದ ಶ್ರೀಧರ ಶಬ್ದಕ್ಕೆ ಶಿವನಿಗೆ ಹೊಂದಿಸುವಂತೆ ಎರಡರ್ಥಗಳಿರಬೇಕು. ಒಂದು ಅವಮಾನಕಾರಕವಾದದ್ದು, ಮತ್ತೊಂದು ಗೌರವಾರ್ಹವಾದದ್ದು. ಹೀಗೆ ಯೋಚಿಸಿದಾಗ ಶ್ರೀಧರ ಎಂಬ ಶಬ್ದದಲ್ಲಿರುವ ಲಕ್ಷ್ಮೀಪತಿ ಎಂಬ ಅರ್ಥವನ್ನೇ ಕುರಿತು ಲಕ್ಷ್ಮಿಗೆ ಇವನೂ ಪತಿ ಎಂಬಂತೆ ಹಾಸ್ಯ ಮಾಡುತ್ತಿದ್ದಾನೆ ದಂತವಕ್ತ್ರ. ಹೀಗೆ ಹೆಸರಿನ ಮೇಲೆ ಅವಮಾನದ ಅರ್ಥವನ್ನು ಆರೋಪಿಸುವುದೇ ರುದ್ರಭಟ್ಟನು ಉಪಯೋಗಿಸಿರುವ ಶ್ಲೇಷಾರ್ಥದ ಸಾಧನ ಈ ವಚನದಲ್ಲಿ. ಹಾಗಾದರೆ ಶಿವನಿಗೆ ಅನ್ವಯಿಸುವಂತೆ ಶ್ರೀಧರ ಎಂಬ ಶಬ್ದಕ್ಕೆ ಅರ್ಥವೇನು ಎಂಬುದು ಮುಂದಿನ ಸಮಸ್ಯೆಯಾಯಿತು. ಆಳವಾಗಿ ಪರಿಶೀಲಿಸಿದಾಗ ನನಗೆ ಒಂದು ದಾರಿ ಹೊಳೆಯಿತು. ಚಂದ್ರನಿಗೆ ಹದಿನಾರು ಕಲೆಗಳಿವೆ. ಅವುಗಳಲ್ಲಿ ಪ್ರತಿಯೊಂದು

ಕಲೆಗೂ ಒಂದೊಂದು ಹೆಸರಿದೆ. ಇದನ್ನು ವಿವೇಕ ಚೂಡಾಮಣಿ ಗ್ರಂಥದಲ್ಲಿ ಓದಿದ ನೆನಪಾಯಿತು. ಆ ಹದಿನಾರು ಕಲೆಗಳ ಹೆಸರು ಹೀಗಿದೆ : ೧. ಅಮೃತಾ, ೨. ಮಾನದಾ, ೩. ಪೂಷಾ, ೪. ಪುಷ್ಟಿ, ೫. ತುಷ್ಟಿ, ೬. ರತಿ, ೭. ಧೃತಿ, ೮. ಶಶಿನೀ, ೯. ಚಂದ್ರಿಕಾ, ೧೦. ಕಾಂತಿ, ೧೧. ಜ್ಯೋತ್ಸ್ನಾ, ೧೨. ಶ್ರೀ, ೧೩. ಪ್ರೀತಿ, ೧೪. ಅಂಗದಾ, ೧೫. ಪೂರ್ಣಾ, ೧೬. ಪೂರ್ಣಾಮೃತಾ. ಇಲ್ಲಿ ಹನ್ನೆರಡನೆಯ ಕಲೆಯ ಹೆಸರು ಶ್ರೀ. ಆದುದರಿಂದ ಶ್ರೀಧರ ಎಂದರೆ ಚಂದ್ರಕಲಾಧರ ಎಂದೇ ಅರ್ಥ. ಈಗ ಶ್ರೀ ಎಂಬ ಶಬ್ದಕ್ಕೆ ವಿಷ ಎಂಬ ಅರ್ಥವಿಲ್ಲ ಎಂಬುದು ಇನ್ನೂ ಸ್ಪಷ್ಟವಾಯಿತು. ಶ್ರೀಧರ ಶಿವನಾಗಿ ನನಗೆ ಅನುಗ್ರಹ ಮಾಡಿದ. ಹೀಗೆ ನಿಘಂಟುಕಾರ್ಯ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡುತ್ತದೆ.

ಅರ್ಥ ನಿರ್ಧಾರ ಮಾಡಬೇಕಾದಾಗ ಅನೇಕ ವೇಳೆ ಗ್ರಂಥಪಾಠದಲ್ಲಿ ದೋಷವಿರುವುದು ಕಂಡುಬರುತ್ತದೆ. ಅಂಥ ಒಂದೆರಡು ಸಂದರ್ಭಗಳನ್ನು ವಿವರಿಸಿದರೆ ಆ ವಿಷಯವೂ ಸ್ಪಷ್ಟವಾಗುತ್ತದೆ. ಕುಮಾರವ್ಯಾಸನ ಕಾವ್ಯದಲ್ಲಿ ದ್ರೋಣಪರ್ವದ ೧೦ನೆಯ ಸಂಧಿಯ ೩೬ನೆಯ ಪದ್ಯ ಹೀಗಿದೆ :

ಮೊಗಕೆ ಭಾಣವ ಕಟ್ಟಿ ನೆಳಲಲಿ
ಬಿಗಿದು ಫಲುಗುಣ ಸಹಿತ ಕೊಳವನು
ನಗುತ ಹೊಕ್ಕನು ನೋಡುತ್ತಿದ್ದುದು ಕೂಡೆ ಕುರುಸೇನೆ
ಬಿಗಿದ ಕತ್ತಲೆ ದೂರದಲಿ ದೀ
ವಿಗೆಯ ಸುತ್ತಲು ಕಟ್ಟನಿಂದವೊ
ಲಗಣಿತ ಪ್ರತಿಸುಭಟರಿದ್ದುದು ನರನ ಬಳಸಿನಲಿ.

ಈ ಪದ್ಯದಲ್ಲಿ **ಭಾಣ** ಎಂಬ ಶಬ್ದದಲ್ಲಿ ಸಂಶಯ ಉತ್ಪತ್ತಿಯಾಗುತ್ತದೆ. ಯುದ್ಧಮಧ್ಯದಲ್ಲಿ ಕುದುರೆಗಳು ಬಿಸಿಲಿನ ಡಾವರಕ್ಕೆ ಬಲಗುಂದಿದಾಗ ಅರ್ಜುನನು ರಥದಿಂದ ನೆಲಕ್ಕೆ ಧುಮುಕಿ ವಜ್ರಶರದಿಂದ ಚಚ್ಚೌಕಾಕಾರದ ಕೊಳವೊಂದನ್ನು ನಿರ್ಮಾಣ ಮಾಡಿ ಅದರಲ್ಲಿ ವರುಣ ಬಾಣದಿಂದ ಉದಕವು ತುಂಬುವಂತೆ ಮಾಡಿದನು. ಕೃಷ್ಣನು ಕುದುರೆಗಳ ನೊಗವನ್ನು ಕಳಚಿ ಈ ಕೊಳದ ನೀರಿಗೆ ಅವುಗಳನ್ನು ಕರೆತಂದನು. ಅವು "ಎರಡಳ್ಳೆ ಹಿಗ್ಗಲು" ವರಜಲವನ್ನು ಮೊಗೆದವು. ಆ ಬಳಿಕ ಅವುಗಳನ್ನು ಕೊಳದ ತಡಿಗೆ ಹತ್ತಿಸಿ, ಮೈದಡವಿ ಗಾಯದ ಬಾಣಗಳನ್ನು ಕಿತ್ತು ಔಷಧಿಯನ್ನು ಲೇಪಿಸಿ ಕತ್ತಿನ ಬಳಿ ತಟ್ಟಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದನು. ಆಗ ಆ ಕುದುರೆಗಳು ಕೃಷ್ಣನ ಕಡೆಗೆ ತಿರುಗಿ ನೋಡಿದವು. ಹಾಗೆ ಕೃಷ್ಣನನ್ನು ನೋಡುವ ಪುಣ್ಯ ಸನಕಾದಿಗಳಿಗೂ ಇಲ್ಲವೆಂದು ಕುಮಾರವ್ಯಾಸ ವರ್ಣಿಸುತ್ತಾನೆ. ಇದಾದ ಬಳಿಕ **"ಮೊಗಕೆ ಭಾಣವ ಕಟ್ಟಿ ನೆಳಲಲಿ ಬಿಗಿದು"** ಕೃಷ್ಣಾರ್ಜುನರು ಕೊಳಕ್ಕೆ ಇಳಿಯುತ್ತಾರೆ. ಇಲ್ಲಿರುವ **ಭಾಣ** ಅಪಶಬ್ದ. ಅದು **ಖಾಣ** ಇರಬೇಕು. ಖಾಣ ಎಂದರೆ **ಖಾದನ**. ಸಂಸ್ಕೃತದ ಖಾದನದ ತದ್ಭವ ಖಾಣ. ಇದು ಕುದುರೆಯ ಆಹಾರವಾದ ಹುರುಳಿ ಮುಂತಾದ ಧಾನ್ಯವನ್ನು ಹೊಂದಿರುವ

ಚೀಲ. ಈ ಶಬ್ದವು ಕನ್ನಡಕ್ಕೆ ೧೨ನೆಯ ಶತಮಾನದಿಂದಲೇ ಗೊತ್ತಿರುವುದು. ಕುಮಾರವ್ಯಾಸನೇ ಇತರ ಕಡೆಗಳಲ್ಲಿ ಉಪಯೋಗಿಸಿದ್ದಾನೆ. ಆದ್ದರಿಂದ ಇದನ್ನು **ಖಾಣ** ಎಂದು ಪದ್ಯದಲ್ಲಿ ತಿದ್ದಬೇಕು.

ಗ್ರಂಥ ಸಂಪಾದನೆಯ ಕಡೆ ಗಮನವಿಲ್ಲದಿದ್ದಾಗ 'ಮರಹು ದೇಹಾಲಸ್ಯವೆಡೆಗೊಳಲು' ಎಂಥ ವಿದ್ವಾಂಸರಿಗೂ ಇದು ಕಣ್ತಪ್ಪಿಸಿ ಬಿಡುತ್ತದೆಂಬುದಕ್ಕೆ ಈ ಪದ್ಯವನ್ನು ಕುರಿತು ತೀನಂಶ್ರೀಯವರು ಅವರ ಭಾರತೀಯ ಕಾವ್ಯಮೀಮಾಂಸೆಯಲ್ಲಿ (ಪುಟ ೪೨೫) ಈ ಭಾಣ ಎಂಬ ರೂಪವನ್ನೇ ಒಪ್ಪಿಕೊಂಡಿರುವುದೇ ಉದಾಹರಣೆಯಾಗಿದೆ.

ಕುಮಾರವ್ಯಾಸನದೇ ಮತ್ತೊಂದು ಪದ್ಯವನ್ನು ಪರಿಶೀಲಿಸುವುದು ನನ್ನ ಅಭಿಪ್ರಾಯವನ್ನು ಬಲಗೊಳಿಸುತ್ತದೆ. ಇದು ಶಲ್ಯಪರ್ವದ ಪದ್ಯ. ಈ ಪದ್ಯದಲ್ಲಿ ಅಶ್ವತ್ಥಾಮ್ನನ ಚಾಪವಿದ್ಯಾ ಪರಿಣತಿಯನ್ನು ಹೊಗಳಲಾಗಿದೆ (ಪದ್ಯ ೧೫ ಸಂಧಿ ೬). ಆ ಪದ್ಯ ಇದು :

ಏನ ಹೇಳುವೆ ಗಜಘಟಾಪ್ರತಿ
ಮಾನದಲಿ ಕೋದಂಬುಗಳು ಹಿಂ
ಡಾನೆಗಳನೇಳಿಂಟನೊದೆದೋಡಿದವು **ಪಂಚಕವ**
ಭಾನುರಶ್ಮಿಗಳಂಧಕಾರದ
ಮಾನಗರ್ವವ ಮುರಿವವೊಲು ಗುರು
ಸೂನುವಿನ ಶರ ಸವರಿದವು ಕರಿಘಟೆಯ ಬಲುಮೆಳೆಯ

ಈ ಪದ್ಯದಲ್ಲಿ **ಪಂಚಕ**ವೆಂಬ ಶಬ್ದಕ್ಕೆ ಅರ್ಥವೇ ಆಗುವುದಿಲ್ಲ. ಪ್ರತಿಮಾನ ಎಂದರೆ ಆನೆಯ ಎರಡು ಕೊಂಬುಗಳ ನಡುವಣ ಹಣೆಯ ಪ್ರದೇಶ. ಇಂಥ ಪ್ರದೇಶಕ್ಕೆ ಗುರಿಯಿಟ್ಟು ಹೊಡೆದ ಬಾಣ ಒಂದರ ಹಿಂದೆ ಒಂದರಂತೆ ಸೇನಾ ವ್ಯೂಹದಲ್ಲಿ ನಿಂತಿದ್ದ ಏಳೆಂಟಾನೆಗಳನ್ನು ಕೋದು = ಪೋಣಿಸಿ ಆ ಆನೆಗಳ ಹಿಂಭಾಗದಿಂದ ಓಡಿ ಹೋದವು ಎಂದರ್ಥ. ಆನೆಗಳ ಬಾಲದ ಮೇಲ್ದುದಿಯ ಭಾಗಕ್ಕೆ **ಪೇಚಕ** ಎಂದು ಹೆಸರು. ಇಲ್ಲಿ **ಪೇಚಕ** ಶಬ್ದವು ಬರಹದ ದೋಷದಿಂದ **ಪಂಚಕ** ಆಗಿದೆ. ಪ್ರಾಚೀನ ಕಾವ್ಯಗಳಲ್ಲಿ ಬರುವ ಅನೇಕ ಶಬ್ದಗಳು ಹೀಗೆ ದೋಷಯುಕ್ತವಾಗಿರುತ್ತವೆ. ನಿಘಂಟುಕಾರರು ಇತ್ತಕಡೆ ಸೂಕ್ಷ್ಮ ಗಮನವನ್ನು ಹರಿಸಬೇಕು.

ಹೀಗೆ ಪರ್ಯಾಯ ರೂಪಗಳನ್ನು ವ್ಯಾಕರಣದ ಸಂಬಂಧವನ್ನೂ ಅರ್ಥನಿರ್ಧಾರವನ್ನೂ ಮಾಡಿದ ಮೇಲೆ ಅರ್ಥನಿರ್ಧಾರಕ್ಕೆ ಸಹಾಯಮಾಡಿದ ಕಾವ್ಯಪ್ರಯೋಗಗಳು ಮತ್ತು ಇತರ ಸಾಧನಗಳನ್ನು ಕ್ರಮವಾಗಿ ಜೋಡಿಸುವುದು ಮುಂದಿನ ಕೆಲಸ.

೬. ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು :

ಒಂದು ನಿಘಂಟಿಗೆಂದು ಸಾವಿರಾರು ಗ್ರಂಥಗಳಿಂದಲೂ ಶಾಸನಗಳಿಂದಲೂ ಪೂರ್ವನಿಘಂಟುಗಳಿಂದಲೂ ವಾಗ್ರೂಢಿಗಳಿಂದಲೂ ಗಾದೆಗಳಿಂದಲೂ ಆರಿಸಿರುವ ಪ್ರಯೋಗದ ಪಟ್ಟಿಕೆಗಳು ಲಕ್ಷಾಂತರ ಇರುತ್ತವೆ. ಇವುಗಳು ಅಕಾರಾದಿಯಾಗಿ ಜೋಡಣೆಗೊಂಡಾಗ

ಒಂದೊಂದೇ ಶಬ್ದಕ್ಕೆ ನೂರಾರು ಪಟ್ಟಿಕೆಗಳು ದೊರಕಬಹುದು. ಪರ್ಯಾಯ ರೂಪಗಳ ಪಟ್ಟಿಕೆಗಳನ್ನೂ ಒಟ್ಟು ಸೇರಿಸಿದರೆ ಅವು ಇನ್ನೂ ಹೆಚ್ಚಬಹುದು. ನಿಘಂಟಿನಲ್ಲಿ ಅವುಗಳೆಲ್ಲವನ್ನೂ ಉಲ್ಲೇಖ ಮಾಡುವುದು ಅಸಾಧ್ಯವಾದ ಕೆಲಸ. ಆದರೆ ಆ ಎಲ್ಲ ಪಟ್ಟಿಕೆಗಳ ಪ್ರಯೋಜನವನ್ನು ನಾವು ಪಡೆದಿರುತ್ತೇವೆ. ಆದುದರಿಂದ ಒಂದು ಶಬ್ದಕ್ಕೆ ಎಷ್ಟು ಅರ್ಥಗಳಿವೆ ಎಂಬುದನ್ನು ಮೊದಲು ನಿರ್ಧರಿಸಿ ಅವುಗಳನ್ನು ತಾರ್ಕಿಕವಾದ ಕ್ರಮದಲ್ಲಿ ಅಳವಡಿಸಬೇಕು. ಪ್ರತಿಯೊಂದು ಪರ್ಯಾಯ ರೂಪಕ್ಕೂ ಇರುವ ಪಟ್ಟಿಕೆಗಳನ್ನು ಆ ಬಳಿಕ ಕಾಲಕ್ರಮದಲ್ಲಿ ಜೋಡಿಸಬೇಕು. ಕವಿ, ಶಾಸನ ಇತ್ಯಾದಿಗಳ ಕಾಲನಿರ್ಣಯವನ್ನು ಅನುಸರಿಸಿ ಈ ಪಟ್ಟಿಕೆಗಳನ್ನು ಜೋಡಿಸಬೇಕು. ಆ ಬಳಿಕ ಒಂದೊಂದು ಶತಮಾನಕ್ಕೆ ಒಂದರಂತೆ ಪ್ರಯೋಗಗಳನ್ನು ಆರಿಸಬೇಕು. ಪ್ರತಿಯೊಂದು ಪರ್ಯಾಯ ರೂಪಕ್ಕೂ ಶತಮಾನಗಳ ಅನುಸಾರವಾಗಿ ಪಟ್ಟಿಕೆಗಳನ್ನು ಜೋಡಿಸಬೇಕು. ಆದರೂ ಈ ಪಟ್ಟಿಕೆಗಳ ಸಂಖ್ಯೆ ಕಡಿಮೆಯೇನೂ ಆಗಿರುವುದಿಲ್ಲ. ಆದುದರಿಂದ ಪ್ರಯೋಗಗಳಲ್ಲಿ ಅರ್ಥನಿರ್ಧಾರ ಮಾಡುವುದಕ್ಕೆ ಸ್ವಾರಸ್ಯಕರವಾಗಿರುವ, ಕಾವ್ಯಮಯವಾಗಿರುವ ಶ್ರೇಷ್ಠಕವಿಗಳಿಂದ ರಚಿತವಾದ ಪ್ರಯೋಗಗಳನ್ನೇ ಆರಿಸುವುದು ಉತ್ತಮ. ಕಾವ್ಯಗುಣವುಳ್ಳ ಪ್ರಯೋಗಗಳನ್ನು ಆರಿಸುವುದು ಎಂದರೆ ಕಾವ್ಯದ ರಸಾಸ್ವಾದನದಲ್ಲಿಯೂ ವಿಮರ್ಶೆಯಲ್ಲಿಯೂ ನಿಘಂಟುಕಾರನಿಗೆ ತಕ್ಕಷ್ಟು ಪರಿಶ್ರಮವಿರಬೇಕು ಎಂದಂತಾಯಿತು.

ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ : ನೆರಪು, ನೆರಹು ಎಂಬ ಶಬ್ದಕ್ಕೆ ೧. ಕೂಡಿಸು, ಸೇರಿಸು, ೨. ವಿವಾಹದಿಂದ ಜೊತೆ ಮಾಡು, ೩. ಶೇಖರಿಸು, ೪. ಗಳಿಸು, ಸಂಪಾದಿಸು. ೫. ರಾಶಿಹಾಕು, ೬. ಸಂದಣಿಸು, ಗುಂಪುಮಾಡು, ೭. ಉಂಟುಮಾಡು, ೮. ಕೂಡು, ವಿವಾಹವಾಗು ಎಂಬ ಅರ್ಥಗಳು ಬರುತ್ತವೆ. ಇಲ್ಲಿ ನೀಡಿರುವ ಅರ್ಥಗಳು ಚಾರಿತ್ರಿಕವಾಗಿಲ್ಲ. ಕೂಡಿಸು, ಸೇರಿಸು ಎಂಬ ಅರ್ಥ ೧೧ನೆಯ ಶತಮಾನಕ್ಕೆ ಸೇರುತ್ತದೆ. ವಿವಾಹ ಮಾಡಿಸು ಎಂಬ ಅರ್ಥ ೧೦ನೆಯ ಶತಮಾನದಲ್ಲಿ ಪಂಪಕವಿಯೇ ಉಪಯೋಗಿಸಿದ್ದಾನೆ. "ನಿಜ ತನೂಜೆಯನುತ್ಸವಮಂಗಳಾನಕಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್" ಆದರೆ, 'ಪ್ರಜಾಪರಿವಾರಮಂ ನೆರಪಿ' ಎಂಬ ವಾಕ್ಯದಲ್ಲಿ ಬರುವ ಜನರನ್ನು ಸೇರಿಸು ಎಂಬ ಅರ್ಥ ಸಾಧಾರಣವಾದದ್ದಾಗಿ ಮೊದಲು ಬರುತ್ತದೆ. ವಿವಾಹದಲ್ಲಿ ಇಬ್ಬರನ್ನು ಒಂದು ಮಾಡುವುದು ಮೊದಲ ಅರ್ಥದ ವಿಸ್ತಾರಪಡಿಸಿದ ಅರ್ಥ. ಆದ್ದರಿಂದ ಅದು ಎರಡನೆಯ ಜಾಗಕ್ಕೆ ಸರಿಯುತ್ತದೆ. ಹೀಗೆ ತಾರ್ಕಿಕವಾದ ಅರ್ಥವಿಸ್ತಾರದಿಂದ ಅನೇಕ ಅರ್ಥಗಳು ಬರುವುದನ್ನು ತರ್ಕ ಅನ್ವಯವಾಗುವ ರೀತಿಯನ್ನು ಗಮನಿಸಿ ಮೇಲಿನ ಈ ಒಂಬತ್ತು ಅರ್ಥಗಳನ್ನೂ ಕ್ರಮಪಡಿಸಲಾಗಿದೆ.

ಹೀಗೆಯೇ ಇನ್ನೊಂದು ಶಬ್ದದ ಅರ್ಥಗಳನ್ನು ಪರಿಶೀಲಿಸೋಣ. ಶಬ್ದ ನೆಲೆ ಎಂಬುದಕ್ಕೆ ಇರುವ ಅರ್ಥಗಳನ್ನು ಲೆಕ್ಕಹಾಕೋಣ. ೧. ಆಶ್ರಯ, ಆಧಾರ, ಪ್ರಯೋಗ ಅಜಿತಪುರಾಣದ ಪದ್ಯ (೨-೩೨). "ನೆಲೆ ಯೌವನ ಲಕ್ಷ್ಮಿಗೆ, ನೆಲೆ ಚಿತ್ತಭವಂಗೆ, ನೃಪನಕಣ್ಗಂ ಮನಕ್ಕಂ ನೆಲೆ, ತಾರಹಾರಶೋಭೆಗೆ ನೆಲೆಯೆನೆ ನೆಲೆಮೊಲೆಗಳೆನಿಕುಮಬಲೆಯ ಮೊಲೆಗಳ್".

ಆಶ್ರಯಯೆಂಬ ಅರ್ಥದಿಂದ ಬೆಳೆದು, ೨. ವಾಸಸ್ಥಾನ, ೩. ಮನೆಯ ಒಂದು ಭಾಗ, ೪. ಉಪ್ಪರಿಗೆ. ೫. ಯಾವುದಾದರೂ ಸ್ಥಳ, ೬. ಭೂಮಿ, ೭. ಸಂಸಾರ, ೮. ಗುಟ್ಟು, ರಹಸ್ಯ, ೯. ಆಳ, ಮರ್ಮ, ೧೦. ತಲೆ, ಬುಡ, ೧೧. ಸತ್ಯ, ದಿಟ, ೧೨. ಸ್ಥಿರತೆ, ೧೩. ನಿರ್ಧಾರ, ೧೪. ಶಾಶ್ವತವಾಗಿರುವಿಕೆ, ೧೫. ಎತ್ತರ, ೧೬. ನಿಂತಿರುವ ರೀತಿ, ೧೭. ಸ್ಥಿತಿ, ೧೮. ಮಟ್ಟ, ದರ್ಜೆ, ೧೯. ಧೋರಣೆ, ಮನಸ್ಸಿನ ನಿಲವು, ೨೦. ಹಂತ, ಮಜಲು, ೨೧. ಕಾರಣ, ೨೨. ಗುರಿ, ಉದ್ದೇಶ, ೨೩. ಸರಿಯಾದ ಮಾರ್ಗ, -ಇಷ್ಟು ಅರ್ಥಗಳು ಬೆಳೆದಿವೆ. ಈಗ ಕೊನೆಯ ಅರ್ಥಕ್ಕೆ ಸಹಾಯ ಮಾಡುವ ಪ್ರಯೋಗವನ್ನು ನೋಡೋಣ. "ಕಳುಹು ಲಲನಾಜನವನಾ ಮುನಿಕುಲಲಲಾಮನ ಬಳಿಗೆ, ಸತಿಯರ ಬಲೆಗೆ ಸಿಲುಕದವರಾರು, ತ್ರೈಮೂರುತಿಗಳೊಳಗಾಗಿ, ನೆಲೆಯಿದೀಗಯೆನುತಾ ನೃಪಾಲನ ತಿಳುಹಿದಸು" (ತೊರವೆ ರಾಮಾಯಣ, ಬಾಲಕಾಂಡ ಸಂಧಿ ೫-ಪದ್ಯ ೨೫) ಇದು ಋಷ್ಯಶೃಂಗ ಮುನಿಯನ್ನು ಕರೆದುತರುವ ಪ್ರಸಂಗ. ಇಲ್ಲಿ ಸರಿಯಾದ ಮಾರ್ಗ, ಕ್ರಮ ಎಂಬುದು ಚೆನ್ನಾಗಿ ಹೊಂದುತ್ತದೆ. ಈ ನಡುವಿನ ಇತರ ಎಲ್ಲ ಅರ್ಥಗಳಿಗೂ ಹೊಂದುವ ಪ್ರಯೋಗಗಳಿವೆ. ಇಷ್ಟೊಂದು ಅರ್ಥವು ವ್ಯಾಪಕವಾಗಿ ಬೆಳೆಯುವಾಗ ನಿಘಂಟುಕಾರನು ಗುರುತಿಸಿರುವ ಕ್ರಮವೇ ಎಲ್ಲ ಕಡೆಯೂ ಸರಿ ಎಂದು ತೀರ್ಮಾನ ಮಾಡುವುದು ಕಷ್ಟ. ಆದರೆ ಒಂದೆರಡು ಸಂಖ್ಯೆಯ ಕ್ರಮದಲ್ಲಿ ವ್ಯತ್ಯಾಸ ಕಂಡುಬಂದರೂ ಅದು ಅರ್ಥ ಬೆಳೆದಿರುವುದನ್ನು ವಿರೋಧಿಸಲಾಗದು. ಅಂದರೆ ತರ್ಕದಿಂದ ಬೆಳೆದ ಅರ್ಥವನ್ನೂ ನಿಘಂಟಾಗಿ ಗುರುತಿಸುವುದು ಕಷ್ಟವೆಂಬ ಅಂಶವನ್ನು ಇದು ಸಾಧಿಸಿ ತೋರಿಸುತ್ತದೆ.

ಅನೇಕಾರ್ಥಗಳಿರಲಿ, ಒಂದೇ ಅರ್ಥವಿರಲಿ ಆ ಅರ್ಥವನ್ನು ದೃಢಪಡಿಸುವುದಕ್ಕೆ ಒಂದು ಪ್ರಯೋಗವಿರಲೇಬೇಕು. ಇಲ್ಲದಿದ್ದರೆ ನಿಘಂಟಿನ ಅಧಿಕಾರಪೂರ್ಣವಾಗುವುದಿಲ್ಲ. ಆದುದರಿಂದ ಯಾವ ಪ್ರಯೋಗವೂ ದೊರಕದೆ ಇದ್ದಾಗ ನಿಘಂಟುಕಾರನಿಗೆ ನಿಘಂಟು ರಚನೆಯ ಸಂಪ್ರದಾಯದಲ್ಲಿ ಒಂದು ಅಧಿಕಾರ ಬರುತ್ತದೆ. ಅದು ರೂಢಿಗೆ ಮರೆಹೋಗುವುದು. ರೂಢಿ ಎಂದು ಸೂಚಿಸಿ ಜನರ ಆಡುಮಾತಿನಲ್ಲಿ ಕಾಣಬರುವ ಯಾವುದಾದರೂ ಉಚಿತವಾದ ವಾಕ್ಯವನ್ನು ಸೂಚಿಸಬಹುದು. ಉದಾಹರಣೆಗೆ, ನೋಡಿಸು ಎಂಬ ಶಬ್ದಕ್ಕೆ ಜಾತಕವನ್ನು ತೋರಿಸು ಎಂದರ್ಥವಿದೆ. ಇದು ಮದುವೆಯ ವಿಷಯಕ್ಕೆ ಆಗಬಹುದು. ಆರೋಗ್ಯದ ವಿಚಾರಕ್ಕೆ ಆಗಬಹುದು. ಅಧಿಕಾರದಲ್ಲಿ ಬಡ್ತಿ ದೊರೆಯುವುದಕ್ಕೆ ಆಗಬಹುದು. ಪರದೇಶ ಪ್ರಯಾಣ ಇದೆಯೇ ಇಲ್ಲವೇ ಎಂದು ತಿಳಿಯಲು ಕೂಡ ಜಾತಕವನ್ನು ನೋಡಿಸುತ್ತಾರೆ. ಇಂಥ ಕಡೆಗಳಲ್ಲಿ ಜೋಯಿಸರಲ್ಲಿ ನೋಡಿಸಿ ತಿಳಿದುಕೋ ಎಂಬ ವಾಕ್ಯ ಸಾಮಾನ್ಯ. ಈ ಶಬ್ದಕ್ಕೆ ಮೇಲಿನ ವಾಕ್ಯವನ್ನೇ ರೂಢಿ ಎಂದು ಹೇಳಿ ಉಲ್ಲೇಖಿಸಬಹುದು.

ದುಷ್ಟಶಿಕ್ಷಣ, ಶಿಷ್ಟರಕ್ಷಣ ಎಂಬ ಜೋಡಿ ಶಬ್ದಗಳು ಕಾವ್ಯದಲ್ಲಿ ಪ್ರಯೋಗಗಳಲ್ಲಿ ದೊರಕುತ್ತವೆ. **ಅಸದನುಶಾಸನಂ ಸದವನಂ** ಎಂಬ ಮಾತಿನಂತೆ ಅವೂ ಸಾಮಾನ್ಯ. ಆದರೆ **ದುಷ್ಟ ಶಿಕ್ಷೆ, ಶಿಷ್ಟರಕ್ಷೆ** ಎಂಬ ರೂಪಗಳು ಗ್ರಂಥಗಳಲ್ಲಿ ಕಾಣಬರುವುದಿಲ್ಲ. ರೂಢಿಯಲ್ಲಿ,

ಭಾಷಣಗಳಲ್ಲಿ ಪ್ರಯೋಗದಲ್ಲಿ ದೊರೆಯುತ್ತವೆ. ಆಗ ಅವುಗಳನ್ನು ರೂಢಿ ಎಂದು ಹೇಳಿ ಉಲ್ಲೇಖ ಮಾಡಬಹುದು. ಈ ರೂಢಿಯ ಉಲ್ಲೇಖವೆಂಬ ಅಧಿಕಾರವನ್ನು ಕ್ವಚಿತ್ತಾಗಿ ಉಪಯೋಗಿಸಬೇಕು. ಪ್ರಯೋಗಗಳನ್ನು ಹುಡುಕಿ ಅವು ಸಿಗದೆ ಹೋದಾಗ ಮಾತ್ರ ಇವುಗಳಿಗೆ ಪ್ರಯೋಜನ.

ಅರ್ಥನಿರ್ಧಾರವಾಗಿ ಅವುಗಳಿಗೆ ಪ್ರಯೋಗಗಳನ್ನು ಜೋಡಿಸಿದ ಮೇಲೆ ಒಂದು ಶಬ್ದಕ್ಕೆ ಒಂದು ಅರ್ಥಕ್ಕೆ ಎಷ್ಟು ಪ್ರಯೋಗಗಳನ್ನು ಅನ್ವಯಿಸಿ ಕೊಡಬೇಕೆಂಬುದು ಒಂದು ಪ್ರಶ್ನೆಯಾಗಿ ಉಳಿಯುತ್ತದೆ. ಅದಕ್ಕೆ ಯಾವುದಾದರೂ ಒಂದು ಸೂತ್ರವನ್ನು ಸಿದ್ಧಪಡಿಸಿ ನಿಘಂಟುಕಾರನು ಅದನ್ನು ನಿಘಂಟಿನ ಮೊದಲಿನಿಂದ ಕೊನೆಯವರೆಗೂ ಅನುಸರಿಸಬೇಕು. ಅತಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಶಬ್ದಗಳಿಗೆ, ಮತ್ತು ಅವುಗಳ ಪರ್ಯಾಯ ರೂಪಗಳಿಗೂ ಒಂದು ಅರ್ಥಕ್ಕೆ ಶತಮಾನಕ್ಕೆ ಒಂದರಂತೆ ಪ್ರಯೋಗಗಳನ್ನು ಹೊಂದಿಸುವುದು ಸೂಕ್ತ. ಇದು ಸಾಮಾನ್ಯವಾದ ಮಾರ್ಗ. ವಿಶೇಷ ಸಂದರ್ಭಗಳಲ್ಲಿ ಈ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅದು ನಿಘಂಟಿನ ಸತ್ವವಾದ ಅರ್ಥನಿರ್ಧಾರಕ್ಕೆ ಸಹಾಯಕವಾಗುವುದಾದರೆ ಅದು ತಪ್ಪಲ್ಲ. ಎಲ್ಲ ಶತಮಾನದ ಕಾವ್ಯಗಳಲ್ಲಿಯೂ ಎಲ್ಲ ಶಬ್ದಗಳಿಗೂ ಪ್ರಯೋಗಗಳು ದೊರಕುತ್ತವೆ ಎಂಬ ಖಾತರಿಯೇನೂ ಇಲ್ಲ.

ಉದಾಹರಣೆಗೆ ನೋಯಿಸು ಶಬ್ದಕ್ಕೆ ನಾಲ್ಕು ಅರ್ಥಗಳಿವೆ.

೧. ನೋವನ್ನು ಉಂಟುಮಾಡು, ಬಾಧೆಪಡಿಸು.

೨. ಗಾಯಗೊಳಿಸು, ಘಾಸಿ ಮಾಡು.

೩. ದುಃಖಪಡುವಂತೆ ಮಾಡು, ವ್ಯಥೆಗೊಳಿಸು.

೪. (ದೇಹವನ್ನು) ದಂಡಿಸು, ಕಾಯಕ್ಲೇಶ ಮಾಡು.

ಈ ಅರ್ಥಗಳಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಕೊಟ್ಟಿರುವ ಪ್ರಯೋಗಗಳು ಹೀಗಿವೆ :

ಮೊದಲನೆಯ ಅರ್ಥಕ್ಕೆ, ೧. ಆದಿಪುರಾಣ ೧೧-೧೨೮, ೨. ಪಂಪಭಾರತ ೫-೮೧, ೩. ಬಸವೇಶ್ವರ ವಚನ ೪೦೬, ೪. ಪುರಂದರದಾಸ ೧-೧೭೬-೧.

ಎರಡನೆಯ ಅರ್ಥಕ್ಕೆ, ೧. ಕುಮಾರವ್ಯಾಸ, ದ್ರೋಣಪರ್ವ, ೧೩-೬೪, ೨. ಜೈಮಿನಿಭಾರತ ೨೧-೩೪.

ಮೂರನೆಯ ಅರ್ಥಕ್ಕೆ, ೧. ಪಂಪಭಾರತ ೭-೪೮, ೨. ಕಾದಂಬರಿ ಉತ್ತರಭಾಗ ೩೦೩, ೩. ಪಂಚತಂತ್ರ ೭೭-೧೦, ೪. ಕುಮಾರವ್ಯಾಸ, ದ್ರೋಣಪರ್ವ ೧೬-೨೬. ೫. ಹದಿಬದೆಯಧರ್ಮ ೩-೨೬.

ನಾಲ್ಕನೆಯ ಅರ್ಥಕ್ಕೆ, ೧. ಧರ್ಮಾಮೃತ ೬-೧೫೬.

ಇವುಗಳ ಪರಿಶೀಲನೆಯಿಂದ ಮೂರನೆಯ ಅರ್ಥಕ್ಕೆ ಹೆಚ್ಚು ಪ್ರಯೋಗಗಳು ಸಿಕ್ಕಿರುವುದು, ಮಿಕ್ಕ ಅರ್ಥಗಳಿಗೆ ಕಡಿಮೆ ಪ್ರಯೋಗಗಳು ದೊರಕಿರುವುದೂ ಸ್ಪಷ್ಟವಾಗುತ್ತದೆ. ಅನೇಕ ಶಬ್ದಗಳಿಗೆ ಹೀಗೆಯೇ ಎಲ್ಲ ಶತಮಾನಗಳಲ್ಲಿಯೂ ಪ್ರಯೋಗಗಳು ದೊರಕುವುದಿಲ್ಲ. ಆದರೆ ನಾವು ೧೨ನೆಯ ಶತಮಾನಕ್ಕೋ ೧೪ನೆಯ ಶತಮಾನಕ್ಕೋ ರೂಢಿ ಎಂದು ಯಾವ ಪ್ರಯೋಗವನ್ನೂ ಟಂಕಿಸುವುದು ಸಾಧುವಾಗುವುದಿಲ್ಲ. ಹಿಂದೆ ಹೇಳಿರುವಂತೆ ಈ ಪ್ರಯೋಗಗಳ ಆಯ್ಕೆಯಲ್ಲಿ ಕಾವ್ಯಮಯವಾದ, ಸ್ವಾರಸ್ಯವುಳ್ಳ, ಆ ಪ್ರಯೋಗವು ಬಂದ ಕಾವ್ಯಭಾಗವನ್ನೂ ಓದಬೇಕೆಂಬ ಆಸೆಯನ್ನುಂಟು ಮಾಡುವಂಥವುಗಳನ್ನೇ ಆರಿಸಬೇಕಾದುದು ನಿಘಂಟುಕಾರನ ಕರ್ತವ್ಯ.

೭. ನುಡಿಗಟ್ಟುಗಳ ಉಲ್ಲೇಖ :

ಅರ್ಥ ನಿರ್ಧಾರದ ಭಾಗ ಮುಗಿದ ಬಳಿಕ, ಭಾಷೆಯಲ್ಲಿ ಕಂಡುಬರುವ ವಾಗ್ರೂಢಿಗಳು (usages), ಜೋಡುನುಡಿಗಳು, ನುಡಿಗಟ್ಟುಗಳು (Collocations) ಇವುಗಳನ್ನು ಗುರುತಿಸಿ ಅವುಗಳಿಗೆ ವಿಶೇಷಾರ್ಥವೇನಾದರೂ ಇದ್ದರೆ ಅವುಗಳನ್ನೂ ಗುರುತಿಸಿ ಉಲ್ಲೇಖಿಸಬೇಕು. ಉದಾಹರಣೆಗೆ **ನೇಲು** ಶಬ್ದದ ಕೆಳಗೆ **ನೇತುಹಾಕಿಕೋ** ಎಂಬುದು ವಾಗ್ರೂಢಿಯಾಗಿ ಬರಬೇಕು. **ನೆತ್ತಿ** ಶಬ್ದದ ಕೆಳಗೆ **ನೆತ್ತಿಗೇರು**, ನೀರ್ ಶಬ್ದದ ಕೆಳಗೆ **ನೀರಕಂಡಿ, ನೀರಿನ ಕಡೆಗೆ ಹೋಗು, ನೀರಲ್ಲಿ ಮುಳುಗು, ನೀರಿನಲ್ಲಿ ಹೋಮಮಾಡು** ಮುಂತಾದ ವಾಗ್ರೂಢಿಗಳು ಬರಬೇಕು. "ಎಳದು" ಕೆಳಗಡೆ **ಎಳೆಯ ನಿಂಬೆಕಾಯಿ**, "ಎಂಜಲು" ಕೆಳಗೆ **ಎಂಜಲು ತಿನ್ನು**, "ಉಗುಳು" ಕೆಳಗಡೆ **ಉಗುಳು ನುಂಗು**, "ಉಗುರು" ಕೆಳಗೆ **ಉಗುರಬೆಚ್ಚಗೆ**, "**ಇದಿರು**" (ಎದಿರು) ಶಬ್ದದ ಕೆಳಗಡೆ **ಎದುರುಹಾಕಿಕೋ** ಮುಂತಾಗಿ ವಾಗ್ರೂಢಿಗಳನ್ನು ಗುರುತಿಸಬೇಕು. ಹೀಗೆಯೇ **ಎಂಜಲು ಉಗುಳು, ಎದುರು ಬದಿರು** ಎಂಬಂಥ ಜೋಡುನುಡಿಗಳನ್ನೂ ಗುರುತಿಸಬೇಕು.

೮. ವ್ಯುತ್ಪತ್ತಿಯನ್ನು ನಿರ್ಧಾರ ಮಾಡುವುದು :

ಕನ್ನಡಕ್ಕೆ ಅನೇಕ ಭಾಷೆಗಳಿಂದ ಶಬ್ದಗಳು ಎರವಲಾಗಿ ಬಂದಿವೆ. ಈ ಎರವಲು ಶಬ್ದಗಳು ಈಗ ಸ್ವಂತ ಆಸ್ತಿಯಾಗಿಬಿಟ್ಟಿವೆ. ಅವುಗಳ ಮೂಲವನ್ನು ಗುರುತಿಸಬೇಕು. ದ್ರಾವಿಡ ಭಾಷೆಯ ಶಬ್ದಗಳನ್ನು ಜ್ಞಾತಿ ಶಬ್ದಗಳೆಂದು ಗುರುತಿಸಬೇಕು. ಸಂಸ್ಕೃತದ ಶಬ್ದವನ್ನು ಸಂಸ್ಕೃತದಿಂದ ಬಂದವೆಂದು ತಿಳಿಸಬೇಕು. ಕೆಲವು ಶಬ್ದಗಳು ಸಂಸ್ಕೃತದ ಮೂಲವನ್ನು ಹೊಂದಿದ್ದರೂ ನಮಗೆ ಪ್ರಾಕೃತದ ಮೂಲಕ ಬಂದಿವೆ. ಅವುಗಳನ್ನು, ಪ್ರಾಕೃತದ ಶಬ್ದ ರೂಪವನ್ನು ತಿಳಿಸಿ, ವ್ಯುತ್ಪತ್ತಿ ಭಾಗದಲ್ಲಿ ಸ್ಪಷ್ಟಪಡಿಸಬೇಕು.

ಈಗ ಕನ್ನಡದ **ದಳವಾಯಿ** ಶಬ್ದವನ್ನು ಪರಿಶೀಲಿಸೋಣ. ಪ್ರೌಢಶಾಲೆಗಳಲ್ಲಿಯೂ, ಕಾಲೇಜುಗಳಲ್ಲಿಯೂ ಆ ಶಬ್ದವನ್ನು ವಿವರಿಸುವಾಗ ಅದು ಸಮಾಸ ಶಬ್ದವೆಂದು ಹೇಳಿ ಅದಕ್ಕೆ ವಿಗ್ರಹವಾಕ್ಯವನ್ನೂ ಹೀಗೆ ಸೂಚಿಸುತ್ತಿದ್ದರು : **ದಳದ + ಬಾಯ್ = ದಳವಾಯ್**. ಆದರೆ **ದಳದ + ಬಾಯಿ = ದಳವಾಯಿ** - ಇದನ್ನು ಚೆನ್ನಾಗಿ ಪರಿಶೀಲಿಸಿದರೆ ಈ ವಿಗ್ರಹವಾಕ್ಯ ತಪ್ಪುಕಲ್ಪನೆಯಿಂದ ಮಾಡಿದ್ದು ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಯಾವ ಬಾಯಿಯೂ ಇಲ್ಲ. ದಳದ ಬಾಯಿಯಾಗಿ ಮಾತನಾಡುವ ಪ್ರಜಾಸತ್ತೆಯ ಅರ್ಥವಾಗಲಿ, ದಳದ ಮುಂದೆ ನಿಂತು

ಯುದ್ಧ ಮಾಡುವ ಕಾರ್ಯದಲ್ಲಿ ನಿಯುಕ್ತನಾದವನೆಂಬ ಅರ್ಥವಾಗಲಿ ಅಲ್ಲಿ ಇಲ್ಲ. ಇದು ಸಂಸ್ಕೃತದ **ದಳಪತಿ** ಶಬ್ದವೇ. ಅದು ಪ್ರಾಕೃತದಲ್ಲಿ **ದಳವೀ** ಎಂದಾಗುತ್ತದೆ. ಅಲ್ಲಿಂದ ಮುಂದೆ ಕನ್ನಡದಲ್ಲಿ ಮತ್ತು ಇತರ ಭಾಷೆಗಳಲ್ಲಿ ದಳವಾಯ್, ದಳವಾಯಿ ಆಗಿದೆ. ಇದು ನನಗೆ ಗೊತ್ತಾದಾಗ ಶಬ್ದದ ಬೆಳವಣಿಗೆಯ ಬಗ್ಗೆ ನಾವು ಎಷ್ಟು ಎಚ್ಚರವಾಗಿರಬೇಕೆಂಬ ಒಂದು ಭಯವುಂಟಾಯಿತು. ತೆಲುಗಿನಲ್ಲಿ ದಳವಾಯಿ, ಮರಾಠಿಯಲ್ಲಿ ದಳವಈ, ದಳವಾಯೀ, ದಳವ್ವೆ ಎಂಬ ರೂಪಗಳನ್ನು ಕಂಡಮೇಲೆ ಈ ಶಬ್ದದ ಬಗ್ಗೆ ಇನ್ನಷ್ಟು ತಿಳಿವಳಿಕೆ ಬಂತು. ಹೀಗೆಯೇ ಪಾರಸೀ, ಅರಬ್ಬೀ, ಇಂಗ್ಲಿಷ್, ಪೋರ್ಚುಗೀಸ್, ಹಿಂದೀ, ಉರ್ದು ಮುಂತಾದ ಭಾಷೆಗಳಿಂದಲೂ ಬಂದಿರುವ ಶಬ್ದಗಳನ್ನು ಗುರುತಿಸಿ ಅವುಗಳ ಮೂಲ ಶಬ್ದದ ಸ್ವರೂಪವನ್ನೂ ಆ ಭಾಷೆಯಲ್ಲಿರುವ ಮೂಲ ಅರ್ಥವನ್ನೂ ತಿಳಿಸಿದರೆ ಭಾಷಾ ಶಾಸ್ತ್ರದ ಬಗ್ಗೆ ಕನ್ನಡದ ಜನರಿಗೆ ತಿಳಿವಳಿಕೆ ಹೆಚ್ಚಾಗುತ್ತದೆ.

ಈ ಎಲ್ಲ ಹಂತಗಳನ್ನೂ ತುಂಬ ಪರಿಶ್ರಮದಿಂದ, ಎಚ್ಚರಿಕೆಯಿಂದ ಕ್ರಮವಾಗಿ ದಾಟಿ ಬಂದರೆ ಒಂದು ಕನ್ನಡ ಶಬ್ದದ ಉಲ್ಲೇಖ ಪೂರ್ಣವಾಗುತ್ತದೆ. ಇದನ್ನು ಇಂಗ್ಲಿಷಿನಲ್ಲಿ ಒಂದು Article ಎಂದು ಕರೆಯುತ್ತಾರೆ.

ಒಂದು ಶಬ್ದದ ಪೂರ್ಣ ಉಲ್ಲೇಖದಲ್ಲಿ ಶಬ್ದಾರ್ಥದ ಸೂತ್ರೀಕರಣ (Definition) ಬಹಳ ಮುಖ್ಯವಾದುದು. ಈ ಹಿಂದೆ ತಿಳಿಸಿರುವಂತೆ ಸೂತ್ರೀಕರಣದಲ್ಲಿ ೧. ಸಂಗ್ರಹಗುಣ, ೨. ಅಸಂದಿಗ್ಧತೆ, ೩. ಎಲ್ಲ ಪ್ರಮುಖ ವಿಷಯಗಳ ನಿರೂಪಣೆ, ೪. ಬಹುಮುಖವಾದ ದೃಷ್ಟಿ, ೫. ಅನಗತ್ಯವಾದದ್ದು ಯಾವುದೂ ಸೇರದಿರುವುದು, ೬. ನಿರ್ದೋಷವಾಗಿರುವಿಕೆ ಎಂಬ ಗುಣಗಳು ಇರಬೇಕು. ದೇಶ ಭಾಷೆಯ ನಿಘಂಟುಗಳಲ್ಲಿ ಈ ಗುಣಗಳು ಎಲ್ಲವೂ ಕೂಡಿಕೊಂಡಿಲ್ಲದಿರುವುದಕ್ಕೆ ಕೆಲವು ಕಾರಣಗಳಿವೆ. ನಿಘಂಟು ರಚನೆಯನ್ನು ಒಂದು ಶಾಸ್ತ್ರವಾಗಿ ವ್ಯಾಸಂಗ ಮಾಡುವ ಏರ್ಪಾಡೇ ನಮ್ಮಲ್ಲಿ ಇರಲಿಲ್ಲ. ಈಗಲೂ ಈ ಶಾಸ್ತ್ರವೆನ್ನುವುದನ್ನು ವಿಶ್ವವಿದ್ಯಾನಿಲಯಗಳು ಒಪ್ಪಿಲ್ಲ. ಕರ್ನಾಟಕದಲ್ಲಿ ಯಾವ ವಿಶ್ವವಿದ್ಯಾನಿಲಯವೂ ಇಂಥ ಶಾಸ್ತ್ರಕ್ಕೆ ಬೇರೆ ಇಲಾಖೆಯನ್ನು ತೆರೆದಿಲ್ಲ. ಅಲ್ಲದೆ ಈ ಶಾಸ್ತ್ರವನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳು ಮುಂದೆ ಬರುವುದಿಲ್ಲ. ಇದನ್ನು ಪಾಠ ಹೇಳಲು ವಿದ್ವಾಂಸರೂ ಮುಂದೆ ಬರುವುದಿಲ್ಲ. ಹೀಗೆ ಈ ವ್ಯಾಸಂಗ ಹಿಂದೆ ಬಿದ್ದಿರುವುದರಿಂದ ಆಸಕ್ತಿಯಿಂದ ಕೆಲಸ ಮಾಡಲು ತಿಳಿದ ಜನ ಬರುತ್ತಿಲ್ಲ.

ನಮ್ಮ ನಿಘಂಟುಗಳಲ್ಲಿ ಶಬ್ದಾರ್ಥಗಳ ಸೂತ್ರೀಕರಣ ಎಷ್ಟು ಹಿಂದೆ ಬಿದ್ದಿದೆ ಎಂದು ಸ್ಪಷ್ಟಪಡಿಸಲು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ಶಬ್ದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿಸಿಕೊಡುವುದರಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಎಚ್ಚರ ಹೆಚ್ಚಾಗಿರುವುದಕ್ಕೆ ಕಾರಣ ಅಲ್ಲಿ ಈಗ ಭಾಷಾಶಾಸ್ತ್ರದ ಅಭ್ಯಾಸ ತುಂಬ ವ್ಯಾಪಕವಾಗಿರುವುದು. ನಿಘಂಟು ಶಾಸ್ತ್ರವನ್ನೂ ನಿಘಂಟು ರಚನೆಯನ್ನೂ ಭಾಷಾಶಾಸ್ತ್ರದ ಬಹುಮುಖ್ಯವಾದ ಅಂಗವೆಂದು ಅವರು ಭಾವಿಸಿದ್ದಾರೆ. ಶಬ್ದದ ಅರ್ಥವು ನಿಘಂಟನ್ನು ನೋಡುವವನಿಗೆ ಸ್ಪಷ್ಟವಾಗಿ ಆಗದಿದ್ದರೆ ನಿಘಂಟುಕಾರ ತನ್ನ ಕೆಲಸವನ್ನು

ಚೆನ್ನಾಗಿ ಮಾಡಿಲ್ಲ ಎಂದೇ ಅರ್ಥ. ನಾವು ದಿನನಿತ್ಯದ ಆಹಾರಕ್ಕೆ ಸಂಬಂಧಿಸಿದ ಶಬ್ದಗಳನ್ನೂ ಸಂಪೂರ್ಣವಾಗಿ ಸೂತ್ರೀಕರಿಸುವುದಿಲ್ಲ. ಈ ವಿಭಾಗದಲ್ಲಿ ನಾವು ಕಲಿಯಬೇಕಾದದ್ದು ಬೇಕಾದಷ್ಟಿದೆ. ಒಂದೆರಡು ಉದಾಹರಣೆಗಳನ್ನು ನೋಡೋಣ.

ದೋಸೆ ಎಂಬುದು ದೇಶಿ ಶಬ್ದ. ತಮಿಳಿನಲ್ಲಿ ದೋಸ, ಕನ್ನಡದಲ್ಲಿ ದೋಸೆ. ಈ ಶಬ್ದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ನೀಡಿರುವ ಅರ್ಥ ಹೀಗಿದೆ :- "ಅಕ್ಕಿ ಹಾಗೂ ಉದ್ದು ಅಥವಾ ಬೇರೆ ಧಾನ್ಯಗಳನ್ನು ಒಂದು ಪ್ರಮಾಣದಲ್ಲಿ ನೆನೆಸಿಟ್ಟು ಅನಂತರ ರುಬ್ಬಿ ಹೆಂಚಿನ ಮೇಲೆ ಹೊಯ್ದು ಬೇಯಿಸಿ ಮಾಡುವ ಒಂದು ಬಗೆಯ ಖಾದ್ಯ". ಇದನ್ನು ಓದಿದಾಗ ದೋಸೆಯ ಬಗ್ಗೆ ನಮಗೆ ಸಂಪೂರ್ಣ ಪರಿಚಯ ಆದಂತೆಯೇ ಅನಿಸುತ್ತದೆ ಅಲ್ಲವೇ ? ಹೌದು. ಅದಕ್ಕೆ ಕಾರಣ ನಮಗೆ ದೋಸೆ ಚೆನ್ನಾಗಿ ಗೊತ್ತು. ಪ್ರತಿವಾರವೂ ತಿನ್ನುತ್ತೇವೆ. ದಿನಕ್ಕೆರಡು ಬಾರಿ ತಿನ್ನುವವರೂ ಉಂಟು. ಆದ್ದರಿಂದ ಅದರ ಬಗ್ಗೆ ಹೆಸರು ಹೇಳಿದರೇ ಸಾಕು, ಯಾರೂ ಅದರ ಅರ್ಥವನ್ನು ತಿಳಿಸಿ ಕೊಡಬೇಕಾಗಿಲ್ಲ. ಆದರೆ ದೋಸೆಯನ್ನು ನೋಡದವನಿಗೆ ಇದರ ಪರಿಚಯ ಮಾಡಿಕೊಡುವುದು ಹೇಗೆ-ಅದನ್ನು ಈಚೆಗೆ ೧೯೯೨ರಲ್ಲಿ ಪ್ರಕಟವಾದ Hanklyn-Janklin ಎಂಬ ಇಂಗ್ಲಿಷಿನ ನಿಘಂಟಿನಲ್ಲಿ ವಿವರಿಸಿರುವ ರೀತಿಯನ್ನು ನೋಡಿ :

DOSA n Tamil : One of the breads of the South. Rice and dal flours, Self-fermented, in shape like a thin Chapati, perhaps twelve inches or more in diameter. Cooked on a hot-plate with one side crisp and golden. Often folded over a vegetable filling. (See also idli).

ಇನ್ನೊಂದು ಶಬ್ದವನ್ನು ಪರಿಶೀಲಿಸೋಣ. ಕನ್ನಡದಲ್ಲಿ ಧ್ವಜ, ಪತಾಕೆ, ನಿಶಾನೆ, ಬಾವುಟ ಎಂಬ ಎಲ್ಲ ಶಬ್ದಗಳನ್ನು ಪರಸ್ಪರ ಹೊಂದಿಸಿ ಧ್ವಜ=ಬಾವುಟ, ನಿಶಾನೆ ಎಂದೂ ಸೂಚಿಸಿ ಬಿಟ್ಟುಬಿಡುತ್ತೇವೆ, ನಿಘಂಟಿನ ಕೆಲಸ ಆಯಿತೆಂದು. ಇಂಗ್ಲಿಷ್ ನಿಘಂಟುಗಳಲ್ಲಿ ಹಾಗೆ ಬಿಡುವುದಿಲ್ಲ. Webster's ನಿಘಂಟಿನಲ್ಲಿ ಧ್ವಜವನ್ನು (Flag) ವಿವರಿಸಿರುವ ರೀತಿಯನ್ನು ನೋಡಿ.

FLAG 1. n. a piece of cloth or bunting, usually with a pattern or device, generally oblong or square in shape, attached to a pole or staff, and used to denote nationality, party or ownership. to mark a position or to exchange information.

ಇದನ್ನೇ ನಿಘಂಟು ಶಾಸ್ತ್ರದಲ್ಲಿ ಸೂತ್ರೀಕರಿಸುವುದು (definition), ಎಂದು ಕರೆಯುತ್ತಾರೆ. ಇದಕ್ಕೆ ಅರ್ಥ making it clear, to state the precise meaning of = ಸ್ಪಷ್ಟಪಡಿಸುವುದು, ನಿರ್ದಿಷ್ಟಾರ್ಥವನ್ನು ನಿರೂಪಿಸುವುದು ಎಂದು ಅರ್ಥ. ನಿಘಂಟಿಗೆ ಸಂಬಂಧಿಸಿದ ಈ ವಿವರವಾದ ನಿರೂಪಣೆ ಈಗೀಗ ಭಾರತದ ಭಾಷೆಗಳ ನಿಘಂಟುಗಳಲ್ಲಿ ರೂಪುಗೊಳ್ಳುತ್ತಿದೆ.

ಆನೆ ಶಬ್ದಕ್ಕೆ ಕನ್ನಡ ನಿಘಂಟಿನಲ್ಲಿ ಕೊಟ್ಟಿರುವ ಅರ್ಥ ಹೀಗಿದೆ : ಪ್ರಾಣಿವರ್ಗದಲ್ಲೆಲ್ಲಾ ಬಹು ದೊಡ್ಡದಾದ, ಸೊಂಡಿಲಿರುವ ಪ್ರಾಣಿ; ಗಜ; ಕರಿ. ಆದರೆ ಇಂಗ್ಲಿಷ್ ನಿಘಂಟುಗಳಲ್ಲಿ ಈ ಶಬ್ದದ ಬಗ್ಗೆ ಏನೇನು ವಿವರಗಳನ್ನು ಕೊಡುತ್ತಾರೆಂಬುದನ್ನು, ಸಣ್ಣ ನಿಘಂಟುಗಳಿಂದ ಹಿಡಿದು ವಿಶ್ವಕೋಶದ ಮಾದರಿಯ ನಿಘಂಟುಗಳವರೆಗೆ ಏನೇನು ವಿಷಯಗಳನ್ನು ಸಂಗ್ರಹಿಸಿರುತ್ತಾರೆಂಬುದನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

The Random House Dictionary Paper Back ಸಂಸ್ಕರಣದಲ್ಲಿ Elephant ಎಂಬ ಶಬ್ದಕ್ಕೆ ನೀಡಿರುವ ಸೂತ್ರ definition ಹೀಗಿದೆ : Elephant (Elefent), n. a large mammal of Africa and India, with a flexible trunk, flapping ears, and ivory tusks ಇದರಲ್ಲಿ ಕೂಡ ಕನ್ನಡದಲ್ಲಿರುವುದಕ್ಕಿಂತ ಅನೇಕ ವಿಷಯಗಳು ಹೆಚ್ಚಾಗಿವೆ. 1. mammal, 2. Africa and India, 3. flexibility, 4. flapping ears, 5. ivory tusks. ಹೀಗೆ ಆನೆ ಸ್ತನಿಯಾಗಿರುವ, ಆಫ್ರಿಕಾ ಮತ್ತು ಭಾರತಕ್ಕೆ ಸೇರಿರುವ, ಸೊಂಡಿಲಿನ ಚಲನೆ ಸುಲಭವಾಗಿರುವ, ಬೀಸುವಿಕೆಯುಳ್ಳ, ದಂತದ ಕೋರೆಯುಳ್ಳ ಎಲ್ಲವೂ ಹೆಚ್ಚಿನ ಅಂಶಗಳಲ್ಲವೇ ? ಆನೆಯ ವಿಚಾರವಾಗಿ ಇತರ ಕೆಲವು ಇಂಗ್ಲೀಷ್ ನಿಘಂಟುಗಳು ಸಂಗ್ರಹಿಸಿರುವ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಡಾ। ಜಾನ್‌ಸನ್ನನ ನಿಘಂಟು :

e'lephant. The largest of all quadrupeds, of whose sagacity, faitfulness, prudence, and even understanding, many surprising relations are given. This animal is not carnivorous, but feeds on hay, herbs, and all sorts of pulse; and it is said to be extremely long lifed. It is naturally very gentle; but when enraged, no creature is more terrible. He is supplied with a trunk, or long hollow cartilage, like a large trumpet, which hangs between his teeth, and serves him for hands: by one blow with his trunk he will kill a camel or a horse, and will raise a prodigious weight with it. His teeth are the ivory so well known in Europe, some of which have been seen as large as a man's thigh, and a fathom in length. Wild elephants are taken with the help of a female ready for the male: she is confined to a narrow place, round which pits are dug; and these bing covered with a little earth scattered over hurdles, the male elephants easily fall into the snare. In copulation the female receives the male lying upon her back; and such is his pudicity, that he never covers the female so long as any one appears in sight. Calmet.

ವೆಬ್‌ಸ್ಟರ್ ನಿಘಂಟು :

el-e|phant (el'ə fənt) ***n.***, the *Indian Elephas indicus* or the African *Loxodonta africana*, both fam. *Elephantidae*, the largest living land animals. standing 9-12 ft high and weighing 5-6 tons. The nose is an elongated and prehensile trunk. *Loxodonta africana differs* from *Elephas indicus* by its greater height, larger ears, less elevated head, heavier bones and ivory tusks || a size of drawing paper, commonly 28x23 ins [M.E. olifaunt fr. O.F. fr L. fr. Gk]

ಯುನಿವರ್ಸಲ್ ನಿಘಂಟು :

elephant, n. [1. élefant ; 2. élifent]. M.E. *elifaunt, olifaunt,* fr. O. Fr. *olifant,* fr. Lat. *elephant-us,* fr. Gk. *eléphant-(os),* genit. of elephas, 'an *eléphant*; ivory'. 'The second element, *-ephas*, is borrowed fr. Egyptian'. cp. Egyptian *ab(u)*, Coptic *eb(o)u*, 'elephant' Etymol. of first element doubtful. **1. a.** A very large pachydermatous quadruped, with large tusks and a long trunk; there are two surviving species, the Indian and the African, the latter being distinguished by a strighter back and very large ears; *white elephant*, an albino type, held sacred in Siam, hence, (fig) a useless, costly encumbrance **b.** (obn.) ivory. **2.** A particular large size of drawing paper, 28 in. by 23 in.

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ನಿಘಂಟು :

elephant/'elif(e)nt/n. Also (*arch.*) **oli-**/'plt-/. ME. [OFr. *olifant, elefant* (mod. *éléphant*) f. Proto-Romance alt. of L *elephantus, elepha(n)s* f. Gk *elephas, elephant-* ivory, elephant, prob. of alien origin; Eng. el- by assim. to L.] **1** The largest living land mammal, with a prehesile trunk used for taking up food and water, a hairless body, and usu. a pair of long curved tusks, of which two species remain in existence. ME. **2** Ivory; a horn or trumpet of ivory, *arch.* ME. **+3** = ELEPHANTA. E17 - E18. **4** In full elephant paper. A former large size of drawing paper, typically 28 × 23 inches (approx. 711 × 584 mm) E18. **5** A shade of grey. 119. **6** (The emblem of) the Republican Party. *US colloq* 119. **7** A corrugated non dugout on Nissen hut. Also *elephant dugout, hut Army slang*. E 20.

Phrases : **African elephant** the larger of the two species of elephant, *Loxodonta africana*, with large ears. **Indian elephant** the smaller of the two species of elephant, *Elephas maximus*, with proportionately smaller ears. **Order of the Elephant** a Danish order of knighthood. *pink elephant*. see PINK a.[2] **see the elephant** *US* see the sights, see the world, get experince of life. *white elephant* see with a.

Comb : **elephant-bird** = AEPYORNIS ; *elephant dugout*: see sense 7 above; **elephant fish** (*a*) a large silvery chimaeroid fish, *Callorhinchus milii*, of Australia and New Zealand, with a long flexible snout bent sharply downwards at the tip; (*b*) = *elephant-snout fish* below; **elephant grass** any of various tall robust tropical grasses and grasslike plants, *esp*. the African *Pennisetum purpureum*; *elephant hut*: see sense 7 above; **elephant joke** a child's nonsense riddle with an elephant as the subject; *elephant paper*: see sense 4 above; **elephant seal** either of two very large seals of the genus *Mirounga*, of which the males have inflatable snouts; **elephant's ear** any of various ornamental plants, esp. species of begonia, with large heart-shaped leaves; **elephant's foot** either of two southern African yams, *Dioscorea elephantipes* and *D. sylvatica*, with large woody edible tubers projecting above the ground; **elephant shrew** any mammal of the African order Macroscelidea, comprising small insectivorous creatures with a long snout and small hind limbs; **elephant-snout fish** any of variouss mormyrids with an elongated snout that resembles an elephant's trunk **elephant's teeth** ivory; **elephant trunk snake** the wart snake of Java, *Acrochordus javanicus*, which has flabby skin.

ಇವುಗಳ ಪರಿಶೀಲನೆಯಿಂದ ನಿಘಂಟುಕಾರರು ತಮ್ಮ ಉದ್ದೇಶಗಳಿಗೆ ಅನುಸಾರವಾಗಿ ಹೇಗೆ ಶಬ್ದಗಳ ಅರ್ಥವನ್ನು ಪುಷ್ಟೀಕರಿಸುತ್ತಾರೆ ಎಂಬುದರ ಬಗ್ಗೆ ತಿಳಿವಳಿಕೆ ಬರುತ್ತದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ನಿಘಂಟಿನ ಸೂತ್ರೀಕರಣವೇ ಸರ್ವಾಂಗೀಣವಾಗಿರುವುದು ಸ್ಪಷ್ಟವಲ್ಲವೆ?

೬. ಹಳೆಯ ಕನ್ನಡ ನಿಘಂಟುಗಳ ಕಿರುಚರಿತ್ರೆ

ಕನ್ನಡದಲ್ಲಿ ನಿಘಂಟುಗಳ ಬೆಳವಣಿಗೆಗೆ ಒಂದು ಸಾವಿರವರ್ಷದ ಚರಿತ್ರೆಯಿದೆ. ಕಳೆದ ೧೯೯೩ನೆಯ ಇಸವಿಯಲ್ಲಿ ನಾವು ನಮ್ಮ ನಿಘಂಟುಗಳಲ್ಲಿ ಮೊದಲನೆಯದಾದ ರನ್ನ ನಿಘಂಟಿನ ಸಹಸ್ರಮಾನೋತ್ಸವವನ್ನು ನೆರವೇರಿಸಿದ್ದೇವೆ. ಈ ಸಮಯದಲ್ಲಿ ಅದನ್ನು ನೆನಪಿಗೆ ತರುವುದು ನನ್ನ ಕರ್ತವ್ಯ.

ರನ್ನಕಂದ

ಕ್ರಿಸ್ತಶಕ ಹತ್ತನೆಯ ಶತಮಾನದಲ್ಲಿದ್ದ ರನ್ನ ಮಹಾಕವಿಯ ಹೆಸರಿಗೆ ಅಂಟಿಕೊಂಡಿರುವ ಒಂದು ನಿಘಂಟಿದೆ. ಇದಕ್ಕೆ **ರನ್ನಕಂದ** ಎಂದು ಹೆಸರು. ಇದೇ ನಮ್ಮ ಭಾಷೆಯ ಮೊದಲ ನಿಘಂಟು. ಈ ನಿಘಂಟಿನ ೧೨ ಪದ್ಯಗಳು ರಾ. ನರಸಿಂಹಾಚಾರ್ಯರ ಅವಗಾಹನೆಗೆ ಸಿಕ್ಕಿ, ಅವರು ಅವುಗಳಲ್ಲಿ ಎರಡು ಕಂದಪದ್ಯಗಳನ್ನು ತಮ್ಮ ಕರ್ಣಾಟಕ ಕವಿಚರಿತೆಯಲ್ಲಿ ಪ್ರಕಟಿಸಿದ್ದರು. ಇದು ಆದುದು ೧೯೦೭ರಲ್ಲಿ. ೧೯೬೪ರಲ್ಲಿ ತ.ಸು. ಶಾಮರಾಯರು ಇದೇ ಹಸ್ತಪ್ರತಿಯನ್ನು ಸಂಪಾದಿಸಿ ಸಾಹಿತ್ಯಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಗ್ರಂಥದ ಮೊದಲ ಸುಳಿವು ಸಿಕ್ಕಿದ ಎಪ್ಪತ್ತು ವರ್ಷದ ಬಳಿಕ ಈ ಪುಸ್ತಕದ ಸಮಗ್ರ ಪ್ರತಿ ದೊರಕಿದೆ. ಕೊಲ್ಹಾಪುರದ ಶ್ರೀಲಕ್ಷ್ಮೀಸೇನ ಜೈನಮಠದಲ್ಲಿ ಕನ್ನಡ ಹಸ್ತಪ್ರತಿಗಳ ದೊಡ್ಡಭಂಡಾರವಿದೆ. ಪ್ರೊ. ಎಂ.ಎಂ. ಕಲಬುರ್ಗಿಯವರು ಅಲ್ಲಿಂದ ಎರಡು ಹಸ್ತಪ್ರತಿಗಳನ್ನು ಸಂಪಾದಿಸಿ ರನ್ನಕಂದದ ಪೂರ್ಣಪಾಠವನ್ನು ಕರ್ನಾಟಕ ಭಾರತಿಯಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಒಟ್ಟು ೪೫ ಪದ್ಯಗಳಿವೆ. ಇವುಗಳಲ್ಲಿ ೪ ಚಂಪಕಮಾಲಾವೃತ್ತಗಳನ್ನು ಬಿಟ್ಟರೆ ಮಿಕ್ಕೆಲ್ಲ ಕಂದಪದ್ಯಗಳು. ಚಂಪಕಮಾಲೆಗಳಲ್ಲಿ ಎರಡು ಸಂಪೂರ್ಣವಾಗಿದ್ದರೆ, ಮತ್ತೊಂದು ಪಂಚಪಾದವೃತ್ತ. ಇನ್ನೊಂದು ಅರ್ಧವೃತ್ತ. ಶ್ರೀ ಕಲಬುರ್ಗಿಯವರು ಈ ಚಂಪಕಮಾಲಾವೃತ್ತಗಳಲ್ಲಿ ಸಿಕ್ಕಿರುವ ಪಂಚಪಾದದ ವೃತ್ತವು ಕನ್ನಡದಲ್ಲಿ ಅತ್ಯಂತ ಪ್ರಾಚೀನವಾದುದೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಈ ಗ್ರಂಥದ ಕೊನೆಯ ಚಂಪಕಮಾಲೆ ಅರ್ಧವೃತ್ತವಾಗಿರುವುದನ್ನು ನೋಡಿದರೆ ಇದು ಅಸಂಪೂರ್ಣವೆಂಬುದು ಸ್ಪಷ್ಟ. ಲಿಪಿಕಾರನೇನೋ 'ರನ್ನ ನಿಘಂಟು ಸಮಾಪ್ತ' ಎಂದು ಬರೆದಿದ್ದರೂ ಆತನಿಗೆ ಸಿಕ್ಕಿದ್ದ ಅಪೂರ್ಣ ಪ್ರತಿಯನ್ನು ನಕಲ ಮಾಡಿದ ಮೇಲೆ ಆತನು ಬರೆದ ಗ್ರಂಥಾಂತ್ಯದ ಮಂಗಳ ಸೂಚನೆಯೆಂದು ನಾವು ಅದನ್ನು ಗುರುತಿಸಬೇಕು.

ಈ ಸಣ್ಣ ಕೃತಿಯಲ್ಲಿ ಪದ್ಯಗಳ ಕೊನೆಯಲ್ಲಿ ಸಾಮಾನ್ಯವಾಗಿ '**ಕವಿರತ್ನಾ**' ಎಂದು ಮುಗಿಯುತ್ತವೆ. ಮತ್ತೆ ಕೆಲವು ಪದ್ಯಗಳ ಕೊನೆಯಲ್ಲಿ '**ಬೆಳ್ಳಿವೆಸರಾಂತವನೇ**' ಎಂದೂ ಇದೆ. ಈ ಪದಪುಂಜದ ಅರ್ಥವೇನೆಂಬುದು ಸ್ಪಷ್ಟವಿಲ್ಲ.

ಇದು ಅನೇಕ ಕಾರಣಗಳಿಂದ ಮುಖ್ಯವಾದ ನಿಘಂಟಾಗಿದೆ. ಇಲ್ಲಿಯ ಪದ್ಯಗಳಲ್ಲಿ ಅಪಲಿಖಿತಗಳು ತುಂಬಿದ್ದರೂ ಕನ್ನಡ ಭಾಷೆಯಲ್ಲಿ ಬಹು ಹಿಂದೆ ಪ್ರಯೋಗದಲ್ಲಿದ್ದು ಈಗ ಕಿವಿಗೆ ಮರೆಯಾಗಿರುವ ಅನೇಕ ಶಬ್ದಗಳು ಮುಚ್ಚಿಟ್ಟುಕೊಂಡಿವೆ. ಆ ಶಬ್ದಗಳ ಸ್ವರೂಪವನ್ನೂ ಅರ್ಥಗಳನ್ನೂ ತಿಳಿಸಲು ಪ್ರಯತ್ನಪಡಬೇಕಾದ ಸಂಶೋಧನಾವಕಾಶವನ್ನೂ ನಮ್ಮ ಮುಂದೆ ಒಡ್ಡಿದೆ. ಇದನ್ನು ಕೂಲಂಕಷವಾಗಿ ಸಂಶೋಧಿಸುವ ಕೆಲಸಕ್ಕೆ ಇನ್ನೂ ಯಾವ ವಿದ್ವಾಂಸರೂ ಕೈಹಾಕಿಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಕನ್ನಡ, ಸಂಸ್ಕೃತ, ಪ್ರಾಕೃತ, ತಮಿಳುಭಾಷೆಗಳಲ್ಲಿ ಅಪಾರವಾದ ವಿದ್ವತ್ತು ಮತ್ತು ಭಾಷಾಶಾಸ್ತ್ರದ ಸಂಪೂರ್ಣವಾದ ತಿಳಿವಳಿಕೆಯಿಲ್ಲದೆ ಈ ಕೆಲಸವನ್ನು ಮಾಡುವುದು ಸಾಧ್ಯವಿಲ್ಲ. ಅಂಥ ವಿದ್ವಾಂಸನಿಗಾಗಿ ಅದು ಕಾದು ಕೂತಿದೆ. ಈ ೪೫ ಪದ್ಯಗಳನ್ನು ಅಚ್ಚುಕಟ್ಟಾಗಿ ಸಂಪಾದಿಸುವವನಿಗೆ ಯಾವ ವಿಶ್ವವಿದ್ಯಾನಿಲಯವಾದರೂ ಒಂದು ಡಾಕ್ಟೊರೇಟ್ ಪದವಿಯನ್ನು ಧಾರಾಳವಾಗಿ ನೀಡಬಹುದು.

ಒಂದು ಉದಾಹರಣೆಯನ್ನು ತಿಳಿಸಿ ಇದನ್ನು ಸ್ಪಷ್ಟಪಡಿಸುತ್ತೇನೆ. ಕೈವಟಲ್ ಎಂಬ ಒಂದು ಶಬ್ದವಿದೆ. ನರಸಿಂಹಾಚಾರ್ಯರು ನೋಡಿದ್ದ ಹಸ್ತಪ್ರತಿಯಲ್ಲಿ ಕೈವಟಲೆಟ್ಟುಗೆ ಎಂದು ಪಾಠವಿದೆ. ಇದನ್ನು ಅನುಸರಿಸಿ ಕನ್ನಡ ನಿಘಂಟಿನಲ್ಲಿ ಎಟ್ಟುಗೆ ಎಂಬ ಶಬ್ದವನ್ನು ಉಲ್ಲೇಖಿಸಿ ಆ ಶಬ್ದಕ್ಕೆ ಕೈಯಲ್ಲಿರುವ ಬಟ್ಟಲು ಎಂದು ಅರ್ಥವನ್ನು ಬರೆದಿದೆ. ಈ ರನ್ನಕಂದವನ್ನೋ ಅದರ ಯಾವುದೋ ಹಸ್ತಪ್ರತಿಯನ್ನೋ ನೋಡಿದ ಎರಡನೆಯ ಮಂಗರಾಜನು (೧೩೯೮) ತನ್ನ 'ಅಭಿನವಾಭಿಧಾನಂ' ಎಂಬ ನಿಘಂಟಿನಲ್ಲಿ "**ಕರಪಾತ್ರೆ ಕೈವಟ್ಟಲಕ್ಕು**" ಎಂದು ಹೇಳಿದ್ದಾನೆ. ನಿಜವಾಗಿ ಇವನು ತಪ್ಪಿದಂತಾಯಿತು. ಆದರೆ ಕಿಟ್ಟೆಲ್‌ಗೆ ಸಿಕ್ಕಿದ ಹಸ್ತಪ್ರತಿಯಲ್ಲಿ ಏನಿತ್ತೋ ಅವನು ಆ ಶಬ್ದಕ್ಕೆ ಎಂದರೆ ಕೈವಟ್ಟಲ್ ಶಬ್ದಕ್ಕೆ ಉದ್ದವಾದ **ಸೌಟು** ಎಂದು ಅರ್ಥವನ್ನು ಬರೆದಿದ್ದಾನೆ. ಈಗ ಸಿಕ್ಕಿರುವ ರನ್ನಕಂದದ ಸಮಗ್ರಪ್ರತಿಯಲ್ಲಿ **ಕೈವಟ್ಟಲ್ ಸಟ್ಟುಗೆ** ಎಂದು ಸ್ಪಷ್ಟವಾಗಿ ಕಾಣಬರುತ್ತದೆ. ಆದುದರಿಂದ ಕೈವಟ್ಟಲ್ ಶಬ್ದಕ್ಕೆ ಸೌಟು ಎಂಬುದೇ ಅರ್ಥವೆಂದು ಈಗ ನಿರ್ಧಾರವಾದಂತಾಗುತ್ತದೆ. ಅದು ಕೈ ಇರುವ ಬಟ್ಟಲು, ಕಾವು ಇರುವ ಬಟ್ಟಲು ಎಂದು ಅರ್ಥ. ಇಂಥ ಇನ್ನೆಷ್ಟು ಶಬ್ದಗಳು ಈ ನಿಘಂಟಿನಿಂದ ಹೊರಬರುತ್ತವೆಯೋ ನೋಡಬೇಕು.

ಹಕ್ಕಿ, ಹುರಿಯೋಡು ಎಂಬಂಥ 'ಹ' ಕಾರಯುಕ್ತವಾದ ಶಬ್ದಗಳು ಇಲ್ಲಿ ಇರುವುದನ್ನು ಗಮನಿಸಿದರೆ ಈ ಹಸ್ತಪ್ರತಿ ಕೂಡ ಈಚಿನದಾಗಿರಬೇಕು ಎನ್ನಿಸುತ್ತದೆ. ಕನ್ನಡಂಗಳ್ ಎಂಬ ಪದಪ್ರಯೋಗವಿರುವುದರಿಂದ ಇದು ಕವಿರಾಜಮಾರ್ಗದ ದಕ್ಷಿಣೋತ್ತರ ಮಾರ್ಗಗಳ ನೆನಪನ್ನೂ ತರುತ್ತದೆ. ಈ ಹಸ್ತಪ್ರತಿಯಲ್ಲಿರುವ ಒಂದು ಪದ್ಯವನ್ನು ಸಂಪಾದಿಸಿ ಇಲ್ಲಿ ನಿರೂಪಿಸಲು ಪ್ರಯತ್ನಿಸುತ್ತೇನೆ.

ಗ್ರಂಥದಲ್ಲಿರುವ ಕಂದ ಪದ್ಯದ ಸ್ವರೂಪ ಹೀಗಿದೆ :

ಬದ್ದರನೆನೆ ಬದುಕಿದಪಂ
ಕದ್ದರನೆನೆ ಕಳ್ಳನೆದ್ದರೆನಲೋಡಿದಪಂ
ಬಿದ್ದಿಗನೆನೆ ನಂಟು ಕೈ
ಗುದ್ದಿಗರನೆ ಮಲ್ಲರೆಂಬುದೆಲೆ ಕವಿರತ್ನಾ.

ಇದನ್ನು ಎಲ್ಲ ದೃಷ್ಟಿಗಳಿಂದ ಪರಿಶೀಲಿಸಿ ಸಂಪಾದಿಸಿದರೆ ಅದರ ಸ್ವರೂಪ ಹೀಗಾಗುತ್ತದೆ.

ಬಟ್ಟವನೆನೆ ಬದುಕಿದವಂ
ಕಳ್ದವನೆನೆ ಕಳ್ಳನೆದ್ದವನೆನೆಲೋಡಿದವಂ
ಬಿದ್ದಿಗನೆನೆ ನೆಂಟಂ ಕೈ
ಗುದ್ದಿಗನೆನೆ ಮಲ್ಲನೆಂಬುದೆಲೆ ಕವಿರತ್ನಾ.

ಈ ಪದ್ಯದಲ್ಲಿ ಕೆಳಗೀರು ಎಳೆದಿರುವ ಶಬ್ದ ಬಟ್ಟಿ. ಇದು ಬಾಟ್ ಧಾತುವಿನ ಕೃದಂತ ರೂಪ. ಬಳಿಕ ನಾಮಪದವಾಗಿ ಬಟ್ಟಿವನೆಂದಾಗಬೇಕು. ಆದರೆ ದಕಾರ ಪ್ರಾಸವಿರುವ ಕಡೆ ಬದ್ದವನೆನೆ ಎಂದು ಇದ್ದರೂ, ಅದು ಬಟ್ಟಿ>ಬರ್ದ>ಬದ್ದ ಎಂದಾಗಿರಬೇಕು. ಶಬ್ದಗಳನ್ನು ನಿರೂಪಿಸುವಾಗ ಬಹುವಚನವನ್ನು ಸಾಮಾನ್ಯವಾಗಿ ನಿರೂಪಿಸುವುದಿಲ್ಲ. ಆದುದರಿಂದ ಏಕವಚನದ ರೂಪಗಳನ್ನು ಆರಿಸಲಾಗಿದೆ. ಹೀಗಿರುವುದರಿಂದ ಈ ಪದ್ಯದ ಪೂರ್ಣಪಾಠ ಸರಿಯಾಗಿ ಕೈಗೆ ದೊರಕಿದಂತಾಗುತ್ತದೆ. **ಕೈಗುದ್ದಿಗ** ಎಂಬ ಹೊಸದಾದ ಪ್ರಾಚೀನ ಶಬ್ದ ನಮಗೆ ಸಿಕ್ಕಿದಂತಾಗುತ್ತದೆ. ಹೀಗೆ ಎಲ್ಲ ಪದ್ಯಗಳನ್ನು ಸಂಪಾದಿಸುವುದು ಒಂದು ವಿದ್ವತ್‌ಕಾರ್ಯವಲ್ಲದೆ ಪುಣ್ಯಕರವಾದುದೂ ಆಗುತ್ತದೆ.

ಸಿರಿಮಂತಿಗೆ=ಹುರಿಯೋಡು, ಮರ್ಬುಸುಳಿಕಾರ=ನಿಶಾಚಾರ, ಪಳಗ [ಪಟಗ]= ತರಗೆಲೆ ಮುಂತಾದ ಶಬ್ದಗಳಿಗೆ ಇದು ಆಗರವಾಗಿದೆ. ಆಳವಾಗಿ ಅಧ್ಯಯನ ಮಾಡಬೇಕಾದ ಪುಟ್ಟ ಪುಸ್ತಕ ಇದು.

ಶಬ್ದಮಣಿದರ್ಪಣಂ

ಕನ್ನಡ ಪದಗಳ ಎರಡನೆಯ ನಿಘಂಟು ನಮಗೆ ಬರಬೇಕಾದರೆ ಸುಮಾರು ೩೦೦ ವರ್ಷಗಳು ಕಾಯಬೇಕಾಯಿತು. ೧೨೬೦ರಲ್ಲಿದ್ದ ಕೇಶಿರಾಜನು ರಚಿಸಿದ '**ಶಬ್ದಮಣಿದರ್ಪಣಂ**' ಬಹುಜನಪ್ರಿಯವಾದ ವ್ಯಾಕರಣ ಗ್ರಂಥ. ಇದರಲ್ಲಿ ಮೂರು ಬೇರೆ ಬೇರೆ ಕಡೆಗಳಲ್ಲಿ ಕನ್ನಡ ಶಬ್ದಗಳನ್ನು ಪಟ್ಟಿ ಮಾಡಿ ಅವುಗಳ ಅರ್ಥವನ್ನು ಸೂಚಿಸಿದ್ದಾನೆ.

I ಱಟಿ ಸಹಿತವಾದ ಶಬ್ದಗಳಲ್ಲಿ ೧೮೧ ಶಬ್ದಗಳನ್ನು ಪಟ್ಟಿಮಾಡಿ ಅವುಗಳಲ್ಲಿ ಕೆಲವಕ್ಕೆ ಒಂದರಿಂದ ಹಿಡಿದು ಐದು ಅರ್ಥಗಳು ಬರುತ್ತವೆ ಎಂದು ವಿವರವಾಗಿ ತಿಳಿಸಿದ್ದಾನೆ.

II ಧಾತು ಪ್ರಕರಣದಲ್ಲಿ ೯೮೫ ಧಾತುಗಳನ್ನು ಒಂದೆಡೆ ಕೂಡಿಸಿ ಅವುಗಳ ಅರ್ಥವನ್ನು ಸೂಚಿಸಿದ್ದಾನೆ.

III ಮತ್ತೊಂದು ಕಡೆ ಪ್ರಾಚೀನ ಕವಿಗಳು ಉಪಯೋಗಿಸುವ ಗೂಢಪದಗಳೆಂದು ೨೩೩ ಶಬ್ದಗಳನ್ನು ಅರ್ಥಸಹಿತ ಉಲ್ಲೇಖಿಸಿದ್ದಾನೆ.

ಹೀಗೆ ಕೇಶಿರಾಜನ ೧೩೯೯ ಶಬ್ದಗಳ ಕನ್ನಡ ನಿಘಂಟು ನಮಗೆ ದೊರೆತಿದೆ. ಉದಾಹರಣೆಗಳು :

I. ಱಟ ಸಹಿತವಾದ ಶಬ್ದಗಳು :

ತಱಲೆಂದು ಮುತ್ತ ಕಾಯ್

ತಱ್ಗಿದನೆಂದು ಕುಸಿದಂ

ತೇಟೆಂದು ವೃಶ್ಚಿಕಂ

ತಿಪ್ಪುಟೆಂದು ಪಕ್ಕಿಯ ಗರಿ

ತುಪ್ಪುಟೆಂದು ಪಕ್ಕಿಯರೋಮಂ ಇತ್ಯಾದಿ.

II. ಧಾತು ಪ್ರಕರಣಂ:

ಈ - ಪ್ರದಾನೇ

ಓ - ಸ್ನೇಹೇ

ಅಳ್ಕು - ಭಯೇ ಅಶಕ್ತೌಚ

ಅಟ್ಟು - ಜೀರ್ಣೇ

ಕಲಂಕು - ಆಲೋಡನೇ

ಕಾ - ರಕ್ಷಣೇ

ತಿಣುಕು - ಅಪಾನವಾಯೌ

ಚಿಮ್ಮು - ಯುಕ್ತಾಂಗುಲಿ ವಿಮೋಚನೇ ಇತ್ಯಾದಿ.

III. ಪ್ರಯೋಗಸಾರ (ಗೂಢಪದಪ್ರಯೋಗ):

ಅಗುಂದಲೆಯೆಂದು ಪಿರಿದು

ಅತ್ತಪರವೆಂದು ಕಾಳಿಗವಲಗೆ

ಅಱಲೆಂದು ನಕ್ಷತ್ರಂ

ಆಱಡಿಯೆಂದು ತುಂಬಿ

ಕೆಕ್ಕಯೆಂದು ಗಲ್ಲಂ (ಕೆನ್ನೆ)

ತೇನತೇನಯೆಂದು ಮೇಲೆ ಮೇಲೆ

ಪೆಟಿಕೆಂದು ಜಗಳಂ

ಬಿಸವಂದವೆಂದು ಕೌತುಕಂ ಇತ್ಯಾದಿ.

ಕರ್ಣಾಟಕ ನಿಘಂಟು :

ಕ್ರಿ.ಶ. ೧೪೦೦ರ ಸುಮಾರಿನಲ್ಲಿ ರಚಿವಾಗಿರಬಹುದಾದ **ಕರ್ಣಾಟಕ ನಿಘಂಟಿನ** ಕರ್ತೃ ಯಾರೆಂದು ತಿಳಿಯದು. ಇದು ೯೮ ಪದ್ಯಗಳಲ್ಲಿ ವಿವಿಧ ಛಂದಸ್ಸಿನಲ್ಲಿದೆ. ಮೊದಲಸಲ ಕನ್ನಡದಲ್ಲಿ ಕೋಶ ಶಬ್ದಕ್ಕೆ ಬದಲಾಗಿ ನಿಘಂಟು ಎಂಬ ಶಬ್ದವನ್ನೂ ಪ್ರಯೋಗಿಸಿದೆ. ಈ ನಿಘಂಟು ೧೪೧೬ ಶಬ್ದಗಳ ಅರ್ಥಗಳನ್ನು ಪರಿಚಯ ಮಾಡಿಕೊಡುತ್ತದೆ. ಒಂದು ಪದ್ಯವನ್ನು ಉದ್ಧಾರ ಮಾಡಿ ಬರೆದಿಡಲಾಗಿದೆ.

ಪಱಮೆ ಮೆಳಂಬ ತುಂಬಿಯಳಿ ಮುಯ್ಯೀರಡಿಯಾಱಡಿಯೆಂದು ಷಟ್ಪದಂ
ಮಱುಗಿದನೆಂದೆನಲ್ಕೊಱಲ್ದನೆಂದು ಮುಱುಂಗಿದನೆಂದು ಕೂರ್ತನೊಳ್
ತಱಿಸಲವೆಂದು ನಿರ್ಣಯವಱಲ್ ಭಗಣಂ ಪೊಱಮಾಱು ಬೆನ್ನ ಪಿಂ
ದಿಱಿಸಿಲೆನೆಲ್ ಮೃಗಂ ಕಡೆವ ತಾಣಮೆ ತುಂತುಱಿಸಲ್ಕೆ ಶೀಕರಂ.

ಚತುರಾಸ್ಯ ನಿಘಂಟು :

ಕ್ರಿ.ಶ. ೧೪೫೦ ರಲ್ಲಿ ಬೊಮ್ಮರಸನೆಂಬುವನು ಚತುರಾಸ್ಯ ನಿಘಂಟನ್ನು ಬರೆದಿದ್ದಾನೆ. ಇದು ಹಿಂದೆ ವಿದ್ವಾಂಸರು ವಿಶೇಷವಾಗಿ ಉಪಯೋಗಿಸುತ್ತಿದ್ದ ನಿಘಂಟು. ಈ ಗ್ರಂಥದ ಅನೇಕ ಹಸ್ತಪ್ರತಿಗಳಿವೆ. ಇವುಗಳಲ್ಲಿ ಪಾಠಭೇದಗಳೂ ಪದ್ಯಸಂಖ್ಯೆಗಳೂ ಹೆಚ್ಚು ಕಡಿಮೆಯಾಗಿವೆ. ಇತರರು ಈ ನಿಘಂಟಿಗೆ ತಮ್ಮ ಸ್ವಂತ ಪದ್ಯಗಳಿಂದ ಹೆಚ್ಚು ಶಬ್ದಗಳನ್ನು ಸೇರಿಸಿರಬಹುದು. ಬೊಮ್ಮ ಎಂದರೆ ಬ್ರಹ್ಮ, ಚತುರ್ಮುಖ. ಚತುರಾಸ್ಯ ಎಂಬುದು ಮತ್ತೊಂದು ಹೆಸರು. ಎಲ್ಲ ಪದ್ಯಗಳು ಚತುರಾಸ್ಯಾ ಎಂದು ಕೊನೆಗಾಣುತ್ತವೆ. ಆದುದರಿಂದ ಚತುರಾಸ್ಯ ನಿಘಂಟೆಂದರೆ ಬೊಮ್ಮರಸನ ನಿಘಂಟು ಎಂದೇ ಅರ್ಥ. ತಿಪ್ಪರಸನೆಂಬ ಒಬ್ಬ ವಿದ್ವಾಂಸನ ಸಹಾಯದಿಂದ ಈ ಗ್ರಂಥವನ್ನು ರಚಿಸಿದಂತೆ ತೋರುತ್ತದೆ. ಇದರಲ್ಲಿ ೨೧೩ ಕಂದಪದ್ಯಗಳಿವೆ. ಇದರಿಂದ ಒಂದು ಪದ್ಯವನ್ನು ಎತ್ತಿ ಮುದ್ರಿಸಲಾಗಿದೆ :

ಪಱಗಮೆ ಒಣಗಿದುದಕ್ಕುಂ
ಕಱಯೆಂದುಂಬಿಲದ ಪೆಸರು ಪುಲ್ಗಿಯೆ ಹುಗ್ಗಿಗೆ
ತಱಲೆಂದು ಮುತ್ತಕಾಯ್
ಕಱಲೆಯದು ಬಿದಿರ ಕುಡಿಯದೆಲೆ ಚತುರಾಸ್ಯಾ.

ಇತರ ನಿಘಂಟುಗಳು :

ಇದಾದ ಸುಮಾರು ನೂರು ವರ್ಷಗಳ ತರುವಾಯ (ಸುಮಾರು ಕ್ರಿ.ಶ. ೧೫೩೦) ಲಿಂಗಮಂತ್ರಿಯೆಂಬ ವಿದ್ವಾಂಸನು ವಾರ್ಧಕ ಷಟ್ಪದಿಯಲ್ಲಿ **ಕಬ್ಬಿಗರ ಕೈಪಿಡಿ** ಎಂಬ ನಿಘಂಟನ್ನು ರಚಿಸಿದ್ದಾನೆ. ನಿಘಂಟಿಗೆ ಮೊದಲ ಸಲ ಷಟ್ಪದಿಯನ್ನು ಉಪಯೋಗಿಸಿದ ಕೀರ್ತಿ ಇವನದು.

ಇತರ ಎಲ್ಲ ನಿಘಂಟುಗಳಿಗಿಂತ ಹೆಚ್ಚಾಗಿ ಈ ನೂರು ಪದ್ಯಗಳ ನಿಘಂಟು ಜನಪ್ರಿಯತೆಯನ್ನು ಸಂಪಾದನೆ ಮಾಡಿತು. ಇತ್ತೀಚೆಗೆ ೧೯ನೆಯ ಶತಮಾನದಲ್ಲಿ ಹೆಸರುಘಟ್ಟದ ಹೊನ್ನಪ್ಪನೆಂಬ ವಿದ್ವಾಂಸನು ಈ ನಿಘಂಟಿಗೆ **ಚಕೋರಚಂದ್ರಿಕೆ** ಎಂಬ ಹೆಸರಿನ ಟೀಕೆಯನ್ನು ರಚಿಸಿದ್ದಾನೆ. ನಿಘಂಟುಗಳಿಗೆ ಟೀಕೆಗಳನ್ನು ಬರೆಯುವುದು ಸಂಸ್ಕೃತ ಭಾಷೆಯಲ್ಲಿ ಸಾಮಾನ್ಯವಾಗಿತ್ತು. ಅಮರಕೋಶ ಒಂದಕ್ಕೇ ೫೦ ಟೀಕೆಗಳಿವೆ ಎಂಬುದು ಆಶ್ಚರ್ಯದ ಮಾತು. ಕನ್ನಡದಲ್ಲಿ ಹೀಗೆ ಬರೆದ ಟೀಕೆಗಳಲ್ಲಿ ಇದೇ ಮೊದಲನೆಯದು. ಇದರಿಂದಲೂ ಈ ನಿಘಂಟಿನ ಪ್ರಾಧಾನ್ಯವನ್ನು ಗುರುತಿಸಬಹುದು.

ಇದರಿಂದ ಒಂದು ಪದ್ಯವನ್ನೂ ಅದರ ಟೀಕೆಯನ್ನು ಇಲ್ಲಿ ಎತ್ತಿ ಗುರುತಿಸಲಾಗಿದೆ :

> ಅನುಹಸಂ ಲೇಸು ಚೊಕ್ಕಳಿಕೆ ಚೊಕ್ಕಂ ರಯ್ಯ
> ಕೆನೆಗಟ್ಟಿಯಡ್ಡವಣೆಯೆನೆ ಮನೋಹರವಾಚಿ
> ಬನವೆನೆ ವನಾಖ್ಯೆಯದಿರ್ಮುತ್ತೆಯದಿರ್ಗಂತಿ ಮೆಂಥೆಯಮಂದು ಚೆಲ್ವನಾಂತು
> ಮಿನುಗುವ ವಸಂತ ದೂತಿಕೆಗೆ ಪೆಸರಕ್ಕು ಹೂ
> ವಿನ ಹಬ್ಬ ಸುಗ್ಗಿ ಬಂದುದು ಬಸಂತಂ ದಲೆಂ
> ದೆನೆ ವಸಂತಕ್ಕೆ ಮಿಸುಗುವ ಪೆಸರ್ ಬಿಚ್ಚಳಿಕೆಯೆಂದು ವಿಸ್ತಾರಮಕ್ಕುಂ.

ಟೀಕೆ : ಅನುಹಸಂ-ಅನುಹಸವೆಂದೂ, ಲೇಸು-ಲೇಸೆಂದೂ, ಚೊಕ್ಕಳಿಕೆ- ಚೊಕ್ಕಳಿಕೆಯೆಂದೂ, ಚೊಕ್ಕಂರ್ರೈಯುಯೆಂದು-ಚೊಕ್ಕರ್ರೈಯುಯೆಂದೂ, ಕೆನೆಗಟ್ಟಿ-ಕೆನೆಗಟ್ಟಿಯೆಂದೂ, ಅಡ್ಡವಣೆ-ಅಡ್ಡವಣೆಯೆಂದೂ, ಎನೆ-ಹೇಳಿದ ಈ ೬ ಮನೆಹೋರವಾಚಿ, ಶ್ರೇಷ್ಠಾರ್ಥಗಳೂ, ಬನವೆನೆ-ಬನ ಎನಲಾಗಿ ವನಾಖ್ಯೆ-ಅರಣ್ಯದ ಹೆಸರು, ಅದಿರ್ಮುತ್ತೆ-ಅದಿರ್ಮುತ್ತೆಯೆಂದೂ, ಅದಿರ್ಗಂತಿ-ಅದಿರ್ಗಂತಿಯೆಂದೂ, ಮೆಂಥೆಯಂ-ಮೆಂಥೆಯವೆಂದೂ, ಎಂದೂ ಹೇಳಿದ ಈ ೩ ಚೆಲ್ವನಾಂತು-ಸೊಗಸನ್ನು ಹೊಂದಿ, ಮಿಸುಗುವ-ಪ್ರಕಾಶಿಸುತ್ತಿರುವ, ವಸಂತದೂತಿಕೆಗೆ-ವಸಂತದೂತಿಕೆಯೆಂಬ, ಅದಿರ್ಗಂತೀ ಹುವ್ವಿಗೆ, ಪೆಸರಕ್ಕು-ಹೆಸರಾಗುವುದು, ಹೂವಿನಹಬ್ಬ-ಹೂವಿನ ಹಬ್ಬವೆಂದೂ, ಸುಗ್ಗಿ ಬಂದುದು-ಸುಗ್ಗಿ ಬಂದುದೆಂದೂ, ಬಸಂತಂ-ಬಸಂತವೆಂದೂ, ದಲ್-ನಿಶ್ಚಯವಾಗಿ, ಎಂದೆನೆ-ಎಂದು ಹೇಳಿದ ಈ ವಸಂತಕ್ಕೆ-ವಸಂತಋತುವಾಗೆ, ಮಿಸುಗುವ-ಪ್ರಕಾಶಿಸುತ್ತಿರುವ, ಪೆಸರು-ಹೆಸರೂ, ಬಿಚ್ಚಳಿಕೆಯೆಂದು-ಬಿಚ್ಚಳಿಕೆಯೆಂಬುದು, ವಿಸ್ತಾರಮಕ್ಕುಂ-ವಿಶಾಲಕ್ಕಾಗುವುದು.

ಈ ಟೀಕೆಯನ್ನು ಅಮರಕೋಶಕ್ಕೆ ವಿದ್ವಾಂಸರು ಬರೆದಿರುವ ಟೀಕೆಗಳಿಗೆ ಹೋಲಿಸಿದರೆ ಟೀಕೆಯ ಅರ್ಥವೇನು ಎನ್ನುವುದು ನಮ್ಮವರಿಗೆ ಇನ್ನೂ ತಿಳಿವಿಗೆ ಬಂದಿರಲಿಲ್ಲ ಎಂಬಂಶ ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೬ನೆಯ ಶತಮಾನದಲ್ಲಿ ತೋಂಟದಾರ್ಯನು ರಚಿಸಿದ **ಕರ್ನಾಟಕ ಶಬ್ದ ಮಂಜರಿ** ಎಂಬುದು ಹಳಗನ್ನಡ ಪದಗಳ ನಿಘಂಟು. ತೋಂಟದಾರ್ಯನು ವೀರಶೈವ

ಸಿದ್ಧಾಂತದಲ್ಲಿ ಆಳವಾದ ಪಾಂಡಿತ್ಯವುಳ್ಳವನಾಗಿದ್ದನು. ಆದುದರಿಂದ ವೀರಶೈವ ಕವಿಗಳ ಗ್ರಂಥಗಳಲ್ಲಿ ಬರುವ ಕನ್ನಡಪದಗಳನ್ನೂ ತತ್ಸಮ ತದ್ಭವಗಳನ್ನೂ ಆಯಾ ಕವಿಗಳ '**ಉದಾಹರಣ ಸನ್ಮಾರ್ಗವಿಡಿದು**' ಒಟ್ಟು ೧೨೦ ವಾರ್ಧಕ ಷಟ್ಪದಿಗಳಲ್ಲಿ ಸೆರೆ ಹಿಡಿದಿಟ್ಟಿದ್ದಾನೆ. ಈ ನಿಘಂಟಿಗೆ ನಾಲ್ಕು ಟೀಕೆಗಳಿವೆ. ಈ ಟೀಕೆಗಳನ್ನು ಬರೆದವರು ಬೇರೆ ಬೇರೆಯವರಾದರೂ ಒಂದನ್ನು ನೋಡಿ ಒಂದನ್ನು ಬರೆದಂತೆ ಕಂಡುಬರುತ್ತವೆ. ಕಬ್ಬಿಗರ ಕೈಪಿಡಿಗೆ ಟೀಕೆಯನ್ನು ಬರೆದ ಹೆಸರುಘಟ್ಟದ ಹೊನ್ನಪ್ಪನೇ ಇದಕ್ಕೂ ಒಂದು ಟೀಕೆಯನ್ನು ಬರೆದಿದ್ದಾನೆ. ಇದು ೧೮೮೪ರಲ್ಲಿ ಮುದ್ರಿತವಾಗಿದೆ. ಈ ಟೀಕೆಗಳೂ ಈ ನಿಘಂಟೂ ಜನರಿಗೆ ತುಂಬ ಪ್ರಿಯವಾದುವಾಗಿರಬೇಕು. ಇದರಿಂದಲೂ ಒಂದು ಪದ್ಯವನ್ನು, ಒಂದು ಟೀಕೆಯನ್ನು ಉದ್ಧಾರ ಮಾಡುವ ಮುಂಚೆ ಈ ನಿಘಂಟಿಗೆ ಟೀಕೆಯನ್ನು ಬರೆದವರ ಹೆಸರುಗಳನ್ನು ತಿಳಿಸುವುದು ಉತ್ತಮ.

೧. ಹೆಸರುಘಟ್ಟದ ಹೊನ್ನಪ್ಪನ **ಟೀಕೆಗೆ ವಿಬುಧಾನಂದಿನೀ** ಎಂದು ಹೆಸರು.

೨. ಎನ್.ಆರ್. ಕರಿಬಸವಶಾಸ್ತ್ರಿ ಟೀಕೆಗೆ **ಸುಜನೋಲ್ಲಾಸಿನೀ** ಎಂದು ಹೆಸರು.

೩. ಶ್ರೀನಿವಾಸ(?)ನ ಟೀಕೆಗೆ **ಕರ್ನಾಟಕ ಶಬ್ದಮಂಜರಿ ಟೀಕು** ಎಂದು ಹೆಸರು.

೪. ಮುನೇಗೌಡನ ಟೀಕೆಗೆ **ಕರ್ನಾಟಕ ಶಬ್ದಮಂಜರಿ ಟೀಕು** ಎಂದು ಹೆಸರು.

ಇವುಗಳಲ್ಲಿ **ಸುಜನೋಲ್ಲಾಸಿನೀ** ಟೀಕೆಯೊಂದಿಗೆ ಒಂದು ಪದ್ಯವನ್ನು ಈ ಕೆಳಗೆ ಕೊಡಲಾಗಿದೆ.

ಎಳೆ ಬೂವಿ ಬುವಿ ಧರೆ ನೆಲಂ ತಿರೆಯು ರನ್ನವಸಿ
ಅಳು ಪೊಡವಿಯೆನೆ ಮೇದಿನಿಯ ನಾಮವರಸುಮಗ
ನೊಳೆಯರಗುವರನೆಂದೊಡಕ್ಕು ಗದ್ದುಗೆ ಪಟ್ಟವಣೆಯೆನಲ್ ಸಿಂಹಾಸನಂ
ಬಳಿಕಮಂತಃಪುರಮದಂತವುರವೆನಿಕ್ಕು ಮಂ
ಗಳವಱೆಗೆ ಬದ್ದವಣವಕ್ಕು ಕೋಶದ ಗೃಹ
ಕಳವಡುಗು ಬಂಡಾರವದು ರಾಣಿವಾಸಕ್ಕೆ ಪೆಂಡವಾಸವದೆನಿಸುಗುಂ.

ಟೀಕೆ :

ಎಳೆ, ಬೂವಿ, ಬುವಿ, ದರೆ, ನೆಲಂ. ತಿರೆಯು, ರನ್ನವಸಿಅಳು, ಪೊಡವಿ, (ಎನೆ) ಈ ೮ ಮೇದಿನಿಯನಾಮಂ-ಭೂಮಿಯ ಹೆಸರು, ಅರಗುವರಂ (ಎಂದೊಡೆ) ಅರಸುಮಗನೊಳೆ-ರಾಜಪುತ್ರನಲ್ಲಿ ಅಕ್ಕು, ಗದ್ದುಗೆ, ಪಟ್ಟವಣೆ, (ಎನಲ್) ಈ ೨ ಸಿಂಹಾಸನಂ-ಸಿಂಹಾಸನದ ಹೆಸರು, (ಬಳಿಕೆ-ಅನಂತರದಲ್ಲಿ) ಅಂತವುರಂ, ಅಂತಃಪುರಂ-ಏಕಾಂತಸ್ಥಲವು, ಎನಿಕ್ಕು, ಬದ್ದವಣಂ, ಮಂಗಳವಱೆಗೆ-ಮಂಗಳಕರವಾದ ವಾದ್ಯಕ್ಕೆ, ಅಕ್ಕು, (ಅದು) ಬಂಡಾರಂ, ಕೋಶದಗೃಹಕ್ಕೆ-ಬೊಕ್ಕಸದ ಮನೆಗೆ, ಅಳವಡುಗು-ಪ್ರಾಪ್ತವಾಗುವುದು, ಪೆಂಡವಾಸಂ, (ಅದು) ರಾಣಿವಾಸಕ್ಕೆ ರಾಜಪತ್ನಿಯರಿರುವ ಸ್ಥಲಕ್ಕೆ, ಎನಿಸುಗುಂ-ಹೇಳಿಸಿಕೊಳ್ಳುವುದು.

ಇದೇ ೧೬ನೆಯ ಶತಮಾನದಲ್ಲಿ ಮತ್ತೆರಡು ನಿಘಂಟುಗಳು ಸಿದ್ಧವಾದುವು. ಒಂದು ಶೃಂಗಾರ ಕವಿಯ **ಕರ್ಣಾಟಕ ಸಂಜೀವನಂ**. ಎರಡನೆಯದು **ಭಾರತ ನಿಘಂಟು**. ಮೊದಲನೆಯದು ಱ, ೞಕಾರಗಳು ಬರುವ ಶಬ್ದಗಳ ಅರ್ಥವನ್ನು ನಿರೂಪಿಸುವ ನಿಘಂಟು. ಎರಡನೆಯದು ಕುಮಾರವ್ಯಾಸನ ಭಾರತದಲ್ಲಿ ಬರುವ ಕ್ಲಿಷ್ಟಪದಗಳಿಗೆ ಅರ್ಥಗಳನ್ನು ಸೂಚಿಸುವ ನಿಘಂಟು. ಮೊದಲನೆಯದರಲ್ಲಿ ೩೫ ಪದ್ಯಗಳೂ ಎರಡನೆಯದರಲ್ಲಿ ೬೭ ಪದ್ಯಗಳೂ ಇವೆ. ದೇಶೀಯ ಪದಗಳ ಅರ್ಥಗಳನ್ನು ತಿಳಿಸುವ ಈ ಎರಡೂ ಮುಖ್ಯವಾದ ನಿಘಂಟುಗಳು.

ಕರ್ಣಾಟಕ ಸಂಜೀವನಂ ನಿಘಂಟಿನ ಕರ್ತೃ ತನ್ನನ್ನು ಬೊಮ್ಮರಸನಾಯಕನ ಸುತನೆಂದು ಹೇಳಿಕೊಂಡಿದ್ದಾನೆ. ೧೪೫೦ರಲ್ಲಿದ್ದ ಬೊಮ್ಮರಸನಿಗೂ ಇವನಿಗೂ ಸಂಬಂಧವಿರಲಾರದು. ಈ ನಿಘಂಟಿನಿಂದ ಒಂದು ಪದ್ಯವನ್ನು ಎತ್ತಿ ಉಲ್ಲೇಖಿಸಲಾಗಿದೆ :

ಸೂೞ್ನೆನಲ್ ಬಾರಿ ಗಱೆಯೆನೆ ಸರಳ ಭೇದಮಾ
ಬಾೞಿಗಂ ಸಾಮಾನ್ಯದಾಮಾಲ್ಯಬಂಧಮದು
ಬಾಟಿಕಂ ಸೀೞ್ದೊಣಗಿ ಬಾಳ್ದ ಶಾ[ಕಂ] ಪೊಟಪು ಸಾಮಾನ್ಯ ಕೃತಿಗೆ ನಾಮಂ
ಕೂಟಿನೆಗ್ಗಂ ಪಾೞೆ ಪಾಟಿ ಪಱೆಯರಮೆನಲ್
ಕೋಟಿ ಸಂಕಲೆಯಟಿಲ್ದಟಿಮೆನಿಪುದಡಿಗೆಯದು
ಸಾೞಿಗೆ ಕಿಮುೞ್ಚೆನಲ್ ತುೞಿವುದು ತುಡುಂಗುಣಿ ಹಾಟ್ಮಸೆಯ ಹಾಟಿನಕ್ಕುಂ

ಭಾರತ ನಿಘಂಟಿನ ಕರ್ತೃ ಯಾರೋ ತಿಳಿಯದು. ಅದರಿಂದಲೂ ಒಂದು ಪದ್ಯವನ್ನು ಉದ್ಧಾರ ಮಾಡಲಾಗಿದೆ.

ಅಬ್ಬರಮೆನೆ ವಾದ್ಯದ ರವ
ನಿಬ್ಬರವೆನೆ ನಿರ್ಭರಕ್ಕೆ ನಾಮಂ ನಿಜದಿಂ
ಬೊಬ್ಬೆಯೆನಲ್ ಭಟಗರ್ಜನೆ
ಬೆಬ್ಬಳಮೆಂದನೆ ವಿಕಳತ್ವಮೆಂದು ತಿಳಿಗೆ ವಿದಗ್ಧರ್.

ಕ್ರಿ.ಶ. ೧೭ನೆಯ ಶತಮಾನದಲ್ಲಿದ್ದ ಸೂರ್ಯ ಕವಿಯು ರಚಿಸಿರುವ ೨೭೧ ಕಂದಪದ್ಯಗಳ **ಕವಿಕಂಠಹಾರ** ಎಂಬುದೇ ಪ್ರಾಚೀನ ಕನ್ನಡ ನಿಘಂಟುಗಳಲ್ಲಿ ಕೊನೆಯದು. ಈ ಕವಿ ಗದ್ಯರೂಪವಾಗಿದ್ದ ಶಬ್ದಸಾರವನ್ನು ಪದ್ಯರೂಪವಾಗಿ ಬರೆದಿರುವಂತೆ ಕಂಡುಬರುತ್ತದೆ. ಇದರಿಂದಲೂ ಒಂದು ಪದ್ಯವನ್ನು ಇಲ್ಲಿ ಬರೆದು ತೋರಿಸಲಾಗಿದೆ :

ಆಡುಂಗಾಯ್ತುರೆಸುತ್ತಂ
ವಾಡಲ್ ತಾಂ ಕೊಟ್ಟವಳರ್ಗಕ್ಕುಂ ಪರರಂ
ಪೀಡಿಸುವಾತಂ ಸವಸೆಗ
ಜೋಡಂ ಪರಳಿಗನು ಪಾಣ್ಬ ಸಿತಗಂ ಜಾರಂ.

ಕನ್ನಡ ಶಬ್ದಗಳಿಗೆ ಸಂಬಂಧಿಸಿದಂತೆ ನಾನು ಮೇಲೆ ವಿವರಿಸಿರುವ ನಿಘಂಟುಗಳು ಮುಖ್ಯವಾದವು. ಆದರೆ ಹನ್ನೊಂದನೆಯ ಶತಮಾನದಿಂದ ಹಿಡಿದು ಹದಿನಾರನೇ ಶತಮಾನದವರೆಗೆ ಅನೇಕರು ಸಂಸ್ಕೃತ ನಿಘಂಟುಗಳನ್ನು ರಚಿಸಿದ್ದಾರೆ.

ಕ್ರಿ.ಶ. ೧೧೪೫ರಲ್ಲಿ ನಾಗವರ್ಮನು **ಅಭಿಧಾನವಸ್ತುಕೋಶವೆಂಬ** ನಿಘಂಟನ್ನು ರಚಿಸಿ ಕನ್ನಡ ಕಾವ್ಯಗಳಲ್ಲಿ ಬರುವ ಸಂಸ್ಕೃತ ಪದಗಳ ಕೋಶವನ್ನು ಸಿದ್ಧಪಡಿಸಿದ್ದಾನೆ. ಭಟ್ಟಹಲಾಯುಧನ **ಅಭಿಧಾನರತ್ನಮಾಲಾ** ಎಂಬ ಗ್ರಂಥಕ್ಕೆ ಈತನೇ ಟೀಕೆಯನ್ನೂ ಬರೆದಿದ್ದಾನೆ. ಇದು ಸಂಸ್ಕೃತ ನಿಘಂಟುಗಳಿಗೆ ಕನ್ನಡದಲ್ಲಿ ಬರೆದ ಮೊಟ್ಟಮೊದಲನೆಯ ಟೀಕೆ. **ನಾಚಿರಾಜೀಯ** ಎಂಬುದು ಅಮರಕೋಶಕ್ಕೆ ಕನ್ನಡದಲ್ಲಿ ಬರೆದ ಮೊದಲ ಟೀಕೆ. ಇದರ ಕಾಲ ಕ್ರಿ.ಶ. ಸು. ೧೩೦೦. **ಲಿಂಗಾಭಟ್ಟೀಯ, ಗುರುಬಾಲಪ್ರಬೋಧಿಕೆ, ನಾಮಲಿಂಗಾರ್ಥಚಂದ್ರಿಕಾ** ಮುಂತಾದ ಇತರ ಅಮರಕೋಶದ ಟೀಕೆಗಳು ಕನ್ನಡದಲ್ಲಿವೆ. ಕನ್ನಡದಲ್ಲಿ ಅಮರಕೋಶದ ಪ್ರಭಾವವು ಹೆಚ್ಚಾಗಿ ಕಾಣುವುದಕ್ಕೆ ಈ ಟೀಕೆಗಳೇ ಕಾರಣ. ೧೮೮೫ರಲ್ಲಿ ಪ್ರಕಟವಾದ **ಕರ್ಣಾಟಕಕಲ್ಪದ್ರುಮಂ** ಎಂಬ ಒಂದು ನಿಘಂಟಿದೆ. ಇದನ್ನು ರಚಿಸಲು ಪ್ರಾರಂಭಿಸಿದವನು ಮೈಸೂರು ಸರಕಾರದ ವಿದ್ಯಾ ಇಲಾಖೆಯಲ್ಲಿ ಟ್ರಾನ್ಸ್ಲೇಟರ್ ಆಗಿದ್ದ ರಾಮಸ್ವಾಮಿಶಾಸ್ತ್ರಿ. ಆತನು ಈ ಕಾರ್ಯವನ್ನು ಪೂರೈಸುವುದಕ್ಕೆ ಮುಂಚೆಯೇ ಅವಸಾನ ಹೊಂದಿದುದರಿಂದ ಈ ಕೆಲಸವನ್ನು ಮುಂದುವರಿಸಿ ಪೂರೈಸುವಂತೆ ಬೆಂಗಳೂರು ಬುಕ್ ಡಿಪೋ ಸುಬ್ಬರಾಯಶಾಸ್ತ್ರಿಗಳೂ ಚಿಕ್ಕಗಿರಿಯಪ್ಪನವರೂ ಸೂಚಿಸಿದ್ದರಿಂದ ಹೆಸರುಘಟ್ಟದ ಹೊನ್ನಪ್ಪನು ಇದನ್ನು ಪೂರೈಸಿದನು. ಆತನು ಉಪ್ಪಾರಹಳ್ಳಿಯ ಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದನು. ಸುಮಾರು ೪೦೦ ಪುಟಗಳ ಈ ನಿಘಂಟಿನಲ್ಲಿ ಪ್ರತಿಯೊಂದು ಶಬ್ದಕ್ಕೂ ಆಕರಗಳನ್ನು ಅಥವಾ ರೂಢಿವಾಕ್ಯಗಳನ್ನೂ ಅಥವಾ ಪದಪುಂಜಗಳನ್ನು ಕೊಟ್ಟಿದ್ದಾನೆ. ಕಿಟ್ಟೆಲ್ ಈ ಗ್ರಂಥದ ಬಗ್ಗೆ ಏನೂ ಹೇಳದೆ ಇರುವುದರಿಂದ ಇದು ಅವನಿಗೆ ದೊರಕಿಲ್ಲದೆ ಇರಬಹುದು.

ಅಕಾರಾದಿ ವೈದ್ಯ ನಿಘಂಟು, ಇಂದ್ರ ದೀಪಿಕಾ ನಿಘಂಟು, ಎಂಬ ವೈದ್ಯ ನಿಘಂಟುಗಳಿವೆ. ಈಗ ಈ ನಿಘಂಟುಗಳಲ್ಲಿ ಹೆಸರಿಸಿರುವ ಮೂಲಿಕೆಗಳನ್ನು ಗುರುತಿಸುವ ಜನರೇ ಕಡಮೆಯಾಗಿದ್ದಾರೆ. ಇಲ್ಲವೇ ಇಲ್ಲವೆಂದರೂ ಸಲ್ಲುವುದು. ಆದರೂ ಅಲ್ಲೊಬ್ಬರು ಇಲ್ಲೊಬ್ಬರು ಇರುವಾಗಲೇ ಇಂಥ ನಿಘಂಟುಗಳನ್ನು ಚೆನ್ನಾಗಿ ಮುದ್ರಣ ಮಾಡಿ ಆಯಾ ಮೂಲಿಕೆಗಳ ಬಗ್ಗೆ ಸಚಿತ್ರ ಪರಿಚಯ ಲೇಖನಗಳನ್ನೂ ಬರೆಸಿ ಕಾಪಾಡುವುದು ಉತ್ತಮ. ಈ ನಿಘಂಟಿನಲ್ಲಿರುವ ಹೆಸರುಗಳು ಹೆಸರಾಗಿಯೇ ಉಳಿಯುವುದಕ್ಕೆ ಮೊದಲೇ ಈ ಕೆಲಸವಾಗಬೇಕು. ಆದರೆ ನರಿಯ ಕೂಗು ಗಿರಿಯನ್ನು ಮುಟ್ಟೀತೇ ? ಆಯುರ್ವೇದ ವಿದ್ಯೆಯಲ್ಲಿ ನಿಷ್ಣಾತವಾಗಿರುವ ಈಗಿನ ವಿದ್ವಾಂಸರು ಈ ದಿಕ್ಕಿನಲ್ಲಿ ಕೆಲಸ ಮಾಡಬೇಕು. ಸರಕಾರವೂ ಇತರ ಹಣಕಾಸಿನ ಸಂಸ್ಥೆಗಳೂ ಈ ಕೆಲಸಕ್ಕೆ ಬೆಂಬಲವಾಗಿ ನಿಲ್ಲಬೇಕು.

ನಾನಾರ್ಥಕೋಶಗಳು ಮತ್ತೊಂದು ಗುಂಪಿಗೆ ಸೇರುವ ಕೋಶಗಳು. ಇವುಗಳಲ್ಲಿ ಕರ್ತೃ ತಿಳಿಯದ **ಪದ್ಯ ನಾನಾರ್ಥ, ಚನ್ನವೀರನ ನಾನಾರ್ಥಕಂದ,** ದೇವೋತ್ತಮನ

ನಾನಾರ್ಥರತ್ನಾಕರ ಎಂಬ ನಿಘಂಟುಗಳಲ್ಲಿ ಸಂಸ್ಕೃತದಲ್ಲಿ ಇಲ್ಲದ ಅನೇಕ ಅರ್ಥಗಳನ್ನೂ ಸೇರಿಸಿ ಉಲ್ಲೇಖಗೊಳಿಸಿದ್ದಾರೆ. ಅಲ್ಲಿರುವ ಎಲ್ಲ ಅರ್ಥಗಳಿಗೂ ಆಧಾರವೇ ಇಲ್ಲ. ಟೀಕಾಕಾರರಲ್ಲಿ ಕೆಲವರು ತೆಲುಗು ಭಾಷೆಯನ್ನು ಬಲ್ಲವರಾಗಿದ್ದರು. ಅಂಥವರು ಬರೆದ ಸಂಸ್ಕೃತ ಟೀಕುಗಳಲ್ಲಿಯೂ ಕನ್ನಡ ಟೀಕೆಗಳಲ್ಲಿಯೂ ತೆಲಗು ಸಂಪ್ರದಾಯದಲ್ಲಿದ್ದ ಹೆಸರುಗಳನ್ನು ತೆಲುಗು ಭಾಷೆಯಲ್ಲಿಯೇ ನಮೂದಿಸಿದ್ದಾರೆ. ದೇವೋತ್ತಮನೂ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಯೂ ಇದಕ್ಕೆ ದೃಷ್ಟಾಂತವಾಗಿದ್ದಾರೆ.

ನೃತ್ಯಶಾಸ್ತ್ರಕ್ಕೆ ಸಂಬಂಧಿಸಿದ **ತತ್ವಾಭಿನಯ ನಿಘಂಟುವೊಂದು** ಕನ್ನಡದಲ್ಲಿದೆ. ಇದರ ಕಾಲವಾಗಲಿ ಕರ್ತೃವಾಗಲಿ ನಿರ್ಧಾರವಾಗಿ ತಿಳಿದಿಲ್ಲ.

ಕನ್ನಡದಲ್ಲಿ ಹೀಗೆ ನಿಘಂಟುಗಳು ಬೆಳೆದಿದ್ದರೂ ನಿಘಂಟು ರಚನೆಯನ್ನೂ ಒಂದು ಶಾಸ್ತ್ರವಾಗಿ ಪರಿಗಣಿಸಿದುದು ಇತ್ತೀಚೆಗೆ. ಇದಕ್ಕೆ ನಮಗೆ ಪಾಶ್ಚಾತ್ಯ ವಿದ್ವಾಂಸರ ಕಡೆಯಿಂದಲೇ ಮಾರ್ಗದರ್ಶನ ದೊರೆಯಿತೆಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು.

ಭಾರತದಲ್ಲಿ ಕ್ರೈಸ್ತಮಿಷನರಿಗಳು ನಡೆಸಿದ ಕಾರ್ಯಗಳಿಗೆ ಚಾಲನೆ ದೊರೆತುದು **ರೆವರೆಂಡ್ ಸಿನ್ನಾಮಿ** ಎಂಬ ಪಾದ್ರಿಯ ಆಗಮನದಿಂದ. ಅವನು ಇಲ್ಲಿಗೆ ಬಂದು ಇದ್ದ ಕಾಲ (ಕ್ರಿ.ಶ. ೧೬೦೯-೧೬೭೬). ಅವನು ಮೈಸೂರಿಗೆ ಬಂದದ್ದು ಕ್ರಿ.ಶ. ೧೬೪೯ರಲ್ಲಿ. ಬ್ರಿಟಿಷರು ಭಾರತದಲ್ಲಿ ರಾಜಕೀಯವಾಗಿ ಭದ್ರವಾದ ತಳಪಾಯವನ್ನು ಹಾಕಿಕೊಂಡ ಮೇಲೆ ಕ್ರೈಸ್ತಪಾದ್ರಿಗಳಿಗೆ ಒಳ್ಳೆಯ ಅವಕಾಶ ಸಿಕ್ಕಿತು. ಕ್ರೈಸ್ತರ ಬೈಬಲ್ ಗ್ರಂಥವನ್ನು ಬೋಧಿಸಿ ಅದರ ಪ್ರಚಾರ ಮಾಡಿ ಇಲ್ಲಿಯ ಜನರನ್ನು ಕ್ರೈಸ್ತಮತಕ್ಕೆ ಸೇರಿಸುವ ಪ್ರಯತ್ನ ಮಾಡುವುದಕ್ಕಾಗಿಯೇ ಈ ಜನರು ಅಧಿಕ ಸಂಖ್ಯೆಯಲ್ಲಿ ಬಂದರು. ಈ ಬಗ್ಗೆ ಯಾವ ಅನುಮಾನವಿಲ್ಲವೆಂಬುದನ್ನು ಕ್ರೈಸ್ತ ಮಿಷನರಿಗಳ ಚರಿತ್ರೆಯಿಂದಲೇ ತಿಳಿಯಬಹುದು. ಈ ಮತಾಂತರ ಕಾರ್ಯಕ್ಕಾಗಿ ಒಬ್ಬ ಪಾದ್ರಿಯು ತಾನೂ ಜನಿವಾರವನ್ನು ಧರಿಸಿದನೆಂಬ ಕತೆಯಿದೆ. ಭಾರತದಲ್ಲಿ ಕಾರ್ಯಪ್ರವೃತ್ತವಾಗಿದ್ದ ಪ್ರಮುಖ ಕ್ರೈಸ್ತಮತೀಯ ಸಂಸ್ಥೆಗಳು ಇವು : ೧. ದಿ ಜೆಸ್ಯೂಟ್ ಸೊಸೈಟಿ. ೨. ದಿ ಲಂಡನ್ ಮಿಷನ್. ೩. ದಿ ವೆಸ್ಲೆಯಿನ್ ಮಿಷನ್. ೪. ದಿ ಬೆಸಿಲ್ ಮಿಷನ್.

ಕ್ರಿ.ಶ. ೧೮೫೦ರಲ್ಲಿ ಚಾರ್ಬೊನಾ (E.L. Charbonnaux) ಎಂಬಾತನು ಮೈಸೂರಿನಲ್ಲಿ **ವಿಕಾರ್ ಎಪೋಸ್ತೆಲಿಕ್** ಎಂಬ ಅಧಿಕಾರವನ್ನು ವಹಿಸಿಕೊಂಡನು. ಆಗಿನಿಂದ ನಮ್ಮ ಕನ್ನಡ ದೇಶದಲ್ಲಿ ಕ್ರೈಸ್ತಮತ ಪ್ರಚಾರವು ವ್ಯಾಪಕವಾಗಿ ನಡೆಯಿತು. ೧೯ನೆಯ ಶತಮಾನದ ಪ್ರಾರಂಭದಿಂದ ಪ್ರಾಟೆಸ್ಟೆಂಟ್ ಮತ ಪ್ರಚಾರವು ಮೊದಲಾಯಿತು. ಈ ಕೆಲಸಕ್ಕಾಗಿ ಬಂದ ಪಾದ್ರಿಗಳು ಮತಪ್ರಚಾರಕರು ಮಾತ್ರವಾಗಿರಲಿಲ್ಲ. ಅವರು ತುಂಬ ಮೇಧಾವಿಗಳೂ ಕಷ್ಟಪಟ್ಟು ಕೆಲಸ ಮಾಡುವವರೂ, ಸುತ್ತಮುತ್ತಣ ಜನರ ಯೋಗಕ್ಷೇಮ ನಿರ್ವಹಣೆಯಲ್ಲಿ ತೀವ್ರಾಸಕ್ತರೂ ಆಗಿದ್ದರು. ಆದುದರಿಂದ ಅವರು ಆಯಾಪ್ರದೇಶದ ಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ಕೆಲವರಂತೂ ಅಸಾಮಾನ್ಯವಾದ ವಿದ್ವತ್ತನ್ನು ಸಂಪಾದಿಸಿ ದೇಶೀಯ ಭಾಷೆಗಳಲ್ಲಿ ಸಾಹಿತ್ಯ ಕಾರ್ಯವನ್ನು ನಡೆಸಿದರು. ಅವರ ಆಸಕ್ತಿಯಿಂದಲೇ ಕನ್ನಡದಲ್ಲಿ ವ್ಯಾಕರಣ ಗ್ರಂಥಗಳ ಸಿದ್ಧತೆ,


ಶಾಲೆಗಳ ಪಠ್ಯಪುಸ್ತಕಗಳ ರಚನೆ, ನಿಘಂಟು ರಚನೆ ಮುಂತಾದ ವಿದ್ವತ್ಕಾರ್ಯಗಳು ರೂಪುತಳೆಯುವುದು ಸಾಧ್ಯವಾಯಿತು.

ನಿಘಂಟುಗಳಿಗೆ ಸಂಬಂಧಿಸಿದಂತೆ ಕ್ರೈಸ್ತ ಪಾದ್ರಿಗಳ ಪ್ರಯತ್ನ ಮೊದಲಾದುದು ಕ್ರಿ.ಶ. ೧೮೩೨ರಲ್ಲಿ. **ರೆವರೆಂಡ್ ರೀವ್** ತನ್ನ 'A Dictionary Carnataka and English' ಎಂಬ ಗ್ರಂಥವನ್ನು ಸಿದ್ಧಪಡಿಸಿದನು. ಆ ಬಳಿಕ ೧೮೫೮ರಲ್ಲಿ ಡೇನಿಯಲ್ ಸ್ಯಾಂಡರ್‌ಸನ್ ಈ ನಿಘಂಟನ್ನು ಪರಿಷ್ಕೃತ ಮುದ್ರಣವನ್ನಾಗಿ ಪ್ರಕಟಿಸಿದನು. ಮತ್ತೆ ೧೮೭೧ರಲ್ಲಿ ಜಾನ್‌ಗ್ಯಾರೆಟ್ ಎಂಬುವನು ಇದೇ ನಿಘಂಟನ್ನು ಪ್ರಕಟಪಡಿಸಿದನು. ಆದರೂ ಈ ನಿಘಂಟಿನಲ್ಲಿದ್ದ ತಪ್ಪುಗಳನ್ನು ತಿದ್ದಿ ವಿಸ್ತೃತ ಕನ್ನಡ-ಇಂಗ್ಲಿಷ್ ನಿಘಂಟನ್ನು ಪ್ರಕಟಿಸುವ ಕಾರ್ಯ ಕಿಟ್ಟೆಲನಿಗೆ ಬಂತು.

ಇದೇ ಸಂದರ್ಭದಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಎರಡು ವಿಶಿಷ್ಟ ನಿಘಂಟುಗಳನ್ನು ಹೆಸರಿಸಬೇಕು.

೧. ಫಾದರ್ ಬ್ಯುಟೆಲೋರ್ (Fr. Boutelour) ಸಿದ್ಧಪಡಿಸಿ ಪ್ರಕಟಿಸಿದ ಕನ್ನಡ-ಲ್ಯಾಟಿನ್ ನಿಘಂಟು ೧೮೫೫ರಲ್ಲಿ ಪ್ರಕಟವಾಯಿತು. ಅದರ ಹೆಸರು Dictionarium, Canarese Latinum. ಈ ಪುಸ್ತಕದ ಮುಖಪುಟವನ್ನು ಈ ಕಿರುಪರಿಚಯದಲ್ಲಿ ಪ್ರಕಟಿಸಲಾಗಿದೆ.

೨. ಬಿಷಪ್ ಸ್ಟೀಫನ್ ಲೂಯಿ ಚಾರ್ಬೊನಾ (Bishop Stephen Louis Charbonnaux) ೧೯೬೧ರಲ್ಲಿ ಪ್ರಕಟಿಸಿದ ಲ್ಯಾಟಿನ್-ಕನ್ನಡ ನಿಘಂಟು. ಅದರ ಹೆಸರು Dictionarium Latino Canarese.


DICTIONARIUM

CANARENSE LATINUM.

AD USUM

MAISSURENSIS CATHOLICI SEMINARII

1855.

೭. ಕನ್ನಡ ನಿಘಂಟುಗಳು ಮತ್ತು ರೆವರೆಂಡ್ ಎಫ್. ಕಿಟ್ಟೆಲ್

ಕ್ರಿ.ಶ. ೧೯೯೪, ಈ ವರ್ಷ ಕನ್ನಡ ನಿಘಂಟುಗಳ ಚರಿತ್ರೆಯಲ್ಲಿ ಬಹು ಪ್ರಧಾನ ವರ್ಷವಾಗಿದೆ. ಕನ್ನಡದ ಮೊದಲ ನಿಘಂಟಾದ 'ರನ್ನ ನಿಘಂಟು' ರಚಿತವಾಗಿ ಸಾವಿರ ವರ್ಷಗಳು ಸಂದಿವೆ. ಆದುದರಿಂದ ಆ ನಿಘಂಟಿನ ಸಹಸ್ರಮಾನೋತ್ಸವವನ್ನು ಆಚರಿಸಲಾಯಿತು. ರೆವರೆಂಡ್ ಎಫ್. ಕಿಟ್ಟೆಲ್‌ನ 'A Kannada-English Dictionary' ಪ್ರಕಟವಾಗಿ ನೂರು ವರ್ಷಗಳಾದುವು. ಅದರ ಶತಮಾನೋತ್ಸವವನ್ನು ಆಚರಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ಯೋಜನೆಯು ಪ್ರಾರಂಭವಾದ ಕಾಲದಿಂದ (೧೯೪೩) ಐವತ್ತು ವರ್ಷಗಳು ಕಳೆದಿವೆ. ಆ ಯೋಜನೆಯ ಸುವರ್ಣ ಮಹೋತ್ಸವವನ್ನು ಆಚರಿಸಬೇಕಾಗಿತ್ತು. ಈ ಸುಸಂದರ್ಭದಲ್ಲಿ ಕನ್ನಡಕ್ಕೆ ಪ್ರಮಾಣಬದ್ಧವಾದ, ಒಂದು ನಿಘಂಟನ್ನು ಮೊದಲು ಸಿದ್ಧಪಡಿಸಿದ ಡಾ। ಕಿಟ್ಟೆಲ್‌ನ ಕಾರ್ಯವನ್ನು ನೆನೆದು ಅವನಿಗೆ ನಮ್ಮ ಗೌರವವನ್ನು ಸೂಚಿಸುವುದು ಕನ್ನಡಿಗರ ಕೃತಜ್ಞತೆಯಾಗುತ್ತದೆ.

ಕಿಟ್ಟೆಲ್ ಜರ್ಮನಿಯ ಜನಾಂಗದವನು. ಭಾರತದ ಸಂಸ್ಕೃತಿಯ ಬಗ್ಗೆ ಜರ್ಮನರಲ್ಲಿ ಆಸಕ್ತಿ ಬೆಳೆದುದು ಮ್ಯಾಕ್ಸ್‌ಮುಲರನ ವ್ಯಾಪ್ತವಾದ ಕಾರ್ಯಭಾರದಿಂದ. (ಮ್ಯಾಕ್ಸ್‌ಮುಲರ್ ಬಗ್ಗೆ ಜರ್ಮನರಲ್ಲಿ ಎಷ್ಟು ಗೌರವವಿದೆಯೆಂದರೆ ಆತನ ೧೫೦ನೆಯ ಜನ್ಮಶತಾಬ್ದದಲ್ಲಿ ಅನೇಕ ಜರ್ಮನ್ ವಿದ್ವಾಂಸರು ಈಗಲೂ ಭಾರತದ ಬಗ್ಗೆ ಇಟ್ಟಿರುವ ಆಸಕ್ತಿಯನ್ನು ಮೂರ್ತಗೊಳಿಸುವುದಕ್ಕಾಗಿ 'German Scholars on India' ಎಂಬ ಹೆಸರಿನ ಎರಡು ಸಂಪುಟಗಳನ್ನು ಪ್ರಕಟಣೆಗೆ ಸಿದ್ಧಪಡಿಸಿದರು. ಮೊದಲ ಸಂಪುಟವು ೧೯೭೩ರಲ್ಲಿಯೂ ಎರಡನೆಯ ಸಂಪುಟವು ೧೯೭೬ರಲ್ಲಿಯೂ ಪ್ರಕಟವಾಗಿವೆ.) ಜರ್ಮನ್ ವಿದ್ವಾಂಸರು ಭಾರತದಲ್ಲಿ ನೆಲೆ ನಿಂತು, ಬೇರೆ ಬೇರೆ ಭಾಗಗಳಲ್ಲಿದ್ದು ಆಯಾ ಸ್ಥಳದ ಭಾಷೆಯನ್ನು ಕಲಿತು ಆ ಪ್ರದೇಶದ ಅಭಿವೃದ್ಧಿಗೆ ನೆರವಾಗಿದ್ದಾರೆ. ಬಾಸೆಲ್ ಮಿಶನ್ ಕಡೆಯಿಂದ ಬಂದು ಕನ್ನಡ ದೇಶದಲ್ಲಿ ನಿಂತು ಹೀಗೆ ದುಡಿದ ಮತಪ್ರಚಾರಕರಲ್ಲಿ ಮುಖ್ಯರಾದವರು ಹರ್ಮನ್ ಮೋಗ್ಲಿಂಗ್, ಎಚ್.ಜೆ. ವೈಗಲ್, ಎಫ್. ಕಿಟ್ಟೆಲ್, ಜಿ. ವರ್ತ್ ಮತ್ತು ಎಫ್. ಜೀಗ್ಲರ್ ಮುಂತಾದವರು. ಮೋಗ್ಲಿಂಗನು ಬ್ರಾಹ್ಮಣರನ್ನು ಕ್ರೈಸ್ತ ಮತಕ್ಕೆ ಸೇರಿಸಿಕೊಳ್ಳುವ ಕೆಲಸದಲ್ಲಿ ಕ್ರಾಂತಿಕಾರಕ ಕಾರ್ಯವನ್ನು ಮಾಡಿದನು. ಈ ವಿಚಾರವನ್ನು ಅವನು 'ಈರಾರು ಪತ್ರಿಕೆ' ಎಂಬ ತನ್ನ ಪುಸ್ತಕದಲ್ಲಿ ವಿವರಿಸಿದ್ದಾನೆ. ಆತನು ಸುಮಾರು ೨೫ ವರ್ಷಗಳ ಕಾಲ ಕನ್ನಡದ ನೆಲದಲ್ಲಿ ನಿಂತು ತನ್ನ ಸ್ವಂತ ಕಾರ್ಯವಾದ

ಮತ ಪ್ರಚಾರದ ಜೊತೆಗೆ ಮಕ್ಕಳ ಶಿಕ್ಷಣ ಮತ್ತು ಕನ್ನಡ ಸಾಹಿತ್ಯ ಈ ಕ್ಷೇತ್ರಗಳಲ್ಲಿಯೂ ಸಾಕಷ್ಟು ಕೆಲಸ ಮಾಡಿದನು. ಗ್ರಂಥ ರಚನೆ, ವರ್ತಮಾನ ಪತ್ರಿಕೆಗಳು, ಕೊಡಗಿನ ಚರಿತ್ರೆ ಮುಂತಾದವುಗಳಲ್ಲಿ ಆಸಕ್ತನಾಗಿದ್ದನು.

ಹರ್ಮನ್ ಮೋಗ್ಲಿಂಗ್ ೧೮೪೮ರಲ್ಲಿ ಪ್ರಾರಂಭಿಸಿದ್ದ ಬಿಬ್ಲಿಯೋಥೆಕಾ ಕರ್ನಾಟಿಕ (Bibliotheca Carnatica) ದ ಮೂಲಕ ಜೈಮಿನಿ ಭಾರತ, ತೊರವೆ ರಾಮಾಯಣ, ದಾಸರ ಪದಗಳು, ಕುಮಾರವ್ಯಾಸ ಭಾರತ, ಬಸವ ಪುರಾಣ ಮುಂತಾದ ಗ್ರಂಥಗಳೂ ಗ್ರಂಥಭಾಗಗಳೂ ಪ್ರಕಟವಾದವು. (ಬಿ.ಎಲ್. ರೈಸ್ ಅವರು ಪ್ರಾರಂಭಿಸಿದ ಬಿಬ್ಲಿಯೋಥೆಕಾ ಕರ್ನಾಟಕ ಪ್ರಾರಂಭವಾದದ್ದು ೧೮೮೪ರಲ್ಲಿ.) ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಕಲಿತು, ಆ ಭಾಷೆಯಲ್ಲಿಯೇ ತಮ್ಮ ಮತ ಪ್ರಚಾರಕ್ಕೆ ಚೈತನ್ಯವನ್ನು ತುಂಬಿಕೊಳ್ಳುವುದು ಈ ಮತ ಪ್ರಚಾರಕರ ಉದ್ದೇಶವಾಗಿತ್ತು. ಆದರೆ ಕನ್ನಡದ ಕಲಿಕೆಯಿಂದ ಈ ಮತಪ್ರಚಾರಕರಲ್ಲಿ ಕನ್ನಡದ ಮೇಲಿನ ಮಮತೆ ಹೆಚ್ಚಿ, ಆ ಭಾಷೆಯ ಅಭಿವೃದ್ಧಿಗೆ ತುಂಬ ಸಹಾಯವಾಯಿತು. ಬೈಬಲ್ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡುತ್ತಾ ಮೋಗ್ಲಿಂಗ್ ತೀರಿಕೊಂಡನಂತೆ.

ಇನ್ನೊಬ್ಬ ಮತ ಪ್ರಚಾರಕ ಎಚ್.ಜೆ. ವೈಗಲ್. ಈತನು ಮೇಧಾವಿಯಾದ ದಾರ್ಶನಿಕ ವಿದ್ವಾಂಸನಾಗಿದ್ದನು. ಈತನೇ ಮೊದಲು ಕನ್ನಡ ಸಾಹಿತ್ಯದ ಚರಿತ್ರೆಯನ್ನು ರಚಿಸಲು ಪ್ರಯತ್ನಪಟ್ಟನು. ಡಬ್ಲ್ಯೂ. ಜಿ. ವರ್ತ್ ಎಂಬಾತನು 'ಪ್ರಾಕ್ಕಾವ್ಯ ಮಾಲಿಕೆ' ಎಂಬ ಕನ್ನಡ ಕಾವ್ಯಭಾಗಗಳ ಸಂಕಲನವನ್ನು ಸಿದ್ಧಪಡಿಸಿದನು. ಅನಾರೋಗ್ಯದ ಕಾರಣ ಅವನು ಯುರೋಪಿಗೆ ಹಿಂದಿರುಗಬೇಕಾಯಿತು. ಆಗ ಮೈಸೂರಿನ ವಿದ್ಯಾಭ್ಯಾಸ ಇಲಾಖೆಯ ನಿರ್ದೇಶಕನಾಗಿದ್ದ ಜೆ. ಗ್ಯಾರೆಟ್ ಎಂಬಾತನು ಪ್ರಾಕ್ಕಾವ್ಯ ಮಾಲಿಕೆಯ ಮುದ್ರಣದ ಮೇಲ್ವಿಚಾರಣೆಯನ್ನು ನೋಡಿಕೊಂಡನು. ಪ್ರಾಕ್ಕಾವ್ಯ ಮಾಲಿಕೆ (Canarese Poetical Anthology) ಯ ಬಗ್ಗೆ ಸ್ವಲ್ಪ ವಿವರವನ್ನು ತಿಳಿಯುವ ಅಗತ್ಯವಿದೆ. ಇದು ಪ್ರಕಟವಾದುದು ೧೮೬೮ರಲ್ಲಿ. ಇದರಲ್ಲಿ ಕನ್ನಡ ಸಾಹಿತ್ಯವನ್ನು ೧. ಬ್ರಾಹ್ಮಣ ಸಾಹಿತ್ಯ, ೨. ಲಿಂಗಾಯಿತ ಸಾಹಿತ್ಯ, ೩. ಜೈನ ಸಾಹಿತ್ಯ, ೪. ದೇಶೀಯ ಕ್ರೈಸ್ತ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಮಾಡಿ ಕ್ರೈಸ್ತ ಮತದ ಪ್ರಚಾರಕರು ರಚಿಸಿದ ಕೆಲವು ಸ್ತೋತ್ರಗಳನ್ನು ಕನ್ನಡ ಸಾಹಿತ್ಯದಲ್ಲಿ ಸೇರಿಸಿದ್ದಾನೆ. ಗ್ರಂಥದ ಕೊನೆಯಲ್ಲಿ 'ಪುಷ್ಪಮಾಲಿಕಾ ಶಬ್ದಕೋಶ' ಎಂಬ ಹೆಸರಿನ ೪೦ ಪುಟಗಳ ಒಂದು 'ಕಿರು ನಿಘಂಟನ್ನು ಸೇರಿಸಿದ್ದಾನೆ. ಇದರಲ್ಲಿ ಸುಮಾರು ೧೮೦೦ ಶಬ್ದಗಳ ಅರ್ಥ ವಿವರಣೆಯಿದೆ. ಈ ಸಂಕಲನದಲ್ಲಿ ೨೫೦ ಪುಟಗಳನ್ನು ಬ್ರಾಹ್ಮಣ ಸಾಹಿತ್ಯಕ್ಕೂ, ೧೪೦ ಪುಟಗಳನ್ನು ಲಿಂಗಾಯಿತ ಸಾಹಿತ್ಯಕ್ಕೂ, ೧೫೦ ಪುಟಗಳನ್ನು ಜೈನ ಸಾಹಿತ್ಯಕ್ಕೂ, ೩ ಪುಟಗಳನ್ನು ಕ್ರೈಸ್ತ ಸಾಹಿತ್ಯಕ್ಕೂ ಮೀಸಲಾಗಿ ಇಟ್ಟಿದ್ದಾನೆ.

ಹೀಗೆಯೇ ಡಬ್ಲ್ಯೂ. ಹಾಕ್, ಗಸ್ತಾವ್ ಕೀಸ್, ಜೆ. ಹ್ಯೂಬರ್ ಮುಂತಾದವರು ಅವರವರ ರೀತಿಯಲ್ಲಿ ಕ್ರೈಸ್ತ ಮತಕ್ಕೆ ಸಂಬಂಧಿಸಿದ ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ.

ಇವರಲ್ಲೆಲ್ಲ ಕನ್ನಡ ಸಾಹಿತ್ಯಕ್ಕೆ ಅತ್ಯಂತ ಪ್ರಮುಖವಾದ ಸೇವೆಯನ್ನು ಸಲ್ಲಿಸಿದವನು ರೆವರೆಂಡ್ ಫರ್ಡಿನಾಂಡ್ ಕಿಟ್ಟೆಲ್. ಅವನ ಕಾರ್ಯದ ಬಗ್ಗೆ ಸ್ವಲ್ಪ ವಿವರವಾಗಿ ತಿಳಿಸಲು ಇಲ್ಲಿ ಪ್ರಯತ್ನವನ್ನು ಮಾಡಿದೆ.

ಕಿಟ್ಟೆಲ್‌ನ ಮನೆತನ ಮತಪ್ರಚಾರಕರ ಮನೆತನ. ಅವನ ತಂದೆ ಗಾಟ್‌ಫ್ರೀಟ್ ಕ್ರಿಸ್ತಿಯಾನ್ ಕಿಟ್ಟೆಲ್, ಅವನ ತಾಯಿ ಟ್ರ್ಯೂಡೋವ್ ಹೆಲನ್ ಹ್ಯಾಬರ್ಟ್. ಕಿಟ್ಟೆಲ್‌ನ ತಂದೆ ಈಸ್ಟರ್ನ್ ಫ್ರೀಸ್‌ಲ್ಯಾಂಡ್ ಮತ ಪ್ರಚಾರಕ ಸಂಸ್ಥೆಯಲ್ಲಿ (Mission) ಒಬ್ಬ 'ಕ್ಲರ್ಜಿಮನ್' ಆಗಿದ್ದನು. ಕ್ಲರ್ಜಿಮನ್ ಎಂದರೆ ಮತ ಪ್ರಚಾರಕ ಎಂದೇ ಅರ್ಥ. ಈತನಿಗೆ ಆರು ಜನ ಮಕ್ಕಳಿದ್ದರು. ಹಿರಿಯ ಮಗನೇ ಫರ್ಡಿನಾಂಡ್ ಕಿಟ್ಟೆಲ್. ಇವನ ಒಬ್ಬ ತಮ್ಮ ಜೆ. ಕಿಟ್ಟೆಲ್ ಎಂಬುವವನು ತಲಚೇರಿಯಲ್ಲಿದ್ದು ಮತ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದನು.

ಎಫ್. ಕಿಟ್ಟೆಲ್ ಹುಟ್ಟಿದ್ದು ೧೮೩೨ನೆಯ ಇಸವಿ ಏಪ್ರಿಲ್ ೭ನೆಯ ತಾರೀಖು. ಅವನು ಹುಟ್ಟಿದ ಊರಿನಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿ ಅವರ ತಾತನ ಆಶ್ರಯದಲ್ಲಿ ಔರಿಕ್ ಎಂಬ ಊರಿನಲ್ಲಿ ಪ್ರೌಢಶಿಕ್ಷಣವನ್ನು ಪೂರೈಸಿದನು. ಈ ಸಮಯದಲ್ಲಿ (೧೮೪೧ ರಿಂದ ೧೮೪೯) ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದನು. ಜೊತೆಗೆ ಹೀಬ್ರೂ, ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳ ಪರಿಚಯವೂ ಚೆನ್ನಾಗಿಯೇ ಆಗಿತ್ತು. ಈ ವಿದ್ಯಾಭ್ಯಾಸವು ಪೂರೈಸುವ ವೇಳೆಗೆ ಆತನ ಧಾರ್ಮಿಕ ಶ್ರದ್ಧೆ ಉದ್ಬೋಧವಾದಂತೆ ಕಂಡುಬರುತ್ತದೆ. ಆದುದರಿಂದ ಅವನು ತನ್ನ ತಂದೆ ತಾಯಿಗಳಿಗೆ ತಿಳಿಸಿ ಲಿಬರಲ್ ಶಿಕ್ಷಣಕ್ಕೆ ವಿಮುಖನಾಗಿ ಮಿಷನರಿ ಕಾರ್ಯಕ್ಕೆ ಅಗತ್ಯವಾದ ಶಿಕ್ಷಣಕ್ಕೆ ಮನಸ್ಸು ಮಾಡಿದನು.

ಸ್ವಿಟ್ಜರ್‌ಲ್ಯಾಂಡಿನ ಬಾಸೆಲ್ ನಗರದಲ್ಲಿದ್ದ ಮಿಷನ್ ಕಾಲೇಜಿಗೆ ದೈವಶಿಕ್ಷಣ (Theology) ಕ್ಕಾಗಿ ಅರ್ಜಿ ಹಾಕಿದನು. ಹಿಂದಿನ ಶಾಲೆಯ ಪ್ರಿನ್ಸಿಪಾಲರಾಗಿದ್ದ ರೋಗ್ ಹಾರ್ಟ್ ಎಂಬವರು ತುಂಬು ಹೃದಯದ ಶಿಫಾರಸು ಪತ್ರವನ್ನು ಕಳುಹಿಸಿದ್ದುದರಿಂದ ಮತ್ತು ಆತನ ಅರ್ಜಿಯ ಜೊತೆಯಲ್ಲಿ ಅವನು ಮಾಡಿದ್ದ ಬೈಬಲ್ಲಿನಲ್ಲಿರುವ ಪ್ರಾರ್ಥನೆ (Psalms) ಗಳ ಅನುವಾದಗಳನ್ನು ಅಧಿಕಾರಿಗಳು ನೋಡಿದುದರಿಂದ ಕಿಟ್ಟೆಲ್‌ನಿಗೆ ಪ್ರವೇಶವು ಸುಲಭವಾಗಿ ದೊರೆಯಿತು. ಆ ಕಾಲೇಜಿಗೆ ಸೇರುವಾಗ ಕಿಟ್ಟೆಲ್‌ನಿಗೆ ೧೮ನೆಯ ವರ್ಷ. ಸೇರಿದ ತಾರೀಖು ೧೬-೧-೧೮೫೦. ಬಹುಬೇಗ ಮಿಷನ್ನಿನ ಅಧಿಕಾರಿಗಳಿಗೆ ಕಿಟ್ಟೆಲ್‌ನ ಬಹುಮುಖ ಪ್ರತಿಭೆಯ ಪರಿಚಯವಾಯಿತು. ಆತನ ತಿಳಿವಳಿಕೆ ಇತರರಿಗಿಂತ ಉತ್ತಮವಾಗಿದ್ದುದರಿಂದ ೧೮೫೩ನೆಯ ಏಪ್ರಿಲ್‌ನಲ್ಲಿ ಆ ದೈವಜ್ಞಾನ ಕಾಲೇಜಿನ ಶಿಕ್ಷಣವು ಪೂರೈಸಿತು. ೧೮೫೩ನೆ ಇಸವಿ ಅಕ್ಟೋಬರ್ ೧೬ರಂದು ಕಿಟ್ಟೆಲ್ ಸ್ಟುಟ್‌ಗಾರ್ಟಿನ ಚರ್ಚಿನಲ್ಲಿ ಕ್ರೈಸ್ತಮತ ಪ್ರಚಾರಕರ ದೀಕ್ಷೆಯನ್ನು ಪಡೆದನು. ಮಿಷನ್ನಿನ ಅಧಿಕಾರಿಗಳು ಭಾರತದಲ್ಲಿ ಕ್ರೈಸ್ತಮತ ಪ್ರಚಾರ ಮಾಡಲು ವಿದ್ವಾಂಸರಾದವರೇ ಆಗಬೇಕೆಂದು ನಿರ್ಧಾರ ಮಾಡಿದುದರಿಂದ ಕಿಟ್ಟೆಲ್‌ನು ಭಾರತಕ್ಕೆ ಬಂದು ಮೊದಲು ಮಂಗಳೂರಿನಲ್ಲಿ ನಿಲ್ಲಲು ಅವಕಾಶವಾಯಿತು. ಕಿಟ್ಟೆಲ್ ಭಾರತಕ್ಕೆ ಬಂದಾಗ ಅವನಿಗೆ ೨೨ ವರ್ಷ ವಯಸ್ಸು. ಹೀಗೆ ಕಿಟ್ಟೆಲ್‌ನು ಮತ ಪ್ರಚಾರಕನಾದುದು ಅವನ ತಂದೆ ತಾಯಿಗಳಿಗೆ ಸಂತೋಷವನ್ನುಂಟು ಮಾಡಿತು.

ಮಂಗಳೂರಿನಲ್ಲಿ ಬಂದು ನಿಂತ ಮೇಲೆ ಮೋಗ್ಲಿಂಗ್‌ನ ಕೈಕೆಳಗೆ ಪ್ರವಚನದಲ್ಲಿ ಸಿದ್ಧತೆಗಳನ್ನು ಮಾಡುವ ಅವಕಾಶ ಸಿಕ್ಕಿತು. ಸ್ವಲ್ಪ ದಿನಗಳಲ್ಲಿಯೇ ಕಿಟ್ಟೆಲ್‌ನನ್ನು ಕನ್ನಡದ ಅಭ್ಯಾಸಕ್ಕಾಗಿ ಧಾರವಾಡಕ್ಕೆ ಕಳಿಸಲಾಯಿತು. ಅಲ್ಲಿ ರೆ. ವೈಗಲ್‌ನ ಮಾರ್ಗದರ್ಶನದಲ್ಲಿ ಕಿಟ್ಟೆಲ್ ಕನ್ನಡವನ್ನು ಕಲಿತನು; ಒಂದೇ ವರ್ಷದಲ್ಲಿ ಕಿಟ್ಟೆಲ್ ಕನ್ನಡ ಭಾಷೆಯನ್ನು ಕಲಿತನೆಂದು ಹೇಳುತ್ತಾರೆ. ಧಾರವಾಡದಲ್ಲಿ ಅವನು ಕನ್ನಡವನ್ನು ಕಲಿತುದರಿಂದ ಅವನ ಬರವಣಿಗೆಯಲ್ಲಿ ಹೆಚ್ಚಾಗಿ ಉತ್ತರ ಕರ್ನಾಟಕದ ಶೈಲಿಯ ಪ್ರಭಾವವಿರುವುದನ್ನು ನಾವು ಕಾಣಬಹುದು.

ಬಳಿಕ ಕಿಟ್ಟೆಲ್‌ನು ನೀಲಗಿರಿಯಲ್ಲಿ ಎರಡು ವರ್ಷಗಳ ಕಾಲ ಮತ ಪ್ರಚಾರ ಕಾರ್ಯದಲ್ಲಿ ಸೇವೆ ಸಲ್ಲಿಸಿದನು. ಅಲ್ಲಿಂದ ಮುಂದೆ ಮಂಗಳೂರೇ ಅವನಿಗೆ ಮುಖ್ಯವಾದ ಕಾರ್ಯಾಲಯವಾಯಿತು. ೧೮೬೦ರಲ್ಲಿ ಕಿಟ್ಟೆಲ್ ಪಾಲಿನ್ ಐಥ್ ಎಂಬಾಕೆಯನ್ನು ವಿವಾಹವಾದನು. ಅಲ್ಲಿ ೧೮೬೬ರ ವರೆಗೆ ದೈವಜ್ಞಾನವನ್ನು ಬೋಧಿಸುವ ಶಾಲೆಯಲ್ಲಿ ಶಿಕ್ಷಕನಾಗಿ ಉತ್ತಮ ಕಾರ್ಯವನ್ನು ನಿರ್ವಹಿಸಿದನು. ಅತ್ಯುತ್ತಮ ಉಪಾಧ್ಯಾಯನೆಂಬ ಕೀರ್ತಿ ಅವನದಾಯಿತು.

ಈ ಕಾಲದಲ್ಲಿಯೇ ಕಿಟ್ಟೆಲ್ ಕನ್ನಡ ಭಾಷಾ ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದು ಮತ್ತು ಪಾಂಡಿತ್ಯವನ್ನು ಸಂಪಾದನೆ ಮಾಡಿದ್ದು. ದಾಂಪತ್ಯ ಜೀವನದಲ್ಲಿ ಸುಖವನ್ನು ಕಾಣಲು ಮೊದಲು ಮಾಡಿದ್ದ ಕಿಟ್ಟೆಲ್‌ನಿಗೆ ಆಘಾತ ಕಾದಿತ್ತು. ಅವನ ಪತ್ನಿ ಐಥಳು ಎರಡು ಮಕ್ಕಳನ್ನು ಹೆತ್ತಿದ್ದಳು. ಅವಳ ಆರೋಗ್ಯ ಕೆಟ್ಟು ಅಲ್ಪಕಾಲದ ತರುವಾಯ ಅವಳು ತೀರಿಕೊಂಡಳು. ಕಿಟ್ಟೆಲ್‌ನಿಗೂ ಆರೋಗ್ಯ ಕೆಡಲು ಮೊದಲಾಯಿತು. ಆದುದರಿಂದ ಜರ್ಮನಿಗೆ ಹಿಂದಿರುಗಿ ತನ್ನ ಆರೋಗ್ಯವನ್ನು ಸುಧಾರಿಸಿಕೊಂಡನು. ಬಳಿಕ ಮೊದಲ ಹೆಂಡತಿಯ ತಂಗಿ ಜ್ಯೂಲಿಯನ್ನು ಮದುವೆಯಾಗಿ ಕನ್ನಡ ನಾಡಿಗೆ ೧೮೬೭ರಲ್ಲಿ ಹಿಂದಿರುಗಿ ತನ್ನ ಭಾಷಾ ಸಾಹಿತ್ಯ ಕಾರ್ಯವನ್ನು ಮುಂದುವರಿಸಿದನು. ಈಗ ಅವನ ವಾಸಸ್ಥಳ ಹೆಚ್ಚಾಗಿ ಮಡಿಕೇರಿಯಾಯಿತು. ಅಲ್ಲಿಯ ಹವಾಗುಣವು ಆತನಿಗೆ ಅನುಕೂಲವಾಗಿತ್ತು.

ಕನ್ನಡ ದೇಶದಲ್ಲಿ ನಿಂತು ಕಿಟ್ಟೆಲ್‌ನು ಮಾಡಿದ ಭಾಷಾ ಸಾಹಿತ್ಯ ಕಾರ್ಯಗಳನ್ನು ಸ್ವಲ್ಪ ವಿವರವಾಗಿ ನಾವು ಪರಿಚಯ ಮಾಡಿಕೊಂಡರೆ ಕನ್ನಡಕ್ಕೆ ಆತನಿಂದ ಸಂದ ಗುರುತರವಾದ ಸೇವೆಯ ಮಹತ್ತು ಗೊತ್ತಾಗುತ್ತದೆ.

ಮಡಿಕೇರಿಯಲ್ಲಿ ನಿಂತ ಮೇಲೆ ಕಿಟ್ಟೆಲ್ ಮತಪ್ರಚಾರದಲ್ಲಿ ತೊಡಗಿ ಕೊಡಗಿನವರ ಮನೆಗಳಲ್ಲಿಯೂ ಅಂಗಡಿ ಬೀದಿಗಳಲ್ಲಿಯೂ ಬೈಬಲ್ ಗ್ರಂಥದಲ್ಲಿರುವ ಬೋಧನೆಗಳ ಪ್ರವಚನ ಮಾಡಿದ್ದಲ್ಲದೆ ಸದಾ ಸಾಹಿತ್ಯ ಕಾರ್ಯದಲ್ಲಿ ನಿರತನಾಗಿದ್ದನು. ಮೊದಮೊದಲು ಆತನು ರಚನೆ ಮಾಡಿದವು ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಕೃತಿಗಳು.

ಕಥಾಮಾಲೆಯೆಂಬ ಮೊದಲ ಗ್ರಂಥದಲ್ಲಿ ಕಿಟ್ಟೆಲ್‌ನು ಕ್ರಿಸ್ತನನ್ನು ಕುರಿತ ಹಾಡುಗಳನ್ನು ಕನ್ನಡ ಛಂದಸ್ಸಿನಲ್ಲಿ ರಚಿಸಿದ್ದಾನೆ. ಕ್ರಿಸ್ತನ ಜೀವನ ಚಿತ್ರಣವೂ ಇರುವ ಈ ಹಾಡುಗಳು

೧೮೬೨ರಲ್ಲಿ ರಚಿತವಾದವು. 'ಪರಮಾತ್ಮ ಜ್ಞಾನ' (೧೮೬೨) ವೆಂಬ ಗ್ರಂಥವು ದೇವರ ಕಲ್ಪನೆಯನ್ನು ಪರಿಶೀಲಿಸುವ ಕೃತಿ. ಯೇಸು ಕ್ರಿಸ್ತನ 'ಶ್ರಮೇ ಚರಿತ್ರೆ' ಎಂಬುದು ಕ್ರಿಸ್ತನ ಜೀವನ ವಿವರಗಳಿಂದ ಕೂಡಿದೆ. ಕ್ರೈಸ್ತ ಮತದ ಚರ್ಚುಗಳು ಬೆಳೆದು ಬಂದ ಚಾರಿತ್ರಿಕ ವಿಷಯಗಳಿಂದ ಕೂಡಿರುವ 'ಕ್ರೈಸ್ತ ಸಭಾ ಚರಿತ್ರೆ' (೧೮೬೮) ಒಂದು ಉತ್ತಮ ಗ್ರಂಥ. ೧೮೭೨ರಲ್ಲಿ ಆತನು ಯಜ್ಞಯಾಗಗಳ ಬಗ್ಗೆ ಚಾರಿತ್ರಿಕ ಚಿಂತನೆಯುಳ್ಳ 'Tract on Sacrifice' ಎಂಬ ಗ್ರಂಥವನ್ನು ಬರೆದನು.

ಇದೇ ಸಮಯದಲ್ಲಿ ಮದ್ರಾಸು ಸರಕಾರದವರು ಕನ್ನಡ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕಿಟ್ಟೆಲ್‌ನಿಗೆ ವಹಿಸಿಕೊಟ್ಟರು. ಪಂಚತಂತ್ರದ ಕಥೆಗಳು, ಈಸೋಪನ ಕಥೆಗಳು ಇವುಗಳ ಸಂಬಂಧವನ್ನು ಕುರಿತ ಮುನ್ನುಡಿಯಿಂದ ಕೂಡಿರುವ ಈ ಪಠ್ಯ ಪುಸ್ತಕಗಳು ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ತುಂಬ ಸಹಾಯಕವಾಗಿದ್ದವು.

ಕನ್ನಡ ಸಾಹಿತ್ಯವನ್ನು ಕಿಟ್ಟೆಲ್ ಉದ್ದಕ್ಕೂ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದನು ಎನ್ನುವುದಕ್ಕೆ ಆತನು ಸಿದ್ಧಪಡಿಸಿರುವ 'ಕರ್ನಾಟಕ ಕಾವ್ಯ ಮಾಲೆ' ದೃಷ್ಟಾಂತವಾಗಿದೆ. 'ಸಣ್ಣ ಕರ್ನಾಟಕ ಕಾವ್ಯಮಾಲೆ' ಎಂದು ಪ್ರಕಟವಾದುದು ಮತ್ತೆ ವಿಸ್ತಾರಗೊಂಡು ೧೮೭೪ರಲ್ಲಿ 'ಕರ್ನಾಟಕ ಕಾವ್ಯ ಮಾಲೆ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಇದಕ್ಕೆ ಇಂಗ್ಲಿಷಿನಲ್ಲಿ 'Canarese Poetical Anthology' ಎಂಬ ಶೀರೋನಾಮೆಯೂ ಇದೆ. ಇದರಲ್ಲಿ ಅನುಭವಾಮೃತ, ಸರ್ವಜ್ಞ ವಚನಗಳು, ರಾಜಶೇಖರ ವಿಳಾಸ, ಜೈಮಿನಿ ಭಾರತ, ದಾಸರ ಪದಗಳು, ಕುಮಾರವ್ಯಾಸ ಭಾರತ, ಸೋಮೇಶ್ವರ ಶತಕ ಮುಂತಾದ ಗ್ರಂಥಗಳಿಂದ ಕಾವ್ಯ ಭಾಗಗಳನ್ನು ಸೇರಿಸಲಾಗಿದೆ. ಸೋಮೇಶ್ವರ ಶತಕದಲ್ಲಿ ಬರುವ 'ಹರಹರಾ ಶ್ರೀ ಚೆನ್ನ ಸೋಮೇಶ್ವರಾ' ಎಂಬುದನ್ನು ತೆಗೆದು ಹಾಕಿ ಆ ಸ್ಥಳದಲ್ಲಿ ಕಿಟ್ಟೆಲ್‌ನು ತಾನೇ ರಚಿಸಿದ 'ನರನೆಲಾ ಕೇಳ್ದೋಪುದೀ ಬುದ್ಧಿಯಾ' ಎಂಬ ಭಾಗವನ್ನು ಸೇರಿಸಿದ್ದಾನೆ. ತಾನೇ ಸೇರಿಸಿರುವ ಭಾಗವಿದೆಂಬುದನ್ನು ತಿಳಿಸುವುದಕ್ಕಾಗಿ ಆ ಭಾಗವನ್ನು ಚಿಕ್ಕ ಅಕ್ಷರಗಳಲ್ಲಿ ಮುದ್ರಿಸಿದ್ದಾನೆ.

ಈ ಗ್ರಂಥದ ಕೊನೆಯಲ್ಲಿ ಸುಮಾರು ನೂರ ಇಪ್ಪತ್ತೈದು ಪುಟಗಳಲ್ಲಿ ಸುಮಾರು ೭೦೦೦ ಶಬ್ದಗಳ ನಿಘಂಟನ್ನು ಕೂಡ ಸೇರಿಸಿದ್ದಾನೆ.

'ಹಿಂದೂ ದೇಶದ ಚರಿತ್ರೆ' ಎಂಬ ಹೆಸರಿನಲ್ಲಿ ಮಾರಿಸ್ ಎಂಬ ವಿದ್ವಾಂಸನು ಇಂಗ್ಲಿಷಿನಲ್ಲಿ ರಚಿಸಿದ್ದ ಚರಿತ್ರೆಯ ಪುಸ್ತಕವನ್ನು ಕಿಟ್ಟೆಲ್ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಇದು ಬಹುಕಾಲ ಶಾಲೆಗಳಲ್ಲಿ ಪಠ್ಯ ಪುಸ್ತಕವಾಗಿ ಪ್ರಚಾರದಲ್ಲಿತ್ತು.

ಗ್ರಂಥ ಸಂಪಾದನೆ ಎಂದರೆ ಪ್ರಾಚೀನ ಗ್ರಂಥಗಳನ್ನು ಅನೇಕ ಹಸ್ತಪ್ರತಿಗಳ ಜೊತೆಯಲ್ಲಿ ಅಭ್ಯಾಸ ಮಾಡಿ ಕವಿಯು ರಚಿಸಿದ ಮೂಲ ಕೃತಿ ಹೇಗಿತ್ತು ಎಂದು ನಿರ್ಧಾರ ಮಾಡುವುದು. ಇದೊಂದು ಕಠಿಣಕರವಾದ ಶಾಸ್ತ್ರಾಭ್ಯಾಸ. ಕಿಟ್ಟೆಲ್ ಈ ಕಾರ್ಯದಲ್ಲಿಯೂ ಯಶಸ್ಸನ್ನು ಸಾಧಿಸಿದ್ದಾನೆ. ಕಿಟ್ಟೆಲ್ ಸಂಪಾದಿಸಿರುವ ಗ್ರಂಥಗಳು ಎರಡು. ೧. ಕೇಶಿರಾಜನ 'ಶಬ್ದ ಮಣಿ

ದರ್ಪಣಂ', ೨. ನಾಗವರ್ಮನ 'ಛಂದೋಂಬುಧಿ'. ಎರಡೂ ಬಹು ಪ್ರಧಾನವಾದ ಕನ್ನಡ ಶಾಸ್ತ್ರಗ್ರಂಥಗಳು. ಒಂದು ವ್ಯಾಕರಣ ಗ್ರಂಥ. ಮತ್ತೊಂದು ಛಂದೋಗ್ರಂಥ.

'ಶಬ್ದಮಣಿ ದರ್ಪಣಂ' : ಇದು ಕನ್ನಡದ ಅತ್ಯಂತ ಪ್ರಮುಖವಾದ ವ್ಯಾಕರಣ ಗ್ರಂಥ. ಇದರ ಕರ್ತೃವಾದ ಕೇಶಿರಾಜನು ಕನ್ನಡದ ಮೊದಲ ಭಾಷಾ ವಿಜ್ಞಾನಿ ಎಂದು ಹೇಳಬಹುದಾದಷ್ಟು ಸ್ವತಂತ್ರ ಶಾಸ್ತ್ರ ಜ್ಞಾನವುಳ್ಳವನಾಗಿದ್ದನು. ಈ ಗ್ರಂಥವನ್ನು ೧೮೬೮ರಲ್ಲಿ ರೆವರೆಂಡ್ ಜೆ. ಗ್ಯಾರೆಟ್ ಎಂಬವನು ಸಂಪಾದಿಸಿ ಪ್ರಕಟಿಸಿದ್ದನು. ಆದರೆ ಅದು ಸಮರ್ಪಕವಾಗಿರಲಿಲ್ಲವೆಂಬುದು ಕಿಟ್ಟೆಲ್‌ನಿಗೆ ಗೊತ್ತಾಯಿತು. ಆದುದರಿಂದ ಕಿಟ್ಟೆಲ್‌ನು ಒಂಬತ್ತು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅದಕ್ಕೆ ನಿಷ್ಠೂರು ನಂಜಯ್ಯನೆಂಬವನು ರಚಿಸಿದ್ದ ಟೀಕೆಯನ್ನು ಅಳವಡಿಸಿ ಹೊಸದಾಗಿ ಪ್ರಕಟಿಸಿದನು. ಇದರಲ್ಲಿ ಸುಮಾರು ಮೂವತ್ತು ಪುಟಗಳ ಪ್ರಸ್ತಾವನೆಯಿದೆ. ಇದರಲ್ಲಿ ಕೇಶಿರಾಜನ ಕಾಲದ ಬಗ್ಗೆ ವಿವರಣೆಯಿದೆ. ಗ್ರಂಥದ ಕೊನೆಯಲ್ಲಿ ಪ್ರಯೋಗ ಸಾರವೆಂಬ ಒಂದು ಹೊಸ ಅಧ್ಯಾಯವಿದೆ. ಅನೇಕ ಹಸ್ತಪ್ರತಿಗಳಲ್ಲಿರುವ ಪಾಠಾಂತರಗಳನ್ನು ಗುರುತಿಸಲಾಗಿದೆ. ಪ್ರತಿ ಸೂತ್ರದ ಎಡಗಡೆಯ ಭಾಗದಲ್ಲಿ ಇಂಗ್ಲಿಷಿನಲ್ಲಿ ಅದರ ಅರ್ಥವನ್ನು ಕೊಡಲಾಗಿದೆ. ಇದು ಪ್ರಕಟವಾದುದು ೧೮೭೨ರಲ್ಲಿ. ಇದು ಮತ್ತೆ ಎರಡನೆಯ ಸಲ ೧೮೯೯ರಲ್ಲಿಯೂ ಮೂರನೆಯ ಸಲ ೧೯೨೦ರಲ್ಲಿಯೂ ಮುದ್ರಣವನ್ನು ಕಂಡಿದೆ. ಈಗ ಇದರ ಪ್ರತಿಗಳು ಸಿಗುತ್ತಿಲ್ಲ. ಆಧುನಿಕ ವಿದ್ವಾಂಸರು ಸಂಪಾದಿಸಿರುವ ಕೃತಿಗಳು ಈಗ ಹೆಚ್ಚು ಪ್ರಚಾರದಲ್ಲಿವೆ.

'ಛಂದೋಂಬುಧಿ' : ಕನ್ನಡದಲ್ಲಿ ಛಂದೋ ವಿಚಾರವನ್ನೇ ಮುಖ್ಯವಾಗಿ ಪ್ರತಿಪಾದಿಸುವ ಪ್ರಾಚೀನ ಗ್ರಂಥ ನಾಗವರ್ಮನಿಂದ ರಚಿತವಾದ 'ಛಂದೋಂಬುಧಿ'. ಇದಕ್ಕಿಂತ ಹಿಂದಿನ ಪ್ರಸಿದ್ಧವಾದ ಛಂದೋಗ್ರಂಥವು ಯಾವುದೂ ಇಲ್ಲ. ಕಿಟ್ಟೆಲ್ ಅತಿ ಪ್ರಾಚೀನವಾದ ಕೇಶಿರಾಜನ ವ್ಯಾಕರಣ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವಂತೆಯೇ ಅತಿ ಪ್ರಾಚೀನವಾದ ಛಂದೋಗ್ರಂಥವನ್ನೂ ಸಂಪಾದಿಸಿದ್ದಾನೆ. ಇದನ್ನು ಸಂಪಾದಿಸುವುದಕ್ಕೆ ಸುಮಾರು ಹನ್ನೊಂದು ಹಸ್ತಪ್ರತಿಗಳನ್ನು ಸಹಾಯಕ್ಕೆ ತೆಗೆದುಕೊಂಡಿದ್ದಾನೆ. ಸಂಪೂರ್ಣವಾಗಿರದ ಅನೇಕ ಹಸ್ತಪ್ರತಿಗಳ ಸಹಾಯದಿಂದ ಸಿದ್ಧಪಡಿಸಿದ ಈ ಗ್ರಂಥವೇ ಬಹುಕಾಲದ ತನಕ ಕನ್ನಡಿಗರಿಗೆ ಛಂದಸ್ಸಿನ ತಿಳಿವಳಿಕೆಗೆ ಮೂಲ ಗ್ರಂಥವಾಗಿತ್ತು. ಈಚೆಗೆ ಬೇರೆ ಬೇರೆ ಮುದ್ರಣಗಳು ಬಂದಿವೆ.

ನಮಗಿಲ್ಲಿ ಮುಖ್ಯವಾದ ವಿಚಾರ ಯಾವುದೆಂದರೆ, ಕಿಟ್ಟೆಲ್ ಎಂಥ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಿದ್ದನೆಂಬುದು. ಈ ಗ್ರಂಥದ ಪ್ರಾರಂಭದಲ್ಲಿ 'An Essay on Canarese Literature' ಎಂಬ ೫೫ ಪುಟಗಳ ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿದ್ದಾನೆ. ಅನೇಕ ದೃಷ್ಟಿಗಳಿಂದ ಇದೇ ಕನ್ನಡ ಸಾಹಿತ್ಯ ಚರಿತ್ರೆಯ ಗ್ರಂಥಗಳಲ್ಲಿ ಮೊದಲ ಅರ್ಹ ಪ್ರಯತ್ನವಾಗುತ್ತದೆ. ಈ ಗ್ರಂಥದಲ್ಲಿಯೂ ಕೊನೆಯಲ್ಲಿ ಛಂದಶ್ಶಾಸ್ತ್ರದಲ್ಲಿ ಬರುವ ಹೆಸರುಗಳ, ಶಬ್ದಗಳ ಒಂದು ಅನುಬಂಧವನ್ನು ಸೇರಿಸಿ ಅವುಗಳ ಅರ್ಥ ವಿವರಣೆಯನ್ನೂ ನೀಡಿದ್ದಾನೆ. ಹೀಗೆ ಯಾವ ಕೆಲಸ ಮಾಡಿದರೂ ನಿಘಂಟಿನ ರಚನೆಯ ದೃಷ್ಟಿ ಕಿಟ್ಟೆಲ್‌ನಿಗೆ ಮುಖ್ಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಕಿಟ್ಟೆಲ್‌ನ ನಿಘಂಟು

ಕಿಟ್ಟೆಲ್‌ನ ಸಾಹಿತ್ಯ ಕಾರ್ಯವನ್ನೂ ಭಾಷಾ ವಿಷಯದಲ್ಲಿ ಇದ್ದ ವಿದ್ವತ್ತೆಯನ್ನೂ ಕಂಡ ಮೋಗ್ಲಿಂಗ್ ಮತ್ತು ಬರ್ನೆಲ್ ಎ.ಸಿ. ಮುಂತಾದವರು ಕನ್ನಡ ನಿಘಂಟು ರಚನೆಯ ಕಾರ್ಯವನ್ನು ಅವನಿಗೆ ಒಪ್ಪಿಸಿದರು. ಈ ನಿರ್ಧಾರವಾದುದು ೧೮೭೨ರ ವೇಳೆಗೆ. ಇದಕ್ಕೆ ಎಂಟು ವರ್ಷಗಳ ಹಿಂದೆಯೇ 'ಕರ್ನಾಟಕ ಕಾವ್ಯಮಾಲೆ'ಯಲ್ಲಿಯೂ ಅವನು ಸ್ವಲ್ಪ ನಿಘಂಟಿನ ಕಾರ್ಯವನ್ನು ಕೈಗೊಂಡಿದ್ದನು. ಈಗಂತೂ ಅದೇ ಮುಖ್ಯವಾದ ಕೆಲಸವಾಯಿತು.

ನಿಘಂಟು ಕಾರ್ಯವನ್ನು ಕಿಟ್ಟೆಲ್‌ನು ಕೈಗೊಂಡ ಮೇಲೆ ಪ್ರಾಚೀನ ಕನ್ನಡ ನಿಘಂಟುಗಳನ್ನು ಪರಿಶೀಲಿಸಬೇಕಾಯಿತು. 'ಅಭಿಧಾನ ರತ್ನಮಾಲಾ' ಮುಂತಾದ ಸಂಸ್ಕೃತ-ಕನ್ನಡ ನಿಘಂಟುಗಳನ್ನೂ 'ನಾನಾರ್ಥ ರತ್ನಾಕರ' ಮುಂತಾದ ನಾನಾರ್ಥ ನಿಘಂಟುಗಳನ್ನೂ ಅನೇಕ ವೈದ್ಯ ನಿಘಂಟುಗಳನ್ನೂ ಆಗ ಲಭ್ಯವಿದ್ದ ಕನ್ನಡದ ಎಲ್ಲ ನಿಘಂಟುಗಳನ್ನೂ ಆತನು ಪರಿಶೀಲಿಸಿದನು. ಮೈಸೂರು ಅರಮನೆಯಲ್ಲಿ ಸಿಕ್ಕಿದ ಮಂಗರಾಜನ **'ಅಭಿನವಾಭಿಧಾನ'**ವೆಂಬ ನಿಘಂಟನ್ನು ಸಂಪೂರ್ಣವಾಗಿ ತಾನೆ ಬರೆದುಕೊಂಡನಂತೆ. ಇವುಗಳ ಜೊತೆಗೆ ರೆವರೆಂಡ್ ರೀವನ ನಿಘಂಟನ್ನೂ ರೆವರೆಂಡ್ ಎಫ್. ಜೀಗ್ಲರನ ಇಂಗ್ಲಿಷ್-ಕನ್ನಡ ನಿಘಂಟನ್ನೂ ಪರಿಶೀಲಿಸಿದನು. ಡಾ। ಕಾಲ್ಡವೆಲ್ಲನ ೧೮೫೬ರಲ್ಲಿ ಪ್ರಕಟವಾದ 'A Comparative Grammar of Dravidian or South Indian Family of Languages' ಎಂಬ ಭಾಷಾಶಾಸ್ತ್ರದ ಗ್ರಂಥವನ್ನೂ ಡಾ। ಗುಂಡರ್ಟ್ ಎಂಬ ಮಲಯಾಳಂ ವಿದ್ವಾಂಸನು ನಡೆಸಿದ್ದ 'Dravidian Element in Sanskrit' ಎಂಬ ಸಂಶೋಧನಾ ವಿಷಯವನ್ನೂ ಆಳವಾಗಿ ಅಭ್ಯಾಸ ಮಾಡಿ ತನ್ನ ತಿಳಿವಿನ ಹರಹನ್ನು ಹೆಚ್ಚಿಸಿಕೊಂಡನು. ಧಾರವಾಡ, ಮೈಸೂರು ಎಂಬ ಬೇರೆ ಬೇರೆ ಕಡೆಗಳಲ್ಲಿ ಜನರು ಆಡುತ್ತಿದ್ದ ಭಾಷೆಯ ಬಗೆಗಳನ್ನು ಅಭ್ಯಾಸ ಮಾಡಬೇಕಾಯಿತು. ಹಾಗೆಯೇ ಮೋನಿಯರ್ ವಿಲಿಯಂಸ್‌ನ ಸಂಸ್ಕೃತ-ಇಂಗ್ಲಿಷ್ ನಿಘಂಟು, ಏ.ಡಿ. ಕ್ಯಾಂಬೆಲ್‌ನ ತೆಲುಗು-ಇಂಗ್ಲಿಷ್ ನಿಘಂಟು, ರೆವರೆಂಡ್ ಮ್ಯಾನರ್‌ನ ತುಳು-ಇಂಗ್ಲಿಷ್ ನಿಘಂಟು ಮುಂತಾದವುಗಳನ್ನು ಅಭ್ಯಾಸ ಮಾಡಿದನು. ಕಿಟ್ಟೆಲ್‌ನು ಡಾ। ಗುಂಡರ್ಟ್‌ನ ಮಲಯಾಳಂ-ಇಂಗ್ಲಿಷ್ ನಿಘಂಟನ್ನು ನೋಡಿರಬೇಕು. ಇಬ್ಬರೂ ಸಮಕಾಲೀನರು. ಇಬ್ಬರೂ ಭಾರತದ ಪಶ್ಚಿಮ ಕರಾವಳಿಯಲ್ಲಿಯೇ ಕೆಲಸ ಮಾಡಿದವರು. ಹೀಗಿದ್ದೂ ಕಿಟ್ಟೆಲ್‌ನು ನಿಘಂಟುಗಳ ಪಟ್ಟಿಯನ್ನು ಮಾಡುವಾಗ ಗುಂಡರ್ಟ್‌ನ ನಿಘಂಟನ್ನು ಏಕೆ ಸೇರಿಸಿಲ್ಲವೆಂಬುದು ಆಶ್ಚರ್ಯವಾಗಿ ಕಾಣುತ್ತದೆ. ಇಬ್ಬರ ಗ್ರಂಥಗಳೂ ಬಾಸೆಲ್ ಮಿಷನ್ ಮೂಲಕ ಪ್ರಕಟವಾದುದರಿಂದ ಬಿಟ್ಟಿರಬಹುದು ಎಂದು ಊಹಿಸಬೇಕಾಗಿದೆ ಅಷ್ಟೆ.

ನಿಘಂಟು ಕಾರ್ಯ ಒಬ್ಬರೇ ಕುಳಿತು ಮಾಡುವುದಕ್ಕಾಗುವಂಥ ಕೆಲಸವಲ್ಲ. ಸಂಸ್ಕೃತ ಶಬ್ದಗಳು, ಜ್ಞಾತಿಭಾಷೆಯ ಶಬ್ದಗಳು, ಶಬ್ದಕೋಶಗಳಿಂದ ಆರಿಸಿದ ಶಬ್ದಗಳು ಇವುಗಳನ್ನು ಬರೆಯಲು ಒಂದೊಂದು ವಿಷಯಕ್ಕೂ ಇಬ್ಬಿಬ್ಬರು ಪಂಡಿತರನ್ನು ಕಿಟ್ಟೆಲ್ ಆರಿಸಿಕೊಂಡನು. ಕೃಷಿಕ, ವ್ಯಾಪಾರಸ್ಥ, ಬಡಗಿ, ಅಗಸ, ಸಿಂಪಿಗ, ಅಕ್ಕಸಾಲೆ ಮುಂತಾದ ವೃತ್ತಿಗಳನ್ನು ಅನುಸರಿಸುವ ಜನರಿಂದ ಶಬ್ದಗಳನ್ನು ಆರಿಸಲು ಕೆಲವರ ಸಹಾಯವನ್ನು ಪಡೆದನು. ಆರೋಗ್ಯ, ಜೀವನಕ್ರಮ,

ಪಾತ್ರೆ ಪರಡಿ, ಅಂಕಿ ಅಂಶ ಇತ್ಯಾದಿ ನೂರಾರು ಶಬ್ದಗಳನ್ನು ಕಲೆ ಹಾಕಿದನು. ಸಂತೆ ನಡೆಯುವ ಕಡೆಗೆ ತಾನೇ ಹೋಗಿ ಹಳ್ಳಿಗರ ಸಂಭಾಷಣೆಗಳಿಂದ ಶಬ್ದ ಸಂಗ್ರಹ ಮಾಡಿದನು. ಎಫ್. ಜೀಗ್ಲರ್, ಎಚ್. ಮೋಗ್ಲಿಂಗ್, ಎ.ಸಿ. ಬರ್ನೆಲ್, ಬಿ.ಎಲ್. ರೈಸ್ ಮುಂತಾದವರ ಕಡೆಯಿಂದಲೂ ಅನೇಕ ವಿಧವಾದ ಸಹಾಯವನ್ನು ಪಡೆದನು.

ಒಂದು ಶಬ್ದ ಅದರ ಲಿಪ್ಯಂತರ, ಮುಖ್ಯವಾದ ಅರ್ಥ ಇತರ ಅರ್ಥಗಳು, ಜ್ಞಾತಿ ಶಬ್ದಗಳು, ಇತರ ಭಾಷೆಗಳಿಂದ ಬಂದ ಶಬ್ದಗಳ ಮೂಲ ಸ್ವರೂಪ, ಪ್ರಯೋಗಗಳು, ಪ್ರಾಚೀನ ಮತ್ತು ಆಧುನಿಕ-ಗಾದೆಗಳು, ನುಡಿಗಟ್ಟುಗಳು, ಪ್ರಾದೇಶಿಕತೆಯ ಗುರುತು ಮುಂತಾಗಿ ಎಲ್ಲವನ್ನೂ ಒಂದು ಕ್ರಮಕ್ಕೆ ಒಳಪಡಿಸಿ ಪೂರ್ಣವಾಗಿ ನಿಘಂಟಿನ ಹಸ್ತಪ್ರತಿಯನ್ನು ಸಿದ್ಧಮಾಡಿದನು. ೧೮೭೭ ರಿಂದ ೧೮೮೩ರವರೆಗೆ ಅವನ ಸ್ವಂತ ಆರೋಗ್ಯದ ಸುಧಾರಣೆಗಾಗಿ ಕಿಟ್ಟೆಲ್ ಜರ್ಮನಿಗೆ ಹಿಂದಿರುಗಿದನು. ಅಲ್ಲಿಯೇ ನಿಘಂಟಿನ ಪರಿಶೋಧಿತ ಪ್ರತಿಯನ್ನು ಸಿದ್ಧಮಾಡಿ ಮತ್ತೆ ೧೮೮೩ರಲ್ಲಿ ಧಾರವಾಡಕ್ಕೆ ಬಂದು ಕನ್ನಡ ವಿದ್ವಾಂಸರ ಸಹಾಯದಿಂದ ತನ್ನ ನಿಘಂಟನ್ನು ಪರಿಷ್ಕರಣ ಮಾಡಿದನು. ೧೮೯೨-೯೩ರ ವೇಳೆಗೆ ಮುದ್ರಣ ಪ್ರತಿ ಸಿದ್ಧವಾಗಿ ಬಂತು. ಕಿಟ್ಟೆಲ್ ಅನಾರೋಗ್ಯದಿಂದ ಜರ್ಮನಿಗೆ ಹಿಂದಿರುಗಿದನು. ೧೮೯೪ರಲ್ಲಿ ನಿಘಂಟು ಮುದ್ರಣವನ್ನು ಕಂಡಿತು.

ಮುದ್ರಣವಾದ ಮೇಲೆ ಈ ನಿಘಂಟಿಗೆ ಎಲ್ಲ ಕಡೆಯಿಂದಲೂ ಹೊಗಳಿಕೆಯ ಸುರಿಮಳೆ ಸುರಿಯಿತು. ಕಿಟ್ಟೆಲ್‌ನಿಗೆ ದೃಷ್ಟಿಪಾಟವ ದುರ್ಬಲವಾಗುತ್ತ ಬಂತು. ಆದರೂ ಅವನು ತನ್ನ ಸಾಹಿತ್ಯ ಕಾರ್ಯವನ್ನು ಬಿಡಲಿಲ್ಲ. ೧೮೯೬ರಲ್ಲಿ ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯವು ಅವನಿಗೆ ಡಾಕ್ಟೊರೇಟ್ ಪದವಿಯನ್ನು ಕೊಟ್ಟು ಸನ್ಮಾನಿಸಿತು.

ಲೂಯಿ ರೈಸ್ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ಈ ನಿಘಂಟನ್ನು ಕುರಿತು ದೀರ್ಘವಾದ ವಿಮರ್ಶೆಯನ್ನು ಬರೆದು ಕಿಟ್ಟೆಲ್‌ನ ಕಾರ್ಯವನ್ನು ಪ್ರಶಂಸಿಸಿದನು. "On the whole nothing but praise is due for the laborious and conscientious manner in which the work has been compiled. The printing and get up well sustain the reputation of the Basel Mission Press at Mangalore." ಇಷ್ಟು ಹೇಳಿದ್ದಲ್ಲದೆ ಕಿಟ್ಟೆಲ್‌ನಿಗೆ ಈಗ ಕನ್ನಡದ ವ್ಯಾಕರಣದ ಬಗ್ಗೆ ಉತ್ತಮ ಗ್ರಂಥವನ್ನು ಬರೆಯುವುದಕ್ಕೆ ಇದೇ ಸರಿಯಾದ ಕಾಲ ಎಂದೂ ಸೂಚಿಸಿದನಂತೆ ! ಇತರ ವಿದ್ವಾಂಸರೂ ಈ ಮಾತಿಗೆ ಬೆಂಬಲವಿತ್ತರು.

ನಿಘಂಟು ರಚನೆಯಂತೆಯೇ ವ್ಯಾಕರಣ ನಿರ್ಮಾಣವೂ ಕಿಟ್ಟೆಲ್‌ನಿಗೆ ಆಸಕ್ತಿಯ ವಿಷಯವೇ ಆಗಿತ್ತು. ೧೮೬೬ರಲ್ಲಿಯೇ ಆತನು, 'ಹಳಗನ್ನಡ ವ್ಯಾಕರಣ ಸೂತ್ರಗಳು' ಎಂಬ ಗ್ರಂಥವನ್ನು ರಚಿಸಿದ್ದನು. ಅಲ್ಲದೆ 'ಶಬ್ದಮಣಿ ದರ್ಪಣಂ'ದ ಸಂಪಾದಿತ ಪ್ರತಿಯನ್ನು ಮುದ್ರಣ ಮಾಡಿದ್ದನು. ಆದರೂ ದೃಷ್ಟಿಯು ದುರ್ಬಲವಾಗಿದ್ದಾಗ ಇಂಥ ಸೂಕ್ಷ್ಮ ಕಾರ್ಯವನ್ನು ಕೈಗೊಳ್ಳುವುದು ಅಸಾಧಾರಣವಾದ ಸ್ಥೈರ್ಯವುಳ್ಳವರಿಗೆ ಮಾತ್ರ ಸಾಧ್ಯ. ೧೮೯೪ರಲ್ಲಿ ತನ್ನ

ನಿಘಂಟಿನ ಮುದ್ರಣ ಪ್ರತಿಯನ್ನು ಕಂಡ ಮೇಲೆ ವ್ಯಾಕರಣದ ರಚನೆಗೆ ಆತನು ಮನಸ್ಸು ಮಾಡಿರಬೇಕು. ಹೀಗಿದ್ದು ತನ್ನ ಹಿಂದಿನ ಎಲ್ಲ ಟಿಪ್ಪಣಿಗಳನ್ನು ಕಲೆ ಹಾಕಿ ಮತ್ತೆ ಅವುಗಳನ್ನು ಪುನರವಲೋಕಿಸಬೇಕಾಗಿತ್ತು. ಆ ಕೆಲಸವನ್ನು ಆತನು ಸಾವಧಾನವಾಗಿಯೇ ಮಾಡಿದನು.

ಈ ಹಿಂದೆ ಕನ್ನಡದ ವ್ಯಾಕರಣದ ಬಗ್ಗೆ ಇಂಗ್ಲಿಷಿನಲ್ಲಿ ಗ್ರಂಥವಿರಲಿಲ್ಲವೆಂದಲ್ಲ. ಅವನೇ ರೆವರೆಂಡ್ ಥಾಮಸ್ ಹಡ್ಸನ್ನನ 'An Elementary Grammar of the Kannada Language' (I Edition 1859, II Edition 1864) ಎಂಬ ಗ್ರಂಥವನ್ನೂ ರೆವರೆಂಡ್ ಜೀಗ್ಲರನ 'A practical key to the Canarese Language' ಎಂಬುದನ್ನೂ ಉಪಯೋಗಿಸಿರುವುದಾಗಿ ಹೇಳಿದ್ದಾನೆ. ಅಲ್ಲದೆ ವಿಲಿಯಂ ಕೇರಿ, ಜಾನ್‌ಮೆಕೆರಲ್ ಮುಂತಾದವರ ಗ್ರಂಥಗಳನ್ನೂ ಅವನು ನೋಡಿರಬೇಕು.

ಈ ಎಲ್ಲ ಸಿದ್ಧತೆಗಳಿಂದಲೇ ಅವನು 'A Grammar of the Kannada Language' ಎಂಬ ಅತ್ಯುತ್ತಮವಾದ ಕನ್ನಡ ವ್ಯಾಕರಣವನ್ನು ಬರೆಯುವುದು ಸಾಧ್ಯವಾಯಿತು. ಸುಮಾರು ೫೦೦ ಪುಟಗಳ ಈ ವ್ಯಾಕರಣ ಗ್ರಂಥದಲ್ಲಿ ಕನ್ನಡದ ಲಿಪಿಯ ಚರಿತ್ರೆ, ಕನ್ನಡ ಕಾಗುಣಿತ, ಧಾತುಗಳ ಪರಿಚಯ, ಸಂಧಿಗಳು, ಎ, ಐ, ಓ, ಔಗಳ ವಿವಿಧ ವಿಚಾರಗಳು, ಶಿಥಿಲದ್ವಿತ್ವ, ಇಲ್ಲದೆ, ಅಲ್ಲದೆ, ಅಲ್ತು ಮುಂತಾದ ಪದಗಳ ವ್ಯಾಪ್ತಿ, ಸಂಸ್ಕೃತದಿಂದ ಅಪಭ್ರಂಶವಾಗಿ ಬಂದ ಶಬ್ದಗಳು, ದ್ವಿತ್ವದ ವಿಚಾರ ಹೀಗೆ ಇಲ್ಲಿಯವರೆಗೆ ಹೆಚ್ಚಾಗಿ ವಿದ್ವಾಂಸರು ಗಮನಿಸದಿದ್ದ ಅನೇಕ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾನೆ. ಇಂದಿಗೂ ಈ ಗ್ರಂಥದ ವಾಚನ ಕನ್ನಡ ಕಲಿಯುವವರಿಗೆ ತುಂಬ ಸಹಾಯಕಾರಿ. ಇದು ೧೯೦೩ರಲ್ಲಿ ಪ್ರಕಟವಾಯಿತು.

ಕಿಟ್ಟೆಲ್‌ನ ಶಕ್ತಿ ಕುಂದುತ್ತಾ ಬಂದಿತ್ತು. ಆತನ ವ್ಯಾಕರಣ ಗ್ರಂಥವು ಮುದ್ರಿತವಾಗಿ ೧೯೦೩ನೆಯ ಇಸವಿ ಡಿಸೆಂಬರ್ ೧೮ರಂದು ಅದನ್ನು ಕೈಯಾರ ಮುಟ್ಟಿ ನೋಡಿ ಸಂತೋಷಪಟ್ಟನು. ಅದರ ಮಾರನೆಯ ದಿನ ೧೯ನೇ ತಾರೀಖು ಆತನ ೭೧ನೆಯ ವರ್ಷದಲ್ಲಿ ಆತನು ಶಾಂತ ರೀತಿಯಲ್ಲಿ ಸಾವನ್ನಪ್ಪಿದನು. ಆತನ ದೇಹಾಂತ್ಯವಾಯಿತು. ಆತನ ಕೀರ್ತಿ ಶಾಶ್ವತವಾಗಿ ಉಳಿಯಿತು.

ಕಿಟ್ಟೆಲ್‌ನ ಕಾರ್ಯ ಇಷ್ಟೊಂದು ವ್ಯಾಪಕವಾಗಿದ್ದರೂ ಆತನ ಕೀರ್ತಿ ಶಾಶ್ವತವಾಗಿ ನಿಂತಿರುವುದು ಅವನ 'Kannada-English Dictionary' ಯ ಆಧಾರದ ಮೇಲೆ. ಅಂಥ ನಿಘಂಟಿನ ವೈಶಿಷ್ಟ್ಯವೇನೆಂಬುದನ್ನು ಸಂಗ್ರಹವಾಗಿ ಮುಂದೆ ತಿಳಿಸಲಾಗಿದೆ.

ಇಂದಿಗೆ ಒಂದು ಶತಮಾನದ ಹಿಂದೆ ಇಂಥ ಕೆಲಸಕ್ಕೆ ಜನ ಸಹಾಯವಾಗಲಿ, ಧನ ಸಹಾಯವಾಗಲಿ ಸಿಗದಿದ್ದ ಕಾಲದಲ್ಲಿ 'ವೈಜ್ಞಾನಿಕ ತಳಹದಿ'ಯ ಮೇಲೆ ಬೃಹದ್ಗಾತ್ರದ ದ್ವಿಭಾಷಾ ನಿಘಂಟನ್ನು ತಯಾರಿಸುವ ಕೆಲಸಕ್ಕೆ ಕೈ ಹಾಕುವುದೇ ಒಂದು ದೊಡ್ಡ ಸಾಹಸ. ಅಂಥ ಸಾಹಸವನ್ನು ಕಿಟ್ಟೆಲ್ ಮಾಡಿದನು. ಅವನ ಆಶಾವಾದಿತ್ವಕ್ಕೆ ಇದು ಒಂದು ಒಳ್ಳೆಯ ದೃಷ್ಟಾಂತ. ಕ್ರೈಸ್ತ ಮಿಷನ್‌ಗಳಲ್ಲಿ ಹಣದ ಅಭಾವವಿರಲಿಲ್ಲ. ಆದರೆ ದೇಶದ ಆಂಗ್ಲ ಸರಕಾರ ಕೂಡ ಈ ದಿಕ್ಕಿನಲ್ಲಿ ಉದಾರವಾಗಿರಲಿಲ್ಲವಂತೆ !

ಕಿಟ್ಟೆಲ್ ನಿಘಂಟಿನಲ್ಲಿ ಉಲ್ಲೇಖಗಳನ್ನು ಜೋಡಿಸಿರುವ ರೀತಿಯ ಬಗ್ಗೆ ನಾವು ವಿವರವಾಗಿ ತಿಳಿದಿರಬೇಕು. ಆಕಾರಾದಿಯಾಗಿರುವ ಈ ಶಬ್ದಗಳಲ್ಲಿ ಮುಖ್ಯ ಉಲ್ಲೇಖಗಳನ್ನು ಎರಡು ಬಗೆಯಾಗಿ ಮುದ್ರಿಸಲಾಗಿದೆ. ಕನ್ನಡದ ದೇಶ್ಯ ಶಬ್ದಗಳನ್ನು ದಪ್ಪ ಅಕ್ಷರಗಳಲ್ಲಿಯೂ (12 pt). ಸಂಸ್ಕೃತದ ಶಬ್ದಗಳನ್ನೂ ತದ್ಭವಗಳನ್ನೂ ಚಿಕ್ಕ ಅಕ್ಷರಗಳಲ್ಲಿಯೂ (10 pt.) ಮುದ್ರಿಸಲಾಗಿದೆ. ಬಳಿಕ ಆ ಶಬ್ದವನ್ನು ಇಂಗ್ಲಿಷಿನಲ್ಲಿ ಲಿಪ್ಯಂತರಗೊಳಿಸಲಾಗಿದೆ. ಅನ್ಯ ದೇಶ್ಯಗಳನ್ನೂ ದಪ್ಪ ಅಕ್ಷರದಲ್ಲಿ (12 pt.) ಮುದ್ರಿಸಲಾಗಿದೆ. ಶಬ್ದಗಳ ಮೂಲವನ್ನು ಕಂಡುಹಿಡಿಯಲು ಇದು ಬಹಳ ಸಹಾಯಕವಾಗಿದೆ. ಒಂದು ಶಬ್ದಕ್ಕೆ ನಾನಾರ್ಥಗಳಿದ್ದರೆ ಅವೆಲ್ಲವನ್ನೂ ಕ್ರಮವಾಗಿ ಅಂಕಿಗಳೊಡನೆ ೧, ೨, ೩ ಎಂದು ಗುರುತಿಸಿ ತಿಳಿಸಲಾಗಿದೆ. ಅಚ್ಚಗನ್ನಡದ ಶಬ್ದಗಳಿಗೆ 10pt. ಅಕ್ಷರಗಳಲ್ಲಿ ಅರ್ಥವನ್ನು ಮುದ್ರಿಸಿದ್ದರೆ ಇತರ ಶಬ್ದಗಳ ಅರ್ಥವನ್ನು 8pt. ಅಕ್ಷರಗಳಲ್ಲಿ ಮುದ್ರಿಸಲಾಗಿದೆ. ಹೀಗೆ ಅಕ್ಷರಗಳ ಮೊಳೆಗಳನ್ನು ಜೋಡಿಸಿರುವುದರಲ್ಲಿ ನಿಘಂಟನ್ನು ಉಪಯೋಗಿಸುವವರಿಗೆ ಬಹಳವಾಗಿ ಸಹಾಯವನ್ನು ನೀಡಲಾಗಿದೆ.

ಒಂದು ಶಬ್ದಕ್ಕೆ ಕೆಲವು ವೇಳೆ ಅನೇಕ ಪರ್ಯಾಯ ರೂಪಗಳಿರುತ್ತವೆ. ಅವುಗಳನ್ನು ಆಕಾರಾದಿಯಾಗಿ ಅವುಗಳ ಸ್ಥಳದಲ್ಲಿ ಜೋಡಿಸಲಾಗಿದೆ. ಇದು ಅಷ್ಟು ಸರಿಯಾದ ದಾರಿಯಲ್ಲ. ಏಕೆಂದರೆ ಒಂದು ಶಬ್ದಕ್ಕೆ ಎಷ್ಟು ಪರ್ಯಾಯ ರೂಪಗಳಿವೆ ಎಂಬುದು ನಮಗೆ ತಿಳಿಯುವುದೇ ಇಲ್ಲ. ಒಟ್ಟಿಗೆ ಕೊಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತು.

ಜ್ಞಾತಿ ಶಬ್ದಗಳನ್ನು ಗುರುತಿಸಿರುವುದು ಕಿಟ್ಟೆಲ್‌ನ ಅತಿ ಮುಖ್ಯವಾದ ವಿದ್ವತ್‌ಕಾರ್ಯ. ಭಾರತದ ಯಾವ ದ್ರಾವಿಡ ಭಾಷೆಯ ನಿಘಂಟುಗಳಲ್ಲಿಯೂ ಆ ಕಾಲದಲ್ಲಿ ಇಂಥ ಭಾಷಾ ಬಾಂಧವ್ಯದ ಕಾರ್ಯವನ್ನು ಮಾಡಿರಲಿಲ್ಲ. ಇದೊಂದೇ ಸಾಕು ಕಿಟ್ಟೆಲ್‌ನ ಬಹುಭಾಷಾ ಜ್ಞಾನದ ಪ್ರಯೋಜನವನ್ನು ಎತ್ತಿ ಹಿಡಿಯುವುದಕ್ಕೆ.

ಶಬ್ದಗಳಿಗೆ ಅರ್ಥಗಳನ್ನು ಹೇಳುವಾಗ ಸಾಧ್ಯವಾದ ಕಡೆಗಳಲ್ಲೆಲ್ಲಾ ಸಂದರ್ಭೋಚಿತವಾದ ಕಾವ್ಯಪ್ರಯೋಗಗಳನ್ನೂ ಅವು ಬರುವ ಕಾವ್ಯ, ಸಂಧಿ, ಪದ್ಯ ಎಂಬ ವಿವರಗಳನ್ನೂ ಸೂಚಿಸಲಾಗಿದೆ. ಪ್ರಯೋಗಗಳು ಹೆಚ್ಚಾಗಿದ್ದರೆ ಪ್ರಯೋಗವಿಲ್ಲದೆ ಆ ಶಬ್ದವು ಬರುವ ಗ್ರಂಥ, ಸಂಧಿ, ಆಶ್ವಾಸ, ಪದ್ಯ ಇತ್ಯಾದಿಗಳನ್ನು ಸೂಚಿಸಲಾಗಿದೆ.

ಗ್ರಾಮ್ಯ ಶಬ್ದಗಳಲ್ಲಿ ಕೆಲವನ್ನೂ ಅನೇಕ ಗಾದೆಗಳನ್ನೂ ನುಡಿಗಟ್ಟುಗಳನ್ನೂ ಆಯಾ ಪ್ರಯೋಗಗಳು ಉಪಯೋಗದಲ್ಲಿರುವ ಪ್ರದೇಶಗಳನ್ನೂ ತಿಳಿಸಿರುವುದು ಇನ್ನೊಂದು ಮಹಾಕಾರ್ಯ. ಹಿಂದಿನ ಮೈಸೂರು ಪ್ರದೇಶ ಮತ್ತು ಇಂದಿನ ಉತ್ತರ ಕರ್ನಾಟಕ ಇವುಗಳಲ್ಲಿನ ಪ್ರಯೋಗಗಳನ್ನು ಹೆಚ್ಚಾಗಿ ಗುರುತಿಸಲಾಗಿದೆ. ಉತ್ತರ ಕರ್ನಾಟಕವನ್ನು ಕಿಟ್ಟೆಲ್ "Southern Maharastra" ಎಂದು ಕರೆದಿದ್ದಾನೆ. ನ್ಯಾಯವಾಗಿ ಆ ಭಾಗ ಕರ್ನಾಟಕದ ಬಹುಮುಖ್ಯವಾದ ಭಾಗ.

ಕಿಟ್ಟೆಲ್ ತನ್ನ ನಿಘಂಟಿಗೆ ಬರೆದಿರುವ ಪೀಠಿಕೆಗೆ ದೊಡ್ಡ ಗೌರವ ಸಲ್ಲಬೇಕು. ತನ್ನ

ನಿಘಂಟಿನ ಬಗ್ಗೆ ಎಲ್ಲ ವಿವರಗಳನ್ನೂ ನೀಡಿರುವುದಲ್ಲದೆ ಸಂಸ್ಕೃತದಲ್ಲಿ ಸೇರಿಕೊಂಡಿರುವ ಅನೇಕ ದ್ರಾವಿಡ ಶಬ್ದಗಳ ಬಗ್ಗೆ ಒಳ್ಳೆಯ ಮಾಹಿತಿಯನ್ನೂ ನೀಡಿದ್ದಾನೆ.

ಕನ್ನಡ ದೇಶದಲ್ಲಿ ಜರ್ಮನಿಯ ಮಹಾವಿದ್ವಾಂಸನು ಕೈಗೊಂಡು ನೆರವೇರಿಸಿದ ಈ ಸಾಹಿತ್ಯ ಕಾರ್ಯವನ್ನು ಕನ್ನಡಿಗರೆಲ್ಲ ಕೃತಜ್ಞತೆಯಿಂದ ಸ್ಮರಿಸುವ ಶತಾಬ್ದ ಮೀರಿ ಹೊಸ ಶತಮಾನ ಪ್ರಾರಂಭವಾಗಿದೆ.

ಈಗ ಸಿದ್ಧವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಿಟ್ಟೆಲ್ ನಿಘಂಟಿಗಿಂತ ಹೆಚ್ಚು ವಿಸ್ತಾರವಾದುದು ಮತ್ತು ಹೆಚ್ಚು ಆಧಾರಭೂತವಾದುದಾದರೂ ಆ ನಿಘಂಟಿಗೂ ಕಿಟ್ಟೆಲ್ ನಿಘಂಟೇ ತಳಹದಿ ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ. ಸಂಸ್ಕೃತದ ೪ ನಿಘಂಟುಗಳನ್ನೂ ದ್ರಾವಿಡ ಭಾಷೆಯ ೫ ನಿಘಂಟುಗಳನ್ನೂ ಕಿಟ್ಟೆಲ್ ಉಪಯೋಗಿಸಿದ್ದಾನೆ. ಅತ್ಯುತ್ತಮವಾದ ವೈದುಷ್ಯಪೂರ್ಣವಾದ ಒಂದು ಮುನ್ನುಡಿಯನ್ನು ಬರೆದು ಕೃತಿಯನ್ನು ಪೂರ್ಣಗೊಳಿಸಿದ್ದಾನೆ. ಸಂಸ್ಕೃತ ಭಾಷೆಗೆ ದ್ರಾವಿಡ ಭಾಷೆಗಳಿಂದ ಹೋಗಿರಬಹುದಾದ ಶಬ್ದಗಳ ಬಗ್ಗೆಯೂ ದೀರ್ಘವಾಗಿ ಚರ್ಚಿಸಿದ್ದಾನೆ. ಕನ್ನಡ ಭಾಷೆಯ ಬಗ್ಗೆ ಮುಂದಿನ ಸಂಶೋಧನೆಗೆ ಬೇಕಾದಷ್ಟು ಸಾಮಗ್ರಿಯನ್ನು ನೀಡಬಲ್ಲ ಈ ಗ್ರಂಥ ಇಂದಿಗೂ ನಮಗೆ ಬತ್ತದ ತೊರೆಯಾಗಿದೆ.

ಕಿಟ್ಟೆಲ್‌ಗೆ ಪಂಪಭಾರತ, ಕವಿರಾಜಮಾರ್ಗ ಮತ್ತು ವಡ್ಡಾರಾಧನೆಗಳು ದೊರಕಿರಲಿಲ್ಲ. ವೀರಶೈವರ ವಚನಗಳ ಸಂಗ್ರಹ ದೊರಕಿರಲಿಲ್ಲ. ಆದುದರಿಂದ ಈ ಗ್ರಂಥಗಳಲ್ಲಿರುವ ಶಬ್ದಗಳನ್ನೂ ಸಂಗ್ರಹಿಸಿ ಶ್ರೀ ಎಂ. ಮರಿಯಪ್ಪ ಭಟ್ಟರು ಕಿಟ್ಟೆಲ್‌ನ ಗ್ರಂಥಕ್ಕೆ ಹೊಸ ಶಬ್ದಗಳನ್ನು ಸೇರಿಸಿ ಆ ನಿಘಂಟನ್ನು ಮದ್ರಾಸು ವಿಶ್ವವಿದ್ಯಾನಿಲಯದ ವತಿಯಿಂದ ಪ್ರಕಟಪಡಿಸಿದ್ದಾರೆ. ಹೀಗೆ ಹೊಸದಾಗಿ ಸೇರಿರುವ ಶಬ್ದಗಳಲ್ಲಿ ಎಷ್ಟು ಸೇರಬೇಕಾದುವು ಬಿಡಬೇಕಾದುವು ಎಷ್ಟು ಎಂದು ಈಗ ನಿರ್ಣಯವಾಗಬೇಕಾಗಿದೆ. (ಈ ಗ್ರಂಥದಲ್ಲಿ ಮುಂದೆ ಇರುವ ಕಿಟ್ಟೆಲ್ ನಿಘಂಟಿನ ಪರಿಷ್ಕರಣ ಭಾಗವನ್ನು ನೋಡಿ.)

ಆ ಕಾಲದ ಇತರ ನಿಘಂಟುಗಳು :

ಕನ್ನಡ ನಿಘಂಟು ಕ್ಷೇತ್ರದಲ್ಲಿ ದುಡಿಯುವವರು ಕಿಟ್ಟೆಲ್‌ನಿಗೆ ಎಷ್ಟು ಋಣಿಗಳೆಂಬುದನ್ನು ಹೇಳಿ ಮುಗಿಸುವುದಕ್ಕಾಗುವುದಿಲ್ಲ. ನಿಘಂಟೆಂದರೆ ಶಬ್ದಗಳನ್ನು ಆಕಾರಾದಿಯಾಗಿ ಜೋಡಿಸಬೇಕೆಂಬುದು ರೆ. ರೀವ್‌ನಿಂದ ತಿಳಿಯಬಂತು. ಕೆಲವು ದೇಶೀಯ ವಿದ್ವಾಂಸರೂ ಕಿಟೆಲ್ ಕೆಲಸ ಮಾಡುತ್ತಿದ್ದ ಸಮಯದಲ್ಲಿಯೇ ನಿಘಂಟು ಕೆಲಸದಲ್ಲಿ ನಿರತರಾಗಿದ್ದರು. ಇವರಲ್ಲಿ ಮೊದಲನೆಯ ವ್ಯಕ್ತಿ ಗಂಗಾಧರ ಮಡಿವಾಳೇಶ್ವರ ತುರಮುರಿ. ಈ ತುರಮುರಿ ತಾನು ಸಿದ್ಧಪಡಿಸಿದ **'ಶಬ್ದಮಂಜರಿ'**ಯನ್ನು ೧೮೭೦ರಲ್ಲಿ ಪ್ರಕಟಿಸಿದನು. ಕಿಟ್ಟೆಲ್‌ಗೆ ಇದು ಪ್ರಕಟವಾದೊಡನೆಯೇ ಸಿಕ್ಕಿತು. ಆದರೆ ರೀವ್‌ನ ನಿಘಂಟಿನಲ್ಲಿರುವಂತೆಯೇ ಇದರಲ್ಲಿಯೂ ತಪ್ಪುಗಳಿವೆಯೆಂದು ಕಿಟೆಲ್ ಹೇಳಿದ್ದಾನೆ. ನರಸಿಂಗರಾಯನ **'ಕಿಸಂವಾರ್‌ಗ್ಲಾಸರಿ'** ಬೇರೆ ಬೇರೆ ಕ್ಷೇತ್ರಕ್ಕೆ ಸಂಬಂಧಿಸಿದ ಶಬ್ದಗಳನ್ನು ಆಯಾ ಗುಂಪಿಗೆ ಸೇರಿಸಿ ಸಿದ್ಧಪಡಿಸಿರುವ ನಿಘಂಟು. ವ್ಯವಸಾಯ, ದೇಪದ

ಅಂಗಾಗಳು, ಸಸ್ಯಶಾಸ್ತ್ರ, ವಾಣಿಜ್ಯ ಮುಂತಾದ ಕ್ಷೇತ್ರಗಳ ಶಬ್ದಗಳು ಸಹಾಯಕವಾಗಿವೆ. ಈ ಪುಸ್ತಕವೂ ಕೂಡ ೧೮೯೧ರಲ್ಲಿ ಪ್ರಕಟವಾಯಿತು. ಕಿಟ್ಟೆಲ್‌ನ ನಿಘಂಟಿಗಿಂತ ಮುಂಚೆಯೇ ಪ್ರಕಟವಾಯಿತು. ಗುರುರಾವ್ ವಿಠ್ಠಲ ಮೋಹರೆ ಅವರ ಶಬ್ದ ಸಂಗ್ರಹವು ತುರಮುರಿ ಅವರನ್ನು ಅನುಸರಿಸುತ್ತದೆ, ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಯವರ ಅಮರಕೋಶದ ಟೀಕೆಯು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲ ಎಂದು ಕಿಟ್ಟೆಲ್ ಸ್ಪಷ್ಟವಾಗಿ ಹೇಳುತ್ತಾನೆ.

೧೮೯೧ರಲ್ಲಿ ಪ್ರಕಟವಾದ ಜಯರಾಯಾಚಾರ್ಯರ **ಕರ್ನಾಟಕ ಭಾಷಾಕರವು** ಅಕಾರಾದಿಯಾದ ನಿಘಂಟು. ಶ್ರೀ ಜಯರಾಯಾಚಾರ್ಯರ ಹಸ್ತಾಕ್ಷರವುಳ್ಳ ಒಂದು ಪ್ರತಿ, ಅವರು ಅಳಿಯ ಲಿಂಗರಾಜ ಅರಸರ ಮಗನಿಗೆ ಕೊಟ್ಟದ್ದು ಗತ್ವಾ ಗತ್ವಾ ನನ್ನ ಕೈ ಸೇರಿದೆ. ಈಗ ನನ್ನ ಬಳಿ ಇದೆ. ಆದರೆ ಇದರ ಪ್ರತಿ ಕಿಟ್ಟೆಲ್‌ನ ಕೈಗೆ ಸೇರುವುದಕ್ಕೆ ಮುಂಚೆ ಆತನು ತನ್ನ ನಿಘಂಟಿನ ಪೂರ್ಣಪ್ರತಿಯನ್ನು ಮುದ್ರಣಕ್ಕೆ ಕೊಟ್ಟಿರಬೇಕು. ಅಲ್ಲದೆ ಆತನು ಆಗ ಈ ದೇಶದಲ್ಲಿರಲಿಲ್ಲ.

ಕಿಟ್ಟೆಲ್‌ನ ಗ್ರಂಥವು ಪ್ರಕಟವಾದ ಮೇಲೆಯೂ ಕನ್ನಡ ನಿಘಂಟಿನ ಅಗತ್ಯಗಳೆಲ್ಲವೂ ಪೂರೈಸಿರಲಿಲ್ಲ. ಹೀಗಾಗಿ ಸಂಸ್ಥೆಗಳೂ ವಿಶಿಷ್ಟ ವ್ಯಕ್ತಿಗಳೂ ಬೇರೆ ಬೇರೆ ಪ್ರಯತ್ನಗಳನ್ನು ಮಾಡುತ್ತಲೇ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತು ಷಟ್ಪದೀ ಕಾವ್ಯಗಳ ನಿಘಂಟನ್ನು ಕ್ರೋಡೀಕರಿಸಿತು. ಇದಕ್ಕಾಗಿ ಕರ್ನಾಟಕ ದೇಶದಲ್ಲಿ ಪ್ರಸಿದ್ಧರಾಗಿದ್ದ ಎಲ್ಲ ಕನ್ನಡ ಪಂಡಿತರ ಸಹಾಯವನ್ನು ಅದು ಪಡೆಯಿತು. ಈ ಕಾರ್ಯಕ್ಕಾಗಿ ಅದು ಗರಣಿ ಕೃಷ್ಣಾಚಾರ್ಯ, ರಾ. ತಾತಾಚಾರ್ಯ, ಕಾದಂಬರಿಯ ಸಿ. ವೆಂಕಟರಮಣಶಾಸ್ತ್ರಿ, ಕುಕ್ಕೆಸುಬ್ರಹ್ಮಣ್ಯಶಾಸ್ತ್ರಿ, ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯ, ಬಿ. ಕೃಷ್ಣಪ್ಪ, ಎ. ಕೇಶವಯ್ಯ, ಬೆಳ್ಳಾವೆ ವೆಂಕಟನಾರಣಪ್ಪ, ಹಟ್ಟಂಗಡಿ ನಾರಾಯಣರಾವ್, ಮಹದೇವ್ ಪ್ರಭಾಕರ ಪೂಜಾರ್, ಹೆಚ್. ಹನುಮಂತರಾವ್, ಆರ್. ಜಗನ್ನಾಥರಾವ್, ಕೆ. ಕೃಷ್ಣಪ್ಪ, ನಂ. ವೆಂಕಟೇಶ ಐಂಗಾರ್ ಮುಂತಾದ ಅನೇಕ ವಿದ್ವಾಂಸರಿಂದ ಪಟ್ಟಿಕೆಗಳನ್ನು ತರಿಸಿಕೊಂಡದ್ದಾಯಿತು. ಆಗ ನಂ. ವೆಂಕಟೇಶ ಐಂಗಾರ್ಯರು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಈ ಕೆಲಸವನ್ನು ಕುರಿತು ಅವರು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಆದರೆ ಮುಖ್ಯ ಹೊಣೆ ಬೆಳ್ಳಾವೆ ವೆಂಕಟನಾರಣಪ್ಪನವರದಾಗಿತ್ತು.

ಎಲ್ಲ ಪಟ್ಟಿಕೆಗಳನ್ನೂ ಕ್ರೋಡೀಕರಿಸಿ ಅಕಾರಾದಿಯಾಗಿ ಮಾಡಿ ಹಸ್ತಪ್ರತಿಯನ್ನು ಸಿದ್ಧಪಡಿಸಿದಾಗಿತ್ತು. ಅದನ್ನು ಇನ್ನೇನು ಮುದ್ರಣಕ್ಕೆ ತೆಗೆದುಕೊಳ್ಳಬೇಕೆನ್ನುವಾಗ ಬೆಳ್ಳಾವೆಯವರು ಒಂದೆರಡು ಶಬ್ದಗಳ ಅರ್ಥದಲ್ಲಿ ಆಸಕ್ತಿ ಹುಟ್ಟಿ ಈ ಷಟ್ಪದೀ ನಿಘಂಟಿನಲ್ಲಿ ಆ ಶಬ್ದಗಳನ್ನು ತೆಗೆದು ನೋಡಿದರು. ವಿದ್ವಾಂಸರು ನೀಡಿದ್ದ ಅರ್ಥ ಸರಿಯಾಗಿದೆಯೋ ಇಲ್ಲವೋ ಎಂದು ಪಟ್ಟಿಕೆಯಲ್ಲಿದ್ದ ಸಂಧಿ ಪದ್ಯಗಳ ಸಂಖ್ಯೆಯನ್ನು ಗುರುತಿಸಿ ಕಾವ್ಯದಲ್ಲಿ ಆ ಭಾಗವನ್ನು ತೆಗೆದುನೋಡಿದರು. ಅವರಿಗೆ ಆಶ್ಚರ್ಯ ಕಾದಿತ್ತು. ಶಬ್ದಗಳನ್ನು ಗುರುತಿಸಿ ಕಳಿಸಿದ್ದವರು ನೀಡಿದ್ದ ಸಂಖ್ಯೆಯ ಸಂಧಿ ಪದ್ಯದಲ್ಲಿ ಆ ಶಬ್ದವೇ ಇಲ್ಲ! ಬೆಳ್ಳಾವೆಯವರು ಇಂಥ ಅಪ್ರಾಮಾಣಿಕ ಗ್ರಂಥವನ್ನು ಪರಿಷತ್ತು ಪ್ರಕಟಿಸಿ ಅವಮಾನಕ್ಕೆ ಒಳಗಾಗುವುದೇ ಬೇಡವೆಂದು ತೀರ್ಮಾನಿಸಿದರು.

ಹೀಗಾಗಿ ಅದು ಹಸ್ತಪ್ರತಿಯಾಗಿಯೇ ಉಳಿದಿದೆ. ನಿಘಂಟು ವಿಷಯದಲ್ಲಿ ನಿಷ್ಪೃಷ್ಟತೆಗೆ ವಿದ್ವಾಂಸರು ಹೀಗೆ ಕಠಿಣ ಮನಸ್ಕರಾಗಿರುತ್ತಾರೆ ಎಂಬುದಕ್ಕೆ ಇದು ದೃಷ್ಟಾಂತವಾಗಿದೆ.

ಕಳೆದ ಶತಮಾನದ ಮೊದಲ ಅರ್ಧದಲ್ಲಿ ಕೆಲವರು ವಿದ್ವಾಂಸರು ಒಬ್ಬೊಬ್ಬರೆ ತುಂಬ ಶ್ರಮವಹಿಸಿ ಬಹುಕಾಲ ದುಡಿದು ಸಿದ್ಧಪಡಿಸಿರುವ ನಿಘಂಟುಗಳು ಕೆಲವಿವೆ. ಅವಿನ್ನೂ ಹಸ್ತಪ್ರತಿರೂಪದಲ್ಲಿಯೇ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ.

೧.	ಮಠದ ರುದ್ರಯ್ಯನ ನಿಘಂಟು	೧೯೧೮
೨.	ತಿರುಮಕೂಡ್ಲು ಶಾಮಣ್ಣನ ನಿಘಂಟು	೧೯೨೦
೩.	ಪಂಡಿತ ಪ್ರಭಣ್ಣನ ನಿಘಂಟು	೧೯೨೯
೪.	ಪಂಡಿತ ಟಿ.ಕೆ. ಅನಂತನಾರಾಯಣನ ನಿಘಂಟು	೧೯೩೩

ಇವುಗಳಲ್ಲಿ ಪಂಡಿತ ಪ್ರಭಣ್ಣನ ನಿಘಂಟನ್ನು ಕುರಿತು ಒಂದು ಮೆಚ್ಚಿಗೆಯ ಮಾತನ್ನು ಹೇಳಬೇಕು. ಪ್ರೈಮರಿ ಶಾಲೆಯಲ್ಲಿ ಅಧ್ಯಾಪಕನಾಗಿದ್ದ ಈತ ವಿಸ್ತಾರವಾದ ವಾಚನ, ವಿಷಯ ಸಂಗ್ರಹ, ಅರ್ಥನಿರ್ಧಾರದಲ್ಲಿ ಜಾಣ್ಮೆ ಇವುಗಳಿಂದ ಕೂಡಿ ಮಾಡಿರುವ ಕೆಲಸ ತುಂಬ ಸ್ತುತ್ಯರ್ಹವಾಗಿದೆ. ಶಬ್ದಗಳಿಗೆ ಗ್ರಂಥಗಳ ಆಕರಗಳನ್ನು ತಿಳಿಸಿರುವುದು ಆತನ ಹಿರಿಮೆ. ಹೀಗೆಯೇ ಕನ್ನಡ ಸಾಹಿತ್ಯ ಪರಿಷತ್ತು ವಿದ್ವಾಂಸರ ನೆರವಿನಿಂದ ಸಿದ್ಧಪಡಿಸಿದ ಅಟಿಕುಳ ನಿಘಂಟು, ಕನ್ನಡ ನಿಘಂಟುಗಳ ನಿಘಂಟು ಎಂಬ ಹಸ್ತಪ್ರತಿಯ ನಿಘಂಟು ಹಾಗೂ ಜಗನ್ನಾಥ ವಿಜಯಕ್ಕೆ ಅಯ್ಯಾಶಾಸ್ತ್ರಿಗಳು ಸಿದ್ಧಪಡಿಸಿದ್ದ ನಿಘಂಟೂ ಹಸ್ತಪ್ರತಿಯಲ್ಲಿವೆ.

ಕೆಲವು ಮುದ್ರಿತ ನಿಘಂಟುಗಳು

೧.	ಸಿರಿಗನ್ನಡ ಅರ್ಥಕೋಶ-ಶಿವರಾಮಕಾರಂತ ದಕ್ಷಿಣಕನ್ನಡ ಪ್ರದೇಶದಲ್ಲಿರುವ ಕೆಲವು ಶಬ್ದಗಳ ಅರ್ಥವನ್ನು ತಿಳಿಯಲು ಸಹಾಯಕ	೧೯೪೦
೨.	ಶಿವಾನುಭವ ಶಬ್ದಕೋಶ-ಫ.ಗು. ಹಳಕಟ್ಟಿ ವೀರಶೈವ ಸಿದ್ಧಾಂತದಲ್ಲಿ ಉಪಯೋಗವಾಗಿರುವ ಅನೇಕ ಶಬ್ದಗಳ ಅರ್ಥಕ್ಕೆ ಇದು ಆಗರ.	೧೯೪೭
೩.	ಕನ್ನಡ ನಿಘಂಟು-ಮಚ್ಚಿಮಲೆ ಶಂಕರನಾರಾಯಣರಾವ್, ಆರ್.ಎಸ್. ನಾವೂರುಕಾರ ಮತ್ತು ಸೇಡಿಯಾಪು ಕೃಷ್ಣಭಟ್ಟ	೧೯೫೧
೪.	ಕನ್ನಡ-ಕನ್ನಡ ಶಬ್ದಕೋಶ ಹೆಚ್.ವಿ. ರಮಾಕಾಂತರಾವ್	೧೯೫೨
೫.	ಕನ್ನಡ-ಕನ್ನಡ ಶಬ್ದಕೋಶ ಗುರುನಾಥಜೋಷಿ ಮತ್ತು ಜಿ. ಅಶ್ವತ್ಥನಾರಾಣರಾವ್.	೧೯೫೭

೬. ಸಚಿತ್ರ ಕನ್ನಡ-ಕನ್ನಡ ಕಸ್ತೂರಿಕೋಶ ಪಂಡಿತ ಸಿ.ಎ. ಕವಲಿ ೧೯೫೭

ಚಿತ್ರಗಳನ್ನು ಉಪಯೋಗಿಸಿರುವ ಪ್ರಥಮ ಕನ್ನಡ ನಿಘಂಟು ಇದು. ಈ ನಿಘಂಟಿನಲ್ಲಿ ಸಂಪಾದಕರು ತಾವೇ ನಿರ್ಮಾಣ ಮಾಡಿರುವ ಶಬ್ದಗಳನ್ನು ಸೇರಿಸಿದ್ದಾರೆ. ನಿಘಂಟುಕಾರನ ಕೆಲಸ ಅರ್ಥನಿರ್ಧಾರವೇ ಹೊರತು ಶಬ್ದ ಸೃಷ್ಟಿಯಲ್ಲ. ಅದು ಜನತೆಯ ಕೆಲಸ. ಉದಾಹರಣೆಗೆ ಕೆಲವು ಶಬ್ದಗಳನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ.

೧.	ಉಚ್ಚಾವಚಕ್ರೀಡೆ	See-saw (a game)
೨.	ಭ್ರಮಣಚಕ್ರಸ್ತಂಭ	Wicket gate
೩.	ಭಾರೋದ್ಧಾರಕ	Jack
೪.	ಪರಿವರ್ತಕಾಸ್ತ್ರ	Revolver
೫.	ದ್ವಾರಕಲಶ	Flower Vase

೭. ಕನ್ನಡ ಕಾವ್ಯಪದಮಂಜರಿ ಸ.ಸ. ಮಾಳವಾಡ,
ಕ.ವೆಂ. ರಾಜಗೋಪಾಲ ಮತ್ತು ಟಿ.ಕೆ. ಕೇಶವಭಟ್ಟ - ೧೯೬೫

೮. ಕುಮಾರವ್ಯಾಸನಿಘಂಟು-'ಎನ್ಕೆ' - ೧೯೭೧

ಶಬ್ದಗಳಲ್ಲದೆ ಕೆಲವು ಪದಪುಂಜಗಳನ್ನೂ ನುಡಿಗಟ್ಟುಗಳನ್ನೂ ಶೇಖರಿಸಿದ್ದಾರೆ.

ಇವಲ್ಲದೆ ಕೆಲವು ವಿಶಿಷ್ಟವಾದ ನಿಘಂಟುಗಳಿವೆ :

೧. ಪುರಾಣನಾಮ ಚೂಡಾಮಣಿ-ಪಾನ್ಯಂಸುಂದರಶಾಸ್ತ್ರಿ ಮತ್ತು ೧೯೪೧
ಬೆನಗಲ್ ರಾಮರಾವ್.
ಇದರಲ್ಲಿ ಪುರಾಣೇತಿಹಾಸಗಳಲ್ಲಿ ಬರುವ ಅಂಕಿತನಾಮಗಳ ಬಗ್ಗೆ ಕಥಾವಿವರಗಳನ್ನು ನೀಡಲಾಗಿದೆ.

೨. ಪುರಾಣ ಭಾರತ ಕೋಶ-ಯಜ್ಞನಾರಾಯಣ ಉಡುಪ ೧೯೭೫

೩. ಶ್ರೀವತ್ಸನಿಘಂಟು-ಟಿ.ವಿ. ವೆಂಕಟಾಚಲಶಾಸ್ತ್ರೀ
ಸಂಖ್ಯೆಗಳಿಗೆ ಕೂಡಿದ ೧೯೭೧
ವಿವರಣೆಯನ್ನು ನೀಡುವ ನಿಘಂಟು.

೪. ಓಷಧಿಕೋಶಂ-ಇದರ ಕರ್ತೃ ಯಾರೋ ತಿಳಿಯದು ೧೯೪೦
ಇದರಲ್ಲಿ ಪ್ರಾಣಿ, ಪಕ್ಷಿ, ಕೀಟ, ಓಷಧಿಸಸ್ಯ ಮೊದಲಾಗಿ ಇತರ ಅನೇಕ ವಿವರಗಳಿವೆ.

ಕೆಲವು ಇಂಗ್ಲಿಷ್ ಕನ್ನಡ ನಿಘಂಟುಗಳೂ ಇವೆ. ೧೮೭೬ರಲ್ಲಿ ಪ್ರಕಟವಾದ F. Zieglerನ ನಿಘಂಟೇ ಮೊದಲನೆಯದು. ಇದು ಸಿದ್ಧವಾಗುವುದಕ್ಕೆ ಬೆಸಿಲ್ ಮಿಷನ್ನಿಗೆ

ಸಂಬಂಧಿಸಿದ ರೆ. ಎಂ.ಟಿ.ಎಚ್. ವಾಲ್ಸ್, ಕ್ರಿಸ್ತಾನುಜವತ್ಸ ಮತ್ತು ಎಫ್. ಜೀಗ್ಲರ್ ಇವರು ಮೂವರೂ ಒಟ್ಟು ಸೇರಿ ಕೆಲಸ ಮಾಡಿದರು. ಇದರ ಎರಡನೆಯ ಮುದ್ರಣ ೧೮೮೮ರಲ್ಲಿ ಬಂತು. ಆ ಬಳಿಕ ಇಂಗ್ಲಿಷ್ ಮತ್ತು ಶಾಲಾ ನಿಘಂಟು ಎಂಬ ಹೆಸರಿನಲ್ಲಿ ಅನೇಕ ಮುದ್ರಣಗಳನ್ನು ಕಂಡಿದೆ. ೧೯೧೯ರಲ್ಲಿ ಇದರ ಐದನೆಯ ಮುದ್ರಣ ಹೊರಬಂದಿದೆ. ಆ ವೇಳೆಗೆ ಜೀಗ್ಲರ್ ಮತ್ತು ವಾಲ್ಸ್ ಅವರು ತೀರಿಕೊಂಡಿದ್ದರಿಂದ ಇದರ ಮುದ್ರಣದ ಹೊಣೆಯನ್ನು ಕ್ರಿ. ವತ್ಸ ಎಂಬ ಸಂಕ್ಷಿಪ್ತನಾಮದಲ್ಲಿ ಕ್ರಿಸ್ತಾನುಜವತ್ಸನೇ ನಿರ್ವಹಿಸಿರಬೇಕು. ಅಲ್ಲದೆ ಈತನು ೧೯೧೦ರಲ್ಲಿ ಲಘುಕೋಶ, ಇಂಗ್ಲಿಷ್, ಕನ್ನಡವೂ ಎಂಬ ಹೆಸರಿನಲ್ಲಿ ಚಿಕ್ಕ ನಿಘಂಟನ್ನು ಸಿದ್ಧಪಡಿಸಿ ಪ್ರಕಟಿಸಿದನು. ಈ ಕೆಲಸಕ್ಕೆ ಭಾರದ್ವಾಜ ಶಿವರಾವ್, ಕೆ. ರಾಮಕೃಷ್ಣಯ್ಯ, ಪಂಡಿತ ಬಾಳಪ್ಪಯ್ಯ, ಎನ್. ಶಾಂತಪ್ಪ ಮತ್ತು ಎಂ. ಗೋಪಾಲರಾವ್ ಎಂಬ ವಿದ್ವಾಂಸರು ಮಾಡಿದ ಸಹಾಯವನ್ನು ನೆನೆದಿದ್ದಾನೆ. ಭಾರದ್ವಾಜ ಶಿವರಾವ್ ಎಂಬ ವಿದ್ವಾಂಸನ ಬಗ್ಗೆ ಕಿಟ್ಟೆಲ್ ಹೇಳಿರುವ "The faithful Chief Corrector of the Basel Mission Press" ಎಂಬ ಮಾತಿನಿಂದ ಆ ವಿದ್ವಾಂಸನು ಎಂಥ ಗೌರವಾರ್ಹ ವ್ಯಕ್ತಿಯಾಗಿದ್ದನು ಎಂಬುದು ವ್ಯಕ್ತವಾಗುತ್ತದೆ. ೧೯೨೧ರಲ್ಲಿ ಪ್ರಕಟವಾದ ಶಿಡ್ಲಘಟ್ಟದ ರಾಮರಾವ್ ಎಂಬುವರ ನಿಘಂಟು ಕೆಲವು ಕಾಲ ತುಂಬ ಜನಪ್ರಿಯವಾಗಿತ್ತು. ಇದರ ಹೆಸರು A Dictitionary; English-Kannada (Pronouncing, Etymological and Explanatory) ಇಂಗ್ಲಿಷ್ ಮತ್ತು ಕನ್ನಡ ನಿಘಂಟು. "ಈ ನಿಘಂಟುಕಾರನು ಬೆಂಗಳೂರಿನ ಗೌರ್ನಮೆಂಟ್ ಹೈಸ್ಕೂಲಿನಲ್ಲಿ ೧೮೬೩ರಲ್ಲಿ ಪಾಸಾದ The first university metriculate ಎಂದೂ ಆ ವರ್ಷದಲ್ಲಿ ತೇರ್ಗಡೆಯಾದವನು ಇವನೊಬ್ಬನೇ" ಎಂದೂ ನಿಘಂಟಿನ ಪ್ರಾರಂಭದಲ್ಲಿ ಉಲ್ಲೇಖವಿದೆ. ಈ ನಿಘಂಟನ್ನು ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜವೊಡೆಯರಿಗೆ ಅರ್ಪಿಸಲಾಗಿದೆ. ಸುಮಾರು ೮೨೦ ಪುಟಗಳ ಕ್ರೌನ್ ಆಕಾರದ ಈ ಪುಸ್ತಕ ತುಂಬ ಪ್ರಯೋಜನಕರವಾಗಿದ್ದರೂ ಮತ್ತೆ ಮುದ್ರಣವಾಗದಿರುವುದು ಆಶ್ಚರ್ಯಕರ.

ಆರ್.ಎಲ್. ನರಸಿಂಹಯ್ಯನವರು Glosary of Scientific Terms ಎಂಬ ನಿಘಂಟನ್ನು ತಯಾರಿಸಿದ್ದಾರೆ.

ದ.ಕೃ. ಭಾರದ್ವಾಜರು ೧೯೪೨ರಲ್ಲಿ Student's Modern Practical English-Kannada Dictionary ಯನ್ನು ಪ್ರಕಟಪಡಿಸಿದರು. ಅದು ಜನಪ್ರಿಯವಾದುದನ್ನು ಕಂಡು ೧೯೪೪ರಲ್ಲಿ English-English-Kannada Dictionaryಯನ್ನು ಪ್ರಕಟಮಾಡಿದರು. ಈಗಲೂ ಇವು ಮರುಮುದ್ರಣಗೊಳ್ಳುತ್ತಿವೆ.

ಈಚೆಗೆ ಪ್ರಕಟವಾಗಿರುವ ಕೆಲವು ಇಂಗ್ಲಿಷ್-ಕನ್ನಡ ನಿಘಂಟುಗಳನ್ನು ಒಂದು ಸಾಮಾಜಿಕ ನಿಘಂಟನ್ನೂ ಹೆಸರಿಸುವುದು ಉಚಿತವಾಗುತ್ತದೆ. ೧೯೪೬ರಲ್ಲಿ ಪ್ರಕಟವಾದ ಮೈಸೂರು ವಿಶ್ವವಿದ್ಯಾಲಯದ ನಿಘಂಟೇ ಇವುಗಳಲ್ಲೆಲ್ಲ ದೊಡ್ಡದೂ ಉತ್ತಮವಾದುದೂ ಆಗಿದೆ. ಈಚೆಗೆ ಅದರ ಪರಿಷ್ಕೃತ ಮುದ್ರಣವೊಂದು ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗುತ್ತಿದೆ. ಸುಮಾರು ಇದೇ ಕಾಲಕ್ಕೆ ಸಿದ್ಧವಾಗಿದ್ದ, ಪ್ರೊ. ಸೀಬಯ್ಯನವರು ರಚಿಸಿದ ಒಂದು ಇಂಗ್ಲಿಷ್ ಕನ್ನಡ ನಿಘಂಟಿದೆ. ಅದು ಇನ್ನೂ ಮುದ್ರಣವಾಗಿಲ್ಲ.

೧೯೮೫ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಮುದ್ರಣಾಲಯದ ವತಿಯಿಂದ ಪ್ರಕಟವಾಗಿರುವ The English-English Kannada Dictionary ೬೧೨ ಪುಟಗಳ ೧/೮ ಡೆಮ್ಮಿ ಆಕಾರದ ನಿಘಂಟು. ಇದನ್ನು ಮೈಸೂರು ವಿಶ್ವವಿದ್ಯಾನಿಲಯದ ಎನ್. ಬಾಲಸುಬ್ರಹ್ಮಣ್ಯಂ ಮತ್ತು ಪ್ರಭುಶಂಕರ ಅವರು ಸಿದ್ಧಪಡಿಸಿದ್ದಾರೆ. ಇಂಗ್ಲಿಷ್ ವಿಭಾಗಕ್ಕೆ A.J. Augarde ಎಂಬವರು ಹೊಣೆಗಾರಿಕೆಯನ್ನು ಹೊತ್ತಿದ್ದಾರೆ.

೧೯೯೩ರಲ್ಲಿ ಐ.ಬಿ.ಎಚ್. ಇಂಗ್ಲಿಷ್-ಕನ್ನಡ ನಿಘಂಟು ಪ್ರಕಟವಾಗಿವೆ. ಇದೇ ಸಂಸ್ಥೆ ಹಿಂದೆ ೧೯೮೧ರಲ್ಲಿ ಪ್ರಕಟಿಸಿದ್ದ, ಅನೇಕ ಮುದ್ರಣಗಳನ್ನು ಕಂಡಿರುವ ಐ.ಬಿ.ಎಚ್. Kannada-Kannada-English ನಿಘಂಟಿಗೆ ಪೋಷಕ ಸಂಪುಟವಾಗಿ ಪ್ರಕಟವಾಗಿದೆ.

೧೯೯೬ರಲ್ಲಿ **ಇಗೋ ಕನ್ನಡ ಸಾಮಾಜಿಕ ನಿಘಂಟು** ಪ್ರಕಟವಾಗಿದೆ. ಇದರ ಎರಡನೆಯ ಸಂಪುಟ ೨೦೦೧ರಲ್ಲಿ ಪ್ರಕಟವಾಗಿದೆ. ಈಗ ಮೂರನೆಯ ಸಂಪುಟ ಸಿದ್ಧತೆಯಲ್ಲಿದೆ. ಓದುಗರ ಭಾಷಾಪರವಾದ ಸಮಸ್ಯೆಗಳಿಗೆ ಉತ್ತರ ನೀಡುವ ಈ ನಿಘಂಟು ತುಂಬ ಜನಪ್ರಿಯವಾಗಿದೆ. ನಿಘಂಟುಕಾರರು ಜಿ. ವೆಂಕಟಸುಬ್ಬಯ್ಯ ನವಕರ್ನಾಟಕ ಪ್ರಕಟಣೆ, ನವಕರ್ನಾಟಕ ಪ್ರಕಾಶನದವರು ೧೯೯೮ರಲ್ಲಿ ಪ್ರಕಟಿಸಿದ ಜಿ. ವೆಂಕಟಸುಬ್ಬಯ್ಯ ಅವರ **ಎರವಲು ಪದಕೋಶ** ಇನ್ನೊಂದು ಮುಖ್ಯ ನಿಘಂಟು. ೨೦೦೧ರಲ್ಲಿ ಪ್ರೊ. ಜಿ.ವಿ. ಅವರ **ಪ್ರಿಸಮ್ ಇಂಗ್ಲಿಷ್ ಕನ್ನಡ ನಿಘಂಟು** ಪ್ರಕಟವಾಗಿದೆ. ಕನ್ನಡದಲ್ಲಿ ಇಂಗ್ಲಿಷ್ ನುಡಿಗಟ್ಟುಗಳಿಗೂ ಅನುವಾದವನ್ನು ನೀಡಿರುವ ಈ ನಿಘಂಟು ಒಂದೇ ಸಂಪುಟದ ಅತಿ ದೊಡ್ಡ ನಿಘಂಟು. ಸುಮಾರು ೨೫೦೦೦ ಶಬ್ದಗಳ ದಾಖಲೆ ಇದೆ. ಇದು ತುಂಬ ಜನಪ್ರಿಯವಾಗಿದೆ. ಪ್ರಕಟನೆ ಪ್ರಿಸಮ್ ಬುಕ್ಸ್.

ಇವಲ್ಲದೆ ಇನ್ನೂ ಕೆಲವು ಸಣ್ಣ ಸಣ್ಣ ನಿಘಂಟುಗಳು ಪ್ರಕಟವಾಗಿದ್ದು ಅವುಗಳ ಉಪಯೋಗ ಸೀಮಿತವಾದದ್ದರಿಂದ ಅವುಗಳನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ಪಂಡಿತ ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರು ೧೯೮೭ರಲ್ಲಿ ಪ್ರಕಟಿಸಿರುವ ಆರು ಸಂಪುಟಗಳ ಸಂಸ್ಕೃತ-ಕನ್ನಡ ನಿಘಂಟು ತುಂಬ ಪ್ರಯೋಜನಕಾರಿಯಾಗಿರುವ ನಿಘಂಟು. ಈ ನಿಘಂಟಿನ ಹೆಸರು **ಶಬ್ದಾರ್ಥಕೌಸ್ತುಭ**. ಒಬ್ಬ ವ್ಯಕ್ತಿಯೇ ಹಠಹಿಡಿದು ಸಾಧಿಸಿರುವ ಈ ಕೆಲಸ ಎಲ್ಲರ ಗೌರವಕ್ಕೆ ಪಾತ್ರವಾಗಿದೆ.

ಕವಿಗಳ ಸರ್ವಪದಪ್ರಯೋಗ ಕೋಶ

ಇಂಗ್ಲಿಷಿನಲ್ಲಿ Concordance ಎಂಬ ಹೆಸರಿನ ಒಂದು ಬಗೆಯ ನಿಘಂಟಿದೆ. ಇದನ್ನು ಒಬ್ಬ ಕವಿಯ **ಪದಪ್ರಯೋಗ ಕೋಶ** ಎಂದು ಕರೆಯಬಹುದು. ಒಬ್ಬ ಕವಿಯು ಪ್ರಯೋಗಿಸಿರುವ ಎಲ್ಲ ಮುಖ್ಯ ಶಬ್ದಗಳನ್ನೂ ಅಕಾರಾದಿಯಾಗಿ ಜೋಡಿಸಿ ಆಯಾ ಪ್ರಯೋಗಗಳಿಗೆ ದೊರಕುವ ಎಲ್ಲ ಆಕರಸ್ಥಾನಗಳನ್ನು ಇಂಥ ನಿಘಂಟುಗಳಲ್ಲಿ ಗುರುತಿಸಿರುತ್ತಾರೆ. ಇಂಗ್ಲಿಷಿನಲ್ಲಿ ಈ ಬಗೆಯ ಕಾರ್ಯ ಮೊದಲು **The Bible** ಗ್ರಂಥಕ್ಕೆ ತಯಾರಾಯಿತು.

ಕನ್ನಡದಲ್ಲಿ ಈ ಬಗೆಯ ಕೆಲಸವನ್ನು ಮೊದಲು ಮಾಡಿದ ಕೀರ್ತಿ ಡಾ. ಬಿ. ರಾಮಚಂದ್ರರಾವ್ ಅವರಿಗೆ ಸೇರಬೇಕು. ೧೯೭೨ರಲ್ಲಿ ಅವರು ಪ್ರಕಟಿಸಿದ 'A Descriptive Grammar of Pampa Bharata' ಎಂಬ ಗ್ರಂಥದಲ್ಲಿ ಪಂಪ ಭಾರತದಲ್ಲಿ ಪ್ರಯೋಗವಾಗಿರುವ ಎಲ್ಲ ಕನ್ನಡ ಶಬ್ದಗಳನ್ನೂ ಅಕಾರಾದಿಯಾಗಿ ಪಟ್ಟಿ ಮಾಡಲಾಗಿದೆ. ಆದರೆ ಇದು ಇಂಗ್ಲಿಷ್ ಭಾಷೆಯಲ್ಲಿದೆ. ಎಲ್ಲ ಪ್ರಯೋಗಗಳಿಗೂ ಅರ್ಥವನ್ನು ನೀಡಲಾಗಿದೆ. ಇಂಥವು ಇನ್ನೂ ಕೆಲವು ಪ್ರಕಟವಾಗಿವೆ. ಕೆಲವು ಪ್ರಕಟಣೆಗೆ ಸಿದ್ಧವಾಗಿವೆ.

ಮುದ್ರಿತವಾಗಿರುವ ಕೋಶಗಳು :

೧.	ಬಸವ ಪದಪ್ರಯೋಗ ಕೋಶ-ಎಸ್.ಆರ್. ಗುಂಜಾಳ್	೧೯೭೩
೨.	ತೋಂಟದ ಸಿದ್ಧಲಿಂಗಯತಿಗಳ ಪದಪ್ರಯೋಗ ಕೋಶ ಎಸ್.ಆರ್. ಗುಂಜಾಳ್	೧೯೮೩
೩.	Verbal Bases of Kumaravyasa- ಸಿ. ಓಂಕಾರಪ್ಪ	೧೯೮೩
೪.	ಶ್ರೀ ಸಿದ್ಧರಾಮೇಶ್ವರ ವಚನ ಪದ ಪ್ರಯೋಗ ಕೋಶ ಎಂ.ಎಸ್. ಪಾಟೀಲ್	೧೯೮೩
೫.	ಗೋವಿಂದಪ್ಪೈ ಪದಪ್ರಯೋಗಕೋಶ - ಎ.ವಿ. ನಾವಡ ಸಿ. ಉಪೇಂದ್ರ ಸೋಮಯಾಜಿ	೧೯೮೬
೬.	ಮುದ್ದಣ ಪದಪ್ರಯೋಗಕೋಶ - ಜಿ. ವೆಂಕಟಸುಬ್ಬಯ್ಯ	೧೯೯೬

ಇನ್ನೂ ಕೆಲವು ಕವಿಗಳ ಪದಪ್ರಯೋಗ ಕೋಶಗಳು ಸಿದ್ಧವಾಗುತ್ತಿವೆ.

ಒಂದೇ ಗ್ರಂಥಕ್ಕೆ ಸಂಬಂಧಪಟ್ಟಂತೆ ಜಟಿಲ ಸಮಸ್ಯೆಗಳನ್ನೆಲ್ಲ ಕುರಿತು ವಿವರಣೆಗಳನ್ನು ಕೊಡುವ ನಿಘಂಟಿಗೆ Exegetic Dictionary ಎಂದು ಇಂಗ್ಲಿಷಿನಲ್ಲಿ ಹೆಸರು. ಇದು ನಿಜವಾಗಿ ಒಂದು ಬಗೆಯ ಟೀಕೆಯಾಗುವ ಸಂಭವವಿದೆ. ಕನ್ನಡದಲ್ಲಿ ಇಂಥ ಎರಡು ಗ್ರಂಥಗಳಿವೆ.

೧. ಪಂಪಭಾರತ ದೀಪಿಕೆ (೧೯೭೧) ಡಿ.ಎಲ್. ನರಸಿಂಹಾಚಾರ್.

೨. ವಡ್ಡಾರಾಧನೆ (೧೯೭೦) ಡಿ.ಎಲ್. ನರಸಿಂಹಾಚಾರ್.

ಇವುಗಳಲ್ಲಿ ಮೊದಲನೆಯ ಗ್ರಂಥದ ಕೆಲವು ವಿವರಣೆಗಳಿಗೆ ಪೋಷಕ ವಿಷಯಗಳನ್ನು ಸೇರಿಸಿ, ರಂ.ಶ್ರೀ. ಮುಗಳಿಯವರು "**ದೀಪಿಕೆಯ ಬೆಳಕಿನಲ್ಲಿ**" ಎಂಬ ಲೇಖನವನ್ನು ಬರೆದಿದ್ದಾರೆ.

ಇದಲ್ಲದೆ ಸಸ್ಯಶಾಸ್ತ್ರ, ಮೂಲಿಕೆಗಳು, ನೃತ್ಯ, ಶಿಕ್ಷಣ, ಔಷಧಿಶಾಸ್ತ್ರ, ಆಡಳಿತ, ಸಂಗೀತ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿರುವ ಅನೇಕ ನಿಘಂಟುಗಳು ಪ್ರಕಟವಾಗುತ್ತಿವೆ. ಆದರೆ ಒಂದು ನಿಘಂಟು ತಯಾರಾಗಬೇಕಾದರೆ ಏನು ಸಿದ್ಧತೆಗಳು ಬೇಕು ಎಂಬುದರ ಪರಿಚಯವಿಲ್ಲದೆ ಅನೇಕ ಗ್ರಂಥಗಳು ಉಪಯೋಗಕ್ಕೆ ಬರಲಾರದಾಗಿವೆ.

ಈ ಬಗ್ಗೆ ಎಲ್ಲ ಕ್ಷೇತ್ರದ ವಿದ್ವಾಂಸರೂ ಒಗ್ಗೂಡಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡರೆ ಒಟ್ಟುನಾಡಿಗೂ, ಭಾಷೆಗೂ ಆಯಾ ಕ್ಷೇತ್ರದ ಬೆಳವಣಿಗೆಗೂ ತುಂಬ ಸಹಾಯವಾಗುತ್ತದೆ.

೮. ಕಿಟ್ಟೆಲ್ ನಿಘಂಟಿನ ಪರಿಷ್ಕರಣ

ಮದರಾಸು ವಿಶ್ವವಿದ್ಯಾನಿಲಯವು ಕಿಟ್ಟೆಲ್‌ನ ನಿಘಂಟನ್ನು ಪರಿಷ್ಕರಿಸಿ ೧೯೭೧ರಲ್ಲಿ ಮುದ್ರಿಸಿ ಪ್ರಕಟಿಸಿದೆ. ಇದನ್ನು ಪರಿಷ್ಕರಿಸಿದ ಪ್ರೊ. ಎಂ. ಮರಿಯಪ್ಪಭಟ್ಟರು ತಮ್ಮ ಪರಿಷ್ಕರಣದ ಬಗ್ಗೆ ಹೇಳಿರುವ ಮಾತುಗಳು ಹೀಗಿವೆ : ಕಿಟ್ಟೆಲ್‌ಗೆ ಅತಿಪ್ರಾಚೀನ ಮಹಾಕಾವ್ಯಗಳು ದೊರಕಿರಲಿಲ್ಲ. ಪಂಪನ ಆದಿಪುರಾಣ, ಅಭಿನವ ಪಂಪನ ರಾಮಾಯಣ, ಕೆಲವು ನಡುಗನ್ನಡ ಗ್ರಂಥಗಳು, ವೀರಶೈವ ವಚನನಗಳು ಇವು. ವೀರಶೈವ ವಚನಗಳಂತೂ ಅನೇಕ ಪ್ರದಾನೋಲ್ಲೇಖಗಳಿಗೆ ಒಂದು ಗಣಿಯ ರೂಪದಲ್ಲಿದೆ. ಈಗ ಕಿಟ್ಟೆಲ್‌ನ ಗ್ರಂಥದ ಅಲ್ಪಪ್ರಮಾಣದ ಪರಿಷ್ಕರಣವನ್ನು ಮಾಡಲಾಗಿದೆ. ಮೊದಲನೆಯದಾಗಿ ಕವಿರಾಜಮಾರ್ಗ, ಪಂಪಭಾರತ, ಆದಿಪುರಾಣ, ಆದಿಗದ್ಯ ಗ್ರಂಥವಾದ ವಡ್ಡಾರಾಧನೆ ಇವುಗಳನ್ನು ವ್ಯಾಸಂಗ ಮಾಡಿ ಶಬ್ದಗಳನ್ನು ಆರಿಸಲಾಗಿದೆ. ಆದುದರಿಂದ ಅತ್ಯಂತ ಪ್ರಾಚೀನ ಕನ್ನಡ ಗ್ರಂಥಗಳಿಂದ ಎಲ್ಲ ಪ್ರಮುಖ ಶಬ್ದಗಳನ್ನು ಈ ಪರಿಷ್ಕೃತ ನಿಘಂಟಿನಲ್ಲಿ ಕಾಣಬಹುದು. ಸಂಸ್ಕೃತ ಶಬ್ದಗಳನ್ನು ಬಿಟ್ಟು, ದೇಶ್ಯ ಶಬ್ದಗಳನ್ನು ಸೇರಿಸಲಾಗಿದೆ. ಕಿಟ್ಟೆಲ್‌ನ ನಿಘಂಟಿನ ವಿಮರ್ಶಕರು ತಿಳಿಸಿರುವಂತೆ ಕೆಲವು ಶಬ್ದಗಳಿಗೆ ಸರಿಯಾದ ಸ್ಥಳಗಳಲ್ಲಿ ಶಬ್ದಾರ್ಥಗಳನ್ನು ಕೊಟ್ಟಿರಲಿಲ್ಲ. ಈಗ ಸರಿಯಾದ ಕಡೆಗಳಲ್ಲಿ ಅರ್ಥವನ್ನು ನೀಡಲಾಗಿದೆ. ಇವುಗಳಲ್ಲಿ ಕೆಲವು ಶಬ್ದಗಳೂ ಹೊಸದಾಗಿ ಸೇರಿದ ಶಬ್ದಗಳಾಗಿವೆ. ಅರ್ಥವನ್ನು ನಿರ್ಧಾರ ಮಾಡಲು ಗ್ರಂಥಗಳಿಂದ ವಾಕ್ಯ ಭಾಗಗಳನ್ನು ಸೇರಿಸಲಾಗಿದೆ. **ತಪ್ಪುಗಳನ್ನು ತಿದ್ದಲು ಪ್ರಯತ್ನಿಸಲಾಗಿದೆ. ತಪ್ಪಿದ್ದ ವ್ಯುತ್ಪತ್ತಿಯನ್ನು ಸರಿಪಡಿಸಲಾಗಿದೆ.**

ಪರಿಷ್ಕರಣದ ಸಂಪಾದಕರ ಮಾತಿನ ಪ್ರಕಾರ ಈ ಹೊಸ ಮುದ್ರಣದಲ್ಲಿ ೭೮೦೦ ಹೊಸ ಶಬ್ದಗಳು ಸೇರಿವೆ. ಈ ಕಾರ್ಯವನ್ನು ಮಾಡಲು ಒಂಬತ್ತು ವರ್ಷಗಳು ಹಿಡಿದವು. ಎಲ್ಲ ಹೊಸ ಶಬ್ದಗಳನ್ನು ತಿಳಿಸಲು ಒಂದು ನಕ್ಷತ್ರ ಚಿಹ್ನೆಯನ್ನು ಉಪಯೋಗಿಸಲಾಗಿದೆ.

ಇಂಥ ಕೆಲವು ಶಬ್ದಗಳನ್ನು ನಾವು ಮತ್ತೆ ಪರಿಶೀಲಿಸೋಣ. ಕವಿರಾಜಮಾರ್ಗದ ೩-೧೮೬ರಲ್ಲಿ ಕಾಣುವ ಶಬ್ದ **ಪೋಲಿ***ಈ ಶಬ್ದಕ್ಕೆ Some Territory ಎಂಬ ಅರ್ಥವನ್ನು ಕೊಡಲಾಗಿದೆ. ಇದಕ್ಕೆ ಯಾವ ವ್ಯುತ್ಪತ್ತಿಯನ್ನೂ ನೀಡಲಾಗಿಲ್ಲ. ಇಂಗ್ಲಿಷಿನಲ್ಲಿ Territory ಶಬ್ದಕ್ಕೆ 1. extent of land under Jurisdiction of a Ruler, 2 organized division of a country, 3. area defended by animal or human or by team in game ಎಂದು ವಿವರಿಸಲಾಗಿದೆ. ನಿಜವಾಗಿ ಪೋಬಲಿ* ಎಂಬುದು ಒಂದು ಸಮಾಸ. ಅದು **ಪೋದ + ಬಲಿ** ಎಂಬ ಎರಡು ಶಬ್ದಗಳು ಸೇರಿ ಆಗಿರುವ ಸಮಾಸ. ಈ ಶಬ್ದವು ಇರುವ ಕಾವ್ಯಭಾಗ ಹೀಗಿದೆ:

ಸ್ಮರನಸ್ತ್ರ ಸಮಿತಿಯದು ನಿರ್ಭರಮಂಗಮನುರ್ಚಿ ಪೋಗೆಯುಂ ಪೋಬಟೆಯಂ ದೊರೆಕೊಳಿಸಲಾಗದು. ಮನ್ಮಥನ ಬಾಣಸಮೂಹವು ದೇಹವನ್ನು ಚುಚ್ಚಿ ಹೊರಕ್ಕೆ ಹೋಗಿದ್ದರೂ ಅವು ನುಗ್ಗಿ ಹೊರಹೋದ ಸ್ಥಳವನ್ನು ಗುರುತಿಸಲಾಗಲಿಲ್ಲ. ಇಲ್ಲಿ ಈ ಶಬ್ದದ ಅರ್ಥವೂ ವ್ಯುತ್ಪತ್ತಿಯೂ ಸ್ಪಷ್ಟ. ಒಂದು ತಾಲ್ಲೂಕಿನ ಪ್ರಮುಖವಾದ ಊರು, **ಹೋಬಳಿ** ಎಂಬ ಶಬ್ದಕ್ಕೂ ಇದಕ್ಕೂ ಸಂಬಂಧವಿಲ್ಲ. ಹೋಬಳಿಯ ಅರ್ಥ ವ್ಯುತ್ಪತ್ತಿ ಎರಡೂ ಪರಿಶೀಲಿಸಬೇಕಾದವು. ಅವು ಬೇರೆಯೇ ಆದವು ಎಂಬುದನ್ನು ಗಮನದಲ್ಲಿಡಬೇಕು.

ಇನ್ನೊಂದು ಶಬ್ದವನ್ನು ನೋಡೋಣ : **ಅಕ್ಕರಗೊಟ್ಟಿ** ಇದಕ್ಕೆ ವಿದ್ವಾಂಸರ ಸಭೆ ಎಂದು ಅರ್ಥ. ಅರ್ಥವನ್ನು ಸಂಪಾದಕರು ಸರಿಯಾಗಿಯೇ ಗುರುತಿಸಿದ್ದಾರೆ. ವ್ಯುತ್ಪತ್ತಿ ಭಾಗದಲ್ಲಿ ಇದು **ಅಕ್ಷರಗೋಷ್ಠಿ** ಎಂಬ ಸಂಸ್ಕೃತದ ಶಬ್ದದ ತದ್ಭವ ಎಂದು ತಿಳಿಸಲಾಗಿದೆ. ಸಂಸ್ಕೃತದಲ್ಲಿ **ಅಕ್ಷರಗೋಷ್ಠಿ** ಎಂಬ ಶಬ್ದವನ್ನು ಯಾರೂ ಪ್ರಯೋಗಿಸಿಲ್ಲ. ಆದುದರಿಂದ **ಅಕರಗೊಟ್ಟಿ** ಎಂಬುದ ಅಕ್ಕರ ಮತ್ತು ಗೊಟ್ಟಿ ಎಂಬ ಎರಡು ತದ್ಭವಗಳು ಸೇರಿ ಆಗಿರುವ ಕನ್ನಡ ಸಮಾಸ ಎಂದೇ ತಿಳಿಸಬೇಕು.

ಮತ್ತೊಂದು ಪದವನ್ನು ಪರಿಶೀಲಿಸೋಣ. **ಯಾನೆ** ಎಂಬ ಶಬ್ದವನ್ನು ಮುಖ್ಯ ಉಲ್ಲೇಖವನ್ನಾಗಿ ಮಾಡಿ ಅದಕ್ಕೆ ವಡ್ಡಾರಾಧನೆಯ ಒಂದು ವಾಕ್ಯವನ್ನು ಆಧಾರವನ್ನಾಗಿ ಕೊಡಲಾಗಿದೆ. ಆ ಭಾಗ ಹೀಗಿದೆ : **ಚಂದನಮಲಯವೆಂಬ ಪಿರಿಯ ಪರ್ವತದೊಳ್ ಮಲಯ ಸುಂದರನೆಂಬಾನೆಯುಂಟು. ಆಯಾನೆಯಂ ತಂದಂದು ಗಂಡರ್ ನಿನ್ನನ್ನರ್ ಈ ಭುವನದೋಳಾರುಮಿಲ್ಲ** (೩೪-೨೫). ಇಲ್ಲಿ **ಆಯಾನೆಯಂ** ಎಂಬಲ್ಲಿ **ಯಾನೆ** ಎಂಬ ಪದವೇ ಇಲ್ಲ. ಆ + ಆನೆ = ಆಯಾನೆ. ಇದು ಯಕಾರಾಗಮ ಸಂಧಿ. ಆದುದರಿಂದ ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿರುವಂತೆ ಕನ್ನಡದಲ್ಲಿಯೂ **ಯಾನೆ** ಎಂಬ ಶಬ್ದವಿದೆ ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ.

ವಡ್ಡಾರಾಧನೆಯಲ್ಲಿ ಭಟ್ಟರು **ಲವಟು** ಎಂಬ ಶಬ್ದವನ್ನು ಗುರುತಿಸಿದ್ದಾರೆ (೬೨-೩). **ಆ ವಟು** ಎಂದು ಸುಲಭವಾಗಿ ಗುರುತಿಸಬಹುದಾದ ರೂಪವನ್ನು ತಿರಸ್ಕರಿಸಿ ಸಂಸ್ಕೃತದಲ್ಲಿ ಎಲ್ಲಿಯೂ ಕಾಣಬರದ **ಲವಟು** ಶಬ್ದಕ್ಕೆ ಅಸ್ತಿತ್ವವನ್ನು ನೀಡಿರುವುದು ಸರಿಯಲ್ಲ.

ಪಂಪಭಾರತದಲ್ಲಿ ಬರುವ ಒಂದು ಶಬ್ದದ ಕಥೆ ಸ್ವಾರಸ್ಯವಾಗಿದೆ. ಆ ಕಾವ್ಯದಲ್ಲಿ ಬರುವ **ಬಾಡ** ಎಂಬ ಪ್ರಸ್ತುತ ಶಬ್ದವಿರುವ ಕಾವ್ಯಭಾಗವು ಹೀಗಿದೆ : **ಮದಮಂ ಮುಕ್ಕುಳಿಸಿರ್ದ ಇಭಂಗಳನ್ ಉದಗ್ರಾಶ್ವಂಗಳಂ ತಕ್ಕಿನಗ್ಗದ ಬಾಡಂಗಳನ್ ಆಯ್ದು ಕೊಟ್ಟು ತಣಿದೆಂ ಪೋ ಸಾಲ್ಗುಂ ಎಂಬನ್ನಂ** (೨-೫೩). ಇಲ್ಲಿನ ಸಂದರ್ಭ ಹೀಗಿದೆ: ಭೀಷ್ಮನು ದ್ರೋಣನಿಗೆ ಸನ್ಮಾನ ಮಾಡಿ ಕೌರವರ ಪಾಂಡವರ ಶಿಕ್ಷಣವನ್ನು ಕೈಗೊಳ್ಳಬೇಕೆಂಬುದು ಸನ್ನಿವೇಶ. ಇದರ ಹಾಗೆಯೇ **ಬಾಡ** ಎಂಬ ಶಬ್ದವು ಬರುವ ಒಂದು ಸನ್ನಿವೇಶವಿದೆ, ವಡ್ಡಾರಾಧನೆಯಲ್ಲಿ (೧೮೫-೨). ಆ ಭಾಗ ಹೀಗಿದೆ : ಸುಬಂಧು ಒಂದು ದಿವಸಂ ಚಾಣಕ್ಯನಂ ಕಂಡಿಂತೆಂದಂ: "ನಿಮಗೆ ದಾರಿದ್ರ್ಯ ಮೋಕ್ಷಮಕ್ಕು. ಷಷ್ಟಿಗ್ರಾಮಸಮನ್ವಿತಮಪ್ಪ ಅಗ್ರಾಸನಮಂ ಅರಸನಂ

ಬೇಡಿಕೊಂಡೊಡೆ ಸುಖದಿಂ ಬಾಟ್ವಿರೆನೆ, ಆತನುಂ ಅಂತೆಗೆಯ್ವೆನೆಂದು ಅರಸನಂ ಕಂಡುಪಶ್ಲೋಕಿಸಿ ಅಗ್ರಾಸನಮಂ ಬೇಡಿಕೊಂಡಡೆ ಅರಸನುಂ ಮೆಚ್ಚಿಕೊಟ್ಟನ್ ಇಂತು ಅಗ್ರಾಸನಮನುಣುತ್ತುಂ ಅಜುವತ್ತು **ಬಾಡ**ವನಾಳುತ್ತುಂ ಕಾಲಂಸಲೆ"

ಈ ಎಲ್ಲ ಉದಾಹರಣೆಗಳಲ್ಲಿ **ಬಾಡ** ಎಂಬ ಶಬ್ದಕ್ಕೆ ಗ್ರಾಮ ಎಂದೇ ಅರ್ಥ. ಮರಿಯಪ್ಪ ಭಟ್ಟರ ಪರಿಷ್ಕರಣದಲ್ಲಿ **ಬಾಡು** ಶಬ್ದಕ್ಕೆ ತೋಟ ಎಂಬ ಅರ್ಥವನ್ನು ನೀಡಲಾಗಿದೆ. ಕಿಟ್ಟೆಲ್ ತನ್ನ ನಿಘಂಟಿನಲ್ಲಿ **ಬಾಡ** ಶಬ್ದವನ್ನು ಸಂಸ್ಕೃತದ ವಾಟದ ತದ್ಭವ ಎಂದು ನಿರ್ಧಾರ ಮಾಡಿರುವುದು ನಿಜ. ಅಲ್ಲಿಯೇ ಮೊದಲ ತಪ್ಪಾಗಿರುವುದು ಬಹುಬೇಗ ತಿಳಿದುಬರುತ್ತದೆ. ಕಿಟ್ಟೆಲ್‌ನು ಶಬ್ದವನ್ನು ವಿಭಜಿಸಿರುವುದೇ ಸರಿಯಾಗಿಲ್ಲ ಆದುದರಿಂದ ತಪ್ಪಾಗಿದೆ. ಕಿಟ್ಟೆಲ್ ಹಲಾಯುಧನ ಗ್ರಂಥದಿಂದ ಒಂದು ಭಾಗವನ್ನು ಆರಿಸಿಕೊಂಡಿದ್ದಾನೆ. ಅದು ಹೀಗಿದೆ :

"**ಶಾಕಶಾಕಟಂ, ಶಾಕಶಾಕಿನಂ**-ಈ ೨ ಬಾಡುಕಾಯ ತೋಂಟಂ" 'ಶಾಕಶಾಕಟಂ, ಶಾಕಶಾಕಿನಂ' ಎಂಬ ಎರಡೂ ಬಾಡುಕಾಯನ್ನು ಬೆಳೆಯುವ ತೋಟ ಎಂದು ಅರ್ಥ. **ಬಾಡು**ಶಬ್ದಕ್ಕೆ ತರಕಾರಿ, ಕಾಯಿಪಲ್ಯ, ನಂಚಿಕೊಳ್ಳಲು ಪದಾರ್ಥವನ್ನು ಸಿದ್ಧ ಮಾಡಲು ಉಪಯೋಗಿಸುವ ಕಾಯಿ ಎಂದರ್ಥ. ವಡ್ಡಾರಾಧನೆಯಲ್ಲಿ ಬರುವ (೭೮-೧೬) ಈ ಭಾಗವನ್ನು ಗಮನಿಸಿ.

"ತುಪ್ಪಮಂ ತಲವು ತೆಱದ **ಬಾಡು**ಗಳುಂ, ತುಯ್ಯಲುಂ ಪದಿನೆಂಟು ತೆಱದ ಭಕ್ಷ್ಯ ರೂಪಂಗಳುಮಂ ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ" ಇಲ್ಲಿ ಬಾಡು = ಕಾಯಿಪಲ್ಯ, ತರಕಾರಿ. ಈ ಉದಾಹರಣೆಯಿಂದ ಬಾಡು ಶಬ್ದಕ್ಕೆ **ತೋಟ** ಎಂಬ ಅರ್ಥ ಹೇಗೆ ಬರಲಾರದೆಂಬುದು ಎಲ್ಲರಿಗೂ ತಿಳಿಯುವ ವಿಷಯ. **ಬಾಡುಕಾಯ್** ಎಂಬುದೇ ಸರಿಯಾದ ಶಬ್ದವೆನ್ನುವುದಕ್ಕೆ ನಾನು ಇತರ ವಾಕ್ಯಗಳನ್ನು ಆಧಾರವಾಗಿ ಕೊಡಬಲ್ಲೆ.

ಎ.ಇ. xix 33-30, 1135 ಈ ಶಾಸನದ ಭಾಗ ಹೀಗಿದೆ : **ಬಾಡುಕಾಯೆಂಬವು** ಭಂಡಿಗೆ ಹತ್ತು ತಲೆವೊಱೆಗೆ ನಾಲ್ಕಕ್ಕು ಈ ವಾಕ್ಯಕ್ಕೆ ಅರ್ಥ-ಒಂದು ಬಂಡಿ **ಬಾಡುಕಾಯನ್ನು** ಕಂಡರೆ ಅದಕ್ಕೆ ಹತ್ತು **ಬಾಡುಕಾಯಿ** ಸುಂಕ ಒಂದು ತಲೆ ಹೊರಗೆ ನಾಲ್ಕು **ಬಾಡುಕಾಯಿ** ಸುಂಕ ಎ.ಇ. V. 20-69, 1161- ಈ ಶಾಸನದ ಭಾಗ ಹೀಗಿದೆ : ಮಾಱುವ ಹೆಡಗೆಯ ಹಣ್ಣು ಹಂಪಲ **ಬಾಡುಕಾಯ್ಗೆ** ಹಿಡಿಬಾಡು, ಹಿಡಿಹಣ್ಣಂ ಕೊಟ್ಟರ್.

ಸೌ.ಇ.ಇ. xx,24, 76-1228- ಈ ಶಾಸನದ ಭಾಗ ಹೀಗಿದೆ : ತಂದು ಮಾಱುವ **ಬಾಡುಕಾಯಿಗೆ** ತಿಪ್ಪೆಸುಂಕವ ಕೊಟ್ಟರ್. ಹೀಗಿರುವುದರಿಂದ ಭಟ್ಟರು **ಬಾಡು** ಶಬ್ದವನ್ನು **ವಾಟ** ಶಬ್ದದಿಂದ ಬಂದುದೆಂದೇ ತೀರ್ಮಾನಿಸಿರುವುದು ಸರಿಯಲ್ಲ.

ಮುನ್ನೀರ್ ಶಬ್ದದ ವ್ಯುತ್ಪತ್ತಿ

ಮುನ್ನೀರ್ ಎಂದರೆ ಸಮುದ್ರ. ಈ ಶಬ್ದ ಅಭಿನವ ಪಂಪನೆಂಬ ಹೆಸರುಳ್ಳ ನಾಗಚಂದ್ರ ಕವಿಯ ರಾಮಚಂದ್ರ ಪುರಾಣವೆಂಬ ಅಥವಾ ಪಂಪರಾಮಾಯಣ ಎಂಬ ಕಾವ್ಯದಲ್ಲಿ,

೯ನೆಯ ಆಶ್ವಾಸದಲ್ಲಿ ೯೨ನೆಯ ಪದ್ಯದಲ್ಲಿ ಬರುತ್ತದೆ. ರಾವಣನು ಸೀತೆಯನ್ನು ಅಪಹರಿಸುವ ನಿರ್ಧಾರವನ್ನು ಮಾಡಿ ತನ್ನ 'ಅವಲೋಕಿನೀ ವಿದ್ಯೆ' ಎಂಬ ಶಕ್ತಿಯನ್ನು ಆಹ್ವಾನಿಸಿ ತನ್ನ ಉದ್ದೇಶವನ್ನು ತಿಳಿಸಿ ಸೀತೆಯನ್ನು ರಾಮಲಕ್ಷ್ಮಣರಿಂದ ಬೇರೆ ಮಾಡುವ ಉಪಾಯ ಯಾವುದು ಎಂದು ಕೇಳುತ್ತಾನೆ. ಆಗ ಅವಲೋಕಿನೀ ವಿದ್ಯೆಯು ರಾವಣನಿಗೆ ಬುದ್ಧಿ ಹೇಳುವಾಗ ಈ ಪದ್ಯ ಬಂದಿದೆ :-

ಅನ್ನೆಯದಿಂ ನಡೆವವರಂ
ನೀನ್ನಿಯಮಿಸುವೈ ದಶಾಸ್ಯ ಪೇಱನಾವಂ
ನಿನ್ನಂ ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೋಳವೇ?

ಇದಕ್ಕೆ ಅರ್ಥ 'ಎಲೈ ದಶಕಂಠನಾದ ರಾವಣನೇ ಅನ್ಯಾಯದಿಂದ ನಡೆಯುವವರನ್ನು ನೀನೇ ನಿಯಮಕ್ಕೆ ಒಳಗು ಮಾಡುತ್ತೀಯೆ. ಆದರೆ ನಿನ್ನನ್ನು ನ್ಯಾಯದ ನಿಯಮಕ್ಕೆ ಬಾಗು ಎಂದು ಹೇಳುವವರು ಯಾರಿದ್ದಾರೆ? ಸಮುದ್ರವೇ ಕುದಿಯುವ ನೀರಾದರೆ ಅದನ್ನು ತಣ್ಣಗೆ ಮಾಡುವಂತೆ ಬೆರೆಸಲು ತಣ್ಣೀರನ್ನು ಎಲ್ಲಿಂದ ತರಬೇಕು? ಅದು ಎಲ್ಲಾದರೂ ಇದ್ದೀತೆ?'

ನೀನು ಹೀಗೆ ಮಾಡಬಾರದು. ನನಗೆ ನಿನ್ನನ್ನು ನಿಯಮಿಸಲು ಸಾಧ್ಯವಿಲ್ಲ. ಹೀಗೆ ಮಾಡಬೇಡ ಎಂದು ಬುದ್ಧಿ ಹೇಳುತ್ತೇನೆ, ಎಂದು ಇದರ ಅರ್ಥ.

ಮುನ್ನೀರ್, ಬಹು ಪ್ರಾಚೀನವಾದ ಶಬ್ದ. ಶಾಂತಿ ಪುರಾಣದಿಂದ ಹಿಡಿದು ಈಚಿನ ಕಾವ್ಯಗಳಲ್ಲಿಯೂ ದೊರಕುತ್ತದೆ. **ಮುನ್ನೀರ್ = ಮುನ್ನಿನ + ನೀರ್** ಭೂಮಿಗಿಂತ ಮೊದಲು ಸೃಷ್ಟಿಯಾದುದು, ಕಡಲು, ಸಮುದ್ರ. ಸಮುದ್ರವೆಲ್ಲ ಬಿಸಿಯಾಗಿ ಕುದಿಯಲು ಮೊದಲು ಮಾಡಿದರೆ ಅದನ್ನು ತಣ್ಣಗೆ ಮಾಡಲು ಸಾಕಾಗುವಷ್ಟು ತಣ್ಣೀರು ಎಲ್ಲಿ ತಾನೇ ಸಿಕ್ಕುತ್ತದೆ? ಎಂಬುದು ಅವಲೋಕಿನೀ ವಿದ್ಯೆಯ ಸಾಂತ್ವನದ ಮಾತು. ಆದರೆ ರಾವಣ ಕೇಳಬೇಕಲ್ಲ! ಕೇಳಲಿಲ್ಲ — ನಾಶವಾದ.

'ಸಮುದ್ರವು ಮೊದಲು ನಿರ್ಮಾಣವಾಯಿತು ಎಂಬುದಕ್ಕೆ ಆಧಾರವೇನು?' ಎಂದು ಕೆಲವರು ಕೇಳಿದ್ದಾರೆ. ಅದಕ್ಕೆ ಉತ್ತರ ಇಲ್ಲಿದೆ.

ಮನು ಧರ್ಮಶಾಸ್ತ್ರದಲ್ಲಿ ಮೊದಲ ಅಧ್ಯಾಯದಲ್ಲಿ ೫ರಿಂದ ೯ ಶ್ಲೋಕಗಳವರೆಗೆ ಈ ಬಗ್ಗೆ ವಿವರಣೆ ಇದೆ. ಆ ಭಾಗದ ಕನ್ನಡ ಅನುವಾದವನ್ನು ಇಲ್ಲಿ ಶ್ಲೋಕಸಹಿತ ತಿಳಿಸುತ್ತಿದ್ದೇನೆ.

ಆಸೀದಿದಂ ತಮೋಭೂತಂ
ಅಪ್ರಜ್ಞಾತಮಲಕ್ಷಣಂ
ಅಪ್ರತರ್ಕ್ಯಮವಿಜ್ಞೇಯಂ
ಪ್ರಸುಪ್ತಮಿವ ಸರ್ವತಃ ॥ ೫ ॥

ಎಲ್ಲಕ್ಕೂ ಮೊದಲು ಈ ಜಗತ್ತೆಲ್ಲವೂ ಮೂಲ ಪ್ರಕೃತಿಯಲ್ಲಿಯೇ ಅಡಗಿ, ಇಂದ್ರಿಯಗಳಿಗೆ ಅಗೋಚರವಾಗಿ, ಯಾವ ಲಕ್ಷಣವೂ ಇಲ್ಲದೆ, ತರ್ಕಶಕ್ತಿಯಿಂದ ಕೂಡ ತಿಳಿಯಲಾಗದೆ, ಸದಾ ನಿದ್ರಾಸಕ್ತನಂತೆ ಸಮರ್ಥವಾಗಿತ್ತು.

ತತಃಸ್ವಯಂಭೂರ್ಭಗವಾನ್
ಅವ್ಯಕ್ತೋ ವ್ಯಂಜಯನ್ನಿದಂ
ಮಹಾಭೂತಾದಿ ವೃತ್ತೌಜಾಃ
ಪ್ರಾದುರಾಸೀತ್ತಮೋನುದಃ ॥ ೬ ॥

ಆಮೇಲೆ ಸ್ವಯಂಭುವಾದ ಭಗವಂತನು, ಅವ್ಯಕ್ತನಾಗಿ, ಅಪ, ತೇಜ, ವಾಯ್ವಾದಿ ಪಂಚ ಮಹಾಭೂತಗಳನ್ನೂ ಪಂಚತತ್ವಗಳನ್ನೂ ನಿರ್ಮಿಸಿ, ಸೃಷ್ಟಿಯನ್ನು ಸ್ಥಾಪಿಸುವ ವಿಷಯವಾಗಿ ಪ್ರಕೃತಿಯನ್ನು ಪ್ರೇರಿಸಿ, ತಾನು ಪ್ರಕಟನಾದನು.

ಯೋ ಸಾವತೀಂದ್ರಿಯ ಗ್ರಾಹ್ಯಃ
ಸೂಕ್ಷ್ಮೋऽವ್ಯಕ್ತಃ ಸನಾತನಃ
ಸರ್ವಭೂತಮಯೋऽಚಿಂತ್ಯಃ
ಸ ಏವ ಸ್ವಯಮುದ್ಬಭೌ ॥ ೭ ॥

ಅತೀಂದ್ರಿಯದಿಂದ ಮಾತ್ರ ಗ್ರಹಿಸಲು ಯೋಗ್ಯನಾದ, ಅವ್ಯಕ್ತನಾದ, ಸನಾತನನಾದ ಪರಮಾತ್ಮನು ತಾನೇ ಮಹತ್ತಾದ ಆದಿಕಾರ್ಯ ರೂಪದಿಂದ ಪ್ರಕಟನಾದನು.

ಸೋಽಭಿಧ್ಯಾಯ ಶರೀರಾತ್
ಸ್ವಾತ್ಸಿಸೃಕ್ಷುಃ ವಿವಿಧಾಃ ಪ್ರಜಾಃ
ಅಪಏವಸಸರ್ಜಾದೌ
ತಾಸುಬೀಜಮವಾಸೃಜತ್ ॥ ೮ ॥

ಆ ಬಳಿಕ ತನ್ನ ಶರೀರದಿಂದ ಅನೇಕ ಪ್ರಜೆಗಳನ್ನು ನಿರ್ಮಾಣ ಮಾಡಬೇಕೆಂದು ಅಪೇಕ್ಷೆಪಟ್ಟು 'ಮೊದಲು ನೀರಾಗಲಿ' ಎಂದು ಚಿಂತಿಸಿದನು. ಆ ಕೂಡಲೇ ನೀರಿನ ಉತ್ಪನ್ನವಾಯಿತು. ಅದರಲ್ಲಿ ಪರಮಾತ್ಮನು ತನ್ನ ಶಕ್ತಿರೂಪವಾದ ಬೀಜವನ್ನು ಬಿತ್ತಿದನು.

ಆ ಬೀಜದಿಂದ ಮೊಟ್ಟೆ (ಅಂಡ) ಆಯಿತು. ಅದರಲ್ಲಿ ಬ್ರಹ್ಮನು ಹುಟ್ಟಿದನು. ಹೀಗೆ ಉತ್ಪನ್ನವಾದ ವಸ್ತುವಿಗೆ ನಾರಾಯಣ ಎಂದು ಹೆಸರಾಯಿತು (ನಾರಾ = ನೀರು ನರ = ಪರಮಾತ್ಮ + ಅ ನ = ಸ್ಥಾನ) = ನಾರಾಯಣ.

ಪರಮಾತ್ಮನು **'ಆತ್ಮೇ ಜಾಯನ್ತಾಮ್'** ಎಂದು ಧ್ಯಾನ ಮಾಡಿದ ಮಾತ್ರದಿಂದ ನೀರು, (ಮುನ್ನೀರು) ಉಂಟಾಯಿತೆಂದು ನಮ್ಮ ಧರ್ಮದ ನಂಬಿಕೆ.... ಇದೇ ಮುನ್ನೀರು. ನೀರಿಗೆ **ಮೇಘಪುಷ್ಪ** ಎಂದೂ **ಘನರಸ** ಎಂದೂ ಹೆಸರಿರುವುದು ನಮ್ಮ ನೆನಪಿಗೆ ಬರಬಹುದು.

ಇವನ್ನೆಲ್ಲ ಶಾಸ್ತ್ರಾಭ್ಯಾಸದಿಂದ ಅರಿತಿದ್ದ ನಮ್ಮ ಕವಿಗಳು **ಮುನ್ನೀರ್** ಎಂಬ ಶಬ್ದವನ್ನು ಸೃಷ್ಟಿ ಮಾಡಿದ್ದಾರೆ. ಶಾಂತಿ ಪುರಾಣದಲ್ಲಿ ಈ ಮಾತಿದೆ.

'ಮುನ್ನೀರೊಳ್‌ನೆಲಸುಗುಮಲ್ಲದೆ ನೀರೊಳ್ ನೆಲಸುಗುಮೆ ಸಾರ ರತ್ನಾವಳಿಗಳ್' (೨-೩) ಸಾರವತ್ತಾದ ಬೆಲೆಬಾಳುವ ರತ್ನಾದಿಗಳು ಸಮುದ್ರದಲ್ಲಿ ನೆಲಸುತ್ತವೆಯಲ್ಲದೆ ಸಾಮಾನ್ಯವಾದ ನೀರಿನಲ್ಲಿ ನೆಲಸುತ್ತವೆಯೇ? ಎಂದು ಅರ್ಥ.

ಕ್ರಿ. ಶ. ೯೬೯ರ ಒಂದು ಶಾಸನದ ಕವಿ ತನ್ನ ಜಾಣ್ಮೆಯನ್ನು ಹೀಗೆ ಹೊಗಳಿಕೊಂಡಿದ್ದಾನೆ :

"ಮುನ್ನೀರ್ ಬಳಸಿರೆ ಧರಣಿಯೊಳಿನ್ನುಂ ಮಾಧುರ್ಯಸುಕರಚಾತುರ್ಯ ಗುಣಪ್ರೋನ್ನತರಿಲ್ಲೆನೆ ಶಾಸನಮನ್ನಿದೆ ಚೆಲ್ವಾಗೆ ಸಾಮಿಯಣ್ಣ ಬರೆದೋಂ". ನಮ್ಮ ಹಿಂದಿನ ನಿಘಂಟುಗಳಲ್ಲಿ ಕೂಡ **'ಮುನ್ನೀರೆನಲ್ ಶರಧಿ'** ಎಂಬ ಸ್ಪಷ್ಟವಾದ ಅರ್ಥ ಸೂಚನೆಯಿದೆ.

ಈ ಸಂದರ್ಭದಲ್ಲಿ ಒಂದು ವ್ಯಾಕರಣಾಂಶವನ್ನೂ ತಿಳಿಸಬೇಕು. ಮೂರು ಎಂಬ ಪದಕ್ಕೆ 'ನ'ಕಾರ ಪರವಾದಾಗ ಸಮಾಸದಲ್ಲಿ ಮೂ ಎಂದು ಆದೇಶವಾಗುತ್ತದೆಯೇ ಹೊರತು **ಮುನ್** ಎಂದು ಎಂದೂ ಆಗುವುದಿಲ್ಲ. ಮೂರು ಎಂಬ ಶಬ್ದವು ಸೇರಿ ಆದ ಇತರ ಸಮಾಸಗಳನ್ನು ನೋಡಿ: **ಮೂಗೊಂಕು, ಮೂಕೊಡೆ, ಮೂಗೊಳ, ಮೂಜಗ, ಮೂಗೋಡು, ಮೂದಿಟ್ಟ, ಮೂದಿರಿಕ, ಮೂದಿವಸ, ಮೂದೆರ, ಮೂದೇವರ್, ಮೂನೆಲ, ಮೂನೆಲೆ, ಮೂಮೆ. ಮೂನೂರು** ಎನ್ನುವುದೇ ಸರಿಯಾದ ಸಮಾಸ. ಈ ಸಮಾಸ ಪದ ಉಚ್ಚಾರಣೆಯಲ್ಲಿ ಮುನ್ನೂರು ಆಗಿದೆ. ಇದು ಮೂಱು ಎಂಬ ಆದೇಶಕ್ಕೆ ಸಂಬಂಧಪಟ್ಟದಲ್ಲ. ಕಿಟ್ಟೆಲ್-ನಿಘಂಟಿನಲ್ಲಿ ಕೊಟ್ಟಿರುವ **ಮುನ್ (ಮೂರು) + ನೀರ್ = ಮಳೆಯ ನೀರು, ನದಿಯ ನೀರು ಮತ್ತು ಒರತೆಯ ನೀರು** ಎಂಬ ಅರ್ಥ ವಿವರಣೆ ತಪ್ಪಾದುದು. ಇದನ್ನು ತಿದ್ದಬೇಕು. ಕನ್ನಡ-ಕನ್ನಡ ನಿಘಂಟಿನಲ್ಲಿ ಕಿಟ್ಟೆಲ್ ಹೇಳಿರುವುದನ್ನು ಓದುಗರ ಗಮನಕ್ಕೆ ನೀಡಲಾಗಿದೆಯೇ ಹೊರತು ಅದು ಸರಿಯೆಂದಲ್ಲ. ಮರಿಯಪ್ಪ ಭಟ್ಟರು ಇದನ್ನೂ ತಿದ್ದಬೇಕಾಗಿತ್ತು.

ಕಿಟ್ಟೆಲ್ ನಿಘಂಟನ್ನು ಪರಿಶೀಲಿಸುವಾಗ ಮೇಲೆ ತಿಳಿದ ತಪ್ಪುಗಳಿರುವುದರಿಂದ ಮರಿಯಪ್ಪ ಭಟ್ಟರು ಕಿಟ್ಟೆಲ್ ನಿಘಂಟಿಗೆ ಸೇರಿಸಿರುವ ೭೮೦೦ ಶಬ್ದಗಳನ್ನು ಮತ್ತೆ ನಿಧಾನವಾಗಿ ಪರಿಶೀಲಿಸಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಈಗ ಮತ್ತೆ ನಿಶ್ಚಯಿಸಬೇಕಾಗಿದೆ ಎಂಬ ಅಂಶವನ್ನು ನಾನು ಇಲ್ಲಿ ದಾಖಲಿಸಲು ಇಷ್ಟಪಡುತ್ತೇನೆ.

೯. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು

ಈಗ ನಮ್ಮ ಭಾಷೆಯಲ್ಲಿ ಪ್ರಕಟವಾಗಿರುವ ಸರಕಾರದ ಯೋಜನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನ ಬಗ್ಗೆ ಕೆಲವು ವಿವರಗಳನ್ನು ನೀಡಲು ಪ್ರಯತ್ನ ಪಡುತ್ತೇನೆ.

೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿ ನಿಘಂಟು ರಚನೆ ಎಂಬುದು ಮುಖ್ಯ ಉದ್ದೇಶಗಳಲ್ಲಿ ಒಂದೆಂದು ಉಲ್ಲೇಖಿಸಲಾಗಿದೆ. ಕನ್ನಡ ಸಾಹಿತ್ಯವು ಪ್ರಾಚೀನ ಗ್ರಂಥಗಳ ಮತ್ತು ಶಾಸನಗಳ ವ್ಯಾಸಂಗ ಹೆಚ್ಚಾದಂತೆಲ್ಲ ಒಂದು ಪ್ರೌಢವಾದ ಕನ್ನಡ ನಿಘಂಟಿನ ಆವಶ್ಯಕತೆ ಹೆಚ್ಚು ಹೆಚ್ಚಾಗಿ ಕಂಡುಬಂದಿತು. ಇದನ್ನು ಅರಿತು ೧೯೪೩ರಲ್ಲಿ ಪರಿಷತ್ತಿನ ಕಾರ್ಯಸಮಿತಿಯು ಪ್ರೊ। ಎ.ಆರ್. ಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ನಿಘಂಟು ಸಮಿತಿಯನ್ನು ನೇಮಿಸಿತು. ಅದಕ್ಕೆ ತೀ.ನಂ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿಯೂ ಡಿ. ಎಲ್. ನರಸಿಂಹಾಚಾರ್ಯರೂ ಮತ್ತು ಕ.ವೆಂ. ರಾಘವಾಚಾರ್ಯರೂ ಸಮಿತಿಯ ಸದಸ್ಯರಾಗಿಯೂ ನೇಮಕಗೊಂಡರು. ೧೯೪೪ರಲ್ಲಿ ನಿಘಂಟಿನ ಕಚೇರಿ ಪ್ರಾರಂಭವಾಯಿತು. ಈ ನಿಘಂಟಿಗೆ ಸಾಮಗ್ರಿಯನ್ನು ಶೇಖರಿಸಲು ೭೩ ವಿದ್ವಾಂಸರು ಒಪ್ಪಿದರು. ಈ ಸಾಮಗ್ರಿ ಈಗ ಸುಮಾರು ೧೫ ಲಕ್ಷ ಪಟ್ಟಿಕೆಗಳಾಗಿವೆ. ಇದನ್ನು ಉಲ್ಲೇಖ ಭಂಡಾರ (Scriptorium) ಎಂದು ಕರೆಯಬಹುದು. Scriptorium ಎಂದರೆ ಕ್ರೈಸ್ತ ಮಠಗಳಲ್ಲಿ ಲಿಪಿಕಾರರು ಕೆಲಸ ಮಾಡುವ ಕೊಠಡಿ. ಇದರಲ್ಲಿ ಎಲ್ಲ ಬರಹದ ಕಡತಗಳೂ ಇರುವುದರಿಂದ ಕಡತಗಳು ಇರುವ ಸ್ಥಳವೂ ಆಗುತ್ತದೆ. ಕನ್ನಡದಲ್ಲಿ ನಾವು ಉಲ್ಲೇಖಭಂಡಾರ ಎಂದು ಕರೆಯುವುದು ಸರಿಯಾದೀತು. ಸುಮಾರು ಹತ್ತು ಸಾವಿರ ಶಾಸನಗಳನ್ನೂ ಸುಮಾರು ೨೦೦೦ ಗ್ರಂಥಗಳನ್ನೂ ಆರಿಸಿ ಅವುಗಳಲ್ಲಿರುವ ಎಲ್ಲ ಶಬ್ದಗಳನ್ನೂ ಬಿಡಿ ಬಿಡಿಯಾಗಿ ಪಟ್ಟಿಕೆಗಳಲ್ಲಿ ಬರೆದು ಅದೇ ಪಟ್ಟಿಕೆಯಲ್ಲಿ ಆ ಶಬ್ದಗಳ ಆಕರಗಳನ್ನು ಗುರುತಿಸಿ, ಅರ್ಥವನ್ನು ಊಹಿಸಿ ಬರೆದಿಡಲಾಗಿದೆ. ಈ ಸಾಮಗ್ರಿಯನ್ನು ಉಪಯೋಗಿಸಿ ಪ್ರೊ। ಎ.ಆರ್. ಕೃಷ್ಣಶಾಸ್ತ್ರಿಗಳು ೧೯೫೭ರಲ್ಲಿ ೮ ಪುಟಗಳ ಮಾದರಿ ನಿಘಂಟನ್ನು ಮುದ್ರಿಸಿ ನಾಡಿನ ಎಲ್ಲ ವಿದ್ವಾಂಸರಿಗೂ ಅವರವರ ಅಭಿಪ್ರಾಯ ನಿರೂಪಣೆಗೆ ಕಳಿಸಿದರು. ಕನ್ನಡದ ಬೃಹನ್ನಿಘಂಟು ಹೇಗೆ ರೂಪುಗೊಳ್ಳಬೇಕೆಂಬುದು ಕನ್ನಡ ಜನರ ಮನಸ್ಸಿನಲ್ಲಿದೆಯೋ ಅದನ್ನು ತಿಳಿಯುವ ಉದ್ದೇಶದಿಂದ ಇಟ್ಟ ಮೊದಲ ಹೆಜ್ಜೆ ಇದು.

ಈ ಮಾದರಿ ಪುಟಗಳನ್ನು ನೋಡಿ ಅನೇಕ ವಿದ್ವಾಂಸರು ಅವರ ಉತ್ತರಗಳನ್ನು ಕಳಿಸಿದರು. ಆ ಎಲ್ಲ ಸಲಹೆಗಳನ್ನೂ ಪರಿಶೀಲಿಸಿ ಸೂಕ್ತವಾದವುಗಳನ್ನು ಅಳವಡಿಸಿ ನಿಘಂಟಿನ ಸ್ವರೂಪವನ್ನು ನಿರ್ಧಾರ ಮಾಡಿ ೧೯೫೮ರಲ್ಲಿ ಅವರು ನಿವೃತ್ತಿ ಹೊಂದಿದರು. ಆ ಬಳಿಕ

ನಿಘಂಟಿನ ಪ್ರಧಾನ ಸಂಪಾದಕರಾಗಿ ಪ್ರೊ। ಡಿ.ಎಲ್. ನರಸಿಂಹಾಚಾರ್ಯರೂ ನಿಘಂಟು ಸಮಿತಿಯ ಅಧ್ಯಕ್ಷರಾಗಿ ತೀ.ನಂ. ಶ್ರೀಕಂಠಯ್ಯನವರೂ ನಿಘಂಟಿನ ಮೇಲ್ವಿಚಾರಣೆಯನ್ನು ನೋಡಿಕೊಂಡು ಹೋಗುತ್ತಿದ್ದರು.

೧೯೭೧ರಲ್ಲಿ ಈ ನಿಘಂಟಿನ ಪ್ರಥಮ ಸಂಪುಟವು ಬಿಡುಗಡೆಯಾಯಿತು. ೧೯೬೬ರಲ್ಲಿ ತೀ.ನಂ.ಶ್ರೀಯವರೂ ೧೯೭೧ರಲ್ಲಿ ಡಿ.ಎಲ್.ಎನ್. ಅವರೂ ನಮ್ಮ ದುರ್ದೈವದಿಂದ ತೀರಿಕೊಂಡ ಮೇಲೆ ಈ ವಿದ್ವತ್ಕಾರ್ಯವನ್ನು ನೋಡಿಕೊಳ್ಳಲು ಪ್ರೊ। ಎಂ. ಮರಿಯಪ್ಪ ಭಟ್ಟರನ್ನು ಆಹ್ವಾನಿಸಲಾಯಿತು. ಅವರು ಒಂದು ವರ್ಷ ಕೆಲಸ ಮಾಡಿ ಅನಾರೋಗ್ಯದಿಂದ ನಿವೃತ್ತಿ ಹೊಂದಿದರು. ಆ ಬಳಿಕ ೧೯೭೩ರಿಂದ ಇದರ ಹೊಣೆಯನ್ನು ಸಮಿತಿಯ ಸದಸ್ಯರೂ ಪರಿಷತ್ತಿನ ಅಧ್ಯಕ್ಷರೂ ನನ್ನ ಮೇಲೆ ಹೊರಿಸಿದರು. ನಾನು ನನ್ನ ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದ ದಿನವೇ ಈ ಕೆಲಸದ ಹೊಣೆ ಹೊತ್ತು ೧೯೭೬ರಲ್ಲಿ ಎರಡನೆಯ ಸಂಪುಟವನ್ನು ೧೯೭೭ರಲ್ಲಿ ಮೂರನೆಯ ಸಂಪುಟವನ್ನು, ೧೯೭೯ರಲ್ಲಿ ನಾಲ್ಕನೆಯ ಸಂಪುಟವನ್ನು ಪ್ರಕಟಪಡಿಸುವುದು ಸಾಧ್ಯವಾಯಿತು. ೧೯೮೦ರ ವೇಳೆಗೆ ೫ ಮತ್ತು ೬ನೆಯ ಸಂಪುಟಗಳು ಸಿದ್ಧವಾಗಿದ್ದರೂ ಕೊನೆಗೆ ಒಂದು ಖಾಸಗಿ ಮುದ್ರಣಾಲಯದಲ್ಲಿ ೫ನೆಯ ಸಂಪುಟವನ್ನು ಮುದ್ರಿಸುವ ಏರ್ಪಾಟಾಯಿತು. ಆದರೂ ಅದು ಪೂರ್ತಿಯಾಗುವ ವೇಳೆಗೆ ೧೯೮೭ನೆಯ ಇಸವಿ ಕೊನೆಯಾಗುತ್ತಿತ್ತು. ೬ನೆಯ ಸಂಪುಟ ಮುದ್ರಣಕ್ಕೆ ಸಿದ್ಧವಾಗಿತ್ತು. ಆದರೆ ೫ನೆಯ ಸಂಪುಟದ ಮುದ್ರಣದ ವಿಚಾರದಲ್ಲಿ ಚರ್ಚೆ ತಲೆದೋರಿ ಮಿಕ್ಕ ಸಂಪುಟಗಳನ್ನು ಸರಕಾರದ ಮುದ್ರಣಾಲಯದಲ್ಲಿಯೇ ಮುದ್ರಿಸಬೇಕೆಂದು ತೀರ್ಮಾನಿಸಲಾಯಿತು. ಇದರಿಂದ ೧೯೯೦ರಲ್ಲಿ ೬ನೆಯ ಸಂಪುಟ ಅಲ್ಲಿಯೇ ಮುದ್ರಿಸಲ್ಪಟ್ಟಿತು. ೧೯೯೧ರ ಕೊನೆಯ ವೇಳೆಗೆ ಏಳನೆಯ ಸಂಪುಟದ ಪ್ರತಿ ಮುದ್ರಿತವಾಯಿತು. ಎಂಟನೆಯ ಸಂಪುಟದ ಬಹುಭಾಗವನ್ನು ಸಿದ್ಧಪಡಿಸಲಾಗಿತ್ತು. ಈಗ ಎಲ್ಲ ಸಂಪುಟಗಳೂ ಪ್ರಕಟವಾಗಿವೆ.

ಈ ನಡುವೆ ನಾನು ಪ್ರಧಾನ ಸಂಪಾದಕ ಸ್ಥಾನಕ್ಕೆ ರಾಜಿನಾಮೆ ನೀಡಿ ಸ್ವಲ್ಪ ಬಿಡುವನ್ನು ಬಯಸಿದೆ. ಈಗ ಸ, ಹ ಎಂಬ ಎರಡಕ್ಷರಗಳ ಶಬ್ದಗಳನ್ನೊಳಗೊಂಡ ಎಂಟನೆಯ ಸಂಪುಟದ ಮುದ್ರಣವೂ ಆಗಿದೆ. ಆದರೆ ನಿಘಂಟಿನ ಕೆಲಸಕ್ಕೆ ಕೊನೆ ಎಂದೂ ಇಲ್ಲ. ಈ ನಿಘಂಟಿನ ಕಾರ್ಯಕ್ಕೆ ೧೯೫೬ರಿಂದ ಹಿಡಿದು ಇಲ್ಲಿಯವರೆಗೆ ಸುಮಾರು ಒಂದುವರೆ ಕೋಟಿ ರೂಪಾಯಿಗಳು ವೆಚ್ಚವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಕಾರ್ಯದ ಬಗ್ಗೆ ಅದರ ವೈಶಿಷ್ಟ್ಯದ ಬಗ್ಗೆ ಕೆಲವು ವಿವರಗಳನ್ನು ತಿಳಿಸುವುದು ಆವಶ್ಯಕ. ಕನ್ನಡ ಭಾಷೆಯ ಚರಿತ್ರೆಯಲ್ಲಿ ಇದೊಂದು ಮಹಾಕಾರ್ಯ.

೧. ಇದು ಆಧುನಿಕ ಭಾಷಾ ಶಾಸ್ತ್ರದ ನಿಯಮಗಳಿಗೆ ಅನುಸಾರವಾಗಿ ಸಿದ್ಧವಾಗಿದೆ.

೨. ಸುಮಾರು ೧ ಲಕ್ಷ ಉಲ್ಲೇಖಗಳು ಇಲ್ಲಿ ಮುಖ್ಯ ಶಬ್ದಗಳಾಗಿ ದಾಖಲೆಗೊಂಡಿವೆ.

೩. ಕ್ರಿ.ಶ. ೧೯೦೦ರವರೆಗೆ ಮುದ್ರಿತವಾದ ಎಲ್ಲ ಗ್ರಂಥಗಳಲ್ಲಿರುವ ಶಬ್ದಗಳನ್ನು ಪಟ್ಟಿಕೆಗಳಲ್ಲಿ ಗುರುತಿಸಲಾಗಿದೆ.

೪. ಹಲ್ಮಿಡಿ ಶಾಸನದಿಂದ ಹಿಡಿದು ಕ್ರಿ.ಶ. ೧೨೫೦ರ ವರೆಗಿನ ಎಲ್ಲಾ ಶಾಸನಗಳನ್ನು ಶಬ್ದಗಳಿಗಾಗಿ ಪರಿಶೀಲಿಸಲಾಗಿದೆ.

೫. ಆಧುನಿಕರಲ್ಲಿ ಮುಖ್ಯರಾದ ಎಲ್ಲರ ಪ್ರಮುಖ ಗ್ರಂಥಗಳಿಂದಲೂ ಶಬ್ದಗಳನ್ನು ಆರಿಸಲಾಗಿದೆ.

೬. ಇಂದಿನವರೆಗೆ ಅತ್ಯುತ್ತಮವೆಂದು ಕಂಡುಬಂದ ಎಲ್ಲಾ ಗ್ರಂಥಗಳಿಂದಲೂ ಶಬ್ದಗಳನ್ನು ಆರಿಸಲಾಗಿದೆ.

೭. ಎಲ್ಲ ಹಳೆಯ ನಿಘಂಟುಗಳನ್ನೂ ಸಹಾಯಕ್ಕೆ ಪಡೆಯಲಾಗಿದೆ.

೮. ಜೈನ ವೀರಶೈವ ವೈದಿಕಮತಗಳ, ವೇದಾಂತ, ಸಂಗೀತ, ನೃತ್ಯ, ಕಾವ್ಯಮೀಮಾಂಸೆ, ತರ್ಕ, ಶಿಲ್ಪ, ಚಿತ್ರಕಲೆ, ವ್ಯಾಕರಣ, ಛಂದಸ್ಸು, ವೈದ್ಯ, ಜ್ಯೋತಿಷ, ಶೃಂಗಾರ, ಕಾಮ, ಗಣಿತ ಮುಂತಾದ ಕ್ಷೇತ್ರಗಳ ಗ್ರಂಥಗಳಲ್ಲಿ ಉಪಯೋಗವಾಗಿರುವ ಶಬ್ದಗಳನ್ನು ಕ್ರೋಡೀಕರಿಸಿ, ಶಾಸ್ತ್ರಗಳ ಹೆಸರುಗಳನ್ನು ಹೇಳಿ ಶಬ್ದಾರ್ಥಗಳನ್ನು ನಿರೂಪಿಸಲಾಗಿದೆ.

೯. ಶಬ್ದಗಳ ಎಲ್ಲ ಪರ್ಯಾಯ ರೂಪಗಳನ್ನೂ ಉಲ್ಲೇಖಿಸಲಾಗಿದೆ.

೧೦. ಅರ್ಥವನ್ನು ಚಾರಿತ್ರಿಕವಾಗಿಯೂ ತಾರ್ಕಿಕವಾಗಿಯೂ ಹೊಂದಿಸಲಾಗಿದೆ.

೧೧. ಅಲಂಕಾರಿಕ ಅರ್ಥಗಳನ್ನು ನಿರೂಪಿಸಲಾಗಿದೆ.

೧೨. ಆಯಾ ಶಬ್ದದ ಆಯಾ ಅರ್ಥಕ್ಕೆ ಹೊಂದುವ ಪ್ರಯೋಗಗಳನ್ನು ಗ್ರಂಥದ ಹೆಸರು, ಅಧ್ಯಾಯ, ಪರ್ವ, ಸಂಧಿ, ಆಶ್ವಾಸಗಳು, ಪದ್ಯ ಸಂಖ್ಯೆಗಳೊಡನೆ ಕಂಸಗಳಲ್ಲಿ ಕೊಡಲಾಗಿದೆ.

೧೩. ಪ್ರತಿ ಶಬ್ದದ ಕೊನೆಯಲ್ಲಿ ಶಬ್ದದ ವ್ಯುತ್ಪತ್ತಿಯನ್ನು ಸೂಚಿಸಲಾಗಿದೆ. ಯಾವ ಉಲ್ಲೇಖವೂ ಇಲ್ಲದಿದ್ದರೆ ಅದು ದೇಶ್ಯ ಎಂದರ್ಥ. ಅದಕ್ಕೆ ಜ್ಞಾತಿ ಭಾಷೆಗಳಿಂದ ಜ್ಞಾತಿಶಬ್ದಗಳನ್ನು ಸೂಚಿಸಲಾಗಿದೆ. ಅನ್ಯದೇಶ್ಯಗಳಿಗೆ ಮೂಲ ಭಾಷೆಯ ಶಬ್ದರೂಪವನ್ನು ಕೊಡಲಾಗಿದೆ.

೧೪. ಅನುನಾಸಿಕ ಬರುವ ಜಾಗದಲ್ಲಿ ಅನುಸ್ವಾರ ಬರುವ ಸಾಧ್ಯತೆ ಇದ್ದರೆ ವರ್ಗ ಪಂಚಮಾಕ್ಷರದ ಬದಲು ಅನುಸ್ವಾರವನ್ನೇ ಉಪಯೋಗಿಸಲಾಗಿದೆ.

೧೫. ಯಾವುದಾದರೂ ಶಬ್ದಕ್ಕೆ ಪ್ರಾದೇಶಿಕ ಗುಣವಿದ್ದರೆ ಅದನ್ನು ಉತ್ತರ ಕನ್ನಡ, ಕರಾವಳಿ ಮುಂತಾಗಿ ತಿಳಿಸಲಾಗಿದೆ.

೧೬. ಱ ಮತ್ತು ೞ ಕಾರಗಳನ್ನು ಕ್ರಮವಾಗಿ ೧೩ನೆಯ ಶತಮಾನದ ಕೊನೆಯವರೆಗೂ ೧೬ನೆಯ ಶತಮಾನದ ಕೊನೆಯವರೆಗೂ ಉಳಿಸಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕು. ಶಬ್ದಾರ್ಥವನ್ನು ಸೂತ್ರೀಕರಿಸುವ ಕೆಲಸ ಈ ನಿಘಂಟಿನಲ್ಲಿ ಸಂಪೂರ್ಣವಾಗಿ ನಡೆದಿಲ್ಲ. ಪ್ರಥಮ ಸಂಪುಟವು ಸಿದ್ಧವಾಗುವ ವೇಳೆಗೆ ನಿಘಂಟಿಗೆ ಯಾವ ಸ್ವರೂಪವಿತ್ತೋ ಅದನ್ನು ಉಳಿಸಿಕೊಳ್ಳಲು ಪ್ರಯತ್ನ ಪಡಲಾಗಿದೆ. ಸೂತ್ರೀಕರಣದ ಆ ಕೆಲಸ ಮುಂದೆ ನಡೆಯಬೇಕು.

ಈ ನಿಘಂಟು ಸಿದ್ಧವಾಗುತ್ತಿದ್ದಾಗ ನಿಘಂಟಿಗೆ ಹಣ ವ್ಯಯವಾಗುತ್ತಿದೆಯೇ ಹೊರತು ನಿಘಂಟು ಹೊರಬರಲಿಲ್ಲ ಎಂಬ ಕೂಗೆದ್ದಿತು. ಅದಕ್ಕಾಗಿ ಒಂದು ವರ್ಷದಲ್ಲಿಯೇ ಸಂಕ್ಷಿಪ್ತ ನಿಘಂಟನ್ನು ಪ್ರಕಟಿಸಬೇಕಾಯಿತು. ಬೃಹನ್ನಿಘಂಟು ಸಿದ್ಧವಾದ ಮೇಲೆ ಸಂಕ್ಷಿಪ್ತ ನಿಘಂಟನ್ನು ತಯಾರಿಸಬೇಕಾದುದು ಸರಿಯಾದ ಮಾರ್ಗ. ಹಾಗಾಗದೇ ಹೋದುದರಿಂದ ಸಂಕ್ಷಿಪ್ತ ನಿಘಂಟಿನಲ್ಲಿ ನನಗೆ ಗೊತ್ತಿರುವಂತೆಯೇ ಕೆಲವು ತಪ್ಪುಗಳು ನಿಂತುಬಿಟ್ಟಿವೆ. ಈಗ ಆ ನಿಘಂಟಿನ ಪ್ರತಿಯೂ ಪೇಟೆಯಲ್ಲಿ ಸಿಕ್ಕುತ್ತಿಲ್ಲ. ಅದನ್ನು ಸ್ವಲ್ಪ ಪರಿಷ್ಕರಿಸಿ ಮುದ್ರಿಸಿದರೆ ಕನ್ನಡಕ್ಕೆ ಜನಸಾಮಾನ್ಯರಿಗೂ ವಿದ್ಯಾರ್ಥಿಗಳಿಗೂ ಅಗತ್ಯವಾಗುವ ಒಂದು ನಿಘಂಟನ್ನು ಪೂರೈಸಿದಂತಾಗುತ್ತದೆ. ಈಗ ಸಂಕ್ಷಿಪ್ತ ನಿಘಂಟಿನ ಒಂದೂವರೆ ಲಕ್ಷ ಪ್ರತಿಗಳೂ ಅದರ ಸಹಾಯದಿಂದ ಸಿದ್ಧವಾದ ರತ್ನಕೋಶದ ೩ ಲಕ್ಷ ಪ್ರತಿಗಳೂ ಮಾರಾಟವಾಗಿವೆ.

ಭಾರತದಲ್ಲಿ ಮಿಕ್ಕ ಯಾವ ಭಾಷೆಗೂ ಇಂಥ ಬೃಹತ್ ನಿಘಂಟು ಸಿದ್ಧವಾಗಿಲ್ಲ. ಮಲಯಾಳ ನಿಘಂಟಿಗೆ ಅಂಥ ಸಿದ್ಧತೆಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಈ ಬೃಹನ್ನಿಘಂಟನ್ನು ದ್ವಿಭಾಷಾ ನಿಘಂಟನ್ನಾಗಿ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಇದು ನಿಘಂಟು ಶಾಸ್ತ್ರವನ್ನು ತಿಳಿದವರು ಮಾಡಬೇಕಾದ ಕಾರ್ಯ. ಸರಿಯಾದ ಸಿದ್ಧತೆ ಇಲ್ಲದೆ ಮುದ್ರಣಗೊಂಡರೆ ಅಪಚಾರವಾಗುತ್ತದೆ ಎಂಬುದನ್ನು ಪರಿಷತ್ತು ನೆನಪಿಡಬೇಕು.

೧೦. ಒಂದು ನಿಘಂಟನ್ನು ಉಪಯೋಗಿಸುವುದು ಹೇಗೆ ?

ನಿಘಂಟನ್ನು ಉಪಯೋಗಿಸುವ ಜನರ ಸಂಖ್ಯೆ ಬಹಳ ಕಡಿಮೆ. ನೂರಕ್ಕೆ ತೊಂಬತ್ತು ಜನ ಆಮರಣಾಂತ ಯಾವ ನಿಘಂಟನ್ನು ನೋಡದೆಯೇ ಬಹು ಭವ್ಯವಾದ ಸುಖ ಜೀವನವನ್ನು ಅನುಭವಿಸುತ್ತಾರೆ. ಆದರೆ ನಿಘಂಟುಗಳನ್ನು ಉಪಯೋಗಿಸುವ ಜನ ಕೂಡ ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯುವುದಿಲ್ಲ. ಯಾವುದೋ ಒಂದು ಶಬ್ದಕ್ಕೆ ಅರ್ಥ ತಿಳಿಯದೇ ಇದ್ದಾಗ ನಿಘಂಟನ್ನು ಬಿಚ್ಚಿ, ಆ ಶಬ್ದಕ್ಕೆ ಇರುವ ಅರ್ಥವನ್ನು ಹುಡುಕಿ, ಅದು ಸಿಕ್ಕಿದಾಗ ತೃಪ್ತಿಪಟ್ಟು ನಿಘಂಟನ್ನು ಮುಚ್ಚಿಬಿಡುತ್ತಾರೆ. ಅದೇ ಶಬ್ದಕ್ಕೆ ಇರುವ ಇತರ ಅರ್ಥಗಳನ್ನು ಅವರು ಗಮನಿಸುವುದಿಲ್ಲ. ಆದುದರಿಂದ ಶಿಕ್ಷಕರು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನಿಘಂಟುಗಳನ್ನು ಉಪಯೋಗಿಸುವ ಕ್ರಮವನ್ನು ಹೇಳಿಕೊಡಬೇಕು. ಶಬ್ದಗಳ ಪಕ್ಕದಲ್ಲಿ ಕೆಲವು ಸಂಕ್ಷಿಪ್ತಗಳು - abbreviations- ಇರುತ್ತವೆ. ಅವುಗಳ ಅರ್ಥವೇನು ? ನೀವು ಒಂದು ಶಬ್ದಕ್ಕೆ ಇರುವ ಅರ್ಥಗಳಲ್ಲಿ ಇಂದಿನ ದಿನದಲ್ಲಿ ಬಳಕೆಯಲ್ಲಿರುವ ಅರ್ಥ ಯಾವುದು ? ಆ ಶಬ್ದಕ್ಕೆ ಹಿಂದಿನಿಂದ ಯಾವ ಯಾವ ಅರ್ಥಗಳು ಬೆಳೆದುಬಂದಿವೆ. ನಮ್ಮ ಭಾಷೆಗೆ ಆ ಶಬ್ದ ಬೇರೆ ಭಾಷೆಯಿಂದ ಬಂದಿದೆಯೇ ? ಇತರ ಯಾವ ಭಾಷೆಗಳಲ್ಲಿ ಈ ಶಬ್ದ ಪ್ರಚಾರದಲ್ಲಿದೆ ? ಇಂಥ ವಿವರಗಳು ನಿಘಂಟಿನಲ್ಲಿ ದೊರಕುತ್ತವೆ.

ಆದುದರಿಂದ ಒಂದು ನಿಘಂಟನ್ನು ಉಪಯೋಗ ಮಾಡುವುದಕ್ಕೆ ಮುಂಚೆ ಅದರಲ್ಲಿ ಏನೇನು ಯಾವಯಾವ ರೀತಿಯಲ್ಲಿ ಜೋಡಿಸಿ ಸಿದ್ಧಗೊಳಿಸಲ್ಪಟ್ಟಿದೆ ಎಂಬುದನ್ನು ಒಂದು ಸಲ ಪರಿಚಯ ಮಾಡಿಕೊಳ್ಳುವುದು ಉತ್ತಮ. ಒಳ್ಳೆಯ ನಿಘಂಟುಗಳಿಗೆ ಪ್ರಾರಂಭದಲ್ಲಿ ಒಂದು ಮುನ್ನುಡಿ ಇರುತ್ತದೆ. ಅದರಲ್ಲಿ ನಿಘಂಟನ್ನು ಉಪಯೋಗಿಸುವವರ ಸಹಾಯಕ್ಕೆಂದು ಕೆಲವು ವಿವರಗಳನ್ನು ನೀಡಿರುತ್ತಾರೆ. ಇದರ ವಾಚನದಿಂದ ನಿಘಂಟಿನಿಂದ ಹೆಚ್ಚು ಪ್ರಯೋಜನವನ್ನು ಪಡೆಯಬಹುದು. ನಿಘಂಟನ್ನು ಉಪಯೋಗಿಸುವುದನ್ನು ಒಮ್ಮೆ ಕಲಿತರೆ ಬಳಿಕ ಅದೇ ಅಭ್ಯಾಸವಾಗಿ ತಿಳಿವಳಿಕೆಗೆ ಮಾರ್ಗದರ್ಶನ ದೊರಕುತ್ತದೆ.

ಒಂದು ಶಬ್ದ ಕ್ರಿಯಾಪದವೇ, ನಾಮಪದವೇ, ಗುಣವಾಚಕವೇ, ಅವ್ಯಯವೇ ಇತ್ಯಾದಿ ವಿವರಗಳನ್ನು ಶಬ್ದದ ಪಕ್ಕದಲ್ಲಿಯೇ ಗುರುತಿಸಲಾಗುತ್ತದೆ. ಆ ಶಬ್ದದ ಸ್ವರೂಪಕ್ಕೆ ಬೇರೆ ಬೇರೆ ಪರ್ಯಾಯರೂಪಗಳಿದ್ದರೆ ಅವುಗಳೂ ಅಲ್ಲಿಯೇ ಕಾಣಸಿಗುತ್ತವೆ.

ನಾ=ನಾಮಪದ, ಕ್ರಿ=ಕ್ರಿಯಾಪದ, ಅ=ಅವ್ಯಯ, ಗು=ಗುಣವಾಚಕ ಇತ್ಯಾದಿ. ನಾಮಪದವಾದರೆ ಅದರ ಬಹುವಚನ ರೂಪ, ಅಸಾಮಾನ್ಯವಾದ ಕ್ರಿಯಾಪದವಾಗಿದ್ದರೆ

ಅದರ ಕೃದಂತರೂಪ, ವಿಶೇಷವಾಗಿ ಕಾಲವಾಚಕ ಪ್ರತ್ಯಯಗಳು ಸೇರಿದಾಗ ಅದು ಪಡೆಯುವ ರೂಪ ಇತ್ಯಾದಿಗಳು ಉಲ್ಲೇಖಗೊಂಡಿರುತ್ತವೆ. ಆ ಶಬ್ದವು ಯಾವುದಾದರೂ ಒಂದು ಕ್ಷೇತ್ರಕ್ಕೆ ಸೀಮಿತವಾಗಿದ್ದರೆ ಅದರ ಪರಿಚಯವಿರುತ್ತದೆ. ಸೂಪ=ಸೂಪಶಾಸ್ತ್ರ, ಸಂಗೀತ=ಸಂಗೀತಶಾಸ್ತ್ರ, ಶಿಲ್ಪ=ಶಿಲ್ಪಶಾಸ್ತ್ರ, ದ್ವೈತ=ದ್ವೈತದರ್ಶನ ಇತ್ಯಾದಿ. ಶಬ್ದ ರೂಪವು ಶಿಷ್ಟ, ಗ್ರಾಮ್ಯ ಎಂಬುದನ್ನು ಕೆಲವು ನಿಘಂಟುಗಳು ಹೇಳುತ್ತವೆ.

ಶಬ್ದಗಳ ವ್ಯುತ್ಪತ್ತಿಯನ್ನು ತಿಳಿಯುವುದರಲ್ಲಿ ತುಂಬ ಸ್ವಾರಸ್ಯವಿರುತ್ತದೆ. ಶಬ್ದಾರ್ಥದ ಕೊನೆಯಲ್ಲಿ ಈ ಅಂಶವು ಉಲ್ಲೇಖವಾಗಿರುತ್ತದೆ. ಕೆಲವು ನಿಘಂಟುಗಳು ಸಮಾನಾರ್ಥ ಶಬ್ದಗಳನ್ನೂ ಜೊತೆಗೆ ವಿರುದ್ಧಾರ್ಥ ಶಬ್ದಗಳನ್ನೂ ಕೊಟ್ಟಿರುತ್ತವೆ.

ಇದನ್ನೆಲ್ಲ ವಿವರವಾಗಿ ತಿಳಿದುಕೊಳ್ಳುವುದು ಭಾಷೆಯ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಮಾರ್ಗ.

೧೧. ಮೃಗ, ಪಕ್ಷಿ, ಕ್ರಿಮಿ, ಕೀಟ, ಗಿಡ, ಮರ ಮುಂತಾದವುಗಳ ಬಗ್ಗೆ ನಿಘಂಟು ಏನು ಮಾಡಬೇಕು

ಪ್ರಾಣಿಶಾಸ್ತ್ರ ಮತ್ತು ಸಸ್ಯ ಶಾಸ್ತ್ರಗಳು ಬಹುಮುಖವಾಗಿ ಬೆಳೆದಿವೆ. ಪ್ರತಿಯೊಂದು ವರ್ಗದ ಸಂಪೂರ್ಣ ಮಾಹಿತಿಯನ್ನು ಈ ಶಾಸ್ತ್ರಗಳು ಈಗ ಕೊಡಬಲ್ಲವು. ಇವು ಬಹು ಪಾರಿಭಾಷಿಕ ಗುಣವುಳ್ಳ ಶಬ್ದ ಸಂಪತ್ತನ್ನು ಪಡೆದಿವೆ. ನಿಘಂಟಿನಲ್ಲಿ ಇಂಥ ಪ್ರಾಣಿಗಳ ಸಸ್ಯಗಳ ಹೆಸರನ್ನು ಹೇಳಿದಾಗ ಅವುಗಳ ವಿವರಣೆಯನ್ನು ನೀಡುವಾಗ ನಿಘಂಟುಕಾರ ತುಂಬ ಅಸಮರ್ಥ. ಅವನ ಭಾಷಾ ಸಾಹಿತ್ಯಗಳ ಆಳವಾದ ಜ್ಞಾನವು ಈ ಸಂದರ್ಭದಲ್ಲಿ ಅವನ ಸಹಾಯಕ್ಕೆ ಬರುವುದಿಲ್ಲ. ಕನ್ನಡದಲ್ಲಿ ಈ ಶಾಸ್ತ್ರಗಳ ಬಗ್ಗೆ ಚೆನ್ನಾಗಿ ಬರೆಯಬಲ್ಲ ವಿದ್ವಾಂಸರು ಹೆಚ್ಚು ಸಂಖ್ಯೆಯಲ್ಲಿ ದೊರಕುವುದಿಲ್ಲ. ನಿಘಂಟಿನಲ್ಲಿ, ಮಾವು=ಒಂದು ಬಗೆಯ ಮರ ಮತ್ತು ಅದರ ಕಾಯಿ ಮತ್ತು ಹಣ್ಣು. ನಿಂಬೆ=ಒಂದು ಬಗೆಯ ಗಿಡ ಮತ್ತು ಅದರ ಕಾಯಿ ಮತ್ತು ಹಣ್ಣು ಎಂದು ಬರೆದರೆ ಓದುವವರಿಗೆ ಆ ಮರಗಿಡಗಳ ಬಗ್ಗೆ ಏನನ್ನು ಹೇಳಿದ ಹಾಗಾಯಿತು ? ಈ ಪ್ರಶ್ನೆಯನ್ನು ಅನೇಕರು ಆಗಿಂದಾಗ ನನ್ನನ್ನೇ ಕೇಳಿದ್ದಾರೆ. ಅವರ ಉದ್ದೇಶ ನನಗೆ ಅರ್ಥವಾದರೂ ಅವರಿಗೆ ಸಮಾಧಾನಕರವಾದ ಉತ್ತರವನ್ನು ಹೇಳುವ ಸಾಮರ್ಥ್ಯ ನನ್ನಲ್ಲಿಲ್ಲ. ಈ ವಿಭಾಗದಲ್ಲಿ ಅನೇಕ ವರ್ಷಗಳು ಕುಳಿತು ಅನೇಕ ಶಾಸ್ತ್ರಗಳ ವಿಜ್ಞಾನಿಗಳು ಚರ್ಚೆಮಾಡಿ ಆಯಾಶಾಸ್ತ್ರಕ್ಕೆ ಸಂಬಂಧಿಸಿದ ಶಬ್ದಗಳಿಗೆ ನಿರ್ದಿಷ್ಟವಾದ ಅರ್ಥಗಳನ್ನು ಸೂತ್ರೀಕರಿಸಿ ಬರೆದಿಡಬೇಕು. ಇಂಥ ನಿಘಂಟುಗಳನ್ನು **ಪಾರಿಭಾಷಿಕ ನಿಘಂಟುಗಳು** ಎಂದೇ ಕರೆಯಬೇಕು.

ಕಿಟ್ಟೆಲ್ ನಿಘಂಟಿನಲ್ಲಿ ಇಟ್ಯಾಲಿಯನ್ ಭಾಷೆಯಲ್ಲಿನ ಕ್ರೋಡೀಕರಣವಾಗಿರುವ ಹೆಸರುಗಳನ್ನು ಹೇಳಲಾಗಿದೆ. ಅದರಿಂದ ಸಾಮಾನ್ಯರಿಗೆ ಪ್ರಯೋಜನವಿಲ್ಲ. Mango ಶಬ್ದಕ್ಕೆ The New Webster's Dictionaryಯಲ್ಲಿ ಹೀಗೆ ಬರೆದಿದೆ :

Mangifera indica, fam, Anacardiaceae, a large Indian tree cultivated widely for its fruit; the fruit of this a large, Juicy drupe with aromatic pulp. eaten ripe or used green in jam, pickles etc. [Port. Manga fr. Malay fr. Tamil] ಇಷ್ಟನ್ನು ಹೇಳಿದರೆ ಎಷ್ಟೋ ವಿಷಯಗಳನ್ನು ಕ್ರೋಡೀಕರಿಸಿದಂತಾಗುತ್ತದೆ. ನಿಜವಾಗಿ ಇದು ನಿಘಂಟು ಮಾಡಬೇಕಾದ ಕೆಲಸ. ಇಂಥ ಕೆಲಸ ನಮ್ಮಲ್ಲಿ ಇನ್ನೂ ಪ್ರಾರಂಭವಾಗಬೇಕಾಗಿದೆ. ಇದರ ಜೊತೆಗೆ ಮಾವಿನ ಮರದ, ಕಾಯಿಯ, ಹಣ್ಣಿನ ಮತ್ತು ಒಂದು ಎಲೆಯ ಚಿತ್ರಗಳನ್ನೂ ಕೊಟ್ಟರೆ ಆಗ ನಿಘಂಟುಕಾರನ ಕೆಲಸ ಸಮರ್ಪಕವಾಗುತ್ತದೆ.

ನಮ್ಮ ಬಾಲ್ಯದಲ್ಲಿ ಹಳ್ಳಿಯ ಕಡೆಗಳಲ್ಲಿ ಮನೆಯವರೂ ಶಾಲೆಯ ಉಪಾಧ್ಯಾಯರೂ ಊರಿನ ಸುತ್ತಮುತ್ತಲಿನ ಗಿಡಮರಗಳನ್ನೂ, ಗೆಡ್ಡೆಗೆಣಸುಗಳನ್ನೂ, ಸಸ್ಯವರ್ಗವನ್ನೂ ಪರಿಚಯ ಮಾಡಿಕೊಡುತ್ತಿದ್ದರು. ನಮಗೆ ಇಲಿಕಿವಿ ಗಿಡದಿಂದ ಹಿಡಿದು ವಿಷ್ಣುಕ್ರಾಂತಿಯವರೆಗೆ ಗಿಡಗಳನ್ನು ಗುರುತಿಸುವುದು ಸಾಧ್ಯವಾಗಿತ್ತು. ಹೊಲಗದ್ದೆಗಳ ಬಿಡುವಿನಲ್ಲಿ ಬೆಳೆದ ಕೀರೆ, ಮುಳ್ಳು ಕೀರೆ, ಹರವೆ, ಅಣ್ಣೆ, ಕಿರಿಕೀರೆ ಮುಂತಾದ ಸೊಪ್ಪುಗಳನ್ನು ಹುಡುಕಿ ಮನೆಗೆ ಆ ದಿನದ ತರಕಾರಿಗೆ ಆಗುವಷ್ಟನ್ನು ತರುವ ಸಾಮರ್ಥ್ಯವಿತ್ತು. ಈಗ ನಗರಗಳಲ್ಲಿ ವಾಸಿಸುವ ಯಾರಿಗೂ ಗಿಡದ ಹೆಸರಾಗಲೀ ಅದನ್ನು ಇತರ ಸೊಪ್ಪುಗಳಿಂದ ಬೇರ್ಪಡಿಸುವ ವಿಧಾನವಾಗಲಿ ತಿಳಿದಿರುವುದಿಲ್ಲ.

ಬಿಳಿಗಿರಿ ರಂಗನ ಬೆಟ್ಟದಲ್ಲಿರುವ ಸೋಲಿಗರು ಈಗಲೂ ನಾಲ್ಕು ನೂರು ಸಸ್ಯಗಳನ್ನು ಗುರುತಿಸಿ ಅವುಗಳ ಹೆಸರನ್ನು ಹೇಳುತ್ತಾರಂತೆ. ಅವರ ಸಹಾಯದಿಂದಲಾದರೂ ಈ ಸಸ್ಯಗಳ ಹೆಸರನ್ನು ತಿಳಿದು ಚಿತ್ರಗಳೊಡನೆ ಪ್ರಕಟಿಸುವುದು ಆವಶ್ಯಕವಾಗಿದೆ.

ಮೃಗ, ಪಕ್ಷಿ, ಕ್ರಿಮಿ, ಕೀಟಗಳ ವಿಚಾರದಲ್ಲಿಯೂ ಇಂಥ ಕಾರ್ಯ ಆಗಬೇಕಾಗಿದೆ. ಕೇವಲ ಸಾಹಿತ್ಯ ಮತ್ತು ಭಾಷೆಗಳನ್ನು ಅಭ್ಯಾಸ ಮಾಡಿದವರಿಂದ ಈ ಕೆಲಸ ಸಾಗುವುದಿಲ್ಲ. ನಿಘಂಟು ಕ್ಷೇತ್ರದ ಕೆಲಸ ಎಷ್ಟು ಅಗಾಧವಾದುದು ಎಂಬುದನ್ನು ಇಂಥ ಯೋಜನೆಯನ್ನು ಹೂಡಿದ ಬಳಿಕ ನಾವು ಅರಿತುಕೊಳ್ಳಬಹುದು.

ಸದ್ಯಕ್ಕೆ ಒಂದು ಶಬ್ದ ಯಾವುದನ್ನು ನಿರ್ದೇಶಿಸುತ್ತದೆ ಪ್ರಾಣಿಯನ್ನೋ, ಪಕ್ಷಿಯನ್ನೋ, ಗಿಡವನ್ನೋ, ಮರವನ್ನೋ, ಸಸ್ಯವನ್ನೋ ಎಂದು ತಪ್ಪಿಲ್ಲದೆ ತಿಳಿಸಿದರೆ ತೃಪ್ತಿಪಡಬೇಕಾಗಿದೆ. ಈ ಸ್ಥಿತಿ ಬೇಗ ಮಾರ್ಪಟ್ಟು ಪೂರ್ಣ ವಿವರಗಳನ್ನು ನೀಡುವ ಸಾಮರ್ಥ್ಯವು ನಿಘಂಟುಕಾರನಿಗೆ ಬರಬೇಕಾಗಿದೆ.

೧೨. ಕೆಲವು ವಿಶಿಷ್ಟ ಕೋಶಗಳು

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲವು ವಿಶಿಷ್ಟ ಕೋಶಗಳು ಸಿದ್ಧವಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹವಾಗಿ ಪರಿಚಯ ಮಾಡಿಕೊಡಲಾಗಿದೆ.

೧. ವಿಮರ್ಶೆಯ ಪರಿಭಾಷೆ : ಇದನ್ನು ರಚಿಸಿರುವವರು ಡಾ. ಓ.ಎಲ್. ನಾಗಭೂಷಣಸ್ವಾಮಿ. ಸಾಹಿತ್ಯ ವಿಮರ್ಶೆಯಲ್ಲಿ ಆಗಿಂದಾಗ ಪ್ರಯೋಗವಾಗುವ ಶಬ್ದಗಳಿಗೆ ಒಂದು ಪಾರಿಭಾಷಿಕ ಗುಣವಿರುತ್ತದೆ. ಆ ಶಬ್ದವನ್ನು ಅದೇ ವಿಶಿಷ್ಟಾರ್ಥದಲ್ಲಿ ವಿಮರ್ಶೆಯಲ್ಲಿ ಉಪಯೋಗಿಸಲಾಗಿರುತ್ತದೆ. ಅಂಥ ಶಬ್ದದಲ್ಲಿ ಅಡಗಿರುವ ಆ ವಿಶಿಷ್ಟಾರ್ಥದ ಪರಿಜ್ಞಾನವಿಲ್ಲದಿದ್ದರೆ ಆ ಶಬ್ದಗಳನ್ನು ಉಪಯೋಗಿಸಿ ರಚಿಸಿರುವ ಲೇಖನದ ಸಂಪೂರ್ಣ ಅರ್ಥವನ್ನು ಪರಿಗ್ರಹಿಸುವುದು ಕಷ್ಟ. ಎಲ್ಲ ಕುಶಲಕಲೆಗಳಲ್ಲಿಯೂ ಇಂಥ ಪಾರಿಭಾಷಿಕ ಶಬ್ದಗಳಿರುತ್ತವೆ. ಆಯಾ ಕಲೆಗಳಲ್ಲಿ ರಸಾಸ್ವಾದನೆ ಮಾಡಬೇಕೆನ್ನುವವರು ಅಂಥ ಶಬ್ದಗಳ ಪರಿಪೂರ್ಣ ಅರ್ಥವನ್ನೂ ಅರಿತಿರಬೇಕು.

ಸಾಹಿತ್ಯ ವಿಮರ್ಶೆಯನ್ನು ದೃಷ್ಟಿಯಲ್ಲಿಟ್ಟು ರಚಿತವಾಗಿರುವ ಈ ಗ್ರಂಥ ತನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡಿದೆ. ಸಂಸ್ಕೃತ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ ಇಂಥ ಶಾಸ್ತ್ರೀಯ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ, ಆ ಬಗೆಯ ಗ್ರಂಥಗಳಲ್ಲಿ ಬರುವ ಪಾರಿಭಾಷಿಕ ಶಬ್ದಗಳನ್ನು ಪಟ್ಟಿ ಮಾಡಿ ಪ್ರತಿಯೊಂದು ಶಬ್ದಕ್ಕೂ ಸೂಕ್ತವಾದ ವಿವರಣೆಯನ್ನು ನೀಡಲಾಗಿದೆ. ಇದನ್ನು ವಿಸ್ತರಿಸುವ ಅವಕಾಶ ಇನ್ನೂ ಇದೆ ಎಂಬುದು ಬೇರೆ ಮಾತು. ಆಗಿರುವಷ್ಟು ಕಾರ್ಯ ತುಂಬ ಪ್ರಯೋಜನಕಾರಿ. ಪ್ರಕಟಣೆ ೧೯೮೩.

೨. ಕಾವ್ಯಾರ್ಥಪದಕೋಶ : ಇದನ್ನು ಡಾ। ಜಿ.ಎಸ್. ಶಿವರುದ್ರಪ್ಪನವರೂ, ಡಾ। ಕೆ.ವಿ. ನಾರಾಯಣ ಅವರೂ ಸಿದ್ಧಪಡಿಸಿದ್ದಾರೆ. ಇದು ೧೯೮೦ರಲ್ಲಿ ಪ್ರಕಟವಾಗಿದೆ. ಇದರ ಪ್ರಯೋಜನವನ್ನು ಡಾ। ಓ.ಎಲ್. ನಾಗಭೂಷಣಸ್ವಾಮಿಯವರು ಪಡೆದುಕೊಂಡಿದ್ದಾರೆ. ಆದರೆ ಅವರ ಗ್ರಂಥದಲ್ಲಿ ಇಂಗ್ಲಿಷ್ ಭಾಷೆಯ ವಿಮರ್ಶೆಯ ಪಾರಿಭಾಷಿಕ ಶಬ್ದಗಳಿಗೆ ಹೆಚ್ಚು ಪ್ರಾತಿನಿಧ್ಯ ದೊರಕಿದೆ. ಈ ಗ್ರಂಥದಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಶಬ್ದಗಳಿಗೆ ಹೆಚ್ಚು ಪ್ರಾಮುಖ್ಯ ದೊರೆತಿದೆ. ಈ ಗ್ರಂಥದಲ್ಲಿ ನಿರೂಪಿತವಾಗಿರುವ ಪಾರಿಭಾಷಿಕ ಶಬ್ದಗಳು ಹೆಚ್ಚು ಆಧಾರಯುತವಾಗಿದ್ದು ಅವುಗಳ ಮೂಲವನ್ನು ಹುಡುಕಿ ಅವುಗಳ ಇತರ ವಿವರಗಳನ್ನು ಕಂಡು ಹಿಡಿಯುವುದು ಸುಲಭ. ತುಂಬ ಪ್ರಯೋಜನಕರವಾದ ಈ ಕೋಶವನ್ನು ಇನ್ನೂ ವಿಸ್ತರಿಸಿ ಹೆಚ್ಚು ಪ್ರಯೋಜನಕರವಾಗಿ ಮಾಡಬಹುದಾಗಿದೆ.

೩. ವಾಕ್ಯಮಾಣಿಕ್ಯಕೋಶ : ಕನ್ನಡದ ಸಾವಿರ ವರ್ಷದ ಸಾಹಿತ್ಯ ಚರಿತ್ರೆಯಲ್ಲಿ ಕಾಣಬರುವ ಬಹು ಪ್ರಸಿದ್ಧ ಗ್ರಂಥಗಳಿಂದ ವಾಕ್ಯಮಾಣಿಕ್ಯಗಳನ್ನು ಆಯ್ದು ಸಿದ್ಧಪಡಿಸಿದ ಕೋಶ ಇದು. ಇದನ್ನು ಸಂಪಾದಿಸಿರುವವರು ಡಾ| ಜಿ.ಎಸ್. ಶಿವರುದ್ರಪ್ಪ ಮತ್ತು ಡಾ| ಎಸ್. ವಿದ್ಯಾಶಂಕರ್ ಒಟ್ಟು ಐವತ್ತೈದು ಗ್ರಂಥಗಳಿಂದ ವಾಕ್ಯಮಾಣಿಕ್ಯಗಳನ್ನು ಆಯಲಾಗಿದೆ. ಒಟ್ಟು ೨೬೦೨ ಮಾಣಿಕ್ಯಗಳು ಕೋಶದಲ್ಲಿ ಸೇರಿವೆ. ಗ್ರಂಥದ ಕೊನೆಯಲ್ಲಿ ಕ್ಲಿಷ್ಟಪದಗಳಿಗೆ ಅರ್ಥಗಳನ್ನು ಕೊಡಲಾಗಿದೆ. ತುಂಬ ಸಾಮಾನ್ಯವಾದ ಕೆಲವು ಮಾತುಗಳೂ ಪಟ್ಟಿಯಲ್ಲಿ ಸೇರಿಬಿಟ್ಟಿವೆ. Dictionary of quotations ಎಂಬ ಇಂಗ್ಲಿಷ್ ಗ್ರಂಥಗಳ ಹಾಗೆ ಇವು ಪ್ರಯೋಜನಕ್ಕೆ ಬರಬೇಕು. ಆದರೆ ಹಳಗನ್ನಡ ಗ್ರಂಥಗಳನ್ನು ಪ್ರೌಢ ವಿದ್ಯಾರ್ಥಿಗಳೇ ಓದದೆ ಇರುವಾಗ ಇವುಗಳ ಪ್ರಯೋಜನ ಯಾರಿಗೆ ಎಂಬುದು ಯೋಚಿಸಬೇಕಾದುದು.

೪. ಇಗೋ ಕನ್ನಡ : ಸಾಮಾಜಿಕ ನಿಘಂಟಿನ ಎರಡು ಸಂಪುಟಗಳು ಬಹೂಪಯೋಗಕರವಾದ ನಿಘಂಟುಗಳು.

೫. ಹವ್ಯಕ ಪದ ಸಂಚಯ : ಇದನ್ನು ಶ್ರೀ ಟಿ. ಕೇಶವಭಟ್ಟರು ಸಿದ್ಧಪಡಿಸಿದ್ದಾರೆ. ಇದು ಪುಟ್ಟಕೋಶ. ಆದರೂ ಹವ್ಯಕ ಜನರ ಮಾತಿನಲ್ಲಿ ಇನ್ನೂ ಉಳಿದಿರುವ ಹಳಗನ್ನಡ ಶಬ್ದಗಳ ಸ್ವರೂಪವನ್ನು ಅರಿಯಲು ಸಹಾಯಕಾರಿ.

೬. ತುಳು ನಿಘಂಟು : ತುಳು ಭಾಷೆಗೆ ಲಿಪಿಯಿಲ್ಲ. ಕನ್ನಡ ಲಿಪಿಯನ್ನೇ ತುಳು ಭಾಷೆಯನ್ನು ಆಡುವವರು ಬರಹಕ್ಕೆ ಉಪಯೋಗಿಸುತ್ತಾರೆ. ನಿಘಂಟು ಕ್ಷೇತ್ರದಲ್ಲಿ ಈ ತುಳು ನಿಘಂಟಿಗೆ ಒಂದು ವಿಶಿಷ್ಟ ಸ್ಥಾನವಿದೆ. ಲಿಖಿತ ಸಾಹಿತ್ಯವುಳ್ಳ ಭಾಷೆಗಳ ನಿಘಂಟು ರಚನೆಯ ಕಾರ್ಯವೇ ಬೇರೆಯ ಬಗೆಯದು. ಆದರೆ ಲಿಪಿಯಲ್ಲದೆ ಆಡುಮಾತಿನಲ್ಲಿಯೇ ಜೀವಂತವಾಗಿರುವ ಭಾಷೆಯ ಶಬ್ದ ಸಂಗ್ರಹವೂ ಅವುಗಳ ಅರ್ಥ ನಿರ್ಧಾರವೂ ಅನೇಕ ಕ್ಲೇಶಗಳನ್ನು ಒಡ್ಡುತ್ತವೆ. ಈ ಭಾಷೆಯನ್ನು ಮಾತನಾಡುವ ಬೇರೆ ಬೇರೆಯ ಜನರೊಡನೆ ಬೆರೆತು, ಆತ್ಮೀಯವಾದ ವಾತಾವರಣವನ್ನು ನಿರ್ಮಾಣ ಮಾಡಿ ಶಬ್ದ ಸಂಗ್ರಹವನ್ನು ಧ್ವನಿಮುದ್ರಿಸಿಕೊಂಡು ಬರುವುದು ಮೊದಲ ಕೆಲಸ. ಆ ಬಳಿಕ ಅಲ್ಲಲ್ಲಿ ಕಂಡ ಉಚ್ಚಾರಣಾ ವೈವಿಧ್ಯವನ್ನು ಚರ್ಚಿಸಿ ಆ ಬಗ್ಗೆ ಒಂದು ನಿರ್ಧಾರವನ್ನು ಕೈಗೊಳ್ಳಬೇಕು. ನಾನಾರ್ಥಗಳುಳ್ಳ ಶಬ್ದಗಳ ಅರ್ಥ ನಿರ್ಧಾರವನ್ನು ಕ್ರಮವಾಗಿ ನಿರೂಪಿಸಬೇಕು. ಈ ಎಲ್ಲ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿರುವ ಈ ನಿಘಂಟಿನ ಸಂಪಾದಕವರ್ಗದ ದಕ್ಷತೆಗೆ ಇದು ನಿದರ್ಶನವಾಗಿದೆ.

ಈ ನಿಘಂಟಿನಲ್ಲಿ ಎಲ್ಲ ಶಬ್ದಗಳಿಗೂ ರೋಮನ್ ಲಿಪಿಯಲ್ಲಿ ಲಿಪ್ಯಂತರವನ್ನೂ ಹಾಗೆಯೇ ಇಂಗ್ಲಿಷಿನಲ್ಲಿ ಅರ್ಥವಿವರಗಳನ್ನೂ ನೀಡಲಾಗಿದೆ. ತುಳುಭಾಷೆಗೆ ಇರುವ ಉಚ್ಚಾರಣಾ ವೈವಿಧ್ಯವನ್ನು ಸೂಚಿಸಿ ಆ ಶಬ್ದಗಳ ಅರ್ಥವನ್ನು ಕನ್ನಡದಲ್ಲಿ ಸೂಚಿಸಲಾಗಿದೆ. ಶಬ್ದಗಳಿಗೆ ಬೇರೆ ಬೇರೆ ವರ್ಗೀಕರಣದ ಲೇಬಲ್‌ಗಳನ್ನು ನೀಡಲಾಗಿದೆ. ಪದಪುಂಜಗಳು, ಗಾದೆಗಳು ಮುಂತಾದ ದೃಷ್ಟಾಂತಗಳಿಂದ ಶಬ್ದಗಳ ಅರ್ಥವಿಸ್ತಾರಗಳನ್ನು ತಿಳಿದುಕೊಳ್ಳುವುದು ಸುಲಭ.

ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಯಾವ ಆಡುಮಾತಿಗೂ ಇಂಥ ನಿಘಂಟು ಸಿದ್ಧವಾಗಿಲ್ಲ. ಭಾರತದಲ್ಲಿ ಇತರ ಕಡೆಗಳಲ್ಲಿಯೂ ಈ ಬೃಹತ್ಪ್ರಮಾಣದಲ್ಲಿ ಇಂಥ ನಿಘಂಟು ರಚನೆಯ ಕಾರ್ಯವನ್ನು ಯಾರೂ ಕೈಗೊಂಡಿಲ್ಲ.

ಈ ನಿಘಂಟಿನ ವೈಶಿಷ್ಟ್ಯಗಳನ್ನು ಹೀಗೆ ನಿರೂಪಿಸಲಾಗಿದೆ :

೧. ಶಿಷ್ಟ ಸಾಹಿತ್ಯ, ಜನಪದ ಹಾಗೂ ಉಪಭಾಷೆಗಳ ಬಳಕೆ.

೨. ಎಲ್ಲ ವರ್ಗದ ಜನರ ಆಡುನುಡಿಗಳಿಗೂ ಸಮಾನಸ್ಥಾನ.

೩. ಪ್ರಾಚೀನ ಸಾಹಿತ್ಯ, ಪಾಡ್ದನ ಸಾಹಿತ್ಯ ಹಾಗೂ ಆಧುನಿಕ ಸಾಹಿತ್ಯದಿಂದ ಉದ್ಧರಣೆಗಳು.

೪. ಗಾದೆ, ಒಗಟು, ನುಡಿಗಟ್ಟುಗಳ ಉಲ್ಲೇಖ.

೫. ಕನ್ನಡ ಲಿಪಿಯೊಂದಿಗೆ ಪರಿಷ್ಕೃತ ರೋಮನ್ ಲಿಪಿಯ ಬಳಕೆ.

೬. ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಅರ್ಥವಿವರಣೆ.

೭. ವಾಚ್ಯಾರ್ಥ, ವ್ಯಂಗ್ಯಾರ್ಥ, ವಿಶೇಷಾರ್ಥ, ಹೀನಾರ್ಥ, ಅನ್ಯಾರ್ಥ ಮುಂತಾದ ಹಲವಾರು ಅರ್ಥಗಳ ಉಲ್ಲೇಖ.

೮. ವೃತ್ತಿ, ಕಸುಬು, ಕಲೆ, ವಿನೋದ, ನಂಬಿಕೆ, ಆಚರಣೆಗಳ ಬಗ್ಗೆ ವಿವರಣೆಗಳು.

೯. ವ್ಯಾಕರಣ ಸಂಬಂಧಿ ವಿವರಣೆಗಳು, ಪದಗಳ ಸಾಂದರ್ಭಿಕ ರೂಪಭೇದಗಳು, ಸಮಾನಾರ್ಥ ಪದಗಳು ಮುಂತಾದವುಗಳ ಉಲ್ಲೇಖ.

೧೦. ಪ್ರತ್ಯಯಗಳು, ಭಾವೋದ್ಗಾರಗಳು, ಬಾಲಭಾಷೆ ಪದಗಳು, ಭೂತಪಾತ್ರಿಯ ನುಡಿಗಟ್ಟಿನ ಪದಗಳು, ಗುಪ್ತಭಾಷೆ ಪದಗಳು ಮುಂತಾದವುಗಳ ಉಲ್ಲೇಖ.

೧೧. ಇತರ ದ್ರಾವಿಡ ಭಾಷೆಗಳ ಜ್ಞಾತಿ ಪದಗಳ ಉಲ್ಲೇಖ ಹಾಗೂ ಸಂಸ್ಕೃತ, ಅರಾಬಿಕ್ ಮೂಲದ ಪದಗಳ ಮೂಲದ ಉಲ್ಲೇಖ.

೧೨. ಸಮಾಸ ಪದಗಳು, ಸಾಧಿತಪದಗಳು, ಸಾಧಿತ ನುಡಿಗಟ್ಟುಗಳು, ಇವುಗಳ ವಿವರಣೆ ಮತ್ತು ಉದಾಹರಣೆಗಳೊಂದಿಗೆ ಉಲ್ಲೇಖ.

ಈ ನಿಘಂಟಿಗೆ ಸಂಬಂಧಿಸಿದ ಇತರ ವಿವರಗಳು ಹೀಗಿವೆ :

೧.	ನಿಘಂಟಿನ ಆರಂಭ	೧೯೭೯
೨.	ಕಾರ್ಯಕರ್ತರ ತರಬೇತಿ	೧೯೭೯-೮೦
೩.	ಮಾದರಿ ಪುಟಗಳ ಪ್ರಕಟಣೆ ಮತ್ತು ಅಭಿಪ್ರಾಯ ಸಂಗ್ರಹ	೧೯೮೦-೮೧

೪. ಮಾಹಿತಿಗಳ ದಾಖಲಾತಿ ಮತ್ತು ಅವುಗಳ ಲಿಪೀಕರಣ ೧೯೮೧-೮೪

೫. ಮಾದರಿ ಸಂಚಿಕೆ ೧೯೮೪-೮೬

೬. ಎಲ್ಲ ಆರು ಸಂಪುಟಗಳ ಪ್ರಕಟಣೆ ೧೯೯೭

ಉಡುಪಿಯ ರಾಷ್ಟ್ರ ಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಡಾ। ಯು.ಪಿ. ಉಪಾಧ್ಯಾಯರ ಪ್ರಧಾನ ಸಂಪಾದಕತ್ವದಲ್ಲಿ ಈ ಕಾರ್ಯ ಸಂಪೂರ್ಣಗೊಂಡಿದೆ. ಒಟ್ಟು ೩೦೩೨ ಪುಟಗಳ ಈ ನಿಘಂಟು ಅತ್ಯಪೂರ್ವವಾದ ಸಾಧನೆಯಾಗಿದೆ.

೧೩. ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿಯ ಹಿರಿಮೆ

೧೯೮೯ರಲ್ಲಿ ಪ್ರಕಟವಾದ ಈ ನಿಘಂಟಿನ ಎರಡನೆಯ ಮುದ್ರಣದ ಪ್ರಕಟಣೆಯ ಬಗ್ಗೆ ಕೊಟ್ಟ ವಿವರಣೆಯಲ್ಲಿ ಹೀಗೆ ಹೇಳಲಾಗಿದೆ :

The Second Edition, published in 1989, is the triumphant culmination of the latest stage in the development of the Oxford English Dictionary-a 132 year process which produced twenty magnificent volumes, 22000 pages defining over half a million words.

ಈ ಎರಡನೆಯ ಮುದ್ರಣ ಬರುವ ವೇಳೆಗೆ ಈ ನಿಘಂಟಿನ ಬೆಳವಣಿಗೆಯಲ್ಲಿ ೧೩೨ ವರ್ಷಗಳು ಕಳೆದಿವೆ ಎಂಬ ಮಾತಿಗೆ ಸ್ವಲ್ಪ ವಿವರಣೆ ಅಗತ್ಯವಾಗಿದೆ. ಈ ನಿಘಂಟಿನ ಮೊದಲನೆಯ ಮುದ್ರಣ ಪ್ರಕಟವಾದುದು ೧೯೨೮ರಲ್ಲಿ ಅಂದರೆ ಸುಮಾರು ೬೦ ವರ್ಷಗಳ ಹಿಂದೆ. ಆ ಬಳಿಕ ೧೯೫೪ರಲ್ಲಿ ಪೂರಕ ಸಂಪುಟಗಳ ಕಾರ್ಯ (Supplements) ಮೊದಲಾಯಿತು. ೧೯೫೭ ರಿಂದ ೧೯೭೨ ರವರೆಗೆ ಮಾಡಿದ ಸಂಪಾದನ ಕಾರ್ಯ ಮೊದಲನೆಯ ಪೂರಕಸಂಪುಟ ಪ್ರಕಟವಾಗಲು ದಾರಿಮಾಡಿಕೊಟ್ಟಿತು. ನಾಲ್ಕು ಪೂರಕ ಸಂಪುಟಗಳಲ್ಲಿ ೫,೭೩೨ ಪುಟಗಳಷ್ಟು ಗಾತ್ರದ ಸಾಮಗ್ರಿಯಿದೆ. ೬೯೦೦೦ ಹೊಸ ಉಲ್ಲೇಖಗಳಿವೆ. ಹೀಗೆ ಈ ನಿಘಂಟನ್ನು ಅದ್ಯತನವಾದದ್ದನ್ನಾಗಿ ಮಾಡುವ ಪ್ರಯತ್ನ ಮತ್ತೂ ಮುಂದುವರಿಯಿತು.

ಎರಡನೆಯ ಮುದ್ರಣದಲ್ಲಿ ೫ ಲಕ್ಷ ಪದಗಳಿಗಿಂತ ಹೆಚ್ಚು ಮುಖ್ಯೋಲ್ಲೇಖಗಳಿವೆ. ಇವುಗಳ ಅರ್ಥವಿವರಣೆಗೆ ೨೪,೦೦,೦೦೦ ಕವಿ ಪ್ರಯೋಗಗಳನ್ನು ಬಳಸಲಾಗಿದೆ. ಅರ್ಥಗಳನ್ನು ಸೂತ್ರೀಕರಿಸಿರುವುದರಲ್ಲಿ ಈ ನಿಘಂಟನ್ನು ಮೀರಿದ ಮತ್ತೊಂದು ನಿಘಂಟು ಪ್ರಪಂಚದಲ್ಲಿಯೇ ಕಾಣಬರುವುದಿಲ್ಲ.

ಈ ನಿಘಂಟಿನ ಯೋಜನೆಗೆ ವಿಶೇಷ ತಜ್ಞರ ಸಲಹೆಯನ್ನು ಪಡೆಯಲಾಗಿದೆ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಮುದ್ರಣಾಲಯಕ್ಕೆ ಯುನೈಟೆಡ್ ಕಿಂಗ್‌ಡಮ್ಮಿನ IBM ಮತ್ತು ವಾಟರ್‌ಲೂ ವಿಶ್ವವಿದ್ಯಾನಿಲಯಗಳು ತಜ್ಞರ ಸಹಾಯವನ್ನು ನೀಡಿವೆ. ವಾಟರ್‌ಲೂ ವಿಶ್ವವಿದ್ಯಾನಿಲಯವು Software ಅನ್ನು ಸಿದ್ಧಪಡಿಸಿತು. ಇಂಗ್ಲೆಂಡಿನ ವ್ಯಾಪಾರ ಮತ್ತು ಕೈಗಾರಿಕೆಗಳ ಇಲಾಖೆಯು ಸಂಪಾದಕರ ಖರ್ಚನ್ನು ವಹಿಸಿಕೊಂಡಿದೆ. ಹೀಗೆ ಅನೇಕ ಕಡೆಯಿಂದ ಸಹಾಯವನ್ನು ಪಡೆದು ಈ ಮುದ್ರಣ ಪ್ರಕಟವಾಗಿದೆ.

ಮೊದಲ ಮುದ್ರಣಕ್ಕೆ ಹಿಡಿದ ಕಾಲವೇನೆಂಬುದನ್ನು ಪರಿಶೀಲಿಸುವುದು ತುಂಬ ಪ್ರಯೋಜನಕಾರಿಯಾದುದು. ೧೯೨೮ರಲ್ಲಿ ಅದರ ಪ್ರಕಟಣೆ ಸಂಪೂರ್ಣವಾದರೂ ಮೊದಲ ೯೬ ಪುಟಗಳ Fascicle ಪ್ರಕಟವಾದುದು ೧೮೮೪ರಲ್ಲಿ; ಅಂದರೆ ೪೪ ವರ್ಷಗಳ ಕಾಲ ಆ ಕೆಲಸಕ್ಕೆ ಬೇಕಾಯಿತು. ಆದರೆ ನಿಘಂಟಿನ ಸಂಪಾದನೆ ಕೆಲಸ ಅದಕ್ಕಿಂತ ಎಷ್ಟೋ ಹಿಂದೆಯೇ ಪ್ರಾರಂಭವಾಗಿತ್ತು. ೧೮೫೭ರಲ್ಲಿ ಇಂಗ್ಲೆಂಡಿನ ಫೈಲಲಾಜಿಕಲ್ ಸೊಸೈಟಿಯು (Philological Society) ಇಂಗ್ಲಿಷ್ ನಿಘಂಟುಗಳು ಒಂದೂ ಸರಿಯಾಗಿ ಸಂಪೂರ್ಣವಾಗಿಲ್ಲವೆಂದೂ ಹೊಸ ನಿಘಂಟು ಬೇಕೆಂದೂ ತೀರ್ಮಾನಿಸಿ ಕಾರ್ಯವನ್ನು ಪ್ರಾರಂಭಿಸಿತು. ಶಬ್ದಗಳನ್ನು ಸಂಗ್ರಹಿಸಲು ಆಗಲೇ ಮೊದಲು ಮಾಡಲಾಯಿತು. ಈ ಸೊಸೈಟಿಯ ಮೂವರು ಸದಸ್ಯರಾದ ಡಾ। ರಿಚರ್ಡ್ ಚೆನಿವಿಕ್ಸ್ ಟ್ರೆಂಚ್, ಹರ್ಬರ್ಟ್ ಕೋಲ್ರಿಡ್ಜ್ ಮತ್ತು ಫ್ರೆಡೆರಿಕ್ ಫರ್ನಿವಾಲ್ ಈ ಕೆಲಸದಲ್ಲಿ ಮುಂದುವರಿದರು. ಅವರು ಕ್ರಮವಾಗಿ ಶಬ್ದ ಸಂಗ್ರಹವನ್ನು ಮಾಡುತ್ತಿದ್ದರೂ ಆಗಿಂದಾಗ ನಿಘಂಟಿನ ಕೊನೆಯ ಸ್ವರೂಪದ ಬಗ್ಗೆ ಚರ್ಚೆ ನಡೆಯುತ್ತಲೇ ಇತ್ತು. ೧೮೧೨ರಲ್ಲಿ ಜರ್ಮನಿಯಲ್ಲಿ ಫ್ರಾನ್ಜ್-ಪಾಸ್ಸೋ ಎಂಬ ವಿದ್ವಾಂಸನು ಪ್ರಾರಂಭಿಸಿದ ರೀತಿಯಲ್ಲಿ ಪ್ರತಿಯೊಂದು ಶಬ್ದದ ಚರಿತ್ರೆಯನ್ನು ಹೇಳಬೇಕೆಂಬುದು ಉದ್ದೇಶವಾಗಿತ್ತು. ನಿಘಂಟುಕಾರನು ಎಲ್ಲ ಶಬ್ದಗಳನ್ನು ಸಂಗ್ರಹಿಸಬೇಕೇ ಹೊರತು ಒಳ್ಳೆಯ ಪದಗಳನ್ನು ಕ್ಲಿಷ್ಟಪದಗಳನ್ನು ಮಾತ್ರ ಸಂಗ್ರಹಿಸುವುದರಲ್ಲಿ ತೃಪ್ತಿಪಟ್ಟುಕೊಳ್ಳಬಾರದು ಎಂಬುದು ಅವರ ಧ್ಯೇಯವಾಗಿತ್ತು. ಹೀಗಿರುವುದರಿಂದ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಕಾರ್ಯ ಮೊದಲಾದುದು ೧೮೫೭ರಲ್ಲಿ. ಅನೇಕ ಅಡ್ಡಿಗಳನ್ನು ಅನುಭವಿಸಿದರೂ ಕಾರ್ಯ ಮಾತ್ರ ಮುಂದುವರಿಯುತ್ತಿತ್ತು. ಈ ಕಾಲದಲ್ಲಿ ನಿಘಂಟುಕಾರನಾದ James Murray ಪಟ್ಟಪಾಡನ್ನು 'Caught in the web of words' ಎಂಬ ಗ್ರಂಥದಲ್ಲಿ ಮರ್ರೆಯ ಮೊಮ್ಮಗಳು ತುಂಬ ಸ್ವಾರಸ್ಯವಾಗಿ ವರ್ಣಿಸಿದ್ದಾಳೆ.

ಇದನ್ನೆಲ್ಲ ಗಮನಿಸಿ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಕಾರ್ಯ ೧೮೫೭ರಲ್ಲಿ ಮೊದಲಾಗಿ ೧೯೨೮ರಲ್ಲಿ ಮುದ್ರಣ ಕಾರ್ಯವನ್ನು ಪೂರೈಸಿತು ಎಂದು ಹೇಳಬೇಕು. ಅಂದರೆ ಈ ನಿಘಂಟು ಯೋಜನೆ ಕಾರ್ಯರೂಪಕ್ಕೆ ಬಂದ ಮೇಲೆ ಫಲವನ್ನು ಕಾಣಲು ೭೦ ವರ್ಷಗಳು ಬೇಕಾಯಿತು ಎಂಬುದು ಸ್ಪಷ್ಟ.

ಈ ನಿಘಂಟಿನಲ್ಲಿ ಉಪಯೋಗಗೊಂಡಿರುವ ಕವಿಪ್ರಯೋಗಗಳನ್ನು ಶೇಖರಿಸಲು pigeon holes ಉಪಯೋಗ ಮಾಡಲಾಯಿತು. ಇಂಥ ೨೫೦೦ pigeon hole ಗಳು ಬೇಕಾಯಿತೆಂದು ವಿವರಣೆ ತಿಳಿಸುತ್ತದೆ. ಮೊದಲು ಉಪಯೋಗಿಸಿದ pigeon holeಗಳನ್ನು O.U. Pressನಲ್ಲಿ ರಕ್ಷಿಸಿಡಲಾಗಿದೆ.

ಈ ನಿಘಂಟಿನ ಬಗ್ಗೆ ವಿದ್ವಜ್ಜನರು ಆಡಿರುವ ಒಂದೆರಡು ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ :

1. I have taken this book like a mistress to bed (a weighty one but handleable) and pored over great many pages; looking for

omissions. Nothing is omitted, nothing however slangy or scabrous or high-tech.

– Anthony Burgess.

II. Unrivalled in completeness and unapproachable in authority is the Oxford Dictionary, as near infallibility, indeed, as we can hope to get, the greatest enterprise of its kind in history.

Stanely Baldwin
British Prime Minister.

ನಿಘಂಟುಗಳ ಕಾರ್ಯ ಇಂಥ ಪ್ರಶಸ್ತಿಯನ್ನು ಗಳಿಸುವಂತಿರಬೇಕಲ್ಲವೆ ?

OUD ಅಥವಾ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ನಿಘಂಟು ಬಹು ಆಶ್ಚರ್ಯಕರವಾದ ರೀತಿಯಲ್ಲಿ ಬೆಳೆಯುತ್ತಿದೆ. ೧೯೨೮ರಲ್ಲಿ ಪೂರ್ಣವಾಗಿ ಪ್ರಕಟವಾದ ಈ ನಿಘಂಟಿಗೆ, ೧೯೩೩ರಲ್ಲಿ, ಒಂದು ಪೂರಕ ಸಂಪುಟವನ್ನು ಮುದ್ರಿಸಲಾಯಿತು. ೧೯೫೭ರಲ್ಲಿ ರಾಬರ್ಟ್ ಬರ್ಚ್‌ಫೀಲ್ಡ್ ಎಂಬ ವಿದ್ವಾಂಸನ ನೇತೃತ್ವದಲ್ಲಿ ಈ ನಿಘಂಟಿಗೆ ಇಪ್ಪತ್ತನೆಯ ಶತಮಾನದಲ್ಲಿ ಆಡುಮಾತಿನಲ್ಲಿದ್ದ ಅನೇಕ ಶಬ್ದಗಳನ್ನು ಸೇರಿಸುವ ಪ್ರಯತ್ನ ನಡೆಯಿತು. ಆತನು ವೈಜ್ಞಾನಿಕ, ಯಾಂತ್ರಿಕ ಪಾರಿಭಾಷಿಕ ಶಬ್ದಗಳನ್ನು ಉತ್ತರ ಅಮೇರಿಕ, ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ದಕ್ಷಿಣ ಆಫ್ರಿಕ, ದಕ್ಷಿಣ ಏಷಿಯ ಮತ್ತು ಕ್ಯಾರೀಬಿಯನ್ ದ್ವೀಪಗಳಲ್ಲಿ ಆಡುತ್ತಿದ್ದ ಇಂಗ್ಲಿಷ್ ಭಾಷೆಯ ಶಬ್ದಗಳನ್ನು ಸೇರಿಸಿ ೧೯೮೨ರ ವೇಳೆಗೆ ನಾಲ್ಕು ಸಂಪುಟಗಳ ಪೂರಕ ಸಾಮಗ್ರಿಯನ್ನು ಪ್ರಕಟಿಸಿದನು. ಇದರಿಂದ ಉತ್ತೇಜನಗೊಂಡ ಪ್ರಕಾಶಕರು ಹೊಸದಾಗಿ ಪ್ರಕಟವಾದ ಪೂರಕ ಸಂಪುಟಗಳನ್ನು ಅಳವಡಿಸಿ ಒಟ್ಟು ನಿಘಂಟಿನ ಎರಡನೆಯ ಮುದ್ರಣವನ್ನೂ ಜೊತೆಯಲ್ಲಿಯೇ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪೂರ್ಣ ನಿಘಂಟನ್ನು ಕಂಪ್ಯೂಟರಿಗೆ ಅಳವಡಿಸುವ ಕಾರ್ಯವನ್ನು ಕೈಗೆತ್ತಿಗೊಂಡರು. ಐದು ವರ್ಷಗಳಲ್ಲಿ ಈ ಕಾರ್ಯದ ಸಮಾಪ್ತಿಯನ್ನು ಕಾಣಬೇಕಾದರೆ ೧೩.೫ ಮಿಲಿಯನ್ ಡಾಲರ್‌ಗಳು ಖರ್ಚಾಯಿತು. ೧೨೦ ಜನ ಬೆರಳಚ್ಚುಗಾರರು ೫೦ ಜನ ಕರಡಚ್ಚನ್ನು ತಿದ್ದುವವರೂ ಕೆಲಸ ಮಾಡಿದರು. ನಿಘಂಟುಕಾರರ ಒಂದು ಸಣ್ಣ ಸೈನ್ಯವೇ ಕೆಲಸದ ಉಸ್ತುವಾರಿಯನ್ನು ವಹಿಸಿಕೊಂಡಿತು. ೫,೦೦೦ ಹೊಸ ಶಬ್ದಗಳೂ ಅವುಗಳ ಹೊಸ ಅರ್ಥಗಳೂ ೪,೦೦,೦೦೦ ಶಬ್ದಗಳ ಸೂತ್ರೀಕರಣವೂ ಒಟ್ಟು ೬೦,೦೦೦,೦೦೦ ಶಬ್ದಗಳ ಶೇಖರಣೆಯಲ್ಲಿ ಪೂರೈಸಿದಾಗ ಕೇವಲ ಶೇಕಡ ಲ೫ರಷ್ಟು ಕೆಲಸ ಆಗಿತ್ತು. ಮಿಕ್ಕ ಶೇಕಡ ೧೫ರಷ್ಟು ಕೆಲಸವೂ ಸೇರಿ ಎಲ್ಲ ಕಾರ್ಯಪೂರೈಸಿ ೧೯೮೯ರಲ್ಲಿ ನಿರೀಕ್ಷಿಸಿದ ಸಮಯಕ್ಕೆ ಸರಿಯಾಗಿ ನಿಘಂಟಿನ ೨೨,೦೦೦ ಪುಟಗಳು ಪ್ರಕಟವಾದಾಗ ಒಟ್ಟು ದೇಶವೇ ಆ ಕಾರ್ಯವನ್ನು ಹಾಡಿ ಹೊಗಳಿತು.

೧೯೯೨ರಲ್ಲಿ ಈ ದೊಡ್ಡ ನಿಘಂಟನ್ನು CD-ROM ರೂಪದಲ್ಲಿ ಪ್ರಕಟಿಸಿದಾಗ ಮತ್ತೊಂದು ಆಶ್ಚರ್ಯ ಕಾದಿತ್ತು. ನಾಲ್ಕು ಅಡಿ ಅಗಲದ ಪುಸ್ತಕದ ಕಪಾಟಿನಲ್ಲಿ ತುಂಬಬಹುದಾದ

೧೫೦ ಪೌಂಡು ಭಾರದ ಗ್ರಂಥರಾಶಿಯು ಕೇವಲ ಕೆಲವು ಔನ್ಸ್ ಭಾರದ ಹೊಳೆಯುವ ಸಣ್ಣ ಡಿಸ್ಕಾಗಿ ರೂಪಾಂತರಗೊಂಡಿತ್ತು.

ಇದರ ಪ್ರಕಟಣೆಗೆ ತುಂಬ ಯಶಸ್ಸು ಲಭಿಸಿತು. ನಿಘಂಟನ್ನು ಉಪಯೋಗಿಸುವವರು ಕೆಲವು ಸೆಕೆಂಡುಗಳಲ್ಲಿ ತಮಗೆ ಬೇಕಾದ ಶಬ್ದದ ಅರ್ಥ, ಅದರ ಮೂಲ, ಅರ್ಥ ನಿರ್ಧಾರಕ್ಕೆ ಬೇಕಾದ ಗ್ರಂಥದ ವಾಕ್ಯ ಎಲ್ಲವನ್ನೂ ಕಂಪ್ಯೂಟರಿನಲ್ಲಿ ಕುಳಿತ ಕಡೆಯೇ ಕಾಣಬಹುದಾಯಿತು. ವಿದ್ವಾಂಸರಿಗೆ ಮಾತ್ರ ಲಭ್ಯವಾಗಿದ್ದ ಜ್ಞಾನಭಂಡಾರ ಈಗ ಎಲ್ಲ ಓದುಗರ ಸ್ವತ್ತಾಯಿತು.

ಈಗ ಇದೆಲ್ಲ ಪ್ರಕಟಿತ ಗ್ರಂಥರಾಶಿಯನ್ನೂ ಡಿಸ್ಕನ್ನೂ ಮತ್ತೆ ಪರಿಷ್ಕರಣ ಮಾಡುವ ಮೂರನೆಯ ಮೆಟ್ಟಿಲಿಗೆ ಏರ್ಪಾಟಾಗಿದೆ. ಒಟ್ಟು ನಿಘಂಟನ್ನು ಆಧುನಿಕಗೊಳಿಸಲಾಗುತ್ತಿದೆ. ಈ ನಿಘಂಟಿನ ಪ್ರಕಟಣೆ ಎಂದೂ ಲಾಭದಾಯಕವಾಗಿರಲಿಲ್ಲ ! ಇಂಗ್ಲಿಷ್ ಭಾಷೆಯನ್ನು ಎಲ್ಲೆಲ್ಲಿ ಮಾತನಾಡುತ್ತಿದ್ದಾರೋ ಆ ಎಲ್ಲ ಕಡೆಗಳಲ್ಲಿಯೂ ಆ ಭಾಷೆಯನ್ನು ಬೆಳೆಸಲು ಅದರಲ್ಲಿ ಸಂಶೋಧನೆಯನ್ನು ಮುಂದುವರಿಸಲು ಪ್ರಕಾಶಕರು ೩೪ ಮಿಲಿಯನ್ ಪೌಂಡುಗಳನ್ನು ಅಂದರೆ ೫೫ ಮಿಲಿಯನ್ ಡಾಲರುಗಳನ್ನು ಅಂದರೆ ೨೭೫ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ! ಈ ಸಂಶೋಧನ, ಪರಿಷ್ಕರಣ ಕಾರ್ಯದ ಪ್ರಗತಿಯನ್ನು ಮೂರು ತಿಂಗಳಿಗೊಮ್ಮೆ ಕಂಪ್ಯೂಟರಿನಲ್ಲಿ (on line) ಪ್ರಕಟಿಸಲಾಗುವುದು.

ಹೀಗೆ ಈ ನಿಘಂಟು ೧೪೦ ವರ್ಷಗಳ ಕಾಲ ಬೆಳೆಯುತ್ತ ಬಂದಿದೆ. ಇದು ಕೇವಲ ನಿಘಂಟಲ್ಲ. ಇದು ಇಂಗ್ಲಿಷ್ ಜನತೆಯ ಸಂಸ್ಕೃತಿಯ ವಿಕಾಸದ ದಾಖಲೆ; ಇಂಗ್ಲಿಷ್ ಜನಾಂಗದ ಸಾಮಾಜಿಕ ಅಭಿವೃದ್ಧಿಯ ಲಿಖಿತ ಚಾರಿತ್ರಿಕ ಆಸ್ತಿ. ಇದು ಮುಂದೆಯೂ ಹೀಗೆಯೇ ಬೆಳೆಯುತ್ತ ಹೋಗುವ ಸಂಸ್ಕಾರ ವಿಧಾನ.

ಕನ್ನಡಿಗರಾದ ನಾವು ಈ ಉದಾಹರಣೆಯಿಂದ ಕಲಿಯಬೇಕಾದುದು ಬಹಳವಾಗಿದೆ. ಒಂದು ಭಾಷೆಯ ಬೆಳವಣಿಗೆಗೆ ಆ ಭಾಷೆಯ ನಿಘಂಟಿನ ಪ್ರಗತಿಯೂ ಹೇಗೆ ಸಹಾಯವಾಗುತ್ತದೆ ಎಂಬುದನ್ನು ಅರಿತರೆ ಆ ಭಾಷೆಗೆ ಸಂಬಂಧಿಸಿದಂತೆ ಒಂದು ಶಾಶ್ವತ ನಿಘಂಟು ಇಲಾಖೆ ಸದಾ ಕಾರ್ಯಗತವಾಗಿರುವಂತೆ ಮಾಡಬೇಕಾದ ಅಗತ್ಯವು ಗೋಚರವಾಗುತ್ತದೆ. ಅನೇಕ ಯುವ ವಿದ್ವಾಂಸರು ಈ ವಿಷಯದಲ್ಲಿ ಆಸಕ್ತಿ ವಹಿಸಿ ದುಡಿಯಬೇಕು. ಭಾಷೆಗೆ ಸಂಬಂಧಿಸಿದ ಸಂಶೋಧನೆಗೆ ಕೊನೆ ಎಂಬುದಿಲ್ಲ.

೧೪. ಕನ್ನಡ ನಿಘಂಟು ಮತ್ತು ಎರವಲು ಪದಗಳು

ಭಾರತ ದೇಶದಲ್ಲಿ ಅಂತರ್ಗತವಾಗಿರುವ ಅನೇಕ ಪ್ರಾಂತಗಳಲ್ಲಿ ಕರ್ನಾಟಕಕ್ಕೆ ಬಹು ಪ್ರಧಾನವಾದ ಸ್ಥಾನವಿದೆ. **ಕರ್ನಾಟಕ** ಎಂಬ ಹೆಸರು ಕ್ರಿಸ್ತಪೂರ್ವದಲ್ಲಿಯೇ ಮಹಾಭಾರತದಲ್ಲಿ ಪ್ರಯೋಗವಾಗಿದೆ. ಅನೇಕ ಪುರಾಣಗಳಲ್ಲಿಯೂ ಸಾಹಿತ್ಯ ಕೃತಿಗಳಲ್ಲಿಯೂ ಈ ಹೆಸರು ಉಲ್ಲೇಖಗೊಂಡಿದೆ. ಆದುದರಿಂದ ಅತಿ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೆಳೆದು ಬಂದ ಒಂದು ಸಂಸ್ಕೃತಿಯಿದೆ ಎಂಬುದನ್ನು ಸುಲಭವಾಗಿ ಊಹಿಸಬಹುದು. ಕನ್ನಡ, ಕರ್ನಾಟಕ ಎಂಬ ಶಬ್ದಗಳಿಗೆ ಕನ್ನಡ ದೇಶವೆಂದೂ ಕನ್ನಡ ಭಾಷೆಯೆಂದೂ ಎರಡು ಅರ್ಥಗಳೂ ಮೊದಲಿನಿಂದಲೂ ಹೊಂದಿಕೊಂಡು ಬಂದಿವೆ. **ಕನ್ನಡ** ಎಬ್ಬ ಶಬ್ದವೇ **ಕರ್ನಾಟಕ** ಎಂಬುದಾಗಿ ಸಂಸ್ಕೃತೀಕರಣಗೊಂಡಿರಬೇಕೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ಕನ್ನಡ ದೇಶ ಒಂದು ಸಂಪದ್ಭರಿತವಾದ ಪ್ರದೇಶ. ನಿಸರ್ಗದತ್ತವಾದ ಪರ್ವತ ಪಂಕ್ತಿಗಳು, ಕರಾವಳಿ, ಪ್ರಸ್ಥಭೂಮಿ, ಬಯಲುನಾಡು, ಅರಣ್ಯ ಪ್ರದೇಶ, ಚಿತ್ರವಿಚಿತ್ರವಾದ ಪ್ರಾಣಿಸಂಕುಲ, ಪಕ್ಷಿಸಂಕುಲ, ಪೂರ್ವಕ್ಕೂ ಪಶ್ಚಿಮಕ್ಕೂ ಹರಿಯುವ ಜೀವನದಿಗಳು ಇವೆಲ್ಲ ಈ ನಾಡನ್ನು ಇತರ ಪ್ರಾಂತಗಳಿಂದ ಪ್ರತ್ಯೇಕಿಸಿವೆ. ಬತ್ತ, ಕಬ್ಬು, ಕಾಫಿ, ತೆಂಗು, ಅಡಕೆ ಮುಂತಾದ ಬೆಳೆಗಳು ಈ ದೇಶಕ್ಕೆ ಐಶ್ವರ್ಯವನ್ನು ತಂದಿವೆ. ಈ ನಾಡಿನಲ್ಲಿ ಬಾಳುವ ಜನ ಅವರ ವೈವಿಧ್ಯಮಯ ಸಂಸ್ಕೃತಿಯಿಂದ ಇತರರಿಗೆ ಮಾದರಿಯಾಗಿದ್ದಾರೆ.

ಈ ನಾಡಿನಲ್ಲಿ ಜನರಾಡುವ ಭಾಷೆ ಕನ್ನಡ. ಶಾಸನಾಧಾರದ ಮೇಲೆ ನಿಷ್ಕರ್ಷಿಸುವುದಾದರೆ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವೇ ಅತ್ಯಂತ ಪ್ರಾಚೀನವಾದ ಕನ್ನಡ ಲಿಪಿಯ ದೃಷ್ಟಾಂತ. ಆದರೆ ನಾಡಿನ ಹೆಸರು ಮಹಾಭಾರತದಲ್ಲಿ ಕ್ರಿಸ್ತಪೂರ್ವದಲ್ಲಿಯೇ ಉಕ್ತವಾಗಿರುವ ಕಾರಣದಿಂದ ಈ ನಾಡಿನ ಜನರು ಆಡುವ ಭಾಷೆ-ಕನ್ನಡ, ತನ್ನ ಪ್ರಾಚೀನ ರೂಪದ ಆಡು ಮಾತಿನಲ್ಲಿ ಕ್ರಿಸ್ತಶಕದ ಆದಿಯಿಂದಲೂ ಪ್ರಚಾರದಲ್ಲಿದ್ದಿರಬೇಕು. ಗ್ರಾಂಥಿಕವಾಗಿ ೯ನೆಯ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗವೆಂಬ ಕೃತಿಯಲ್ಲಿ ಅನೇಕ ಪೂರ್ವಕವಿಗಳ ಹೆಸರುಗಳು ಉಲ್ಲೇಖಗೊಂಡಿವೆ. ನಮ್ಮ ದುರದೃಷ್ಟದಿಂದ ಆ ಕವಿಗಳ ಯಾವ ಗ್ರಂಥಗಳೂ ಉಪಲಬ್ಧವಾಗಿಲ್ಲ.

೨೦೦೧ನೆಯ ವರ್ಷದ ಜನಗಣತಿಯ ಪ್ರಕಾರ ಕನ್ನಡ ನಾಡಿನಲ್ಲಿ ವಾಸಿಸುವ ಜನರ ಸಂಖ್ಯೆ ೫೨,೭೩೩,೯೫೮; ಗಂಡಸರು ೨೬,೮೫೬, ೩೪೩, ಹೆಂಗಸರು ೨೫,೮೭೭, ೬೧೫ ಹೀಗೆ ಸುಮಾರು ಐದು ಕೋಟಿ ಜನರಿರುವ ಕನ್ನಡ ನಾಡಿನಲ್ಲಿ ಕನ್ನಡವನ್ನು

ಮಾತೃಭಾಷೆಯಾಗಿ ಆಡುವವರು ೧೯೯೧ರ ಗಣತಿಯಂತೆ ಶೇಕಡ ೬೫. ಇತರ ಭಾಷೆಗಳನ್ನು ಆಡುವವರ ಪ್ರಮಾಣ ಹೀಗಿದೆ : ತೆಲುಗು ೮.೭%, ಉರ್ದು ೮.೭%, ಮರಾಠಿ ೪.೫%, ತಮಿಳು ೩.೭%, ತುಳು ೩.೬%, ಕೊಂಕಣಿ ೨.೧% ಇದಲ್ಲದೆ ಕೊಡವ, ಲಂಬಾಣಿ, ಮಲಯಾಳಿ, ಹಿಂದಿ, ಗುಜರಾತಿ, ಪಂಜಾಬಿ ಮುಂತಾದ ಭಾಷೆಗಳನ್ನು ಮಾತೃಭಾಷೆಯಾಗಿ ಹೊಂದಿರುವವರೆಲ್ಲರ ಸಂಖ್ಯೆ ೩.೫%. ಈ ಕೊನೆಯ ವರ್ಗಕ್ಕೆ ಸೇರಿರುವ ಜನರು ಹೆಚ್ಚಾಗಿ ನಗರ ಪ್ರದೇಶಗಲ್ಲಿ ವಾಸವಾಗಿದ್ದಾರೆ. ಕೊಡವ ಭಾಷೆ ಕೊಡಗಿನಲ್ಲಿಯೂ ಲಂಬಾಣಿ ಭಾಷೆ ಲಂಬಾಣಿಗಳು ವಾಸ ಮಾಡುವ ತಾಂಡಾಗಳಲ್ಲಿಯೂ ಪ್ರಚಾರದಲ್ಲಿವೆ. ಹೀಗಿರುವುದರಿಂದ ಕನ್ನಡಿಗರಿಗೆ ನಗರ ಪ್ರದೇಶದಲ್ಲಿ ಈ ಎಲ್ಲ ಭಾಷೆಗಳೂ ಶ್ರವಣಗೋಚರವಾಗಿರುತ್ತವೆ.

ನಗರದಲ್ಲಿ ಜನರಾಡುವ ಭಾಷೆಗೂ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಜನರಾಡುವ ಭಾಷೆಗೂ ಬೇಕಾದಷ್ಟು ವ್ಯತ್ಯಾಸವಿದೆ. ಜಿಲ್ಲೆ ಜಿಲ್ಲೆಗಳಿಗೆ ಶಬ್ದಗಳ ಉಚ್ಚಾರಣೆಯಲ್ಲಿಯೂ ಕನ್ನಡವಲ್ಲದ ಬೇರೆ ಭಾಷೆಗಳ ಶಬ್ದಗಳನ್ನು ಉಪಯೋಗಿಸುವುದರಲ್ಲಿಯೂ ಅನೇಕ ವ್ಯತ್ಯಾಸಗಳಿವೆ. ಬೀದರ್ ಜಿಲ್ಲೆಯ ಜನರು ಆಡುವ ಕನ್ನಡ ಮಾತು ಹಳೆಯ ಮೈಸೂರಿನ ಜನಕ್ಕೆ ಅರ್ಥವೇ ಆಗುವುದಿಲ್ಲ!

ರಾಜಕೀಯವಾಗಿ ಕನ್ನಡ ನಾಡು ಬೇರೆ ಬೇರೆ ಆಡಳಿತಗಳಿಗೆ ಸಿಕ್ಕಿ ಅನೇಕ ವಿಭಾಗಗಳು ಬೇರೆ ಬೇರೆ ಭಾಷೆಗಳ ಪ್ರಭಾವಕ್ಕೆ ಒಳಗಾದುವು. ಈ ಚಾರಿತ್ರಿಕ ಘಟನೆಗಳ ಪರಿಣಾಮವಾಗಿ ನಮ್ಮ ಭಾಷೆಗೆ ಇತರ ಅನೇಕ ಭಾಷೆಗಳ ಶಬ್ದಗಳು ಬಂದು ಸೇರಿಕೊಂಡಿವೆ.

ಎರವಲು ಪದ ಎಂದರೇನು ?

ನಾವು ಆಡುವ ಭಾಷೆಗೆ ಬೇರೊಂದು ಭಾಷೆಯಿಂದ ಬಂದು ಸೇರಿಕೊಂಡು ನಮಗೆ ಪ್ರಯೋಜನಕರವಾಗಿರುವ ಪದವನ್ನು **ಎರವಲು ಪದ** ಎಂದು ಕರೆಯುತ್ತೇವೆ. ಇದನ್ನೇ **ಅನ್ಯದೇಶೀ** ಪದ ಎಂದೂ, **ಅನ್ಯದೇಶ್ಯ** ಎಂದೂ ಕರೆಯುತ್ತೇವೆ.

Loan Word ಎಂಬ ಇಂಗ್ಲಿಷಿನ ಪಾರಿಭಾಷಿಕ ಶಬ್ದಕ್ಕೆ ಪ್ರತಿಯಾಗಿ ಕನ್ನಡದಲ್ಲಿ ಉಪಯೋಗಿಸುತ್ತಿರುವ ಶಬ್ದ **ಎರವಲು ಪದ**. ಈ ಪದ ಬೇರೆ ಭಾಷೆಯಿಂದ ನೇರವಾಗಿ ನಮ್ಮ ಭಾಷೆಗೆ ಬಂದು ಸೇರಿಕೊಂಡಿರಬಹುದು. ಅಥವಾ ಅಂಥ ಅನ್ಯ ದೇಶ್ಯದ ಅನುವಾದವಾಗಿರಬಹುದು. ಅಥವಾ ಇತರ ಭಾಷೆಯವರು ಉಪಯೋಗಿಸುವ ಮಾನಸಿಕ ಚಿತ್ರವಾಗಿರಬಹುದು.

ಮಾನಸಿಕ ಚಿತ್ರ ಎಂಬುದು **Mental Image** ಎಂಬ ಇಂಗ್ಲಿಷ್ ಶಬ್ದದ ಕನ್ನಡ ಅನುವಾದ. ಒಂದು ಉದಾಹರಣೆಯನ್ನು ಕೊಟ್ಟು ಇದನ್ನು ವಿವರಿಸಬಹುದು. ಸ್ಲೇಟು ಎನ್ನುವುದು **Slate** ಎಂಬ ಇಂಗ್ಲಿಷ್ ಪದದ ನೇರ ಪ್ರಯೋಗ. ಆದರೆ **'ಆಕಾಶ ಕಾಯ'** ಎಂಬುದು **Heavenlly Body** ಎಂಬುದರ ಅನುವಾದ. ಅದು ಎರವಲು ಅನುವಾದ ಪದ. ಇದು ಮಾನಸಿಕ ಚಿತ್ರವೂ ಆಗಬಹುದು. ಇಂಥ ಶಬ್ದಗಳಿಗೆ ನಮ್ಮ ಭಾಷೆಯ ಚರಿತ್ರೆಯಲ್ಲಿ ಹಿಂದೆ ಎಂದೂ ಪ್ರಯೋಗವಿರಲಿಲ್ಲ.

ಎರವಲು ಕನ್ನಡ ಶಬ್ದ. ತಮಿಳಿನಲ್ಲಿ **ಇರವಲು** ಎಂಬ ಜ್ಞಾತಿ ಶಬ್ದವಿದೆ. ಇದಕ್ಕೆ **ಸಾಲ, ಕಡ** ಎಂದು ಅರ್ಥ. **ಎರವು** ಎಂಬ ಶಬ್ದಕ್ಕೆ **ಅಲ್** ಎಂಬ ಭಾವನಾಮ ಪ್ರತ್ಯಯವು ಸೇರಿ ಎರವಲು ಎಂದಾಗುತ್ತದೆ. ಆದರೆ **ಸಾಲ, ಕಡ, ಬೇಡಿ ತಂದದ್ದು** ಎಂಬ ಅರ್ಥ **ಎರವಲು** ಪದಕ್ಕೆ ಇಲ್ಲ. ಅದು ಹಿಂದಿರುಗಿಸಲೇ ಬೇಕಾದ ಸಾಲವಲ್ಲ; ಎಂದೂ ಹಿಂದಿರುಗಿಸಬೇಕಾಗಿರದ ಸಾಲ.

ಕನ್ನಡದಲ್ಲಿ **ಸಾಲ** ಶಬ್ದ. ನಮ್ಮ ತಲೆ ತಿನ್ನುತ್ತಿದೆ. '**ಬರೆವರ ಕೂಢ ಹಗೆ ಬೇಡ, ಬಂಗಾರದ ಎರವು ಬೇಡ**' ಎನ್ನುತ್ತಾನೆ ಸರ್ವಜ್ಞ. ಬಂಗಾರವನ್ನು ಸಾಲ ತಂದು ಬದುಕಿದವರುಂಟೆ? ಸಾಲಕ್ಕೆ ಬಡ್ಡಿಯ ಸಂಬಂಧ ಬೇರೆ ಇದೆ. **ಸಾಲ ಕೊಡು** ಎಂಬ ಶಬ್ದಕ್ಕೆ ಎರಡು ಅರ್ಥವಿದೆ . ೧. ಸಾಲವಾಗಿ ಹಣ ಕೊಡು. ೨. ಸಾಲವನ್ನು ಬಡ್ಡಿ ಸಹಿತ ಹಿಂದಿರುಗಿಸು. ಸರ್ವಜ್ಞನ

ಸಾಲವನು ಕೊಂಬಾಗ ಹಾಲೋಗರುಂಡಂತೆ

ಸಾಲಿಗನು ಬಂದು ಸೆಳೆವಾಗ, ಕಿಬ್ಬದಿಯ

ಕೀಲು ಮುರಿದಂತೆ - ಸರ್ವಜ್ಞ

ಎಂಬ ತ್ರಿಪದಿಯಲ್ಲಿ **ಸಾಲಿಗ** ಎಂದರೆ **ಸಾಲ ಕೊಟ್ಟಿರುವವನು** ಎಂದರ್ಥ. ಸಾಮಾನ್ಯರು ಮಾತನಾಡುವಾಗ ಅವನು ಸಾಲಿಗನಾಗಿ ಒದ್ದಾಡುತ್ತಾ ಇದ್ದಾನೆ ಎಂದರೆ ಸಾಲ ಮಾಡಿರುವವನು ಎಂದರ್ಥ.

ಶೇಕ್ಸ್ಪಿಯರ್ ತನ್ನ ಹ್ಯಾಮ್ಲೆಟ್ ನಾಟಕದಲ್ಲಿ ವ್ಯವಹಾರ ಕುಶಲನಾದ ಪೊಲೋನಿಯಸ್ ಎಂಬ ಪಾತ್ರದ ಮೂಲಕ ಈ ಮಾತುಗಳನ್ನು ಹೇಳಿಸಿದ್ದಾನೆ :

Neither a borrower nor a lender be,

For loan often loses both itself and friend;

And borrowing dulls the edge of husbandry.

ಹೀಗೆ ಸಾಲದ ಬಗ್ಗೆ ಎಚ್ಚರದಿಂದ ಇರಬೇಕೆಂಬ ತಿಳಿವಳಿಕೆಯನ್ನು ನೀಡಿದ್ದಾನೆ.

ಸಂಸ್ಕೃತದಲ್ಲಿಯೂ ಋಣವನ್ನು ಕುರಿತು ನೂರಾರು ಸುಭಾಷಿತಗಳಿವೆ. **ಋಣಗ್ರಾಹಿ, ಋಣದಾತೃ, ಋಣದಾಸ, ಋಣಮುಕ್ತಿ, ಋಣವಿಮೋಚನೆ** ಮುಂತಾಗಿ ಶಬ್ದಗಳು ಬೆಳೆಯುತ್ತವೆ. ಈ ಎಲ್ಲ ಹೆದರಿಕೆಗಳಿಂದ ಮುಕ್ತವಾದ ಶಬ್ದ **ಎರವಲು ಪದ.**

ಎರವಲು ಎಂಬ ಶಬ್ದವನ್ನು ನಾವು ಸಂಸ್ಕೃತ ಮತ್ತು ಪ್ರಾಕೃತ ಶಬ್ದಗಳಿಂದ ಕನ್ನಡಕ್ಕೆ ಬಂದವುಗಳನ್ನು ಹೆಸರಿಸುವಾಗ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಸಂಸ್ಕೃತದ ಒಂದು ಶಬ್ದವನ್ನು **ತತ್ಸಮ** ಎಂದು ಕರೆದು ಅದರ ಕನ್ನಡದ ರೂಪವನ್ನು **ತದ್ಭವ** ಎಂದು ಕರೆದು ಅದನ್ನು ಕನ್ನಡವನ್ನಾಗಿ ಮಾಡಿಕೊಂಡು ಶತಮಾನಗಳಾಗಿವೆ. ಹಾಗೆಯೇ ಪ್ರಾಕೃತದಿಂದ ಬಂದ ಶಬ್ದಗಳೂ

ನಮ್ಮಲ್ಲಿ ಹೊಂದಿಕೊಂಡು ಬಿಟ್ಟಿವೆ. ಕನ್ನಡದ ಶಬ್ದ ಸಂಪತ್ತಿನಲ್ಲಿ ಇವುಗಳ ಭಾಗ 50% ಕ್ಕಿಂತ ಹೆಚ್ಚು. ಆದುದರಿಂದ ಈ ಲೇಖನದಲ್ಲಿ ಇತರ ಅನ್ಯದೇಶ್ಯಗಳಿಂದ ಬಂದ ಶಬ್ದಗಳನ್ನು ಮಾತ್ರ ಗಮನಿಸಲಾಗಿದೆ. ಇವುಗಳಲ್ಲಿಯೂ ಕೂಡ ಕೆಲವು ನಮಗೆ ತಿಳಿಯದಂತೆ ಸಂಸ್ಕೃತ ಅಥವಾ ಪ್ರಾಕೃತ ಮೂಲಕ್ಕೇ ಹೋಗಬಹುದು ! ಇದು ಸಂಶೋಧನೆಯಿಂದ ಸ್ಪಷ್ಟಪಡುತ್ತದೆ. ಒಂದು ಉದಾಹರಣೆಯನ್ನು ಪರಿಶೀಲಿಸೋಣ. **ದಳವಾಯಿ** ಈ ಶಬ್ದವನ್ನು ವಿವರಿಸುತ್ತ ನಮಗೆ ಪಾಠ ಮಾಡಿದ ಹಿಂದಿನ ಅಧ್ಯಾಪಕರು ಆ ಶಬ್ದವನ್ನು **ದಳದ + ಬಾಯ್ = ದಳವಾಯ್.** ಇದೇ **ದಳವಾಯಿ** ಆಗಿದೆ ಎಂದು ತಿಳಿವಳಿಕೆ ನೀಡಿದ್ದರು. ನಮ್ಮ ಸಮವಯಸ್ಸಿನವರೂ ಅಧ್ಯಾಪಕರಾಗಿ ಹಾಗೆಯೇ ಪಾಠ ಹೇಳಿದ್ದರು. ಆದರೆ ನಿಘಂಟು ನಿರ್ಮಾಣಕ್ಕೆ ಕುಳಿತಾಗ ದಳವಾಯಿ ಎಂಬ ಶಬ್ದದ ಪೂರ್ವಾಪರವನ್ನು ಸಂಪೂರ್ಣವಾಗಿ ಪರಿಶೀಲಿಸಿದಾಗ ನನಗೆ ಆಶ್ಚರ್ಯವು ಕಾದಿತ್ತು. ಸಂಸ್ಕೃತದ **ದಳಪತಿ** ಎನ್ನುವ ಶಬ್ದ ಪ್ರಾಕೃತದಲ್ಲಿ **ದಳವಇ** ಎಂದಾಗುತ್ತದೆ. ಇದೇ ದೇಶೀಯ ಭಾಷೆಗಳಿಗೆ ಅದೇ ರೂಪದಲ್ಲಿ ಬಂದು ಬಳಿಕ **ದಳವಾಯಿ** ಆಗಿದೆ. ಹೀಗೆ ಆಳವಾಗಿ ಶಬ್ದಗಳ ಮೂಲವನ್ನು ಹುಡುಕಲು ಹೊರಟರೆ ಅನೇಕ ಹೊಸ ಅಂಶಗಳು ಗೋಚರವಾಗಿ ಭಾಷೆಯಲ್ಲಿ ಆಗುವ ಚಮತ್ಕಾರಗಳ ಪರಿಚಯವಾಗುತ್ತದೆ. ಎರವಲು ಪದಗಳ ವ್ಯಾಸಂಗ ಅಂಥ ರೋಮಾಂಚಕಾರಿ ಕ್ಷೇತ್ರ.

ಎರವಲು ಪದಗಳನ್ನು ಕುರಿತ ವ್ಯಾಸಂಗವು ಭಾಷಾಶಾಸ್ತ್ರದ ಬಹು ಮುಖ್ಯವಾದ ಅಂಗವಾಗಿದೆ. ಭಾಷೆಯ ದೃಷ್ಟಿಯಿಂದ ಅದು ಎಷ್ಟು ಪ್ರಮುಖವೋ ಸಂಸ್ಕೃತಿಯ ದೃಷ್ಟಿಯಿಂದಲೂ ಅಷ್ಟೇ ಪ್ರಧಾನವಾದುದು. ಈ ಕ್ಷೇತ್ರದಲ್ಲಿ ನಡೆಯುವ ವ್ಯಾಸಂಗದಿಂದಲೂ ಸಂಶೋಧನೆಯಿಂದಲೂ ಎರವಲು ಪಡೆಯುವ ಮತ್ತು ಎರವಲು ನೀಡುವ ಎರಡು ಭಾಷೆಗಳ ಧ್ವನಿ ವ್ಯವಸ್ಥೆಗಳ ಪರಿಚಯವಾಗುತ್ತದೆ. ಅಲ್ಲದೆ ಒಂದು ಗೊತ್ತಾದ ಕಾಲಾವಧಿಯಲ್ಲಿ ಆಗಲಿ, ಅಥವಾ ಚಾರಿತ್ರಿಕ ಬೆಳವಣಿಗೆಯ ಮಜಲುಗಳಲ್ಲಿ ಆಗಲಿ, ಆ ಭಾಷೆಯಲ್ಲಿ ಆಗುವ ಧ್ವನಿ ವ್ಯವಸ್ಥೆಯ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು ಭಾಷೆಯ ಚರಿತ್ರೆಯನ್ನು ಅಭ್ಯಾಸ ಮಾಡುವಾಗ ಆ ಭಾಷೆಯ ಧ್ವನಿವ್ಯವಸ್ಥೆ, ಶಬ್ದ ಸ್ವರೂಪ, ಅರ್ಥನಿರೂಪಣೆ, ವಾಕ್ಯಗಳ ನಿರ್ಮಾಣ, ವಾಕ್ಯಗಳಲ್ಲಿನ ಪದಗಳ ಆನುಪೂರ್ವಿ ಮುಂತಾದವುಗಳನ್ನು ಮಾತ್ರ ಗಮನಿಸುವುದಲ್ಲ. ಕಾಲಕ್ರಮದಲ್ಲಿ ಆ ಭಾಷೆಯ ಮೇಲೆ ಇತರ ಭಾಷೆಗಳ ಪ್ರಭಾವವು ಎಷ್ಟಾಗಿದೆ ಎಂಬುದನ್ನೂ ಗುರುತಿಸಬೇಕಾಗುತ್ತದೆ.

ಒಂದು ಭಾಷೆಯ ಶಬ್ದ ಸಂಪತ್ತು ಆ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ಸಾಧನೆಗಳನ್ನು ಗುರುತಿಸುವ ಮೂಲ ಸಾಮಗ್ರಿಯಾಗಿದೆ; ಆ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ಸಾಧನೆಗಳನ್ನು ಭಾಷಿಕರ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿಯುವ ದೃಷ್ಟಾಂತ. ಕೆಲವು ಶಬ್ದಗಳಂತೂ ಆ ಭಾಷೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಪರಿಹರಿಸುವ ಸಾಧನವಾಗಿವೆ. ಆದ್ದರಿಂದಲೇ ಚರಿತ್ರಕಾರರೂ, ಭಾಷಾಶಾಸ್ತ್ರಜ್ಞರೂ ಎರವಲು ಪದಗಳ ಪ್ರಾಮುಖ್ಯವನ್ನು ಸ್ಥಾಪಿಸುತ್ತಾರೆ.

ಪ್ರಪಂಚದಲ್ಲಿ ಈಗ ಪ್ರಚಲಿತವಾಗಿರುವ ಸುಸಂಸ್ಕೃತವಾದ ಯಾವ ಭಾಷೆಯ ಶಬ್ದ

ಸಂಪತ್ತನ್ನಾಗಲಿ ಚಾರಿತ್ರಿಕವಾಗಿ ಪರಿಶೀಲಿಸಿ ವಿಶ್ಲೇಷಿಸಿದರೆ ಆ ಎಲ್ಲ ಭಾಷೆಗಳಲ್ಲಿಯೂ ಇರುವ ಅನೇಕ ಎರವಲು ಪದಗಳು ಕಂಡುಬರುತ್ತವೆ. ಇದಕ್ಕೆ ಯಾವೊಂದು ಭಾಷೆಯೂ ಅಪವಾದವಾಗಿಲ್ಲ.

ಕನ್ನಡದ ವಿಷಯವನ್ನು ಪರಿಶೀಲಿಸಿದರೆ ನಮ್ಮಲ್ಲಿ ಉಪಯೋಗದಲ್ಲಿಲ್ಲದ ಎಷ್ಟೋ ವಸ್ತುಗಳ ಹೆಸರುಗಳನ್ನು ನಾವು ಎರವಲು ಪಡೆಯಲೇಬೇಕಿದೆ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಇತರ ಭಾಷೆಗಳಲ್ಲಿರುವ ಕೆಲವು ಭಾವನೆಗಳು ನಮ್ಮಲ್ಲಿ ಇರುವುದೇ ಇಲ್ಲ. ಇಂಥವನ್ನು ಇಂಥ ಭಾವನೆಗಳ ಹೆಸರನ್ನು ತಿಳಿಯದೆ ಎರಡು ಭಾಷೆಗಳ ಜನರಲ್ಲಿ ಮಾತುಕತೆಗಳು ಮುಂದುವರಿಯುವ ಸಾಧ್ಯತೆಯೇ ಇರುವುದಿಲ್ಲ.

ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆ. ಆದ್ದರಿಂದ ಈ ಭಾಷೆಯಲ್ಲಿ ದ್ರಾವಿಡ ಮೂಲದ ಪದಗಳ ಒಂದು ಗುಂಪೂ, ಇತರ ಭಾಷೆಗಳಿಂದ ಎರವಲು ಪಡೆದ ಪದಗಳ ಇನ್ನೊಂದು ಗುಂಪೂ ಇವೆ. ತಮಿಳು, ತೆಲುಗು, ಮಲಯಾಳಂ ಮತ್ತು ತುಳು ಮುಂತಾದ ದ್ರಾವಿಡ ಮೂಲದ ಪದಗಳನ್ನು ಎರವಲು ಎಂದು ಕರೆಯಲಾಗುವುದಿಲ್ಲ. ಅವುಗಳು ಕೇವಲ **ಜ್ಞಾತಿ** ಶಬ್ದಗಳು. ಕಾಲಕ್ರಮದಲ್ಲಿ ಇಂಥ ಜ್ಞಾತಿ ಪದಗಳಲ್ಲಿ ಕೆಲವು ಪ್ರಯೋಗದಲ್ಲಿ ನಿಂತು ಕಣ್ಮರೆಯಾಗಿರಬಹುದು. ಈಗ ಮತ್ತೆ ಗುರುತಿಸಲ್ಪಟ್ಟಿರಬಹುದು. ಏನೇ ಆದರೂ ಅಂಥವು ಎರವಲುಗಳಲ್ಲ, ಅವು ಜ್ಞಾತಿಗಳೇ ! ಆ ಭಾಷೆಗಳ ಎರವಲು ಪದಕೋಶದಲ್ಲಿ ಯಾವ ಶಬ್ದವನ್ನೂ ಗುರುತಿಸಿಲ್ಲ. ಇಂದಿಗೂ ಕನ್ನಡದಲ್ಲಿ ಹೊಸ ಹೊಸ ಎರವಲುಗಳು ಬಂದು ಸೇರುತ್ತಾ ಇವೆ. ಇವುಗಳನ್ನು ಗಮನಿಸಿ ನಮ್ಮ ಎರವಲುಗಳ ಪಟ್ಟಿಯನ್ನು ಬೆಳೆಸುತ್ತಾ ಹೋಗಲೇಬೇಕಾಗಿರುವುದನ್ನು ನೆನಪಿನಲ್ಲಿಟ್ಟಿರಬೇಕು.

ಬೇರೆ ಭಾಷೆಗಳಿಂದ ನಮ್ಮ ಭಾಷೆಗೆ ಶಬ್ದಗಳು ಬರಲು ಕಾರಣವೇನು ?

ಎರಡು ಅಥವಾ ಅದಕ್ಕಿಂತ ಹೆಚ್ಚು ಭಾಷೆಗಳು ಪರಸ್ಪರ ಸಂಪರ್ಕಕ್ಕೆ ಬರುವ ಅವಕಾಶಗಳು ಹಲವು ಇವೆ.

೧. ಎರಡು ಬೇರೆ ಬೇರೆ ಮತಗಳವರು ಒಂದೆಡೆ ವಾಸ ಮಾಡಲು ಪ್ರಾರಂಭಿಸಿದಾಗ ಪರಸ್ಪರವಾಗಿ ಎರಡು ಮತಗಳವರೂ ಎರವಲುಗಳನ್ನು ಪಡೆಯಬಹುದು. ಉದಾಹರಣೆಗೆ **ಮಸೀದಿ, ನಮಾಜು** ಕನ್ನಡಕ್ಕೆ ಹೀಗೆ ಬಂದಿವೆ.

೨. ಒಂದು ಭಾಷೆಯವರು ಇನ್ನೊಂದು ಭಾಷೆಯನ್ನು ಮಾತನಾಡುವವರ ಮೇಲೆ ಆಡಳಿತ ಮಾಡಿದರೆ, ಆಡಳಿತ ಮಾಡುವವರ ಭಾಷೆಯಿಂದ ಹೆಚ್ಚು ಪದಗಳು ಎರವಲಾಗಿ ಬರುತ್ತವೆ.

ಉದಾಹರಣೆಗೆ : ದಿವಾನ, ಜುಲ್ಮಾನೆ, ಸುಬೇದಾರ, ಅಹವಾಲು, ಅಮೀನ ಇತ್ಯಾದಿ.

೩. ಪಾಂಡಿತ್ಯ, ಕುಶಲ ಕಲೆಗಳು-ಈ ಕ್ಷೇತ್ರದಿಂದ ಬಂದ ಪದಗಳು : ದರ್ಜೆ, ಕಾಗದ, ತರ್ಜುಮೆ, ನಕ್ಷೆ, ತಂಬೂರಿ, ಪಿಟೀಲು ಇತ್ಯಾದಿ.

೪. ಅನೇಕ ವೃತ್ತಿಗಳಿವೆ. ಈ ವೃತ್ತಿಗಳವರೊಡನೆ ವ್ಯವಹಾರ ಮಾಡಿದಗಾಲೂ ಹೀಗೆ ಎರವಲುಗಳು ಬರುತ್ತವೆ. ಕೆಲವು ವೃತ್ತಿಗಳಿಂದ ಬಂದ ಪದಗಳನ್ನು ಗಮನಿಸೋಣ :

೧. **ವೈದ್ಯ** : ಅಜಾರಿ, ಕಾಹಿಲೆ, ಜಖಮು, ಮುರಬ್ಬ ಇತ್ಯಾದಿ.

೨. **ಸೈನ್ಯ** : ಸವಾರ, ಜೀನು, ಚಬಕು, ಅಂಬಾರಿ, ಮಾವುತ ಇತ್ಯಾದಿ.

೩. **ವ್ಯವಸಾಯ** : ರೈತ, ಜಿನಸು, ಗುಲಾಬಿ ಇತ್ಯಾದಿ.

೪. **ವ್ಯಾಪಾರ, ಉದ್ಯೋಗ** : ರಸ್ತೆ, ಜಹಜು, ಚುಕಾಣಿ, ದುಕಾನು, ಜಮಾ ಇತ್ಯಾದಿ.

೫. **ಆಹಾರ, ವಿಹಾರ** : ಬಕಾಳ, ಚಪಾತಿ, ನಾಷ್ಟಾ, ಪಲಾವು ಇತ್ಯಾದಿ.

೬. **ಒಡವೆ, ವಸ್ತು** : ಬುಲಾಕು, ಚಮಚ, ಶರಾಬು, ಪೀಕದಾನಿ, ಕುರ್ಚಿ ಇತ್ಯಾದಿ.

ಹೀಗೆ ಬಾಳಿನ ಅನೇಕ ಕ್ಷೇತ್ರಗಳಲ್ಲಿ ನಮ್ಮ ಭಾಷೆಯು ಇತರ ಅನೇಕ ಭಾಷೆಗಳಿಂದ ಎರವಲಾಗಿ ನೂರಾರು ಪದಗಳನ್ನು ಪಡೆದಿದೆ. ಇಂಥ ಶಬ್ದಗಳನ್ನು ಭಾಷೆ, ಕ್ಷೇತ್ರ, ಪ್ರದೇಶ ಮುಂತಾದ ವಿಭಾಗಗಳಲ್ಲಿ ವಿಂಗಡಿಸಿ ಪಟ್ಟಿ ಮಾಡುವುದೇ ಒಂದು ಪ್ರಯೋಜನಕಾರಿಯಾದ ವ್ಯಾಸಂಗವಾಗುತ್ತದೆ.

ಹೀಗೆ ಕನ್ನಡಕ್ಕೆ ಶಬ್ದಗಳು ಎರವಲಾಗಿ ಬರುವುದಕ್ಕೆ ಕೆಲವು ಕಾರಣಗಳಿವೆ.

ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಜನರು ಒಡನೆ ಬಾಳಬೇಕಾಗಿ ಬಂದಾಗ ಎರಡು ಭಾಷೆಗಳಿಗೂ ಪರಸ್ಪರವಾಗಿ ಶಬ್ದಗಳ ವಿನಿಮಯವಾಗುತ್ತವೆ. ಚಾರಿತ್ರಿಕವಾಗಿ ಕನ್ನಡ ಜನರು ಅನೇಕ ದೇಶಗಳ ಜನರೊಡನೆ ಪ್ರಾಚೀನ ಕಾಲದಿಂದಲೂ ಸಂಪರ್ಕವನ್ನು ಇರಿಸಿಕೊಂಡಿದ್ದಾರೆ. ಗ್ರೀಸ್ ದೇಶದ ಜನರೊಡನೆ ಕನ್ನಡಿಗರ ಸಂಬಂಧವಿದ್ದಿರಬೇಕೆಂಬ ಒಂದು ಅಭಿಪ್ರಾಯವಿದೆ. ಇದಕ್ಕೆ ಕಾರಣ ದಕ್ಷಿಣ ಈಜಿಪ್ಟಿನಲ್ಲಿ ಸಿಕ್ಕಿದ, **Oxyrinchus Papyrus** ಎಂಬ ಹೆಸರಿನ ಬರಹದಲ್ಲಿ ಕಾಣುವ ಒಂದು ಗ್ರೀಕ್ ಹಾಸ್ಯ ನಾಟಕ. ಈ ನಾಟಕದಲ್ಲಿ ಕೆಲವು ಪದಗಳೂ ವಾಕ್ಯಗಳೂ ಕನ್ನಡದ್ದಿರಬಹುದು ಎಂಬ ಊಹೆಯಿಂದ ಗ್ರೀಸ್ ದೇಶದ ಸಂಬಂಧವನ್ನು ಸಾಧಿಸುವ ವಿದ್ವಾಂಸರಿದ್ದಾರೆ. ಆದರೆ ಆ ವಾಕ್ಯಗಳು ತುಳು ಭಾಷೆಯದಿರಬಹುದು ಎಂಬ ಅಭಿಪ್ರಾಯವೂ ಇದೆ. ತುಳುವಾಗಲಿ, ಕನ್ನಡವಾಗಲಿ ಆ ಭಾಷೆ ಯಾವುದೆಂಬುದು ಇನ್ನೂ ನಿಶ್ಚಯವಾಗಿಲ್ಲ. ಆದರೂ ಗ್ರೀಕ್ ಭಾಷೆಯ ಕೆಲವು ಶಬ್ದಗಳು ಸಂಸ್ಕೃತದ ಮೂಲಕ ಕನ್ನಡಕ್ಕೆ ಬಂದಿವೆ. ಜ್ಯಾಮಿತಿ, ಕೇಂದ್ರ, ನಿಷ್ಕ, ಯವನಿಕಾ, ದ್ರೇಖ್ಖಾಣ ಮುಂತಾದವು ಈ ಶಬ್ದಗಳು.

ಕ್ರಿಸ್ತಶಕ ೬೦೮ರಲ್ಲಿ ಪರ್ಷಿಯಾ ದೇಶದ ಖುಸ್ರು II ಮತ್ತು ಪುಲಕೇಶಿ ಇವರ ನಡುವೆ ರಾಜಕೀಯ ಸಂಬಂಧವು ಬೆಳೆದು ಪರಸ್ಪರ ರಾಯಭಾರಿಗಳನ್ನು ವಿನಿಮಯ

ಮಾಡಿಕೊಳ್ಳಲಾಯಿತು. ಈ ಚಾರಿತ್ರಿಕ ಸಂಪರ್ಕದ ಪರಿಣಾಮವಾಗಿ ಪಾರಸೀ ಭಾಷೆಯ ಶಬ್ದಗಳು ನಮ್ಮ ಭಾಷೆಗೆ ನೇರವಾಗಿ ಬಂದಿರಬಹುದು. ಆದರೆ ಮಹಮ್ಮದೀಯರ ದಂಡಯಾತ್ರೆಗಳು ನಡೆದ ಮೇಲೆ ಅನೇಕ ಕಡೆಗಳಲ್ಲಿ ಮಹಮ್ಮದೀಯರು ರಾಜ್ಯಗಳನ್ನು ಆಕ್ರಮಣ ಮಾಡಿ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡರು. ಆಗಂತೂ ಆಡಳಿತದಲ್ಲಿ ಪಾರಸೀ ಶಬ್ದಗಳು ನೇರವಾಗಿ ಕನ್ನಡ ಭಾಷೆಗೆ ಸೇರಿಕೊಂಡವು.

ಭಾರತದ ಪಶ್ಚಿಮ ಕರಾವಳಿಯಲ್ಲಿ ಅರಬ್ಬಿಯ ವರ್ತಕರು ಬಂದು ವ್ಯಾಪಾರವನ್ನು ನಡೆಸುತ್ತಿದ್ದರು. ಕ್ರಿ.ಶ. ೭ನೆಯ ಶತಮಾನದ ಪ್ರಾರಂಭದಲ್ಲಿ ಅರಬ್ಬರು ಭಾರತದ ಬೊಂಬಾಯಿ, ಬ್ರೋಚ್ ಮತ್ತು ಸಿಂಧ್ ಪ್ರಾಂತಗಳ ಮೇಲೆ ಆಕ್ರಮಣ ನಡೆಸಿದರು. ಆದರೆ ಈ ಪ್ರಯತ್ನದಲ್ಲಿ ಅವರು ಸಫಲರಾಗಲಿಲ್ಲ. ಆದರೂ ಅರಬ್ಬರ ವ್ಯವಹಾರದ ಪರಿಚಯವಾಯಿತು. ಮಹಮದ್ ಬಿನ್ ಕಾಸಿಮನು ಕ್ರಿ.ಶ. ೭೧೨ರಲ್ಲಿ ಸಿಂಧ್ ಪ್ರಾಂತದ ಮೇಲೆ ಆಕ್ರಮಣ ಮಾಡಿದನು. ಅಲ್ಲದೆ ಸಿಂಧ್ ಪ್ರಾಂತದ ಕೆಲವು ಭಾಗಗಳನ್ನು ಗೆದ್ದು ಅಲ್ಲಿ ಅರಬ್ಬರ ಆಡಳಿತವನ್ನು ಸ್ಥಾಪಿಸಿದನು. ರಾಷ್ಟ್ರಕೂಟ ರಾಜರಿಗೂ ಈ ಅರಬ್ಬರಿಗೂ ಸ್ನೇಹವುಂಟಾಗಿ ಅವರಲ್ಲಿ ಪರಸ್ಪರ ವ್ಯಾಪಾರ ವ್ಯವಹಾರಗಳು ನಡೆದುವು. ಘಜ್ನಿ ಮಹಮ್ಮದನು ಸಿಂಧ್ ಪ್ರಾಂತದ ಬಹುಭಾಗವನ್ನು ಗೆದ್ದು ಕ್ರಿ.ಶ. ೧೦೦೫-೧೦೨೫ರ ನಡುವೆ ಪ್ರಾಬಲ್ಯವನ್ನು ಗಳಿಸಿದನು. ಇಲ್ಲಿಂದ ಮುಂದೆ ಅನೇಕ ಮುಸ್ಲಿಂ ದಂಡಯಾತ್ರೆಗಳು ನಡೆದು ತುರುಕರು, ಆಫ್‌ಘನರು, ಮಂಗೋಲರು ಭಾರತದಲ್ಲಿ ಬಂದು ನೆಲಸಿದರು. ಮಹಮದ್ ಘಜ್ನಿ, ಮಹ್ಮದ್ ಘೋರಿ, ಗುಲಾಮಿ ರಾಜರು, ತುಘಲಕರು, ಖಿಲ್ಜಿಗಳು ಮುಂತಾಗಿ ಎಲ್ಲರೂ ಮಹಮ್ಮದೀಯರು. ಹನ್ನೆರಡನೆಯ ಶತಮಾನದಿಂದ ಸಿಪಾಯಿ ದಂಗೆ (೧೮೫೭) ನಡೆಯುವವರೆಗೆ ದೆಹಲಿಯಲ್ಲಿ ಮಹಮ್ಮದೀಯ ಆಡಳಿತವೇ ಇತ್ತು. ಆಗ ಪಾರಸೀ ಭಾಷೆಗೆ ಎಲ್ಲಿಲ್ಲದ ಪ್ರಾಮುಖ್ಯ ದೊರೆಯಿತು. ಪಾರಸೀ ಭಾಷೆಯ ಪರಿಚಯವೂ ಪಾಂಡಿತ್ಯವೂ ರಾಜಮನ್ನಣೆಗೆ ಪಾತ್ರವಾಗಿ ಸಂಸ್ಕೃತಿಯ ಹೆಗ್ಗುರುತಾಗಿ ಮೆರೆಯಿತು. ಈ ಕಾಲದಲ್ಲಿ ಭಾರತದ ಎಲ್ಲ ಭಾಷೆಗಳಿಗೂ ಪಾರಸೀ ಭಾಷೆಯ ಅನೇಕ ಆಡಳಿತದ ಶಬ್ದಗಳು ಎರವಲಾಗಿ ಬಂದು ಸೇರಿಕೊಂಡವು. ಹಾಗೆಯೇ ನ್ಯಾಯಾಲಯದಲ್ಲಿ ಉಪಯೋಗವಾಗುವ ಪಾರಸಿ ಭಾಷೆಯ ಕಾನೂನು ಶಬ್ದಗಳೂ ಭಾರತದ ಇತರ ಭಾಷೆಗಳಿಗೆ ನುಸುಳಿಬಿಟ್ಟವು.

ಹದಿನಾಲ್ಕನೆಯ ಶತಮಾನದಲ್ಲಿ ಮಲ್ಲಿಕ್ ಕಾಫರನು ಹೊಯ್ಸಳ ರಾಜ್ಯದ ಮೇಲೆ ಆಕ್ರಮಣ ಮಾಡಿದಾಗಲೂ ಮಹಮದ್ ಬಿನ್ ತುಘಲಕನು ದ್ವಾರಸಮುದ್ರವನ್ನು ಲೂಟಿ ಮಾಡಿದಾಗಲೂ ಮಹಮದೀಯ ಪ್ರಾಬಲ್ಯವು ದಕ್ಷಿಣ ಭಾರತದಲ್ಲಿಯೂ ಸ್ಥಾಪಿತವಾಯಿತು.

ವಿಜಯನಗರ ಸಾಮ್ರಾಜ್ಯವು ಬಿಜಾಪುರದ ಸುಲ್ತಾನರೊಡನೆ ಹೊಂದಿದ್ದ ದೀರ್ಘ ಶತ್ರುತ್ವದ ಪರಿಣಾವಾಗಿ ಒಟ್ಟು ಕರ್ನಾಟಕ ರಾಜ್ಯವೇ ಮಹಮ್ಮದೀಯರ ಪ್ರಭಾವಕ್ಕೆ ಒಳಗಾಯಿತು. ವಿಜಯನಗರವು ನಾಶವಾಗುವ ವೇಳೆಗೆ ಕರ್ನಾಟಕದಲ್ಲಿ ಅರಬ್ಬಿ ಮತ್ತು ಪಾರಸಿ ಪದಗಳು ಕನ್ನಡ ಭಾಷೆಗೂ ಆಕ್ರಮಣ ಮಾಡಿದ್ದುವು. ಹದಿನಾಲ್ಕನೆಯ ಶತಮಾನದಲ್ಲಿಯೇ ದಕ್ಷಿಣ ಕನ್ನಡದಲ್ಲಿ ಸಾವಿರಾರು ಜನ ಮಹಮ್ಮದೀಯ ವ್ಯಾಪಾರಿಗಳು ಮನೆಮಾಡಿ ನೆಲೆಸಿದ್ದರು.

ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಗೋವೆಯ ಬಳಿ ಪ್ರಾಬಲ್ಯವನ್ನು ಗಳಿಸಿದ ಪೋರ್ಚುಗೀಸರ ಸಂಪರ್ಕದಿಂದಲೂ ಕನ್ನಡಕ್ಕೆ ಪೋರ್ಚುಗೀಸರ ಶಬ್ದಗಳು ಸೇರಿಕೊಂಡವು.

ಹದಿನೆಂಟನೆಯ ಶತಮಾನದಿಂದ ಒಟ್ಟು ಭಾರತದ ಮೇಲೆ ಇಂಗ್ಲಿಷರ ಪ್ರಭಾವ ಹೆಚ್ಚುತ್ತಾ ಬಂತು. ೨೦೦ ವರ್ಷಗಳ ಕಾಲ ನಡೆದ ಇಂಗ್ಲಿಷರ ಆಡಳಿತದಿಂದ ಭಾರತದ ಭಾಷೆಗಳಲ್ಲಿ ಇಂಗ್ಲಿಷ್ ಶಬ್ದಗಳು, ಸಾವಿರಾರು ಸೇರಿಕೊಂಡಿವೆ.

ಮೈಸೂರು ರಾಜ್ಯವನ್ನು ಹೈದರಾಲಿ ಮತ್ತು ಟಿಪ್ಪೂಸುಲ್ತಾನರು ಆಳಿದಾಗ ಅನೇಕ ಉರ್ದು ಪದಗಳು ಕನ್ನಡಕ್ಕೆ ಸೇರಿಕೊಂಡವು.

ಕನ್ನಡದಲ್ಲಿ ಅರಬ್ಬಿ, ಪಾರಸಿ, ಉರ್ದು ಪದಗಳೂ ಎರವಲುಗಳಾಗಿ ನೆಲೆ ನಿಂತಿರುವುದಕ್ಕೆ ಮೇಲೆ ಹೇಳಿದ ವಸ್ತು ಸ್ಥಿತಿಗಳೇ ಕಾರಣ. ಇಂಗ್ಲಿಷಿನ ಕಥೆಯೇ ಬೇರೆ !

ಇಂಗ್ಲಿಷಿನ ವ್ಯಾಪಕತೆ

ಇಂದು ವಿಶ್ವದಲ್ಲಿ ಇಂಗ್ಲಿಷ್ ಭಾಷೆಗೆ ಇರುವ ಪ್ರಾಧಾನ್ಯ ಮತ್ತಾವ ಭಾಷೆಗೂ ಇಲ್ಲ. ಪ್ರಪಂಚದ ಎಲ್ಲ ದೇಶಗಳಲ್ಲೂ ಅದರ ಪ್ರಭಾವ ಕಾಣಬರುತ್ತಿದೆ. ಆದರೆ ಆ ಭಾಷೆಯನ್ನು ಮಾತನಾಡುವವರ ಸಂಖ್ಯೆಯೇ ಅತಿ ದೊಡ್ಡದಲ್ಲ. ವಿಶ್ವದಲ್ಲಿ ಮಾತೃಭಾಷೆಯಾಗಿ ಒಂದು ಭಾಷೆಯನ್ನು ಮಾತನಾಡುವವರ ಸಂಖ್ಯೆ ಹತ್ತು ಕೋಟಿಗಿಂತ ಹೆಚ್ಚಾಗಿರುವ ಭಾಷೆಗಳು ಕೇವಲ ಆರು.* ಅವು ಕ್ರಮವಾಗಿ ಚೀಣಿ ೧೨೦ ಕೋಟಿ, ಹಿಂದಿ ೪೯ ಕೋಟಿ, ಇಂಗ್ಲಿಷ್ ೪೭ ಕೋಟಿ, ಸ್ಪಾನಿಷ್ ೩೭ ಕೋಟಿ, ರಷ್ಯನ್ ೧೭ ಕೋಟಿ, ಜಪಾನಿ ೧೦ ಕೋಟಿ. ಹೀಗಿದ್ದರೂ ಈಚೆಗೆ ನಡೆದ ಒಂದು ಭಾಷಾ ವ್ಯಾಸಂಗದ ಪ್ರಕಾರ ಇಂಗ್ಲೆಂಡಿನಲ್ಲೂ ಸುಮಾರು ೮ ಲಕ್ಷ ಏಷ್ಯನ್ ವಿದ್ಯಾರ್ಥಿಗಳು ದ್ವಿಭಾಷಾ ವ್ಯಾಸಂಗದಲ್ಲಿ ನಿರತರಾಗಿರುವುದಲ್ಲದೆ, ಅವರ ಮನೆಗಳಲ್ಲಿ ಕೂಡ ಇಂಗ್ಲಿಷ್ ಭಾಷೆಯನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಪ್ರಪಂಚದ ಇತರ ದೇಶಗಳಲ್ಲಿಯೂ ಹೀಗೆಯೇ ವಿದ್ಯಾಭ್ಯಾಸ ಕ್ಷೇತ್ರದಲ್ಲೂ ಇಂಗ್ಲಿಷ್ ಭಾಷೆಯ ವ್ಯಾಪಕತೆ ಹೆಚ್ಚಾಗುತ್ತಿದೆ. ಇವೆಲ್ಲವನ್ನೂ ಪರಿಶೀಲಿಸಿದರೆ ಇಂಗ್ಲಿಷ್ ಭಾಷೆಯನ್ನು ಬಲ್ಲವರ ಸಂಖ್ಯೆ ನಮ್ಮ ನಿರೀಕ್ಷೆಯನ್ನೂ ಮೀರುತ್ತದೆ. ಭಾರತದಲ್ಲಿಯೇ ವಿದ್ಯಾವಂತರಲ್ಲಿ ಬಹುಪಾಲು ಇಂಗ್ಲಿಷನ್ನು ಬಲ್ಲವರಾಗಿದ್ದಾರೆ.

ಭಾರತದಲ್ಲಿ ಇಂಗ್ಲಿಷರು ನಡೆಸಿದ ಸುಮಾರು ಎರಡುನೂರು ವರ್ಷಗಳ ಆಡಳಿತದ ಪರಿಣಾಮವಾಗಿ ಭಾರತದ ಎಲ್ಲ ಭಾಷೆಗಳಿಗೂ ಸಾವಿರಾರು ಇಂಗ್ಲಿಷ್ ಶಬ್ದಗಳು ಸೇರಿಕೊಂಡಿವೆ. ಅಲ್ಲದೆ ಇಂದಿಗೂ ಜನತೆಯ ಜೀವನದಲ್ಲಿ ಹಾಸುಹೊಕ್ಕಾಗಿ ಬಳಕೆಯಲ್ಲಿವೆ. ಸರಕಾರೀ ಆಡಳಿತ, ನ್ಯಾಯಾಲಯದ ವ್ಯವಹಾರ, ವ್ಯಾಪಾರ ಉದ್ಯೋಗಗಳ ನಡವಳಿಕೆ,

---

* ದ್ರಾವಿಡ ಭಾಷೆಗಳನ್ನು ಮಾತನಾಡುವವರೆಲ್ಲರ ಸಂಖ್ಯೆಯನ್ನು ಸೇರಿಸಿದರೆ ೧೨.೭ ಕೋಟಿಯಾಗಬಹುದು. ಕನ್ನಡವನ್ನು ಮಾತೃಭಾಷೆಯಾಗಿ ಹೊಂದಿರುವವರು ಸುಮಾರು ೩.೫ ಕೋಟಿ. ಕರ್ನಾಟಕದಲ್ಲಿ ಒಟ್ಟು ೫.೩ ಕೋಟಿ ಜನ ಇರಬಹುದು. ಅವರಲ್ಲಿ ೬೫% ಕನ್ನಡವನ್ನು ಮಾತೃಭಾಷೆಯಾಗಿ ಉಪಯೋಗಿಸುತ್ತಿದ್ದಾರೆ.

ಕೈಗಾರಿಕೆ, ಶಿಕ್ಷಣ, ಸಾಗಾಣಿಕೆ, ಪ್ರಯಾಣ ಸಾಧನಗಳು, ವಸ್ತುವೈವಿಧ್ಯ, ಆಹಾರ ವಿಹಾರ, ಊಟ ಉಪಚಾರ, ಸಾಹಿತ್ಯ, ಕಲೆ, ಸಂಗೀತ, ನಾಟಕ, ನೃತ್ಯ, ವಾಸ್ತು ವಿಷಯ, ವೇಷಭೂಷಣ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಈಗ ಪ್ರಯೋಗದಲ್ಲಿರುವ ಅನೇಕ ಶಬ್ದಗಳು ಇಂಗ್ಲಿಷ್ ಭಾಷೆಯಿಂದ ನಮಗೆ ಬಂದಿವೆ.

ಯಾವ ಶಬ್ದವೇ ಆಗಲಿ ಒಂದು ಭಾಷೆಯಿಂದ ನಮಗೆ ಬಂದಿದೆ ಎಂದು ಹೇಳಿದರೆ ಆ ಶಬ್ದದ ವ್ಯುತ್ಪತ್ತಿಯನ್ನು ಪೂರ್ತಿ ಹೇಳಿದಂತಾಗುವುದಿಲ್ಲ. ಏಕೆಂದರೆ ಯಾವ ಭಾಷೆಯ ಮೂಲಕ ಒಂದು ಶಬ್ದ ನಮಗೆ ಎರವಲಾಗಿದೆಯೋ ಆ ಭಾಷೆಗೆ, ಅದು ಬೇರೆ ಬೇರೆ ಭಾಷೆಗಳಲ್ಲಿ ಪ್ರಚಾರದಲ್ಲಿದ್ದು ಬಳಿಕ ಬಂದು ತಲಪಿರಬಹುದು. ಈ ಎಲ್ಲ ವಿವರಗಳನ್ನೂ ಅನೇಕ ನಿಘಂಟುಗಳ ಪರಿಶೀಲನೆಯಿಂದ ನಾವು ತೀರ್ಮಾನಿಸಬೇಕಾಗುತ್ತದೆ. ಇದೊಂದು ಸಂಶೋಧನ ಕಾರ್ಯ. ಕೆಲವು ವೇಳೆ ನಿಘಂಟುಗಳು ಕೂಡ ಸಮರ್ಪಕವಾದ ಉತ್ತರವನ್ನು ತಿಳಿಸುವುದಿಲ್ಲ. ನಿಘಂಟು ಸಂಪಾದಕರು ಪ್ರಶ್ನಾರ್ಥಕ ಚಿಹ್ನೆಯನ್ನೇ ಹಾಕಿ ಅಥವಾ ಸಂದಿಗ್ಧ ಎಂಬ ಸೂಚನೆಯೊಡನೆ ಮುಕ್ತಾಯ ಮಾಡಿರುತ್ತಾರೆ. ವ್ಯುತ್ಪತ್ತಿ ಕ್ಷೇತ್ರದ ಸಂಶೋಧನೆ ಹೀಗೆ ಕೊನೆಯಿಲ್ಲದ್ದು.

ಒಟ್ಟಿನಲ್ಲಿ ನಮ್ಮ ಕನ್ನಡ ಭಾಷೆಗೆ ಎರವಲು ನೀಡಿರುವ ಭಾಷೆಗಳು ಹೀಗಿವೆ : ಪಾರಸಿ, ಅರಬ್ಬಿ, ಉರ್ದು, ಹಿಂದಿ, ಪಂಜಾಬಿ, ಮರಾಠಿ, ಗುಜರಾತಿ, ಬಂಗಾಳಿ, ಇಂಗ್ಲಿಷ್, ಫ್ರೆಂಚ್, ಪೋರ್ಚುಗೀಸ್ ಇತ್ಯಾದಿ. ಈ ಭಾಷೆಗಳಿಗೆ ಇತರ ಎಷ್ಟೋ ಭಾಷೆಗಳಿಂದ ಶಬ್ದಗಳು ಬಂದು ಸೇರಿರಬಹುದು. ಅಂಥ ವಿವರಗಳನ್ನು ಸೂಕ್ಷ್ಮವಾಗಿ ಆಯಾ ಭಾಷೆಗಳ ಪ್ರಮುಖ ನಿಘಂಟುಗಳ ಮೂಲಕ ತಿಳಿದುಕೊಳ್ಳಬೇಕಾಗುತ್ತದೆ.

ಮೇಲೆ ತಿಳಿಸಿದ ಭಾಷೆಗಳಲ್ಲಿ ಬಹುವಾಗಿ ಎರವಲು ನೀಡಿರುವ ಪ್ರಮುಖ ಭಾಷೆಗಳಾದ ಪಾರಸಿ, ಅರಬ್ಬಿ, ಉರ್ದು, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಭಾಷಾ ಸಾಹಿತ್ಯಗಳ ಕಿರು ಪರಿಚಯವನ್ನು ಹೊಂದಿರುವುದು ನಮಗೆ ತುಂಬಾ ಪ್ರಯೋಜನಕರವಾಗುತ್ತದೆ.

ಒಂದು ಭಾಷೆಗೆ ಎರವಲುಗಳನ್ನು ಪಡೆಯಲು ಭಾಷೆಗೆ ಸಂಬಂಧಪಟ್ಟ ಕಾರಣಗಳೂ ಇರಬಹುದು, ಭಾಷೇತರ ಕಾರಣಗಳೂ ಇರಬಹುದು. ಭಾಷೆಯ ದೃಷ್ಟಿಯಿಂದ ನೋಡಿದರೆ ಕೆಲವು ಪದಗಳು ಯಾವುದೋ ಹೊಸ ಭಾವನೆಯನ್ನೋ, ಅನುಭವವನ್ನೋ, ವಸ್ತುವನ್ನೋ ಕುರಿತದ್ದಾಗಿರಬಹುದು. ಹೀಗೆ ಕಂಡಾಗ ಹೊಸ ಪದಗಳನ್ನು ಸೃಷ್ಟಿ ಮಾಡುವುದಕ್ಕಿಂತ ಬೇರೆ ಭಾಷೆಯ ಪದಗಳನ್ನೇ ಉಪಯೋಗಿಸುವುದು ಸುಲಭವೆಂದು ತೋರಬಹುದು. ಅದರಿಂದ ಗೊಂದಲವಿಲ್ಲದ ಸ್ಥಿತಿಯೂ ಉದ್ಭವಿಸಬಹುದು. ಇವು ಸಾಮಾನ್ಯವಾಗಿ ಸಾಮಾಜಿಕ, ರಾಜಕೀಯ ಪ್ರಭಾವಗಳಿಗೆ ಅನ್ವಯವಾಗುವಂಥವು. ಇಂಥ ಶಬ್ದಗಳು ಬಹುಸತ್ವವುಳ್ಳ ಪ್ರಯೋಜನಕಾರಿಯಾದ ಜನಪ್ರಿಯ ಶಬ್ದಗಳಾಗಿರುತ್ತವೆ. ಉದಾಹರಣೆಗೆ ಚಾ, ಚಹ, ಕಾಫಿ, ಚರ್ಚು, ಸಫಾರಿ, ಸಿಬ್ಬಂದಿ, ಇಗರ್ಜಿ, ಇವೆಲ್ಲ ಪ್ರತಿನಿತ್ಯ ಜನರ ಮಾತಿನಲ್ಲಿ ಉಪಯೋಗದಲ್ಲಿರುವ ಶಬ್ದಗಳು. ಇವೆಲ್ಲಾ ಬೇರೆ ಬೇರೆ ಭಾಷೆಗಳ ಮೂಲಕ ನಮ್ಮ ಭಾಷೆಗೆ ಬಂದು ಸೇರಿರುತ್ತವೆ.

ಭಾಷೇತರ ಕಾರಣಗಳಿಗಾಗಿ ಕೆಲವು ಪದಗಳು ಬಂದು ಸೇರುತ್ತವೆ. ಇಂಥ ಸಮಯದಲ್ಲಿ ಎರವಲು ಪಡೆಯುವ ಭಾಷೆಯ ಪ್ರಾಧಾನ್ಯಕ್ಕಿಂತ ಎರವಲು ನೀಡುವ ಭಾಷೆಯ ರಾಜಕೀಯ ಮತ್ತು ಸಾಮಾಜಿಕ ಪ್ರಾಧಾನ್ಯ ಅಧಿಕವಾದುದು ಎಂಬ ಭಾವನೆ ವ್ಯಾಪಕವಾಗಿ ಇರಬಹುದು. ಜನರಲ್ಲಿರುವ ಇಂಥ ಮನೋವೃತ್ತಿಯಿಂದ ನಮ್ಮ ಭಾಷೆಯಲ್ಲಿರುವ ಶಬ್ದಗಳನ್ನು ಎರವಲು ಪದಗಳಿಗಾಗಿ ಬಲಿ ಕೊಡುವ ಸನ್ನಿವೇಶಗಳೂ ಉಂಟಾಗುತ್ತವೆ. ಇದರಿಂದ ನಮ್ಮ ಹಳೆಯ ಪದಗಳು ನಿರ್ನಾಮವಾಗಿ ಬಿಡುತ್ತವೆ. ಕನ್ನಡದಲ್ಲಿ ಹಿಂದೆ ಪ್ರಚಾರದಲ್ಲಿದ್ದ ಸಂಸ್ಕೃತದ **ತಿಥಿ** ಎಂಬ ಶಬ್ದವನ್ನೂ ದ್ರಾವಿಡ ಮೂಲದ **ತೇದಿ** ಎಂಬ ಶಬ್ದವನ್ನೂ **ತಾರೀಕು** ಎಂಬ ಪಾರಸೀ ಶಬ್ದ ಸಂಪೂರ್ಣವಾಗಿ ಮರೆಸಿಬಿಟ್ಟಿತ್ತು; ಇದ್ದರೂ ಎಲ್ಲೋ ಎಲೆ ಮರೆಯ ಕಾಯಿಯಂತೆ ಅಪೂರ್ವವಾಗಿ ಕಾಣಬಹುದು. ಪಾರಸಿಯಲ್ಲಿ ಅದು **ತಾರೀಖ್**, ಕಾಶ್ಮೀರಿಯಲ್ಲಿಯೂ **ತಾರೀಖ್**. ಪರಕೀಯರು ರಾಜ್ಯಾಡಳಿತದಲ್ಲಿ ಸ್ಥಾಪಿತವಾಗಿದ್ದಾಗ ಇಂಥ ಎರವಲುಗಳು ಪ್ರಾಧಾನ್ಯವನ್ನು ಪಡೆಯುತ್ತವೆ. **ಬೇಟೆ** ಎಂಬುದಕ್ಕೆ **ಶಿಕಾರಿ**; **ದಾಸ** ಅಥವಾ **ಸೇವಕ** ಎಂಬುದಕ್ಕೆ **ನೌಕರ**; **ಉದ್ಯಾನ**, **ಉಪವನ** ಎಂಬುದಕ್ಕೆ ಬದಲಾಗಿ **ಬಾಗ್** ಸ್ಥಾಪಿತವಾಗುತ್ತವೆ.

ವೈಜ್ಞಾನಿಕ ಸಂಶೋಧನೆಯ ಫಲವಾಗಿ ಎರವಲು ಬರುವಾಗ ಅದು ಯಾವ ಭಾಷೆಯಲ್ಲಿ ಮೊದಲು ಉಪಯೋಗವಾಯಿತೋ ಆ ಭಾಷೆಯ ಶಬ್ದವೇ ನಮಗೂ ಇಳಿದು ಬರುತ್ತದೆ. ಉದಾಹರಣೆಗೆ ಇಂಗ್ಲಿಷ್ ಭಾಷೆಯಿಂದ **ರೇಡಿಯೋ**, ರಷ್ಯನ್‌ನಿಂದ **ಸ್ಪುಟ್ನಿಕ್**.

ನಮ್ಮ ಭಾಷೆಗೆ ಬರುವ ಎರವಲು ಪದಗಳು ಸಾಮಾನ್ಯವಾಗಿ ನಾಮಪದಗಳು, ಗುಣವಾಚಕಗಳು ಮತ್ತು ಕ್ರಿಯಾಪದಪುಂಜಗಳು. ಸರ್ವನಾಮಗಳಾಗಲೀ, ಸಂಖ್ಯಾವಾಚಕಗಳಾಗಲೀ ಬರುವುದಿಲ್ಲ. ಭಾಷಾಶಾಸ್ತ್ರಿಗಳು ಎರವಲು ಪದಗಳನ್ನು ಮೂರು ವಿಧವಾಗಿ ವಿಂಗಡಿಸುತ್ತಾರೆ.

೧. ನಮ್ಮ ಭಾಷೆಯೊಡನೆ ಸಂಪೂರ್ಣವಾಗಿ ಬೆರೆತು ಮೂಲ ಭಾಷೆಯ ಯಾವ ಸತ್ವವೂ ಉಳಿಯದೇ ಕನ್ನಡವೇ ಆಗಿಬಿಟ್ಟಿರುವುವು. ಅವು ಬೇರೆಯ ಭಾಷೆಯದಿರಬಹುದು ಎಂಬ ಸಂದೇಹವೇ ಬಾರದಂತೆ ನಮ್ಮ ಭಾಷೆಯೊಡನೆ ಒಂದಾಗಿ ಹೋಗಿರುವವು ಅವುಗಳು. ಉದಾ : ಅಮಲು, ಐಬು, ಇನಾಮು, ಇತ್ಯಾದಿ ಅರಬ್ಬಿ ಪದಗಳನ್ನು ನೋಡಿ.

೨. ಎರವಲಾಗಿ ಬಂದರೂ ಮೂಲ ಭಾಷೆಯ ಉಚ್ಚಾರಣೆಯನ್ನು ಉಳಿಸಿಕೊಂಡಿರುವ ಪದಗಳು. ಉದಾ: ಸರಂಜಾಮು, ನಾಜೂಕು, ಜಿರಾಯತ್ತು, ಸವಲತ್ತು, ಸರಹದ್ದು ಇತ್ಯಾದಿ.

೩. ಪರಭಾಷೆಯಿಂದ ಬಂದ ಪಾರಿಭಾಷಿಕ ಶಬ್ದಗಳು. ಇವು ಬೇರೆ ಬೇರೆ ವೃತ್ತಿಗಳಿಗೆ ಸಂಬಂಧಪಟ್ಟಿದ್ದು ಕನ್ನಡಕ್ಕೆ ಹೊಂದಿಕೊಳ್ಳಲಾರದೆ ಪ್ರತ್ಯೇಕವಾಗಿಯೇ ಉಳಿಯುವ ಶಬ್ದಗಳು. ಇವು ಕೆಲವು ಸಂದರ್ಭಗಳಲ್ಲಿ ಮಾತ್ರ ಉಪಯೋಗವಾಗುವಂಥವು.

ಉದಾ : ರೇಡಿಯೋ, ಕಂಪ್ಯೂಟರು, ಮೋಟಾರು, ಅಂಕಲ್ಲು, ಆಂಟಿ ಇತ್ಯಾದಿ.

ಈ ಮೂರರಿಂದ ಬೇರೆಯಾದ ಪದಗಳಿವೆ. ಅವು ನಮಗೆ ಹೊಂದಿಕೊಳ್ಳದೇ ಹೋದುದರಿಂದ ಅವುಗಳನ್ನು ಅನುವಾದ ಮಾಡಿ ಕನ್ನಡಕ್ಕೆ ಹೊಂದಿಸುತ್ತೇವೆ. ಇವೂ ಎರವಲುಗಳೇ ಎಂದು ತಿಳಿಯಬೇಕು.

Census ಎಂಬ ಶಬ್ದ ಲ್ಯಾಟಿನ್ ಭಾಷೆಯ ಶಬ್ದ. ಇದರ ಅರ್ಥ **Rating of property, lists of citizens compiled by censors.** ಇಂಗ್ಲಿಷ್ ಭಾಷೆಗೆ ಬಂದು ತನ್ಮೂಲಕ ನಮ್ಮ ಭಾಷೆಗೆ ಬಂತು. ನಮ್ಮ ಭಾರತ ದೇಶದ ಇತರ ಭಾಷೆಗಳಿಗೂ ಬಂತು. ಈ ಶಬ್ದವನ್ನು ಪಾರಸೀ ಭಾಷೆಯಲ್ಲಿ **ಮರ್ದುತು ಶೂಮಾರೀ** ಎಂದು ಉಪಯೋಗಿಸುತ್ತಾರೆ. ಇದೂ ಕೂಡ ಅನುವಾದವೇ. ಹಿಂದೀ ಭಾಷೆಯಲ್ಲಿ ಇದು **ಜನಗಣನ** ಆಯಿತು. ನಾವು **ಜನಗಣನೆ, ಜನಗಣತಿ** ಎಂದು ಎರಡು ರೂಪದಲ್ಲಿಯೂ ಉಪಯೋಗಿಸುತ್ತೇವೆ. ಇದು ಅತಿ ಅಗತ್ಯವಾದ ಆದರೆ ನಾವು ಅನುವಾದ ಮಾಡಿಕೊಂಡ ಶಬ್ದ. ಹೀಗೆಯೇ **ವೋಟು Vote** ಎಂಬ ಶಬ್ದ. **ಓಟು** ಎಂಬುದೂ ಪ್ರಯೋಗದಲ್ಲಿದೆ. **ಮತದಾನ** ಎಂದು ಅನುವಾದ ಮಾಡಿದ ಮೇಲೆ ಅದೇ ಹೆಚ್ಚು ಉಪಯೋಗವಾಗುತ್ತಿದೆ. ಆದರೆ **ಓಟು** ಸಂಪೂರ್ಣವಾಗಿ ಮರೆತಿಲ್ಲ. ಹೀಗಾಗಿ ನಮಗೆ ಎರಡು ಶಬ್ದಗಳು ದೊರೆತಂತಾಯಿತು.

ಎರವಲು ಪದಗಳ ಪ್ರಾಧಾನ್ಯ ಹೆಚ್ಚಾದಂತೆಲ್ಲಾ ನಮ್ಮ ಭಾಷೆಯ ಧ್ವನಿ ವ್ಯವಸ್ಥೆಯ ಮೇಲೆ ಕೆಲವು ಪರಿಣಾಮಗಳುಂಟಾಗುತ್ತವೆ. ನಮಗೆ ಹೊಸ ಉಚ್ಚಾರಣೆಗಳೂ ಅವುಗಳ ಮಾದರಿಗಳೂ ಆಮದಾಗಿ ಬಿಡುತ್ತವೆ.

ಈ ದೃಷ್ಟಿಯಿಂದ ಕೆಲವು ಇಂಗ್ಲಿಷ್ ಪದಗಳನ್ನು ನೋಡೋಣ. ಅವು ಕನ್ನಡದಲ್ಲಿ ಹೇಗೆ ಉಚ್ಚಾರವಾಗಿರುತ್ತವೆ ಎಂಬುದನ್ನು ಪರೀಕ್ಷಿಸೋಣ.

Result - ರಿಜಲ್ಟು

Zoo - ಜ಼ೂ

Fund - ಫಂಡ್

Father - ಫಾದರ್

Officer - ಆಫೀಸರು

ನಮ್ಮಲ್ಲಿ F ಅಕ್ಷರದ ಉಚ್ಚಾರಣೆಯೂ Z ಅಕ್ಷರದ ಉಚ್ಚಾರಣೆಯೂ ಇಲ್ಲ. ಅವು ಕ್ರಮವಾಗಿ 'ಫ' 'ಜ' ಆಗಿಬಿಡುತ್ತವೆ. ವಿದ್ಯಾವಂತರ ಗಮನಕ್ಕೆ ಬಂದಮೇಲೆ, ಕನ್ನಡಕ್ಕೆ ಹೊಸದಾದ ಈ ಉಚ್ಚಾರಣೆಯನ್ನು ಗುರುತಿಸಲು ಫ಼, ಜ಼ ಎಂಬ ಎರಡು ಹೊಸ ಅಕ್ಷರಗಳನ್ನು ನಿರ್ಮಾಣ ಮಾಡಲಾಯಿತು. ಅಲ್ಲದೆ **Cat** ಎಂಬ ಪದದಲ್ಲಿರುವ **ಅಕಾರ**

ಉಚ್ಚಾರಣೆಯನ್ನು ತಿಳಿಸಲು **ಕ್ಯಾಟ್** ಎಂಬಲ್ಲಿರುವಂತೆ ಹೊಸ ಒತ್ತಕ್ಷರವನ್ನು ಸೇರಿಸಲಾಯಿತು. ಇವು ನಿಘಂಟುಗಳ ಒಳಗಡೆ ಕುಳಿತಿವೆಯೇ ಹೊರತು ಕನ್ನಡ ಜನಸಾಮಾನ್ಯರ ಸ್ವತ್ತಾಗಲಿಲ್ಲ. ಇಂಗ್ಲಿಷ್ ಬಲ್ಲವರು ಇಂಗ್ಲಿಷ್ ಉಚ್ಚಾರವನ್ನೇ ಉಪಯೋಗಿಸುತ್ತಾರೆ. ಬರದವರು 'ಫ'ಕಾರ 'ಜ'ಕಾರಗಳನ್ನೇ ಉಪಯೋಗಿಸುತ್ತಿದ್ದಾರೆ.

ಕೆಲವು ಸಲ ಒಂದೇ ಅರ್ಥದ ಬೇರೆ ಬೇರೆ ಭಾಷೆಗಳ ಎರವಲುಗಳು ಬಂದು ಸೇರುತ್ತವೆ. ಪಾರಸೀ ಭಾಷೆಯ **ಶೀಶೆ**, ಇಂಗ್ಲೀಷಿನ **glass**. ಆದರೆ ಕನ್ನಡದಲ್ಲಿ ಅವಕ್ಕೆ ಬೇರೆ ಬೇರೆ ಅರ್ಥಗಳಿವೆ. **ಶೀಶೆ = Bottle, Glass = Tumbler = ಲೋಟ**. ಹೀಗೆ ವ್ಯತ್ಯಾಸವಾದ ಅರ್ಥದಲ್ಲಿ ಕನ್ನಡದಲ್ಲಿ ಎರಡೂ ಬದುಕಿವೆ. **ಲೋಟಾ** ಎಂಬ ಪಾರಸಿ ಶಬ್ದವನ್ನು ಗಮನಿಸಿ, ಇದೇ ಅರ್ಥ. ಕೆಲವು ಮಿಶ್ರತಳಿಯ ಸಮಾಸ ಪದಗಳೂ ಹೀಗೆಯೇ ಸೃಷ್ಟಿಯಾಗುತ್ತವೆ :— ಅಂಚೆಕಚೇರಿ, ಲಾರಿ ಚಾರ್ಜು, ರೈಲುಗಾಡಿ ಇತ್ಯಾದಿ. ಇವುಗಳಲ್ಲಿ ಎರಡು ಬೇರೆ ಬೇರೆ ಭಾಷೆಗಳ ಪದಗಳು ಸೇರಿ ಸಮಾಸವಾಗುವುದನ್ನು ಕಾಣಬಹುದು. ಕನ್ನಡದಲ್ಲಿ **ಮಾಡು, ತೆಗೆ, ಹಚ್ಚು, ಹಾಕು** ಎಂಬ ಈ ಧಾತುಗಳನ್ನು ಸೇರಿಸಿ ನಾವು ನೂರಾರು ಕ್ರಿಯಾ ಸಮಾಸಗಳನ್ನು ಮಿಶ್ರತಳಿಯಾಗಿ ಪ್ರಯೋಗಿಸುತ್ತಿದ್ದೇವೆ.

Start ಮಾಡು, Drive ಮಾಡು, Lock ಮಾಡು, Fit ಮಾಡು, Door ಹಾಕು, Window ತೆಗೆ, Gum ಹಾಕು, Stamp ಹಚ್ಚು ಇತ್ಯಾದಿ.

ಒಂದು ವಿಶೇಷವೇನೆಂದರೆ ಎರವಲು ಎರವಲೇ ! ಬೇರೆ ಎರವಲು ಬಂದು ಅದರ ಪ್ರಭಾವ ಹೆಚ್ಚಾದರೆ ಮೊದಲ ಎರವಲು ಎಗರಿ ಹೋಗುತ್ತದೆ. ಇಂಗ್ಲಿಷ್ ಪ್ರಭಾವ ಹೆಚ್ಚಾದ ಮೇಲೆ ಅದಾಲತ್ ಹೋಗಿ **High Court** ಉಳಿಯಿತು. ಈಗ ಲೋಕ್ಅದಾಲತ್ ಹಿಂದಿಯಿಂದ ಬಂದು ಸ್ಥಾಪಿತವಾಗುತ್ತ ಇದೆ. ಮದ್ರಸಾ ಹೋಗಿ School ಬಂತು. ರೋಜಗಾರ್ ಹೋಗಿ Business ಬಂತು. ಈಗ ಕನ್ನಡ ಶಬ್ದವನ್ನೇ ಸೃಷ್ಟಿಸಿ ಆ ಹೊಸ ಪದಗಳನ್ನೇ ಏಕೆ ಪ್ರಚಾರಕ್ಕೆ ತರಬಾರದು ಎಂದು ಒಂದು ಪ್ರಭಾವ ಬೆಳೆಯುತ್ತಿದೆ. ಹಾಗೆ ಮಾಡಬಾರದೆಂದೇನೂ ಇಲ್ಲ. ಆದರೆ ಅದೆಷ್ಟು ಕಷ್ಟಸಾಧ್ಯ ಎಂಬುದನ್ನು ಐರ್ಲೆಂಡಿನಲ್ಲಿಯೂ, ಇಸ್ರೇಲಿನಲ್ಲಿಯೂ ಮಾಡುತ್ತಿರುವ ಪ್ರಯೋಗದಲ್ಲಿ ಕಾಣಬಹುದಾಗಿದೆ. ಎರವಲು ಪದಗಳು ಕನ್ನಡದ ಸ್ವಭಾಷಾತನವನ್ನು ಪಡೆದಿರುವಾಗ ಅವುಗಳನ್ನು ಬಹಿಷ್ಕರಿಸುವುದು ಅಸಾಧ್ಯ.

ಎರವಲು ಪದಗಳು ಕನ್ನಡದ ಸ್ವಭಾವವನ್ನೂ ಸ್ವರೂಪವನ್ನೂ ಹೇಗೆ ಪಡೆಯುತ್ತವೆ, ಯಾರ ಮೂಲಕ ಪಡೆಯುತ್ತವೆ ಎಂದರೆ, ಭಾಷೆಗಳ ವ್ಯವಸ್ಥೆಯನ್ನು ಏನೂ ತಿಳಿಯದ ಜನರು ನಮ್ಮ ಧ್ವನ್ಯಂಗಗಳಿಗೆ ಹೊಂದಿಕೊಳ್ಳುವಂತೆ ಹೊಸ ಶಬ್ದಗಳನ್ನು ಉಚ್ಚರಿಸಿ ಅವುಗಳಿಗೆ ಸ್ವರೂಪವನ್ನೂ ಉಚ್ಚಾರಣೆಯನ್ನೂ ನಿರ್ಧರಿಸುತ್ತಾರೆ. ಅವು ಹಾಗೆಯೇ ನಿಂತು ಬಿಡುತ್ತವೆ. ಹೀಗೆ ಮಾಡುವವರು ಭಾಷಾಶಾಸ್ತ್ರ ವಿದ್ವಾಂಸರಂತೂ ಖಂಡಿತ ಅಲ್ಲ. ಸಾಮಾನ್ಯವಾಗಿ ಸಂಯುಕ್ತಾಕ್ಷರಗಳು ಹೆಚ್ಚಾದಾಗ ವ್ಯತ್ಯಾಸಗಳು ಹೆಚ್ಚಾಗುತ್ತವೆ ಅಷ್ಟೇ ! ಇದನ್ನು ಭಾಷಾ ಶಾಸ್ತ್ರದಲ್ಲಿ Phonotactics ಎಂದು ಕರೆಯುತ್ತಾರೆ.

ಎರವಲು ಪದಗಳನ್ನು ಕುರಿತ ವೈಜ್ಞಾನಿಕವಾದ ವ್ಯಾಸಂಗದಿಂದ ಭಾಷಾ ವಿಜ್ಞಾನಿಗಳಿಗೆ ತುಂಬ ಪ್ರಯೋಜನವುಂಟು. ಎರಡು ಭಾಷೆಗಳ ಧ್ವನಿ ವ್ಯವಸ್ಥೆಯ ಪರಿಚಯದ ಜತೆಗೆ ಅವರು ಮತ್ತೊಂದು ನಿರ್ಧಾರವನ್ನು ಕೈಗೊಳ್ಳಬಹುದು. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಆಗುವ ಧ್ವನಿ ವ್ಯವಸ್ಥೆಯ ವ್ಯತ್ಯಾಸವನ್ನು ಚಾರಿತ್ರಿಕ ದೃಷ್ಟಿಯಿಂದ ವರ್ಗೀಕರಿಸಬಹುದು. ಭಾಷೆಯ ಚರಿತ್ರೆಯನ್ನು ಗುರುತಿಸುವುದು ಎಂದರೆ ಧ್ವನಿ ವ್ಯವಸ್ಥೆ, ಶಬ್ದ ಸ್ವರೂಪ, ಅರ್ಥನಿರೂಪಣೆ, ವಾಕ್ಯಗಳಲ್ಲಿ ಪದಗಳ ಅನುಕ್ರಮ, ಕಾಲಕಾಲಕ್ಕೆ ಆ ಭಾಷೆಯ ಮೇಲೆ ಆದ ಇತರ ಭಾಷೆಗಳ ಪ್ರಭಾವ ಇವೆಲ್ಲವನ್ನೂ ತಿಳಿಯುವುದು ಎಂದರ್ಥ.

ಅಲ್ಲದೆ, ಎರವಲು ಪದಗಳನ್ನು ಹೀಗೆ ಅಭ್ಯಾಸ ಮಾಡುವಾಗ ಒಂದು ಭಾಷೆಯ ಎಷ್ಟು ಅಂಶಗಳು ಬೇರೆ ಭಾಷೆಗಳಿಗೆ ಅನ್ಯೋನ್ಯವಾಗಿ ಹೊಂದಿಕೊಳ್ಳುತ್ತವೆ. ಅಂದರೆ Inter lingual Coherence ಎಷ್ಟಿದೆ ಎಂಬುದನ್ನೂ, ಮತ್ತೆಷ್ಟು ಅಂಶಗಳು ಸಂಪೂರ್ಣವಾಗಿ ಸ್ವತಂತ್ರವಾಗಿಯೇ ಉಳಿದುಬಿಡುತ್ತವೆ ಎಂಬುದನ್ನೂ ನಿರ್ಧರಿಸಬಹುದು. ಭಾಷಾಶಾಸ್ತ್ರದಲ್ಲಿ ಇವರ ಆವಶ್ಯಕತೆ ಅಧಿಕವಾದುದು.

ಒಂದು ಭಾಷೆಗೆ ಬೇರೊಂದು ಭಾಷೆಯಿಂದ ಎರವಲಾಗಿ ಬಂದಿರುವ ಶಬ್ದಗಳನ್ನು ಚಾರಿತ್ರಿಕವಾಗಿ ಅಭ್ಯಾಸ ಮಾಡಿದರೆ ಆ ಭಾಷಯ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ಸೃಷ್ಟಿಸಬಹುದು. ಅಲ್ಲದೆ ಎರಡು ಜನಾಂಗಗಳ ಜನಸಮೂಹದ ನಡುವೆ ಆದ ವ್ಯವಹಾರದ ಆಳ ವಿಸ್ತಾರಗಳನ್ನು ನಿರ್ಣಯಿಸಬಹುದು. ಒಂದು ಶಬ್ದವು ಎರವಲಾದಾಗ ಆ ಶಬ್ದ ಸೂಚಿಸುವ ವಸ್ತು ಅಥವಾ ವಿಷಯದ ಅರಿವು ಆ ಭಾಷೆಯ ಜನಗಳಿಗೆ ಇರಲಿಲ್ಲವೆಂದು ತೀರ್ಮಾನಿಸಬಹುದು. ಎರವಲು ಹೆಚ್ಚಾದಾಗ ಅದು ಆ ಭಾಷೆಯ ಬೆಳವಣಿಗೆಗೆ ಸಹಾಯವಾಯಿತೆ ಅಥವಾ ಅಡ್ಡಿಯಾಯಿತೆ ಎಂದೂ ನಿರ್ಧಾರ ಮಾಡಬಹುದು. ವ್ಯಾಸಂಗ ಸಮಯದಲ್ಲಿ ದೊರೆಯುವ ಈ ಫಲಿತಾಂಶಗಳಿಗೆ ಬಹಳ ಪ್ರಾಧಾನ್ಯವಿದೆ.

ಒಂದು ದೃಷ್ಟಿಯಿಂದ ಪರಿಶೀಲಿಸಿದರೆ ಅರಬ್ಬಿ ಮತ್ತು ಪಾರಸಿ ಭಾಷೆಗಳಿಂದ ನಮಗೆ ಎರವಲಾಗಿರುವ ಶಬ್ದಗಳು ಆ ಭಾಷೆಯಿಂದ ನೇರವಾಗಿ ಬಂದಿರುವುದು ಕಡಿಮೆ. ಈ ಶಬ್ದಗಳಲ್ಲಿ ಬಹುಭಾಗ ಮೊದಲು ಹಿಂದೂಸ್ತಾನಿ ಮತ್ತು ಉರ್ದು ಭಾಷೆಗಳಿಗೆ ಸೇರಿ ಆ ಬಳಿಕ ಇತರ ಭಾಷೆಗಳಿಗೆ ಹೋಗಿರಬಹುದು. ಆದರೂ ಕನ್ನಡದ ಮೇಲೆ ಅರಬ್ಬಿ, ಪಾರಸೀ ಮತ್ತು ಉರ್ದು ಭಾಷೆಗಳ ಪರಿಣಾವಾಗಿರುವಷ್ಟು ಇತರ ದ್ರಾವಿಡ ಭಾಷೆಗಳ ಮೇಲೆ ಆಗಿಲ್ಲ ಎಂದು ಹೇಳಬಹುದು. ಮರಾಠಿ ಭಾಷೆಯ ಮೂಲಕವೂ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿರುವ ಸಾಧ್ಯತೆ ಇದೆ. ಈ ವಿಚಾರದಲ್ಲಿ ಶ್ರೀ ರಂ.ಶಾ. ಲೋಕಾಪುರ ಅವರು ರಚಿಸಿರುವ 'ಹಳಗನ್ನಡ ಮತ್ತು ಮರಾಠಿ' ಎಂಬ ಕನ್ನಡ ವಿಶ್ವವಿದ್ಯಾಲಯದ ಪ್ರಕಟನೆಯನ್ನು (೧೯೯೪) ಪರಿಶೀಲಿಸಬಹುದು. ಕನ್ನಡದಿಂದ ಮರಾಠಿಗೆ ಹೋಗಿರಬಹುದಾದ ಅನೇಕ ಶಬ್ದಗಳನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ.

ನ್ಯಾಯಾಲಯಗಳಲ್ಲಿಯೂ ಸರಕಾರದ ಆಡಳಿತದಲ್ಲಿಯೂ ಜನಸಾಮಾನ್ಯರು ತಮ್ಮ

ಕಾರ್ಯನಿರ್ವಹಣೆಗಾಗಿ ಅರಬ್ಬಿ ಮತ್ತು ಪಾರಸಿ ಭಾಷಗಳನ್ನೇ ಉಪಯೋಗಿಸಬೇಕಾಗಿತ್ತು. ಅರಬ್ಬಿಯ ಧ್ವನಿ ವ್ಯವಸ್ಥೆಯು ಪಾರಸಿ ಭಾಷೆಯವರಿಂದಲೂ, ಇವೆರಡು ಭಾಷೆಯ ಧ್ವನಿ ವ್ಯವಸ್ಥೆಯು ಹಿಂದೂಸ್ತಾನಿಯನ್ನು ಮಾತನಾಡುವವರಿಂದಲೂ ಸಾಕಷ್ಟು ವ್ಯತ್ಯಾಸಗೊಂಡಿತ್ತು. ಹೀಗಾಗಿ ಭಾರತದ ಎಲ್ಲ ಭಾಷೆಗಳಲ್ಲಿಯೂ ಆಯಾ ಭಾಷೆಯ ಧ್ವನಿ ವ್ಯವಸ್ಥೆಗೆ ಹೊಂದಿಕೊಂಡ ಪದಗಳ ಉಚ್ಚಾರಣೆ ಬದಲಾಗಿರುವುದನ್ನು ನಾವು ಕಾಣಬಹುದು.

ಇಂಗ್ಲಿಷ್ ಭಾಷೆಯ ಶಬ್ದಗಳು

ಇಂಗ್ಲಿಷಿನಿಂದ ಕನ್ನಡಕ್ಕೆ ಬಂದಿರುವ ಪದಗಳ ಬಗ್ಗೆ ಕೆಲವು ವಿವರಗಳನ್ನು ನೀಡಬೇಕು. ಇಂಗ್ಲಿಷಿನ ಸ್ವರ ವ್ಯವಸ್ಥೆಯು ಬಹು ಸಂಕೀರ್ಣವಾದುದು. ಆ ಭಾಷೆಯಲ್ಲಿ ೮ ಸಂಧ್ಯಕ್ಷರ (ಸಂಧ್ಯಕ್ಷರ =Diphthong)ಗಳಿವೆಯೆಂದೂ ಪ್ರಾಯೋಗಿಕವಾಗಿ ಪರಿಶೀಲಿಸಿದರೆ ಇನ್ನೂ ಹೆಚ್ಚು ಸಂಧ್ಯಕ್ಷರಗಳು ಕಾಣಬಹುದೆಂದೂ ವಿದ್ವಾಂಸರು ಹೇಳುತ್ತಾರೆ. ಅಲ್ಲದೆ ಇಂಗ್ಲಿಷ್ ಭಾಷೆಯ ಲಿಪಿ ವ್ಯವಸ್ಥೆಯೂ ಸರಿಯಾಗಿ ಮಾರ್ಗದರ್ಶನವನ್ನು ಮಾಡುವುದಿಲ್ಲ. ಅಲ್ಲಿ ಬರಹಕ್ಕೂ ಉಚ್ಚಾರಕ್ಕೂ ಯಾವ ಸಂಬಂಧವೂ ಇಲ್ಲ. ಒಂದು ಉಚ್ಚಾರಕ್ಕೆ ಒಂದು ಲಿಪಿ ಎಂಬುದು ರೋಮನ್ ಲಿಪಿಗಳಿಗಂತೂ ಎಂದೂ ಅನ್ವಯಿಸುವುದಿಲ್ಲ. ಒಂದೇ ಲಿಪಿಯಿಂದ ಬೇರೆ ಬೇರೆ ಉಚ್ಚಾರಗಳನ್ನು ಗುರುತಿಸಬೇಕಾಗುವ ಸ್ಥಿತಿ ಬಹು ಅಸಮರ್ಪಕ. ಇಂಗ್ಲೆಂಡಿನಲ್ಲಿಯೇ ವಾಸಿಸಿದ್ದು ಅಲ್ಲಿಯ ಪಬ್ಲಿಕ್ ಶಾಲೆಗಳಲ್ಲಿ ಕಲಿತು ಉನ್ನತ ಶಿಕ್ಷಣವನ್ನು ಗಳಿಸಿದವರಿಗೆ ಪದಗಳ ಸರಿಯಾದ ಉಚ್ಚಾರ ತಿಳಿದಿರಬಹುದೇನೋ ! ಆ ಶಿಕ್ಷಣವಿಲ್ಲದೆ ಭಾರತದಲ್ಲಿಯೇ ಇಂಗ್ಲಿಷ್ ಭಾಷೆಯನ್ನು ಕಲಿತವರಿಗೆ ಅವರ ಮಾತೃಭಾಷೆಯ ಗಾಢ ಪ್ರಭಾವದಿಂದಾಗಿ ಹೊಸ ಭಾಷೆಯ ಉಚ್ಚಾರಣೆಯಲ್ಲಿ ಕಷ್ಟ ಉಂಟಾಗಿರಬಹುದು. ನಮ್ಮ ಶಾಲೆಗಳಲ್ಲಿ ಇಂಗ್ಲಿಷನ್ನು ಬೋಧಿಸುವ ಗ್ರಾಮೀಣ ಪ್ರದೇಶದ ಉಪಾಧ್ಯಾಯರಿಗಂತೂ ಸಾಮಾನ್ಯವಾಗಿ ಇಂಗ್ಲಿಷಿನ ಉಚ್ಚಾರಣೆಯ ವೈವಿಧ್ಯವನ್ನು ಕಲಿಯುವ ಅವಕಾಶ ಇರುವುದಿಲ್ಲ. ಆದುದರಿಂದ ಆ ಉಪಾಧ್ಯಾಯರಿಂದ ಕಲಿಯುವ ವಿದ್ಯಾರ್ಥಿಗಳು ಹೇಗೆ ಇಂಗ್ಲಿಷ್ ಶಬ್ದಗಳನ್ನು ಉಚ್ಚರಿಸುತ್ತಾರೋ ಆ ಉಚ್ಚಾರಣೆಯೇ ಜನಸಾಮಾನ್ಯರನ್ನು ಮುಟ್ಟುತ್ತದೆ. ಹೆಚ್ಚು ವಿದ್ಯಾಭ್ಯಾಸವಿಲ್ಲದ ಸೈನಿಕರು, ಆಡಳಿತದಲ್ಲಿರುವ ಕೆಳಗಿನ ನೌಕರರು ಇವರಿಂದಲೂ ಇಂಗ್ಲಿಷ್ ಶಬ್ದಗಳ ಉಚ್ಚಾರಣೆ ಜನತೆಯನ್ನು ಮುಟ್ಟುತ್ತದೆ. ಆದುದರಿಂದ ಭಾರತದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಕಿವಿಗೆ ಕೇಳಿಬರುವ ಇಂಗ್ಲಿಷ್ ಪದಗಳ ಉಚ್ಚಾರಣೆಯನ್ನು ಗಮನಿಸುವಾಗ ಈ ಎಲ್ಲ ವಿಷಯಗಳನ್ನು ನೆನಪಿನಲ್ಲಿಡಬೇಕಾಗುತ್ತದೆ.

ಎರವಲು ಪದಗಳಲ್ಲಿ ಆಗುವ ಅರ್ಥವ್ಯತ್ಯಾಸ

ಕಾಲಕ್ರಮದಲ್ಲಿ ಒಂದು ಭಾಷೆಯಲ್ಲಿರುವ ಶಬ್ದಗಳ ಅರ್ಥ ಬದಲಾಗುತ್ತ ಹೋಗುತ್ತದೆ. ಒಂದು ಶಬ್ದದ ಸ್ವರೂಪವನ್ನು ಆ ಶಬ್ದದ ದೇಹ ಎಂದು ಬಗೆದರೆ ಅದಕ್ಕೆ ಇರುವ ಅರ್ಥವನ್ನು ಅದರ ಆತ್ಮ ಎಂದು ತಿಳಿಯಬಹುದು. ಭಾಷೆಯ ಪ್ರಯೋಗದಲ್ಲಿ ಈ ಆತ್ಮ ವಿಸ್ತಾರವಾಗಬಹುದು, ಕುಗ್ಗಬಹುದು, ಇತರ ವಿಧದಲ್ಲಿ ಬದಲಾಗಬಹುದು. ಎರವಲು ಪದಗಳು ನಮ್ಮ ಭಾಷೆಗೆ ಬಂದಾಗಲೂ ಈ ವ್ಯತ್ಯಾಸಗಳೂ ಅವುಗಳಲ್ಲಿ ತಲೆದೋರುತ್ತವೆ. ಈ ಸಂದರ್ಭದಲ್ಲಿ ನಾವು

ನೆನಪಿಡಬೇಕಾದ ಮುಖ್ಯ ಅಂಶವೆಂದರೆ ಎರವಲು ಪದಗಳು ನಮ್ಮವರಿಗೆ ಹೊಸವು. ಅವುಗಳ ಅರ್ಥ ಏನು ಎಂಬುದು ಅವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಅವು ಉಪಯೋಗವಾದ ವಾಕ್ಯದ ಸಂದರ್ಭದಲ್ಲಿ ಅವುಗಳ ಅರ್ಥ ಏನಿರಬಹುದೆಂಬುದನ್ನು ಊಹಿಸಿ ತಿಳಿಯಬೇಕಾಗುತ್ತದೆ; ಮಕ್ಕಳು ಮಾತೃಭಾಷೆಯ ಶಬ್ದದ ಅರ್ಥವನ್ನು ಹೇಗೆ ಊಹಿಸಿ ತಿಳಿಯುತ್ತಾರೋ ಹಾಗೆಯೇ ! ಒಂದು ಸನ್ನಿವೇಶ ನನ್ನ ನೆನಪಿಗೆ ಬರುತ್ತದೆ. ನಮ್ಮ ತಂದೆ ನಮ್ಮ ಮನೆಗೆ ಯಾರಾದರೂ ಬಂದರೆ ಅವರನ್ನು ಕುರಿತು "ಬನ್ನಿ, ದಯಮಾಡಿ" ಎಂದು ಒಳಕ್ಕೆ ಆಹ್ವಾನಿಸುತ್ತಿದ್ದರು. ಇದನ್ನು ಆಗಾಗ ಬರುತ್ತಿದ್ದ ಒಬ್ಬರು ಸ್ನೇಹಿತರಿಗೆ ಅನ್ವಯಿಸುತ್ತಿದ್ದುದನ್ನು ನನ್ನ ತಂಗಿ ಅನೇಕ ವೇಳೆ ಕೇಳಿದ್ದಳು. ಹೀಗೆ ಮತ್ತೊಮ್ಮೆ ಅವರು ಮನೆಗೆ ಬಂದಾಗ ಮನೆಯ ಒಳಗಿದ್ದ ನಮ್ಮ ತಂದೆಗೆ ಈ ವರ್ತಮಾನವನ್ನು ತಿಳಿಸಿದ್ದು ಹೀಗೆ : "ಅಣ್ಣಾ, ದಯಮಾಡಿ ಬಂದಿದ್ದಾರೆ." ಅವಳು ಬಂದ ಸ್ನೇಹಿತರ ಹೆಸರನ್ನೇ ದಯಮಾಡಿ ಎಂದು ಊಹಿಸಿಬಿಟ್ಟಿದ್ದಳು. ಹೀಗೆ ಒಬ್ಬನು ಕೇಳಿದ ಪದಕ್ಕೆ ಅರ್ಥವೇನೆಂದು ಊಹಿಸುತ್ತಾನೆಯೋ, ಹಾಗೆಯೇ ಅವನು ಅದನ್ನು ಉಪಯೋಗಿಸುತ್ತಾನೆ. ಆಗ ಏನಾದರೂ ಹೊಸ ಅರ್ಥಕ್ಕೆ ಚಾಲನೆ ದೊರೆತರೆ ಅದೇ ಪರಿಣಾಮದಿಂದ ಪ್ರಭಾವಶಾಲಿಯಾದ ಅರ್ಥವೂ ಆಗಿಬಿಡಬಹುದು.

ಎಲ್ಲ ಜನರೂ ಮಾತನಾಡುವುದರಲ್ಲಿ, ಅಂದರೆ ಭಾಷೆಯನ್ನು ಉಪಯೋಗಿಸುವುದರಲ್ಲಿ ಸೌಲಭ್ಯವನ್ನು ಅಪೇಕ್ಷಿಸುತ್ತಾರೆ. ಇದರಲ್ಲಿ ತಪ್ಪೇನೂ ಇಲ್ಲ. ಸಾಮಾನ್ಯನು ಕವಿಯ ಹಾಗ ಆಗಲಿ ಒಬ್ಬ ವಿದ್ವಾಂಸ ಲೇಖಕನ ಹಾಗೆ ಆಗಲಿ ಪದಗಳನ್ನು ಅವುಗಳ ನಿಶ್ಚಿತವಾದ ಅರ್ಥದಲ್ಲಿ ಉಪಯೋಗಿಸುವುದಿಲ್ಲ. ಕೇಳುವವರೂ ಅಷ್ಟೆ ! ತಾವು ಯಾವ ಅರ್ಥದಲ್ಲಿ ಒಂದು ಪದದ ಪ್ರಯೋಗವನ್ನು ಕೇಳಿದ್ದರೋ ಆ ಅರ್ಥದಲ್ಲಿಯೇ ಅದನ್ನು ಉಪಯೋಗಿಸುತ್ತಾರೆ. ಅದು ಅಮುಖ್ಯವಾದ ಅರ್ಥವೇ ಆಗಿರಬಹುದು. ಆದರೆ ಅದು ಪ್ರಚಾರವನ್ನು ಪಡೆದರೆ ಉತ್ತಮ ಅರ್ಥವಾಗಿಯೇ ಸ್ಥಾಪಿತವಾಗಿ ಬಿಡುತ್ತವೆ.

ಹೀಗೆ ಪದಗಳ ಅರ್ಥಗಳು ಕೆಲವು ರೀತಿಗಳಲ್ಲಿ ವ್ಯತ್ಯಾಸಗೊಳ್ಳುತ್ತವೆ.

೧. ಪದಗಳ ಅರ್ಥವು ಸಂಕೋಚಗೊಳ್ಳುವುದು ಅಂದರೆ ಅರ್ಥವ್ಯಾಪ್ತಿಯ ಕಡಮೆಯಾಗುವುದು. ಇದಕ್ಕೆ ಉದಾಹರಣೆಗಳು :

ಮೂಲ ಶಬ್ದ	**ಮೂಲ ಅರ್ಥ**	**ಕನ್ನಡದಲ್ಲಿ ಅರ್ಥ**
ಕವಾಯಿದ್	ನಿಯಮ ಪರಿಪಾಲನೆ	ಸೈನ್ಯದ ಚಲನವಲನ
ಗರಜ್	ಅಗತ್ಯ	ಕಾರ್ಯಭಾರ
ಖದೀಮ್	ಸೇವಕ	ಹಳಬ, ಅನುಭವಸ್ಥ, ಮೋಸಗಾರ, ಕಳ್ಳ
ಆಮೀಲ್	ಅಧಿಕಾರಿ	ಕಂದಾಯ ವಸೂಲಿಯ ಅಧಿಕಾರಿ
ಅದಬ್	ಸದ್ವ್ಯವಹಾರ	ಗೌರವ, ಮರ್ಯಾದೆ
ಇರ್ಸಾಲ್	ರವಾನೆ	ಖಜಾನೆಗೆ ಕಟ್ಟುವ ಹಣ

ದರ್ಜಾಹ್	ವರ್ಗ, ಅಧಿಕಾರ	ಕ್ರಮ, ಅಧಿಕಾರದ ಹಿರಿಮೆ ಅಥವಾ ಕೀಳ್ಮೆ
ನಿಜಾಮ್	ವ್ಯವಸ್ಥಾಪಕ	ದೊರೆ, ಹೈದರಾಬಾದಿನ ದೊರೆ
ಫುತೂರ್	ಅವಗುಣ	ಹೊಂಚು, ದಂಗೆ, ಒಳಸಂಚು
ಫಸಲ್	ಕಟಾವಿನಂತೆ	ಕಟಾವಿನ ವರ್ಷ
ಮುಜರಾ	ಕಡಿತ (ಹಣದಲ್ಲಿ)	ಮತೀಯ ಕಾರ್ಯಗಳಿಗೆ ಮಾಡುವ ಕಂದಾಯದ ಹಂಚುವಿಕೆ
ಹಿಸ್ಸಾಹ್	ವಿಭಾಗ	ಆಸ್ತಿ ವಿಭಾಗ ಸೂತ್ರ

೨. ಪದಗಳ ಅರ್ಥಗಳು ವಿಸ್ತಾರಗೊಳ್ಳುತ್ತವೆ ಅಂದರೆ ಅರ್ಥವ್ಯಾಪ್ತಿ ಹೆಚ್ಚುತ್ತದೆ.

ಮೂಲ ಶಬ್ದ	**ಮೂಲ ಅರ್ಥ**	**ಕನ್ನಡದಲ್ಲಿ ಅರ್ಥ**
ಅಮಲ್	ಕಾರ್ಯ	ನಿಯಮ, ಅಧಿಕಾರ, ಮಾದಕತೆ
ಅಮೀನ್	ನಂಬಿಕೆಗೆ ಅರ್ಹ	ಕಂದಾಯ ಅಧಿಕಾರಿ ಗ್ರಾಮದ ನ್ಯಾಯವಿಧಾಯಕ
ಅವ್ವಲ್	ಪ್ರಥಮ	ಅತ್ಯುತ್ತಮ
ಅಸಲ್	ಮೂಲ	ಶ್ರೇಷ್ಠ, ಮುಖ್ಯ, ಪ್ರಧಾನ
ಇಲಾಖಾ	ಭೂಮಿ, ಜಮೀನು	ಸರ್ಕಾರಿ ಕಾರ್ಯವಿಭಾಗ
ಕಿಸ್ತ್	ಕಂತು	ಕಂತಿನ ಹಣ
ಕೈಫಿಯತ್	ಹೇಳಿಕೆ	ಮೊಕದ್ದಮೆ, ಕೇಸು
ಕೌಲ್	ಒಪ್ಪಿಗೆ	ಪ್ರಯಾಣ, ನೌಕಯಾನ, ಒಪ್ಪಂದ
ಜಮಾ	ಕೂಡು, ಸೇರಿಸು	ಗಳಿಕೆ, ಲಾಭ
ದಾಖಿಲ್	ಬರಹ	ಕಾಗದ ಪತ್ರಗಳು, ಬರಹ, ಸಾಕ್ಷಿ
ನಕ್ಲ್	ದುಪ್ರತಿ	ವ್ಯಂಗ್ಯ, ಹಾಸ್ಯ, ಟೀಕೆ
ಫಕೀರ್	ಮತೀಯ ಸಂನ್ಯಾಸಿ	ಭಿಕ್ಷುಕ, ದಿಕ್ಕಿಲ್ಲದವನು
ಮಹಜರ್	ನ್ಯಾಯಾಲಯಕ್ಕೆ ಒಪ್ಪಿಸಿದ ಅರ್ಜಿ	ಇದ್ದವರೆಲ್ಲರೂ ಸಹಿ ಹಾಕಿದ ಬರಹ
ಮಾಮೂಲ್	ಎಂದಿನಂತೆ	ಲಂಚ

ಇಲ್ಲಿ ಕನ್ನಡ ಅರ್ಥದಲ್ಲಿ ಸೂಚಿಸಿರುವುದು ಮೂಲ ಅರ್ಥದ ಜೊತೆಗೆ ಸೇರಿರುವ ಅರ್ಥ ಎಂದು ಗಮನಿಸಬಹುದು.

೩. ಕೆಲವು ವೇಳೆ ಸಂಪೂರ್ಣವಾಗಿ ಅರ್ಥಗಳು ಬೇರೆಯೇ ಆಗುತ್ತವೆ.

ಮೂಲ ಶಬ್ದ	ಮೂಲ ಅರ್ಥ	ಕನ್ನಡದಲ್ಲಿ ಅರ್ಥ
ಅದ್ಲ್	ನ್ಯಾಯ	ವಿನಿಮಯ
ಅಷ್ರಫ್	ಅತ್ಯುತ್ತಮ	ಚಿನ್ನದ ನಾಣ್ಯ
ಇಲಾಖಾ	ಜಮೀನು ವಿಭಾಗ	ಸರಕಾರಿ ಕಾರ್ಯ ವಿಭಾಗ
ಹಿಲಾಲ್	ಚಂದ್ರ	ದೀವಟಿಗೆ
ಹುಜೂರ್	ಹಾಜರಿ	ಗೌರವ
ಕಬರ್	ವರ್ತಮಾನ	ಎಚ್ಚರ, ಗಮನ
ಕಸಬ್	ಗಳಿಕೆ	ಉದ್ಯೋಗ
ಕಿಫಾಯತ್	ಸಾಕಾದಷ್ಟು	ಲಾಭ
ಕೈದ್	ಜೈಲು, ಕಾರಾಗೃಹ	ದಸ್ತಗಿರಿ
ತಾಮಾಮ್	ಪೂರೈಸುವಿಕೆ	ಸಂಪೂರ್ಣ
ತರದೂದ್	ಹಿಂದೆಗೆಯುವಿಕೆ	ಎಲ್ಲಸಿದ್ಧತೆ
ತಸ್ದೀಕ್	ಭಿಕ್ಷೆ ನೀಡುವುದು	ಮತೀಯ ಸ್ಥಾನಗಳಿಗೆ ನೀಡುವ ಸರಕಾರದ ಹಣ
ಫಜೀಹ್‌ತಿ	ಅವಮಾನಕರ	ಇಕ್ಕಟ್ಟು, ಕಿರಿಕಿರಿ
ಫಿರ್ಕಾಹ್	ವಾಸ ಮಾಡುವ ಸ್ಥಳ	ವಿಭಾಗ

ಇದೇ ರೀತಿಯಲ್ಲಿ ಪದಗಳ ಅರ್ಥದಲ್ಲೂ ಹೀನಾರ್ಥ ಸಂಪ್ರಾಪ್ತಿಯನ್ನೂ ಉತ್ತಮಾರ್ಥ ಸಂಪ್ರಾಪ್ತಿಯನ್ನೂ ಗುರುತಿಸಬಹುದು. ಒಟ್ಟಿನಲ್ಲಿ ಅರ್ಥ ವ್ಯತ್ಯಾಸವು ಎರವಲು ಪದಗಳಲ್ಲಿ ಅತಿ ಸಾಮಾನ್ಯವಾದ ಸ್ಥಿತಿ ಎಂಬುದನ್ನು ನಾವು ಅರಿತಿರಬೇಕು.

ಎರವಲು ಪದಗಳ ಅಭ್ಯಾಸ ಮಾಡುವಾಗ ನಾವು ಬಹು ಮುಖ್ಯವಾಗಿ ಗಮನಿಸಬೇಕಾಗಿರುವುದು ಅರಬ್ಬಿ, ಪಾರಸಿ ಮತ್ತು ಉರ್ದು ಭಾಷೆಗಳಿಂದ ಬರುವ ಪದಗಳನ್ನು. ಈ ಭಾಷೆಗಳಿಂದಲೇ ನಮಗೆ ಅತಿಹೆಚ್ಚು ಪದಗಳು ಬಂದಿವೆ. ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಿಂದಲೂ ಶಬ್ದಗಳು ಹೆಚ್ಚಾಗಿಯೇ ಬಂದಿವೆ. ಇಂಗ್ಲಿಷ್ ಭಾಷೆಯಿಂದ ಬಂದ ಶಬ್ದಗಳ ಚರಿತ್ರೆ ಇತ್ತೀಚಿನದು, ಕೇವಲ ಇನ್ನೂರು ವರ್ಷಗಳ ಕಾಲದ್ದು. ಅರಬ್ಬೀ, ಪಾರಸೀ, ಉರ್ದು ಭಾಷೆಗಳ ವಿಚಾರ ಹಾಗಲ್ಲ. ಆದುದರಿಂದ ಈ ಮೂರು ಭಾಷೆಗಳ ಮತ್ತು ಅವುಗಳ ಸಾಹಿತ್ಯದ ಬಗ್ಗೆ ಕಿರು ಪರಿಚಯವಿರುವುದು ಅಗತ್ಯವೆಂದು ತಿಳಿದು ಮುಂದೆ ಆ ಬಗ್ಗೆ ಸ್ಥೂಲವಾದ ಒಂದು ಪರಿಚಯವನ್ನು ಮಾಡಿಕೊಡಲು ಪ್ರಯತ್ನ ಮಾಡಲಾಗಿದೆ.

ಅರಬ್ಬಿ ಭಾಷೆ ಮತ್ತು ಸಾಹಿತ್ಯ

ಅರಬ್ಬಿ ಭಾಷೆಯನ್ನು ಮಾತನಾಡುವ ಜನರು ಪ್ರಪಂಚದ ಅನೇಕ ಭಾಗಗಳಲ್ಲಿ ಹರಡಿದ್ದಾರೆ. ಮೊರಕೋ, ಆಲ್ಜೀರಿಯಾ, ಟ್ಯೂನಿಸ್, ಲಿಬಿಯಾ, ಸಂಯುಕ್ತ ಅರಬ್ ಎಮೆರಿಟಸ್, ಸೂಡಾನ್, ಲೆಬನಾನ್, ಸಿರಿಯಾ, ಜೋರ್ಡನ್, ಇರಾಕ್, ಅರೇಬಿಯನ್ ಭೂಶಿರಗಳು, ಇಸ್ರೇಲ್, ಇರಾನ್ ಮತ್ತು ಕೆಲವು ಮಧ್ಯ ಏಷ್ಯದ ರಷ್ಯನ್ ದೇಶಗಳು ಇಲ್ಲೆಲ್ಲ ಅರಬ್ಬಿ ಭಾಷೆ ಪ್ರಚಾರದಲ್ಲಿದೆ. ಇದಲ್ಲದೆ ಸಹರಾ ಮರಭೂಮಿಯ ದಕ್ಷಿಣದ ಕೆಲವು ಪ್ರದೇಶಗಳಲ್ಲಿ ಜನರು ಈ ಭಾಷೆಯನ್ನೇ ಮಾತನಾಡುತ್ತಾರೆ. ಇಸ್ಲಾಂ ಮತವು ಪ್ರಚಾರದಲ್ಲಿ ಇರುವ ಕಡೆಗಳಲ್ಲೆಲ್ಲ ಅರಬ್ಬಿಯು ವ್ಯಾಪಿಸಿದೆ. ಅರಬ್ಬಿ ಎಂಬ ಹೆಸರನ್ನು ಅನೇಕ ಭಾಷೆಗಳಿಗೆ ಅನ್ವಯಿಸುತ್ತಾರೆ. ಅವೆಲ್ಲವೂ ಅರಬ್ಬಿಯ ಆಡುಭಾಷೆಯ ಬೇರೆ ಬೇರೆ ರೂಪಗಳೆಂದು ಹೇಳಬಹುದು. ಆದರೆ ವ್ಯತ್ಯಾಸ ಮಾತ್ರ ಬಹಳವಾಗಿದೆ. ಉದಾಹರಣೆಗೆ ಮೊರಕೋದಲ್ಲಿರುವ ಅರಬ್ಬಿ ಆಡುಭಾಷೆಗೂ ಇರಾಕಿನಲ್ಲಿರುವ ಅರಬ್ಬಿ ಆಡುಭಾಷೆಗೂ ಎಷ್ಟು ವ್ಯತ್ಯಾಸವಿದೆ ಎಂದರೆ ಅವೆರಡೂ ಬೇರೆ ಬೇರೆ ಭಾಷೆಗಳೆಂದೇ ಹೇಳಬೇಕು. ಈ ಬೇರೆ ಬೇರೆ ಭಾಷೆಗಳನ್ನೆಲ್ಲ ಅರಬ್ಬಿ ಲಿಪಿಯಲ್ಲಿ ಬರೆಯುವುದಕ್ಕೇ ಆಗುವುದಿಲ್ಲ.

ಅರಬ್ಬಿಯನ್ನು classical, literary, written ಎಂದು ಮುಂತಾಗಿ ವಿಭಾಗಿಸುತ್ತಾರೆ. ಆದರೆ ಈ ಯಾವ ನಾಮಕರಣವೂ ಅದಕ್ಕೆ ಸರಿಯಾಗಿ ಹೊಂದುವುದಿಲ್ಲ. ಆದ್ದರಿಂದ Standard Arabic ಎಂದು ಕರೆಯಬೇಕೆಂದು ಕೆಲವರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದು ಬಹಳ ಪ್ರಾಚೀನವಾದ ಭಾಷೆ. Semitic ಎಂದು ಕರೆಯುವ ಭಾಷೆಗಳ ಗುಂಪಿಗೆ ಅರಬ್ಬಿ ಭಾಷೆಯೂ ಸೇರುತ್ತದೆ. ಇದನ್ನು Afro-Asiatic ಗುಂಪು ಎಂದೂ ಕರೆಯುತ್ತಾರೆ. Amharic, Hebrew, Somali, Galla, Beja ಮುಂತಾದ ಭಾಷೆಗಳು ಈ ಗುಂಪಿಗೆ ಸೇರಿದ ಇತರ ಮುಖ್ಯ ಭಾಷೆಗಳು. ಒಟ್ಟು ಸುಮಾರು ೧೨೨ ಮಿಲಿಯನ್ (೧೨ ಕೋಟಿ ೨೦ ಲಕ್ಷ) ಜನರು ಈ ಭಾಷೆಗಳನ್ನು ಮಾತನಾಡುತ್ತಾರೆ. ಅರಬ್ಬಿಯನ್ನು ಮಾತನಾಡುವವರ ಸಂಖ್ಯೆ ಸುಮಾರು ೮೦ ಮಿಲಿಯನ್. (೮ ಕೋಟಿ)

ಸಿರಿಯಾದ ದೇಶದ ಮರಳುಗಾಡಿನಲ್ಲಿ ನೆಮಾರ್ ಎಂಬ ಕಡೆ ದೊರಕಿರುವ ಒಂದು ಸಮಾಧಿಯ ಕಲ್ಲಿನ ಮೇಲೆ ಇರುವ ಲಿಪಿ ಅರಬ್ಬಿಯದೆಂದು ಹೇಳುತ್ತಾರೆ. ಇದರ ಕಾಲ ಕ್ರಿ.ಶ.೩೨೮ ಹೀಗೆಯೇ ಕ್ರಿ.ಶ. ೫, ೬ ನೆಯ ಶತಮಾನಗಳಿಗೆ ಸೇರಿದ ಒಂದೆರಡು ಶಾಸನಗಳು ಸಿಕ್ಕಿವೆ. ಕ್ರಿ.ಶ. ೬೦೦ರ ವೇಳೆಯಲ್ಲಿ ಅರೇಬಿಯದಲ್ಲಿ ಅನೇಕ ಆಡುಭಾಷೆಗಳು ಇದ್ದಿರಬೇಕೆಂದು ಕೆಲವರು ಭಾಷಾಶಾಸ್ತ್ರಜ್ಞರು ಹೇಳುತ್ತಾರೆ. ಹೀಗೆಯೇ ೬ನೇ ಶತಮಾನ ಮತ್ತು ೮, ೯ನೇ ಶತಮಾನಗಳಿಗೆ ಸೇರಿದವೆಂಬ ಕಾವ್ಯದ ತುಣುಕುಗಳು ಆಡುಮಾತಿನಲ್ಲಿವೆ.

ಪ್ರವಾದಿ ಮಹಮ್ಮದರಿಗೆ ದೇವರಿಂದ ಸಂದೇಶವಾಗಿ ದತ್ತವಾದ, ಇಸ್ಲಾಂ ಮತದ ಪವಿತ್ರ ಗ್ರಂಥ ಕುರಾನ್ ಕ್ರಿ.ಶ. ೭ನೆಯ ಶತಮಾನದ ಪ್ರಾರಂಭದಲ್ಲಿ ಪ್ರಕಟವಾಯಿತು. ಮಹಮ್ಮದರ ಅನುಯಾಯಿಗಳು ಈ ಸಂದೇಶವನ್ನು ಬಾಯಿಪಾಠ ಮಾಡಿ, ಆ ಬಳಿಕ

ಲಿಪಿಗಾರರಿಂದ ಅದು ಅರಬ್ಬಿಯಲ್ಲಿ ದಾಖಲಾಯಿತು. ಆದ್ದರಿಂದ ಅರಬ್ಬಿಯಲ್ಲಿರುವ ಅತಿ ಪ್ರಾಚೀನ ದಾಖಲೆ ಎಂದರೆ ಈ ಕುರಾನ್ ಗ್ರಂಥವೇ. ಆದರೂ ಆ ಲಿಪಿಯ ಉಚ್ಚಾರಣೆ ಹೇಗಿರಬೇಕೆಂಬುದು ನಿರ್ಧಾರವಾಗಬೇಕಾದರೆ ಮತ್ತೆ ಒಂದು ಶತಮಾನದ ಕಾಲ ಬೇಕಾಯಿತು. ಅಂತೂ ಅರಬ್ಬಿಯ ಎಲ್ಲ ಆಡುಮಾತುಗಳ ಮೇಲೆಯೂ ಕುರಾನಿನ ಪ್ರಭಾವ ಅಪಾರವಾಗಿದೆ.

ಅರಬ್ಬಿಯ ಧ್ವನಿ ವ್ಯವಸ್ಥೆಯು ಯುರೋಪಿನ ಎಲ್ಲ ಭಾಷೆಗಳಿಗಿಂತ ಬೇರೆಯಾದುದು. ಆ ಭಾಷೆಯಲ್ಲಿ ಮೂರು ಹ್ರಸ್ವಸ್ವರಗಳೂ, ಮೂರು ದೀರ್ಘಸ್ವರಗಳೂ ಇವೆ. ಅರಬ್ಬಿಯ ಶಬ್ದಗಳು ಸಾಮಾನ್ಯವಾಗಿ ಒಂದು ವ್ಯಂಜನದಿಂದ ಪ್ರಾರಂಭವಾಗಿ ಸ್ವರದಿಂದ ಅನುಸರಿಸಲ್ಪಡುತ್ತವೆ. ಎರಡಕ್ಕಿಂತ ಹೆಚ್ಚು ವ್ಯಂಜನಗಳು ಒಟ್ಟಿಗೆ ಸೇರುವುದು ಅಪೂರ್ವ. ಅರಬ್ಬಿ ಭಾಷೆಯಲ್ಲಿ ಮೂಲ ಶಬ್ದಗಳು ಮೂರು ವ್ಯಂಜನಗಳಿಂದ ಕೂಡಿರುತ್ತವೆ. ಅವುಗಳ ಮಧ್ಯೆ ಸ್ವರಗಳು ಬೇರೆ ಬೇರೆ ರೀತಿಯಾಗಿ ಸೇರಿ ಬೇರೆ ಬೇರೆ ಅರ್ಥಗಳನ್ನು ನೀಡುತ್ತವೆ. ಉದಾಹರಣೆಗೆ **Ktb** ಇದು ಮೂಲ. ಇದಕ್ಕೆ ಸ್ವರ ಸೇರಿ **Kitab** ಎಂದರೆ ಪುಸ್ತಕ, **Katib** ಎಂದರೆ ಬರೆಯುವವ, ಲಿಪಿಕಾರ, ಕಾರಕೂನ. ಅರಬ್ಬರಲ್ಲಿ ವಿದ್ಯಾಭ್ಯಾಸ ಹೆಚ್ಚಾದ ಮೇಲೆ ಕುರಾನ್ ಗ್ರಂಥದ ಪ್ರಭಾವಕ್ಕೆ ಒಳಗಾಗುವುದು ಸಾಮಾನ್ಯ.

ಪ್ರಪಂಚದಲ್ಲಿ ಲ್ಯಾಟಿನ್ ಲಿಪಿಯನ್ನು ಬಿಟ್ಟರೆ ಅತಿ ಹೆಚ್ಚಾಗಿ ಉಪಯೋಗವಾಗುವ ಲಿಪಿ ಅರಬ್ಬಿ ಲಿಪಿ. ಇಸ್ಲಾಂ ಮತದ ಪ್ರಚಾರದಿಂದ ವ್ಯಾಪಕವಾಗಿ ಪ್ರಸಾರವಾದ ಈ ಲಿಪಿಯು ಪಾರಸಿ, ತುರ್ಕಿ, ಸ್ಪಾನಿಷ್, ಸ್ವಾಹಿಲಿ ಮುಂತಾದ ಭಾಷೆಗಳಿಗೂ ಉಪಯೋಗವಾಗುತ್ತಿದೆ. ಇದು ಕ್ರಿ.ಶ. ೪ನೇ ಶತಮಾನದಲ್ಲಿ ರಚಿತವಾದುದೆಂದು ತಿಳಿದಿದ್ದರೂ ಇದರ ಮೂಲ ಇನ್ನು ನಿಶ್ಚಿತವಾಗಿಲ್ಲ.

ಅರಬ್ಬಿ ಭಾಷೆಗೆ ೨೮ ಅಕ್ಷರಗಳಿವೆ. ಈ ಲಿಪಿಗಳಲ್ಲಿ ಎರಡು ಬಗೆಗಳಿವೆ. ಮೆಸಪೊಟೋಮಿಯಾದಲ್ಲಿ **ಕೂಫಾ** ಎಂಬ ಪಟ್ಟಣದಲ್ಲಿ ಅಭಿವೃದ್ಧಿ ಹೊಂದಿದ **ಕೂಫಿಕ್** (KUFIC) ಸ್ವರೂಪದ ದಪ್ಪ ಅಕ್ಷರದ್ದು ಒಂದು, ಇನ್ನೊಂದು **ನಸ್ಕಿ** (NSKHI), ಎಂಬುದು. ಕಾಗದದ ಮೇಲೆ ಬರೆಯಲು ಅನುಕೂಲವಾಗುವ ಆಧುನಿಕ ಬರವಣಿಗೆಗೆ ಇದು ಸಹಾಯಕವಾಗಬಹುದು. ಮೆಕ್ಕಾ ಮತ್ತು ಮದೀನಾಗಳಲ್ಲಿ ಇದು ಅಭಿವೃದ್ಧಿ ಹೊಂದಿತು.

ಇಸ್ಲಾಂ ಮತವು ಪ್ರಚಾರಕ್ಕೆ ಬಂದಮೇಲೆ ಕಾಣಿಸಿಕೊಂಡ ಸುವರ್ಣಯುಗದಲ್ಲಿ ಪಾರಸಿಗಳು, ಇರಾನಿಯನ್ನರು, ಭಾರತೀಯರು, ಸ್ಪೇಯಿನಿನವರು, ಮಹಮ್ಮದೀಯರು, ಈಜಿಪ್ಟಿನವರು, ಸಿರಿಯನ್ನರು ಮುಂತಾಗಿ ಅನೇಕ ಇತರ ಜನಾಂಗದವರೂ ಅರಬ್ಬಿ ಸಾಹಿತ್ಯಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ಅರೇಬಿಯಾದ ಮರಳು ಕಾಡಿನಲ್ಲಿ ಸುತ್ತಾಡಿಕೊಂಡಿದ್ದ ಅಲೆಮಾರಿ ಅರಬ್ಬರ ಕಾಲದ ಸಾಮತಿಗಳು, ಜನಪದ ಕಾವ್ಯಗಳು ಆರನೆಯ ಶತಮಾನಕ್ಕೆ ಸೇರಿದವು. ೭ ಮತ್ತು ೮ನೇ ಶತಮಾನದ ತನಕ ಜನರ ಆಡುಮಾತಿನಲ್ಲಿ ಉಳಿದು ಬಂದವು. ೧೧ನೇ ಶತಮಾನದಲ್ಲಿ ಈ ಸಂಸ್ಕೃತಿಯು ತನ್ನ ಅವನತಿಯನ್ನು ಕಂಡಿತು. ಆದರೆ ಕುರಾನಿನ ಪ್ರಭಾವವುಳ್ಳ ಅರಬ್ಬಿ ಸಾಹಿತ್ಯವು ೧೬ನೇ ಶತಮಾನದ ತನಕ ಅಭಿವೃದ್ಧಿ ಹೊಂದಿತು.

ಅರಬ್ಬಿಸಾಹಿತ್ಯದಲ್ಲಿ ಎರಡು ಮುಖ್ಯ ಭಾಗಗಳಿವೆ. ಇಸ್ಲಾಂ ಮತದ ಕಾಲಕ್ಕಿಂತ ಮುಂಚಿನ ೬ನೆಯ ಮತ್ತು ೭ನೇ ಶತಮಾನದ ಸಾಹಿತ್ಯ ಮತ್ತು ಇಸ್ಲಾಂ ಮತದ ಪ್ರಚಾರ ಕಾಲದ ಸಾಹಿತ್ಯ. ಈ ಎರಡನೆಯ ಕಾಲದ ಸಾಹಿತ್ಯವೆಲ್ಲ ಮತೀಯ ಸಾಹಿತ್ಯವಲ್ಲ. ಆದರೆ ಸೂಫಿ ಪ್ರಭಾವವು ಹೆಚ್ಚಾದಾಗ ಮತೀಯ ಪ್ರಭಾವವೂ ಅಧಿಕಗೊಂಡಿತು. ಈ ಪ್ರಭಾವವು ಪಾರಸೀ ಸಾಹಿತ್ಯದ ಮೇಲೆಯೂ ತುರ್ಕಿ ಸಾಹಿತ್ಯದ ಮೇಲೆಯೂ ತನ್ನ ಅಚ್ಚನ್ನು ಒತ್ತಿದೆ. ೧೬ನೇ ಮತ್ತು ೧೭ನೇ ಶತಮಾನಗಳಲ್ಲಿ ಅರಬ್ಬಿಯನ್ನು ಮಾತನಾಡುವ ಪ್ರದೇಶಗಳ ಮೇಲೆಲ್ಲ ಆಕ್ರಮಣ ನಡೆಯಿತು. ಆಗ ಎಲ್ಲ ಅರಬ್ಬಿ ಸಾಹಿತ್ಯವೂ ಸಂಪೂರ್ಣವಾಗಿ ನಾಶ ಹೊಂದಿತು.

೧೯ನೇ ಶತಮಾನದಲ್ಲಿ ಉಂಟಾದ ಪಾಶ್ಚಾತ್ಯ ಪ್ರಭಾವದಿಂದ ಸಿರಿಯ, ಈಜಿಪ್ಟ್, ಲೆಬನಾನ್ ಮತ್ತು ಇರಾಕ್ ಪ್ರದೇಶಗಳಲ್ಲಿ ಕುರಾನ್ ಪ್ರಭಾವದ ಸಾಹಿತ್ಯಕ್ಕೆ ಹೆಚ್ಚು ಆಸಕ್ತಿ ಬೆಳೆಯಿತು. ಈಜಿಪ್ಟಿನಲ್ಲಿದ್ದ ಸ್ವತಂತ್ರ ವಾತಾವರಣದ ಪರಿಣಾಮವಾಗಿ ಸಿರಿಯ ಮತ್ತು ಲೆಬನಾನ್ ದೇಶದ ಲೇಖಕರು ಅಲ್ಲಿಗೆ ವಲಸೆ ಹೋದರು. ಆದುದರಿಂದ ಈಜಿಪ್ಟ್ ದೇಶವೇ ಅರಬ್ಬಿ ಸಾಹಿತ್ಯದ ನವೋದಯಕ್ಕೆ ಆಶ್ರಯಸ್ಥಾನವಾಯಿತು. ಎರಡನೆಯ ಮಹಾಯುದ್ಧವಾದ ಮೇಲೆ ಸ್ವಾತಂತ್ರ್ಯ ಹೆಚ್ಚಿ ವಾರ್ತಾ ಪತ್ರಿಕೆಗಳ ಪ್ರಭಾವವು ಬೆಳೆದು ಸಾಹಿತ್ಯ ರಚನೆ ಸಮೃದ್ಧವಾಗಿದೆ.

ಅರಬ್ಬಿ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಒಂದೆರಡು ಮುಖ್ಯ ವಿಷಯಗಳನ್ನು ಸದಾ ನೆನಪಿಡಬೇಕಾದ ಅಗತ್ಯವಿದೆ. ಅವುಗಳನ್ನು ಹೀಗೆ ಗುರುತಿಸಬಹುದು :

೧. ಎಂಟನೇ ಶತಮಾನದಲ್ಲಿ ಅರಬ್ಬಿ ಭಾಷೆಗೆ ಸ್ಥಿರವಾದ ಒಂದು ಸ್ವರೂಪವನ್ನು ಕೊಡಲು ಒಂದು ವ್ಯಾಕರಣವನ್ನು ರಚಿಸಲಾಯಿತು. ಇದು Standard Arabic ಎಂಬುದನ್ನು ನಿರ್ಮಿಸಲು ಮಾಡಿದ ಪ್ರಯತ್ನ. ಇಂದಿಗೂ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವ ವ್ಯಾಕರಣ ಇದೇ ಆಗಿದೆ.

೨. ೧೧ನೇ ಶತಮಾನವು ಅರಬ್ಬಿಯ ಸುವರ್ಣಯುಗ. ಆ ಕಾಲದಲ್ಲಿ ಅನೇಕ ಪ್ರತಿಭಾವಂತರು ಭಾಷೆಯನ್ನು ಬೆಳೆಸಿ ಅತ್ಯಂತ ಸುಂದರವಾದ ಅತಿ ಸೂಕ್ಷ್ಮ ಭಾವನೆಗಳನ್ನೂ, ಅರ್ಥವನ್ನೂ ನಿರ್ವಹಿಸುವ ಸಾಮರ್ಥ್ಯವನ್ನು ತಂದುಕೊಟ್ಟರು.

೩. ೧೯ನೇ ಶತಮಾನದಲ್ಲಿ ಸುವರ್ಣಯುಗದ ಹಳೆಯ ಗ್ರಂಥಗಳನ್ನು ಸಮರ್ಥವಾಗಿ ಸಂಪಾದಿಸಿ ಪ್ರಕಟಿಸಲಾಗಿದೆ. ಮೂಲೆಗೆ ಬಿದ್ದಿದ್ದ ಅನೇಕ ಭವ್ಯ ರಚನೆಗಳು ಹೊರಬಂದವು. ಅನೇಕ ನಿಘಂಟುಗಳು ರಚನೆಯಾಗಿ ಅರಬ್ಬಿ ಶಬ್ದಗಳ ಅರ್ಥವನ್ನು ನಿಷ್ಕೃಷ್ಟಗೊಳಿಸಿವೆ. ಅದು ನವೋದಯದ ಕಾಲ.

೪. ಈ ನವೋದಯದ ಕಾಲದಲ್ಲಿ ಅರಬ್ಬರ ಪ್ರಪಂಚಕ್ಕೆ ಒಂದು ದೊಡ್ಡ ಸ್ಪರ್ಧೆ ಏರ್ಪಟ್ಟಿತು. ಅರಬ್ಬರು ನಗರವಾಸಿಗಳಾದರು. ಆದುದರಿಂದ ನಗರ ಜೀವನಕ್ಕೆ ಬೇಕಾದ ಹೊಸ ಭಾವನೆಗಳೂ ಯುರೋಪಿಯನ್ ಸಂಸ್ಕೃತಿಯನ್ನು ಎದುರಿಸುವ ಸಾಮರ್ಥ್ಯವೂ ಅರಬ್ಬಿ ಭಾಷೆಗೆ ಆವಶ್ಯಕವಾದವು. ಅರಬ್ಬಿಯಲ್ಲಿ ಈ ಅಭಿವ್ಯಕ್ತಿ ಸಾಮರ್ಥ್ಯವು ಕೂಡಿಕೊಂಡಿತು.

ಜತೆಗೆ ಕುರಾನಿನ ಭಾಷೆಯ ಮತ್ತು ಸುವರ್ಣಯುಗದ ಸತ್ವ ಜತೆಜತೆಯಾಗಿಯೇ ಬೆಳಗುತ್ತ ಇವೆ.

೫. ಇಂಗ್ಲಿಷಿನಲ್ಲಿ ಅರಬ್ಬಿ ಭಾಷೆಯನ್ನು ಕುರಿತ ಒಂದು ವ್ಯಂಗ್ಯೋಕ್ತಿ ಇದೆ. "Every word in Arabic means itself, it's opposite and a kind of Camel." ಅರಬ್ಬರ ಮಾತಿನಲ್ಲಿ ಒಂಟೆ ಎಂಬ ಪ್ರಾಣಿಯನ್ನು ನಿರ್ದೇಶಿಸುವ ನೂರಕ್ಕೂ ಹೆಚ್ಚು ಶಬ್ದಗಳಿವೆಯಂತೆ. ಅಲ್ಲದೆ ಒಂದು ಶಬ್ದಕ್ಕೆ ವಿರುದ್ಧಾರ್ಥಗಳು ಬರುತ್ತವೆಯಂತೆ. ಉದಾ: **ತರಬ್ = ಸಂತೋಷ, ದುಃಖ, ತುಲು = ಮೇಲಕ್ಕೆ ಹತ್ತು, ಕೆಳಕ್ಕೆ ಇಳಿ.** ಈ ಕಾರಣದಿಂದ ಇಂಗ್ಲಿಷರು ಮೇಲಿನ ವ್ಯಂಗ್ಯೋಕ್ತಿಯನ್ನು ನಿರ್ಮಾಣ ಮಾಡಿದ್ದಾರೆ. ಈಗ ಅರಬ್ಬಿ ವಿದ್ವಾಂಸರು ಅರಬ್ಬಿಯಲ್ಲಿ ಸಮಾನಾರ್ಥಕ್ಕಿಂತ ಸಮೀಪಾರ್ಥ ಹೆಚ್ಚು ಎಂದು ಪ್ರತಿಪಾದಿಸುತ್ತಿದ್ದಾರೆ.

೬. ಅರಬ್ಬಿ ಭಾಷೆಯಿಂದ ಪ್ರಪಂಚದ ಅನೇಕ ಭಾಷೆಗಳಿಗೆ ಅನೇಕ ಪದಗಳು ಎರವಲಾಗಿ ಹೋಗಿವೆ. ಅರಬ್ಬಿಗೆ ಎರವಲುಗಳನ್ನು ತರುವುದರಲ್ಲಿ ಅರಬ್ಬರು ತುಂಬ ತಡೆಗಳನ್ನು ಒಡ್ಡಿದ್ದಾರೆ. ಹೊಸ ಶಬ್ದಗಳು ಬೇಕಾದ ಕಡೆಗೆ ಇರುವ ಶಬ್ದಗಳನ್ನು ಹೊಂದಿಸುತ್ತಾರೆ. ಇಲ್ಲದಿದ್ದರೆ ಹೊಸ ಅರಬ್ಬಿ ಶಬ್ದವನ್ನು ಸೃಷ್ಟಿಸುತ್ತಾರೆ. ಪರಭಾಷೆಯ ಶಬ್ದವನ್ನು ಅನುವಾದ ಮಾಡಿ ತಮ್ಮ ಭಾಷೆಗೆ ಹೊಂದಿಸುತ್ತಾರೆ. ಇಂಥ ಪದಗಳನ್ನು ಭಾಷಾ ಶಾಸ್ತ್ರದಲ್ಲಿ ಇಂಗ್ಲಿಷಿನಲ್ಲಿ Calque ಎಂದು ಕರೆಯುತ್ತಾರೆ. Loan Translation ಎಂದು ಅದಕ್ಕೆ ಅರ್ಥ. ಅರಬ್ಬರು ಸೃಷ್ಟಿಸುವ ಹೊಸ ಅರಬ್ಬಿ ಪದವು ಇತರ ಭಾಷೆಗಳವರಿಗೂ ಸಮರ್ಪಕವಾಗುವಷ್ಟು ಯಶಸ್ವಿಯಾಗಿವೆ. Geology ಶಬ್ದಕ್ಕೆ ಜಿಯುಲುಜಿಯಾ ಎಂದೇ ಶಬ್ದವನ್ನು ಸೃಷ್ಟಿ ಮಾಡುತ್ತಾರೆ. ಕೈರೋದಲ್ಲಿರುವ ಅರಬ್ ಅಕಾಡೆಮಿಯು ಹೊಸ ಪದಗಳ ನಿರ್ಮಾಣದಲ್ಲಿ ತುಂಬ ಪ್ರಯೋಜನಕರವಾದ ಕೆಲಸವನ್ನು ಮಾಡಿದೆ. Telephone ಎಂಬ ಪದಕ್ಕೆ Hatif ಎಂಬ ಪದವನ್ನು ಸೃಷ್ಟಿಸಿದ್ದರೂ ಇಂಗ್ಲಿಷ್ ಪದವೇ ಹೆಚ್ಚು ಜನಪ್ರಿಯವಾಗಿದೆ.*

ಪಾರಸೀ ಭಾಷೆ ಮತ್ತು ಸಾಹಿತ್ಯ

ಪಾರಸೀ ಅಥವಾ Farsi ಎಂಬುದು ಅರಬ್ಬಿಯಂತೆಯೇ ಬಹು ಪ್ರಾಚೀನವಾದ ಭಾಷೆ. ಇದು ಇಂಡೋ ಯುರೋಪಿಯನ್ ಗುಂಪಿಗೆ ಸೇರಿದ ಒಂದು ಪ್ರಮುಖ ಭಾಷೆ; ಇರಾನ್ ದೇಶದ ಆಡಳಿತದ ಭಾಷೆ. ಆಫ್ಘಾನಿಸ್ತಾನದಲ್ಲಿಯೂ ರಷ್ಯಾ ದೇಶದ ಕೆಲವು ಕಡೆಗಳಲ್ಲಿಯೂ ಪ್ರಚಾರದಲ್ಲಿರುವ ಭಾಷೆ. ಇದನ್ನು ಮಾತನಾಡುವ ಜನಸಂಖ್ಯೆ ಸುಮಾರು ೨೨ ಮಿಲಿಯನ್. (೨ ಕೋಟಿ ೨೦ ಲಕ್ಷ) ಈ ಭಾಷೆಯನ್ನು ಅರಾಬಿಕ್ ಲಿಪಿಯಲ್ಲಿ ಬರೆಯುತ್ತಾರೆ. ಆಧುನಿಕ ಪಾರಸೀ ಭಾಷೆಯಲ್ಲಿ ಅನೇಕ ಅರಬ್ಬಿ ಪದಗಳು ಎರವಲಾಗಿ

* (The Arabic Language, its Role in History, 1969, University of Minnesota Press)

ಸೇರಿವೆ. ಈಗಲೂ ಪ್ರಯೋಗವಾಗುತ್ತ ಇವೆ. ಮಾನವನ ಬೌದ್ಧಿಕ ವಿಕಾಸವನ್ನು ವಿವರಿಸುವುದಕ್ಕೆ ಪಾರಸೀ ಭಾಷೆಯ ಸಾಹಿತ್ಯವು ಮುಖ್ಯ ಸಾಧನಗಳಲ್ಲಿ ಒಂದಾಗಿದೆ.

ಮಧ್ಯಏಷ್ಯದಿಂದ ಪ್ರಪಂಚದ ಅನೇಕ ಕಡೆಗಳಿಗೆ ವಲಸೆಗಾಗಿ ಪ್ರಯಾಣ ಮಾಡಿದ ಆರ್ಯರು ಆಡುತ್ತಿದ್ದ ಭಾಷೆಗಳು ಇಂಡೋ ಯುರೋಪಿಯನ್ ಗುಂಪಿಗೆ ಸೇರಿದವು. (ಆರ್ಯರು ಹೀಗೆ ವಲಸೆ ಹೋದರೆ ಇಲ್ಲವೆ ಎನ್ನುವ ವಾದ-ವಿವಾದವು ಬೇರೆಯ ವಿಷಯ.) ಪಾರಸೀ ಭಾಷೆಯು ಕೇಳುವುದಕ್ಕೆ ಇಂಪಾಗಿರುವುದಲ್ಲದೆ ಅದರಲ್ಲಿರುವ ಸಾಹಿತ್ಯರಾಶಿಯ ಭವ್ಯತೆಯೂ ಅಪೂರ್ವವಾದುದು. ಸುಮಾರು ೨೫೦೦ ವರ್ಷಗಳಷ್ಟು ಪ್ರಾಚೀನವಾದ ದಾಖಲೆಗಳು ಈ ಸಾಹಿತ್ಯದಲ್ಲಿ ದೊರಕಿವೆ. ತೌಲನಿಕ ಭಾಷಾ ವ್ಯಾಸಂಗಕ್ಕೆ ಇದು ಬಹಳ ಸಹಾಯಕವಾಗಿದೆ. ಭಾರತದ ಯಾವ ಭಾಷೆಯ ವ್ಯಾಸಂಗವೂ ಪಾರಸೀ ಭಾಷೆಯ ಪರಿಚಯವಿಲ್ಲದೆ ಸಂಪೂರ್ಣವಾಗುವುದಿಲ್ಲ.

ಎಲ್ಲ ಪ್ರಾಚೀನ ಭಾಷೆಗಳ ವ್ಯಾಸಂಗದಲ್ಲಿಯೂ ಕಾಣಬರುವಂತೆ ಪಾರಸಿ ಭಾಷೆಯನ್ನೂ ಪ್ರಾಚೀನ, ಮಧ್ಯಯುಗೀನ, ಆಧುನಿಕ ಎಂದು ಮೂರು ಮಜಲುಗಳಲ್ಲಿ ಗುರುತಿಸುತ್ತಾರೆ. ಕ್ರಿ.ಪೂ. ಮೂರನೇ ಶತಮಾನದಲ್ಲಿಯೇ ರಚಿತವಾದ ಅನೇಕ ಶಾಸನಗಳು ಸಿಕ್ಕಿವೆ. ಮಧ್ಯಯುಗದಲ್ಲಿ ಪಾರಸಿ ಭಾಷೆಯಲ್ಲಿ ಜೊರಾಸ್ಟ್ರಿಯನ್ ಮತದ ಹೆಗ್ಗಳಿಕೆಯ ಬಗ್ಗೆ ಅನೇಕ ಗ್ರಂಥಗಳಿವೆ.

ಅತಿ ಪ್ರಾಚೀನ ಕಾಲದಲ್ಲಿಯೇ ಅಂದರೆ ಕ್ರಿ.ಪೂ. ೬೦೦ರ ಪ್ರಾರಂಭದಲ್ಲಿ ಪಾರಸಿ ಭಾಷೆಯು ಆಕೆಮೀನಿಯನ್ ಸಾಮ್ರಾಜ್ಯದ ಆಡಳಿತ ಭಾಷೆಯಾಗಿತ್ತು. **ಜೆಂಡ್ ಅವೆಸ್ತ** ಎಂಬುದು ಪಾರಸಿಗಳ ಪವಿತ್ರ ಗ್ರಂಥ. ಅದರ ಭಾಷೆಯು ಪ್ರಾಚೀನವಾದುದು. ಕ್ರಿ.ಪೂ. ಮೂರನೆಯ ಶತಮಾನದಿಂದ ಕ್ರಿ.ಶ. ಏಳನೇ ಶತಮಾನದವರೆಗೆ ಸುಮಾರು ೯೦೦ ವರ್ಷಗಳ ಕಾಲದ ಪ್ರಾಚೀನ ಚರಿತ್ರೆಯನ್ನು ಹೊಂದಿದೆ. ಇರಾನಿನಲ್ಲಿ ಮಹಮ್ಮದೀಯರು ತಮ್ಮ ಪ್ರಾಬಲ್ಯವನ್ನು ಪಡೆದ ಕಾಲದಿಂದ ಆಧುನಿಕ ಪಾರಸಿ ಭಾಷೆಯು ಬೆಳೆದುಬಂದಿದೆ. ಕ್ರಿ.ಶ. ೯ನೇ ಶತಮಾನದ ಹೊತ್ತಿಗೆ ಈಶಾನ್ಯ ಇರಾನಿನಲ್ಲಿ ಪಾರಸಿ ಸಾಹಿತ್ಯ ಚೆನ್ನಾಗಿ ಬೆಳಕಿಗೆ ಬಂದಿತು. ಈ ಸಾಹಿತ್ಯವೆಲ್ಲ ಅರಬ್ಬಿ ಲಿಪಿಯಲ್ಲಿದೆ. ಅರಬ್ಬರು ೭ನೇ ಶತಮಾನದಲ್ಲಿ ಇರಾನನ್ನು ಆಕ್ರಮಣ ಮಾಡಿದಾಗ ಅಲ್ಲಿಂದ ಜೊರಾಸ್ಟ್ರಿಯನ್ ಮತವನ್ನು ಹಿಂದೆ ತಳ್ಳಿ ಇಸ್ಲಾಂ ಮತವನ್ನು ಸ್ಥಾಪಿಸಲಾಯಿತು. ಇದೇ ಸಮಯದಲ್ಲಿ ಬೌದ್ಧಮತ, ಕ್ರಿಸ್ತಮತ ಮುಂತಾದ ಎಲ್ಲ ಮತೀಯರನ್ನು ಹಿಂದಿಕ್ಕಲಾಯಿತು. ಹೀಗಾಗಿ ಅರಾಬಿಕ್ ಭಾಷೆಯೇ ಸಂಸ್ಕೃತಿಯ ಮತ್ತು ಕಾನೂನಿನ ಭಾಷೆಯಾಯಿತು. ಆದರೆ ಕ್ರಿ.ಶ. ೯ನೇ ಶತಮಾನದಲ್ಲಿ ಪಾರಸೀಯರಲ್ಲಿ ನವೋದಯ ಉಂಟಾಗಿ ಪಾರಸೀ ಭಾಷೆಯಲ್ಲಿಯೂ ಚಟುವಟಿಕೆ ತಲೆದೋರಿತು. ಆಗಲೇ ಪಾರಸೀ ಭಾಷೆಗೆ ಒಂದು ಹೊಸ ಸತ್ವ ತುಂಬಿಕೊಂಡಿತು. ಅನೇಕ ಸಾಹಿತ್ಯ ಗ್ರಂಥಗಳು ರಚಿತವಾದವು.

ಪ್ರಾರಂಭದ ಪಾರಸಿ ಸಾಹಿತ್ಯವು ಪದ್ಯ ರೂಪದಲ್ಲಿತ್ತು. ಅವು ಸ್ತುತಿ ಮತ್ತು ಸುಖ ದುಃಖಗಳನ್ನು ಕುರಿತ ರಚನೆಗಳಾಗಿದ್ದುವು. ಆ ಸಾಹಿತ್ಯದಲ್ಲಿ ಅರಬ್ಬಿ ಪದಗಳು ಅಷ್ಟಾಗಿ

ಇರಲಿಲ್ಲ. ಆ ಬಳಿಕ ಅರಬ್ಬಿಯ ಗದ್ಯ ಗ್ರಂಥಗಳು ಪಾರಸಿ ಭಾಷೆಗೆ ಅನುವಾದವಾದ ಮೇಲೆ ಆ ಭಾಷೆಯಲ್ಲಿಯೂ ಸಾಹಿತ್ಯದ ಎಲ್ಲ ಪ್ರಕಾರಗಳೂ ರಚಿತವಾಗಲು ಮೊದಲಾಯಿತು. ಅರಬ್ಬಿಯ ಶಬ್ದಗಳು ಹೆಚ್ಚಾದವು. ಅರಬ್ಬಿ ಅಭಿವ್ಯಕ್ತಿಯ ಪ್ರಕಾರಗಳೇ ಪಾರಸಿಗೂ ಮಾದರಿಯಾದುವು.

ಹಿಂದಿದ್ದ ಪಾರಸಿ ರಚನೆಗಳಲ್ಲಿ ಜೊರಾಸ್ತರನ ಸ್ತುತಿಗೀತ ಅಥವಾ ಶೋಕಗೀತಗಳು ಹೆಚ್ಚಾಗಿದ್ದುವು. **ಕಸೀದ** (Qusida) ಎಂಬುದು ಒಂದು ಪಿಥವಾದ ಪ್ರಗಾಥ ರೂಪದ್ದು, **ರೂದಿಕ** (Rudika) ಎಂಬ ಕವಿ ಈ ಬಗೆಯ ರಚನೆಗಳಿಗೆ ಪ್ರಸಿದ್ಧನಾಗಿದ್ದಾನೆ. ಆ ಬಳಿಕ **ಘಜಲ್** (Ghazal) ಎಂಬ ಪದ್ಯರೂಪವು ಪ್ರಸಿದ್ಧಿಗೆ ಬಂತು. ಇದು ಮದಿರಿಯೆ ರುಚಿಯ ಮತ್ತು ಸ್ತ್ರೀಯ ಪ್ರೇಮದ ನಿರೂಪಣೆಗೆ ಹೇಳಿ ಮಾಡಿಸಿದ ರೂಪವಾಗಿತ್ತು. **ಕಸೀದ** ಮತ್ತು **ಘಜಲ್**ಗಳು ಏಕಪ್ರಾಸದವುಗಳು. ಆ ಬಳಿಕ ಬಂದ **ಮಾಸ್ನವಿ** ರೂಪವು ದೀರ್ಘ ಕವನಗಳಿಗೆ ಹೆಚ್ಚು ಸೂಕ್ತವಾದ ರೂಪವಾಗಿತ್ತು. **ರೂಬಾಯಿ**ಯೂ ಹಾಗೆ **ಮಾಸ್ನವಿ**ಯೂ ಪಾರಸಿ ಭಾಷೆಯ ಸ್ವಂತದ ಕೊಡುಗೆಗಳು. ಅರಬ್ಬರಿಗೆ ಇದು ಗೊತ್ತಿರಲಿಲ್ಲ.

ಕ್ರಿ. ಶ. ೯೬೩ರಲ್ಲಿ **ಬಲಾಮಿ** (Balami) ಎಂಬ ವಜೀರನು ಅತ್-ತಬಾರಿ (at-tabari) ಎಂಬ ಚಾರಿತ್ರಿಕ ಘಟನೆಗಳನ್ನು ಕುರಿತ ಗ್ರಂಥದ ಅನುವಾದವನ್ನು ಪ್ರಕಟಿಸಿದನು. ಇದೇ ಸಮಯದಲ್ಲಿ ಆತನು ರಚಿಸಿದ ಕುರಾನಿನ ಟೀಕೆಯನ್ನೂ ಪ್ರಕಟಿಸಿದನು. ಪಾರಸಿ ಭಾಷೆಯು ಮತೀಯವಾದ ರಚನೆಗಳಿಗೆ ಸಮರ್ಥವಾಗಿದೆ ಎಂಬುದು ಇದರಿಂದ ಸ್ಥಾಪಿತವಾಯಿತು. ಅಬೂ ಮನ್ಸೂರನು ರಚಿಸಿದ ಔಷಧಗಳ ವೈದ್ಯಗ್ರಂಥವೂ ಹೊರಬಂದಿತು. ಹೆಚ್ಚು ಕಡಮೆ ಇದೇ ಕಾಲದಲ್ಲಿ **ಅವಿಸೆನ್ನ** (Avicenna 980-1037) ಎಂಬ ದಾರ್ಶನಿಕ ವಿಜ್ಞಾನಿಯ ವೈಜ್ಞಾನಿಕ ಪ್ರಬಂಧಗಳು ಪ್ರಕಟವಾದವು. ಆತನು ದಾರ್ಶನಿಕನೂ, ವೈದ್ಯನೂ, ಜ್ಯೋತಿಶ್ಶಾಸ್ತ್ರಜ್ಞನೂ, ಗಣಿತಶಾಸ್ತ್ರಜ್ಞನೂ, ಭೌತಶಾಸ್ತ್ರಜ್ಞನೂ, ರಸವಿದ್ಯೆಯನ್ನು ಬಲ್ಲವನೂ, ಶಿಲಾಶಾಸ್ತ್ರಜ್ಞನೂ, ಸಂಗೀತ ಶಾಸ್ತ್ರಜ್ಞನೂ ಆಗಿದ್ದನು. ಅವನನ್ನು ವೈದ್ಯರಾಜ (Prince of Physicians) ಎಂದು ಕರೆಯುತ್ತಿದ್ದರು. ವೈದ್ಯಶಾಸ್ತ್ರದ ಮೇಲೆ ಅವನು ಬರೆದಿದ್ದ ಕ್ಯಾನನ್ (Qanun) ಎಂಬ ಗ್ರಂಥವೂ ನವೋದಯ ಕಾಲದ ತನಕ ಆಧಾರ ಗ್ರಂಥವಾಗಿತ್ತು. ಈತನ ಗ್ರಂಥಗಳಿಂದ ಪಾರಸಿ ಭಾಷೆಗೆ ಹಿಂದೆ ಎಂದೂ ಇರದಿದ್ದ ಶಬ್ದ ಸಂಪತ್ತೂ ಅಭಿವ್ಯಕ್ತಿ ಸಾಮರ್ಥ್ಯವೂ ಉಂಟಾದುವು ಎಂದು ವಿದ್ವಾಂಸರು ಏಕಕಂಠದಿಂದ ಹೊಗಳುತ್ತಾರೆ. ಸಾದಿ, ಹಾಫಿಸ್, ಫಿರ್ದೂಸಿ, ನೆಜಾಮಿ ಮುಂತಾದವರು ಪರ್ಷಿಯಾದ ಮಹಾಲೇಖಕರು. ಪಾರಸೀ ಭಾಷೆಯಲ್ಲಿ ಕತೆಗಳು, ಚರಿತ್ರೆ, ನೀತಿ, ವ್ಯವಹಾರ ಮುಂತಾದ ವಸ್ತುಗಳುಳ್ಳ ರಚನೆಗಳಿವೆ. ೨೦ನೆಯ ಶತಮಾನದಲ್ಲಿ ಮಹಮ್ಮದಾಲಿಯ ಸಣ್ಣಕತೆಗಳೂ ಸಂಪ್ರದಾಯವನ್ನು ಮುರಿದು ಆಧುನಿಕತೆಯನ್ನು ತಂದ ನಿಮಾಯಾಶಿಜ್ (೧೮೯೦-೧೯೫೯) ಎಂಬ ಲೇಖಕನ ಬರಹಗಳೂ ಪಾರಸಿ ಸಾಹಿತ್ಯಕ್ಕೆ ವಿಸ್ತಾರವನ್ನೂ, ವೈಭವವನ್ನೂ ತಂದುಕೊಟ್ಟಿವೆ.

ಭಾಷೆಗಳ ವ್ಯಾಸಂಗ

ಭಾಷೆಗಳ ಚರಿತ್ರೆ ಎಂಬ ವಿದ್ವತ್ಕ್ಷೇತ್ರದ ವ್ಯಾಸಂಗವು ಪ್ರಾರಂಭವಾದುದು ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ. ಅದಕ್ಕೆ ಮುಂಚೆ ಭಾಷೆಯು ಒಂದು ಸ್ಥಿರವಾದ ಸ್ವರೂಪದ್ದೆಂದು ನಂಬಲಾಗಿತ್ತು. ವ್ಯಾಕರಣಕ್ಕೆ ಹೆಚ್ಚು ಪ್ರಾಧಾನ್ಯವಿತ್ತು. ಜನತೆಯಲ್ಲಿದ್ದ ಆಡುನುಡಿಯ ಪ್ರಯೋಗ ಭಾಷೆಯ ಕಡೆಗೆ ಗಮನವನ್ನೇ ನೀಡುತ್ತಿರಲಿಲ್ಲ. ಅದು ಗ್ರಾಮ್ಯವೆಂದೂ ಭ್ರಷ್ಟವಾದುದೆಂದೂ ತಿಳಿಯಲಾಗಿತ್ತು. ಪರಸ್ಪರ ಸಂಬಂಧವುಳ್ಳ ಒಂದೇ ಗುಂಪಿನ ಬೇರೆ ಬೇರೆ ಭಾಷೆಗಳ ಅಧ್ಯಯನದಿಂದ ತೌಲನಿಕ ಭಾಷಾಶಾಸ್ತ್ರವು ಬೆಳೆಯಿತು. ಭಾಷೆಗಳು ಬೆಳೆದು ಬೇರೆ ಬೇರೆ ರೂಪಗಳನ್ನು ಪಡೆದಿರುವುದರ ಪರಿಚಯ ಸ್ಪಷ್ಟವಾಯಿತು. ಈಗಂತೂ ಭಾಷೆಗೆ ಸ್ಥಿರರೂಪವೆಂಬುದು ಇಲ್ಲವೆಂದೂ ಅದು ಕಾಲಕ್ರಮದಲ್ಲಿ ವ್ಯತ್ಯಾಸ ಹೊಂದಿ ಬದಲಾವಣೆಯಾಗುತ್ತ, ಬೆಳೆಯುತ್ತ ಹೋಗುತ್ತದೆಂದೂ ಸಾರ್ವತ್ರಿಕವಾಗಿ ತಿಳಿವಳಿಕೆಯುಂಟಾಗಿದೆ. ವ್ಯಾಕರಣದ ಸೂತ್ರಗಳನ್ನು ವಿವರಿಸುವುದಕ್ಕೆ ಒಂದು ಶಬ್ದವು ಬೇರೆ ಬೇರೆ ಕಾಲದಲ್ಲಿ ಹೊಂದುತ್ತಾ ಬಂದ ಸ್ವರೂಪಗಳನ್ನು ಅಭ್ಯಾಸ ಮಾಡಬೇಕೆಂಬ ತಿಳಿವಳಿಕೆ ಸಾಮಾನ್ಯವಾಗಿದೆ. ಆದುದರಿಂದ ಒಂದು ಭಾಷೆಯ ಚರಿತ್ರೆ ಎಂದರೆ ಆ ಭಾಷೆಯಲ್ಲಿ ಕಾಲಕ್ರಮದಲ್ಲಿ ಉಂಟಾಗುವ ಬೆಳವಣಿಗೆಯ ಆವಿಷ್ಕರಣದ ಅಭ್ಯಾಸ ಎಂದು ದೃಢಪಟ್ಟಿದೆ.

ಇಂಥ ಅಭ್ಯಾಸಕ್ಕೆ ಒಂದು ಭಾಷೆಯಲ್ಲಿರುವ, ಕಾಲಕ್ರಮದಲ್ಲಿ ರಚಿತವಾದ ದಾಖಲೆಗಳು ಅಗತ್ಯವಾದುವು. ದಾಖಲೆಗಳಿಲ್ಲದೆ ಇದ್ದರೆ ಹೇಳಿಕೆಗಳೆಲ್ಲ ಊಹಾತ್ಮಕ ಕಟ್ಟುಕತೆಗಳಾಗುತ್ತವೆ.

ಪಾರಸಿ ಭಾಷೆಯಲ್ಲಿ ಆ ಭಾಷೆಯ ಅತಿಪ್ರಾಚೀನ ಸ್ವರೂಪವೂ, ಇಲ್ಲಿಯವರೆಗೆ ಅದು ಬೆಳೆದು ಬಂದ ಎಲ್ಲ ಮಜಲುಗಳ ಸ್ವರೂಪದ ದಾಖಲೆಗಳೂ ದೊರೆಯುತ್ತವೆ. ಇಂಥ ಭಾಷೆಗಳ ಚಾರಿತ್ರಿಕ ಅಭ್ಯಾಸದಿಂದ ಭಾಷೆಯ ಚರಿತ್ರೆ ಎನ್ನುವುದು ಒಂದು ವೈಜ್ಞಾನಿಕ ವ್ಯಾಸಂಗವೆಂಬುದು ಸ್ಪಷ್ಟವಾಗುತ್ತದೆ. ಇದರಿಂದ ಭಾಷೆಯ ಬೆಳವಣಿಗೆಯಲ್ಲಿ ಆಗಿರುವ ಎಲ್ಲ ಭಾಷೆಗಳ ಚರಿತ್ರೆಯನ್ನು ರಚಿಸುವುದು ಸಾಧ್ಯ.

ಒಂದೇ ಭಾಷೆಯನ್ನು ಮಾತನಾಡುವವರು ಕೂಡ ಕಾಲಕ್ರಮದಲ್ಲಿ ಬೇರೆ ಬೇರೆ ಪಂಗಡಗಳಾಗಿ ಒಡೆದು ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸಬಹುದು. ಆಗ ಅವರೆಲ್ಲರ ಮಾತೃಭಾಷೆಯಾದ ಮೂಲಭಾಷೆ ಬೇರೆಬೇರೆ ರೀತಿಯಲ್ಲಿ ಬೆಳವಣಿಗೆಯನ್ನು ಪಡೆಯಬಹುದು. ಇದರಿಂದ ಅವರು ಉಚ್ಚರಿಸುವ ಸ್ವರಗಳೂ ಶಬ್ದಸ್ವರೂಪಗಳೂ ಬೇರೆಯಾಗುತ್ತ ಹೋಗುತ್ತವೆ. ಹೀಗೆ ಬೇರೆಡೆಗೆ ವಲಸೆ ಹೋದ ಜನಸಮೂಹದ ಸಾಮಾಜಿಕ, ಬೌದ್ಧಿಕ ಮಟ್ಟವು ಹೆಚ್ಚಿದ ಹಾಗೆಲ್ಲ ಇತರ ಭಾಷೆಗಳಲ್ಲಿ ಇದೇ ಮಟ್ಟದಲ್ಲಿ ವ್ಯವಹಾರ ಮಾಡುವವರ ಜತೆ ಸಂಪರ್ಕ ಬೆಳೆಸಬಹುದು. ಆದುದುಂದ ಅವರು ಪರಸ್ಪರವಾಗಿ ಹೊಸ ಶಬ್ದಗಳನ್ನು ಎರವಲು ಪಡೆಯುತ್ತಾರೆ. ಅಥವಾ ಇರುವ ಶಬ್ದಗಳಿಗೆ ಹೊಸ ಅರ್ಥವನ್ನು ಸೇರಿಸುತ್ತಾರೆ. ಆದರೂ ಅವರೆಲ್ಲರಿಗೆ ಮೂಲವಾಗಿರುವ ಭಾಷೆಯ ಧ್ವನಿವ್ಯವಸ್ಥೆ ದೃಢವಾಗಿ ನಿಂತಿರುವುದನ್ನು ನಾವು ಕಾಣಬಹುದು.

ಇಂಡೋ ಯುರೋಪಿಯನ್ ಭಾಷೆಗಳಲ್ಲಿ ಹೀಗೆ ಆಗಿರುವ ವ್ಯತ್ಯಾಸವನ್ನು ಮೂಲಸ್ವರೂಪದ ದೃಢಸಂಬಂಧವನ್ನೂ ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು.

ಭಾಷೆ	ಶಬ್ದ	ಅರ್ಥ
ಸಂಸ್ಕೃತ	ಅಸ್ತಿ	ಇದೆ
ಹಳೆಯ ಗ್ರೀಕ್	ಎಸ್ತಿ (esti)	ಇದೆ
ಅಥೂನಿಯನ್	ಎಸ್ತಿ (esti)	ಇದೆ
ಹಳೆಯ ರಷ್ಯನ್	ಜೆಸ್ತಿ (jesti)	ಇದೆ
ಲ್ಯಾಟಿನ್	ಎಸ್ಟ್ (est)	ಇದೆ
ಜರ್ಮಾನಿಕ್	ಇಸ್ಟ್ (ist)	ಇದೆ
ಫ್ರೆಂಚ್	ಎಸ್ಟ್ (est)	ಇದೆ
ಇಂಗ್ಲಿಷ್	ಈಸ್ (is)	ಇದೆ
ಪಾರಸಿ	ಅಸ್ತ್ (ast)	ಇದೆ

ಹೀಗೆ ಇಂಡೋ ಯುರೋಪಿಯನ್ ಭಾಷೆ ಜಿಬ್ರಾಲ್ಟರ್ ಬಂಡೆಯಿಂದ ಐಸ್‌ಲ್ಯಾಂಡ್ ಸುತ್ತಿ, ಮಂಚೂರಿಯವನ್ನು ಬಳಸಿ, ಬಂಗಾಳವನ್ನು ಮುಟ್ಟಿ ಅತ್ತ ಅಮೆರಿಕದ ಎಲ್ಲ ಪ್ರದೇಶಗಳಲ್ಲಿ ಹರಡಿ ಬಿಟ್ಟಿದೆ. ಇದೆಲ್ಲ ವಲಸೆ ಹೋದ ಜನಸಮೂಹದ ವಂಶಪರಂಪರೆಯ ಕೆಲಸ. ಈ ಎಲ್ಲ ಭಾಷೆಗಳ ಜನಕ ಭಾಷೆಯಾದ ಇಂಡೋ ಯುರೋಪಿಯನ್ ನಮಗೆ ಗೊತ್ತಿದ್ದರೆ ಈ ಎಲ್ಲ ಭಾಷೆಗಳು ಬೆಳೆದಿರುವ ಚರಿತ್ರೆಯನ್ನು ಸುಲಭವಾಗಿ ಪುನಃ ರಚಿಸಬಹುದು. ಆದರೆ ಆ ಮೂಲ ಭಾಷೆ ನಮ್ಮಿಂದ ಸಂಪೂರ್ಣವಾಗಿ ಮರೆಯಾಗಿಹೋಗಿದೆ. ಈಗ ನಮಗೆ ಅದು ಇದ್ದಿರಬಹುದಾದ ಒಂದು ಭಾಷೆ ಮಾತ್ರ ಆಗಿಬಿಟ್ಟಿದೆ.

ಭಾರತದಲ್ಲಿ ಈಗ ಇರುವ ಇಂಡೋ ಯುರೋಪಿಯನ್ ಭಾಷೆಗಳು ಇವು : ಹಿಂದಿ, ಉರ್ದು, ಸಿಂಧಿ, ಗುಜರಾತಿ, ರಾಜಸ್ಥಾನಿ, ಮರಾಠಿ, ಬಿಹಾರಿ, ಒರಿಯಾ, ಬಂಗಾಲಿ, ಅಸ್ಸಾಮಿ, ಪಂಜಾಬಿ, ಪಹಾರಿ, ನೇಪಾಲಿ, ಸಿಂಹಳಿ. ಆದರೆ ದಕ್ಷಿಣ ಭಾರತದ ತಮಿಳು, ಕನ್ನಡ, ತೆಲುಗು, ಮಲಯಾಳಂ, ತುಳು ಇವು ಬೇರೆಯಾದ ದ್ರಾವಿಡ ವರ್ಗಕ್ಕೆ ಸೇರಿದುವು.

ಉರ್ದು ಭಾಷೆ ಮತ್ತು ಸಾಹಿತ್ಯ

ಭಾರತದ ಗಂಗಾ ಯುಮನಾ ನದಿಗಳ ನಡುವಣ ಪ್ರದೇಶದಲ್ಲಿ ಉರ್ದು ಭಾಷೆಯು ಉಗಮವಾಯಿತು. ಇದು ಇಂಡೋ ಆರ್ಯನ್ ಭಾಷೆಗಳ ಗುಂಪಿಗೆ ಸೇರಿದ ಭಾಷೆ. ಭಾರತದ ಉತ್ತರಭಾಗದಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿದ್ದ ಹಿಂದೂಸ್ತಾನಿಯಿಂದ ಹಿಂದಿ ಮತ್ತು ಉರ್ದು

ಎರಡೂ ಉತ್ಪತ್ತಿಯಾದುವು. ಹಿಂದಿಗೆ ಸಂಸ್ಕೃತದ ಪ್ರಭಾವ ಹೆಚ್ಚಾಯಿತು. ಉರ್ದುವಿಗೆ ಪಾರಸಿ ಮತ್ತು ಅರಬ್ಬಿಕ್ ಭಾಷೆಗಳ ಪ್ರಭಾವ ಜಾಸ್ತಿಯಾಯಿತು. ಇದರ ಪರಿಣಾಮವಾಗಿ ಈಗ ಈ ಎರಡು ಭಾಷೆಗಳೂ ಪರಸ್ಪರ ಅರ್ಥವಾಗದಷ್ಟು ಬೇರೆಯಾಗಿವೆ. ಆದರೂ ಈಗಲೂ ಈ ಎರಡು ಭಾಷೆಗಳ ವ್ಯಾಕರಣಗಳಲ್ಲಿ ಸಮಾನಾಂಶಗಳು ಬೇಕಾದಷ್ಟಿವೆ. ಹಿಂದಿಗೆ ದೇವನಾಗರಿ ಲಿಪಿಯೂ ಉರ್ದುವಿಗೆ ಅರಬ್ಬಿ ಲಿಪಿಯೂ ಹೊಂದಿಕೊಂಡಿವೆ.

ಉರ್ದು ಪಾಕೀಸ್ತಾನದ ಆಡಳಿತದ ಭಾಷೆ. ಭಾರತದಲ್ಲಿರುವ ಮಹಮ್ಮದೀಯರೂ ಈ ಭಾಷೆಯನ್ನು ಮಾತೃಭಾಷೆಯಾಗಿ ಉಪಯೋಗಿಸುತ್ತಾರೆ. ಹಲವು ಹಿಂದೂ ಪಂಗಡಗಳು ಸಂದರ್ಭದಿಂದಾಗಿ ಉರ್ದು ಭಾಷೆಯನ್ನು ಮನೆಮಾತಾಗಿ ಬಳಸುತ್ತಾರೆ. ಪ್ರಪಂಚದಲ್ಲಿ ಒಟ್ಟು ಸುಮಾರು ೫೦ ಕೋಟಿ ಜನರು ಈ ಭಾಷೆಯಲ್ಲಿ ಮಾತನಾಡುತ್ತಾರೆ.

ಪಾಕೀಸ್ತಾನ ಮತ್ತು ಉತ್ತರ ಭಾರತದಲ್ಲಿರುವ ಮಹಮ್ಮದೀಯರು ಈ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ. ಆದರೆ ಬಹು ಪ್ರಸಿದ್ಧರಾದ ಕೆಲವರು ಹಿಂದೂ ಲೇಖಕರೂ ಇದ್ದಾರೆ. ಕ್ರಿ.ಶ. ೧೪ನೆಯ ಶತಮಾನದಿಂದಲೇ ಈ ಭಾಷೆಯಲ್ಲಿ ಪದ್ಯ ಸಾಹಿತ್ಯದ ರಚನೆ ಪ್ರಾರಂಭವಾಯಿತು. ೧೯ನೇ ಶತಮಾನದ ತನಕ ಗದ್ಯರಚನೆ ಹೆಚ್ಚಾಗಿರಲಿಲ್ಲ. ೨೦ನೆಯ ಶತಮಾನದಲ್ಲಿ ಬೆಳೆದ ದೇಶಭಕ್ತಿಯ ಪ್ರಾಧಾನ್ಯದಿಂದ ಉತ್ತೇಜನಗೊಂಡ ಲೇಖಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾಗಿ ಅತ್ಯುತ್ತಮ ಕೃತಿಗಳನ್ನು ರಚಿಸಿದ್ದಾರೆ. ಭಾರತ ಪಾಕೀಸ್ತಾನಗಳು ಬೇರೆಯಾದ ಮೇಲೆ ಆಯಾ ಭಾಗದ ಜನರು ಅವರವರ ದೇಶವನ್ನು ಕುರಿತು, ಅಲ್ಲಿನ ಜೀವನ ಮಾರ್ಗವನ್ನು ಕುರಿತು ವ್ಯಾಪಕವಾಗಿ ಸಾಹಿತ್ಯದ ರಚನೆಯನ್ನು ಮಾಡಿದ್ದಾರೆ. ಈಚೆಗೆ ಸಿಂಧ್ ಪ್ರಾಂತದಲ್ಲಿ ಉರ್ದು ಸಾಹಿತ್ಯ ಬಹುವಾಗಿ ರಚಿತವಾಗುತ್ತಿದೆ.

ಈ ಭಾಷೆಯಿಂದಲೂ ಕನ್ನಡಕ್ಕೆ ಅನೇಕ ಎರವಲು ಪದಗಳು ಬಂದಿವೆ. ಅವುಗಳ ಮೂಲವೂ ಪಾರಸಿ ಅಥವಾ ಅರಬ್ಬಿ ಭಾಷೆಗಳೇ ಆಗಿರಬಹುದು.

ಹೀಬ್ರೂ ಭಾಷೆಯ ಪುನರುಜ್ಜೀವನದ ಕಥೆ

ಪ್ರಪಂಚದಲ್ಲೆಲ್ಲ ಭಾಷೆಗಳ ಬೆಳವಣಿಗೆಗೂ ಆಧುನಿಕತೆಗೂ ಎರವಲು ಪದಗಳು ಎಷ್ಟು ಪ್ರಧಾನವಾಗಿವೆ ಎಂಬುದನ್ನು ವಿವರಿಸುವಾಗ ಭಾಷಾ ಕ್ಷೇತ್ರದಲ್ಲಿ ನಡೆದ ಒಂದು ಪವಾಡ ನೆನಪಿಗೆ ಬರುತ್ತದೆ. ನಮ್ಮ ದೇಶದಲ್ಲಿ ನಾವು ಸಂಸ್ಕೃತವನ್ನು ಮೃತ ಭಾಷೆ ಎಂದು ಕರೆದು ಹೀನಯಿಸುತ್ತೇವೆ. ಆದರೆ ನೂತನ ಪದಗಳ ಸೃಷ್ಟಿಗೆ ಸಂಸ್ಕೃತ ಭಾಷೆಯ ಶಬ್ದ ಸಂಪತ್ತೂ ವ್ಯಾಕರಣವೂ ಎಷ್ಟು ಸಹಾಯ ಮಾಡುತ್ತವೆ ಎಂಬುದನ್ನು ಮರೆಯುತ್ತೇವೆ. ಇಸ್ರೇಲ್ ದೇಶದ ಹೀಬ್ರೂ ಭಾಷೆಯ ಕಥೆಯೂ ಇದೇ ಆಗಿತ್ತು. ಸುಮಾರು ೧೭೦೦ ವರ್ಷಗಳ ಕಾಲ ಅದನ್ನು ಆಡುಮಾತಾಗಿ ಯಾರೂ ಉಪಯೋಗಿಸುತ್ತಲೇ ಇರಲಿಲ್ಲ. ಪ್ರಾಚೀನ ಕಾಲದಲ್ಲಿ ಪ್ಯಾಲೆಸ್ಟೈನಿನಲ್ಲಿ ಅದು ಜನರ ಆಡುಭಾಷೆಯಾಗಿತ್ತು. ಅರಾಮೈಕ್ (Aramaic) ಆಡುಭಾಷೆಯ ಆಕ್ರಮಣದಿಂದ ಅದು ಹೆಸರಿಲ್ಲದಂತಾಯಿತು. ಪ್ರಾಚೀನ ಹೀಬ್ರೂ ಭಾಷೆಯಲ್ಲಿಯೇ ಬೈಬಲ್ ಗ್ರಂಥದ ಹಳೆಯ

ಒಡಂಬಡಿಕೆಯ (Old Testament) ಬಹುಭಾಗ ರಚಿತವಾಗಿದೆ. ಹೀಬ್ರೂ ಭಾಷೆ ೯ನೆಯ ಶತಮಾನದಿಂದ ಅವನತಿ ಹೊಂದಿತು. ಆಧುನಿಕ ಹೀಬ್ರೂ ಭಾಷೆಗೆ ರಬ್ಬನಿಕ್ ಹೀಬ್ರೂ (Rabbinic Hebrew) ಎಂಬ ಆಡುಭಾಷೆಯ ಪ್ರಭಾವ ಹೆಚ್ಚಾಗಿ ಅದರಲ್ಲಿ ಜ್ಯೂ ಜನಾಂಗದ ಪರಂಪರೆ ಉಳಿದುಬಂದಿದೆ.

ಡಾ|| ವಿಲಿಯಂ ಚೋಮ್‌ಸ್ಕಿ (Dr. William Chomsky) ಮತ್ತು ಅವನ ಮಗ ಡಾ|| ನೋಮ್ ಚೋಮ್‌ಸ್ಕಿ (Dr. Noam Chomsky) ಅವರ ಹೀಬ್ರೂ ಭಾಷೆಯ ಅಧ್ಯಯನದಿಂದ ಆ ಭಾಷೆ ಆಧುನಿಕಗೊಳ್ಳಲು ಸಹಾಯವಾಯಿತು. ಡಾ|| ನೋಮ್ ಚೋಮ್‌ಸ್ಕಿಯು ಪ್ರತಿಪಾದಿಸಿದ ಒಂದು ಭಾಷಾಸೂತ್ರ ಹೀಗಿದೆ : "A grammar-or a grammarian-should be able to generate sentences just as the speaker of a language could produce a virtually infinite number of sentences using the finite number of words and grammatical rules known to the speaker." ಈ ಸೂತ್ರವನ್ನು ಅನುಸರಿಸಿ ಇಸ್ರೇಲಿನಲ್ಲಿ ಹೀಬ್ರೂ ಭಾಷೆಯನ್ನು ಪುನರುಜ್ಜೀವನಗೊಳಿಸಿ ಈಗ ಅದನ್ನೇ ಅಲ್ಲಿ ಆಡಳಿತ ಭಾಷೆಯನ್ನಾಗಿ ಮಾಡಲಾಗಿದೆ. ಕೇವಲ ಭಾಷಾಶಾಸ್ತ್ರಜ್ಞರೂ ವಿದ್ವಾಂಸರೂ ಪ್ರಯತ್ನಪಟ್ಟಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಆದರೆ ಇಸ್ರೇಲಿನಲ್ಲಿ ಪ್ರಜೆಗಳೂ ಒಕ್ಕೊರಲಿನಿಂದ ತಮ್ಮ ಹಳೆಯ ಹೀಬ್ರೂ ಭಾಷೆಗೆ ತಾವು ಹಿಂದಿರುಗಬೇಕು, ಅದನ್ನೇ ಉಪಯೋಗಿಸಬೇಕು ಎಂದು ಒತ್ತಾಯಿಸಲು ಮೊದಲು ಮಾಡಿದರು. ಇಸ್ರೇಲಿನ ಪಾರ್ಲಿಮೆಂಟು ಹೀಬ್ರೂ ಭಾಷೆಯ ಅಕಾಡೆಮಿಗೆ ಈ ಕಾರ್ಯವನ್ನು ಸಾಧಿಸುವಂತೆ ಸೂಚನೆ ನೀಡಿತು. ಪ್ರಾರಂಭದಲ್ಲಿ ಕಷ್ಟವೆಂದು ಕಂಡರೂ ಹಟಹಿಡಿದು ಅಕಾಡೆಮಿ ಇವನ್ನು ಸಾಧಿಸಿತು.

ಈ ಮಹಾಪ್ರಯೋಗದ ಅನುಷ್ಠಾನದಲ್ಲಿ ಹೊಸ ಪದಗಳ ಸೃಷ್ಟಿಗೆ ಎಷ್ಟು ಅಗತ್ಯವಿತ್ತೆಂಬುದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು. ಆ ದೇಶದಲ್ಲಿ ಉಪಯೋಗದಲ್ಲಿದ್ದ toaster oven ಎಂಬುದು ನಿರುಪಯೋಗಿಯಾಗಿ microwave oven ಉಪಯೋಗಕ್ಕೆ ಬಂತು. microwave oven ಗೆ **mikrogal** ಎಂಬ ಹೊಸ ಶಬ್ದವೂ ಪ್ರಯೋಗಕ್ಕೆ ಬಂದಿತ್ತು. ಆದ್ದರಿಂದ ಕಣ್ಮರೆಯಾಗುತ್ತಿದ್ದ toaster oven ಗೆ ಆ ದೇಶದ ವಿದ್ವಾಂಸರು **tanuron** ಎಂಬ ಹೊಸ ಪದವನ್ನು ಸೃಷ್ಟಿ ಮಾಡಬೇಕಾಯಿತಂತೆ.

ಕೇವಲ ಅರ್ಧಶತಮಾನದಲ್ಲಿ ಹೀಬ್ರೂ ಭಾಷೆಯನ್ನು ಅತ್ಯಾಧುನಿಕ ಭಾಷೆಯನ್ನಾಗಿ ಮಾಡಿದ ಸಾಧನೆ ಅತ್ಯಪೂರ್ವವಾದುದು. ಈಗ ಹೀಬ್ರೂ ಭಾಷೆಯ ಅಕಾಡೆಮಿಗೆ ಔಷಧಿ ಮತ್ತು ಯಾಂತ್ರಿಕ ಕ್ಷೇತ್ರಗಳಿಗೆ ಬೇಕಾದ ಪದಗಳನ್ನು ಸೃಷ್ಟಿಮಾಡುವ ಹೆಚ್ಚು ಸುಲಭವಾದ ಕಾರ್ಯ ಮಾತ್ರ ಉಳಿದಿದೆ. ಇತ್ತೀಚೆಗೆ ಇಂಥ ಹೊಸ ಪದಗಳು ಅನೇಕ ಸೃಷ್ಟಿಯಾಗಿವೆ. ಜಾಹಿರಾತು ಉದ್ಯಮಕ್ಕೆ (Advertising Industry) ಬೇಕಾದ ಒಂದು ನಿಘಂಟು ಕೂಡ ಪ್ರಕಟವಾಗಿದೆ. ಈಗ ಹೀಬ್ರೂ ಅಕಾಡೆಮಿಯಲ್ಲಿ ೪೫ ಜನ ಭಾಷಾಶಾಸ್ತ್ರಜ್ಞರು ದುಡಿಯುತ್ತಿದ್ದಾರೆ. ಪ್ರೊ. ಮೋಷೆ ಬಾರ್ ಆಷರ್ (Prof. Moshe Bar Asher) ಎಂಬಾತ ಅದರ ಅಧ್ಯಕ್ಷನಾಗಿದ್ದಾನೆ. ಅವರೆಲ್ಲಾ ಸೇರಿ ಹೀಬ್ರೂ ಭಾಷೆಯನ್ನು ಅದ್ಯತನಗೊಳಿಸುತ್ತಾ ಇದ್ದಾರೆ.

ನಿಘಂಟುಗಳು ಮತ್ತು ಎರವಲು ಪದಗಳು

ಈಚೆಗೆ ಪ್ರಕಟವಾದ Oxford Advanced English Dictionary-Ed. Jonathan Crowther -ಎಂಬ ನಿಘಂಟಿನಲ್ಲಿ ಅಗ್ರಹಾರಂ, ಫಿಲ್ಮೀ, Godman, Faltu, Chee Chee, Dishum Dishum ಮುಂತಾದ ಮುಖ್ಯ ಉಲ್ಲೇಖಗಳಿವೆ. ABCD ಎಂಬುದೇ ಒಂದು ಮುಖ್ಯ ಉಲ್ಲೇಖ. ಇದಕ್ಕೆ fundamentals ಎಂದು ಅರ್ಥ.

ಬೇರೆ ಕೆಲವು ಲೇಖನಗಳಲ್ಲಿ ಭಾರತದಿಂದ ಇಂಗ್ಲಿಷಿಗೆ ಹೋದ ಕೆಲವು ಪದಗಳ ವಿವರ ದೊರೆಯುತ್ತದೆ. O.K., allright ಎಂಬ ಪದಗಳಿಗೆ ಕನ್ನಡದಲ್ಲಿ ಸರಿ, ಸಮ್ಮತಿ, ಒಪ್ಪಿಗೆ ಎಂದು ಅರ್ಥವಿದೆ. ಇಂಗ್ಲೆಂಡಿಗೆ ಹಿಂದಿರುಗಿದ ಲಾರ್ಡ್‌ಮೌಂಟ್‌ಬ್ಯಾಟನ್ ಇಂಗ್ಲಿಷ್ ಭಾಷೆಗೆ ಒಂದು ಹೊಸ ಶಬ್ದವನ್ನು ತರಲು ಪ್ರಯತ್ನಪಟ್ಟನಂತೆ. O.K. ಎನ್ನುವುದಕ್ಕೆ ಅವನು ಸೂಚಿಸಿದ ಪದ Teega. ಇದು ಅವನು ಇಂಡಿಯಾದಲ್ಲಿದ್ದಾಗ ಸದಾ ಕಿವಿಗೆ ಬೀಳುತ್ತಿದ್ದ **ಠೀಕ್ ಹೈ** ಎಂಬುದರ ರೂಪಾಂತರ.

ಹೊಸ ಪದಗಳು ಎರವಲುಗಳೇ ಆಗಬೇಕಾಗಿಲ್ಲ. ಅದೇ ಭಾಷೆಯಲ್ಲಿ ಸೃಷ್ಟಿಯಾದ ಹೊಸ ಪದಗಳೂ ಯಾರೋ ನೀಡಿದ ಸಾಲವೇ. ಉದಾಹರಣೆಗೆ Nylon, Teflon, Lycra ಎಂಬ ಪದಗಳು ಅಮೆರಿಕದ Dupont ಎಂಬ ದೈತ್ಯ ರಾಸಾಯನಿಕ ಉದ್ಯಮವು ನೀಡಿದ ಕೊಡುಗೆ.

ಒಂದು ಭಾಷೆಯ ಅತ್ಯಾಧುನಿಕವಾದ ನಿಘಂಟನ್ನು ಪ್ರಕಟಮಾಡಬೇಕಾದಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಎಲ್ಲ ಭಾಷೆಗಳೂ ಈಗಂತು ಬೆಳೆಯುತ್ತಿವೆ. ೨೧ನೇ ಶತಮಾನದ ಬದುಕಿಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿವೆ. ಚೆನ್ನಾಗಿ ಸಂಪಾದನೆಗೊಂಡ ಒಂದು ನಿಘಂಟು ಪುನರ್ಮುದ್ರಣವಾಗಬೇಕಾದರೆ ೨೦ ವರ್ಷಗಳಾದರೂ ಬೇಕು. ಅದಕ್ಕೆ ಬೇಕಾದ ಆರ್ಥಿಕ ಬಂಡವಾಳವೂ ವಿದ್ವತ್ತಿನ ಬಂಡವಾಳವೂ ಅಷ್ಟು ಹೆಚ್ಚಾಗಿರುತ್ತವೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅನೇಕ ಬದಲಾವಣೆಗಳಾಗಿರುತ್ತವೆ. ವೈಜ್ಞಾನಿಕವಾಗಿ, ಔದ್ಯಮಿಕವಾಗಿ ಸಂಶೋಧನೆಗಳು ಪ್ರಕಟವಾಗಿ ಅನೇಕ ಹೊಸ ಪದಗಳು ಸೃಷ್ಟಿಯಾಗಿರುತ್ತವೆ. ಅನೇಕ ಹಳೆಯ ಪದಗಳಿಗೆ ಹೊಸ ಅರ್ಥಗಳು ಹುಟ್ಟಿಕೊಂಡಿರುತ್ತವೆ. ಅನೇಕ ಭಾಷೆಗಳ ಪರಸ್ಪರ ಸಂಪರ್ಕ ಬೆಳೆದು ಎಷ್ಟೋ ಎರವಲು ಪದಗಳ ವಿನಿಮಯವಾಗಿರುತ್ತವೆ. ಭಾಷೆಯ ಬಗ್ಗೆ, ಭಾಷೆಯ ಪ್ರಯೋಗದ ಬಗ್ಗೆ ವಿದ್ವಾಂಸರಲ್ಲಿ ಬೇಕಾದಷ್ಟು ಹೊಸ ಆಲೋಚನೆಗಳು ಮೂಡಿರುತ್ತವೆ. ಕಲೆಗಳಲ್ಲಿ ಹೊಸ ಹೊಸ ಪ್ರಯೋಗಗಳು ನಡೆದು ಹೊಸ ರಚನೆಯ ಆಂದೋಲನವೇ ನಡೆದಿರಬಹುದು. ಮಾನವನು ತನ್ನ ಬಿಡುವಿನ ಉಪಯೋಗ ಮಾಡುವುದರಲ್ಲಿ ಬೇರೆ ಬೇರೆ ಮಾರ್ಗಗಳನ್ನು ಕಂಡುಕೊಂಡಿರುತ್ತಾನೆ. ಪರಿಸರಪ್ರಜ್ಞೆ ಬೆಳೆದು ಜನಾಂಗ ಜನಾಂಗಗಳು ಪರಸ್ಪರ ಅರ್ಥಮಾಡಿಕೊಂಡು ಪರಸ್ಪರ ಅಭಿವೃದ್ಧಿಗೆ ದಾರಿಮಾಡಿಕೊಳ್ಳುವ ಸಾಧ್ಯತೆಗಳಿವೆ. ಕೆಲವು ಭಾಷೆಗಳು ವ್ಯಾಪಕವಾಗಿ ಪ್ರಸಾರಗೊಂಡು ಉಚ್ಚಾರಣೆಯಲ್ಲಿ ವೈವಿಧ್ಯವೂ ಕಾಣಿಸಿಕೊಳ್ಳಬಹುದು. ಉಡುಪಿನಲ್ಲಿ, ಆಹಾರವಿಹಾರಗಳಲ್ಲಿ ಅಸಾಧ್ಯವಾದ ಬದಲಾವಣೆಗಳು ಕಂಡುಬರುತ್ತವೆ.

ಹೊಸ ಔಷಧಿಗಳು ಬಂದು ಹಳೆಯ ಔಷಧಿಗಳ ಅಪಾಯ ಪ್ರಕಟವಾಗುತ್ತದೆ. ಹಿಂದೆ ಅಶಿಷ್ಟವಾಗಿದ್ದ ಪದ ಶಿಷ್ಟವಾಗಿ ಬಿಡುತ್ತದೆ. ವ್ಯಂಗ್ಯಗಳಲ್ಲಿ ಹೊಸ ಮಾದರಿಗಳು ಹುಟ್ಟಿಕೊಳ್ಳುತ್ತವೆ. ಸಿನಿಮಾ ಪ್ರಪಂಚದ ಮತ್ತು ಟಿ.ವಿ. ಪ್ರಪಂಚ ಪ್ರಭಾವವಂತೂ ಮಿತಿಮೀರಿರುತ್ತದೆ.

ಈ ಎಲ್ಲ ಬೆಳವಣಿಗೆಗಳ ಮೂಲಕ ಭಾಷೆಯಲ್ಲಿ ನಾವು ಬೇಗ ಗ್ರಹಿಸಲಾರದಷ್ಟು ವ್ಯತ್ಯಾಸಗಳಾಗಿರುತ್ತವೆ.

ಅಮೆರಿಕದಲ್ಲಿ ೧೯೭೧ರಲ್ಲಿ ಮೊದಲ ಮುದ್ರಣವನ್ನು ಪ್ರಕಟಿಸಿದ **Random House Dictionary** ಮತ್ತೆ ೧೯೯೩ರಲ್ಲಿ ಎರಡನೆಯ ಮುದ್ರಣವನ್ನು ಕಂಡಿತು. ಆ ವೇಳೆಗೆ ೫೦,೦೦೦ ಹೊಸ ಮುಖ್ಯೋಲ್ಲೇಖ (Head words) ಗಳನ್ನು ಸೇರಿಸಬೇಕಾಯಿತಂತೆ, ೭೫,೦೦೦ ಪದಗಳ ಅರ್ಥವಿವರಣೆಯಲ್ಲಿ ಬದಲಾವಣೆಗಳನ್ನು ಮಾಡಬೇಕಾಯಿತಂತೆ. ಆ ಎರಡನೇ ಮುದ್ರಣದಲ್ಲಿ ೧,೯೬,೪೧೦ ಮುಖ್ಯ ಉಲ್ಲೇಖಗಳಿವೆಯಂತೆ. Stuart Berg Flexner ಎಂಬ ವಿದ್ವಾಂಸನ ಸಹಾಯಕ್ಕೆ ೧೧೬ ಜನ ಭಾಷಾಶಾಸ್ತ್ರಜ್ಞರು ನಿಂತು ೧೧ ಜನ ಪ್ರೌಢ ನಿಘಂಟುಕಾರರ ಸಂಪಾದನೆಯ ಸಹಾಯದಿಂದ ಈ ಮುದ್ರಣ ಪ್ರಕಟವಾಗಿದೆ. ಈ ನಿಘಂಟಿನಲ್ಲಿ ಎಷ್ಟು ಎರವಲುಗಳಿವೆ ಎಂಬುದನ್ನು ಲೆಕ್ಕ ಮಾಡುವುದರಿಂದ ಇಂಗ್ಲಿಷ್ ಭಾಷೆಗೆ ಬರುವ ಎರವಲುಗಳ ಪ್ರಮಾಣವನ್ನು ಕಂಡುಹಿಡಿಯಬಹುದು. ೧೯೮೨ರಲ್ಲಿ ಪ್ರಕಟವಾದ **The Morrow Book of New Words** ಎಂಬ ಗ್ರಂಥದಲ್ಲಿ ಈ ಪ್ರಕಟಣೆ ಇತ್ತು: ೮,೫೦೦ Terms not yet in Standard Dictionaries. ಇದರಿಂದ ಹೊಸ ನಿಘಂಟುಗಳ ಪ್ರಕಟಣೆಯು ಎಷ್ಟು ಕಷ್ಟಕರವಾದುದು ಎಂಬುದು ಅರಿವಾಗುತ್ತದೆ.

೧೫. ಶಬ್ದ ಅರ್ಥಗಳ ಬೆನ್ನು ಹತ್ತಿ - ಭಾಗ ೧

ಶಬ್ದವದು ನುಡಿದೊಡನೆ	*A word is dead*
ಅವಸಾನ ಹೊಂದಿತೆನ್ನುವರು	*When it is said*
ನುಡಿದಂದೆ ಶಬ್ದವದು	*Some say*
ಬದುಕತೊಡಗುವುದೆಂಬೆ ನಾನು	*I say, it just*
	Begins to live
	That day

— Emily Dickinson

ಭಾಷಾಶಾಸ್ತ್ರದಲ್ಲಿ ಇಂಗ್ಲಿಷ್ ಭಾಷೆಯಲ್ಲಿರುವ ಮೂರು ಶಬ್ದಗಳಿಗೆ ಬಹಳ ಪ್ರಾಮುಖ್ಯ ಬಂದಿದೆ. ಆ ಮೂರು ಶಬ್ದಗಳು Fist, Finger, Five. ಡಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಈ ಶಬ್ದಗಳಿಗೆ ಜ್ಞಾತಿಶಬ್ದಗಳಿವೆ. ಡಚ್ ಭಾಷೆಯಲ್ಲಿ Vuist, Vinger, Vigf; ಜರ್ಮನ್ ಭಾಷೆಯಲ್ಲಿ Faust, Finger, Funf. ಪ್ರಾಚೀನ ರಷ್ಯನ್ ಭಾಷೆಯಲ್ಲಿ ಈ ಶಬ್ದಗಳ ಸಂಬಂಧೀಶಬ್ದಗಳು ಕಾಣಬರುತ್ತಿವೆಯಂತೆ. ಪ್ರಪಂಚದ ಅನೇಕ ಭಾಷೆಗಳಲ್ಲಿ ಈ ಶಬ್ದಗಳ ಜ್ಞಾತಿ ಶಬ್ದ ರೂಪಗಳು ಕಂಡುಬರುವುದರಿಂದ ಪ್ರಪಂಚದ ಎಲ್ಲ ಭಾಷೆಗಳಿಗೂ ಮೂಲವಾಗಿದ್ದ ಒಂದು ಭಾಷೆ ಇದ್ದಿರಬೇಕೆಂದು ಕೆಲವರು ಭಾಷಾಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇವುಗಳಲ್ಲಿ Fist ಮೊದಲು ಪ್ರಯೋಗವಾಯಿತೋ Five ಮೊದಲು ಪ್ರಯೋಗವಾಯಿತೋ ಎಂಬುದು ನಿರ್ಧಾರವಾದರೆ ಪ್ರಾಚೀನ ಮಾನವನ ಮನಸ್ಸು ಹೇಗೆ ಕೆಲಸ ಮಾಡುತ್ತಿತ್ತು ಎಂಬುದನ್ನು ತಿಳಿಯಲು ಒಳ್ಳೆಯ ಮಾರ್ಗಸೂಚಿಯೊಂದು ದೊರಕಿದಂತಾಗುತ್ತದೆ ಎಂದು ಆ ವಿದ್ವಾಂಸರು ವಾದಿಸುತ್ತಾರೆ.

ಪ್ರಪಂಚದ ಜೀವರಾಶಿಯಲ್ಲಿ ಮಾನವನೊಬ್ಬನಿಗೆ ಮಾತ್ರ ತನ್ನ ಕೈಹೆಬ್ಬೆಟ್ಟನ್ನು ಮಿಕ್ಕ ನಾಲ್ಕು ಬೆರಳುಗಳಿಗೆ ಅಭಿಮುಖವಾಗಿಸುವ ಶಕ್ತಿಯಿದೆ; ಮಿಕ್ಕ ಯಾವ ಪ್ರಾಣಿಗೂ ಇಲ್ಲ ಎಂಬ ವಸ್ತುಸ್ಥಿತಿಯಿಂದ ಮಾನವನ ಎಲ್ಲ ದೈಹಿಕ-ಬೌದ್ಧಿಕ ಪ್ರಗತಿ ಸಾಧಿತವಾಗಿದೆ. ಈ ವಿಷಯವನ್ನು ಗುರುತಿಸಿ ಅವರು ಮತ್ತೆ Finger, Five ಶಬ್ದಗಳ ಪ್ರಾಧಾನ್ಯವನ್ನು ಸ್ಮರಿಸುತ್ತಾರೆ.

ಗ್ರೀಕ್, ಲ್ಯಾಟಿನ್, ಸಂಸ್ಕೃತ ಮುಂತಾದ ಪ್ರಾಚೀನ ಇಂಡೋ - ಯುರೋಪಿಯನ್ ಭಾಷೆಗಳಿಂದಲೇ ಇಂಗ್ಲಿಷ್, ಡಚ್, ಜರ್ಮನ್, ರಷ್ಯನ್‌ಭಾಷೆಗಳೂ, ಜರ್ಮಾನಿಕ್, ಸ್ಲಾವಿಕ್, ರೋಮಾನ್ಸ್, ಸೆಲ್ಟಿಕ್ ಮತ್ತು ಬಾಲ್ಟಿಕ್ ಭಾಷೆಗಳೂ ಬೆಳೆದು ಬಂದಿವೆ ಎಂಬುದನ್ನು ಸಾಮಾನ್ಯವಾಗಿ ಎಲ್ಲಾ ಭಾಷಾಶಾಸ್ತ್ರಜ್ಞರು ಒಪ್ಪುತ್ತಾರೆ.

ಆದರೆ ಗ್ರೀಕ್, ಲ್ಯಾಟಿನ್, ಸಂಸ್ಕೃತ ಮುಂತಾದ ಭಾಷೆಗಳಿಗಿಂತ ಹೆಚ್ಚು ಪ್ರಾಚೀನವಾದ ಮತ್ತೊಂದು ಭಾಷೆ ಇದ್ದಿರಬೇಕೆಂದೂ ಆ ಭಾಷೆಯನ್ನು PIE ಎಂದು ಸಂಕ್ಷೇಪವಾಗಿ ಕರೆಯಬೇಕೆಂದೂ ಸೂಚಿಸಿರುವ ಭಾಷಾಶಾಸ್ತ್ರಜ್ಞರೂ ಇದ್ದಾರೆ. ಅಷ್ಟೇ ಅಲ್ಲದೆ Uralic ಗುಂಪಿಗೆ ಸೇರಿದ Finnish, Estonian, Hungarian ಮುಂತಾದ ಭಾಷೆಗಳೂ, Altaic ಗುಂಪಿಗೆ ಸೇರಿದ Turkish ಮತ್ತು Mongolian ಭಾಷೆಗಳೂ Afro-Asiatic ಗುಂಪಿಗೆ ಸೇರಿದ Arabic, Hebrew ಭಾಷೆಗಳೂ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಎಲ್ಲ ಭಾಷೆಗಳೂ ಒಂದೇ ಭಾಷೆಯ ಮೂಲದಿಂದ ಬಂದವೆಂದೂ, ಆ ಭಾಷೆಯನ್ನು Nostratic ಎಂದು ಕರೆಯಬಹುದೆಂದು ವಾದಿಸುವ ವಿದ್ವಾಂಸರ ವರ್ಗವೂ ಇದೆ. ಈ ಭಾಷೆ ಸುಮಾರು ೧೨೦೦೦ ವರ್ಷಗಳ ಹಿಂದೆ ಪ್ರಚಾರದಲ್ಲಿದ್ದಿರಬಹುದೆಂಬುದು ಈ ವಿದ್ವಾಂಸರ ಅಭಿಪ್ರಾಯ.

ಈ ಸಿದ್ಧಾಂತವು ತಪ್ಪೆಂದು ವಾದಿಸುವವರ ಸಂಖ್ಯೆಯೇ ಹೆಚ್ಚು. ಆದರೂ ಈಚೆಗೆ Nostratic ಭಾಷೆಯ ಬೆಂಬಲಿಗರು ಹೆಚ್ಚುತ್ತಿರುವುದರಿಂದ ಈಗೀಗ ಈ ವಿಚಾರವನ್ನು ಮತ್ತೆ ಪರಿಶೀಲಿಸಲು ಅನೇಕರು ಒಪ್ಪಿದ್ದಾರೆ.

Mito Chondrial DNA ಯನ್ನು ವಿಶ್ಲೇಷಣೆ ಮಾಡಿದ ವಿಜ್ಞಾನಿಗಳು ಎಲ್ಲ ಮಾನವರೂ ಒಂದೇ Genetic Stock ನಿಂದ ಬೆಳೆದು ಬಂದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಹೀಗಿರುವುದರಿಂದ ಮೂಲಭಾಷೆಯೂ ಒಂದೇ ಆಗಿರಬೇಕೆಂಬುದು ಕೆಲವರ ಸೂಚನೆ.

ಹೀಗೆ ಈ ಕ್ಷೇತ್ರ ತುಂಬ ಗೊಂದಲದ ಸ್ಥಿತಿಯಲ್ಲಿದೆ. ಜ್ಞಾತಿ ಶಬ್ದಗಳು ಎಂಬುದು ನಿಜವಾಗಿ ಜ್ಞಾತಿಶಬ್ದಗಳಲ್ಲದಿರಬಹುದು. Papa ಅಪ್ಪ, Mama ಅಮ್ಮ ಎಂಬುದು ಎಲ್ಲ ಮಕ್ಕಳು ಮೊದಲು ಓಷ್ಠ್ಯವನ್ನು ಉಚ್ಚರಿಸುವುದರಿಂದ ಎಲ್ಲ ಭಾಷೆಗಳಿಗೂ ಅವು ಸಮಾನವಾಗುತ್ತವೆ. ಈ ಎಲ್ಲ ಕಾರಣಗಳಿಂದ ಯಾವುದೇ ಭಾಷೆಯ ಚಾರಿತ್ರಿಕ ಸತ್ಯವನ್ನು ಹುಡುಕಬೇಕಾದರೆ ಸದ್ಯಕ್ಕಾದರೂ ಉಪಲಬ್ಧವಾಗಿರುವ ಶಾಸನ, ಗ್ರಂಥ ಮತ್ತು ವಾಗ್ರೂಢಿಗಳಿಂದಲೇ ಪ್ರಭಾವಿತರಾಗಬೇಕಾದುದು ಅನಿವಾರ್ಯವಾಗಿದೆ. ಭಾಷೆಯ ಅಭ್ಯಾಸದಲ್ಲಿ ಮೊದಲು ಇದನ್ನು ನೆನಪಿಡಬೇಕು.

ಈ ಚರ್ಚೆ ಹೇಗೆ ತೀರ್ಮಾನವಾದರೂ ಸರಿಯೇ, ಇಂದಿನ ಮಾನವನಂತೂ ಮಾತನಾಡುವ ಪ್ರಾಣಿ. ತನ್ನ ಜೀವನದಲ್ಲಿ ನಡೆದು ಹೋದ ಹಿಂದಿನದನ್ನು ನೆನಪಿನಲ್ಲಿಡುವ ಮತ್ತು ಭವಿಷ್ಯದ ಬಗ್ಗೆ ಕನಸು ಕಾಣುವ ಶಕ್ತಿ ಇರುವುದು ಮಾನವ ಪ್ರಾಣಿಗೆ ಮಾತ್ರ. ಬಾಹ್ಯ ಜೀವನದಲ್ಲಿ ವಾಸ್ತವತೆಯ ಬಗ್ಗೆ ಹೊಳೆಯುವ ಭಾವನೆಗಳನ್ನೂ ಅಂತರಂಗದಲ್ಲಿ ಮೊಳೆಯುವ

ಅತೀಂದ್ರಿಯ ಭಾವನೆಗಳನ್ನೂ ಇತರರಿಗೆ ತಿಳಿಸುವ, ಇತರರು ಹೇಳುವ ಮಾತಿನ ಅರ್ಥವನ್ನು ಗ್ರಹಿಸುವ ಸಾಮರ್ಥ್ಯ ಇರುವುದು ಮಾನವನಿಗೆ ಮಾತ್ರ. ಈ ಮಾತು ಅಥವಾ ಭಾಷೆ ಎನ್ನುವುದು ಮಾನವನ ಮನಸ್ಸಿನ ಬೃಹದಾಯುಧಾಗಾರ; ಸಾಮಾಜಿಕರನ್ನು ಎಚ್ಚರಿಸಿ ಅನೇಕರನ್ನು ಒಗ್ಗೂಡಿಸುವ ಅಥವಾ ಬೇಧಭಾವವನ್ನು ಸೃಷ್ಟಿಸಿ ಅವರನ್ನು ಇಬ್ಭಾಗವಾಗಿ ಒಡೆಯುವ ಸಾಮರ್ಥ್ಯವುಳ್ಳದ್ದು. ಭಾಷೆಯ ಈ ಎರಡು ಸಾಮರ್ಥ್ಯಗಳಿಗೂ ವಿಶ್ವದಲ್ಲಿ ಅನೇಕ ದೃಷ್ಟಾಂತಗಳು ಕಾಣಸಿಗುತ್ತವೆ. ನೈಜೀರಿಯಾ, ಕೆನಡ, ಬೆಲ್ಜಿಯಂ, ಬಾಂಗ್ಲಾದೇಶ ಮತ್ತು ಭಾರತ - ಈ ದೇಶಗಳಲ್ಲಿ ಭಾಷಾವೈಮನಸ್ಯಗಳಿಂದ ಆಗಿರುವ ಅನಾಹುತ ಎಲ್ಲರಿಗೂ ತಿಳಿದ ವಿಷಯ. ಆದರೆ ಭಾಷೆಯಲ್ಲಿ ಅಡಗಿರುವ ಐಕ್ಯಸಾಧನೆಯ ಸತ್ವವನ್ನು ಉಪಯೋಗಿಸಿಕೊಂಡು ಜನಾಂಗವನ್ನು ಕಟ್ಟುವ, ಬೆಳೆಸುವ ಅವಕಾಶವನ್ನು ಫಲಕಾರಿಯಾಗಿ ಮಾಡುವುದು ನಮ್ಮ ಅಧೀನವಾಗಿಯೇ ಇದೆ. ಅಭಿಮಾನ ಸದಾ ಫಲಕಾರಿ; ದುರಭಿಮಾನ ಸದಾ ಅಪಾಯಕಾರಿ. ಭಾಷೆಯ ದುರಭಿಮಾನ ಬೆಳೆದರೆ ಅದು ಮತಾಭಿಮಾನ, ಜಾತ್ಯಭಿಮಾನಗಳಿಗಿಂತ ಹೆಚ್ಚು ಉಪದ್ರವಕಾರಿ.

ಈಗಿನ ಭಾರತದ ರಾಜಕೀಯದಲ್ಲಿ ಭಾಷಾಭಿಮಾನಕ್ಕೆ ಅಗಾಧವಾದ ಪ್ರಾಧಾನ್ಯ ದೊರಕಿದೆ. ಭಾಷಾಭಿಮಾನವನ್ನು ರಾಜಕೀಯ ನಿಪುಣರು ಪಕ್ಷಪ್ರತಿಷ್ಠೆಗೆ ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳುವುದೂ ಉಂಟು. ಅದೇ ಅಭಿಮಾನವನ್ನೇ ರಾಷ್ಟ್ರದ ಬೆಳವಣಿಗೆಯ, ಅಭಿವೃದ್ಧಿಯ ಉದ್ದೇಶಕ್ಕೆ ಮಾರ್ಗದರ್ಶಕವನ್ನಾಗಿ ಮಾರ್ಪಡಿಸಬೇಕು.

ಭಾರತದಲ್ಲಿ ಪ್ರಾಂತೀಯ ಭಾಷೆಗಳಿಗೆ ಅಧಿಕಾರಯುತವಾದ ಸ್ಥಾನವನ್ನು ನೀಡಿ ಆಯಾ ಪ್ರಾಂತಗಳಲ್ಲಿ ಆಯಾ ಭಾಷೆಗಳೇ ಆಡಳಿತ ಭಾಷೆಯಾಗಬೇಕೆಂಬ ತೀರ್ಮಾನವನ್ನು ಕೈಗೊಂಡಿರುವುದು ತುಂಬ ಸ್ವಾಗತಾರ್ಹವಾದ ವಿಚಾರ. ಇನ್ನು ಆಯಾ ಪ್ರಾಂತಗಳಲ್ಲಿರುವ ಪ್ರಾದೇಶಿಕ ಭೇದಗಳನ್ನೂ ಉಪಭಾಷೆಗಳನ್ನೂ ಗಮನದಲ್ಲಿಟ್ಟು ಅವುಗಳ ಸತ್ವವು ಕುಂದದಂತೆ ಆಯಾ ಭಾಷೆಗಳನ್ನು ಆಧುನಿಕಗೊಳಿಸಿ (Modernise) ಅವುಗಳಿಗೆ ಒಂದು ಸಮಾನ ಗುಣಮಟ್ಟವನ್ನು (Standerdization) ತಂದುಕೊಡಬೇಕಾದುದೂ ಅಷ್ಟೇ ಮುಖ್ಯವಾದುದು. ಪ್ರಜಾವರ್ಗದ ಬಹುಜನರಿಗೆ ಸಹಾಯವಾಗುವಂತೆ ಪ್ರಾಂತಗಳಲ್ಲಿರುವ ಪ್ರಾದೇಶಿಕ ಭೇದಗಳನ್ನು ಸಾಧ್ಯವಾದಷ್ಟೂ ಒಂದುಗೂಡಿಸಿ ಎಲ್ಲ ಕಡೆಯ ಆಡುಮಾತಿನ ಸ್ವರೂಪವು ಎಲ್ಲರಿಗೂ ಅರ್ಥವಾಗುವಂತೆ ಮಾಡುವ ಶಿಕ್ಷಣ ಕ್ಷೇತ್ರದ ಸಾಧ್ಯತೆಯನ್ನು ಆಳವಾಗಿ ಪರಿಶೀಲಿಸಬೇಕು. ಇದಕ್ಕೆಂದೇ ಕನ್ನಡ ಭಾಷೆಯ ಶಿಕ್ಷಕರಿಗೆ ಪ್ರಾಥಮಿಕ ಶಾಲಾವರ್ಗದ ಮಟ್ಟದಿಂದ ವಿಶಿಷ್ಟವಾದ ತರಬೇತಿಯನ್ನು ನೀಡುವ ಅಗತ್ಯವಿದೆ. ಈ ದೃಷ್ಟಿಯಿಂದ ಭಾಷಾ ಪ್ರಯೋಗದಲ್ಲಿ ಇನ್ನಷ್ಟು ವ್ಯಾಪಕತೆಯನ್ನು ಹೊಂದಿಸಬೇಕಾಗುತ್ತದೆ. ಪ್ರಪಂಚದ ಎಲ್ಲ ಕಡೆಗಳಲ್ಲಿ ಇಂಥ ಪ್ರಯತ್ನಗಳು ನಡೆಯುತ್ತಾ ಇವೆ. ಸಾಮಾಜಿಕವಾಗಿ ಬೇರೆ ಬೇರೆ ವರ್ಗಗಳಲ್ಲಿ ಕಂಡುಬರುವ ಭಾಷಾವೈವಿಧ್ಯದಲ್ಲಿ ಸಂವಹನ ಸಾಧ್ಯವಾಗುವಂತೆ ಮಾಡುವುದಕ್ಕೆ ಇರುವ ಅಡೆತಡೆಗಳನ್ನು ನಿರ್ನಾಮ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳು ಫಲವನ್ನು ಕಾಣಬೇಕಾದರೆ ತಲೆಮಾರುಗಳ ಕಾಲ ಅಗತ್ಯ. ಭಾಷೆಯ ವಿಷಯದಲ್ಲಿ ಫಲಗಳ ಸದ್ಯಃಪ್ರಸೂತಿ ಅಸಾಧ್ಯ.

ಭಾರತದಲ್ಲಿ ಚಾಲನೆಗೆ ಬಂದ ತ್ರಿಭಾಷಾನೀತಿ ಫಲದಾಯಕವಾಗಿಲ್ಲ. ಆದರಿಂದ ಹಿಂದೀ ಭಾಷೆಗೆ ಪ್ರಾಧಾನ್ಯ ದೊರೆಯಿತೇ ಹೊರತು ಪ್ರಾಂತೀಯ ಭಾಷೆಗಳಿಗೆ, ಅದರಲ್ಲಿಯೂ ದಕ್ಷಿಣ ಭಾರತದ ಭಾಷೆಗಳಿಗೆ ಹೆಚ್ಚು ಪ್ರಯೋಜನವಾಗಲಿಲ್ಲ. ಬಹುಭಾಷಾದೇಶವಾದ ಭಾರತದ ಎಲ್ಲ ಭಾಷೆಗಳ ಸತ್ವಗಳನ್ನು ಅರಿಯದೆ ಮಾಡಿದ ಈ ರಾಜಕೀಯ ಸೂತ್ರ ಈಗ ಸೋತುಹೋಗಿದೆ.

ಬಹುಭಾಷಾದೇಶವಾದ ಭಾರತದಲ್ಲಿ ಈ ಭಾಷೆಗಳನ್ನು ಮಾತನಾಡುವ ಎಲ್ಲರ ಮನಸ್ಸಿನಲ್ಲಿಯೂ ಒಂದು ಅಂತರಿಕ ಐಕ್ಯವೂ ಬಹಿರಂಗದ ವೈವಿಧ್ಯವೂ ಮನೆ ಮಾಡಿಕೊಂಡಿವೆ. ಇದು ಒಂದು ಚಾರಿತ್ರಿಕ ಸತ್ಯ. ತಮ್ಮ ತಮ್ಮ ವೈಶಿಷ್ಟ್ಯವನ್ನು ರಕ್ಷಿಸಿಕೊಂಡು ಒಟ್ಟು ಭಾರತದ ಐಕ್ಯಕ್ಕಾಗಿ ದುಡಿಯುತ್ತಿರುವುದೇ ಎಲ್ಲ ಪ್ರಾಂತಗಳ ಸ್ವಭಾವವಾಗಿ ಬೆಳೆದುಬಂದಿದೆ.

ಆದುದರಿಂದಲೇ ಪ್ರಾಂತಗಳ ದ್ವಿಭಾಷಾಗಡಿಗಳಲ್ಲಿ ದ್ವಿಭಾಷಾಪ್ರಯೋಗ ಸತ್ವಯುತವಾಗುತ್ತ ಇದೆ. ಅನೇಕ ಸಾಮಾಜಿಕ ಸಂಘಸಂಸ್ಥೆಗಳಲ್ಲಿಯೂ ದ್ವಿಭಾಷಾಪ್ರಯೋಗ ಪ್ರಯೋಜನಕಾರಿಯಾಗಿದೆ. ಹೀಗೆಯೇ ಭಾರತದ ಪ್ರತಿಯೊಂದು ಮುಖ್ಯ ಭಾಷೆಯೂ ಪ್ರಾಂತದ ಹೊರಗಡೆಯೂ ಮುಖ್ಯ ನಗರಗಳಲ್ಲಿ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬರುವಂತೆ ಆಯಾ ಭಾಷೆಯನ್ನು ಮಾತನಾಡುವ ಜನ ದುಡಿಯುತ್ತಿದ್ದಾರೆ. ಭಾರತದ ಎಲ್ಲ ಮುಖ್ಯ ನಗರಗಳಲ್ಲಿಯೂ ಜನತೆಯಲ್ಲಿ ಸಾಂಸ್ಕೃತಿಕವಾಗಿ ಒಂದು ಭಾಷಾಮಿಶ್ರಣ ಕಂಡು ಬರುತ್ತಿದೆ. ಅಂದರೆ, ಒಂದೇ ಭಾಷೆಯನ್ನು ಉಪಯೋಗಿಸುವಾಗ ಕಂಡುಬರುವ ಎರಡು ಬೇರೆ ಬೇರೆ ಮಟ್ಟಗಳ ಆಡುಮಾತನ್ನು (Di-glossia) ಉಪಯೋಗಿಸುತ್ತಾರೆ. ಈ ದ್ವಿಸ್ತರದ ಭಾಷಾಪ್ರಯೋಗದಿಂದ ಒಂದು ಸಾಮಾಜಿಕ ಐಕ್ಯ ಸಾಧಿತವಾಗಿದೆ. ದ್ವಿಸ್ತರದ ಭಾಷೆ ಎಂದರೆ ದ್ವಿಭಾಷಾ ವರ್ಗದ ಸಾಮಾಜಿಕ ಸಾಂಸ್ಕೃತಿಕ ಸ್ತರದಲ್ಲಿ ಉಪಯೋಗಿಸುವ ಭಾಷಾವ್ಯವಸ್ಥೆ ಎಂದರ್ಥ. ಇದನ್ನೆಲ್ಲಾ ಭಾಷಾ ಶಾಸ್ತ್ರಜ್ಞರು ವಿವರಿಸಬೇಕು. ಸಾಮಾನ್ಯರೂ ರಾಜಕಾರಣ ನಿಪುಣರೂ ಇವುಗಳನ್ನು ಅರಿತುಕೊಳ್ಳಬೇಕು. ಒಟ್ಟಿನಲ್ಲಿ ನಮ್ಮ ಭಾಷಾನೀತಿ ಸಾಮಾನ್ಯ ಜನಸಮೂಹವನ್ನು ಸಾಕ್ಷರವನ್ನಾಗಿ ಮಾಡಿ ಪ್ರತಿಯೊಬ್ಬರ ಅಭ್ಯುದಯವನ್ನು ಸಾಧಿಸುವುದಾಗಿರಬೇಕು.

ಭಾಷಾ ಪರಿವೀಕ್ಷಣ (Survey)*

ಭಾರದ ದೇಶದಲ್ಲಿ ಭಾಷೆಗಳ ವ್ಯಾಸಾಂಗ ಅಧ್ಯಯನ ಅಧ್ಯಾಪನಗಳು ಬಹಳ ಪ್ರಾಚೀನ ಕಾಲದಿಂದಲೂ ನಡೆದುಬಂದಿವೆ. ವೇದಗಳನ್ನು ಬಾಯಿಪಾಠ ಮಾಡಿ ವಿವಿಧ ರೀತಿಗಳಲ್ಲಿ ಅವುಗಳನ್ನು ಉದ್ಘೋಷಿಸುತ್ತಿದ್ದ ಕಾಲದಿಂದಲೂ ನಮ್ಮ ಜನರಿಗೆ ವೇದಗಳ ಮೂಲದ ಬಗ್ಗೆ ಚಿಂತನೆ ಇದ್ದೇ ಇತ್ತು. ವೈದಿಕ ನಿಘಂಟಿಗೆ ಯಾಸ್ಕನು ನಿರುಕ್ತವನ್ನು ರಚಿಸಿದ ಮೇಲೆ ಪಾಣಿನಿಯ ಕಾಲದಲ್ಲಿ ವೇದಗಳ ರಚನೆಯ ಬಗ್ಗೆ ಆಳವಾದ ಚಿಂತನೆ ನಡೆಯಿತು. ಈ ವಿಚಾರವಾಗಿ

Survey* ಶಬ್ದವನ್ನು ಸರ್ವೇಕ್ಷಣ ಎಂದು ಅನುವಾದ ಮಾಡಿ ಕೆಲವರು ಉಪಯೋಗಿಸುತ್ತಾರೆ.

ಪತಂಜಲಿಯ ಮಹಾಭಾಷ್ಯದಲ್ಲಿ ಅನೇಕ ಸೂಚನೆಗಳು ದೊರೆಯುತ್ತವೆ. ಈ ಚಿಂತನೆ ಸಾರೋದ್ಧಾರವಾಗಿ ನಡೆಯದೆ ಇರಬಹುದು. ಆದರೆ ಅಲ್ಲಲ್ಲಿ ಇಂಥ ಚಿಂತನೆಯ ಕುರುಹುಗಳು ಕಂಡು ಬರುತ್ತವೆ. ಪ್ರಾಕೃತ ಭಾಷೆಗಳ ಬಗ್ಗೆ, ಭಾಷೆಗಳ ಭೌಗೋಳಿಕ ಪ್ರಸಾರದ ಬಗ್ಗೆ, ಸಾಮಾಜಿಕ ಭಾಷಾಶಾಸ್ತ್ರದ ಬಗ್ಗೆ, ವಿಸ್ತಾರವಾದ ಯಾವ ಕುರುಹುಗಳೂ ಕಂಡು ಬರುವುದಿಲ್ಲ.

೧೯ನೆಯ ಶತಮಾನದಲ್ಲಿಯೂ ೨೦ನೆಯ ಶತಮಾನದ ಪ್ರಾರಂಭದಲ್ಲಿಯೂ ಪಾಶ್ಚಾತ್ಯ ವಿದ್ವಾಂಸರು ನಡೆಸಿದ ಭಾಷೆಗಳ ವ್ಯಾಸಂಗದಿಂದ ಭಾಷೆಗಳ ಪರಿವೀಕ್ಷಣೆಗೆ ಚಾಲನೆ ದೊರಕಿತು. ಗ್ರೀಯರ್ ಸನ್ (Grierson) ಮತ್ತು ಸ್ಟೆನ್‌ಕೊನೋ (Stenkono) ಅವರು ಕೈಗೊಂಡ ಭಾರತ ಭಾಷೆಗಳ ಪರಿವೀಕ್ಷಣೆಯಿಂದ ಈ ವಿಚಾರದಲ್ಲಿ ಭಾಷೆಗಳಲ್ಲಿ ಆಸಕ್ತರಾದವರಿಗೆ ಉತ್ಸಾಹ ಬೆಳೆಯಲು ಕಾರಣವಾಯಿತು. ಕಳೆದ ಶತಮಾನದ ಉತ್ತರಾರ್ಧದ ಪ್ರಾರಂಭದಲ್ಲಿ ಕೆಲವರು ವಿದ್ವಾಂಸರು ೧. ಶಬ್ದಗಳ ೨. ಉಪಭಾಷೆಗಳ ೩. ಸಾಮಾಜಿಕ ಭಾಷೆಯ ಪರಿವೀಕ್ಷಣೆಗಳನ್ನು ಅಲ್ಲಲ್ಲಿ ನಡೆಸಿದರು. ಈ ವ್ಯಾಸಂಗದಿಂದ ಒಂದು ಭಾಷೆಯಲ್ಲಿ ಕಂಡುಬರುವ ವ್ಯತ್ಯಾಸಗಳು ವೈವಿಧ್ಯಗಳು ಎಷ್ಟಿದ್ದರೂ ಭಾರತದ ಎಲ್ಲ ಭಾಷೆಗಳಲ್ಲಿಯೂ ಒಂದು ಏಕಸೂತ್ರತೆ ಕಂಡುಬರುತ್ತದೆ ಎಂಬುದು ವ್ಯಕ್ತವಾಯಿತು. ವ್ಯತ್ಯಾಸಗಳು ಭಾಷೆಯನ್ನು ಬದಲು ಮಾಡುವುದಿಲ್ಲ. ಅವುಗಳಿಂದ ಒಂದು ಭಾಷೆಯ ಶಬ್ದ ಸಂಪತ್ತು, ಪ್ರಯೋಗ ಸ್ವಾರಸ್ಯ, ಮಾತಿನ ಧೋರಣೆ, ಕಾಕುಗಳ ಅರ್ಥ ಇವು ಹೆಚ್ಚು ಸ್ಪಷ್ಟವಾಗಿ ಎದ್ದು ಕಾಣುತ್ತವೆ. ರಬ್ಬರನ್ನು ಎಳೆದಾಗ ಅದು ವಿಸ್ತಾರಗೊಂಡು, ಬಿಟ್ಟಾಗ ಮತ್ತೆ ಮೂಲ ಸ್ವರೂಪ ಬರುವ ಹಾಗೆ ಭಾಷೆಗಳ ವೈವಿಧ್ಯವು ಅವುಗಳ ವಿಸ್ತಾರದ ಸ್ವರೂಪ ಅಷ್ಟೇ! ಮತ್ತೆ ಮೂಲಸ್ವರೂಪಕ್ಕೇ ಅವು ಹಿಂದಿರುಗುತ್ತವೆ.

ಒಂದು ಭಾಷೆಯ ಪರಿವೀಕ್ಷಣೆಯಿಂದ ಆ ಭಾಷೆಯ ಶಬ್ದ ಸಂಪತ್ತು, ವೃತ್ತಿ, ಜಾತಿ ಮತಗಳ ವಿಶಿಷ್ಟ ಶಬ್ದಗಳ ಪಟ್ಟಿ, ಅರ್ಥದ ಛಾಯೆಗಳು, ಭೌಗೋಳಿಕವಾಗಿ ಇರುವ ವ್ಯತ್ಯಾಸಗಳನ್ನು ಸರಳವಾಗಿ ಅರ್ಥ ಮಾಡಿಕೊಳ್ಳುವ ಬಗೆ ಮುಂತಾದ ವಿಚಾರಗಳು ಹೊರಪಡುತ್ತವೆ. ಭಾಷಾಶಾಸ್ತ್ರವು ಜನರ ನಡುವೆ ಭಾಷೆಯ ಪ್ರಯೋಗಗಳು ಕೊಡುಕೊಳ್ಳುವಿಕೆಗೆ ಹೇಗೆ ಸಹಾಯ ಮಾಡುತ್ತವೆ, ಅವುಗಳಲ್ಲಿ ಯಾವುದು ಶಿಷ್ಟ, ಯಾವುದು ಅಶಿಷ್ಟ, ಯಾವುದು ಸ್ವಾಗತಾರ್ಹ, ಸಾಮಾಜಿಕವಾಗಿ ಹೆಚ್ಚು ಪ್ರಯೋಜನಕಾರಿ, ಅವುಗಳಿಂದ ಹೊರಬರುವ ಸಂಸ್ಕೃತಿಯ ರೀತಿ ಏನು, ಎಂದೆಲ್ಲ ವಿಚಾರ ಮಾಡುತ್ತದೆ.

ಈ ಬಗೆಯ ಭಾಷೆಯ ಪರಿವೀಕ್ಷಣೆ ಆಂಧ್ರ ಪ್ರದೇಶದಲ್ಲಿ ಸ್ವಲ್ಪ ವಿಸ್ತಾರವಾಗಿ ನಡೆದಿದೆ. **ವೃತ್ತಿ ಪದಕೋಶ**ವೆಂಬ ಹೆಸರಿನಲ್ಲಿ ಕೆಲವು ಸಂಪುಟಗಳು ಹೊರಬಿದ್ದಿವೆ. ಕೇರಳದಲ್ಲಿ ನಡೆದ ಸಂಶೋಧನೆಯ ಫಲ ಪ್ರಕಟಣೆಯಾಗಿಲ್ಲ. ಕನ್ನಡದ ಬಗ್ಗೆ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಸ್ವಲ್ಪ ಕೆಲಸ ನಡೆದಿದೆ. ಇವೆಲ್ಲ ಪ್ರಶ್ನಾವಳಿಗಳಿಂದ ನಡೆದ ಪರಿವೀಕ್ಷಣೆಗಳು. ಆಡುಮಾತಿನ ನೇರ ಪರಿವೀಕ್ಷಣೆಯು ಮಾತನಾಡುವವನಿಗೆ ತಿಳಿಯದಂತೆ ನಡೆಯಬೇಕು. ಇದು ಕಷ್ಟದ ಕೆಲಸ. ಭಾಷಾಶಾಸ್ತ್ರವನ್ನು ಬಲ್ಲವನು ಅಜ್ಞಾತವಾಗಿ ಒಂದೆಡೆ ನೆಲೆನಿಂತು ತಿಂಗಳುಗಟ್ಟಲೆ

ಕೆಲಸ ಮಾಡಬೇಕು. ಈ ಕಾರ್ಯ ಕನ್ನಡದಲ್ಲಿ ಹೆಚ್ಚಾಗಿ ನಡೆದಿಲ್ಲ; ಯುವ ವಿದ್ವಾಂಸರು ಹೊಸ ಸಂಶೋಧನೆ ನಡೆಸಲು ಫಲವತ್ತಾದ ನೆಲ ಇದು.

ಭಾಷಾವೈವಿಧ್ಯ

ಒಂದೇ ಭಾಷೆಯನ್ನಾಡುವವರಲ್ಲಿಯೂ ಅನೇಕ ಬಗೆಗಳು ಕಂಡುಬರುತ್ತವೆ. ಜನತೆ ಭೌಗೋಳಿಕವಾಗಿ ಬೇರೆ ಬೇರೆ ಕಡೆಗಳಲ್ಲಿ ವಾಸಮಾಡುತ್ತಾರೆ. ಆರ್ಥಿಕವಾಗಿ ಅವರಲ್ಲಿ ಬೇರೆ ಬೇರೆ ಸ್ತರಗಳಿರುತ್ತವೆ. ಮತೀಯವಾಗಿ ಅವರು ಹಂಚಿಹೋಗಿರುತ್ತಾರೆ. ಜಾತೀಯವಾಗಿ ವಿಭಾಗಗಳಿವೆ. ಈ ಕಾರಣಗಳಿಂದ ಅವರಲ್ಲಿ ಬೇರೆ ಬೇರೆ ಮಾತಿನ ಬಗೆಗಳೂ ಕಂಡುಬರುತ್ತವೆ. ಕನ್ನಡದಲ್ಲಿ ಬಹುಮುಖ್ಯವಾಗಿ ಕಾಣುವ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡಗಳನ್ನು ಗಮನಿಸಿದರೂ ಯಾವ ಇತರ ಸ್ತರಗಳನ್ನು ಲೆಕ್ಕಿಸದಿದ್ದರೂ ಭೌಗೋಳಿಕವಾಗಿ ಈ ಬಗೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು. ಆರ್ಥಿಕವಾಗಿ ಮೇಲುವರ್ಗಕ್ಕೆ ಸೇರಿದ ಮಕ್ಕಳು ಮಾತನಾಡುವುದನ್ನೂ ಶ್ರಮಿಕಜೀವಿ ವರ್ಗದ ಮಕ್ಕಳು ಮಾತನಾಡುವುದನ್ನೂ ಪರಿಶೀಲಿಸಿದರೆ ಮೊದಲನೆಯ ವರ್ಗದ ಮಕ್ಕಳಲ್ಲಿ ವ್ಯಾಪಕವಾದ ಶಬ್ದಸಂಪತ್ತೂ ವಿಷಯ ವೈವಿಧ್ಯವೂ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಶ್ರಮಿಕವರ್ಗದ ಮಕ್ಕಳಲ್ಲಿ ಸೀಮಿತವಾದ ಶಬ್ದಸಮೂಹವೂ ವಿಷಯ ವ್ಯಾಪ್ತಿಯಲ್ಲಿ ಕುಂದೂ ಕಂಡುಬರುತ್ತವೆ.

ಸಾಹಿತ್ಯದ ಭಾಷೆ, ಆಡಳಿತದ ಭಾಷೆ, ಕೋರ್ಟಿನ ದೈನಂದಿನ ವ್ಯವಹಾರದ ಭಾಷೆ, ವೈಜ್ಞಾನಿಕವಾದ ಶಾಸ್ತ್ರೀಯ ಭಾಷೆ, ಮುಂತಾಗಿ ಭಾಷೆ ಬೇರೆಯಾಗಿಯೇ ಬೆಳೆದಿದೆ. ಇವೆಲ್ಲದರ ಮಧ್ಯೆ ಎಲ್ಲರಿಗೂ ಅನ್ವಯಿಸುವ ಒಂದು ಸರ್ವಸಮಾನವಾದ (Standared) ಭಾಷೆ ಇರುತ್ತದೆ. ಬೇರೆ ಬೇರೆ ಸ್ತರಗಳ ಜನರಲ್ಲಿ ಉಚ್ಚಾರಣೆಯ ಭೇದವೂ ಕಂಡುಬರುತ್ತದೆ. 'ಹ' ಕಾರ 'ಅ' ಕಾರಗಳ ಬದಲಾವಣೆ, ಮಹಾಪ್ರಾಣಲೋಪ, ಒತ್ತಕ್ಷರ ದೀರ್ಘಾಕ್ಷರಗಳಲ್ಲಿ ವಿಪರ್ಯಾಸ, ಇವುಗಳನ್ನು ಬೇಗ ಗುರುತಿಸಬಹುದು.

ಇಂಥ ಸ್ಥಿತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಯಾವ ಬಗೆಯ ಭಾಷೆ ಪ್ರಯೋಗದಲ್ಲಿರಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈಗ ನೇಮಕವಾಗುತ್ತಿರುವ ಪಠ್ಯ ಪುಸ್ತಕಗಳ ಬಗ್ಗೆ ಆಗಿಂದಾಗ ಭಿನ್ನಾಭಿಪ್ರಾಯಗಳು ತಲೆದೋರುವುದೂ ಇದಕ್ಕಾಗಿಯೇ. ಶಿಕ್ಷಣ ಕ್ಷೇತ್ರದ ಈ ಸಮಸ್ಯೆಯನ್ನು ಪರಿಹರಿಸಬೇಕೆನ್ನುವವರು ನಮ್ಮ ಭಾಷಾ ಕ್ಷೇತ್ರದಲ್ಲಿ ಅನೇಕರಿದ್ದಾರೆ. ಇಂಥವರಲ್ಲಿ ಪ್ರಮುಖರನ್ನು ಬರಮಾಡಿಕೊಂಡು ಸೂಕ್ತ ಪರಿಹಾರ ಮಾರ್ಗವನ್ನು ಕಂಡುಹಿಡಿಯಬಹುದು.

ಭಾಷೆಯನ್ನು ಆಧುನಿಕಗೊಳಿಸುವುದು

ಒಂದು ಸಮಾಜದ ಸಂಸ್ಕೃತಿಯಲ್ಲಿ ಹೊಸ ಅನುಭವಗಳೂ ಜೀವನದಲ್ಲಿ ಹೊಸ ಆಯಾಮಗಳೂ ತಲೆದೋರಿದಾಗ ಹೊಸ ಶಬ್ದಗಳೂ ಭಾಷಾಪ್ರಯೋಗಗಳೂ ತಲೆದೋರುತ್ತವೆ. ಇಲ್ಲಿಯವರೆಗೆ ಪ್ರಚಾರದಲ್ಲಿರುವ ಭಾಷೆಯ ಸ್ವರೂಪದಲ್ಲಿಯೇ ಹೊಸ ಶಬ್ದಗಳೂ, ಹೊಸ ಸಮಾಸಗಳೂ ಹೊಸ ನುಡಿಗಟ್ಟುಗಳೂ ಹುಟ್ಟಿಕೊಳ್ಳುತ್ತಿವೆ. ಈ ಬಗೆಯ ಸೃಷ್ಟಿ ನಿಜವಾಗಿ

ಹೊಸದೇನೂ ಅಲ್ಲ. ಜನರು ಅವರವರ ವೃತ್ತಿಯಲ್ಲಿ ಆವಶ್ಯಕತೆ ಬಿದ್ದಾಗ ಹೊಸ ಶಬ್ದಗಳನ್ನು ಸೃಷ್ಟಿ ಮಾಡಿದ್ದಾರೆ. ಕೃಷಿಕರು ಅವರಿಗೆ ಅಗತ್ಯವಾದ ಸಾಧನೋಪಕರಣಗಳಿಗೆ, ಗಿಡ ಸಸಿಗಳಿಗೆ, ಅವುಗಳಿಗೆ ಅಂಟುವ ರೋಗಗಳಿಗೆ, ಔಷಧಿಗಳಿಗೆ ಸ್ಪಷ್ಟವಾದ ಅರ್ಥ ನೀಡುವ ಶಬ್ದಗಳನ್ನು ಸೃಷ್ಟಿಸಿದ್ದಾರೆ. ಈಗ ತಾನೆ ಬಂದಿರುವ 'ಊಜಿಪುಡಿ' ಎಂಬ ಹೆಸರಿನ ಔಷಧಿಯನ್ನು ಗಮನಿಸಿ. ಇದು ಕನ್ನಡವೇ ಬಹುಜನ ಭಾಷೆಯಾಗಿರುವ ಪ್ರದೇಶದ ಕತೆ.

ಆದರೆ ದ್ವಿಭಾಷೆ ಅಥವಾ ಬಹುಭಾಷೆಗಳು ಪ್ರಯೋಗದಲ್ಲಿರುವ ಪ್ರದೇಶಗಳಲ್ಲಿ ಯಾವ ಭಾಷೆ ಪ್ರಧಾನವಾಗಿರುತ್ತದೆಯೋ ಅದರ ಪ್ರಭಾವವೂ ಹೆಚ್ಚಾಗಿರುತ್ತದೆ.

ವರ್ತಮಾನ ಪತ್ರಿಕೆಗಳೂ ಆಕಾಶವಾಣಿ ಮತ್ತು ದೂರದರ್ಶನ ವ್ಯವಸ್ಥೆಗಳೂ ಸಾಮಾನ್ಯವಾಗಿ ಹೊಸ ಶಬ್ದಗಳನ್ನು ನಿರ್ಮಾಣ ಮಾಡುತ್ತವೆ. ಇದೂ ಒಂದು ಸ್ವಾರಸ್ಯ ವಿಷಯವೇ.

ಕನ್ನಡದ ವರ್ತಮಾನ ಪತ್ರಿಕೆಗಳು ಸುಮಾರು ೬೦ ವರ್ಷಗಳ ಹಿಂದೆಯೇ ಹೊಸ ಭಾಷಾಶೈಲಿಯನ್ನು ರೂಪಿಸಿಕೊಂಡು ಅನೇಕ ಹೊಸ ಶಬ್ದಗಳನ್ನು ಸೃಷ್ಟಿ ಮಾಡಿದವು. ಆಗಿನ ಕಾಲದಲ್ಲಿ ಪತ್ರಿಕೆಗಳಲ್ಲಿ ಬರೆಯುತ್ತಿದ್ದವರೆಲ್ಲ ವಿಶ್ವವಿದ್ಯಾಲಯಗಳಲ್ಲಿ ಕಲಿತವರು, ಸಾಹಿತಿಗಳು, ವಿದ್ಯಾ ಇಲಾಖೆಯಲ್ಲಿ ದುಡಿಯುತ್ತಿದ್ದವರು. ಪತ್ರಿಕೆಯ ಭಾಷೆಯು ಗ್ರಾಂಥಿಕ ಭಾಷೆಗೆ ಹತ್ತಿರವಿರಬೇಕಾಯಿತು. ವರ್ತಮಾನ ಪತ್ರಿಕೆಗಳು ಬಹುಜನರಿಗೆ ತಲುಪಬೇಕಾಗಿದ್ದುದರಿಂದ ಸುಶಿಕ್ಷಿತರು ಪ್ರಯೋಗಿಸುತ್ತಿದ್ದ ಆಡುಮಾತಿಗೂ ಅದು ಹತ್ತಿರವಾಗಬೇಕಿತ್ತು. **ತಾಯಿನಾಡು, ವೀರಕೇಸರಿ, ವಿಶ್ವಕರ್ನಾಟಕ** ಮುಂತಾದ ಪತ್ರಿಕೆಗಳು ಈ ಕಾರ್ಯವನ್ನು ಚೆನ್ನಾಗಿಯೇ ಮಾಡಿದುವು. **ವಿಶ್ವಕರ್ನಾಟಕದ** ಸಂಪಾದಕರಾಗಿದ್ದ ತಿರುಮಲೆ ತಾತಾಚಾರ್ಯಶರ್ಮರು ಹೊಸ ಶಬ್ದಗಳ ಸೃಷ್ಟಿಗೆ ಪ್ರಖ್ಯಾತರಾಗಿದ್ದರು. ಅವರು ಸೃಷ್ಟಿಸಿದ ಶಬ್ದಗಳಲ್ಲಿ ಕೆಲವು ಇಂದಿಗೂ ಪ್ರಚಾರದಲ್ಲಿವೆ. ಸುಗ್ರೀವಾಜ್ಞೆ, Ordinance; ಅಗ್ರಲೇಖನ, Editorial; ಸಂಸತ್ತು, Parliament; ಗುಂಡುಸೂಜಿ, Pin; ಪ್ರತಿಬಂಧಕ, Preventive; ಇತ್ಯಾದಿ. ಸೀಮೆಸುಣ್ಣ, ಕಲ್ಲೆಣ್ಣೆ ಮುಂತಾದ ಶಬ್ದಗಳು ಇಷ್ಟು ಹೊತ್ತಿಗೆ ಆಗಲೆ ಹಳೆಯ ಶಬ್ದಗಳಾಗಿದ್ದುವು. ಆಗಿನ ಕಾಲದಲ್ಲಿ ಬೆಳೆದ ಹೊಸ ಶಬ್ದಗಳ ಸಂಪೂರ್ಣ ಪಟ್ಟಿಯನ್ನೂ ಇನ್ನೂ ಯಾರೂ ಸಿದ್ಧಪಡಿಸಿಲ್ಲ. ಆದರೂ ನನ್ನ ಗಮನಕ್ಕೆ ಬಂದ, ನವೀಕರಣದಲ್ಲಿ ತಲೆದೋರಿದ ಕೆಲವು ಶಬ್ದಗಳ ಪಟ್ಟಿಯನ್ನು ದಾಖಲಿಸುತ್ತೇನೆ.

Air Hostess	ಗಗನಸಖಿ (ತೆಲುಗು: ಆಕಾಶ ಕನ್ಯೆ)
Amendment	ತಿದ್ದುಪಡಿ
Atmosphere	ವಾತಾವರಣ
Black Market	ಕಳ್ಳಸಂತೆ, ಕಾಳವ್ಯಾಪಾರ, ಕಾಳಸಂತೆ
Black Money	ಕಪ್ಪುಹಣ
Call	ಕರೆ

Call Attention Motion	ಗಮನ ಸೆಳೆಯುವ ಸೂಚನೆ
Chamber of Commerce	ವಾಣಿಜ್ಯ ಮಂಡಳಿ
Charge	ಆರೋಪ
Clarification	ಸ್ಪಷ್ಟನೆ, ಸ್ಪಷ್ಟೀಕರಣ
Constituency	ಚುನಾವಣೆಯ ವಿಭಾಗ, ಕ್ಷೇತ್ರ
Custody	ಹಿರಾಸತ್ತು
Cut	ಕಡಿತ
Dark Chapter	ಕತ್ತಲ ಅಧ್ಯಾಯ, ಕಪ್ಪು ಅಧ್ಯಾಯ
Defection	ಪಕ್ಷತ್ಯಾಗ
Demand	ಕೋರಿಕೆ
Demonstration	ಪ್ರದರ್ಶನ
Democracy	ಪ್ರಜಾಸತ್ತೆ
Deteriorate	ಹದಗೆಡು
Electricity	ವಿದ್ಯುಚ್ಛಕ್ತಿ
Excitement	ಉದ್ರೇಕ
Fixed Deposit	ಇಡುಗಂಟು
Fuel	ಇಂಧನ
Home Industry	ಗೃಹ ಕೈಗಾರಿಕೆ
Hunger Strike	ಉಪವಾಸ ಮುಷ್ಕರ, ಉಪವಾಸ ಸತ್ಯಾಗ್ರಹ
Illicit Liquor	ಕಳ್ಳಭಟ್ಟಿ
Industry	ಕೈಗಾರಿಕೋದ್ಯಮ
Inflation	ಹಣದುಬ್ಬರ
Lower House	ಕೆಳಮನೆ
Monopoly	ಸರ್ವಸ್ವಾಮ್ಯ, ಏಕಸ್ವಾಮ್ಯ
Motion, Proposal	ಮಂಡನೆ
Nepotism	ಸ್ವಜನ ಪಕ್ಷಪಾತ
Non-Aligned Nation	ತಟಸ್ಥ ರಾಷ್ಟ್ರ, ಅಲಿಪ್ತ ರಾಷ್ಟ್ರ
Poultry	ಕೋಳಿ ಸಾಕಣೆ
Radical	ತೀವ್ರಗಾಮಿ, ಉಗ್ರಗಾಮಿ
Radio	ಆಕಾಶವಾಣಿ

Release	ಬಿಡುಗಡೆ
Seat	ಸ್ಥಾನ
Secretariat	ಸಚಿವಾಲಯ
Small Scale Industry	ಸಣ್ಣ ಕೈಗಾರಿಕೆ, ಗುಡಿಕೈಗಾರಿಕೆ
Smuggler	ಕಳ್ಳ ಸಾಗಾಣಿಕೆದಾರ
Smuggled goods	ಕಳ್ಳ ಸರಕು
Split	ಬಿರುಕು
Stalemate	ಯಥಾಸ್ಥಿತಿ
State of Emergency	ತುರ್ತು ಪರಿಸ್ಥಿತಿ
Terrorist	ಭಯೋತ್ಪಾದಕ, ಆತಂಕವಾದಿ
Underground	ಭೂಗತ
Upper House	ಮೇಲ್ಮನೆ
Well of the House	ಬಾವಿ
Zero Hour	ಶೂನ್ಯ ವೇಳೆ

ಈಚಿನ ದಿನಗಳಲ್ಲಿ ಚಲಾವಣೆಗೆ ಬಂದಿರುವ ಕೆಲವು ಶಬ್ದಗಳನ್ನು, ಶಬ್ದ ಪುಂಜಗಳನ್ನು ಪರಿಶೀಲಿಸಬಹುದು.

ಹಿಂದೊದೆತ

ಸಾಧನೆ - ಸಮಾವೇಶ

ಮೌಲ್ಯಾಧಾರಿತ

ಚೆಂಡು ನಿಮ್ಮ ಅಂಗಳದಲ್ಲಿದೆ

ಕುರ್ಚಿಯ ಅಲುಗಾಟ

ಸಾಲಮೇಳ

ಫಲಾನುಭವಿ

ಪಕ್ಷಾಂತರ, ಪಕ್ಷತ್ಯಾಗ

ಇವೆಲ್ಲವು ರಾಜಕೀಯ ಕ್ಷೇತ್ರದ ನಿರ್ಮಾಣಗಳು

ಹೀಗೆಯೇ ತಮಿಳು, ಮಲಯಾಳಂ, ಮತ್ತು ತೆಲುಗು ಭಾಷೆಗಳಲ್ಲಿಯೂ ಹೊಸ ಶಬ್ದಗಳು ನಿರ್ಮಾಣವಾಗಿವೆ. ಅವುಗಳ ತೌಲನಿಕ ಅಭ್ಯಾಸವೂ ಸ್ವಾರಸ್ಯಕರ.

ಹೊಸಶಬ್ದಗಳನ್ನು ನಿರ್ಮಿಸುವಾಗ ಈ ನಿರ್ಮಾಣಕಾರರು ಯಾರೇ ಇರಲಿ ಅವರು ಅನುಸರಿಸಿದ ಮಾರ್ಗಗಳಾವುವು ಎಂಬುದು ವೈಜ್ಞಾನಿಕವಾಗಿ ಮುಖ್ಯವಾಗಿರುವ ಪ್ರಶ್ನೆ. ಆ ಮಾರ್ಗಗಳು ಇವು :

೧. ಹಿಂದೆ ಇದ್ದ ಕನ್ನಡದ ಶಬ್ದಕ್ಕೆ ಇಂಗ್ಲಿಷ್ ಶಬ್ದದ ಹೊಸ ಅರ್ಥವನ್ನು ಹೊಂದಿಸುವುದು, ಉದಾ: ಬಿಡುಗಡೆ.

೨. ಹೊಸ ಶಬ್ದಗಳನ್ನೇ ಸೃಷ್ಟಿಸುವುದು, ಉದಾ : ಕಪ್ಪು ಸಂತೆ, ಕಳ್ಳಭಟ್ಟಿ ಇತ್ಯಾದಿ.

೩. ಸಂಸ್ಕೃತ ಶಬ್ದಗಳಿಗೆ ಇರುವ ಹಳೆಯ ಅರ್ಥದ ಜೊತೆಗೆ ಹೊಸ ಅರ್ಥವನ್ನು ಹೊಂದಿಸುವುದು, ಉದಾ: ಆಕಾಶವಾಣಿ, ಭೂಗತ.

೪. ಇಂಗ್ಲಿಷ್ ಶಬ್ದಗಳಿಗೆ ಹೊಸದಾಗಿ ಸಂಸ್ಕೃತ ಶಬ್ದಗಳ ಸಮಾನ ಅರ್ಥವನ್ನು ಹೊಂದಿಸುವುದು, ಉದಾ: ಸ್ಥಾನ, ವಿನಂತಿಪತ್ರ (Memorandum).

೫. ಹೊಸ ಸಮಾಸಗಳ ಸೃಷ್ಟಿ. ಉದಾ: ಕೋಳಿಸಾಕಣೆ, ಉಪವಾಸಮುಷ್ಕರ.

೬. ಇಂಗ್ಲಿಷ್ ಶಬ್ದಗಳನ್ನೇ ಕನ್ನಡ ಪ್ರತ್ಯಯಗಳ ಜೊತೆ ಉಪಯೋಗಿಸುವುದು. ಉದಾ: ಜಡ್ಜಿಗಳು, ಅಸೆಂಬ್ಲಿ, ಅಪೀಲು.

೭. ಕನ್ನಡದ 'ಮಾಡು', 'ಹಾಕು' ಮುಂತಾದ ಶಬ್ದಗಳನ್ನು ಸೇರಿಸಿ ಹೊಸ ಕ್ರಿಯಾಪದವನ್ನು ಮಾಡುವುದು. ಉದಾ: ಕೇಸು ಹಾಕು, ಅಪೀಲು ಮಾಡು, ಅರ್ಜಿ ಹಾಕು, ಮೊಕದ್ದಮೆ ಹೂಡು ಇತ್ಯಾದಿ.

೮. ಇಂಗ್ಲಿಷ್ ಶಬ್ದಗಳನ್ನು ಅನುವಾದ ಮಾಡುವುದು. ಉದಾ: ವಿಕೇಂದ್ರಿಕರಣ, ಸ್ಥಾಪಿಸು, ಒದಗಿಸು, ಇವು Decentralization, Establish, Provide ಎಂಬ ಶಬ್ದಗಳ ಅನುವಾದಗಳು.

ಇವು ಸಾಮಾನ್ಯವಾಗಿ ಪ್ರಯೋಗವಾಗಿರುವ ಮಾರ್ಗಗಳು.

ಇಂಥ ಶಬ್ದಗಳು ಗ್ರಾಮೀಣ ಪ್ರದೇಶದವರಿಗೂ ಸಂಪೂರ್ಣವಾಗಿ ಅರ್ಥವಾಗಬೇಕಾದರೆ ಸ್ವಲ್ಪಕಾಲ ಹಿಡಿಯಬಹುದು. ಆದರೂ ಈ ಪ್ರಯತ್ನಗಳು ನಡೆಯುತ್ತಿರಬೇಕು. ಭಾರತದ ಎಲ್ಲ ಪತ್ರಿಕಾಕರ್ತರೂ ಈ ಬಗ್ಗೆ ಆಲೋಚನೆ ಮಾಡಿ ಒಂದೇ ಬಗೆಯ ಶಬ್ದಗಳನ್ನು ಭಾರತದ ಆದ್ಯಂತ ಉಪಯೋಗಿಸುವುದು ಸಾಧ್ಯವಾದರೆ ಅದು ಪ್ರಾಂತಪ್ರಾಂತಗಳ ನಡುವಣ ಸಂಬಂಧವನ್ನು ಹೆಚ್ಚು ಸುಗಮಗೊಳಿಸುತ್ತದೆ.

ಪ್ರತಿಯೊಂದು ಭಾಷೆಯ ಚರಿತ್ರೆಯಲ್ಲಿಯೂ ಜನಜೀವನದ ಸಮೃದ್ಧಿಯ ಕಾಲವು ಕಂಡುಬಂದಾಗ ಸಾಹಿತ್ಯಿಕ, ವೈಜ್ಞಾನಿಕ, ಪ್ರಾಯೋಗಿಕ ಮತ್ತು ಪಾರಮಾರ್ಥಿಕ ವಿಚಾರಗಳಲ್ಲಿ ಅತ್ಯಂತ ಅಧಿಕ ಕ್ರಿಯಾಶೀಲತೆಯು ತಲೆದೊರುತ್ತದೆ. ಆಗ ಆ ಭಾಷೆಯ ಶಬ್ದ ಸಂಪತ್ತು ಅಗಾಧವಾದ ಪ್ರಮಾಣದಲ್ಲಿ ವೃದ್ಧಿ ಹೊಂದುತ್ತದೆ. ಹೊಸ ಶಬ್ದಸೃಷ್ಟಿ, ಎರವಲು ಶಬ್ದಗಳ ಸಮೃದ್ಧ ಸೇರ್ಪಡೆ, ಇದ್ದ ಶಬ್ದಗಳಿಗೆ ವ್ಯಾಪಕವಾದ ಅರ್ಥವಿಸ್ತಾರ ಮುಂತಾಗಿ ಅನೇಕ ಪ್ರಕಾರಗಳಿಂದ ಕ್ರಿಯಾಶೀಲತೆ ಕೆಲಸ ಮಾಡುತ್ತದೆ. ವಿಜ್ಞಾನಿಗೆ ಮತ್ತು ವೇದಾಂತಿಗೆ ನಿರ್ದಿಷ್ಟವಾದ ಮತ್ತು ನಿಸ್ಸಂದಿಗ್ಧವಾದ ಶಬ್ದಗಳೇ ಬೇಕು. ಕವಿಗೆ ಮತ್ತು ಲೇಖಕನಿಗೆ ತಾನು ನೇಯುವ ಕಲ್ಪನೆಗೆ ಇರುವ ಶಬ್ದಗಳ ಸಂದಿಗ್ಧತೆಯೇ ಅಗತ್ಯವಾದ ಸಾಧನವಾಗುತ್ತದೆ. ಹೊಸತನವನ್ನು

ವಿರೋಧಿಸುವ ಸನಾತನಿಗಳು ಸದಾಕಾಲವೂ ಇದ್ದೇ ಇರುತ್ತಾರೆ. ಅತಿ ಪ್ರಾಚೀನವಾಗಿದ್ದು, ಬಳಕೆಯಲ್ಲಿಲ್ಲದೆ ಇರುವ ನಿರ್ಜೀವ ಶಬ್ದಗಳಿಗೆ ಜೀವತುಂಬಬೇಕೆಂಬುದು ಕೆಲವರ ಅಪೇಕ್ಷೆ. ಭಾಷೆಯಲ್ಲಿರುವ ಕಸಕಡ್ಡಿಗಳನ್ನು ಒಂದರಿ ಓಡಿದು ಆಚೆಗೆ ಬಿಸಾಡುವ ನಿಘಂಟುಕಾರರು ಬೇಕು ಎಂಬುದು ಕೆಲವರ ವಾದ. ಹೀಗೆ ಅನೇಕ ಬಗೆಯ ಅಭಿಪ್ರಾಯಗಳನ್ನು ಎದುರಿಸಿಯೂ ಭಾಷೆ ಬೆಳೆಯುತ್ತಾ ಹೋಗುತ್ತದೆ.

ಸೃಷ್ಟಿಶೀಲ ಸಾಹಿತ್ಯವನ್ನು ರಚಿಸುವವರಿಗೆಲ್ಲ ಒಂದು ಸಾಮಾನ್ಯ ಅನುಭವವಿರುತ್ತದೆ. 'ಕರೆದಾಗಲೆಲ್ಲ ಬೇಕಾದ ಶಬ್ದಗಳು ಬಂದು ಬಿಡುವುದಿಲ್ಲ' ಎಂಬುದೇ ಆ ಪ್ರಸಿದ್ಧವಾದ ಅನುಭವ'. ಒಬ್ಬ ಕವಿ ಹೇಳುವ ಹಾಗೆ :

Our whitest pearls we never find
Our ripest fruit we never reach
The flowering moments of the mind
Lose half their petals in our speech.

— Oliver Wendell Holmes

ಆದರೂ ಹೊಸ ಶಬ್ದಗಳ ಸೃಷ್ಟಿಯಾಗದೆ ಭಾಷೆ ಬೆಳೆಯುವುದೆಂತು ?

ಇಂಗ್ಲಿಷ್ ಭಾಷೆಯ ಚರಿತ್ರೆಯನ್ನು ಓದುವವನಿಗೆ ಅನೇಕ ಅಶ್ಚರ್ಯಗಳು ಕಾದಿರುತ್ತವೆ. Cicero ಎಂಬ ಮಹಾವಾಗ್ಮಿಯು ಗ್ರೀಕ್ ಭಾಷೆಯಿಂದ ಲ್ಯಾಟಿನ್ ಭಾಷೆಗೆ Moral, Quality ಮುಂತಾದ ಶಬ್ದಗಳನ್ನು ತಂದುದರಿಂದ ಅವು ಇಂಗ್ಲಿಷಿಗೆ ಬಂದುವಂತೆ. W.J. Thomas ಎಂಬುವನು Folklore ಎಂಬ ಶಬ್ದವನ್ನು ಸೃಷ್ಟಿ ಮಾಡಿದನಂತೆ. Voltaireನ Candide ಮೂಲಕ Optimism ಎಂಬ ಶಬ್ದ ಇಂಗ್ಲಿಷಿಗೆ ಬಂತಂತೆ. Blurb ಎಂಬ ಶಬ್ದ ೧೯೭೪ರಲ್ಲಿ ಸೃಷ್ಟಿಯಾಯಿತಂತೆ. ಅದನ್ನು Robert Bridges ಎಂಬ ಕವಿ "Admirable Word And Quite Indispensible" ಎಂದು ವರ್ಣಿಸಿದನಂತೆ.

ಕನ್ನಡ ಭಾಷೆಯಲ್ಲಿ ನಾವು ಈಗ ಉಪಯೋಗಿಸುವ ಸಿನೆಮಾ, ಸುನೀತ, ಸಿನಿಕ, ಪಿಕ್ಚರು, ಕೋರ್ಟು, ಲಾಯರು, ಜೈಲು, ಖೈದಿ, ಆಯಾಮ ಮುಂತಾದ ಶಬ್ದಗಳೂ ಬಹು ಹಿಂದೆಯೇ ಕನ್ನಡದಲ್ಲಿ ಒಂದಾಗಿ ಸೇರಿಕೊಂಡ ಚಾಕರಿ, ತಲಾಷ್, ಷೋಕಿ, ತಮಾಷೆ, ಚಾಲಾಕು, ಹುಜೂರು, ಖಾವಂದ, ಇರಸಾಲು, ಗಲೀಜು, ಗರೀಬ, ಖಜಾನೆ, ಕೋಮು, ಜಮೀನು, ಜಿರಾಯತ್ತು ಮುಂತಾದ ಶಬ್ದಗಳೂ ಭಾಷೆಗೆ ಬರದೆ ಹೋಗಿದ್ದರೆ ಕನ್ನಡ ಇಂದಿನಷ್ಟು ಸಮೃದ್ಧವಾಗಿರುತ್ತಿತ್ತೇ ?

ಕನ್ನಡ ಭಾಷೆಯ ಬೆಳವಣಿಗೆ

ಪ್ರಪಂಚದಲ್ಲಿ ಒಂದು ಮಿಲಿಯನ್ ಅಂದರೆ ಹತ್ತು ಲಕ್ಷಕ್ಕೂ ಹೆಚ್ಚು ಜನ ಮಾತನಾಡುವ ಭಾಷೆಗಳ ಸಂಖ್ಯೆ ೨೦೦೦ಕ್ಕೂ ಹೆಚ್ಚಾಗಿದೆ. ಅವುಗಳಲ್ಲಿ ದ್ರಾವಿಡ ಭಾಷಾವರ್ಗಕ್ಕೆ ಸೇರಿದ

ಜನರ ಸಂಖ್ಯೆ ಸುಮಾರು ೧೩ಕೋಟಿ. ಆ ಸಂಖ್ಯೆಯಲ್ಲಿ ಕನ್ನಡವನ್ನು ಮಾತನಾಡುವವರ ಸಂಖ್ಯೆ ಸುಮಾರು ನಾಲ್ಕು ಕೋಟಿ.

ಭಾರತದ ಉತ್ತರ ಭಾಗದಲ್ಲಿ ಇಂಡೋಯುರೋಪಿಯನ್ ಗುಂಪಿಗೆ ಸೇರಿದ ಭಾಷೆಗಳ ಪ್ರಚಾರ ಅಧಿಕವಾಗಿದೆ. ದಕ್ಷಿಣ ಭಾರತದಲ್ಲಿ ದ್ರಾವಿಡ ಭಾಷೆಗಳ ಪ್ರಚಾರ ಹೆಚ್ಚು. ದ್ರಾವಿಡ ಭಾಷೆಯನ್ನು ಮಾತನಾಡುವವರಲ್ಲಿ ತೆಲುಗರ ಸಂಖ್ಯೆ ಹೆಚ್ಚು. ಆ ಬಳಿಕ ತಮಿಳರೂ ಆಮೇಲೆ ಕನ್ನಡಿಗರೂ ಬರುತ್ತಾರೆ. ನಾಲ್ಕನೆಯ ಸ್ಥಾನದಲ್ಲಿ ಮಲಯಾಳಿಗಳಿದ್ದಾರೆ. ತುಳು ಮಾತನಾಡುವವರು ಸುಮಾರು ಮೂವತ್ತು ಲಕ್ಷ ಇರಬಹುದು. ಹಿಂದೀ, ಬಂಗಾಳಿ, ಉರ್ದು, ಬಿಹಾರಿ, ಮರಾಠಿ, ಪಂಜಾಬಿ, ಗುಜರಾತಿ, ರಾಜಸ್ಥಾನಿ, ಒರಿಯ, ನೇಪಾಲಿ ಮತ್ತು ಕಾಶ್ಮೀರಿ ಭಾಷೆಗಳು ಉತ್ತರ ಭಾರತದಲ್ಲಿ ಹರಡಿಕೊಂಡಿವೆ. ದಕ್ಷಿಣದಲ್ಲಿರುವ ದ್ರಾವಿಡ ಭಾಷೆಗಳಲ್ಲದೆ ಇತರ ಕೆಲವು ದ್ರಾವಿಡ ವರ್ಗದ ಭಾಷೆಗಳೂ ಉತ್ತರದಲ್ಲಿ ಅಲ್ಲಲ್ಲಿ ಹುದುಗಿಕೊಂಡಿವೆ.

ಕನ್ನಡ ತುಂಬಾ ಪ್ರಾಚೀನವಾದ ಭಾಷೆ. ಕ್ರಿಸ್ತಪೂರ್ವ ಒಂದನೆಯ ಶತಮಾನದಲ್ಲಿಯೇ ಕನ್ನಡದ ಅಸ್ತಿತ್ವವಿತ್ತು ಎಂದು ಒಂದು ಪ್ರಾಚೀನ ಗ್ರೀಕ್ ಪ್ರಹಸನದ ಆಧಾರದ ಮೇಲೆ ವಾದಿಸುವವರಿದ್ದಾರೆ. ಆದರೆ ಖಚಿತವಾದ ಶಾಸನದ ಆಧಾರ ದೊರೆಯಬೇಕಾದರೆ ನಾವು ಕ್ರಿ.ಶ. ೪೫೦ರ ಹತ್ತಿರ ಬರಬೇಕು. ಹಲ್ಮಿಡಿಯ ಶಾಸನ ಕ್ರಿ.ಶ.೪೫೦ಕ್ಕೆ ಸೇರಿರುವದರಿಂದ ಅದಕ್ಕಿಂತ ಒಂದೆರಡು ಶತಮಾನಗಳಷ್ಟು ಹಿಂದಿನಿಂದ ಕನ್ನಡ ಆಡುಮಾತಾಗಿ ಇದ್ದಿರಬೇಕೆಂದು ಊಹಿಸಬಹುದು. ಈ ಭಾಷೆಯ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸುತ್ತಾರೆ. ೧.ಪೂರ್ವದ ಹಳಗನ್ನಡ ೨.ಹಳಗನ್ನಡ ೩. ನಡುಗನ್ನಡ ೪.. ಹೊಸಗನ್ನಡ/ಪೊಸಗನ್ನಡ. ಪೊಸಗನ್ನಡ ಎಂಬ ಶಬ್ದವು ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ.೧೧೧೨ರಲ್ಲಿಯೇ ದೊರಕುತ್ತದೆ. ಆದರೆ ಭಾಷೆ ನಿಜವಾಗಿ ಹೊಸತನವನ್ನು ಪಡೆಯುವುದು ೧೮ನೆಯ ಶತಮಾನದ ವೇಳೆಗೆ. ಹಿಂದಿನ ಶತಮಾನದ ಕೊನೆಯ ಕನ್ನಡವನ್ನೂ ಇಂದು ನಾವು ಆಡುವ, ಬರೆಯುವ ಕನ್ನಡವನ್ನೂ ಹೋಲಿಸಿದರೆ ಈಗಿನ ಕನ್ನಡವನ್ನು ಆಧುನಿಕ ಕನ್ನಡವೆಂದು ಬೇರೆಯ ಹೆಸರಿನಿಂದಲೇ ಕರೆಯಬೇಕು ಎಂದು ಅಭಿಪ್ರಾಯ ಬರುವಷ್ಟು ವ್ಯತ್ಯಾಸ ಕಂಡುಬರುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕನ್ನಡದಲ್ಲಿ ಕಂಡುಬರುವ ಆಧುನಿಕತೆ ಆಶ್ಚರ್ಯಕರವಾಗಿದೆ.

ಸ್ವಂತ ರಾಜ್ಯದ ಆಡಳಿತ, ವೈಜ್ಞಾನಿಕ ಕ್ಷೇತ್ರದ ಬೆಳವಣಿಗೆ, ಕೃಷಿ ಕ್ಷೇತ್ರದ ಸಂಶೋಧನೆಗಳು, ನ್ಯಾಯತೀರ್ಮಾನದಲ್ಲಿ ಕನ್ನಡದ ಬಳಕೆ, ಸ್ಥಳೀಯ ಸಮಿತಿಗಳ ಕಾರ್ಯಾಚರಣೆ, ಸೋದರ ಭಾಷೆಗಳ ಅಧಿಕವಾದ ಸಂಪರ್ಕ ಮುಂತಾಗಿ ಅನೇಕ ಒತ್ತಡಗಳು ಬಂದು ನಮ್ಮ ಭಾಷೆ ಶಕ್ತಿಯುತವಾಗಿ ಬೆಳೆದಿದೆ. ಚಾರಿತ್ರಿಕ ಕಾರಣಗಳಿಂದ ಕನ್ನಡಕ್ಕೆ ಬಂದು ಸೇರಿರುವ ಅರಬ್ಬಿ, ಪಾರಸಿ, ಉರ್ದು, ಹಿಂದೂಸ್ತಾನಿ, ಇಂಗ್ಲಿಷ್ ಮುಂತಾದ ಭಾಷೆಗಳ ಶಬ್ದಗಳ ಪ್ರಯೋಗ ಹೆಚ್ಚು ಅರ್ಥವತ್ತಾಗುತ್ತಿದೆ.

ಶಾತವಾಹನರ ಕಾಲದಿಂದ ಹಿಡಿದು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು - ಈ ಎಲ್ಲ ರಾಜರೂ ಕನ್ನಡದ ಸಂಸ್ಕೃತಿಯೂ ಭಾಷಾಸಾಹಿತ್ಯಗಳೂ ಅಭಿವೃದ್ಧಿ ಹೊಂದಲು ನೆರವು ನೀಡಿದ್ದಾರೆ. ಸಮಾಜದಲ್ಲಿ ಆಡುಮಾತಿಗೆ ಹೆಚ್ಚು ಅರ್ಥವಂತಿಕೆ ಉಂಟಾಗಿದೆ. ಕನ್ನಡ ಮಾಧ್ಯಮದ ಶಿಕ್ಷಣ, ಲೋಕವ್ಯವಹಾರದಲ್ಲಿ ಕನ್ನಡದ ವ್ಯಾಪಕವಾದ ಉಪಯೋಗ, ನಾಟ್ಯ, ಸಂಗೀತ, ಶಿಲ್ಪ, ಚಿತ್ರಕಲೆ ಮತ್ತು ಇತರ ಶಾಸ್ತ್ರಗಳ ಬಗ್ಗೆ ಕನ್ನಡದಲ್ಲಿ ಗ್ರಂಥಗಳ ರಚನೆ, ಅಕಾಡೆಮಿಗಳ ಕಾರ್ಯಕಲಾಪಗಳು ಇವುಗಳಿಂದ ಕನ್ನಡದ ಬೆಳವಣಿಗೆಗೆ ಒತ್ತು ಬಿದ್ದಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯಗಳ ಸಂಪರ್ಕ ಹೆಚ್ಚಾಗಿದೆ. ಗ್ರಂಥ ರಚನೆ ಹೆಚ್ಚಿದೆ. ಸೋದರ ಭಾಷೆಗಳಲ್ಲಿ ಕೊಡುಕೊಳ್ಳುವಿಕೆ ಅಧಿಕವಾಗಿದೆ. ವಿಚಾರ ಸಂಕಿರಣಗಳು ತಾಲ್ಲೂಕು ಮಟ್ಟವನ್ನು ಮುಟ್ಟಿವೆ. ಭವಿಷ್ಯ ಬಹಳ ಆಶಾದಾಯಕವಾಗಿದೆ.

ಈ ಹಿಂದೆ ಹೇಳಿದ ಎಲ್ಲ ವಿಷಯಗಳೂ ಸಾಮಾಜಿಕ ಭಾಷಾಶಾಸ್ತ್ರದ ವ್ಯಾಸಂಗಕ್ಕೆ ಒಳಪಡುವ ಅಭ್ಯಾಸ ಕ್ಷೇತ್ರಗಳು.

'ಇಗೋ ಕನ್ನಡ ' ನಿಘಂಟಿನಲ್ಲಿ ಆರಿಸಿರುವ ಶಬ್ದಗಳೂ, ಅವುಗಳ ವ್ಯುತ್ಪತ್ತಿ, ಅರ್ಥ ವಿಸ್ತಾರ, ಶಬ್ದ ಸ್ವರೂಪ, ರೂಢಿ ಪ್ರಯೋಗ ಇವುಗಳೂ ಸಾಮಾನ್ಯ ಜನಜೀವನಕ್ಕೆ ಸಂಬಂಧ ಪಟ್ಟವು. ಜನರು ಪ್ರಶ್ನೆಗಳನ್ನು ಕಳುಹಿಸಿದಾಗ ಅವನ್ನು ನಾನು ಮೂರು ವಿಧವಾಗಿ ವಿಂಗಡಿಸುತ್ತಿದ್ದೆ:

೧. ಆಸಕ್ತ ವಿದ್ವಾಂಸರಿಗೆ ತಲೆದೋರುವ ಪ್ರಶ್ನೆಗಳು

೨. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ತೋರುವ ಸಂಶಯಗಳು

೩. ಸಾಮಾನ್ಯ ಓದುಗರು ಎದುರಿಸುವ ಪ್ರಶ್ನೆಗಳು

ಇವಲ್ಲದೆ ಶಬ್ದಗಳ ಅರ್ಥವಿಶೇಷ, ಗಾದೆಗಳ ಅರ್ಥ, ಕವಿಪ್ರಯೋಗದ ಅಂತರಾರ್ಥ ಇತ್ಯಾದಿಗಳನ್ನು ಕುರಿತು ಈ ನಿಘಂಟಿನಲ್ಲಿ ವಿವರಿಸಿದ್ದೇನೆ.

ಇವುಗಳನ್ನು ದೃಷ್ಟಾಂತಪಡಿಸುವುದಕ್ಕಾಗಿ ಮೇಲಿನ ಮೂರು ವಿಭಾಗಗಳಲ್ಲಿ ನನಗೆ ಬಂದ ಕೆಲವು ಪ್ರಶ್ನೆಗಳನ್ನೂ ಅವುಗಳಿಗೆ ನಾನು ನೀಡಿದ ಮಾದರಿ ಉತ್ತರಗಳನ್ನೂ ಈ ಮುಂದೆ ನಿರೂಪಿಸುತ್ತೇನೆ.

I. ಆಸಕ್ತ ವಿದ್ವಾಂಸರ ಸಂದೇಹಗಳಿಗೆ ಉತ್ತರ

ಇಗೋ "ಇಗೋ ಕನ್ನಡ" ದಲ್ಲಿರುವ 'ಇಗೋ' ಶಬ್ದದ ಬಗ್ಗೆ ಪ್ರಶ್ನೆ ಮಾಡಿ ಇದು 'ಇಕ್ಕು' ಶಬ್ದದ ಕಡೆಯಿಂದ ಬಂದುದೆ? ಎಂದು ಕೇಳಿದ್ದಾರೆ ಒಬ್ಬ ವಿದ್ವಾಂಸರು.

ಹತ್ತಿರ ಇರುವ ವಸ್ತು ಅಥವಾ ವಿಷಯವನ್ನು ಕುರಿತು ಅದರ ಕಡೆಗೆ ಗಮನವನ್ನು ಸೆಳೆಯಲು ಕನ್ನಡದಲ್ಲಿ 'ಇದೆಕೊಳ್' ಎಂಬ ಮಾತನ್ನು ಉಪಯೋಗಿಸುತ್ತೇವೆ. ಆ ಸಮಾಸವು

‘ಇದೆ + ಕೊಳ್’ ಎಂಬೆರಡು ಶಬ್ದಗಳು ಸೇರಿ ಆಗಿದೆ. ಆದರೆ ಅದನ್ನು ಅವ್ಯಯವಾಗಿ ಉಪಯೋಗಿಸುತ್ತೇವೆ. ಈ ಶಬ್ದಪುಂಜಕ್ಕೆ ಅನೇಕ ಪರ್ಯಾಯ ರೂಪಗಳಿವೆ. ಇಕೊ, ಇಕೋ, ಇಕ್ಕೊ, ಇಕ್ಕೋ, ಇಗಾ, ಇಗೊ, ಇಗೋ, ಇದಕೊ, ಇದಕೋ, ಇದಿಕೊ, ಇದಿಗೊ, ಇದುಕೊ, ಇದುಗೋ, ಇದಕೊ, ಇದೆಕೋ, ಇದೆಗೋ - ಈ ಎಲ್ಲ ರೂಪಗಳಿಗೂ ಕನ್ನಡ ಸಾಹಿತ್ಯದಲ್ಲಿ ನಿದರ್ಶನಗಳಿವೆ. ಈ ಶಬ್ದಕ್ಕೂ ‘ಇಕ್ಕು’ ವಿಗೂ ಏನೂ ಸಂಬಂಧವಿಲ್ಲ. ಕನ್ನಡದ ಶಬ್ದ ಮತ್ತು ಅರ್ಥಗಳಲ್ಲಿ ಯಾವುವು ಸರಿ ಎಂಬುದರ ಕಡೆಗೆ ಆಸಕ್ತರ ಮನಸ್ಸನ್ನು ಸೆಳೆಯಲು, ಶಬ್ದದ ಈ ಎಲ್ಲ ರೂಪಗಳಲ್ಲಿ ನಾನು ಹೆಚ್ಚಾಗಿ ಉಪಯೋಗಿಸುವುದನ್ನು ಆರಿಸಿದ್ದೇನೆ. ಅದೇ ಇಗೋ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ೧೮೯೫ ರಲ್ಲಿ ಪಟ್ಟಾಭಿಷೇಕವಾದಾಗ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಹೊಸದುರ್ಗದ ಗಿರಿಯಪ್ಪನವರಿಗೆ ಕಳುಹಿಸಿದ್ದ ಆಹ್ವಾನದ ಈ ಪತ್ರದಲ್ಲಿರುವ ಮೇಲುಭಾಗದ ಮುದ್ರೆಯ ಅರ್ಥವೇನು ಎಂದು ಅವರ ವಂಶಸ್ಥರು ಪತ್ರವನ್ನು ಬರೆದು ಕೇಳಿದ್ದರು.

ಈ ಮುದ್ರೆಯಲ್ಲಿರುವ ಭಾಷೆ ಯಾವುದು? ಮೈಸೂರು ಒಡೆಯರು ಈ ಮುದ್ರೆಯನ್ನು ಯಾತಕ್ಕೆ ಉಪಯೋಗಿಸುತ್ತಿದ್ದರು?



ಈ ಮುದ್ರೆಯಲ್ಲಿರುವುದು ಅರಬ್ಬಿ ಭಾಷೆಯಲ್ಲಿದೆ. ‘ಅಹ್ಮದ್ ಶಾಹಿ, ರಾಜ ಚಿಕ್ಕದೇವ ಯುವರಾಜ’ ಎಂದಿದೆ. ಕೆಳಗಡೆ ಹಿಜರಿ ಶಕ ೧೧೬೨ರ ಗುರುತು ಇದೆ. ಅಂದರೆ ಕ್ರಿ.ಶ.೧೭೪೨ ಆಗುತ್ತದೆ. ಈ ಸಮಯದಲ್ಲಿ ಮೈಸೂರು ಅರಸರು ಸ್ವತಂತ್ರರಾಗಿರಲಿಲ್ಲ. ಅವರು ಮೊಘಲರ ರಾಜರಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಬೀದರಿನ ಅಹಮ್ಮದ್ ಶಾಹಿಯ ಅಧಿಕಾರಿಗಳೂ ಮರಾಠರೂ ಮೈಸೂರು ಸಂಸ್ಥಾನದ ಕೆಲವು ಭಾಗಗಳಲ್ಲಿ ಸ್ವಂತವಾಗಿ ಕಂದಾಯವನ್ನು ವಸೂಲು ಮಾಡುತ್ತಿದ್ದರು. ಮೈಸೂರು ಅರಸರು ಅಹ್ಮದ್ ಶಾಹಿಗೆ ಒಳಗಾಗಿದ್ದಾರೆಂಬ ವಿಚಾರವನ್ನು

ಈ ಮುದ್ರೆ ಸ್ಪಷ್ಟಪಡಿಸುತ್ತದೆ. ಈ ಬಗ್ಗೆ ಈ ಹಿಂದಿನ ಮಿಥಿಕ್ ಸೊಸೈಟಿಯ ಪತ್ರಿಕೆಯಲ್ಲಿ ಪ್ರಕಟವಾದ ಒಂದೆರಡು ಲೇಖನಗಳು ಇತರ ಅನೇಕ ವಿವರಗಳನ್ನು ನೀಡುತ್ತವೆ. ಅವನ್ನು ಓದಿ ತಿಳಿಯಬೇಕು. ನಮ್ಮ ಚರಿತ್ರೆಯ ಬಗ್ಗೆ, ಒಂದು ಹಳೆಯ ದಾಖಲೆ ವಿಚಾರವನ್ನು ಸ್ಪಷ್ಟಗೊಳಿಸುತ್ತದೆ ಎನ್ನುವುದಕ್ಕೆ ಇದೊಂದು ಒಳ್ಳೆಯ ಉದಾಹರಣೆ.

ಈ ವಚನದ ಅರ್ಥವೇನು?

ಆಡಾದನಾ ಅಜನು ಕೋಡಗಾದನು ಹರಿಯು
ನೋಡಿದರೆ ಶಿವನು ನರಿಯಾದನೀ ಬೆಡಗ
ರೂಢಿಯೊಳು ಬಲ್ಲವರು ಹೇಳಿ ಸರ್ವಜ್ಞ

ಇದೊಂದು ರೀತಿಯ ಪ್ರಹೇಳಿಕೆ. ಅರ್ಥದಲ್ಲಿ ಸ್ವಾರಸ್ಯವಿರುವ ಒಂದು ಪದ್ಯ. ಅಜ = ಬ್ರಹ್ಮ, ಹರಿ = ವಿಷ್ಣು, ಶಿವ = ಈಶ್ವರ. ಈ ಮೂವರೂ ದೇವತೆಗಳು. ಯಾವುದೋ ಕಾರಣದಿಂದ ಬ್ರಹ್ಮನು ಆಡಾಗಿಯೂ, ಹರಿಯು ಕೋತಿಯಾಗಿಯೂ, ಈಶ್ವರನು ನರಿಯಾಗಿಯೂ ಕಾಣಬರುತ್ತಾರೆ. ಇದೇ ಸಮಸ್ಯೆ. ಹೇಗೆ ಇದಕ್ಕೆ ಪರಿಹಾರ ? ಎಂಬುದು ಪ್ರಶ್ನೆ. ಇದರಲ್ಲಿ ಶ್ಲೇಷೆ ಎಂಬ ಅಲಂಕಾರವಿದೆ. ಸಂಸ್ಕೃತದಲ್ಲಿ ಅಜ ಎಂಬ ಶಬ್ದಕ್ಕೆ ಆಡು ಎಂಬ ಅರ್ಥವಿದೆ. ಅದಕ್ಕೆ ಬ್ರಹ್ಮ ಎಂಬ ಅರ್ಥವೂ ಇದೆ. ಇತರ ಅರ್ಥಗಳೂ ಇವೆ. ಪದ್ಯಕ್ಕೆ ಅವು ನಮಗೆ ಮುಖ್ಯವಲ್ಲ. ಹೀಗೆ ಶ್ಲೇಷಾರ್ಥ ಅಂದರೆ ಎರಡರ್ಥ ಇರುವುದರಿಂದ ಬ್ರಹ್ಮನು ಆಡಾದ ಹಾಗಾಯಿತು. ಹೀಗೆಯೆ ಹರಿ ಎಂಬ ಶಬ್ದಕ್ಕೆ ಕಪಿ ಎಂಬ ಅರ್ಥವಿದೆ. ಆದುದರಿಂದ ವಿಷ್ಣು ಕಪಿಯಾದ. ಶಿವ ಶಬ್ದಕ್ಕೆ ನರಿ ಎಂಬ ಈ ಅರ್ಥವಿಲ್ಲ. ಆದರೆ ಶಿವಾ ಎಂಬ ಶಬ್ದಕ್ಕೆ ಹೆಣ್ಣುನರಿ ಎಂಬ ಅರ್ಥವಿದೆ. ಸರ್ವಜ್ಞ ಶಿವಾ ಶಬ್ದವನ್ನು ತದ್ಭವ ಮಾಡಿಕೊಂಡು ಶಿವ ಮಾಡಿಕೊಂಡು ಆ ಬಳಿಕ ಅದಕ್ಕೆ ಎರಡು ಅರ್ಥಗಳಿವೆ ಎಂದು ಈ ಪದ್ಯದಲ್ಲಿ ಸೇರಿಸಿದ. ಇದೇ ಇಲ್ಲಿರುವ ಚಮತ್ಕಾರ.

ಕುಮಾರವ್ಯಾಸನ ಒಂದು ಪದ್ಯದ ಸ್ವಾರಸ್ಯದ ವಿವರಣೆಯನ್ನು ಕೇಳಿದ್ದಾರೆ. ಆ ಪದ್ಯ ಹೀಗಿದೆ:

ಫಲಕುಜದ ಪಲ್ಲವದ ಪದ ಕರ
ತಳದ ವಿಪುಲ ತಮಾಲ ಪತ್ರದ
ಲಲಿತ ಕೇತಕಿನಖದ ದಾಡಿಮದಂತಪಂಕ್ತಿಗಳ
ನಳಿನನಯನದ ಮಧುಪಕುಲ ಕುಂ
ತಳದ ವನಸಿರಿ ಸವತಿಯಾದಳು
ಜಲಜಮುಖಿ ಪಾಂಚಾಲೆಗೆಂದನು ಧೌಮ್ಯಮುನಿ ನಗುತ ॥

ಸಭಾಪರ್ವ: ೧೬-೬೪

ಈ ಪದ್ಯದಲ್ಲಿ ಒಂದು ಅಕ್ಷರವು ತಪ್ಪಾಗಿ ಮುದ್ರಿತವಾಗಿರುವುದರಿಂದ ಸ್ವಲ್ಪ ಅನುಮಾನ ಬರಬಹುದು. ಮರುಜೂಜಿನಲ್ಲಿ ಧರ್ಮರಾಯನು ಸೋತಾಗ ಧೌಮ್ಯಋಷಿ ಆಡಿದ ಮಾತು ಈ ಪದ್ಯದಲ್ಲಿದೆ. ಪಾಂಚಾಲೆಗೆ ವನಲಕ್ಷ್ಮಿಯು ಸವತಿಯಾದಳು ಎಂದು ಅಪಹಾಸ್ಯದ ಮಾತನ್ನು ರೂಪಕಾಲಂಕಾರದಿಂದ ಕವಿಯು ವರ್ಣಿಸಿ ಧೌಮ್ಯನ ಬಾಯಿಯಲ್ಲಿ ನುಡಿಸಿದ್ದಾನೆ.

ಈ ಪದ್ಯದಲ್ಲಿ ಮೊದಲ ಪದ **ಫಲಕುಚದ** ಎಂದಿರಬೇಕು. ಕಾಡಿನ ಒಂದೊಂದು ಸಿರಿಯೂ ಪಾಂಚಾಲೆಯ ಸಿರಿಗೆ ರೂಪಕವಾಗಿದೆ. ಈ ಪದ್ಯದಲ್ಲಿ ವನಸಿರಿಗೆ = ವನಲಕ್ಷ್ಮಿಗೆ ಮರಗಳ ಹಣ್ಣೇ ಮೊಲೆಗಳು. ಚಿಗುರೇ ಅಂಗಾಲು ಅಂಗೈಗಳು. ಹೊಂಗೆಯ ಸೊಗಸಾದ ಎಲೆಯೇ ಸ್ತ್ರೀಯರ ಕೆನ್ನೆಯ ಮೇಲೆ ರಂಜಿಸುವ ಮಕರಿಕಾ ಪತ್ರ: ಲಲಿತಾಕಾರದ ತಾಳೆಯ ಹೂವೇ ಉಗುರುಗಳು, ದಾಳಿಂಬವೇ ಹಲ್ಲಿನ ಸಾಲು, ಕಮಲವೇ ಕಣ್ಣು, ತುಂಬಿಗಳ ಸಮೂಹವೇ ಕೇಶರಾಶಿ; ಹೀಗೆ ಸುಂದರಿಯಾಗಿರುವ ವನಲಕ್ಷ್ಮಿಯು ದ್ರೌಪದಿಗೆ ಸವತಿಯಾದಳು — ಪಾಂಡವರಿಗೆ ಮತ್ತೊಬ್ಬ ಪತ್ನಿಯಾದಳು ಎಂದು ನಗುತ್ತಾ ಹಾಸ್ಯ ಮಾಡುತ್ತಾನೆ.

ಇದೇ ಈ ಪದ್ಯದ ಅರ್ಥ. ಕುಮಾರವ್ಯಾಸನು ಧೌಮ್ಯನ ಕೈಯಲ್ಲಿ ಈ ಮಾತನ್ನು ಏಕೆ ಹೇಳಿಸಿದ ಎಂಬುದರ ಸಾರ್ಥಕ್ಯದ ಮಾತು ಬೇರೆಯ ವಿಚಾರಕ್ಕೆ ಸೇರಿದ್ದು!

ಇದರ ಅರ್ಥವೇನು ?

ಕುಲದವನ ಹೃದಯಾಂಧಕಾರವ
ಕಳಚಲೆಂದು ಹಿಮಾಂಶು ಹರಹಿದ
ನೆಳೆಯ ಬೆಳುದಿಂಗಳನೆನಲು ಸುರರಿಪು ಕುಲಾಂತಕನು ನುಡಿದನು.

ಉದ್ಯೋಗ ಪರ್ವ: ೮- ೭೨

ಕೃಷ್ಣಸಂಧಾನದಲ್ಲಿ ಕೌರವನ ಸಭೆಯಲ್ಲಿ ಮಾತನಾಡಲು ಮೊದಲು ಮಾಡಿದಾಗ ಹೇಗಿತ್ತು ಕೃಷ್ಣನ ಭಾವ ಎಂಬುದನ್ನು ತಿಳಿಸಿದ್ದಾನೆ ಕವಿ.

ದುರ್ಯೋಧನನು ಚಂದ್ರವಂಶದ ದೊರೆ. ಅವನ ಅಂತರಂಗ ತಮೋಗುಣದಿಂದ ತುಂಬಿದೆ. ಅದು ಕತ್ತಲೆಯಿಂದ ತುಂಬಿದಂತಿದೆ. ಅಲ್ಲಿಗೆ ಬೆಳಕನ್ನು ಬೀರಿ ಜ್ಞಾನವೆಂಬ ಜ್ಯೋತಿಯನ್ನು ಪ್ರಖರಗೊಳಿಸಲು ತನ್ನ ಕುಲದವನಲ್ಲವೇ ಎಂಬ ಆತ್ಮೀಯತೆಯಿಂದ ಚಂದ್ರನೇ ಬೆಳದಿಂಗಳನ್ನು ಹರಡಿದನೋ ಎನ್ನುವಂತೆ ಕೃಷ್ಣನು ತನ್ನ ಹಲ್ಲುಗಳ ಕಾಂತಿ ಹೊರಹೊಮ್ಮುವಂತೆ ನಗುಮುಖದಿಂದ ಮಾತನಾಡಿದನು.

ಇದು ಇಲ್ಲಿರುವ ಅರ್ಥ. ಕುಲದವನ ಎಂದರೆ ದುರ್ಯೋಧನನ ಎಂದರ್ಥ.

ಈ ಪದ್ಯದ ಅನ್ವಯ ಹೇಗೆ ?

ಶರನಿಧಿಯ ವಡಬಾನಳದ ದ
ಳ್ಳುರಿಯ ವರ್ಮವ ತಿವಿವ ತುಂಬಿಗೆ
ಮರಳುದಲೆಯುಂಟಾದಡದು ಭವಭವದ ಪುಣ್ಯಫಲ ॥

ದ್ರೋಣಪರ್ವ: ೫-೪೬

ಈ ಪದ್ಯದಲ್ಲಿ ಧರ್ಮರಾಯನು ಅಭಿಮನ್ಯುವಿಗೆ ಪದ್ಮವ್ಯೂಹದ ಭೇದನಕ್ಕೆ ಅನುಮತಿ ಕೊಟ್ಟು ಅವನನ್ನು ಕಳುಹಿಸುವಾಗ ಆಡುವ ಮಾತುಗಳು ಇವೆ. ಪದ್ಮವ್ಯೂಹದ ಭೇದವು ಅಭಿಮನ್ಯುವಿಗೆ ಕಷ್ಟಸಾಧ್ಯವೆಂದು ಧರ್ಮರಾಯನಿಗೂ ಗೊತ್ತು. ಆದುದರಿಂದಲೇ ಈ ಮೇಲಿನ

ಪದ್ಯಭಾಗದಲ್ಲಿರುವ ಮಾತುಗಳನ್ನು ತನ್ನಲ್ಲಿ ಹೇಳಿಕೊಂಡು ಬಹಿರಂಗವಾಗಿ 'ನೀನು ಶತ್ರುದಳವನ್ನು ತುಂಡು ಮಾಡಲು ಹೊರಡು. ನಾನು ಸೈನ್ಯ ಸಮೇತನಾಗಿ ಬರುತ್ತೇನೆ' ಎನ್ನುತ್ತಾನೆ.

ಈಗ ಮೇಲಿನ ಮೂರು ಸಾಲುಗಳ ಅರ್ಥವನ್ನು ನೋಡೋಣ. ಸಮುದ್ರ ಮಧ್ಯದಲ್ಲಿ ವಡಬಾನಳ ಎಂದರೆ ವಡಬ, ಬಡಬ ಎಂಬ ಅಗ್ನಿ ಹುದುಗಿದೆ. ಸಮುದ್ರದಲ್ಲಿ ಅದು ದಳ್ಳುರಿಯಾದರೂ ನೀರಿನ ಮಧ್ಯದಲ್ಲಿ ಇದೆ. ನೀರೆ ಅದಕ್ಕೆ ಕವಚದಂತಿದೆ. ನೀರಿನಲ್ಲಿ ಬೆಳೆಯುವ ಕಮಲದಲ್ಲಿ ಸುಖಪಡುವ ತುಂಬಿ ಇಂಥ ದಳ್ಳುರಿಯ ಬಳಿಗೆ ನುಗ್ಗಿ ಅದರ ವರ್ಮವನ್ನು ಎಂದರೆ ಕವಚವನ್ನು ತಿವಿದರೆ ಎಂದರೆ ಕೆಣಕಿದರೆ ತುಂಬಿಗೆ ಮರಳುದಲೆ = ಹಿಂದಿರುಗುವಿಕೆ ಸಾಧ್ಯವೆ ? ಹಾಗೆ ಬಂದರೆ ಅದು ಜನ್ಮಜನ್ಮಾಂತರಗಳ ಪುಣ್ಯ. ಇದು ಇಲ್ಲಿರುವ ಭಾವ. ಮರಳು ಎಂದರೆ ಹಿಂದಿರುಗು. ಈ ಶಬ್ದಕ್ಕೆ **ದಲೆ** ಎಂಬ ನಾಮಪ್ರತ್ಯಯವು ಹತ್ತಿದರೆ ಅದು **ಮರಳುದಲೆ** ಎಂದು ನಾಮಪದವಾಗುತ್ತದೆ. ತವು + ದಲೆ = ತವುದಲೆ ಎಂದು ಆಗುವ ಹಾಗೆ. ತವು = ನಾಶವಾಗು, ತವುದಲೆ = ನಾಶ. ಈ ಪದ್ಯದಲ್ಲಿ 'ಧರ್ಮರಾಯನ ಮನಸ್ಸಿನಲ್ಲಿ ಅಭಿಮನ್ಯು ಹಿಂದಿರುಗಲಾರ ಎಂಬ ಅಭಿಪ್ರಾಯವಿದೆ' ಎಂಬುದನ್ನು ಕವಿ ಸೂಚಿಸುತ್ತಿದ್ದಾನೆ.

ದಂಡಂ ದಶಗುಣಂ ಭವೇತ್ — ಇದರ ಅರ್ಥವೇನು?

ಈ ವಾಕ್ಯದಲ್ಲಿ ದಶಗುಣ ಎಂಬ ಶಬ್ದವಿದೆ. ಸಂಸ್ಕೃತದಲ್ಲಿ ಗುಣಗಳ ಸಂಖ್ಯೆ ಅನೇಕವಾಗಿವೆ. ೩ ರಿಂದ ಹಿಡಿದು ೪೬ ರವರೆಗೆ ಇವೆ ಎಂದು ನಿಘಂಟುಗಳು ಹೇಳುತ್ತವೆ. ಆದರೆ ಮೇಲಿನ ಮಾತಿನಲ್ಲಿ ಅದಾವುದೂ ಗಮನದಲ್ಲಿಲ್ಲ. ಬುದ್ಧಿಯ ಮಾತಿನಿಂದ ಆಗದ ಕೆಲಸ ಶಿಕ್ಷೆಯಿಂದ ಆಗುತ್ತದೆ ಎಂಬ ಪ್ರಾಚೀನ ನಂಬಿಕೆಯನ್ನು ಅದು ಸೂಚಿಸುತ್ತದೆ ಅಷ್ಟೆ.

ಇತರ ವಿವರಗಳಿಗೆ ಈ ವಾಕ್ಯಭಾಗ ಬರುವ ಶ್ಲೋಕವನ್ನೇ ಪರಿಚಯ ಮಾಡಿಕೊಳ್ಳಬೇಕು. ಆ ಶ್ಲೋಕದ ಸ್ವರೂಪ ನನಗೆ ನೆನಪಿರುವಂತೆ ಹೀಗಿದೆ:

ವಿಶ್ವಾಮಿತ್ರಾಹಿ ಪಶ್ವಾದೌ ಕರ್ದಮೇಷು ಜಲೇಷುಚ
ಅಂಧೇ ತಮಸಿ ವಾರ್ಧಕ್ಯೇ ದಂಡೋ ದಶಗುಣೋ ಭವೇತ್

ದಂಡ ಶಬ್ದವು ಪುಲ್ಲಿಂಗವಾದರೆ ಶ್ಲೋಕ ಹೀಗೆಯೇ ಇರುತ್ತದೆ. ದಂಡ ಶಬ್ದವನ್ನು ನಪುಂಸಕ ಲಿಂಗವಾಗಿ ಉಪಯೋಗಿಸಿದರೆ ಆಗ ಅದು 'ದಂಡಂ ದಶಗುಣಂ ಭವೇತ್' ಎಂದು ರೂಪವನ್ನು ತಾಳುತ್ತದೆ. ಈ ಶ್ಲೋಕದಲ್ಲಿ ಹಕ್ಕಿ, ನಾಯಿ, ಶತ್ರು, ಹಾವು, ಪಶು ಇವುಗಳನ್ನು ಓಡಿಸಲು ಸಹಾಯಕವಾಗಿರುವ ಮತ್ತು ಕೆಸರು, ನೀರು, ಕುರುಡು, ಕತ್ತಲೆ, ಮುಪ್ಪು ಇವುಗಳಲ್ಲಿ ಸಹಾಯಕವಾಗಿರುವ ಗುಣವನ್ನು ಹೊಂದಿ ದಂಡವು ದಶಗುಣ ಸಹಿತವಾಗುತ್ತದೆ. ಎಂದು ಅರ್ಥ.

ಆದರೆ ಕನ್ನಡದಲ್ಲಿ ಯಾರೂ ಈ ಅರ್ಥದಲ್ಲಿ ಆ ಶ್ಲೋಕ ಭಾಗವನ್ನು ಉಪಯೋಗಿಸುವುದಿಲ್ಲ. ನಾನು ಹೇಳಿರುವ ಅರ್ಥದಲ್ಲಿ ಮಾತ್ರ ಅದು ಉಪಯೋಗವಾಗುತ್ತಿದೆ. ಈ ಬಗ್ಗೆ ಸ್ವಲ್ಪ ವಿವರವನ್ನು ನೀಡುತ್ತೇನೆ.

'ಸಾಮಾಜಿಕ ಭಾಷಾಶಾಸ್ತ್ರ ' ದಲ್ಲಿ ಸಮಾಜದಲ್ಲಿ ಪ್ರಯೋಗದಲ್ಲಿರುವ, ಹೊಸದಾಗಿ ಪ್ರಯೋಗವಾಗುವ ಭಾಷಾ ಸ್ವರೂಪದ ಬಗ್ಗೆ ಸಂಶೋಧನೆಗೆ ಪ್ರಾಧಾನ್ಯವಿದೆ. ಒಂದು ಭಾಷೆಯನ್ನು ಉಪಯೋಗಿಸುವ ಪ್ರತಿಯೊಬ್ಬನೂ ತಾನು ವಾಸಿಸುವ ಸಮಾಜದ ಭಾಗವಾಗಿ ಉಪಭಾಷೆಯನ್ನೋ ವ್ಯಕ್ತಿ ಭಾಷೆಯನ್ನೋ ಪ್ರಯೋಗಿಸುತ್ತಾನೆ. ಹಾಗೆ ಅವನಾಡುವ ಭಾಷೆಯಲ್ಲಿ ಅವನ ಪರಿಸರವು ಪ್ರತಿಬಿಂಬಿತವಾಗುತ್ತದೆ. ಹೀಗೆ ಪ್ರತಿಬಿಂಬಿತವಾಗುವ ಅರ್ಥಗಳನ್ನು ಗಮನಿಸಿ ಶಬ್ದಗಳ, ವಾಕ್ಯಭಾಗಗಳ, ಗಾದೆ ಮಾತುಗಳ ಅರ್ಥವಿಶೇಷವನ್ನು ವಿವರಿಸುವುದು ಈ ನಿಘಂಟಿನ ಮುಖ್ಯ ಉದ್ದೇಶಗಳಲ್ಲಿ ಒಂದು. ಈ ದೃಷ್ಟಿಯಿಂದ ಕನ್ನಡದಲ್ಲಿ ದಂಡಂ ದಶಗುಣಂ ಭವೇತ್ ಎಂಬ ಮಾತಿಗೆ ನಾನು ಹೇಳಿರುವ ಅರ್ಥವೇ ಪ್ರಯೋಗದಲ್ಲಿರುವ ಅರ್ಥ. ಮೇಲಿನ ಶ್ಲೋಕದ ಅರ್ಥವನ್ನು ನಾವು ಎಷ್ಟು ಸಲ ಹೇಳಿದರೂ ಗಾದೆ ಮಾತಿನ ಅರ್ಥ ಪ್ರಯೋಗ ತಪ್ಪುವುದಿಲ್ಲ. ಹೀಗೆ ಕನ್ನಡದಲ್ಲಿ ನೆಲೆನಿಂತ ಅರ್ಥ ಪ್ರಯೋಗವನ್ನು ನಾವು ನಿರಾಕರಿಸ ಲಾಗುವುದಿಲ್ಲ.

ನಂದೋರಾಜಾ ಭವಿಷ್ಯತಿ, ಯದ್ಭವಿಷ್ಯ, ವಾಚಾಮಗೋಚರ, ಅಟಾಟೋಪ, ತಂಚಾವಂಚ, ವೈದೀಕ, ಛಾನಸ, ಕಾಯಾವಾಚಾಮನಸಾ ಮುಂತಾದ ಶಬ್ದಗಳ, ಶಬ್ದಪುಂಜಗಳ ಅರ್ಥಗಳನ್ನೂ ಅವುಗಳ ಮೂಲಪ್ರಯೋಗವನ್ನೂ ಪರಿಶೀಲಿಸಿದರೆ ನನ್ನ ಅಭಿಪ್ರಾಯದ ಬಗ್ಗೆ ವಿಶ್ವಾಸ ಬರಬಹುದು. ಹೀಗೆಯೇ ಕನ್ನಡದಲ್ಲಿ ಸಂಸ್ಕೃತದ ಅನೇಕ ಪ್ರಯೋಗಗಳಿಗೆ ಬೇರೆ ಬೇರೆ ಅರ್ಥದಲ್ಲಿಯೇ ಔಚಿತ್ಯ ಹೆಚ್ಚು. ಲೋಕಾಭಿರಾಮವಾದ ಮಾತಿನಲ್ಲಿ **ಅಂಗವಸ್ತ್ರ=ಉಪಪತ್ನಿ, ಪಟ್ಟಾಭಿಷೇಕ=ಕ್ಷೌರ, ಭಗವದ್ಗೀತಾ ಪಾರಾಯಣ=ಇಸ್ಪೀಟಾಟ**, ಇತ್ಯಾದಿ.

ಹೀಗೆ ಅರ್ಥ ಮಾಡುವವರು ಯಾವ ಕಾರಣಕ್ಕಾಗಿ ಹಾಗೆ ಅರ್ಥ ಸ್ವಾರಸ್ಯವನ್ನು ಸೃಷ್ಟಿಸುತ್ತಾರೆ ಎಂಬುದು ನಮ್ಮ ಭಾಷಾಭ್ಯಾಸದ ಒಂದು ಅಂಶ.

ಈ ಬಗೆಯ ಅಭ್ಯಾಸ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ವ್ಯಾಸಂಗಕ್ಕೆ ಅವಕಾಶವನ್ನು ಮಾಡಿಕೊಟ್ಟಿದೆ. ಅನೇಕ ಹಿರಿಯ ಭಾಷಾಶಾಸ್ತ್ರಿಗಳು ಈ ವ್ಯಾಸಂಗದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಅಪರೂಪ, ಪ್ರಸ್ತಾಪ ಎಂಬ ಶಬ್ದರೂಪಗಳಿವೆ. ಅವಸರ ಶಬ್ದಕ್ಕೆ ಸಂಸ್ಕೃತದ ಅರ್ಥ ಕನ್ನಡದಲ್ಲಿ ಸಾಮಾನ್ಯರಿಗೆ ಯಾರಿಗೂ ತಿಳಿದಿಲ್ಲ. ಆದುದರಿಂದ ಈಗ ಸಾಮಾನ್ಯರು ಯಾವ ಅರ್ಥದಲ್ಲಿ ಉಪಯೋಗಿಸುತ್ತಾರೋ ಆ ಅರ್ಥವನ್ನು ತಪ್ಪೆಂದು ಹೇಳಲಾಗುವುದಿಲ್ಲ. ಅದು ಒಂದು ವಿಧವಾದ ಬೆಳವಣಿಗೆ (Development). ಬಳಿಕ ಅಗತ್ಯ ಬಿದ್ದರೆ ಈ ಶಬ್ದ ಪುಂಜಗಳ ಮೂಲವನ್ನು ಸಂಶೋಧನೆ ಮಾಡಿ ಹೊಸ ಅರ್ಥವು ಹುಟ್ಟಿಕೊಂಡ ಬಗೆಯನ್ನೂ ಅದಕ್ಕೆ ಕಾರಣಗಳನ್ನೂ ವಿಶ್ಲೇಷಿಸಬಹುದು. ಯಥಾಶಕ್ತಿ ನಾನು ಆ ಕೆಲಸವನ್ನು ಮಾಡುತ್ತೇನೆ.

ಕನ್ನಡದಲ್ಲಿ ಇಂಥ ಕೆಲವು ವಾಕ್ಯಗಳೇ ಅಲ್ಲ, ಅನೇಕ ಅಶುದ್ಧ ರೂಪಗಳು ನೆಲೆನಿಂತಿವೆ. ಅವುಗಳನ್ನು ಕದಲಿಸುವುದಕ್ಕಾಗದ ಹಾಗೆ ಅವು ಭದ್ರವಾಗಿ ನಿಂತಿವೆ. ಇಂಥ ಅರ್ಥಗಳನ್ನು ಭಾಷಾಶಾಸ್ತ್ರದಲ್ಲಿ ಅರ್ಥಗಳು ಬೆಳೆದ ರೀತಿ ಎಂದು ಒಪ್ಪಿಕೊಳ್ಳುತ್ತಾರೆ.

ಕನ್ನಡ ಭಾಷೆಗೆ ಪಾರಸೀ, ಅರಾಬಿಕ್ ಭಾಷೆಯ ಶಬ್ದಗಳು ಏಕೆ ಬಂದವು ? ಹಿಂದೆ ಇದ್ದ ಕನ್ನಡ ಶಬ್ದಗಳನ್ನು ಏತಕ್ಕಾಗಿ ಕೈಬಿಟ್ಟರು ?

ಇದು ನಿಜವಾಗಿ ವಿಷಯಗಳನ್ನು ಆಳವಾಗಿ ತಿಳಿಯಬೇಕೆನ್ನುವವರು ಕೇಳುವ ಪ್ರಶ್ನೆ. ಇದಕ್ಕೆ ಸ್ವಲ್ಪ ವಿಸ್ತಾರವಾಗಿ ಉತ್ತರವನ್ನು ಕೊಡುತ್ತೇನೆ.

ಯಾವ ಜೀವಂತ ಭಾಷೆಯೂ ಇತರ ಭಾಷೆಗಳ ಸಂಸರ್ಗದಿಂದ ದೂರವಿರುವುದು ಸಾಧ್ಯವಿಲ್ಲ. ಎಲ್ಲ ಭಾಷೆಗಳಲ್ಲಿಯೂ ಬೇರೆ ಬೇರೆ ಭಾಷೆಗಳಿಂದ ಬಂದು ಸೇರಿರುವ ಶಬ್ದಗಳಿರುತ್ತವೆ. ಕನ್ನಡಕ್ಕೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಬಂದು ಸೇರಿರುವ ಶಬ್ದಗಳ ಸಂಖ್ಯೆ ಅಪಾರವಾಗಿದೆ. ಪಾರಸಿ ಮತ್ತು ಅರಬ್ಬಿ ಭಾಷೆಗಳಿಂದ ಸುಮಾರು ಒಂದು ಸಾವಿರ ಶಬ್ದಗಳು ಬಂದಿವೆ.

ಪಾರಸಿ ಮತ್ತು ಅರಬ್ಬಿ ಶಬ್ದಗಳು ಕನ್ನಡಕ್ಕೆ ಬಂದು ಸೇರಲು ಭಾರತದಲ್ಲಿ ಮಹಮ್ಮದೀಯರ ಆಡಳಿತವಿದ್ದು ಅವರ ಭಾಷೆಯಲ್ಲಿ ಸರಕಾರ ವ್ಯವಹಾರ ಮಾಡುತ್ತಿದ್ದುದೇ ಮುಖ್ಯ ಕಾರಣ.

ಇತರ ಭಾಷೆಗಳ ಶಬ್ದಗಳೇ ಬೇಡವೆಂಬ ಮಡಿವಂತಿಕೆ ಕೆಲವರಿಗೆ ಈಗಲೂ ಇದೆ. ಹಿಂದೆ ಕನ್ನಡದಲ್ಲಿ ಆಂಡಯ್ಯನೆಂಬ ಒಬ್ಬ ಕವಿ ಸಂಸ್ಕೃತ ಶಬ್ದವೇ ಬೇಡ. ಅವುಗಳನ್ನು ತದ್ಭವ ಮಾಡಿಕೊಂಡೇ ಕಾವ್ಯ ಬರೆಯುತ್ತೇನೆಂಬ ಶಪಥ ಮಾಡಿ **'ಕಬ್ಬಿಗರ ಕಾವ'** ಎಂಬ ಗ್ರಂಥವನ್ನು ಬರೆದಿದ್ದಾನೆ. ಆದರೆ ಅದನ್ನು ಓದುವುದೇ ಕಷ್ಟ, ಸಾಮಾನ್ಯರಿಗೆ.

ನಾವು ಒಂದು ಮುಖ್ಯ ಅಂಶವನ್ನು ನೆನಪಿಡಬೇಕು. ಯಾವ ಜನಾಂಗವೂ ತನ್ನದೇ ಆದ ಒಂದು ದ್ವೀಪವನ್ನು ಕಲ್ಪಿಸಿಕೊಂಡು ಅಲ್ಲಿ ಬಾಳುವುದು ಅಸಾಧ್ಯ. ಎರಡು ಭಾಷೆಗಳು ಅಕ್ಕಪಕ್ಕದಲ್ಲಿ ಪ್ರಚಾರದಲ್ಲಿದ್ದರೆ ಎರಡೂ ಕಡೆಗೆ ಶಬ್ದಗಳು ಹೋಗಿ ಸೇರುತ್ತವೆ. ಇವುಗಳನ್ನು ಎರವಲು ಶಬ್ದಗಳು ಎಂದು ಕರೆಯುತ್ತಾರೆ. ಕೆಲವು ಸಲ ಶಬ್ದಗಳು ಮೂಲ ರೂಪದಲ್ಲಿಯೇ ಸೇರುತ್ತವೆ. ಇನ್ನು ಕೆಲವು ಸಲ ನಮ್ಮಲ್ಲಿರುವ ಶಬ್ದ ಬೇರೆ ಭಾಷೆಯ ಶಬ್ದ ಎರಡೂ ಒಂದೇ ಅರ್ಥವಾಗಿದ್ದರೆ ಅವೆರಡೂ ಸೇರಿ ಜೋಡಿ ಶಬ್ದವಾಗಿ ಒಂದೇ ಅರ್ಥವನ್ನು ಕೊಡುತ್ತದೆ.

ಜನಾಂಗಗಳು ಮಿಳಿತವಾದಾಗ ಇವೆಲ್ಲ ಆಗುವ ಕಾರ್ಯಗಳೇ. ಭಾರತದ ಚರಿತ್ರೆಯಲ್ಲಿ ಪುಲಕೇಶಿಯ ಆಸ್ಥಾನಕ್ಕೆ ಪರ್ಷಿಯಾ ದೇಶದ ಖುಸ್ರು ಎಂಬ ರಾಯಭಾರಿ ಬಂದಾಗಿನಿಂದ ನಮ್ಮ ಪಾರಸಿ ಭಾಷೆಯ ಸಂಬಂಧ ಮೊದಲಾಯಿತು. ಮಹಮ್ಮದೀಯರು ನಮ್ಮ ದೇಶಕ್ಕೆ ದಂಡಯಾತ್ರೆ ಮಾಡಿದಾಗಿನಿಂದ ಪಾರಸಿ ಮತ್ತು ಅರಬ್ಬಿ ಭಾಷೆಗಳ ಸಂಪರ್ಕ ಹೆಚ್ಚಾಯಿತು. ರಾಷ್ಟ್ರಕೂಟರಿಗೂ ಅರಬ್ಬಿ ವ್ಯಾಪಾರಗಾರರಿಗೂ ಸಂಪರ್ಕವಿತ್ತು. ಮಹಮ್ಮದ್ ಘಸ್ನಿ, ಮಹಮ್ಮದ್ ಘೋರಿ, ತುಘಲಕ್ ಮತ್ತು ಖಿಲ್ಜಿ ಸಂತತಿಯ ರಾಜರು ೧೨ನೆಯ ಶತಮಾನದಿಂದಲೇ ನಮ್ಮಲ್ಲಿ ನೆಲೆ ನಿಂತರು. ದೆಹಲಿಯ ಸಿಂಹಾಸನದ ಮೇಲೆ ೫೦೦ ವರ್ಷಗಳ ತನಕ ಯಾವನಾದರೂ ಒಬ್ಬ ಮಹಮ್ಮದೀಯ ದೊರೆ ಆಳುತ್ತಲೇ ಇದ್ದನು. ಆಡಳಿತ ಅವರದ್ದಾಗಿದ್ದಾಗ ಸಾಹಿತ್ಯ, ಸಂಗೀತ, ಕಲೆಗಳು ಮುಂತಾದುವುಗಳ ಮೇಲೂ

ವೇಷಭೂಷಣಗಳ ಮೇಲೂ ಆ ಜನರ ಪ್ರಭಾವ ಹೆಚ್ಚಾಯಿತು. ದಕ್ಷಿಣದೇಶದಲ್ಲಿ ಮಲ್ಲಿಕ್ಕಾಫರನ ದಂಡಯಾತ್ರೆಯಾದ ಮೇಲೆ ಆಗಿಂದಾಗ ಹಿಂದೂ ರಾಜರಿಗೂ ಮಹಮ್ಮದೀಯ ರಾಜರಿಗೂ ಯುದ್ಧಗಳು ಆಗುತ್ತಲೇ ಇದ್ದುವು. ವಿಜಯನಗರದ ಅರಸರ ಕಾಲದಲ್ಲಿ ಇದೇ ಸ್ಥಿತಿ ಇತ್ತು. ಮೈಸೂರು ದೇಶದಲ್ಲಿ ಹೈದರ್, ಟಿಪ್ಪು ಇವರು ಆಳುತ್ತಿದ್ದಾಗ ಈ ಪ್ರಭಾವ ಇನ್ನೂ ಹೆಚ್ಚಾಯಿತು. ಹೀಗೆ ಆಡಳಿತ, ಮತ, ವಿದ್ಯಾಭ್ಯಾಸ, ಕಲೆಗಳು, ಕಸುಬು, ವ್ಯಾಪಾರ, ವಾಣಿಜ್ಯ ಈ ಎಲ್ಲ ಕ್ಷೇತ್ರಗಳಲ್ಲಿ ಪಾರಸಿ ಮತ್ತು ಅರಬ್ಬಿ ಶಬ್ದಗಳು ಬಂದು ಸೇರಿಕೊಂಡಿವೆ. ಈ ಶಬ್ದಗಳಿಂದ ಮತ್ತೊಂದು ಜನಾಂಗದ ವ್ಯವಹಾರ, ಸಂಸ್ಕೃತಿ ಮುಂತಾದ ವಿಚಾರಗಳಲ್ಲಿಯೂ ಹೊಸ ಹೊಸ ವಿಷಯಗಳು ಪರಸ್ಪರ ತಿಳಿವಳಿಕೆಗೆ ಬರುತ್ತವೆ. ಅಂತೂ ಇತರ ಭಾಷೆಗಳ ಶಬ್ದಗಳನ್ನು ಆಮದು ಮಾಡಿ ನಮ್ಮ ಜೀವನದಲ್ಲಿ ಅವುಗಳನ್ನು ಜೀರ್ಣಿಸಿಕೊಳ್ಳುವುದು ಒಂದು ವಿಧವಾದ ಆರೋಗ್ಯದ ಚಿಹ್ನೆ.

ಗಾಳಿ ನುಂಗುವ ಮಂಚ ಎಂದರೇನು ?

ಇದಕ್ಕೆ ಹಾವು, ಆದಿಶೇಷ ಎಂದರ್ಥ. ಪುರಂದರದಾಸರು ವಿಷ್ಣುವಿನ ಮಂಚವನ್ನು ಕುರಿತು ಒಂದು ಕೀರ್ತನೆಯನ್ನು ರಚಿಸಿದ್ದಾರೆ. ಅದರಲ್ಲಿ ಪ್ರತಿಯೊಂದು ಸಾಲೂ ಮಂಚ ಎಂಬ ಶಬ್ದದಿಂದ ಕೊನೆಗಾಣುತ್ತದೆ. ಈ ಕೀರ್ತನೆಯಲ್ಲಿ ಈ ಪದಪುಂಜವು ಕಾಣುಬರುತ್ತದೆ. ಆ ಪದ ಹೀಗಿದೆ:

ಶೃಂಗಾರವಾಗಿದೆ ಸಿರಿರಂಗನ ಮಂಚ
ಅಂಗನೆ ಮಹಲಕುಮಿಯರಸಿ ಮಲಗುವ ಮಂಚ....
ಕಾಲಿಲ್ಲದೋಡುವ ಮಂಚ, ಗಾಳಿ ನುಂಗುವ ಮಂಚ

ಹಾವು ಕಾಲಿಲ್ಲದೆ ಹರಿದಾಡುತ್ತದೆ. ಅದಕ್ಕೆ ಗಾಳಿಯೇ ಆಹಾರ. ವಾತಾಶನ ಎಂದು ಹಾವಿಗೆ ಮತ್ತೊಂದು ಹೆಸರು. ಇಲ್ಲಿ ಕವಿಯ ಚಮತ್ಕಾರ ಕಾಣಬರುತ್ತದೆ.

ಶ್ರೀ ರಾಮಚಂದ್ರ ಮತ್ತು ಸೀತಾಮಾತೆಯರು ವನವಾಸಕ್ಕೆ ತೆರಳಿದಾಗ ನಾರು ಮಡಿಯನ್ನುಟ್ಟು ಹೊರಟರು. ಹೀಗಿರುವಾಗ ಸೀತೆಯು ರಾವಣನಿಂದ ಅಪಹೃತಳಾದಾಗ ತನ್ನ ಒಡವೆಯನ್ನು ಬಟ್ಟೆಯಲ್ಲಿ ಕಟ್ಟಿ ಎಸೆದು ಬಿಟ್ಟಳೆಂದೂ ರಾಮನು ಮುದ್ರಿಕೆಯನ್ನು ಸೀತೆಯು ಚೂಡಾಮಣಿಯನ್ನೂ ಗುರುತಿಗಾಗಿ ಕಳುಹಿಸಿದರೆಂದೂ ಹೇಳುವುದು ಅಸಂಬದ್ಧವಾಗುವುದಿಲ್ಲವೇ? ಇದು ಪ್ರಶ್ನೆ.

ರಾಮಾಯಣದ ಕಥೆಯನ್ನು ಪೂರ್ತಿ ಓದದವರಿಗೆ ಇದು ಅಸಂಬದ್ಧವಾಗಿ ಕಾಣುತ್ತದೆ. ರಾಮಾಯಣದಲ್ಲಿ ರಾಮನನ್ನು ವನವಾಸಕ್ಕೆ ಕಳುಹಿಸುವಾಗ ಕೈಕೆ ವಲ್ಕಲವನ್ನು ಅಂದರೆ ನಾರುಬಟ್ಟೆಯನ್ನು ಅವರಿಬ್ಬರಿಗೂ ನೀಡಿದ್ದು ನಿಜ. ಸೀತೆಗೆ ವಲ್ಕಲವನ್ನು ಉಡುವುದು ತಿಳಿಯದೆ ರಾಮನು ಅವಳ ಸೀರೆಯ ಮೇಲೆ ವಲ್ಕಲವನ್ನು ಉಡಿಸಿದ ಸನ್ನಿವೇಶವಿದೆ. ಇದು ಹೃದಯವನ್ನು ಹಿಂಡುವಂಥ ಸನ್ನಿವೇಶ. ಆದರೆ ವಸಿಷ್ಠಾದಿಗಳು ಸೀತೆಯ ಆಭರಣಗಳನ್ನು ತೆಗೆಸುವುದಕ್ಕಾಗಲಿ, ವಲ್ಕಲವನ್ನು ಸೀತೆಗೆ ಉಡಿಸುವುದಕ್ಕಾಗಲಿ ಅವಕಾಶವನ್ನು ಕೊಡಲಿಲ್ಲ. ಅಷ್ಟೇ ಅಲ್ಲದೆ ಸೀತೆಯನ್ನು

ಕಳಿಸುವಾಗ ೧೪ ವರ್ಷಗಳಿಗೆ ಬೇಕಾಗುವ ವಸ್ತ್ರಗಳನ್ನು, ಆಭರಣಗಳನ್ನು ರಥದಲ್ಲಿ ತುಂಬಿ ಕಳುಹಿಸಿದರು. ರಾಮಾಯಣದಲ್ಲಿ ಈ ಸಂದರ್ಭದಲ್ಲಿ ಬರುವ ಶ್ಲೋಕಗಳು ಈ ರೀತಿ ಇವೆ —

ಅಥೋತ್ತಮಾನ್ಯಾಭರಣಾನಿ ದೇವಿ
ದೇಹಿ ಸ್ನುಷಾಯೈ ವ್ಯಸನೀಯ ಚೀರತು
ನ ಚೀರಮಸ್ಯಾಃ ಪ್ರವಿದೀಯತೇತಿ
ನ್ಯವಾರಯದ್ವಸನಂ ವಸಿಷ್ಠಃ ।।
ಏಕಸ್ಯ ರಾಮಸ್ಯ ವನೇ ನಿವಾಸಃ
ತ್ವಯಾವೃತಃ ಕೇಕಯ ರಾಜಪುತ್ರಿ
ವಿಭೂಷಿತೇಯಂ ಪ್ರತಿಕರ್ಮ ನಿತ್ಯಾ
ವಸತ್ವರಣ್ಯೇ ಸಹರಾಘವೇನ ।।

ಇದರ ಅರ್ಥ, 'ಎಲೌ ಕೈಕೆ, ಈ ನಾರು ಬಟ್ಟೆಯನ್ನು ಹಿಂದಕ್ಕೆ ತೆಗೆದುಕೊಂಡು ನಿನ್ನ ಸೊಸೆಗೆ ಉತ್ತಮವಾದ ವಸ್ತ್ರಾಭರಣಗಳನ್ನು ಕೊಡು' ಎಂದು ಹೇಳಿ ವಸಿಷ್ಠರು ವಲ್ಕಲವನ್ನು ತಪ್ಪಿಸಿದರು. ಅಲ್ಲದೆ 'ರಾಮನೊಬ್ಬನು ವನವಾಸ ಮಾಡಬೇಕೆಂದು ನೀನು ವರವನ್ನು ಕೇಳಿದ್ದೀಯೆ. ಹೀಗಿರುವುದರಿಂದ ಸದಾಕಾಲವೂ ಅಲಂಕರಿಸಿಕೊಂಡಿರಬೇಕಾದ ಸೀತೆಯು ವಸ್ತ್ರಾಭರಣಗಳಿಂದ ಭೂಷಿತಳಾಗಿ ವನದಲ್ಲಿ ರಾಮನೊಡನೆ ಇರಲಿ' ಎಂದು ಹೇಳಿ ಒಪ್ಪಿಸಿದರು.

ಅಷ್ಟೇ ಅಲ್ಲ. ಪಂಚವಟಿಯಲ್ಲಿ ಸೀತೆಯನ್ನು ಅಪಹರಿಸಲು ಬಂದ ರಾವಣನು ಕೂಡ ಸೀತೆಯ ಎದುರು ನಿಂತು ಮಾತನಾಡುತ್ತಾ ಅವಳನ್ನು ವರ್ಣಿಸುತ್ತಾ 'ರತ್ನಾಭರಣಗಳಿಂದ ಕೂಡಿದ ನಿನ್ನ ವಕ್ಷವು ಬಹು ಮನೋಹರವಾಗಿದೆ. ನಿನ್ನ ಕೇಶಪಾಶವು ದೀರ್ಘವಾಗಿದೆ. ನಿನ್ನಂಥ ಹೆಂಗಸನ್ನು ನಾನು ದೇವತೆಗಳಲ್ಲಾಗಲಿ ಗಂಧರ್ವರಲ್ಲಾಗಲಿ ಕಂಡಿಲ್ಲ' ಎನ್ನುತ್ತಾನೆ.

ಹೀಗಿರುವುದರಿಂದ ರಾಮಾಯಣದ ಕಥೆಯನ್ನು ಹೇಳುವುದರಲ್ಲಿ ವಾಲ್ಮೀಕಿ ತಪ್ಪು ಮಾಡಿಲ್ಲವೆಂದು ಸ್ವಯಂ ಸ್ಪಷ್ಟ.

"ಸ್ಮರಗರಲ ಖಂಡನಂ ಮಮ ಶಿರಸಿ ಮಂಡನಂ ಧೇಹಿ ಪದಪಲ್ಲವಮುದಾರಂ" ಇದು ಎಲ್ಲಿಯ ಮಾತು?

ಇದು ಜಯದೇವ ಕವಿಯ 'ಗೀತಗೋವಿಂದ' ಎಂದು ಸಂಸ್ಕೃತ ಕಾವ್ಯದ ಹತ್ತನೆಯ ಸರ್ಗದಲ್ಲಿ ಬರುವ ಹತ್ತೊಂಬತ್ತನೆಯ ಅಷ್ಟಪದಿಯ ಏಳನೆಯ ಪದ್ಯ. ಆ ಪದ್ಯ ಸಂಪೂರ್ಣವಾಗಿ ಹೀಗಿದೆ.

ಸ್ಮರಗರಲ ಖಂಡನಂ ಮಮ ಶಿರಸಿ ಮಂಡನಂ
ಧೇಹಿ ಪದಪಲ್ಲವಮುದಾರಂ
ಜ್ವಲತಿ ಮಯಿ ದಾರುಣೋ ಮದನಕದನಾರುಣೋ
ಹರತು ತದುಪಾಹಿತ ವಿಕಾರಂ

ಕೃಷ್ಣನು ರಾಧೆಯ ಕೋಪವನ್ನು ಶಮನ ಮಾಡಲು ಅವಳಿದ್ದೆಡೆಗೆ ತಾನೇ ಬರುತ್ತಾನೆ. ಅವನು ಬಂದದ್ದರಿಂದ ಸುಮುಖಿಳಾದ ಅವಳನ್ನು ಸಮೀಪಿಸಿ ಗದ್ಗದ ಕಂಠನಾಗಿ ಅನೇಕ ಸಮಾಧಾನದ ಮಾತುಗಳನ್ನಾಡುತ್ತಾನೆ. ಅವಳನ್ನು ಪ್ರಿಯೆ, ಚಾರುಶೀಲೆ ಎಂದು ಕರೆದು ಗೌರವ ತೋರಿಸುತ್ತಾನೆ. ಆಗ ಅವನಾಡುವ ಮಾತುಗಳಲ್ಲಿ ಈ ಪದ್ಯವು ಒಂದು ಭಾಗವಾಗಿದೆ. ಆ ಒಟ್ಟು ಪದ್ಯದ ಅರ್ಥ ಹೀಗಿದೆ-

"ರಾಧೇ, ಕಾಮವೆಂಬ ವಿಷವನ್ನು ಪರಿಹರಿಸುವ ಔಷಧದ ಚಿಗುರಿನಂತಿರುವ ನಿನ್ನ ಪಾದಗಳನ್ನು ನನ್ನ ತಲೆಯ ಮೇಲೆ ಆಭರಣವಾಗುವಂತೆ ಇಡು. ನನ್ನನ್ನು ಸಹಿಸಲಸಾಧ್ಯವಾದ ಕಾಮಕದನವೆಂಬ ಸೂರ್ಯನು ತಪಿಸುತ್ತಿದ್ದಾನೆ. ನಿನ್ನ ಪಾದಗಳು ಆ ಬಾಧೆಯನ್ನು ನಿವಾರಣೆ ಮಾಡುವಂತಾಗಲಿ."

ಆ ಕಾವ್ಯದ ತುಂಬ ಇರುವ ರಸಮಯವಾದ ಸಂಧರ್ಭಗಳಲ್ಲಿ ಇದೂ ಒಂದು. ಈ ಶ್ಲೋಕದಲ್ಲಿರುವ 'ಧೇಹಿ' ಶಬ್ದವನ್ನು ಶ್ರೀ ಕೃಷ್ಣನೇ ಬಂದು ಜಯದೇವನ ಹಸ್ತಪ್ರತಿಯಲ್ಲಿ ಬರೆದು ಹೋದನೆಂದೂ ಜಯದೇವನ ರೂಪದಲ್ಲಿಯೇ ಬಂದು ಬರೆದನೆಂದೂ ಅದನ್ನು ಜಯದೇವನ ಪತ್ನಿ ಕಂಡರೂ ಅವನು ಶ್ರೀಕೃಷ್ಣನೆಂಬುದು ಅವಳಿಗೆ ತಿಳಿಯಲಿಲ್ಲವೆಂದೂ ಅಂತರಾರ್ಥವುಳ್ಳ ಕತೆ ಬಂಗಾಳದಲ್ಲಿ ಜನಜನಿತವಾಗಿದೆ.

ಏಳೇಳು ಜನ್ಮಗಳು ಎಂಬುದರ ಬಗ್ಗೆ ನಾನು ಬರೆದ ಅಭಿಪ್ರಾಯವನ್ನು ಆಧರಿಸಿ ಓದುಗರೊಬ್ಬರು ಬರೆದ ಪತ್ರದಲ್ಲಿ ಸ್ವಾರಸ್ಯವಾದ ವಿಷಯವು ಅಡಗಿರುವುದರಿಂದ ಅದನ್ನು ಇಲ್ಲಿ ಗಮನಕ್ಕೆ ತರುತ್ತಿದ್ದೇನೆ. ಪತ್ರ ಹೀಗಿದೆ ;

"**ಏಳೇಳು ಜನ್ಮಗಳ ಕಥೆ** ಏನೆಂದು ತಿಳಿಯಬಯಸಿದ್ದೀರಷ್ಟೆ ? ನಾನು ಆ ಬಗ್ಗೆ ಸಾಕಷ್ಟು ಆಲೋಚಿಸಿದ್ದು ಹಾಗೂ ಸಮಾಲೋಚಿಸಿದ್ದು ತತ್ಫಲವಾದ ನನ್ನು ಅಭಿಪ್ರಾಯ ಹೀಗಿದೆ. ನಿಜವಾಗಿ ಇದು ಒಬ್ಬರು ಓದುಗರು ನನಗೆ ಬರೆದ ಪತ್ರ:-

ಸಪ್ತ ದ್ವೀಪಗಳು, ಸಪ್ತ ಧಾತುಗಳು, ಸಪ್ತ ನರಕಗಳು, ಸಪ್ತ ಮಾತೃಕೆಯರು, ಸಪ್ತ ಮಾರುತಗಳು, ಸಪ್ತರ್ಷಿಗಳು, ಸಪ್ತ ಲೋಕಗಳು, ಸಪ್ತ ವರ್ಣಗಳು, ಸಪ್ತ ಸ್ವರಗಳು, ಸಪ್ತ ಸಮುದ್ರಗಳು, ಸಪ್ತಾಶ್ವಗಳು... ಈ ರೀತಿ ಏಳರ ಹಿರಿಮೆ ಕಂಡ ನಮ್ಮ ಜನಪದವು ಯಾವ ಆಧಾರದ ಬಗ್ಗೆಯೂ ಚಿಂತೆ ಮಾಡದೆ ಇನ್ನಷ್ಟು ಏಳರ ವರ್ಗಗಳನ್ನು ಸೃಷ್ಟಿಸಿತು. ಏಳು ಹೆಡೆಯ ಸರ್ಪ, ಏಳು ಸುತ್ತಿನ ಕೋಟೆ, ಏಳು ಜನ್ಮ... ಹೀಗೆ...

ಏಳು ಸಮುದ್ರ ದಾಟಿ ಏಳು ಸಮುದ್ರದಾಚೆ ಇರುವ ರಾಕ್ಷಸ, ಅವನ ಏಳು ಸುತ್ತಿನ ಕೋಟೆಯೊಳಗೆ ಬಂಧಿತಳಾದ ಕುಮಾರಿ, ಏಳು ಹಡೆಯ ಸರ್ಪದ ಕಾವಲಿನಲ್ಲಿರುವ ಮಾಣಿಕ್ಯ, ಋಷಿಯ ಶಾಪದಿಂದ ಏಳು ಜನ್ಮ ಕಳೆದು ಕೀಳು ಜನ್ಮವೆತ್ತಿದ್ದ ರಾಕ್ಷಸನ ಶಾಪವಿಮೋಚನೆ, ಏಳು ಹಗಲು ಏಳು ರಾತ್ರಿ (ಏಳು ಕುದುರೆಯ ಮೇಲೆ!) ಪ್ರಯಾಣ ಮಾಡಿ ರಾಜಕುಮಾರನು ಬಂಧಿತಾಳಾದ ರಾಜಕುಮಾರಿಯನ್ನು ಬಂಧಮುಕ್ತಗೊಳಿಸಿ ಮದುವೆಯಾಗುವುದು - ಈ

ರೀತಿ ಮನೋರಂಜನೆಗಾಗಿ ನಮ್ಮ ಪೂರ್ವಿಕರು ಸೃಷ್ಟಿಸಿದ ಕಥೆಗಳಲ್ಲಿ ಅಂಥ ಕಥೆಗಳಿಗಾಗಿ ರೂಪು ತಳೆದ ಅನೇಕ ಏಳುಗಳಲ್ಲೊಂದು ಈ ಏಳು ಜನ್ಮ. ಇದನ್ನೇ ಒತ್ತಿ ಹೇಳಲು ಏಳೇಳು ಜನ್ಮವಾಯಿತು. ಏಳು ಹೆಡೆಗಳ ಸರ್ಪ, ಏಳು ಸಮುದ್ರ, ಏಳು ಸುತ್ತಿನ ಕೋಟೆಗಳಂತೆ ಘನ ಗಂಭೀರ ಘೋರವಾಗಲು ಏಳು ಜನ್ಮವು ಏಳೇಳು ಜನ್ಮವಾಯಿತು. ಅಂದು ಆ ರಾಕ್ಷಸನಿಗೆ ಏಳು ಜನ್ಮ ಕಳೆದು ಕೀಳು ಜನ್ಮವೆತ್ತಿದಾಕ್ಷಣ ಮೋಕ್ಷ ದೊರೆತರೆ ಇಂದು ನಮ್ಮ ಜನಗಳಿಗೆ ಏಳೇಳು ಜನ್ಮ ಕಳೆದರೂ ಬುದ್ಧಿ ಬರುವುದಿಲ್ಲ!

"ಹೌದು, ಅಂದ ಹಾಗೆ ತಾವು ನನಗೆ ಏಳೇಳು ಜನ್ಮ ಕೃತಜ್ಞನಾಗಿರುವುದು ಸಾಧ್ಯವೇ? ಈ ಜನ್ಮವೇ ತಮ್ಮ ಪಾಲಿನ ಕಡೆಯ ಜನ್ಮವಾಗಿದ್ದರೆ !"

ವಿಶ್ವಾಸದಿಂದ ಬರೆದ ಈ ಆತ್ಮೀಯವಾದ ಪತ್ರದಲ್ಲಿ ತಾತ್ವಿಕವಾದ ಚಿಂತನೆಯೂ ಅಡಗಿರುವುದರಿಂದ ಅದನ್ನು ಇಲ್ಲಿ ಮುದ್ರಿಸಲಾಗಿದೆ. ನಿಜವಾಗಿ ಈ ಸಪ್ತ ಶಬ್ದಕ್ಕೆ ಇರುವ ಪ್ರಾಧಾನ್ಯ ಮತ್ತು ಗೌರವ ನಮ್ಮ ಜನತೆಯಲ್ಲಿ ಅತ್ಯಪೂರ್ವವಾದುದು. ಸಪ್ತಕಪಾಲ, ಸಪ್ತ ಕುಮಾರಿಕಾವದಾನ, ಸಪ್ತಕೋಣ, ಸಪ್ತಗಂಗಾ, ಸಪ್ತಚಕ್ರ, ಸಪ್ತಚ್ಛದ, ಸಪ್ತಜಿಹ್ವ, ಸಪ್ತತಂತು, ಸಪ್ತಪದಿ, ಸಪ್ತರಶ್ಮಿ, ಸಪ್ತವ್ಯಸನ, ಸಪ್ತತಿ ಇತ್ಯಾದಿ.

ಹೀಗಿರುವುದರಿಂದ ಮೇಲಿನ ಸಪ್ತದಲ್ಲಿರುವ ಚಿಂತನದ ಅಂಶಕ್ಕೆ ಅಧಿಕವಾದ ಬೆಲೆ ಬರುತ್ತದೆ. ಈ ಬಗ್ಗೆ ನಿರ್ಮಮತೆಯಿಂದ ಆಲೋಚಿಸಬೇಕಾದದ್ದು ವಿದ್ವಾಂಸರಿಗೆ ಬಿಟ್ಟಿರುವ ವಿಷಯ.

ಕೆಲವರು ಓದುಗರು **ಗಾದೆಗಳ** ಅರ್ಥವನ್ನು ಕುರಿತು ಪ್ರಶ್ನೆಗಳನ್ನು ಕಳಿಸುತ್ತಾರೆ. ಅವುಗಳಲ್ಲಿ ನಾನು ವಿವರಿಸಿದ ಎರಡು ಗಾದೆಗಳ ವಿವರಣೆ ಇಲ್ಲಿದೆ.

ಮಳ್ಳಿ ಮಳ್ಳಿ ಮಂಚಕ್ಕೆಷ್ಟೆ ಕಾಲು ಅಂದ್ರೆ ಮೂರು ಮತ್ತೊಂದು ಎಂದಳಂತೆ.

ಮಳ್ಳಿ ಎನ್ನುವುದು ಮರುಳಿ ಎಂಬ ಶಬ್ದದ ಪರ್ಯಾಯ ಶಬ್ದ. ಈ ಶಬ್ದಕ್ಕೆ ಈ ಸಂದರ್ಭದಲ್ಲಿ ಜಾಣತನವಿದ್ದು ಜಾಣತನ ಇಲ್ಲದವಳಂತೆ ನಟಿಸುವವಳು ಎಂದರ್ಥ. ಅಂಥವಳಿಗೆ ಪ್ರಶ್ನೆ ಕೇಳಿದರೆ ತನಗೆ ಉತ್ತರ ಗೊತ್ತಿಲ್ಲವೆಂಬಂತೆ ತಪ್ಪು ಮಾಡಿ ಕೂಡಲೇ ಸರಿಪಡಿಸಿಕೊಳ್ಳುವವಳು ಅವಳು. ಈ ಗಾದೆಯಲ್ಲಿ ಮಂಚಕ್ಕೆ ಎಷ್ಟು ಕಾಲು ಎಂದು ಕೇಳಿದರೆ ಅವಳಿಗೆ ಗೊತ್ತಿದ್ದರೂ ಉತ್ತರ ಕೊಡುವಾಗ ಮೂರು ಎಂದು ಹೇಳಿ ಸ್ವಲ್ಪ ಅವಕಾಶ ಕೊಟ್ಟು ಮತ್ತೆ ಒಂದು ಎಂದು ಹೇಳುತ್ತಾಳೆ. ಅವಳು ಅಷ್ಟು ಜಾಣೆ. ನಮ್ಮನ್ನೇ ದಡ್ಡರನ್ನಾಗಿ ಮಾಡಬಲ್ಲಳು ಎಂದು ಆ ಗಾದೆಯ ಅರ್ಥ.

ಅಣ್ಣೆ ಸೊಪ್ಪು ತಿನ್ನಲೂ ಪುಣ್ಯ ಮಾಡಿರಬೇಕು ಎಂಬ ಗಾದೆಯ ಅರ್ಥವೇನು ?

ಅಣ್ಣೆ ಸೊಪ್ಪು ಎಂಬುದು ಗ್ರಾಮೀಣ ಪ್ರದೇಶವಲ್ಲಿ ವ್ಯಾಪಕವಾಗಿ ಬೆಳೆಯುವ ಸಸ್ಯ. ಒಳ್ಳೆಯ ರುಚಿಕರವಾದ ತರಕಾರಿ. ಹಳ್ಳಿಯ ಕಡೆ ಯಾವ ತರಕಾರಿ ಸಿಗದಿದ್ದರೂ ಈ ಸೊಪ್ಪನ್ನು

ಆರಿಸಿಕೊಂಡು ಬರುವುದು ಸುಲಭ. ಅದರ ರುಚಿ ಮತ್ತು ರಾಗಿಮುದ್ದೆಯೊಡನೆ ಅದರ ಸಾಹಚರ್ಯ ಇವು ಗ್ರಾಮೀಣ ಪ್ರದೇಶದ ಸೌಭಾಗ್ಯಗಳಲ್ಲಿ ಒಂದು. ನಗರ ಪ್ರದೇಶದಲ್ಲಿ ಇದರ ಹೆಸರನ್ನು ಕೇಳಿಯೇ ಇರುವುದಿಲ್ಲ. ನಗರದ ಜನರಿಗೆ ಈ ರುಚಿಕರವಾದ ಊಟ ಅಲಭ್ಯ. ಅಲ್ಲದೆ ಬಡತನದಲ್ಲಿ ಬಾಳುವವರಿಗೆ ಇಷ್ಟಾದರೂ ದೇವರು ಕೊಟ್ಟಿದ್ದಾನೆ ಎಂಬ ತೃಪ್ತಿ ಇರುತ್ತದೆ. ಅದೂ ಇಲ್ಲದವರು ಪುಣ್ಯವಂತರು ಹೇಗಾದಾರು ?

II. ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ತಲೆದೋರಿದ ಸಂಶಯಗಳು

ಯಶಸ್ಸು, ಕೀರ್ತಿ, ವೈಭವ : ದಾನಧರ್ಮಕಾರ್ಯಗಳಿಂದ ಬರುವ ಹೆಸರುವಾಸಿಗೆ ಕೀರ್ತಿಯೆಂದೂ, ಶೌರ್ಯದಿಂದ ಬರುವುದು ಯಶಸ್ಸೆಂದೂ ಭೇದವನ್ನೂ ಹೇಳುತ್ತಾರೆ. ಆದರೂ ಕಾವ್ಯಗಳಲ್ಲಿ ಈ ಎರಡು ಶಬ್ದಗಳನ್ನು ಸಾಮಾನಾರ್ಥದಲ್ಲಿ ಪ್ರಯೋಗಿಸುತ್ತಾರೆ. ವೈಭವ ಎನ್ನುವುದು ವಿಭವ ಶಬ್ದದಿಂದ ಬಂದ ಭಾವನಾಮ. ವಿಭವ ಎಂದರೆ ಐಶ್ವರ್ಯ, ಸಂಪತ್ತು, ಧನಶಕ್ತಿ. ಇವುಗಳಿಂದ ಒದಗುವ ಸುಖಾದಿಗಳಿಗೆ ವೈಭವ ಎನ್ನುತ್ತಾರೆ.

ಸಹಾನುಭೂತಿ, ಕರುಣೆ : ಸಹಾನುಭೂತಿ ಎಂದರೆ ಅನುಭವವೇ. ಮತ್ತೊಬ್ಬರು ಕಷ್ಟವನ್ನೋ ಹಿಂಸೆಯನ್ನೋ ಅನುಭವಿಸುತ್ತಿದ್ದಾಗ ನಾವೂ ಅವರ ಅನುಭವವನ್ನೇ ಪಡೆದಂತೆ ಭಾವಿಸುವುದು. ಸಹ + ಅನುಭೂತಿ. ಇದು ಮನಸ್ಸಿನಲ್ಲಿ ಅದೇ ಭಾವನೆಗಳನ್ನು ತಳೆದಿರುವಿಕೆ. ಕರುಣೆ ಎಂದರೆ ಇತರರ ದುಃಖವನ್ನು ನಿವಾರಣೆ ಮಾಡುವ ಅಪೇಕ್ಷೆ. ಇದು ಸಹಾನುಭೂತಿಯ ಮುಂದಿನ ಮಜಲು. ಆದ್ದರಿಂದ ಹೆಚ್ಚು ಪ್ರಯೋಜನಕರವಾದದ್ದು. 'ಕರುಣಾಳು ಬಾ ಬೆಳಕೆ' ಎಂಬ ಬಿ.ಎಂ. ಶ್ರೀ ಅವರ ಅನುವಾದವನ್ನು ಗಮನಿಸಿ

ಘಟನೆ, ಸಂಗತಿ : ಘಟನೆ ಎನ್ನುವುದು ಏನಾದರೂ ಒಂದು ಆಗುವದು, ಉಂಟಾಗುವುದು ಅಥವಾ ಎರಡು ವಸ್ತು, ವಿಷಯ ಮುಂತಾದವು ಸೇರುವುದು. ಸಂಗತಿ ಎಂದರೆ ಸಂಬಂಧ, ಸಹವಾಸ, ಸಮಾಗಮ, ಹೊಂದಾಣಿಕೆಯಾಗುವುದು. ಈ ಶಬ್ದಕ್ಕೆ ತುಂಬ ವ್ಯಾಪಕವಾದ ಇತರ ಅರ್ಥಗಳೂ ಇವೆ.

ಅಂಗಜ, ಮನಸಿಜ, ಮನೋಜ : ಈ ಮೂರೂ ಶಬ್ದಗಳು ಮನ್ಮಥನನ್ನು ನಿರ್ದೇಶಿಸುತ್ತವೆ. ಅಂಗಾತ್ ಮನಸಃ ಜಾಯತೇ ಎಂದು ವಿವರಣೆ. ತನ್ನ ದೇಹದಿಂದ ಹುಟ್ಟಿದವನು ಅಂಗಜ= ಮಗ=ಮನಸಿಜ ಮನಸ್ಸಿನಲ್ಲಿ ಹುಟ್ಟಿದವನು. ಅಂದರೆ ಅನಂಗ. ಅನಂಗ ಎಂಬ ಶಬ್ದಕ್ಕೆ ದೇಹವಿಲ್ಲದಿರುವವನು ಎಂದರ್ಥ. ನಾಸ್ತಿ ಅಂಗಂ ಆಕಾರೋಯಸ್ಯ ಎಂದು ವಿಗ್ರಹವಾಕ್ಯ. ಮನೋಜ ಎಂದರೂ ಮನಸಿಜ ಎಂದರೂ ಒಂದೇ ಅರ್ಥ.

ಸಮಾವೇಶ, ಸಮ್ಮೇಳನ : ಎರಡೂ ಸಂಸ್ಕೃತ ಶಬ್ದಗಳೇ. ಸಮಾವೇಶ ಎಂದರೆ ಒಂದು ಕಡೆ ಜನ ಒಟ್ಟಿಗೆ ಸೇರುವುದು. ಒಂದು ಸ್ಥಳಕ್ಕೆ ಪ್ರವೇಶಿಸುವುದು. ಸಮ್ಮೇಳನ ಎಂದರೂ ಒಂದೇ ಕಡೆಯಲ್ಲಿ ಎಲ್ಲರೂ ಸೇರುವುದು. ಅರ್ಥ ಒಂದೇ ಆದರೂ ವ್ಯುತ್ಪತ್ತಿ ಬೇರೆ ಬೇರೆ. ಒಂದು ವಿಶ್‌ಧಾತುವಿನಿಂದ ಮತ್ತೊಂದು ಮಿಲ್ ಎಂಬ ಧಾತುವಿನಿಂದ ಬಂದಿದೆ.

ಉಪಾಖ್ಯಾನ ಎಂದರೇನು?

ಇದು ಸಂಸ್ಕೃತ ಶಬ್ದ. 'ಉಪಾಖ್ಯಾನ' ದಲ್ಲಿ ಉಪ + ಆಖ್ಯಾನ ಎಂಬ ಎರಡು ಭಾಗಗಳಿವೆ. 'ಉಪ' ಎಂಬುದು ಉಪಸರ್ಗ. ಇದಕ್ಕೆ 'ಸ್ವಲ್ಪ, ಕಡಿಮೆ, ಅಮುಖ್ಯ, ಅಪ್ರಧಾನ ಎಂಬ ಅರ್ಥಗಳು ಬರುತ್ತವೆ. 'ಆಖ್ಯಾನ' ಎಂಬ ಭಾಗದಲ್ಲಿಯೇ 'ಆ' ಎಂಬ ಮತ್ತೊಂದು ಉಪಸರ್ಗವಿದೆ. ಇದಕ್ಕೆ 'ಚೆನ್ನಾಗಿ' ಎಂದು ಅರ್ಥ. 'ಖ್ಯಾನ' ಎಂದರೆ 'ಹೇಳುವುದು' ಪೂರ್ವಕಥೆಯನ್ನು ಹೇಳುವುದು. ಅದಕ್ಕೆ ಕಲ್ಪಿತವಾದ ಕಥೆ ಎಂಬ ಅರ್ಥವೂ ಇದೆ. ಆಖ್ಯಾನಂ ಪೂರ್ವ ವೃತ್ತೋಕ್ತಿಃ ಎಂದು 'ಸಾಹಿತ್ಯ ದರ್ಪಣ' ಎಂಬ ಅಲಂಕಾರ ಗ್ರಂಥದಲ್ಲಿ ವಿವರಣೆಯನ್ನು ನೀಡಲಾಗಿದೆ. ಒಟ್ಟಿನಲ್ಲಿ 'ಆಖ್ಯಾನ' ಒಂದು ಕಥೆ. 'ಉಪಾಖ್ಯಾನ' ಎಂದರೆ ದೊಡ್ಡ ಕಥೆಯ ನಡುವೆ ಬರುವ ಉಪಕಥೆ.

೧. ಧ್ಯಾನ = ಏಕಾಗ್ರತೆ = ಆಧ್ಯಾತ್ಮಿಕ ಸಾಧನೆ.

೨. ಪ್ರೀತಿ = ಭಾವಪರವಶತೆ = ದೈಹಿಕ ಆಕರ್ಷಣೆ

೩. ಆದರ್ಶ = ಧ್ಯೇಯ = ಇವು ಸರಿಯೆ ?

ಈ ಪ್ರಶ್ನತ್ರಯ ಸ್ವಾರಸ್ಯವಾಗಿದೆ. ಒಂದು ಭಾಷೆಯ ಶಬ್ದಗಳನ್ನು ಪರಿಶೀಲಿಸುವಾಗ ನಾವು ಒಂದು ತತ್ವ ಅಥವಾ ಸಿದ್ಧಾಂತವನ್ನು ನೆನೆಪಿಡಬೇಕು. ಯಾವ ಒಂದು ಶಬ್ದಕ್ಕೂ ಸರಿಸಮಾನವಾದ, ಎಲ್ಲ ವಿಧದಲ್ಲಿ ಸಮಾನವೆಂದು ಹೇಳಬಹುದಾದ ಬೇರಯ ಶಬ್ದ ಇರುವುದೇ ಇಲ್ಲ. ಏನಾದರೂ ಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಆದ್ದರಿಂದ ನಿಘಂಟುಕಾರರು ಪ್ರತಿಯೊಂದು ಶಬ್ದವೂ ಹೇಗೆ ವ್ಯುತ್ಪತ್ತಿ ಹೊಂದಿದೆಯೋ ಅದನ್ನು ಅನುಸರಿಸಿ ಮೊದಲ ಅರ್ಥವನ್ನು ಸೂಚಿಸುತ್ತಾರೆ. ಇತರ ಅರ್ಥಗಳೆಲ್ಲವೂ ಸಮೀಪಾರ್ಥಗಳು ಅಥವಾ ವ್ಯಾಕರಣಾರ್ಥಗಳು ಅಥವಾ ಆಲಂಕಾರಿಕ ಅರ್ಥಗಳು. ಒಂದು ಶಬ್ದಕ್ಕೆ ಅರ್ಥ ಹೇಗೆ ಬೆಳೆಯುತ್ತದೆ ಎಂದು ಅಭ್ಯಾಸ ಮಾಡುವುದೇ ಒಂದು ಸ್ವಾರಸ್ಯಕರವಾದ ವ್ಯಾಸಂಗವಾಗುತ್ತದೆ. ಈ ದೃಷ್ಟಿಯಿಂದ ಈ ಮೂರು ಪ್ರಶ್ನೆಗಳಿಗೆ ನಾನು ಉತ್ತರಿಸುತ್ತಿದ್ದೇನೆ.

ಧ್ಯಾನ ಎಂಬ ಶಬ್ದ 'ಧ್ಯೈ ಚಿಂತಾಯಾಮ್' ಎಂಬಂತೆ ಅರ್ಥವನ್ನು ನೀಡುತ್ತವೆ. ೧. ಮನಸ್ಸಿನಲ್ಲಿ ಆಲೋಚನೆ ಮಾಡುವುದು. ಮನನ. ೨. ಪರಮಾತ್ಮನ ಬಗ್ಗೆ ಆಲೋಚನೆ ಮಾಡುವುದು. ೩. ಮನಸ್ಸನ್ನು ಒಂದೇ ವಿಷಯದಲ್ಲಿ ನಿಶ್ಚಂಚಲವಾಗಿ ಇರುವಂತೆ ಮಾಡುವುದು - ಹೀಗೆ ಅರ್ಥ ಬೆಳೆಯುತ್ತದೆ.

ಏಕಾಗ್ರತೆ ಶಬ್ದಕ್ಕೆ ಮನಸ್ಸಿನ ಮುಂದೆ ಒಂದೇ ತುದಿ ಅಥವಾ ಗುರಿ ಉಳ್ಳದ್ದು ಎಂದರ್ಥ. ಒಂದೇ ವಿಷಯದಲ್ಲಿ ಮನಸ್ಸನ್ನು ನಿಲ್ಲಿಸಿರುವುದು.

'ಆಧ್ಯಾತ್ಮಿಕ ಸಾಧನೆ' ಎನ್ನುವುದು ಆತ್ಮನನ್ನು ಕುರಿತು, ಪರಬ್ರಹ್ಮವನ್ನು ಕುರಿತು ಮಾಡವ ಸಾಧನೆ. ಮೊದಲ ಎರಡು ಮೆಟ್ಟಿಲುಗಳೂ ಈ ಸಾಧನೆಗೆ ಸಹಾಯಕವಾಗುವ ಮನಸ್ಸಿನ ಸ್ಥಿತಿಗಳು. ಆದ್ದರಿಂದ ಮೂರೂ ಬೇರೆ ಬೇರೆ ಅರ್ಥವನ್ನು ಹೊಂದಿವೆ ಎಂದಾಯಿತು.

'**ಪ್ರೀತಿ**' ಶಬ್ದದ ಮೂಲ ತೃಪ್ತಿ ಪಡಿಸುವುದರಲ್ಲಿದೆ. ಅಲ್ಲಿಂದ ಮುಂದೆ ತೃಪ್ತಿ, ಸಂತೋಷ, ಆಮೇಲ ಸ್ನೇಹ, ಆಮೇಲೆ ಅನುರಾಗ ಹೀಗೆ ಅರ್ಥ ಬೆಳೆಯುತ್ತದೆ. ಇದೂ ಭಾವಪರವಶತೆಯೂ ಒಂದೇ ಅಲ್ಲ.

'**ಭಾವ**' ಎಂಬುದು ಭೂ = ಉಂಟಾಗು ಎಂಬ ಧಾತುವಿನಿಂದ ವ್ಯುತ್ಪತ್ತಿ ಪಡೆದ ಶಬ್ದ. ಇದಕ್ಕೆ ೧. ಆಶಯ ೨. ಇರುವಿಕೆ. ೩. ಸ್ಥಿತಿ ಎಂಬಂತೆ ಅರ್ಥಗಳು ಬೆಳೆಯುತ್ತದೆ. ಶಾಸ್ತ್ರಗಳಲ್ಲಿ ಈ ಶಬ್ದ ಉಪಯೋಗವಾದಾಗ ಭಾವ, ವಿಭಾವ, ಅನುಭಾವ ಮುಂತಾಗಿ ವಿವಿಧ ರೂಪಗಳನ್ನು ಹೊಂದುತ್ತದೆ. ಸ್ಥಾಯಿಭಾವ, ವ್ಯಭಿಚಾರಿಭಾವ ಮುಂತಾಗಿ ಬೆಳೆಯುತ್ತದೆ. ಈ ಶಬ್ದಕ್ಕೆ ನಿಘಂಟಿನಲ್ಲಿ ಸುಮಾರು ನಲವತ್ತು ಅರ್ಥಗಳನ್ನು ಕೊಡುತ್ತಾರೆ. '**ಭಾವಪರವಶತೆ**' ಎನ್ನುವುದು ಭಾವವು ಉದ್ರೇಕಗೊಂಡಾಗ ಉಂಟಾಗುವ ಮೈಮರೆಯುವಿಕೆ.

'**ದೈಹಿಕ ಆಕರ್ಷಣೆ**' ಇದು ದೇಹ ಸೌಂದರ್ಯದಿಂದ ಉಂಟಾಗುವ ಸೆಳೆತ. ಎಲ್ಲವೂ ಬೇರೆ ಬೇರೆ.

ಆದರ್ಶ - ಆ + ದೃಶ್ ಎಂಬುದು ಸೇರಿ ಆಗುವ ಈ ಶಬ್ದಕ್ಕೆ ಕಾಣು, ಎದುರಿಗಿರು, ಕಾಣಿಸಿಕೋ ಎಂಬ ಅರ್ಥಗಳು ಬರುತ್ತವೆ. ಆದ್ದರಿಂದಲೇ 'ಇಲ್ಲಿ ನಮ್ಮ ರೂಪವು ಕಾಣುತ್ತದೆ' ಎಂಬ ಅರ್ಥದಿಂದ, 'ಆದರ್ಶ' ಎಂದರೆ 'ಕನ್ನಡಿ' ಎಂದೂ ಅರ್ಥ. ಆಮೇಲೆ ಬೆಳೆದು ಬಂದ ಅರ್ಥ - ಸ್ವಸಂಪೂರ್ಣವಾದ ಒಂದು ಉದ್ದೇಶ, ಧ್ಯೇಯ.

ಹೀಗೆ ಶಬ್ದಾರ್ಥಗಳು ನಮಗೆ ಕಣ್ಣುಮುಚ್ಚಾಲೆ ಆಡಿಸುತ್ತವೆ.

ಸಂಸ್ಕೃತದಲ್ಲಿ 'ಕು' ಎಂಬುದು 'ಕೆಟ್ಟದ್ದು' ಎಂಬ ಅರ್ಥವನ್ನು ಕೊಡುತ್ತದೆ. ಆದರೆ 'ಕುಲೀನ' ಎಂಬುದು ಏಕೆ ಒಳ್ಳೆಯ ಅರ್ಥವನ್ನು ಕೊಡಬೇಕು? ಕುಲಟೆ, ಕುಲೀನ ಈ ಬಗೆಯ ವ್ಯತ್ಯಾಸವೇಕೆ ?

ಈ ಎರಡು ಶಬ್ದಗಳಲ್ಲಿಯೂ 'ಕು' ಎಂಬ ಅವ್ಯಯವು ಸೇರಿಲ್ಲ. ಎರಡರಲ್ಲಿಯೂ 'ಕುಲ' ಎಂಬುದು ಮುಖ್ಯ.

'**ಕುಲ**' ಎಂದರೆ ಮನೆ, ಒಳ್ಳೆಯ ವಂಶ ಎಂಬ ಅನೇಕ ಅರ್ಥಗಳಿವೆ. 'ಕುಲಟಾ' ಎಂದರೆ ಮನೆಮನೆಗೂ ತಿರುಗಾಡುವ ಅಸಭ್ಯ ಹೆಂಗಸು ಎಂದರ್ಥ. ಇದೇ ಕನ್ನಡದಲ್ಲಿ ಕುಲಟೆ ಎಂದು ತದ್ಭವವಾಗುತ್ತದೆ. ಅದಕ್ಕೂ 'ಸ್ವೈರಿಣಿ, ವ್ಯಭಿಚಾರಿಣಿ' ಎಂದೇ ಅರ್ಥ.

'**ಕುಲೀನ**' ಎಂದರೆ 'ಸತ್ಕುಲದಲ್ಲಿ ಹುಟ್ಟಿದವನು' ಎಂದರ್ಥ ಯಸ್ಯಾಸ್ತಿ ವಿತ್ತಂ ಸನರಃ ಕುಲೀನಃ ಸಪಂಡಿತಃ ಸಶ್ರುತವಾನ್ ಗುಣಜ್ಞಃ ಎಂದು ಭರ್ತೃಹರಿ ವ್ಯಂಗವಾಗಿ ರಚಿಸಿರುವ ಪದ್ಯವನ್ನು ಗಮನಿಸಿ.

ಮಾತಿನೊಳಗಿರಲಿ — ಈ ಶಬ್ದದ ಸಂಧಿ ಏನು?

ಮಾತಿನೊಳಗಿರಲಿ ಈ ಶಬ್ದದಲ್ಲಿ ಎಷ್ಟು ಸಂಧಿಗಳಿವೆ ನೋಡಿ.

೧. ಮಾತು + ಅ = ಮಾತಿನ (ಇನಾಗಮ) ೨. ಮಾತಿನ + ಒಳಗೆ = ಮಾತಿನೊಳಗೆ — ಲೋಪಸಂಧಿ ೩. ಮಾತಿನೊಳಗೆ + ಇರಲಿ = ಮಾತಿನೊಳಗಿರಲಿ — ಲೋಪಸಂಧಿ

ಶರಣರ ವಚನಗಳಿಗೂ ದಾಸರ ಕೀರ್ತನೆಗಳಿಗೂ ಇರುವ ಅಂತರವೇನು?

ಎರಡಕ್ಕೂ ಸಮಾನವಾದ ಅಂಶಗಳು ಬೇಕಾದಷ್ಟಿವೆ. ಮುಖ್ಯ ಅಂತರ ಅವರುಗಳು ನಂಬುವ ದೇವತೆಯಲ್ಲಿ. ಶರಣರು ಶಿವಭಕ್ತರು, ದಾಸರು ಹರಿಭಕ್ತರು. ಶರಣರು ಗದ್ಯದಲ್ಲಿ ಹೆಚ್ಚಾಗಿ ಬರೆದರು. ದಾಸರು ಪದಗಳನ್ನು ರಚಿಸಿದರು.

ಭಾರತದ ಎಲ್ಲಾ ನದಿಗಳ ಹೆಸರೂ ಸ್ತ್ರೀಲಿಂಗದಲ್ಲಿವೆ. ಕೆಲವು ಮಾತ್ರ ಪುಲ್ಲಿಂಗ-ಭದ್ರ, ಭೀಮ, ಕೃಷ್ಣ ಯಮುನ, ಬ್ರಹ್ಮಪುತ್ರ ಇದು ಏಕೆ ?

ಭಾರತದ ನದಿಗಳೆಲ್ಲವೂ ಸ್ತ್ರೀ ಎಂದೇ ನಂಬಿಕೆ. ಭದ್ರಾ, ಭೀಮಾ, ಕೃಷ್ಣಾ, ಯಮುನಾ, ಬ್ರಹ್ಮಪುತ್ರಾ ಎಂಬ ನದಿಗಳು ಸ್ತ್ರೀಯರೇ. ಎಲ್ಲ ನದಿಗಳೂ ಸ್ತ್ರೀಯರೆಂದು ಸಮುದ್ರರಾಜನಿಗೆ ಪತ್ನಿಯರೆಂದು ವರ್ಣಿಸುತ್ತಾರೆ. ಸಂಸ್ಕೃತದಲ್ಲಿ ನದೀ, ನದ ಎಂಬ ಎರಡು ಶಬ್ದಗಳಿವೆ. 'ನದಿ' ಸ್ತ್ರೀಲಿಂಗ. 'ನದ' ಪುಲ್ಲಿಂಗ. 'ಶೋಣ' ಎಂಬ ನದಿ ಪುರುಷ ಎಂದು ನಂಬಿಕೆ ಇದೆ. ಇವೆಲ್ಲ ಪುರಾಣ ಕಥೆಗಳಿಗೆ ಸಂಬಂಧ ಪಟ್ಟ ವಿಷಯಗಳು.

ರಿಸರ್ಚ್ ಎಂದರೇನು ?

Research ಎಂಬುದು ಇಂಗ್ಲಿಷ್ ಶಬ್ದ. ಅದು ಯಾವುದಾದರೂ ಕ್ಷೇತ್ರದಲ್ಲಿ ವ್ಯವಸ್ಥಿತವಾಗಿ ನಡೆಸುವ ವ್ಯಾಸಂಗ. ಇದು ಇರುವ ನಂಬಿಕೆ ಸ್ಥಿತಿಗತಿಗಳು ಸರಿಯೇ ಅಲ್ಲವೇ ಎಂಬುದನ್ನು ಪರೀಕ್ಷಿಸುವುದಕ್ಕೆ ಆಗಬಹುದು ಅಥವಾ ಹೊಸ ವಿಷಯಗಳನ್ನು ಕಂಡು ಹಿಡಿಯುವುದಕ್ಕೆ ಎಂದಿರಬಹುದು. ಹೊಸ ವಿಷಯಗಳು ಹೊರಬಂದಂತೆ ಅದು ಸಫಲವಾದ Research ಆಗುತ್ತದೆ. ಈಗಿರುವ ತಿಳಿವಳಿಕೆ ತಪ್ಪೆಂದು ತಿಳಿಸುವುದೂ ಕೂಡ ಒಂದು ಬಗೆಯ ತಿಳಿವಿನ ಪ್ರಗತಿಯೇ ಆಗುತ್ತದೆ. ಕನ್ನಡದ **ಸಂಶೋಧನೆ** ಈ ಮಾತಿಗೆ ಸರಿಹೊಂದುವ, ಸಂಸ್ಕೃತದಿಂದ ಬಂದ ಶಬ್ದ.

ವಿರುದ್ಧ ಶಬ್ದಗಳು

ಉಪಾಧ್ಯಾಯರಾದವರಲ್ಲಿ ಅನೇಕರಿಗೆ ಈ ಪ್ರಶ್ನೆ ತಲೆದೋರುವುದು ಸಹಜವಾಗಿದೆ. ವಾರ್ಷಿಕ ಪರೀಕ್ಷೆಗಳಲ್ಲಿ ಇಂಥ ಕೆಲವು ಪ್ರಶ್ನೆಗಳನ್ನು ಕೇಳಲೇಬೇಕೆಂದು ಅವರ ಪಠ್ಯ ವಿಷಯಗಳಲ್ಲಿ ನಿಶ್ಚಯಿಸಿರುವುದು ಈ ಬಗೆಯ ಗೊಂದಲಕ್ಕೆ ಕಾರಣವಾಗಿದೆ.

ವಿರುದ್ಧ ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ೧. ತಡೆಯಲ್ಪಟ್ಟ ೨. ಪ್ರತಿಕೂಲವಾದ ೩. ವಿಪರೀತವಾದ, ತಲೆಕೆಳಗಾದ ೪. ಶತ್ರುವಾದ, ದ್ವೇಷವುಳ್ಳ ಇತ್ಯಾದಿ.

ಇವಗಳಲ್ಲಿ ಪರೀಕ್ಷೆಯ ದೃಷ್ಟಿಯಿಂದ ಪ್ರತಿಕೂಲವಾದ ಎಂಬುದು ಮುಖ್ಯ. ಆದರೆ ಎಲ್ಲ ಶಬ್ದಗಳಿಗೂ ಪ್ರತಿಕೂಲವಾದ ಶಬ್ದಗಳು ಇರಲೇಬೇಕೆಂಬುದು ಸರಿಯಲ್ಲ. ನೀರು, ಗಾಳಿ, ಶಬ್ದಗಳಿಗೆ ವಿರುದ್ಧ ಶಬ್ದಗಳನ್ನು ಹೇಗೆ ಹುಡುಕುವುದು? ಸಂಸ್ಕೃತದಲ್ಲಿ ಅ, ನಿರ್ ಮುಂತಾದುವುಗಳನ್ನು ಸೇರಿಸಿ ಶಬ್ದಗಳನ್ನು ಸೃಷ್ಟಿ ಮಾಡಬಹುದು. ಆದರೂ ಅವು ವಿರುದ್ಧವಾಗದೆ ಇರಬಹುದು. ವಾತ-ಗಾಳಿ, ನಿರ್ವಾತ-ಗಾಳಿಯಿಲ್ಲದ ಈ ಬಗೆಯ ರೂಪಗಳು ವಿರುದ್ಧ ಶಬ್ದಗಳಲ್ಲ. ಆದುದರಿಂದ ಉಪಾಧ್ಯಾಯರು ತಮ್ಮ ಚರ್ಚಾ ಸಭೆಗಳಲ್ಲಿ ಈ ಬಗ್ಗೆ ವಿವರವಾಗಿ ಪರ್ಯಾಲೋಚಿಸಿ ವಿರೋಧ ಶಬ್ದ ಎಂಬುದಕ್ಕೆ ಒಂದು ಸೂತ್ರವನ್ನು ರಚಿಸಬೇಕು. ಕನ್ನಡ ಭಾಷೆಯ ಶಬ್ದಕ್ಕೆ ಕನ್ನಡ ಭಾಷೆಯದೇ ವಿರುದ್ಧ ಶಬ್ದವನ್ನು ಬರೆಯಬೇಕು.

ದಿಟ × ಸಟೆ

ಮೇಲು × ಕೀಳು

ಹೀಗೆಯೇ ಸಂಸ್ಕೃತವಾದರೆ

ಸತ್ಯ × ಮಿಥ್ಯ > ಮಿಥ್ಯಾ

ಸುಖ × ದುಃಖ

ವಿಸ್ತಾರ × ಸಂಕೋಚ

ಧೈರ್ಯ × ಭಯ - ಇತ್ಯಾದಿ.

ಆದರೆ ಬಾವಿ ಶಬ್ದಕ್ಕೆ ವಿರುದ್ಧ ಪದಾವಾವುದು? ಇದಕ್ಕೆ ಸ್ಪಷ್ಟವಾದ ಉತ್ತರ ಸಿಕ್ಕುವುದಿಲ್ಲ. ಅಂಥ ಶಬ್ದಗಳನ್ನು ಬಿಟ್ಟು ವಿರುದ್ಧ ಶಬ್ದಗಳಿರುವ ಶಬ್ದಗಳ ಪಟ್ಟಿಯೊಂದನ್ನು ತಯಾರು ಮಾಡಬೇಕು. ಇದು ಉಪಾಧ್ಯಾಯ ಸಂಘಗಳ ಕೆಲಸ.

ಈ ವಿವರ ಹಾಗಿರಲಿ. ಈ ಕೆಲವು ಶಬ್ದಗಳನ್ನು ನೋಡಿ. ತಂದೆ, ತಾಯಿ, ಹೆಂಡತಿ, ಗಂಡ ಈ ಶಬ್ದಗಳಿಗೆ ವಿರುದ್ಧ ಶಬ್ದಗಳಾವುವು? ತಂದೆಗೆ ಸ್ತ್ರೀಲಿಂಗ ತಾಯಿ. ಹೆಂಡತಿಗೆ ಗಂಡ ಪುಲ್ಲಿಂಗ ಅಷ್ಟೆ. ಅವು ವಿರುದ್ಧ ಶಬ್ದಗಳಲ್ಲ.

ಇಂಗ್ಲೀಷಿನಲ್ಲಿ opposite ಎಂಬ ಶಬ್ದವಿದೆ. ಅದಕ್ಕೆ ಅರ್ಥ ೧. ಒಂದು ವಸ್ತು ಅಥವಾ ವ್ಯಕ್ತಿಯ ಪ್ರತಿಯಾಗಿ ಇರುವುದು. ೨. ಸಂಪೂರ್ಣವಾಗಿ ಬೇರೆಯಾಗಿರುವುದು. ೩.ಎದುರಿಗೆ ಇರುವುದು ಮುಂತಾದ ಅರ್ಥಗಳಿವೆ. ನಾವು ಈ oppsite ಗೆ ವಿರುದ್ಧ ಎಂಬ ಶಬ್ದವನ್ನು ಉಪಯೋಗಿಸಿದರೆ ಅಥವಾ ಪ್ರತಿಯಾಗಿರುವ ಅರ್ಥದ ಶಬ್ದ ಎಂದು ಉಪಯೋಗಿಸಿದರೆ ಸ್ವಲ್ಪ ವಾಸಿ. ಈ ಬಗ್ಗೆ ತಜ್ಞರು ಭಾಷಾ ವಿದ್ವಾಂಸರು ಸೇರಿ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ನೀಡಬೇಕು. ಅಂಥ ಸಭೆಯಲ್ಲಿ ನಾನು ಭಾಗವಹಿಸಲು ಸಿದ್ಧ.

ಋ, ಐ, ಔ ಎಂಬ ಅಕ್ಷರಗಳನ್ನು ಬೇರೆಯ ರೀತಿಯಲ್ಲಿ ಬರೆಯಬಹುದಾದುದರಿಂದ ಕನ್ನಡ ವರ್ಣಮಾಲೆಯಿಂದ ಇವುಗಳನ್ನು ಬಿಡಬಹುದಲ್ಲವೆ?

ೠ ಕಾರದ ಬಗ್ಗೆ ಇದೇ ಬಗೆಯ ಪ್ರಶ್ನೆಯನ್ನು ಕೇಳುತ್ತಾರೆ. ಕನ್ನಡದಲ್ಲಿ ೠ ಕಾರವನ್ನು ಬಿಟ್ಟರೆ ಏನೂ ನಷ್ಟವಿಲ್ಲ. ಋ ಕಾರದಿಂದ ಪ್ರಾರಂಭವಾಗುವ ಯಾವ ಶಬ್ದವೂ ಕನ್ನಡದಲ್ಲಿ ಇಲ್ಲದಿದ್ದರೂ ಋತು, ಋಣ, ಋಷಿ, ಋಕ್ಕು ಮುಂತಾದ ಸಂಸ್ಕೃತ ಶಬ್ದಗಳು ನಮ್ಮ ಸಂಸ್ಕೃತಿಯ ಕೆಲವು ವಿಷಯಗಳನ್ನು ಪ್ರತಿನಿಧಿಸುತ್ತವೆ. ಅಲ್ಲದೆ ಋ, ಐ, ಔ ಎಂಬಂಥ ಅಕ್ಷರಗಳ ಉಚ್ಚಾರಣೆಯನ್ನು ಸರಿಯಾಗಿ ಕಲಿಯುವುದರಿಂದ ವಾಕ್‌ಶುದ್ಧಿಯುಂಟಾಗುತ್ತದೆ. ಇದು ಶಿಕ್ಷಾಶಾಸ್ತ್ರದ ಬಹುಮುಖ್ಯವಾದ ಪ್ರಯೋಜನ. ಸಂಸ್ಕೃತದ ಶಬ್ದಗಳಾದ ಕೈವಲ್ಯ, ಕೈಲಾಸ, ಐಪುರಿ, ಐಕ್ಯ, ಔತ್ಸುಕ್ಯ, ಔರಸ ಮುಂತಾದ ಶಬ್ದಗಳು ನಮ್ಮ ಸಾಹಿತ್ಯದಲ್ಲಿ ಅಪಾರ ಸಂಖ್ಯೆಯಲ್ಲಿ ಪ್ರಯೋಗಗೊಂಡಿವೆ. ಇವಗಳನ್ನು ಕನ್ನಡದಲ್ಲಿ ಬರೆಯಬೇಕಾದರೆ ಆಯಾ ರೀತಿಗಳಲ್ಲಿಯೇ ಬರೆಯಬೇಕು. ಇವಗಳಿಂದ ಕನ್ನಡದ ಕಾವ್ಯಗಳಲ್ಲಿ ಬಂಧದ ಬಿಗಿಯೂ ಚೆಲುವೂ ಎದ್ದು ಕಾಣುತ್ತವೆ. ಇವು ನಮ್ಮ ಆಸ್ತಿ. ಅದನ್ನು ನಾವು ಕಳೆದುಕೊಳ್ಳಬಾರದು. ಅಲ್ಲದೆ ಈ ಅಕ್ಷರಗಳು ಸ್ವರಗಳು. ಇವುಗಳ ಸಹಾಯವಿಲ್ಲದೆ ವ್ಯಂಜನಗಳ ಕಾಗುಣಿತವೇ ತಪ್ಪಾಗುತ್ತದೆ. ಆದುದರಿಂದ ಈ ಅಕ್ಷರಗಳನ್ನು ಬಿಡುವ ಆಲೋಚನೆಯನ್ನು ಬಿಡುವುದೇ ಉತ್ತಮ.

ಋ, ೠ ಎಂಬ ಎರಡು ಅಕ್ಷರಗಳು ಕಾಣಬರುತ್ತವೆ. ಯಾವ ಉಪಯೋಗವೂ ಇಲ್ಲದ ೠ ಕಾರವನ್ನು ತೆಗೆದರೆ ತಪ್ಪೆ ? ಋ, ಕ್ಷ, ಜ್ಞ ಎಂಬ ಮೂರು ಅಕ್ಷರಗಳನ್ನು ಕೈ ಬಿಟ್ಟಿದ್ದಾರೆ. ಇದು ಸರಿಯೇ?

ಮೊದಲು ಋ ವಿಚಾರವಾಗಿ ತಿಳಿದುಕೊಳ್ಳೋಣ. ಸಂಸ್ಕೃತದ ವರ್ಣಮಾಲೆಯಲ್ಲಿ ಇರುವ ಸ್ವರಗಳು ಇವು : ಅ, ಆ, ಇ, ಈ, ಉ, ಊ, ಋ, ೠ. ಌ (ಲ್ರಿ ಎಂದು ಉಚ್ಚರಿಸಬೇಕು) ಏ, ಐ, ಓ, ಔ - ಒಟ್ಟು ಹನ್ನೆರಡು. ಇವುಗಳಲ್ಲಿ ಅ, ಇ, ಉ,ಋ - ಇವು ಹ್ರಸ್ವಸ್ವರಗಳು. ಆ, ಈ, ಊ, ೠ -ಇವು ದೀರ್ಘ ಸ್ವರಗಳು. ಏ, ಐ, ಓ, ಔ - ಇವು ಸಂಧ್ಯ ಕ್ಷರಗಳು. ಌ ಎಂಬ ಸ್ವರಕ್ಕೆ ದೀರ್ಘವಿಲ್ಲ. ಸಂಧ್ಯಕ್ಷರಗಳು ಯಾವಾಗಲೂ ದೀರ್ಘ. ಅವಕ್ಕೆ ಹ್ರಸ್ವವಿಲ್ಲ.

ಕನ್ನಡ ವರ್ಣಮಾಲೆಗೂ ಸಂಸ್ಕೃತ ವರ್ಣಮಾಲೆಗೂ ಕೆಲವು ವ್ಯತ್ಯಾಸಗಳಿವೆ. ಕನ್ನಡದಲ್ಲಿ ಉಪಯೋಗದಲ್ಲಿಲ್ಲದ ೠ, ಌ , ಎಂಬ ಅಕ್ಷರಗಳನ್ನು ಕನ್ನಡ ವ್ಯಾಕರಣಕಾರರು ವರ್ಣಮಾಲೆಯಲ್ಲಿ ಸೇರಿಸಿದ್ದಾರೆ. ಸಂಸ್ಕೃತದಲ್ಲಿ ದೀರ್ಘವಿಲ್ಲದ ಌ ಕಾರಕ್ಕೆ ದೀರ್ಘವನ್ನೂ ಸೇರಿಸಿದ್ದಾರೆ. ಸಂಸ್ಕೃತದಲ್ಲಿಲ್ಲದ ಎ, ಒ ಎಂಬ ಹ್ರಸ್ವ ಸ್ವರಗಳನ್ನೂ ಕನ್ನಡಕ್ಕೆ ಸೇರಿಸಿದ್ದಾರೆ. ಏಕೆಂದರೆ ಅವು ಕನ್ನಡದಲ್ಲಿ ಪ್ರಯೋಗದಲ್ಲಿವೆ.

ಇದು ಚರಿತ್ರೆ. ಋ, ೠ ಸ್ವರಗಳಾಗಿರುವುದರಿಂದ ಹ್ರಸ್ವ ದೀರ್ಘಗಳೆಂಬ ದೃಷ್ಟಿಯಿಂದ ವರ್ಣಮಾಲೆಯಲ್ಲಿ ಉಳಿಸಿಕೊಂಡಿದ್ದಾರೆ. ಋ ಕಾರವು ಇರುವ ಒಂದು ಹದಿನೈದು ಇಪ್ಪತ್ತು

ಪದಗಳು ಕನ್ನಡದಲ್ಲಿಯೂ ಪ್ರಯೋಗದಲ್ಲಿವೆ. ಆದುದರಿಂದ ಋಕಾರ ಇರಬೇಕು. ೠಕಾರವನ್ನು ಬಿಟ್ಟರೆ ಅದರಿಂದ ಯಾವ ನಷ್ಟವೂ ಇಲ್ಲ. ಇದನ್ನು ತಿಳಿದು ಕೆಲವು ವರ್ಣಮಾಲೆಗಳಲ್ಲಿ ೠ ಅಕ್ಷರವನ್ನು ಬಿಟ್ಟಿದ್ದಾರೆ. ಇದರಿಂದ ಕಲಿಯುವ ಮಕ್ಕಳಿಗೆ ಸ್ವಲ್ಪ ಭಾರ ಕಡಿಮೆಯಾಯಿತು ಅಷ್ಟೇ! ಆದರೆ ೠ ಕಾರವನ್ನು ವ್ಯಂಜನ ಎಂದು ತಿಳಿಯಬಾರದು. ಇದು ನೆನಪಿನಲ್ಲಿರಬೇಕು. ಇನ್ನೊಂದು ಪ್ರಶ್ನೆಯಲ್ಲಿ ಕ್ಷ ಮತ್ತು ಜ್ಞ ಎಂಬ ಎರಡು ಅಕ್ಷರಗಳನ್ನು ವರ್ಣಮಾಲೆಗೆ ಸೇರಿಸಬೇಕೆಂಬ ಅಪೇಕ್ಷೆಯಿದೆ. ಕ್ಷ ಬೇರೆಯ ಸ್ವತಂತ್ರ ಅಕ್ಷರವಲ್ಲ. ಕ ಕಾರಕ್ಕೆ ಷ ಕಾರದ ಒತ್ತುಕೊಟ್ಟ ಸಂಯುಕ್ತಾಕ್ಷರ ಅದು. ಜ್ಞ ಎಂಬುದೂ ಅಷ್ಟೇ. ಜಕಾರಕ್ಕೆ ಞ ಒತ್ತನ್ನು ಕೊಟ್ಟಿರುವ ಸಂಯುಕ್ತಾಕ್ಷರ ಅದು. ೠ ಕಾರದ ಬಗ್ಗೆಯೂ ಒಂದು ಮಾತು ಹೇಳಬಹುದು. **ಪಿತೃ + ಋಣ** ಎಂಬ ಶಬ್ದಗಳು ಸೇರಿದರೆ **ಪಿತೄಣ** ಎಂದೇ ಆಗುತ್ತದೆ. ಆಗ ೠ ಕಾರಕ್ಕೂ ಅಸ್ತಿತ್ವ ಬರುತ್ತದೆ.

ಈ ವಿಚಾರದ ಸ್ಪಷ್ಟತೆಗೆ ಶ್ರೀ ಆರ್.ಎಲ್. ಅನಂತರಾಮಯ್ಯನವರು ರಚಿಸಿರುವ 'ಮುದ್ದುಕನ್ನಡ' ಪುಸ್ತಕವನ್ನು ಅಭ್ಯಾಸ ಮಾಡಿ (ನವಕರ್ನಾಟಕ ಪ್ರಕಟಣೆ). ಅದರಲ್ಲಿರುವ ಕಾಗುಣಿತದ ಪಟ್ಟಿಯನ್ನು ನೋಡಿ (ಪುಟ.೪೬). ೠಕಾರವನ್ನು ಬಿಟ್ಟಿದೆ.

ಮಾಡಿ, ಮಾಡಿರಿ. ಹೇಳಿ, ಹೇಳಿರಿ. ತಿನ್ನಿ, ತಿನ್ನಿರಿ ಎಂಬಂತೆ ಬಹುವಚನದ ಕ್ರಿಯಾಪದಗಳ ವಿಧಿರೂಪದ ಕೊನೆಯಲ್ಲಿ ರಿ ಸೇರಿಸುವುದು ಸರಿಯೆ?

ಮಧ್ಯಮ ಪುರುಷದ ಬಹುವಚನ ರೂಪಗಳು - ಇವು ಎರಡೂ ಪ್ರಯೋಗದಲ್ಲಿವೆ. ಇಲ್ಲಿರುವ ಇ-ಇರಿ ಎರಡು ಬಹುವಚನ ಪ್ರತ್ಯಯಗಳೂ ಹಳೆಗನ್ನಡದ ಇರ್ ಎಂಬ ಪ್ರತ್ಯಯದ ಬೇರೆ ರೂಪಗಳು. ಆದುದರಿಂದ ಆ ಎರಡು ರೂಪಗಳನ್ನು ಉಪಯೋಗಿಸಬಹುದು. ಈ ವಿಷಯದಲ್ಲಿ ಹಿಂದೆ ತೀ. ನಂ. ಶ್ರೀ.ಯವರು ಬರೆದ ಒಂದು ಕಿರುಲೇಖನವಿದೆ. (ಸಮಾಲೋಕನ: ಪುಟ ೨೪೫-೨೫೫).

ಮಿತ್ರರೊಬ್ಬರು ಶಾಕುಂತಲ ನಾಟಕದ ಬಸವಪ್ಪ ಶಾಸ್ತ್ರಿಗಳ ಅನುವಾದದಿಂದ ಒಂದು ಪದ್ಯವನ್ನು ಬರೆದು ಕಳಿಸಿ ಅದರಲ್ಲಿರುವ ರೋಜಂ ಎಂಬುದಕ್ಕೆ ಗುಲಾಬಿ ಎಂಬ ಅರ್ಥ ಹೊಂದುವುದಿಲ್ಲ. ಏಕೆ? ಎಂದು ಕೇಳಿದ್ದಾರೆ.

ಇದು ಶಾಕುಂತಲ ನಾಟಕದ ಮೂರನೆಯ ಅಂಕದ ಪ್ರಾರಂಭದಲ್ಲಿರುವ ಪದ್ಯ. ಈ ಅಂಕದಲ್ಲಿ ಪರಸ್ಪರ ಅನುರಾಗದಿಂದ ತಪಿಸುತ್ತಿರುವ ಪ್ರಿಯಪ್ರೇಯಸಿಯರು ಮಿಲನಗೊಳ್ಳುವ ಕಥಾ ಭಾಗವಿದೆ. ಶಕುಂತಲೆಯನ್ನು ಆಕೆಯ ಸಖಿಯರಾದ ಪ್ರಿಯಂವದೆ ಮತ್ತು ಅನಸೂಯೆ ಇಬ್ಬರೂ ಸಾಂತ್ವನಗೊಳಿಸುತ್ತ ಆಕೆಯ ತಾಪದ ಕಾರಣವನ್ನು ಕೇಳುತ್ತಿರುತ್ತಾರೆ. ಆ ವೇಳೆಗೆ ದುಷ್ಯಂತನೂ ಅಲ್ಲಿಗೆ ಬಂದು ಅವರಿಗೆ ಕಾಣಿಸಿಕೊಳ್ಳದೆ ಅವರ ಮಾತುಗಳನ್ನು ಕೇಳುತ್ತಿರುತ್ತಾನೆ. ಆ ಸಂದರ್ಭದಲ್ಲಿ ವಿರಹತಾಪದಿಂದ ಬಳಲಿದ ಶಕುಂತಲೆಯನ್ನು ದುಷ್ಯಂತನು ವರ್ಣಿಸುತ್ತಿರುವ ಭಾಗ ಈ ಪದ್ಯದಲ್ಲಿದೆ. ಈ ಪದ್ಯದಲ್ಲಿ ರೋಜ ಎಂಬ ಶಬ್ದವೇ ಇಲ್ಲ.

ಅದು ಉರೋಜ. ಉರ ಎಂದರೆ ಸಂಸ್ಕೃತದಲ್ಲಿ ಎದೆ ಎಂದರ್ಥ. ಅದರಲ್ಲಿ ಹುಟ್ಟಿದ್ದು ಉರೋಜ ಸ್ತನ, ಮೊಲೆ. ಆ ಪದ್ಯದ ಪೂರ್ತಿ ಅರ್ಥ ಹೀಗಿದೆ. "ಆಕೆಯ ತೋಳುಗಳು ಬಾಗಿ ಹೋಗಿವೆ. ಕೆನ್ನೆ ಬಡವಾಗಿದೆ. ಸ್ತನಗಳು ದೃಢತೆಯನ್ನು ಕಳೆದುಕೊಂಡಿವೆ. ಮೈ ಬಿಳಿಚಿಕೊಂಡಿವೆ. ಬಡ ನಡು ಆಯಾಸಗೊಂಡಿದೆ. ಹೀಗಿದ್ದರೂ ಈ ಕೋಮಲೆಯಾದ ಶಕುಂತಲೆ ವಿರಹದಿಂದ ಬೆಂದು ನನಗೆ ವ್ಯಸನವನ್ನೂ ಪ್ರೀತಿಯನ್ನೂ ಒಟ್ಟಿಗೆಯೇ ಉಂಟು ಮಾಡುತ್ತಿದ್ದಾಳೆ. ಅವಳು ಚೈತ್ರಮಾಸದ ಬಿಸಿಗಾಳಿಗೆ ಸಿಕ್ಕಿ ಎಲೆಗಳನ್ನು ಕಳೆದುಕೊಂಡ ವಾಸಂತಿಕೆಯಂತೆ ಕಾಣುತ್ತಿದ್ದಾಳೆ". ಇದೊಂದು ಸುಂದರ ಪದ್ಯ. ರತ್ನಾವಳೀ ಥಿಯೇಟ್ರಿಕಲ್ ಕಂಪನಿಯ ಎ.ವಿ. ವರದಾಚಾರ್ಯರು ಶಾಕುಂತಲಾ ನಾಟಕದಲ್ಲಿ ಈ ಪದ್ಯವನ್ನು ಹೇಳಿದುದನ್ನು ನಾನು ಕೇಳಿದ ನೆನಪಿದೆ.

ಮನಸ್ಸು ಕಲ್ಲಾಗುವುದು ಎಂದರೇನು ?

ಮನಸ್ಸು ಕಲ್ಲಾಗುವುದು ಎಂದರೆ ಕಷ್ಟಗಳನ್ನು ಎದುರಿಸುವುದಕ್ಕೆ ಸಿದ್ಧರಾಗುವುದು. ಕಷ್ಟ ಬಂದಿತೆಂದು ಕೈ ಚೆಲ್ಲಿ ಕೂಡುವುದಲ್ಲ. ಇದು ಒಂದು ಅರ್ಥ. ಮಂಕುತಿಮ್ಮನ ಈ ಕಾವ್ಯವನ್ನು ಗಮನಿಸಿ:

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು

ಕಲ್ಲಾಗು ಕಷ್ಟಗಳ ಮಳೆಯು ವಿಧಿ ಸುರಿಯೆ.

ಇಲ್ಲಿ ಈ ಅರ್ಥವಿದೆ. 'ನನ್ನ ವಿಚಾರದಲ್ಲಿ ಅವನ ಮನಸ್ಸು ಕಲ್ಲಾಗಿದೆ'. ಎಂದರೆ ನನ್ನ ಬಗೆಗೆ ಅವನು ಕರುಣೆಯನ್ನು ತೋರಿಸುವುದಿಲ್ಲ ಎಂದರ್ಥ. "ಕಲ್ಲು ಮನಸಾದಾಗ ನಟ್ಟುದೀ ನೋಟ" (ದುಃಖಸೇತು) ಎಂಬ 'ಶ್ರೀ' ಯವರ ಪ್ರಸಿದ್ಧ ವಾಕ್ಯವನ್ನು ಗಮನಿಸಿ.

ಇಮೇಜ್ ಎಂದರೇನು ?

ಇಮೇಜ್ ಎಂದರೆ ಪ್ರತೀಕ, ಬಿಂಬ, ಆಕಾರ, ಸ್ವರೂಪ. ಕಂಡರಿಸಿದ ಚಿತ್ರದ, ರೇಖೆಯಲ್ಲಿ ಮೂಡಿಸಿದ ಸ್ವರೂಪವೂ ಆಗಬಹುದು. ಇಂಗ್ಲೀಷಿನಲ್ಲಿ He has no image ಎಂದರೆ ಸಾರ್ವಜನಿಕರು ಗೌರವಿಸಬಹುದಾದ ವ್ಯಕ್ತಿತ್ವವಿಲ್ಲ ಎಂದರ್ಥ. ಆದರೆ ಕಾವ್ಯದಲ್ಲಿ ಅದಕ್ಕೆ ಬೇರೆ ಅರ್ಥವಿದೆ.

ಕಾವ್ಯದಲ್ಲಿ ಒಂದು ಶಬ್ದದಿಂದ, ನುಡಿಗಟ್ಟಿನಿಂದ, ಅಲಂಕೃತ ವಾಕ್ಯಗಳಿಂದ ಓದುಗನ ಮನಸ್ಸಿನಲ್ಲಿ ಸೃಷ್ಟಿಸುವ ಸಾಕಾರ ವಸ್ತುಗಳಿಗೆ ಸಮಾನವಾದ ಪ್ರತೀಕಗಳು IMAGE ಗಳು. ಎಲ್ಲ ಸೃಷ್ಟಿಶೀಲ ಕಾವ್ಯದಲ್ಲಿಯೂ ಈ ಪ್ರತೀಕ ನಿರ್ಮಾಣ ಪ್ರಮುಖವಾದ ವಿಶಿಷ್ಟವಾದ ಸತ್ವವಾಗಿರುತ್ತದೆ.

ಶಬ್ದಗಳಿಗೆ ಸಪ್ತಮೀ ವಿಭಕ್ತಿ ಪ್ರತ್ಯಯವನ್ನು ಹಚ್ಚುವಾಗ 'ಅಲ್ಲಿ' ಎಂದು ಹೇಳುವ ಪ್ರತ್ಯಯವನ್ನು ಸೇರಿಸುತ್ತಾರೆ. ಮನೆಯಲ್ಲಿ, ಶಾಲೆಯಲ್ಲಿ ಇತ್ಯಾದಿ. ಆದರೆ ಕೆಲವರು

ಮನೇನಲ್ಲಿ, ಶಾಲೇನಲ್ಲಿ, ಬೀದೀನಲ್ಲಿ ಎಂದು ಉಪಯೋಗಿಸುತ್ತಾರಲ್ಲ. ಈ 'ನಲ್ಲಿ'ಯಾವ ಪ್ರತ್ಯಯ ?

ಭಾಷೆಯು ಉಪಯೋಗವಾಗುವ ಕ್ರಮವನ್ನು ಅನುಸರಿಸಿ ವ್ಯಾಕರಣ ಸೂತ್ರಗಳನ್ನು ವಿದ್ವಾಂಸರು ರಚಿಸಿರುತ್ತಾರೆ. ಆದುದರಿಂದ ಆ ಕ್ರಮವನ್ನು ಬಿಟ್ಟರೆ ಭಾಷೆಯಲ್ಲಿ ತಪ್ಪುಗಳು ಉಂಟಾಗುತ್ತವೆ. ಭಾಷೆಯ ವಿದ್ಯಾರ್ಥಿಗಳು ಇದನ್ನು ನೆನಪಿಡಬೇಕು. ಉದಾ: ಅಕಾರಾಂತವಾದ ಮೂರು ಲಿಂಗದ ಶಬ್ದಗಳನ್ನು ನೋಡಿ. ರಾಮ ಎಂಬುದು ಸಪ್ತಮೀ ವಿಭಕ್ತಿಯಲ್ಲಿ ರಾಮನಲ್ಲಿ ಎಂದಾಗುತ್ತದೆ. ಹಾಗೆಯೇ ಅಕ್ಕ-ಅಕ್ಕನಲ್ಲಿ ಗಿಡ-ಗಿಡದಲ್ಲಿ ಇಕಾರಾಂತವನ್ನು ನೋಡಿ. ಹರಿ-ಹರಿಯಲ್ಲಿ , ಗೌರಿ-ಗೌರಿಯಲ್ಲಿ , ಬೀದಿ-ಬೀದಿಯಲ್ಲಿ.

'ಉ' ಕಾರಾಂತವಾದ ಶಬ್ದಗಳನ್ನು ಗಮನಿಸಿ. ಶಂಭು - ಶಂಭುವಿನಲ್ಲಿ, ವಧು - ವಧುವಿನಲ್ಲಿ, ಚೊಂಬು - ಚೊಂಬುವಿನಲ್ಲಿ, ಹೀಗೆಯೇ 'ಎ' ಕಾರಾಂತ ಶಬ್ದಗಳನ್ನು ನೋಡೋಣ. ಹೆಗ್ಗಡೆ-ಹೆಗ್ಗಡೆಯಲ್ಲಿ, ಸೀತೆ-ಸೀತೆಯಲ್ಲಿ, ಮನೆ-ಮನೆಯಲ್ಲಿ , ಈ ಕ್ರಮವನ್ನರಿತು ಸಪ್ತಮೀ ವಿಭಕ್ತಿಯನ್ನು ಸೇರಿಸಬೇಕು. ಆದುದರಿಂದ ಮನೇನಲ್ಲಿ, ಬೀದೀನಲ್ಲಿ, ಶಾಲೇನಲ್ಲಿ ಎಂಬಂಥ ರೂಪಗಳು ಶುದ್ಧ ಅಬದ್ಧಗಳು.

ಬತ್ತ-ಭತ್ತ ಇವುಗಳಲ್ಲಿ ಯಾವುದು ಸರಿ?

ಈ ಶಬ್ದದ ಕತೆ ಸ್ವಲ್ಪ ದೊಡ್ಡದಾಗಿದೆ. ಬಹಳ ಹಿಂದಿನಿಂದಲೂ ಈ ಎರಡು ರೂಪಗಳೂ ಪ್ರಚಾರದಲ್ಲಿವೆ. ಶಾಸನಗಳಲ್ಲಿಯೂ ಕಾವ್ಯಗಳಲ್ಲಿಯೂ ಪ್ರಯೋಗವಾಗಿವೆ. ಕ್ರಿ.ಶ. ೬೭೫ರ ಕೊಪ್ಪದ ಶಾಸನ ಒಂದರಲ್ಲಿ, ಕ್ರಿ.ಶ. ೧೦ನೆಯ ಶತಮಾನದ ವಡ್ಡಾರಾಧನೆಯಲ್ಲಿಯೂ ಇದರ ಪ್ರಯೋಗಗಳನ್ನು ಕಾಣಬಹುದು.

ಸಂಸ್ಕೃತದಲ್ಲಿ 'ಭಕ್ತ' ಎಂದರೆ ಧಾನ್ಯ, ಆಹಾರ ಎಂಬ ಅರ್ಥಗಳಿವೆ. ಭಕ್ತಕಂಸ = ಅನ್ನದ ಪಾತ್ರೆ. ಭಕ್ತಕಾರ = ಅಡಿಗೆ ಮಾಡುವವನು. ಭಕ್ತದಾಸ = ಅನ್ನಕ್ಕಾಗಿ ಜೀತ ಮಾಡುವವನು. ಭಕ್ತಪುಲಾಕ = ಅನ್ನದ ಅಗುಳು. ಭಕ್ತಮಂಡ = ಅನ್ನದ ಗಂಜಿ - ಮುಂತಾದ ಶಬ್ದಗಳಿವೆ. ಪ್ರಾಕೃತದಲ್ಲಿ ಇದು ಭತ್ತ ಆಗುತ್ತದೆ. ಅಲ್ಲಿಂದ ವ್ಯಾಪಕವಾಗಿ ಕನ್ನಡದಲ್ಲಿ ಭತ್ತ —ಬತ್ತ ಎಂಬ ಎರಡು ರೂಪಗಳು ಜನರಿಗೆ ಪರಿಚಯವಾಗಿವೆ. ಇಂಗ್ಲೀಷಿನ Paddy ಎಂಬ ಶಬ್ದಕ್ಕೂ Bata ಎಂಬ ಶಬ್ದಕ್ಕೂ ಇದೇ ಮೂಲ. ಇದು ವ್ಯಾಪಕವಾದ ಉಪಯೋಗದ ಮೂಲಕ ಭಾರತದ ಭಾಷೆಗಳಲ್ಲೂ ಯೂರೋಪಿನ ಭಾಷೆಗಳಲ್ಲೂ ಮಲಯಾ ಮುಂತಾದ ಕಡೆಗಳಲ್ಲಿಯೂ ಪ್ರಚಾರದಲ್ಲಿದೆ. ಇದರ ವ್ಯುತ್ಪತ್ತಿಯನ್ನು ಕುರಿತು ಅನೇಕ ವಿದ್ವಾಂಸರು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಬಗೆಯ ಅಭಿಪ್ರಾಯಗಳ ವ್ಯಾಸಾಂಗ ತುಂಬ ಸ್ವಾರಸ್ಯಕರವಾಗಿರುತ್ತದೆ.

Paddy ಶಬ್ದಕ್ಕೆ ಇಂಗ್ಲೀಷಿನಲ್ಲಿ ಐರ್ಲೆಂಡ್ ದೇಶದ ವ್ಯಕ್ತಿ ಎಂಬ ಇನ್ನೊಂದು ಅರ್ಥವಿದೆ. ಅದು Patrick ಶಬ್ದದ ಸಂಕ್ಷಿಪ್ತವಾದ ಪ್ರೀತಿ ವಾಚಕ ಶಬ್ದ. ಈ ಎರಡು ಶಬ್ದಗಳನ್ನೂ ಬಲ್ಲ ವಿದ್ವಾಂಸನು ಬರೆದಿರುವ ಒಂದು ವಾಕ್ಯವನ್ನು ನಿಘಂಟುಕಾರರು ಉದಾಹರಿಸುತ್ತಾರೆ.

" In Ireland paddy makes riots, in Bengal raiyats make paddy; and in this lies the difference between the paddy of green Bengal and the paddy of the Emerald isle."

III ಶ್ರೀ ಸಾಮಾನ್ಯರು ಕೇಳಿದ ಪ್ರಶ್ನೆಗಳು

ಖಂಡೇಂದುಧರ ಎಂದರೇನು ?

ಖಂಡ ಎಂದರೆ ಪೂರ್ಣವಲ್ಲದ, ಅಂದರೆ ಅರ್ಧ. ಇಂದು ಅಂದರೆ ಚಂದ್ರ. ಧರ ಎಂದರೆ ಧರಿಸಿರುವವನು. ಅರ್ಧಚಂದ್ರಧರ = ಶಿವ

ಹಳ್ಳಿಯ ಜನರು ಕುರಿ ಆಡುಗಳಿಗೆ ಬದುಕು ಎಂದು ಏಕೆ ಕರೆಯುತ್ತಾರೆ ?

ಬದುಕು ಎಂಬ ಕನ್ನಡದ ಶಬ್ದಕ್ಕೆ ಮೂಲ ರೂಪ **'ಬರ್ದುಂಕು'** ಈ ಶಬ್ದಕ್ಕೆ ಅನೇಕ ಅರ್ಥಗಳಿವೆ. ೧. ಪ್ರಾಣವನ್ನು ಉಳಿಸಿಕೋ, ಜೀವಧಾರಣೆ ಮಾಡು, ಜೀವಿಸು. ೨. ಜೀವನವನ್ನು ನಡೆಸು, ಹೊಟ್ಟೆ ಹೊರೆ. ೩. ಕಷ್ಟದಿಂದ ಬಿಡುಗಡೆ ಹೊಂದು ೪. ಸಾರ್ಥಕತೆಯನ್ನು ಪಡೆ ೫. ಪಾರಾಗಿ ಹೋಗು, ತಪ್ಪಿಸಿಕೊ ೬. ನೆಮ್ಮದಿಯನ್ನು ಕಾಣು, ಸುರಕ್ಷಿತವಾಗಿರು ೭. ಜೀವನೋಪಾಯ. ಕುರಿಆಡುಗಳು ಹಳ್ಳಿಗಳಲ್ಲಿ ಕೆಲವರಿಗೆ ಜೀವನೋಪಾಯವಾಗಿರುವುದರಿಂದ ಅವುಗಳನ್ನೇ ಬದುಕು ಎಂದು ಕರೆಯುತ್ತಾರೆ.

NOTES ಈ ಶಬ್ದವನ್ನು ಕನ್ನಡದಲ್ಲಿ ಹೇಗೆ ಉಪಯೋಗಿಸಬೇಕು ?

ಕನ್ನಡದಲ್ಲಿ ಇದಕ್ಕೆ ಟಿಪ್ಪಣಿ ಎಂದು ಬರೆಯಬಹುದು. NOTES ಎಂಬ ಬಹುವಚನದ ಇಂಗ್ಲಿಷ್ ಶಬ್ದಕ್ಕೆ ಪಠ್ಯ ಪುಸ್ತಕಗಳಿಗೆ ಬರೆದ ಕಿರುಪರಿಚಯದ ಗ್ರಂಥ ಎಂದೇ ಅರ್ಥ. ರೂಪಾಯಿಗಳ ನೋಟಿಗೆ NOTE ಎಂದು ಮಾತ್ರ ಉಪಯೋಗಿಸುತ್ತಾರೆ.

ಸಾಲ ಮಾಡಿಯಾದರೂ ತುಪ್ಪವನ್ನು ಕುಡಿ ಎಂದರೇನು ?

ಸಾಲ ಮತ್ತು ತುಪ್ಪದ ಸಮಾಚಾರ ಸಂಸ್ಕೃತದ ಒಂದು ಪದ್ಯದಲ್ಲಿ ಬರುತ್ತದೆ. ಆ ಮಾತು ಚಾರ್ವಾಕಮತವೆಂಬ ಒಂದು ಮತದ ಪ್ರಮುಖ ತತ್ವವನ್ನು ತಿಳಿಸುತ್ತದೆ. ಆ ಪದ್ಯ ಹೀಗಿದೆ.

ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಃ ಕುತಃ
ತಸ್ಮಾತ್ ಸರ್ವಪ್ರಕಾರೇಣ ಋಣಂ ಕೃತ್ವಾ ಘೃತಂ ಪಿಬ॥

'ಬೂದಿಯಾದ ದೇಹ ಮತ್ತೆಲ್ಲಿ ಹಿಂದಕ್ಕೆ ಬರುತ್ತದೆ ? ಆದ್ದರಿಂದ ಬದುಕಿರುವಾಗಲೆ ಸಾಲ ಮಾಡಿಯಾದರೂ ರುಚಿಯಾದ ಭೋಜನ ಮಾಡು.' ಎಂದು ಆ ಪದ್ಯದ ಅರ್ಥ. ಹೀಗೆ ಹೇಳುವ ಚಾರ್ವಾಕಮತವು ಆದು ನಾಸ್ತಿಕ ದರ್ಶನಗಳಲ್ಲಿ ಒಂದು. 'ಅದನ್ನು ನಂಬುವವರು ನಿರೀಶ್ವರವಾದಿಗಳು. ಇವರಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆಯಿಲ್ಲ' ಎಂದು ಅದರ ಅರ್ಥ.

ಮುಕ್ತಿ-ವಿಮುಕ್ತಿ ಈ ಶಬ್ದಗಳಲ್ಲಿ ಇರುವ ವ್ಯತ್ಯಾಸವೇನು ?

ಮುಕ್ತಿ ಎಂದರೆ ಬಿಡುಗಡೆ. ಮುಖ್ಯವಾಗಿ ಸಂಸಾರ ಬಂಧನದಿಂದ ನಿವೃತ್ತಿ. ಇದು ಅಪವರ್ಗ ಎಂಬ ಹೆಸರು ಪಡೆದಿದೆ. ಈ ಶಬ್ದಕ್ಕೆ ವೇದಾಂತದ ದೃಷ್ಟಿಯಿಂದ ತ್ರಿಮತಾಚಾರ್ಯರು ಕಿಂಚಿತ್ ಭೇದದ ವಿವರಣೆಗಳನ್ನು ನೀಡುತ್ತಾರೆ. ವಿಮುಕ್ತಿ ಎಂಬ ಶಬ್ದದಲ್ಲಿ ವಿ ಎಂಬುದು ಒಂದು ಉಪಸರ್ಗ. ಅರ್ಥ ಅದೇ.

ಪುಡಾರಿ - ಪುಂಡ - ಈ ಎರಡೂ ಒಂದೇ ಅರ್ಥವನ್ನು ನೀಡುತ್ತವೆಯೇ ?

ಪುಂಡ ಎಂದರೆ ತುಂಟ, ದುಷ್ಟ ಎಂದರ್ಥ. ಆದರೆ ಅದು ವ್ಯಾಪಕವಾಗಿ ನೀತಿಯಿಲ್ಲದವನು, ಪೋಲಿ ಎಂಬ ಅರ್ಥದಲ್ಲಿಯೂ ಉಪಯೋಗವಾಗುತ್ತದೆ. ಅದು ಕನ್ನಡದ ಶಬ್ದ. ದ್ರಾವಿಡ ಭಾಷೆಗಳಲ್ಲಿಯೂ ಮರಾಠಿ ಭಾಷೆಗಳಲ್ಲಿಯೂ ಉಪಯೋಗದಲ್ಲಿದೆ. ಪುಡಾರಿ ಎಂಬುದು ಮರಾಠಿ ಭಾಷೆಯ ಪುಢಾರೀ, ಪುಢಾಕಾರೀ ಎಂಬ ಶಬ್ದಗಳಿಂದ ಬಂದುದು. ಆ ಶಬ್ದಕ್ಕೆ ಮುಂದಾಳು, ನಾಯಕ, Leader ಎಂಬ ಅರ್ಥಗಳಿವೆ. ಈಚೀಚೆಗೆ ಈ ಎರಡು ಶಬ್ದಗಳ ಅರ್ಥ ವ್ಯತ್ಯಾಸ ಮಾಯವಾಗುತ್ತಿದೆ.

ಉಲಕೋಚಿ, ಹರಾಮಿ ಎಂಬ ಶಬ್ದಗಳು ದಾಸ ಸಾಹಿತ್ಯದಲ್ಲಿ ಎಲ್ಲಾದರೂ ದೊರಕತ್ತವೆಯೇ?

ಈ ಶಬ್ದಗಳು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಾರದಲ್ಲಿವೆ. ಬೇಂದ್ರೆಯವರು ಉಲಕೋಚಿ ಶಬ್ದವನ್ನು ಉಪಯೋಗಿಸುತ್ತಾರೆ. ಇದಕ್ಕೆ ತುಂಟ, ಕೇಡಿಗ ಎಂದರ್ಥ. ದಕ್ಷಿಣ ಕನ್ನಡದಲ್ಲಿ, ಬೆಂಗಳೂರು ಕಡೆ ಹರಾಮಿ ಶಬ್ದವು ಪ್ರಯೋಗದಲ್ಲಿದೆ. ಇದಕ್ಕೆ ಅನ್ಯಾಯದ, ದುಷ್ಟ, ಕೆಡುಕು ಬುದ್ಧಿಯ ಹಂಗಸು ಎಂದರ್ಥ. ಹಿಂದೀ ಮತ್ತು ಮರಾಠಿ ಭಾಷೆಯಲ್ಲಿಯೂ ಇದರ ಪ್ರಯೋಗವಿದೆ. ಇದು ಹರಾಮ್ ಶಬ್ದದಿಂದ ಬಂದುದು. ನನ್ನ ಗಮನದಲ್ಲಿ ಇವೆರಡೂ ದಾಸ ಸಾಹಿತ್ಯದಲ್ಲಿ ಸಿಕ್ಕಿಲ್ಲ. ದಾಸ ಸಾಹಿತ್ಯಕ್ಕೆ ಸೇರದಂಥ ಶಬ್ದಗಳೇನೂ ಅಲ್ಲ.

ಚರ್ವಿತಚರ್ವಣ ಎಂದರೇನು?

ಸಂಸ್ಕೃತದ ಚರ್ವ್ ಶಬ್ದಕ್ಕೆ ಅಗಿದು ತಿನ್ನು ಎಂದು ಅರ್ಥ. ಚರ್ವಿತ ಎಂದರೆ ಅಗಿದದ್ದು ಚರ್ವಣ ಎಂದರೆ ಅಗಿಯುವುದು. ಚರ್ವಿತಸ್ಯ ಚರ್ವಣಮ್= ಅಗಿದದ್ದನ್ನು ಅಗಿಯುವುದು. ಆಹಾರವನ್ನು ಅಗಿದ ಮೇಲೆ ಆದರ ಸಾರವೆಲ್ಲ ಗಂಟಲಿನ ಒಳಕ್ಕೆ ಹೋಗಿ ಚರಟ ಮಾತ್ರ ಬಾಯಿಯಲ್ಲಿರುತ್ತದೆ. ಉದಾ : ಕೊಬ್ಬರಿಯ ಚೂರು, ತಾಂಬೂಲ. ಕೊಬ್ಬರಿಯ ಚರಟವನ್ನು ಮತ್ತೆ ಮತ್ತೆ ಅಗಿಯುವುದರಿಂದ ಯಾವ ರುಚಿಯೂ ಒದಗುವುದಿಲ್ಲ. ಅದು ಅಪ್ರಯೋಜಕವಾದ ಕೆಲಸ ಎಂದು ಅರ್ಥ ಸ್ಪಷ್ಟ. ಇದಕ್ಕೆ ಸಮಾನವಾದ ಮತ್ತೊಂದು ಶಬ್ದವೂ ಇದೆ. ಪಿಷ್ಟ ಪೇಷಣ = ಹಿಟ್ಟನ್ನು ಹಿಟ್ಟು ಮಾಡುವುದು. ಈ ಶಬ್ದಕ್ಕೂ ಅಪ್ರಯೋಜಕವಾದ ಕೆಲಸವನ್ನು ಮಾಡುವುದು ಎಂದೇ ಅರ್ಥ. ಸಂಸ್ಕೃತದಲ್ಲಿ ಈ ಎರಡು ಶಬ್ದಗಳನ್ನು 'ಚರ್ವಿತ ಚರ್ವಣ ನ್ಯಾಯ, ಪಿಷ್ಟಪೇಷಣ ನ್ಯಾಯ' ಎಂದು ಲೌಕಿಕ ನ್ಯಾಯಗಳಲ್ಲಿ ಪಟ್ಟಿ ಮಾಡಿದ್ದಾರೆ. ಕನ್ನಡದಲ್ಲಿ ಇದನ್ನೇ ನಾವು **'ತೌಡು ಕುಟ್ಟುವುದು'** ಎಂದು ಕರೆಯುತ್ತೇವೆ. ಕೆಲವರು **'ಗಾಳಿಯನ್ನು ಗುದ್ದುವುದು'**

ಎಂದು ವಿವರಿಸುತ್ತಾರೆ. ಈ ಎರಡು ಕೆಲಸಗಳೂ ನಿರುಪಯುಕ್ತ ಕಾರ್ಯಗಳೇ ಅಲ್ಲವೇ! ಕೇವಲ ನಿರುಪಯುಕ್ತ ಎಂದು ಹೇಳುವುದಕ್ಕಿಂತ ಈ ಮೇಲೆ ವಿವರಿಸಿದ ಶಬ್ದಗಳಲ್ಲಿ ಯಾವುದನ್ನು ಉಪಯೋಗಿಸಿದರೂ ಹೆಚ್ಚು ಪರಿಣಾಮಕಾರಿಯಾಗಿ ಇರುತ್ತದೆಬುದನ್ನು ಭಾಷೆಯ ಪ್ರಯೋಗದಲ್ಲಿ ಚಾತುರ್ಯವುಳ್ಳವರು ಹೇಳಬಲ್ಲರು.

ಕರತಲಾಮಲಕ ಎಂದರೇನು ?

ಕರತಲ = ಅಂಗೈ. ಆಮಲಕ = ನೆಲ್ಲಿಯ ಕಾಯಿ. ಅಂಗೈನೆಲ್ಲಿಯಕಾಯಿ. ಒಂದು ನೆಲ್ಲಿಯ ಕಾಯಿಯನ್ನೆ ನಿಮ್ಮ ಅಂಗೈಯಲ್ಲಿಟ್ಟು ನೋಡಿ. ಆ ಕಾಯಿಯ ಸಂಪೂರ್ಣ ಪರಿಚಯವಾಗುತ್ತದೆ. ಬೇಕಾದರೆ ನೀವು ಆ ನೆಲ್ಲಿಯಕಾಯಿಯನ್ನು ಬಾಯಿಗೆ ಹಾಕಿಕೊಂಡು ಅದರ ರುಚಿಯನ್ನು ತಿಳಿಯಬಹುದು. ಒಬ್ಬ ವ್ಯಕ್ತಿಗೆ ವೇದಾಂತ ಕರತಲಾಮಲಗವಾಗಿದೆ ಎಂದರೆ ಆ ವಿಷಯದಲ್ಲಿ ಆತನು ಪೂರ್ಣಜ್ಞಾನಿ ಎಂದರ್ಥ.

ಸೋದರಮಾವನನ್ನು ಸಹೋದರ ಮಾವ ಎಂದು ಏಕೆ ಕರೆಯುವುದಿಲ್ಲ?

ಸೋದರ, ಸಹೋದರ ಎಂಬ ಎರಡೂ ಸರಿಯಾದ ಸಂಸ್ಕೃತ ಶಬ್ದಗಳು. ಸ + ಉದರ = ಸೋದರ. ಸಹ + ಉದರ = ಸಹೋದರ. ಮೊದಲಿನಿಂದಲೂ ನೆಂಟತನವನ್ನು ಸೂಚಿಸುವಾಗ ಸೋದರ ಶಬ್ದ ಪ್ರಚಾರದಲ್ಲಿದೆ. ಅದೊಂದು ಅಭ್ಯಾಸ, ಸಂಪ್ರದಾಯ. ಎಲ್ಲರೂ ಒಪ್ಪಿರುವ ಪ್ರಯೋಗವನ್ನು ಬಿಡಬೇಕಾದ ಅಗತ್ಯವಿಲ್ಲ.

ಅವಗಾಹನೆಗೆ, ವಿನಯದಿಂದ, ನಿವೇದನೆ ಎಂಬ ಶಬ್ದಗಳನ್ನು ಯಾವ ಸಂದರ್ಭಗಳಲ್ಲಿ ಉಪಯೋಗಿಸಬೇಕು?

ಸರಕಾರದ ಕಚೇರಿಗಳ ವ್ಯವಹಾರಕ್ಕೆ ಸಂಬಂಧಿಸಿದವು ಈ ಶಬ್ದಗಳು ಇಂಗ್ಲಿಷಿನಲ್ಲಿ For Perusal ಎಂದು ಬರೆಯುವಾಗ **ಅವಗಾಹನೆಗೆ** ಎಂದೂ Report ಎಂದು ಬರೆಯುವಾಗ **ನಿವೇದನೆ** ಎಂದೂ Submitted ಎಂದೂ ಬರೆಯುವಾಗ **ವಿನಯದಿಂದ** ಎಂದೂ ಬರೆದರೆ ಸರಿಹೋಗುತ್ತದೆ.

ಚಕ್ಕಲಗುಳಿ ಎಂದರೇನು ?

ಈ ಶಬ್ದವೂ ಅನೇಕ ಪರ್ಯಾಯ ಉಳ್ಳದ್ದು. ಚಕ್ಕಲಗುಲಿ, ಚಕ್ಕಳಗುಳಿ, ಚಕ್ಕಳಿಗುಳಿ, ಚಕ್ಕುಲಿಗುಲಿ, ಚಕ್ಕುಳಿಗುಳಿ, ಚಿಕುಲಗುಲಿ, ಈಗ ಕಚುಂಗುಳಿ, ಚಕಂಗುಳಿ ಬೇರೆ ಸೇರಿವೆ. ಇದರ ಅರ್ಥ ಮಾತ್ರ ಎಲ್ಲರಿಗೂ ಗೊತ್ತು. ಈಚೆಗೆ ನಡೆಸಿದ ಬೇರೆ ಬೇರೆ ಗ್ರಂಥಗಳ ವಾಚನದಲ್ಲಿ ನನಗೆ ಜಕ್ಕುಲಿ ಎಂಬ ಶಬ್ದದ ಪರಿಚಯವಾಯಿತು. ಅದಕ್ಕೆ ಕಂಕುಳು ಎಂದರ್ಥ. ಇದು ತಿಳಿದ ಮೇಲೆ ಜಕ್ಕುಳಿಸು ಎಂಬ ಶಬ್ದದ ಸಾಧ್ಯತೆಯ ಬಗ್ಗೆ ನಂಬಿಕೆ ಹುಟ್ಟಿತು. ಆಗ ಮೇಲೆ ತಿಳಿಸಿದ ಎಲ್ಲ ಶಬ್ದಗಳಿಗೂ ಜಕ್ಕುಲಿ, ಜಕ್ಕುಲಿಸು ಎಂಬ ಶಬ್ದಗಳೇ ಮೂಲವೆಂಬುದು ನಿರ್ಧಾರವಾಯಿತು.

ಚಂದ್ರನನ್ನು ಮಾತ್ರ ಚಂದ್ರಮ್ಮ ಎನ್ನುತ್ತಾರೆ. ಸೂರ್ಯಮ್ಮ ಎಂದೇಕೆ ಇಲ್ಲ ?

ಯಾರು ಚಂದ್ರನನ್ನು ಚಂದ್ರಮ್ಮ ಎಂದು ವರ್ಣಿಸಿಲ್ಲ. ಚಕೋರಂಗೆ ಚಂದ್ರಮನ ಚಿಂತೆ ಎಂಬ ವಚನವನ್ನು ಪರಿಶೀಲಿಸಿ. ಆ ಶಬ್ದ ಚಂದ್ರಮ ಅಷ್ಟೆ. ಸಂಸ್ಕೃತದಲ್ಲಿ ಚಂದ್ರಮಸ ಎಂಬ ಶಬ್ದವಿದೆ. ಅದರ ಸಂಕ್ಷಿಪ್ತರೂಪ ಚಂದ್ರಮ ಅಷ್ಟೆ. ಭಾರತದಲ್ಲಿ ಯಾವ ಭಾಷೆಯಲ್ಲಿಯೂ ಚಂದ್ರನು ಹೆಂಗಸಾಗಿಲ್ಲ. ಹೆಂಗಸರ ಮುಖಗಳನ್ನು ವರ್ಣಿಸುವಾಗ ಚಂದ್ರಮುಖಿ ಎಂದು ಕರೆಯುತ್ತಾರೆ. ಈಚೆಗೆ ಚಂದ್ರನ ವಿಚಾರವಾಗಿ ವಿಜ್ಞಾನಿಗಳು ಕೊಟ್ಟಿರುವ ವಿವರಣೆಯನ್ನು ಕೇಳಿದ ಮೇಲೆ ಹೆಂಗಸರು ಕೂಡ ಚಂದ್ರಮುಖಿ ಎಂದರೆ ಮುಖ ತಿರುಗಿಸುತ್ತಾರೆ. ನೀವು ಸೂರ್ಯನನ್ನೇಕೆ ಹೆಣ್ಣು ಮಾಡಬೇಕು ?

ರ ಕಾರದ ಹಿಂದೆ ಸೊನ್ನೆ ಇರುವ ಶಬ್ದಗಳಿವೆಯೇ?

- ಇವೆ. ದಂರೋಟು, ಸಂರಂಭ, ಸಾಂರಾಜ್ಯ ಹೀಗೆ ಇನ್ನಷ್ಟು ಹುಡುಕಬಹುದು.

ಒಬ್ಬ ಓದುಗರು ಈ ಪದಪುಂಜಗಳನ್ನು ಕಳಿಸಿ ಅವುಗಳ ವಿವರಣೆಯನ್ನು ನಿರೀಕ್ಷಿಸಿದ್ದಾರೆ. ವಿಧಿಯ ಕರಾಳ ಛಾಯೆ. ದಾರಿಹೋಕ, ಕಂಬಿಯಿಲ್ಲದೆ ರೈಲು ಬಿಡು.

ವಿಧಿ, ಹಣೆಯ ಬರಹ ಎಂಬುದು ಹೇಗೆ ವ್ಯವಹರಿಸುತ್ತದೆ ಎಂಬುದನ್ನು ಹೇಳಲಾಗುವುದಿಲ್ಲ. ಅದು ನಮಗೆ ಉಪಟಳವನ್ನುಂಟು ಮಾಡಿದಾಗ ಅದರ ಕರಿಯ ನೆರಳು ನಮ್ಮ ಮೇಲೆ ಬಿದ್ದಿದೆ ಎನ್ನುತ್ತೇವೆ. ಆ ಕರಿಯ ನೆರಳೇ ಕರಾಳವಾದ ಛಾಯೆ. ತುಂಬ ಕಷ್ಟಕರವಾದ ದಿನಗಳು ಎಂದರ್ಥ.

ದಾರಿಹೋಕ ಎಂದರೆ ದಾರಿಯಲ್ಲಿ ಓಡಾಡುವವನು ಎಂದರ್ಥ. ಅತಿ ಸಾಮಾನ್ಯ ಮನುಷ್ಯ.

ರೈಲುಬಿಡು ಎಂದರೆ ಬುರುಡೆ ಹೊಡಿ ಎಂದರ್ಥ. ಸ್ವಲ್ಪವೂ ಆಧಾರವಿಲ್ಲದ ಹೇಳಿಕೆಗೆ ಬುರುಡೆ ಎಂಬ ಹೆಸರು ಸಲ್ಲುತ್ತದೆ. ಬುರುಡೆ, ಖಾಲಿ ಬುರುಡೆ ಬೇರೆ. ರೈಲು ಮುಂದುವರಿಯಬೇಕಾದರೆ ಕಂಬಿ ಬೇಕು. ಹಾಗೆಯೇ ನೆಲದ ಮೇಲೆ ರೈಲು ಬಿಟ್ಟರೆ ಏನಾಗುತ್ತದೆಯೋ ಹಾಗೆಯೇ ಬುರುಡೆ ಹೊಡೆಯುವುದೂ ನಿಷ್ಫಲವಾದುದು ಎಂದರ್ಥ. ತಳವಿಲ್ಲದೆ ಅಳೆಯುವುದು ಎನ್ನುವುದೂ ಇದೆ.

IV. ಈ ಶಬ್ದಗಳ ಅರ್ಥವೇನು ? ಎಂದು ಓದುಗರು ಕಳಿಸಿದ ಕೆಲವು ಶಬ್ದಗಳ ಬಗ್ಗೆ ವಿವರಣೆ:

ಮೋಜಣಿ ಎನ್ನುವುದು ಮರಾಠಿ ಭಾಷೆಯ ಶಬ್ದ. ಅಲ್ಲಿಂದ ಕನ್ನಡಕ್ಕೆ ಬಂದಿದೆ. ಭೂಮಿಯನ್ನು ಅಳತೆ ಮಾಡುವುದು ಎಂದು ಅದರ ಅರ್ಥ. ಮೋಜಣೀದಾರ ಎಂಬುದು Surveyor ಎಂಬ ಇಂಗ್ಲಿಷಿನ ಪದಕ್ಕೆ ಸರಿಯಾದುದು. ಮೋಜಣಿ ಇಲಾಖೆ ಎಂದರೆ ಭೂಮಾಪನ ಮಾಡುವ ಇಲಾಖೆ.

ನಂಜ ಎಂದರೆ ನೀರಾವರಿ ಭೂಮಿ. ಇದಕ್ಕೆ ನಂಜೆ ಎಂಬ ಪರ್ಯಾಯ ರೂಪವೂ ಇದೆ. ಪುಂಜ, ಪುಂಜೆ ಅಂದರೆ ಒಣಭೂಮಿ, ಕುಷ್ಕಿ ಜಮೀನು, ಇದು ತಮಿಳಿನ ಪುಞ್ಞ್ಚ ಎಂಬ ಶಬ್ದದಿಂದ ಬಂದದ್ದು. ಮಲಯಾಳದಲ್ಲಿ ಪುಞ್ಞ ಎಂಬ ಜ್ಞಾತಿ ಶಬ್ದವಿದೆ. ತುಳುವಿನ ಪುಂಜೋ ಎಂಬುದು ಇದೇ.

ಬಾಗಾಯ್ತು ಎಂಬುದು ತೆಂಗು ಅಡಿಕೆ ಮೊದಲಾದುವು ಬೆಳೆಯುವ ತೋಟ ಪಟ್ಟೆ ಜಮೀನು. ಹಿಂದೀ ಬಾಗಾತೀ, ಮರಾಠಿಯ ಬಾಗಾಈತ್ ಎಂಬ ಶಬ್ದಗಳಿಂದ ಕನ್ನಡಕ್ಕೆ ಬಂದಿದೆ.

ಕಲ್ಲುಂ, ಕದಿಂ ಇವು ಉತ್ಸವ ಕಾಲದಲ್ಲಿ ಉಪಯೋಗಿಸುವ ಒಂದು ಬಗೆಯ ಫಿರಂಗಿ.

ಕುಮ್ಕಿ ಇದು ವ್ಯವಸಾಯಗಾರನಿಗೆ ಸಹಾಯ ಮಾಡಲು ಸರಕಾರವು ಮಾನ್ಯ ಮಾಡಿರುವ ಭೂಮಿ. 'ಕುಮ್ಕಿ ಹಕ್ಕು' ಎಂಬುದು ಸರಕಾರದ ಅಪ್ಪಣೆಯಿಂದ ಬಂದ ಅಧಿಕಾರ. ಕುಮಕಿ ಆನೆ ಎಂಬುದು ಖೆಡ್ಡಾಗಳಲ್ಲಿ ಆನೆಗಳನ್ನು ಹಿಡಿಯಲು ಉಪಯೋಗಿಸುವ ಪಳಗಿದ ಆನೆ. ಕುಮಕು ಎನ್ನುವುದು ತುರ್ಕಿ ಭಾಷೆಯಿಂದ ಬಂದುದು. ಮರಾಠಿಯಲ್ಲಿ ತುಂಬ ಪ್ರಚಾರದಲ್ಲಿದೆ. ಕುಮಕ್, ಕುಮ್ಮಕ್ಕು ಎಂದರೆ ಸಹಾಯ ಎಂದೇ ಅರ್ಥ.

ಪಟ್ಟೆ ಎಂದರೆ ತುಂಡುನೆಲ. ಒಂದು ಜಮೀನಿನ ಸರಿಯಾದ ಅಳತೆ ಮತ್ತು ಅದಕ್ಕೆ ಸಲ್ಲಬೇಕಾದ ಕಂದಾಯಗಳ ವಿವರಗಳನ್ನು ಒಳಗೊಂಡ ಸರ್ಕಾರಿ ದಾಖಲು ಪತ್ರ. ಈ ಶಬ್ದಕ್ಕೆ ಜಮೀನಿಗೆ ಸಂಬಂಧಪಡದ ಇನ್ನೂ ಅನೇಕ ಅರ್ಥಗಳಿವೆ. ಗೆರೆ, ರೇಖೆ, ನಡುಪಟ್ಟಿ, ಚಕ್ರದ ನೇಮಿ, ರೇಷ್ಮೆ, ಕಂದಾಯ , ನಾಮ ಇತ್ಯಾದಿ.

ಬಗರ್ ಹುಕುಂ ಎಂದರೆ ಯಾವ ಅಧಿಕಾರವೂ ಇಲ್ಲದ, ಯಾರ ಅಪ್ಪಣೆಯೂ ಇಲ್ಲದ ಎಂದರ್ಥ.

ಗುಂಟೆ ಎಂದು ಎಕರೆಯ ನಲವತ್ತನೆಯ ಒಂದು ಭಾಗ. ಕೆಲವು ಭಾಗದಲ್ಲಿ ಕುಂಟೆ ಎಂಬ ವ್ಯವಸಾಯದ ಉಪಕರಣಕ್ಕೂ ಉಪಯೋಗಿಸುತ್ತಾರೆ.

ಹೀಗೆ ಓದುಗರಿಗೆ ತೋರಬಹುದಾದ ಅನೇಕ ಪ್ರಶ್ನೆಗಳಿಗೆ ಈ ನಿಘಂಟಿನಲ್ಲಿ ಉತ್ತರ ದೊರಕುತ್ತದೆ.

ಈ ನಿಘಂಟನ್ನು ಉಪಯೋಗಿಸುವವರು ಇದರ ರಚನೆಯ ಮುಖ್ಯ ಉದ್ದೇಶವನ್ನು ನೆನಪಿಟ್ಟರೆ ಹೆಚ್ಚು ಪ್ರಯೋಜನವಾಗುತ್ತದೆ. ಸಮಾಜವು ಭಾಷೆಯ ಪ್ರಯೋಗದಲ್ಲಿ ತಂದಿರುವ ವ್ಯತ್ಯಾಸಗಳ ಕಡೆಗೆ ಹೆಚ್ಚು ಗಮನವನ್ನು ನೀಡಲಾಗಿದೆ. ಅರ್ಥಗಳಲ್ಲಿ ಸಂಶಯ ಬಂದ ಕಡೆ ಸೂಕ್ತವಾದ ಅರ್ಥವನ್ನು ಸೂಚಿಸಲಾಗಿದೆ. ಶಬ್ದ ಸ್ವರೂಪದ ಬಗ್ಗೆ ಖಚಿತವಾದ ನಿರ್ದೇಶನವಿದೆ. ಈ ದೃಷ್ಟಿಯಿಂದ ಈ ಗ್ರಂಥವನ್ನು ಉಪಯೋಗಿಸಬೇಕಾಗಿ ಸೂಚನೆಯನ್ನು ನೀಡಲಾಗಿದೆ.

ಶಬ್ದ ಅರ್ಥಗಳ ಬೆನ್ನು ಹತ್ತಿ - ಭಾಗ ೨

ಇಗೋ ಕನ್ನಡ (ಸಾಮಾಜಿಕ ನಿಘಂಟು) ಸಂಪುಟ-೨ ಈಗ ಪ್ರಕಟವಾಗಿ ಓದುಗರ ಮುಂದೆ ಇದೆ. ಈ ನಿಘಂಟಿನ ಪ್ರಥಮ ಸಂಪುಟದಲ್ಲಿರುವ ಈ ನಿಘಂಟಿಗೆ ಒಂದು ಪ್ರವೇಶ ಸಿದ್ಧತೆಗೆ ಪೂರಕವಾಗಿ ಕೆಲವು ಇತರ ವಿಷಯಗಳನ್ನು ಇಲ್ಲಿ ತಿಳಿಸಲು ಪ್ರಯತ್ನಮಾಡಿದ್ದೇನೆ. ಅದರಿಂದ ಶಬ್ದಾರ್ಥಗಳನ್ನು ಕುರಿತ ಅನೇಕ ಸಂಶಯಗಳು ಪರಿಹಾರವಾಗುತ್ತದೆ ಎಂದು ನನ್ನ ನಂಬಿಕೆ.

'ಇಗೋ ಕನ್ನಡ' ಅಂಕಣವು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಾರಂಭವಾಗಿ ಹತ್ತು ವರ್ಷಗಳಾಗುತ್ತಾ ಬಂತು. ಪ್ರಾರಂಭದಲ್ಲಿ ಈ ಅಂಕಣದ ಗುರಿ ಸೀಮಿತವಾಗಿತ್ತು. ಪ್ರೌಢಶಾಲೆಗಳ ಮತ್ತು ಕಾಲೇಜುಗಳ ವಿದ್ಯಾರ್ಥಿಗಳೂ ಅಧ್ಯಾಪಕರೂ ಎದುರಿಸುವ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದೇ ಮುಖ್ಯ ಉದ್ದೇಶವಾಗಿತ್ತು. ಆದರೆ ಅಂಕಣದ ವಿವರಗಳು ಓದುಗರನ್ನು ತಲುಪುತ್ತಿದ್ದಂತೆಯೇ ಶ್ರೀ ಸಾಮಾನ್ಯರಲ್ಲಿ ಇದರ ಬಗ್ಗೆ ಆಸಕ್ತಿ ಹೆಚ್ಚಾಯಿತು. ಜನಪ್ರಿಯತೆ ಬೆಳೆಯಿತು. ಇದರ ಪರಿಣಾಮವಾಗಿ ಅಂಕಣಕ್ಕೆ ಬರುತ್ತಿದ್ದ ಪ್ರಶ್ನೆಗಳ ವ್ಯಾಪ್ತಿಯೂ ಹೆಚ್ಚಾಯಿತು. ವ್ಯಾಕರಣ, ಭಾಷಾಶಾಸ್ತ್ರ, ಗ್ರಂಥಸಂಪಾದನೆ, ಕಾವ್ಯಭಾಗಗಳ ಅರ್ಥವಿವರಣೆ-ಇವೇ ಮುಂತಾಗಿ ಕ್ಲಿಷ್ಟ ವಿಷಯಗಳನ್ನು ಕುರಿತ ಸಮಸ್ಯೆಗಳು ಕೈಸೇರಿದುವು. ಎಷ್ಟೋ ವೇಳೆ ವಿದ್ವಾಂಸರ ಮಂಡಳಿಯಲ್ಲಿ ಚರ್ಚೆಯಾಗುತ್ತಿರುವ, ಕಾವ್ಯಭಾಗಗಳಲ್ಲಿ ತಲೆದೋರುವ ಸಂದಿಗ್ಧತೆಗಳನ್ನು ಕುರಿತ ಪ್ರಶ್ನೆಗಳು ಅಂಕಣಕಾರನನ್ನು ಎದುರಿಸಿದುವು. ಆದುದರಿಂದ ಅಂಕಣದ ಸಿದ್ಧತೆಗೆ ಹೆಚ್ಚು ಕಾಲ ಹಿಡಿಯಿತು. ಉತ್ತರಗಳು ದೀರ್ಘವಾದುವು. ಓದುಗರ ಆಸಕ್ತಿ ಬೆಳೆದಂತೆಲ್ಲ ಅಂಕಣದ ವ್ಯಾಪ್ತಿ ದೊಡ್ಡದಾಯಿತು.

ಕ್ಲಿಷ್ಟವಾದ ಸಂಸ್ಕೃತ ಸಮಾಸಗಳ, ಎರವಲು ಪದಗಳ, ಧರ್ಮಸೂಕ್ಷ್ಮಗಳ ಸಮಸ್ಯೆಗಳು ಹೆಚ್ಚಾದುವು. ನನ್ನ ವ್ಯಾಸಂಗದ ಕ್ಷೇತ್ರದ ಪ್ರಶ್ನೆಗಳಿಗೆ ಪರಿಹಾರದ ಸೂಚನೆ ಸುಲಭವಾಗಿದ್ದರೂ, ನನ್ನ ವ್ಯಾಸಂಗದ ಎಲ್ಲೆಯನ್ನು ಮೀರಿದ ಸಮಸ್ಯೆಗಳಿಗೆ ಉತ್ತರ ನೀಡಲು ನಾನು ಆಯಾ ಕ್ಷೇತ್ರದಲ್ಲಿ ಪರಿಣತರಾದ ನನ್ನ ಮಿತ್ರರನ್ನು ಅನುಸರಿಸಬೇಕಾಯಿತು. ಇದರಿಂದ ನನಗೆ ಎಷ್ಟು ಹೊಸ ವಿಷಯಗಳ ಪರಿಚಯವಾಯಿತೋ ಅಷ್ಟೇ ಸಂತೋಷವು ಓದುಗರಿಗೂ ಉಂಟಾಯಿತು.

ಅನೇಕ ಓದುಗರು ಸಂತೃಪ್ತರಾಗಿ ಅವರ ಸಂತೋಷದ ಪ್ರತಿಕ್ರಿಯೆಗಳನ್ನು ಪತ್ರಗಳಲ್ಲಿ ಬರೆದು ಕಳುಹಿಸಿದರು. ಇವೇ ಸಾವಿರಾರು ಪತ್ರಗಳಾಗಿವೆ. ಕೆಲವರು ತಮಗೆ ಮತ್ತಾವ ವಿವರಗಳು ಬೇಕೆಂಬ ಬಗ್ಗೆ ವಿನಯಪೂರ್ಣವಾದ ಸಲಹೆಗಳನ್ನು ಕಳುಹಿಸಿದರು. ಅವರವರಿಗೆ

ಬೇಕಾದ ವಿವರಗಳನ್ನು ಅವರವರಿಗೆ ಪತ್ರ ಮುಖದಲ್ಲಿ ಕಳುಹಿಸಿದ್ದೇನೆ. ಅಂಕಣದ ಇಕ್ಕಟ್ಟಾದ ವ್ಯಾಪ್ತಿಯಲ್ಲಿ ಆಕಾಶದಷ್ಟು ವಿಸ್ತಾರವಾದ ವಿಷಯಗಳನ್ನು ಅಳವಡಿಸುವುದು ಅಸಾಧ್ಯವೆಂಬುದನ್ನು ಅಂಥವರಿಗೆ ಅರಿಕೆಮಾಡಿ ಪ್ರತ್ಯೇಕ ಪತ್ರಗಳನ್ನು ಬರೆದಿದ್ದೇನೆ.

ಕನ್ನಡದ ಪದ್ಯಗಳನ್ನು ದೃಷ್ಟಾಂತವಾಗಿ ನೀಡಿದಾಗ, ಕೆಲವರು ಓದುಗರು ಆ ಪದ್ಯಗಳ ಹಿಂದುಮುಂದುಗಳ ವಿಸ್ತಾರವಾದ ವ್ಯಾಖ್ಯಾನವನ್ನು ಬಯಸಿದರು. ಅವರ ಅಪೇಕ್ಷೆ ವಿಹಿತವಾದುದೇ ಆಗಿತ್ತು. ಹೀಗಾಗಿ ಅಕ್ಕಿಯ ಮೇಲೆ ಆಸೆಯನ್ನೂ ನಂಟರ ಮೇಲೆ ಪ್ರೀತಿಯನ್ನೂ ಹೊಂದಿಸಿ ಉತ್ತರಗಳನ್ನು ಕೊಟ್ಟಿದ್ದೇನೆ. ವಿವರಗಳು ಹೆಚ್ಚಿದಷ್ಟೂ ಶಬ್ದಗಳ ಸಂಖ್ಯೆ ಕಡಿಮೆ ಆಯಿತು. ಕೆಲವರು ಒಂದೇ ಶಬ್ದವಾದರೂ ಒಂದೇ ಸಮಸ್ಯೆಯಾದರೂ ಅದರ ಸಂಪೂರ್ಣ ವಿವರಗಳು ಬೇಕು ಎಂದು ಬರೆದರೆ, ಮತ್ತೆ ಕೆಲವರು ವಾರದ ಅಂಕಣದಲ್ಲಿ ಹೆಚ್ಚು ಶಬ್ದಗಳಿಗೆ, ಸಮಸ್ಯೆಗಳಿಗೆ ಸಂಗ್ರಹವಾದ ಪರಿಹಾರವೇ ಸಾಕೆಂದು ಬರೆದರು. ಈ ಎಲ್ಲ ಬೇಕು ಬೇಡಗಳನ್ನು ಪರಿಶೀಲಿಸಿ ಈಗಿರುವಂತೆ ಜನಸಾಮಾನ್ಯರಿಗೆ ಬೇಕಾಗುವಷ್ಟು ವಿವರಗಳನ್ನು ಮಾತ್ರ ಅಂಕಣಗಳಲ್ಲಿ ಸೇರಿಸಲಾಗುತ್ತಿದೆ.

ಭಾಷಾಶಾಸ್ತ್ರವನ್ನು ವಿಶೇಷವಾಗಿ ಅಭ್ಯಾಸ ಮಾಡಿರುವ ಓದುಗರಿಗೆ ಈ ಅಂಕಣಗಳಲ್ಲಿ ಬರುವ ವಿವರಗಳೆಲ್ಲ ವೇದ್ಯವಾಗಿರುತ್ತವೆ. ಅವರಿಗೆ ಈ ಅಂಕಣದಿಂದ ತಿಳಿಯಬೇಕಾದುದು ಏನೂ ಇರುವುದಿಲ್ಲ. ಭಾಷೆಯನ್ನು ಆಳವಾಗಿ ಅಭ್ಯಾಸಮಾಡದ ಓದುಗರ ಆಸಕ್ತಿಯನ್ನು ತಿಳಿದು ಅವರ ಕುತೂಹಲವನ್ನು ತಣಿಸುವ ಮತ್ತು ಭಾಷೆಯಲ್ಲಿ ಪ್ರೀತಿಯನ್ನು ಹೆಚ್ಚಿಸುವ ಕಾರ್ಯವನ್ನು ಈಗ ಮಾಡಲಾಗುತ್ತಿದೆ. ಶ್ರೀಸಾಮಾನ್ಯರ ಪ್ರಶ್ನೆಗಳಲ್ಲಿರುವ ಗುರಿಯನ್ನು ಮುಟ್ಟಲು ಈ ಉತ್ತರಗಳು ಸಾಕು. ಆದರೆ ಈ ಉತ್ತರಕ್ಕೆ ಇತರ ಮಗ್ಗಲುಗಳು ಇರುವುದು ಸಾಧ್ಯ. ಆ ಎಲ್ಲ ಮಗ್ಗಲುಗಳನ್ನೂ ಒಂದೇ ಅಂಕಣದಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಸ್ಥಳಾವಕಾಶ ಸಾಲದು. ಆದರೂ ಇಂಥ ಸಂದರ್ಭಗಳನ್ನು ಪ್ರಯೋಜನಕರವಾಗಿ ಉಪಯೋಗಿಸಲು ಈ ಅಂಕಣಕಾರನು ಪ್ರಯತ್ನಪಡುತ್ತಿದ್ದಾನೆ.

ಭಾಷಾಶಾಸ್ತ್ರದ ಕೆಲವು ಪ್ರಧಾನ ಅಂಶಗಳನ್ನು ಸ್ಥೂಲವಾಗಿ ತಿಳಿದಿದ್ದರೂ ಅಂಕಣವನ್ನು ಪರಿಶೀಲಿಸುವವರಿಗೆ ಬೇರೆ ಬೇರೆ ವಿಷಯಗಳು ತಿಳಿಯಬರುತ್ತವೆ. ಆದುದರಿಂದ ಈ ಅರಿಕೆಯ ಭಾಗದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕೆಲವು ಚಾರಿತ್ರಿಕಾಂಶಗಳನ್ನು ಓದುಗರ ಗಮನಕ್ಕೆ ತರುತ್ತಿದ್ದೇನೆ. ಜೊತೆಗೆ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ಹೋಲಿಕೆಯ ವಿವರವೂ ಇದೆ. ಇದನ್ನು ಗಮನಿಸಬೇಕೆಂದು ಓದುಗರಿಗೆ ನನ್ನ ಸೂಚನೆ.

ಭಾಷೆ ಎಂಬುದು ಆಡುನುಡಿ. ಒಂದಾನೊಂದು ಕಾಲದಲ್ಲಿ ಮಾತನಾಡದೆ ಕೇವಲ ಅಂಗಾಂಗ ಚಲನೆಯಿಂದಲೇ ಮಾನವನು ತನ್ನ ಆಸೆ ಅಭಿಪ್ರಾಯಗಳನ್ನು ಇತರ ಮಾನವರಿಗೆ ತಿಳಿಸುವ ಸ್ಥಿತಿಯಲ್ಲಿದ್ದಿರಬೇಕು. ಸ್ಥಿತಿ ಹೀಗಿದ್ದಿರಬೇಕೆಂಬುದನ್ನು ನಂಬುವುದೂ ಈಗಿನವರಿಗೆ ಅಸಾಧ್ಯ. ಅಂಥ ಕಾಲ ಇದ್ದರೆ ಅದು ಮಾನವನಿಗೆ ಕಗ್ಗತ್ತಲ ಕಾಲವಾಗಿರಬೇಕು. ಪ್ರಾಚೀನ ವಿದ್ವಾಂಸರು ಮಾತನ್ನು ಬೆಳಕಿಗೆ ಹೋಲಿಸಿ ಶಬ್ದವಿಲ್ಲದಿದ್ದರೆ ಮೂರು ಲೋಕವೂ ಕಗ್ಗತ್ತಲೆಯ

ಗವಿಯಾಗುತ್ತಿತ್ತು ಎಂದು ಉದ್ಗರಿಸಿದ್ದಾರೆ. ಅಂಥ ಸಮಯದಲ್ಲಿ ಮಾನವನು ಮೂಕ ಪ್ರಾಣಿಯಾಗಿರಬೇಕು. ಅರ್ಥವಿಲ್ಲದ ಧ್ವನಿಗಳನ್ನು ಉತ್ಪಾದಿಸುವುದರಿಂದ ಹಿಡಿದು ಕಾವ್ಯಗಳನ್ನು ರಚಿಸುವ, ಗೀತವನ್ನು ಹಾಡುವ, ಮಂತ್ರದ್ರಷ್ಟಾರರಾಗುವ ಸ್ಥಿತಿಗೆ ಮಾನವ ಬೆಳೆದದ್ದು ಒಂದು ಪವಾಡ. ಈ ಪವಾಡವನ್ನು ಕುರಿತು ಅನೇಕ ಭಾಷಾವಿಜ್ಞಾನಿಗಳು ಅನೇಕ 'ಥಿಯರಿ'ಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಯಾವೊಂದು ಸಿದ್ಧಾಂತವೂ ಒಮ್ಮತದ ಒಪ್ಪಿಗೆಯನ್ನು ಪಡೆದಿಲ್ಲ. ಆದಿಮಾನವನು ತನ್ನ ಶರೀರದಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ನಿರ್ಮಾಣಗೊಂಡಿರುವ ನಾಲಗೆ, ಕಂಠ,ಹಲ್ಲು, ತುಟಿ ಮುಂತಾದ ಅಂಗಗಳನ್ನು ಉಪಯೋಗಿಸಿಕೊಂಡು ಅರ್ಥವಿರುವ ಧ್ವನಿಗಳನ್ನು ಉತ್ಪಾದಿಸಿದಾಗ ಮಾತು ಹುಟ್ಟಿತು. ಇದೇ ಎಲ್ಲ ಭಾಷೆಗಳ ಉದಯದ ಕಥೆ.

ಭಾಷೆ ಎಂಬುದು ಅನೇಕ ಧ್ವನಿಗಳ ವ್ಯವಸ್ಥೆ. ಒಂದು ಜನಸಮೂಹವು ತಮ್ಮಲ್ಲಿ ಪರಸ್ಪರ ವ್ಯವಹಾರಕ್ಕೆ ಉಪಯೋಗಿಸುವ ಸಾಧನ. ಈ ಸಾಧನದಲ್ಲಿ ಅನೇಕ ಧ್ವನಿ ಸಂಕೇತಗಳು ಸೇರಿಕೊಂಡಿವೆ. ಇಂಥ ಸೇರುವಿಕೆ ಎಂಬುದು ಒಂದು ನಿಯಮಕ್ಕೆ ಒಳಪಟ್ಟು ಜನತೆಯಲ್ಲಿ ಪ್ರಯೋಗವಾಗುವುದರಿಂದ ಅದು ಭಾಷೆ ಎಂಬ ಹೆಸರಿಗೆ ಅರ್ಹವಾಗಿದೆ.

ಒಂದೊಂದು ಭಾಷೆಯಲ್ಲಿ ಒಂದೊಂದು ನಿರ್ದಿಷ್ಟ ಸಂಖ್ಯೆಯ ಧ್ವನಿಗಳಿರುತ್ತವೆ. ಈ ಧ್ವನಿಗಳು ಬೇರೆ ಬೇರೆ ರೀತಿಯಲ್ಲಿ ಗುಂಪಾಗಿ ಪದಗಳಾಗುತ್ತವೆ. ಹೀಗೆ ನಿರ್ಮಾಣವಾಗುವ ಪದಗಳಿಗೆ ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಸ್ವರೂಪ ಬರಬಹುದು. ಅಂಥ ಎಲ್ಲ ಪದಗಳಿಗೆ ಆಯಾ ಭಾಷೆಯಲ್ಲಿ ಯಾವುದೋ ಉಚಿತವಾದ ಒಂದು ಅರ್ಥಬರುತ್ತದೆ. ಆದರೆ ನಿಜವಾಗಿ ಆ ಪದಕ್ಕೂ ಅದಕ್ಕೆ ಬರುವ ಅರ್ಥಕ್ಕೂ ಯಾವ ತಾರ್ಕಿಕ ಸಂಬಂಧವೂ ಇರುವುದಿಲ್ಲ. ಅದು ತಾರ್ಕಿಕವಲ್ಲದ (arbitrary) ಸಂಬಂಧ. ಅದು ಹೀಗಿದ್ದೂ ಈಗ ಭಾಷೆ ಎಂಬುದು ಮಾನವರ ಪರಸ್ಪರ ಸಂಪರ್ಕದ ಅತಿಪ್ರಮುಖ ಸಾಧನವಾಗಿದೆ.

ಮಾನವನು ಭಾಷೆಯನ್ನು ಕಲಿಯಬೇಕು. ಕಣ್ಣಿನಿಂದ ಕಾಣುವಂತೆ, ಕಿವಿಯಿಂದ ಕೇಳುವಂತೆ, ಮೂಗಿನಿಂದ ವಾಸನೆಯನ್ನು ಅನುಭವಿಸುವಂತೆ ಸಹಜವಾಗಿ ಬಾಯಿಯಿಂದ ಮಾತನಾಡಲಾರ. ಮಾತು ಹುಟ್ಟಿನಿಂದ ಬರುವ ಸಾಮರ್ಥ್ಯವಲ್ಲ. ಅದನ್ನು ಪ್ರಯತ್ನಪೂರ್ವಕವಾಗಿ ಕಲಿಯಬೇಕು. ಅದು ಮಾನವನ ಸಾಂಸ್ಕೃತಿಕ ವ್ಯವಹಾರದ ಒಂದು ಬಗೆ; ಸಮಾಜದ ಹೊಂದಾಣಿಕೆಗೆ ಮಾರ್ಗ; ಕಲೆಯ ಒಂದು ಮಾಧ್ಯಮ; ಅನುಭವದ ಅಭಿವ್ಯಕ್ತಿಯ ಉಪಾಯ; ಒಂದು ಕೌಶಲದ ಗಳಿಕೆ.

ಭಾರತದಲ್ಲಿ ಭಾಷೆಯನ್ನು ಕುರಿತ ವ್ಯಾಸಂಗವು ಬಹು ಪ್ರಾಚೀನಕಾಲದಿಂದಲೂ ನಡೆದುಬಂದಿದೆ. ವೇದಗಳ ಕಾಲದಿಂದಲೇ ಭಾಷೆಯ ಅಧ್ಯಯನ ಮೊದಲಾಯಿತೆನ್ನಬೇಕು. ವೈದಿಕ ನಿಘಂಟು ವೇದಗಳಲ್ಲಿ ಬರುವ ಕ್ಲಿಷ್ಟ ಶಬ್ದಗಳ ಅರ್ಥವನ್ನು ವಿವರಿಸುತ್ತದೆ. ಯಾಸ್ಕನು ತನ್ನ ನಿರುಕ್ತದಲ್ಲಿ ಶಬ್ದಗಳ ವ್ಯುತ್ಪತ್ತಿಯನ್ನು ನಿರ್ಧರಿಸಲು ಪ್ರಯತ್ನಪಟ್ಟಿದ್ದಾನೆ. ಸಂಸ್ಕೃತವೇ ನಮ್ಮ ದೇಶದ ಅತಿ ಪ್ರಾಚೀನವಾದ ಭಾಷೆಯಾದುದರಿಂದ ಅದರ ಪ್ರಭಾವವು ಇತರ ಎಲ್ಲ ಭಾಷೆಗಳ ಮೇಲೆ ಅಗಾಧವಾಗಿ ಆಗಿದೆ. ಆದುದರಿಂದ ಕನ್ನಡ ಮುಂತಾದ ದೇಶಭಾಷೆಗಳ

ವಿದ್ವಾಂಸರು ಆಯಾ ಭಾಷೆಗಳ ವ್ಯಾಕರಣವನ್ನು ರಚಿಸುವಾಗ ಸಂಸ್ಕೃತದ ವ್ಯಾಕರಣದ ವಿಧಾನವನ್ನೇ ಅನುಸರಿಸಿದರು. ಅಷ್ಟೇಅಲ್ಲ, ಎಲ್ಲ ಭಾಷೆಗಳೂ ಸಂಸ್ಕೃತ ಜನ್ಯವಾದ ಭಾಷೆಗಳು ಎಂದು ತೀರ್ಮಾನಿಸಿಬಿಟ್ಟರು. ಕೆಲವರು ಕನ್ನಡದ ವ್ಯಾಕರಣಕಾರರು ಕನ್ನಡ ವ್ಯಾಕರಣವನ್ನು ಸಂಸ್ಕೃತ ಭಾಷೆಯಲ್ಲಿಯೇ ರಚಿಸಿದರು.

ಭಾಷೆಯನ್ನು ಒಂದು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದೆರಡು ಶತಮಾನಗಳಿಂದ ಈಚೆಗೆ ವ್ಯಾಪಕವಾಗಿ ನಡೆದಿದೆ. ಅದು ಈಚಿನ ಬೆಳವಣಿಗೆ. ಭಾಷೆಗಳ ವರ್ಗೀಕರಣ ನಡೆದಮೇಲೆ ಭಾಷೆಯನ್ನು ಐತಿಹಾಸಿಕ ದೃಷ್ಟಿಯಿಂದಲೂ ತುಲನಾತ್ಮಕ ದೃಷ್ಟಿಯಿಂದಲೂ ವಿವರಣಾತ್ಮಕ ದೃಷ್ಟಿಯಿಂದಲೂ ಮೂರು ತೆರನಾಗಿ ಅಧ್ಯಯನ ಮಾಡುವ ಅಭ್ಯಾಸ ಹೆಚ್ಚಾಗಿದೆ.

ನಾವು ವಾಸಿಸುವ ಭೂಮಿಯಲ್ಲಿ ಒಟ್ಟು ಎಷ್ಟು ಭಾಷೆಗಳಿವೆ ಎಂಬುದನ್ನು ನಿಷ್ಕೃಷ್ಟವಾಗಿ ಹೇಳುವುದು ಕಷ್ಟ. ಉಪ ಭಾಷೆಗಳನ್ನೂ ಸೇರಿಸಿದರೆ ಹತ್ತು ಸಾವಿರ ಭಾಷೆಗಳಾಗಬಹುದು. ಹತ್ತು ಲಕ್ಷ ಜನರಿಗೂ ಮಿಕ್ಕು ಮಾತನಾಡುವ ಜನರಿರುವ ಭಾಷೆಗಳು ಸುಮಾರು ಎರಡು ಸಾವಿರ ಆಗಬಹುದು. ಒಟ್ಟು ಇದನ್ನು ಮಾತನಾಡುವವರ ಸಂಖ್ಯೆ ೬೦೦ ಕೋಟಿಯಾಗಬಹುದೆಂದು ಸಂಶೋಧಕರು ಊಹಿಸಿದ್ದಾರೆ. ಅಲ್ಪಸಂಖ್ಯೆಯ ಜನರು ಮಾತನಾಡುವಂಥ ಭಾಷೆಗಳ ಸಂಖ್ಯೆಯನ್ನು ಹೇಳುವುದು ಕಷ್ಟ. ಅನೇಕ ಭಾಷೆಗಳಿಗೆ ಲಿಪಿಗಳೇ ಇಲ್ಲ.

ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆ. ಪ್ರಪಂಚದ ಭಾಷಾ ವಂಶಗಳ ಸರಣಿಯಲ್ಲಿ ದ್ರಾವಿಡ ಭಾಷಾ ವರ್ಗಕ್ಕೆ ಕೊನೆ ಕೊನೆಯ ಸ್ಥಾನವಿದೆ. ಅಂದರೆ ಈ ವರ್ಗದ ಭಾಷೆಯನ್ನು ಮಾತನಾಡುವವರ ಸಂಖ್ಯೆ ಬಹಳ ಕಡಿಮೆ ಎಂದು ಅರ್ಥ.

ಭಾರತದಲ್ಲಿ ನೂರ ಐವತ್ತಮೂರು ಉಪಭಾಷೆಗಳಿವೆ ಎಂದು ಗುರುತಿಸಿದ್ದಾರೆ. ಗ್ರಂಥಸ್ಥ ಭಾಷೆಗಳು ಕಡಿಮೆ. ತಮಿಳು, ಕನ್ನಡ, ತೆಲುಗು, ಮಲೆಯಾಳ, ತುಳು-ಇವು ದಕ್ಷಿಣ ಭಾರತದಲ್ಲಿರುವ ಪಂಚ ದ್ರಾವಿಡ ಭಾಷೆಗಳು. ಇವುಗಳಲ್ಲಿ ತುಳು ಭಾಷೆಗೆ ಲಿಪಿ ಇಲ್ಲ. ಕನ್ನಡ ಲಿಪಿಯನ್ನೇ ತುಳು ಭಾಷೆಯನ್ನಾಡುವ ಜನ ಉಪಯೋಗಿಸುತ್ತಾರೆ. ಉತ್ತರ ಭಾರತದಲ್ಲಿಯೂ ಮಧ್ಯಭಾರತದಲ್ಲಿಯೂ ಕೆಲವು ದ್ರಾವಿಡ ಭಾಷೆಗಳಿವೆ. ದಕ್ಷಿಣದಲ್ಲಿಯೂ ತುದ, ಕೊಡಗು, ಬಡಗ ಮುಂತಾದ ಉಪಭಾಷೆಗಳಿವೆ. ಒಟ್ಟು ಇವುಗಳ ಸಂಖ್ಯೆ ಸುಮಾರು ಇಪ್ಪತ್ತೈದು.

ದ್ರಾವಿಡ ಭಾಷೆಯನ್ನು ಆಡುವವರೆಲ್ಲ ದ್ರಾವಿಡರು. ಇವರು ಭಾರತದ ಮೂಲನಿವಾಸಿಗಳೇ, ಹೊರಗಿನಿಂದ ಇಲ್ಲಿಗೆ ಬಂದವರೇ ಎಂಬುದು ಸಂದೇಹಾಸ್ಪದವಾದ ವಿಷಯ. ಆರ್ಯರ ವಿಚಾರದಲ್ಲಿಯೂ ಅಷ್ಟೆ. ಅವರ ಮೂಲನೆಲೆಯ ವಿಷಯ ಸಂದೇಹಾಸ್ಪದ. ಆದರೆ ದ್ರಾವಿಡ ಭಾಷೆಗಳು ಆರ್ಯ ಭಾಷೆಗಳಿಗಿಂತ ಬೇರೆಯಾದವು, ಬೇರೆ ಮೂಲದವು ಎಂಬ ಬಗ್ಗೆ ಅನುಮಾನವಿಲ್ಲ.

ಭಾಷೆಗಳ ಮೂಲದ್ರವ್ಯವನ್ನು ಕಂಡುಹಿಡಿಯಲು ಕೆಲವು ಸಾಧನೆಗಳಿವೆ. ಶರೀರದ

ಅಂಗಾಗಳ ಹೆಸರು, ಸಂಖ್ಯಾ ವಾಚಕಗಳು, ಸರ್ವನಾಮಗಳು, ಸಂಬಂಧವಾಚಕಗಳು, ಕ್ರಿಯಾಪದಗಳು-ಇವು ಬೇರೆ ಭಾಷೆಗಳ ಪ್ರಭಾವಕ್ಕೆ ಸಿಕ್ಕಿ ಬದಲಾಗುವುದಿಲ್ಲ. ಅವು ಮೂಲದಲ್ಲಿದ್ದಂತೆಯೇ ಉಳಿದುಬರುತ್ತವೆ. ಮೂಲ ದ್ರಾವಿಡ ಭಾಷೆಯೊಂದಿದ್ದಿತು. ಅದರಿಂದ ಮೊದಲು ಕನ್ನಡವು ಬೇರೆಯಾಗಿ ಬೆಳೆಯಿತು. ಆಮೇಲೆ ಮಲೆಯಾಳವೂ, ಆ ಬಳಿಕ ತೆಲುಗೂ ಬೇರೆಯಾಗಿರಬಹುದು. ಈ ದ್ರಾವಿಡ ಭಾಷೆಗಳಲ್ಲಿ ಅನೇಕ ಜ್ಞಾತಿ ಶಬ್ದಗಳನ್ನು ಕಾಣಬಹುದು. ಚೆನ್ನಾಗಿ ಪರಿಶೀಲಿಸಿದರೆ ಸಂಸ್ಕೃತ ಶಬ್ದಗಳಿಗೂ ಈ ದ್ರಾವಿಡ ಜ್ಞಾತಿಶಬ್ದಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಹಳಗನ್ನಡದಲ್ಲಿ ವ್ಯಂಜನಾಂತ ಶಬ್ದಗಳಿದ್ದುವು. ಆದರೆ ಹೊಸಗನ್ನಡದಲ್ಲಿ ಆ ಎಲ್ಲ ಶಬ್ದಗಳೂ ಸ್ವರಾಂತವಾಗಿರುವುದನ್ನು ನಾವು ಕಾಣಬಹುದು.ದ್ರಾವಿಡ ಭಾಷೆಗಳಲ್ಲಿ ಕರ್ಮಣಿ ಪ್ರಯೋಗಗಳು ಇರುವುದಿಲ್ಲ. ಲಿಪಿಗಳಲ್ಲಿ ಸಂಸ್ಕೃತದಿಂದ ಬೇರೆಯಾದ ಕೆಲವು ಲಿಪಿ ಸಂಕೇತಗಳಿವೆ. ಸಂಸ್ಕೃತದ ಪ್ರಭಾವವು ದ್ರಾವಿಡ ಭಾಷೆಗಳ ಮೇಲೆ ಆಗಿರುವಂತೆಯೇ ದ್ರಾವಿಡ ಭಾಷೆಗಳ ಪ್ರಭಾವವು ಸಂಸ್ಕೃತದ ಮೇಲೆಯೂ ಆಗಿದೆ. ಎರಡು ಭಾಷೆಗಳು ಪರಸ್ಪರ ಸಂಪರ್ಕವನ್ನು ಹೆಚ್ಚಿಸಿಕೊಂಡಾಗ ಹೀಗಾಗುವುದು ಸಾಮಾನ್ಯ. ಕನ್ನಡ ಶಬ್ದಗಳು ಸಂಸ್ಕೃತದಲ್ಲಿ ಸೇರಿವೆ ಎನ್ನುವುದಕ್ಕೆ ಕುಟಿ, ಮೀನ, ಮಂಡೆ, ಕೂದಲು, ತಾಲ, ವಲಯ, ಅಡವಿ, ನೀರು ಮುಂತಾದುವನ್ನು ದೃಷ್ಟಾಂತಪಡಿಸುತ್ತಾರೆ.

ಭಾಷೆಗಳ ಜನ್ಯ ಜನಕ ಸಂಬಂಧವನ್ನು ತೀರ್ಮಾನಿಸುವುದಕ್ಕೆ ಎರಡು ಅಂಶಗಳನ್ನು ಗಮನಿಸಬೇಕು. ಒಂದು ಶಬ್ದಕೋಶ. ಇನ್ನೊಂದು ವ್ಯಾಕರಣ ಪ್ರಕ್ರಿಯೆಗಳು. ಮುಖ್ಯವಾಗಿ ಅಂಗಾಂಗ ಸೂಚಕ ಶಬ್ದಗಳನ್ನೂ ಸಂಖ್ಯಾವಾಚಕಗಳನ್ನೂ ನೆಂಟತನವನ್ನು ಸೂಚಿಸುವ ಶಬ್ದಗಳನ್ನೂ (ಸಂಬಂಧ ವಾಚಕ) ಪರಿಶೀಲಿಸಿದರೆ ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಒಂದೆರಡು ದೃಷ್ಟಾಂತಗಳನ್ನು ನೋಡೋಣ.

೧. ಅಂಗಸೂಚಕ ಶಬ್ದಗಳು :

ಕನ್ನಡ	**ತಮಿಳು**	**ತೆಲುಗು**	**ಮಲೆಯಾಳಂ**	**ಸಂಸ್ಕೃತ**
ಕಯ್	ಕಯ್	ಚೇಯಿ	ಕೈ	ಹಸ್ತ
ಕಣ್	ಕಣ್	ಕನ್ನು	ಕಣ್ಣು	ಅಕ್ಷಿ
ಕಿವಿ	ಶೆವಿ	ಚೆವಿ	ಚೆಮಿ	ಕರ್ಣ

೨. ಸಂಬಂಧ ವಾಚಕ ಶಬ್ದಗಳು :

ಅಣ್ಣ	ಅಣ್ಣ	ಅನ್ನ	ಚೇಟನ್	ಭ್ರಾತೃ
ತಾಯಿ	ತಾಯ್	ತಲ್ಲಿ	ಚೇಟತ್ತಿ	ಮಾತೃ
ತಂದೆ	ತಂದೈ	ತಂಡ್ರಿ	ಅಚ್ಚ	ಪಿತೃ

೩. ಸಂಖ್ಯಾವಾಚಕಗಳು :

ಕನ್ನಡ	ತಮಿಳು	ತೆಲುಗು	ಮಲೆಯಾಳಂ	ಸಂಸ್ಕೃತ
ಒಂದು	ಒನ್ರು	ಒಕಟಿ	ಒರು	ಏಕ
ಎರಡು	ಇರಂಡು	ರೆಂಡು	ರಂಡು	ದ್ವಿ
ಮೂರು	ಮೂನ್ರು	ಮೂಡು	ಮೂನ್ರು	ತ್ರಿ

ಇಂಥ ವಿವರಗಳ ಅಭ್ಯಾಸದಿಂದ ದ್ರಾವಿಡ ಭಾಷೆಗಳು ಸಂಸ್ಕೃತ ಜನ್ಯವಲ್ಲ ಎಂಬ ಅಂಶ ಸ್ಥಾಪಿತವಾಗುತ್ತದೆ. ಈ ನಿರ್ಧಾರವಾದ ಬಳಿಕ ಕನ್ನಡವನ್ನು ಬೇರೆ ಭಾಷೆಯೆಂದು ಬೇರೆಯ ರೀತಿಯಲ್ಲಿಯೇ ಅಭ್ಯಾಸಮಾಡಬೇಕು.

ಕನ್ನಡ ಎಂಬ ಶಬ್ದವನ್ನು ಒಂದು ಭಾಷೆಗೂ ಆ ಭಾಷೆಯನ್ನಾಡುವ ಜನ ವಾಸಮಾಡುವ ಪ್ರಾಂತಕ್ಕೂ ಅನ್ವಯಿಸಲಾಗುತ್ತಿದೆ. ಇದಕ್ಕೆ ಪ್ರಾಚೀನ ಕಾವ್ಯಗಳಲ್ಲಿ ದೃಷ್ಟಾಂತಗಳಿವೆ. ಕನ್ನಡನಾಡು ಈಗ ಕರ್ನಾಟಕವಾಗಿ ರಾಜಕೀಯ ಚೌಕಟ್ಟಿನ ಆಡಳಿತ ಭಾಗದಲ್ಲಿ ಪ್ರಾಚುರ್ಯವನ್ನು ಪಡೆದಿದೆ. ಕನ್ನಡ-ಕರ್ನಾಟಕ ಎಂಬ ಶಬ್ದಗಳ ವ್ಯುತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಆದರೆ ಈ ನಾಡೂ ಭಾಷೆಯೂ ಪ್ರಾಚೀನವಾದುವೆಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಇದ್ದಿರಬಹುದಾದ ಶಾತವಾಹನರ ರಾಜ **ಹಾಲ** ಎಂಬ ಕವಿಯು ರಚಿಸಿರುವ ಪ್ರಾಕೃತ ಭಾಷೆಯ **ಗಾಥಾ** ಎಂಬ **ಸಪ್ತಶತಿ**ಯಲ್ಲಿ ಕನ್ನಡ ಶಬ್ದಗಳಿವೆ. ಅತಿಪ್ರಾಚೀನವಾದ ಕ್ರಿ.ಶ. ೪೫೦ರ ಹಲ್ಮಿಡಿಯ ಶಾಸನ ಒಂದು ನಿರ್ದಿಷ್ಟ ಘಟ್ಟವನ್ನು ಸೂಚಿಸುತ್ತದೆ. ಅಂತೂ ಕನ್ನಡದ ಚರಿತ್ರೆಯ ಆದಿಕಾಲ ಕ್ರಿ.ಪೂ.ಕ್ಕೆ ಮುಟ್ಟುತ್ತದೆ ಎನ್ನಬಹುದು.

ಮಾನವನು ತಿಳಿಸಬೇಕಾದ ಅರ್ಥಕ್ಕೆ ಭಾಷೆ ಸಂಕೇತವಾದರೆ, ಭಾಷೆಗೆ ಲಿಪಿ ಸಂಕೇತವಾಗುತ್ತದೆ. ಚಿತ್ರಲಿಪಿಯಿಂದ ಹಿಡಿದು ಇಂದಿನ ಮುದ್ರಣ-ಕಂಪ್ಯೂಟರ್ ಲಿಪಿಯವರೆಗೆ ಲಿಪಿಗಳು ಬೆಳೆದಿವೆ. ಭಾರತದಲ್ಲಿರುವ ಎಲ್ಲ ಭಾಷಾಲಿಪಿಗಳಿಗೂ ಅಶೋಕನ ಶಾಸನಗಳ ಬ್ರಾಹ್ಮೀಲಿಪಿಯೇ ಮೂಲ. ಶತಮಾನಗಳು ಕಳೆದ ಮೇಲೆಯೂ ಈಗ ಕನ್ನಡದ ಅಕ್ಷರಗಳು ಬ್ರಾಹ್ಮೀಲಿಪಿಯಿಂದ ಹೇಗೆ ಬೆಳೆದು ಬಂದಿವೆ ಎಂಬುದನ್ನು ಕ್ರಮವಾಗಿ ವಿವರಿಸಬಹುದು. ವಿದ್ವಾಂಸರು ಈ ಬಗ್ಗೆ ವರ್ಣಮಾಲೆಯ ಪಟಗಳನ್ನು ರಚಿಸಿ ಶತಮಾನಗಳ ಅಕ್ಷರ ಸ್ವರೂಪಗಳನ್ನು ಗುರುತಿಸಿದ್ದಾರೆ. ಇದರಿಂದ ಅಕ್ಷರಗಳು ಬದಲಾದ ಸ್ವರೂಪವನ್ನು ಪಡೆದ ಕ್ರಮವನ್ನು ನಾವು ಕಣ್ಣಾರೆ ಕಾಣಬಹುದು. ಮುದ್ರಣ ಬಂದ ಮೇಲೆ ಕನ್ನಡಕ್ಕೆ ಈಗಿನ ರೂಪ ನಿಂತಿದೆ.

ಕನ್ನಡ ವರ್ಣಮಾಲೆಯಲ್ಲಿ ಇರಬೇಕಾದ ಅಕ್ಷರಗಳ ಬಗ್ಗೆ ವಿದ್ವಾಂಸರಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಕೊನೆಯದಾಗಿ ಈಗ ಕನ್ನಡದ ವರ್ಣಮಾಲೆಯಲ್ಲಿ ಇರುವ ಲಿಪಿ ಸಂಜ್ಞೆಗಳು ಇವು:

ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ
ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಷ ಸ ಹ ಳ ಮತ್ತು

ಹಳಗನ್ನಡದ ಱ ಮತ್ತು ೞ ಜೊತೆಗೆ ಂ = ಅನುಸ್ವಾರ, ಃ = ವಿಸರ್ಗ ಒಟ್ಟು ೫೨.

ಈಚೆಗೆ ಇಂಗ್ಲಿಷಿನ F, Z ಎಂಬ ಧ್ವನಿಗಳನ್ನು "ಫ಼, ಜ಼" ಎಂಬಂತೆ ಗುರುತಿಸುತ್ತ ಇದ್ದಾರೆ. ಆಗ ೫೪.

ಕನ್ನಡದ ಭಾಷಾಪರಿಣತರು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಅಭ್ಯಾಸ ಮಾಡಲು ಕೆಲವು ಕಾಲಮಾನಗಳನ್ನು ನಿರ್ಧರಿಸಿದ್ದಾರೆ.

೧. ಪೂರ್ವದ ಹಳಗನ್ನಡ — ಅನಿಶ್ಚಿತ ಪ್ರಾರಂಭದಿಂದ ೭ನೆಯ ಶತಮಾನದವರೆಗೆ

೨. ಹಳಗನ್ನಡ — ೭ ರಿಂದ ೧೩ನೆಯ ಶತಮಾನದವರೆಗೆ

೩. ನಡುಗನ್ನಡ — ೧೪ನೇ ಶತಮಾನದ ಪ್ರಾರಂಭದಿಂದ ೧೮ನೇ ಶತಮಾನದವರೆಗೆ

೪. ಹೊಸಗನ್ನಡ — ೧೮ನೆಯ ಶತಮಾನದ ಆದಿಯಿಂದ ಈಚೆಗೆ

ಕಳೆದ ಶತಮಾನದಲ್ಲಿ ಆಗಿರುವ ಅತಿ ವ್ಯಾಪಕವಾದ ಕನ್ನಡ ಅಭಿವೃದ್ಧಿಯನ್ನು ಗಮನಿಸಿದರೆ ೨೦ನೆಯ ಶತಮಾನದಿಂದ ಈಚಿನ ಕಾಲವನ್ನು **ಆಧುನಿಕ ಕನ್ನಡ** ಎಂದು ಹೊಸ ಯುಗವಾಗಿ ಪರಿಗಣಿಸಬೇಕಾಗುತ್ತದೆ.

ಕನ್ನಡನಾಡು ಬಹುದೊಡ್ಡ ಭೂಪ್ರದೇಶ. ಆದರೆ ಇದು ಯಾವಾಗಲೂ ಒಂದೇ ರಾಜಕೀಯ ಆಡಳಿತಕ್ಕೆ ಸೇರಿರಲಿಲ್ಲ. ಚಾರಿತ್ರಿಕ ಯುದ್ಧ, ಕದನ, ಜಗಳ, ಒಪ್ಪಂದ, ಕರಾರು ಮುಂತಾದ ಅಸ್ವಾಭಾವಿಕ ಘಟನೆಗಳ ಪರಿಣಾಮವಾಗಿ ಬೇರೆ ಬೇರೆ ಭಾಷೆಗಳನ್ನಾಡುವ ಜನಗಳೊಡನೆ ಕೂಡಿ ಬೇರೆ ಬೇರೆ ಆಡಳಿತಗಳಿಗೆ ಸಿಕ್ಕಿ ಚೂರು ಚೂರಾಗಿ ಅವನತಿ ಹೊಂದಿತು. ಈಚೆಗೆ ಕರ್ನಾಟಕದ ಏಕೀಕರಣವಾಗಿರುವುದು ನಿಜವಾದರೂ ಭಾಷೆಯ ಸ್ವರೂಪ ಒಂದಾಗಿಲ್ಲ. ಮಂಗಳೂರು, ಧಾರವಾಡ, ಮೈಸೂರು, ಹೈದರಾಬಾದ್ ಕನ್ನಡಗಳೆಂಬಂತೆ ಬೇರೆ ಬೇರೆ ಸ್ವರೂಪದ ಭಾಷೆಗಳು ಪ್ರಚಾರದಲ್ಲಿವೆ. ಇವು ಉಪಭಾಷೆಗಳಲ್ಲ. ಆದರೆ ಪ್ರಾಂತಭೇದಗಳು. ಈ ಪ್ರಾಂತಭೇದಗಳು ಕೂಡ ಎಷ್ಟು ಹೆಚ್ಚಾಗಿವೆ ಎಂದರೆ ಬೀದರ್ ಊರಿನ ಜನ ಆಡುವ ಕನ್ನಡದ ಮಾತು ಮೈಸೂರಿನವರಿಗೆ ಅರ್ಥವೇ ಆಗುವುದಿಲ್ಲ. ಅಲ್ಲಿ ಅಷ್ಟು ಉರ್ದು ಪದಗಳು ಸೇರಿಬಿಟ್ಟಿವೆ.

ಇದೂ ಅಲ್ಲದೆ ಒಂದೇ ಭಾಷೆಯನ್ನಾಡುವ ಜನರಲ್ಲಿ ವ್ಯಕ್ತಿಭಾಷೆ ಎಂಬ ಭೇದವೂ ಕಾಣಬರುತ್ತಿದೆ. ಒಬ್ಬ ವ್ಯಕ್ತಿ ಯಾವ ಭಾಗದಲ್ಲೇ ವಾಸಮಾಡಲಿ ಅವನು ಓಡಾಡುವ ಪರಿಸರ, ಅವನ ವಿದ್ಯಾಭ್ಯಾಸ, ಅವನ ಜನರ ಸಂಬಂಧ, ಪ್ರಯಾಣಗಳ ಪರಿಣಾಮ ಇತ್ಯಾದಿಯಾಗಿ ಆ ವ್ಯಕ್ತಿಯ ಭಾಷೆಯ ರೀತಿಯೇ ಬೇರೆಯಾಗಿ ಇರುತ್ತದೆ. ಶಬ್ದೋಚ್ಚಾರಣೆ, ವಾಕ್ಯ ನಿರ್ಮಾಣದ ರೀತಿ, ಅನ್ಯಭಾಷಾ ಮಿಶ್ರಣ ಇತ್ಯಾದಿಗಳನ್ನೂ ಅಭ್ಯಾಸ ಮಾಡುವುದು ಕೂಡ ಸ್ವಾರಸ್ಯವಾದ ಸಂಶೋಧನೆಗೆ ಎಡೆಮಾಡಿಕೊಡುತ್ತದೆ.

ಕಾಲಕಳೆದಂತೆಲ್ಲ, ಜನತೆಯ ನಾಗರಿಕತೆ ಹೆಚ್ಚಿದಂತೆಲ್ಲ ಭಾಷೆ ಬೆಳೆಯುತ್ತದೆ. ಈ ಬೆಳವಣಿಗೆ ಸಾಮಾಜಿಕ, ವ್ಯಾವಹಾರಿಕ, ರಾಜಕೀಯ ಸಂಪರ್ಕಗಳು ಕಾರಣವಾಗುತ್ತವೆ. ಇಂಥ ಸಂಪರ್ಕಗಳು ಇತರ ಭಾಷಾ ಬಾಂಧವದೊಡನೆ ಹೆಚ್ಚಾದಾಗ ಒಂದು ಭಾಷೆಗೆ ಇತರ ಭಾಷೆಗಳ ಶಬ್ದಗಳು ಬಂದು ಸೇರಿಕೊಳ್ಳುತ್ತವೆ. ಹೀಗೆ ಕನ್ನಡಕ್ಕೆ ಸಂಸ್ಕೃತ, ಪ್ರಾಕೃತ, ಮರಾಠಿ, ಅರಬ್ಬಿ, ಪಾರಸಿ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಅನೇಕ ಎರವಲು ಪದಗಳು ಬಂದಿವೆ. ಕನ್ನಡ ಭಾಷೆಗೆ ಸಂಸ್ಕೃತವಲ್ಲದ ಇತರ ಭಾಷೆಗಳ ಸಂಬಂಧ ಪ್ರಾರಂಭವಾದುದು ಪುಲಕೇಶಿಯ ಕಾಲದಲ್ಲಿ. ಹರ್ಷವರ್ಧನ ಮಹಾರಾಜನನ್ನು ಸೋಲಿಸಿ ಪುಲಕೇಶಿಯು ಪರ್ಷಿಯಾ ದೇಜಶದ ರಾಜನಾದ ಖುಸ್ರು II ಎಂಬುವನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿ ಮಿತ್ರತ್ವವನ್ನು ಗಳಿಸಿದನು. ಅಲ್ಲಿಂದ ಎರಡು ರಾಷ್ಟ್ರಗಳ ಬಾಂಧವ್ಯ ಮೊದಲಾಯಿತು. ಅರಬ್ಬರು ಪರ್ಷಿಯಾ ದೇಶವನ್ನು ಆಕ್ರಮಣಮಾಡಿ ಭಾರತದ ಪಂಜಾಬ್ ಭಾಗವನ್ನು ಅಧೀನಪಡಿಸಿಕೊಂಡು ಹಾಗೆಯೇ ಕ್ರಿ.ಶ. ೭೧೨ರಲ್ಲಿ ಸಿಂಧ್ ಪ್ರಾಂತವನ್ನೂ ಆಕ್ರಮಣಕ್ಕೆ ಒಳಗು ಮಾಡಿದರು. ಎಂಟನೆಯ ಶತಮಾನದಲ್ಲಿ ಗುಜರಾತು ಮತ್ತು ಮಹಾರಾಷ್ಟ್ರವು ಅರಬ್ಬೀ ದೇಶದ ಮಹಮ್ಮದೀಯರ ಸಂಪರ್ಕವನ್ನು ಪಡೆಯಿತು. ರಾಷ್ಟ್ರಕೂಟರಿಗೂ ಅರಬ್ಬಿ ಜನರಿಗೂ ವ್ಯವಹಾರವಿತ್ತು. ಹನ್ನೊಂದನೆಯ ಶತಮಾನದಲ್ಲಿ ಮಹಮ್ಮದ್ ಘಜ್ನಿಯು ಸಿಂಧ್ ಪ್ರಾಂತವನ್ನು ಆಕ್ರಮಿಸಿದನು. ಹೀಗೆಯೇ ಮಹಮ್ಮದ್ ಘೋರಿ, ಮಲ್ಲಿಕ್‌ಕಾಫರ್ ಮುಂತಾದವರ ಆಕ್ರಮಣ ಮುಂದುವರೆಯಿತು. ಮಂಗಳೂರಿನಲ್ಲಿ ನಾಲ್ಕೈದು ಸಾವಿರ ಮಹಮ್ಮದೀಯರು ವಾಸಿಸಿದ್ದರೆಂಬ ದಾಖಲೆಗಳಿವೆ.

೧೪ನೆಯ ಶತಮಾನದಲ್ಲಿ ಪೋರ್ಚುಗೀಸರು ಕನ್ನಡ ನಾಡಿನಲ್ಲಿ ನೆಲೆಯನ್ನು ಪಡೆದರು. ೧೮ನೆಯ ಶತಮಾನದ ತನಕ ಅವರ ಪ್ರಾಬಲ್ಯ ಹೆಚ್ಚಾಗಿತ್ತು.

೧೮ನೆಯ ಶತಮಾನದಲ್ಲಿ ಆದಿಯಿಂದಲೂ ಇಂಗ್ಲಿಷರು ಪ್ರಬಲರಾಗಿ ಕನ್ನಡನಾಡಿನಲ್ಲಿ ಬಹಳ ಪ್ರಭಾವವನ್ನು ಗಳಿಸಿಬಿಟ್ಟರು. ಹೈದರ್, ಟಿಪ್ಪು - ಇವರ ಕಾಲದಲ್ಲಿ ಉರ್ದು ಭಾಷೆಗೆ ಎಲ್ಲಿಲ್ಲದ ಪ್ರಾಧಾನ್ಯ ಒದಗಿಬಂತು.

ಈ ಚರಿತ್ರೆಯ ಅಂಶಗಳನ್ನು ಆಳವಾಗಿ ವ್ಯಾಸಂಗ ಮಾಡಿದರೆ ನಮ್ಮ ಭಾಷೆಗೆ ಅರಬ್ಬಿ, ಪಾರಸಿ, ಉರ್ದು, ಪೋರ್ಚುಗೀಸ್ ಮತ್ತು ಇಂಗ್ಲಿಷ್ ಭಾಷೆಗಳ ಪ್ರಾಧಾನ್ಯದಿಂದ ನಮಗೆ ಆಯಾ ಭಾಷೆಯ ಶಬ್ದಗಳು ಬಂದು ಸೇರಿದ ಕಾರಣಗಳು ಸುಸ್ಪಷ್ಟವಾಗುತ್ತವೆ.

ವಿನೋದಕ್ಕಾಗಿ ಎರಡು ಮೂರು ವಾಕ್ಯಗಳನ್ನು ಉದಾಹರಿಸುತ್ತೇನೆ - ಓದಿ ನೋಡಿ :

"ಈ ಅಸಾಮಿ ಐನಾತಿ ಇಸಮ್ಮು, ಕಚೇರಿಯಲ್ಲಿ ಖಜಾಂಚಿ. ಕುರ್ಚಿಯಲ್ಲಿ ಕುಳಿತು ದೌಲತ್ ನಡೆಸುತ್ತಾನೆ. ಸಂಜೆ ತನ್ನ ಪಟಾಲಮ್ಮಿನೊಡನೆ ಬಂದು ಪಲಾವ್ ತಿಂದು ಶರಾಬ್ ಕುಡಿದು ಜರ್ಬಾಗಿ ನಿದ್ದೆ ಹೊಡೀತಾನೆ."

ಇದನ್ನು ಓದಿದರೆ ಎಲ್ಲವೂ ಅಪ್ಪಟ ಕನ್ನಡದಂತೆಯೇ ಕಾಣುವುದಲ್ಲವೇ ? ಆದರೆ ಅಲ್ಲಿ ಹದಿಮೂರು ಶಬ್ದಗಳು ಅನ್ಯದೇಶ್ಯಗಳು. ಹತ್ತು ನಿಜವಾಗಿ ಕನ್ನಡ ಶಬ್ದಗಳು. ಅಂದರೆ ಅನ್ಯದೇಶ್ಯ ಶಬ್ದಗಳು ಕನ್ನಡದಲ್ಲಿ ಎಷ್ಟು ಚೆನ್ನಾಗಿ ಹೊಂದಿಕೊಂಡಿವೆ ಎಂಬುದು ಗೊತ್ತಾಗುತ್ತದೆ. ಇತರ ಭಾಷೆಯ ಶಬ್ದಗಳು ನಮ್ಮ ಭಾಷೆಗೆ ಸೇರಿಕೊಳ್ಳುವಾಗ ಮೂಲ ಭಾಷೆಯ ಸ್ವರೂಪವನ್ನೇ ತಾಳಿರುತ್ತವೆ. ಉದಾಹರಣೆಗೆ, ಅರಬ್ಬಿಯ ಅತ್ತರ್, ಅಮಲು, ಐನು, ಐಬು, ಅಸಲು, ಇನಾಮು, ಇಸಮು, ಕಸಿ, ಕಾಯಂ ಇತ್ಯಾದಿ. ಪಾರಸೀ ಭಾಷೆಯ ಅಂದಾಜು, ಅಮಲ್ದಾರ, ಅರ್ಜಿ, ಸರಂಜಾಮು, ಅಫೀಮು, ಕಾಮ್, ಕಮ್ಮಿ, ಕಾಳಜಿ, ಕುಶಾಲು, ಖೋಜ, ಖರ್ಚು, ಗುಲಾಬಿ, ನಾಷ್ಟ, ನಾಜೂಕು ಇತ್ಯಾದಿ. ಮೂಲ ಶಬ್ದದ ಸ್ವರೂಪದಿಂದ ಎಲ್ಲೋ ಸ್ವಲ್ಪ ಬದಲಾವಣೆ, ಅಷ್ಟೆ! ಮತ್ತೆ ಕೆಲವು ತುಂಬ ಬದಲಾವಣೆ ಹೊಂದುತ್ತವೆ. ಅರಬ್ಬಿಯ ಜಿರಾತ್ ಎಂಬುದು ಜಿರಾಯಿತ್ತು ಆಗುತ್ತದೆ. ಪಾರಸಿಯ ಸರಹದ್ ಎಂಬುದು ಸರಹದ್ದು ಆಗುತ್ತದೆ. ಸಿಫ್‌ಬಂದಿ ಎಂಬುದು ಸಿಬ್ಬಂದಿ ಎಂದಾಗುತ್ತದೆ. ಹೋಷ್ಯಾರ್ ಎಂಬುದು ಹುಷಾರ್ ಆಗುತ್ತದೆ. ಹಿಮ್ಮತ್ ಎಂಬುದು ಹುಮ್ಮಸ್ಸು ಆಗುತ್ತದೆ. ಇಂಗ್ಲಿಷಿನಿಂದ ಬಂದ ಶಬ್ದಗಳನ್ನು ಗಮನಿಸಿ. ಬ್ಯಾಂಡು, ಬ್ಯಾಂಡೇಜು, ಬ್ಲೇಡು,ಬ್ಲೌಜು, ಪೆನ್ನು, ಪಿನ್ನು. ಹೀಗೆ ಸ್ವರೂಪವನ್ನು ಉಳಿಸಿಕೊಂಡಿವೆ. ತುಂಬ ಬದಲಾವಣೆ ಹೊಂದಿರುವ ಎರಡು ಪ್ರಸಿದ್ಧ ಶಬ್ದಗಳಿವೆ. ಸೂಪ್ರೆಂಟ್, ಟೆಂಪರ್‌ವರಿ.

ಇತರ ಭಾಷೆಗಳಿಂದ ಬಂದ ಒಂದೆರಡು ಶಬ್ದಗಳನ್ನು ಪರಿಚಯ ಮಾಡಿಕೊಳ್ಳೋಣ. **ಇಗರ್ಜಿ** ಎಂದರೆ ಕ್ರೈಸ್ತರು ಪ್ರಾರ್ಥನೆ ಮಾಡುವ ದೇವಾಲಯ. ಇದೇ ಚರ್ಚು. ಚರ್ಚ್ ಎಂಬುದು ನೇರವಾಗಿ ಇಂಗ್ಲಿಷಿನಿಂದ ಬಂದು ಚರ್ಚು ಎಂದೇ ಇದೆ. ಆದರೆ ಇಗರ್ಜಿ ಜರ್ಮನ್ ಭಾಷೆಯ ಕಿರ್ಕೊಸ್ ಶಬ್ದದ ಅಪಭ್ರಂಶ. ಭಾರತದ ಅನೇಕ ಭಾಷೆಗಳಲ್ಲಿ ಈ ಶಬ್ದ ಬೇರೆ ರೂಪಗಳನ್ನು ಪಡೆದಿದೆ. ಹಿಂದಿಯಲ್ಲಿ ಇಗರ್ಜಿ, ಇಗಾರ್ಜಿ, ಬಂಗಾಳಿಯಲ್ಲಿ ಗೀರ್ಜಾ, ತುಳುವಿನಲ್ಲಿ ಇಗ್ರೇಜ್, ಮಲೆಯಾಳಮ್ಮಿನಲ್ಲಿ ಇಗ್ರೆಷಿಯಾ, ದಕ್ಷಿಣಕನ್ನಡದಲ್ಲಿ ಮಾತ್ರ ಇಗರ್ಜಿಯೇ ಇದೆ.

ಇಸ್ತ್ರಿ ಶಬ್ದವನ್ನು ನೋಡಿ. ಇದು ಮರಾಠಿಯಲ್ಲಿ ಇಸ್ತಿರಿ, ಇಸ್ತ್ರಿ, ಹಿಂದಿಯಲ್ಲಿ ಇಸ್ತಿರೀ, ತೆಲುಗಿನಲ್ಲಿ ಇಸ್ತಿರಿ. ಇದಕ್ಕೆ ಮೂಲ ಪೋರ್ಚುಗೀಸ್ ಭಾಷೆಯ ಎಸ್ತಿರರ್, ಪೋರ್ಚುಗೀಸರು ಗೋವವನ್ನು ಆಕ್ರಮಿಸಿ ಕರಾವಳಿಯಲ್ಲಿ ಬಹಳ ಪ್ರಬಲರಾಗಿದ್ದಾಗ ಅವರಿಂದ ಬಂದ ಶಬ್ದ.

ಪಟಾಲಂ ಶಬ್ದವನ್ನು ಪರಿಶೀಲಿಸೋಣ. ಇದು ಇಂಗ್ಲಿಷ್ ಭಾಷೆಯ ಬೆಟಾಲಿಯನ್ (Battalion) ಎಂಬ ಶಬ್ದದಿಂದ ಬಂದದ್ದು. ಇಂಗ್ಲಿಷಿಗೆ ಇಟಾಲಿಯನ್ ಭಾಷೆಯಿಂದ ಬಂದದ್ದು.

ಇಟಾಲಿಯನ್ ಭಾಷೆಯಲ್ಲಿ ಅದರ ಸ್ವರೂಪ Battaglione, ಬೆಟ್ಟಾಗ್ಲಿಯೋನ್. ಇದು ಫ್ರೆಂಚ್ ಭಾಷೆಗೆ ಪ್ರಯಾಣಮಾಡಿ ಇಂಗ್ಲೆಂಡಿಗೆ ಬಂದು ಕನ್ನಡಕ್ಕೆ ಬಂದಿದೆ. ಇದು ತಮಿಳಿನಲ್ಲಿ ಪಟ್ಟಾಳಮ್, ಮಲೆಯಾಳದಲ್ಲಿ ಪಟ್ಟಾಲನ್, ತುಳುವಿನಲ್ಲಿ ಪಟಾಲಂ, ತೆಲುಗಿನಲ್ಲಿ ಪಟಾಲಮು. ಶಬ್ದದ ಅರ್ಥ ತುಂಬ ಬದಲಾವಣೆಯಾಗುವುದಕ್ಕೆ ಇದು ಅತ್ಯುತ್ತಮ ಉದಾಹರಣೆ. ಈ ಶಬ್ದಕ್ಕೆ ಇಂಗ್ಲಿಷಿನಲ್ಲಿ ಅರ್ಥ ಹೀಗಿದೆ. "A ground force unit composed of a headquarters and two or more companies".

ಕನ್ನಡದಲ್ಲಿ **ಅಬ್ದಾಗಿರಿ** ಎಂಬ ಒಂದು ಶಬ್ದವಿದೆ. ರಾಜರು ಮೆರವಣಿಗೆ ಹೊರಟಾಗ ಅವರ ಮುಂದೆ ಸೈನಿಕರು ಸಾಲಾಗಿ ಶಿಸ್ತಿನಿಂದ ನಡೆಯುತ್ತ ಹೊರುವ ಕೆಲವು ರಾಜ ಚಿಹ್ನೆಗಳಲ್ಲಿ ಇದೂ ಒಂದು. ಬಿದಿರಿನ ಕೋಲಿಗೆ ಮೇಲ್ಗಡೆ ಲೋಹದಲ್ಲಿ ಮಾಡಿದ ಬೇರೆ ಬೇರೆ ಆಕೃತಿಯ ಅಲಂಕಾರದ ಸಾಮಾನುಗಳಿರುತ್ತವೆ. ಅವುಗಳಲ್ಲಿ ಇದೂ ಒಂದು. ಇದು ಪಾರಸಿಯಿಂದ ಬಂದ ಶಬ್ದ. ಪಾರಸಿಯಲ್ಲಿ *ಆಪ್ತಾಬ್* ಎಂದರೆ ಸೂರ್ಯ ಎಂದರ್ಥ. *ಗಿರ್* ಎಂದರೆ ರಕ್ಷಣೆ ಕೊಡತಕ್ಕದ್ದು. ಕನ್ನಡದಲ್ಲಿ ಅಲಂಕಾರಿಕವಾದ ಛತ್ರಿಯ ಆಕಾರದ ಒಂದು ಮೆರವಣಿಗೆಯ ಸಾಧನ. ಎಷ್ಟೊಂದು ಬದಲಾವಣೆ! ಹೀಗೆ ಶಬ್ದಗಳು ಎಷ್ಟೆಷ್ಟು ಉಪಯೋಗಕ್ಕೆ ಬರುತ್ತವೋ ಅಷ್ಟಷ್ಟು ಅರ್ಥವೂ ವ್ಯಾಪಕವಾಗುತ್ತ ಹೋಗುತ್ತವೆ.

ಹಾಗೆಯೇ ಇನ್ನೊಂದು ಸ್ವಾರಸ್ಯಕರವಾದ ಶಬ್ದವನ್ನು ಪರಿಚಯ ಮಾಡಿಕೊಳ್ಳೋಣ. ಪಾರಸೀ ಭಾಷೆಯಲ್ಲಿ **ಚಾಲಾಕ್** ಎಂಬ ಶಬ್ದವಿದೆ. ಇದಕ್ಕೆ ಜಾಣತನದ, ಸುಟಿಯಾದ, ಚಟುವಟಿಕೆಯ ಎಂದರ್ಥ. ಆದರೆ ಕನ್ನಡದಲ್ಲಿ ಚಾಲಾಕು ಎಂದರೆ ಅಷ್ಟು ಒಳ್ಳೆಯ ಅರ್ಥವಿಲ್ಲ. ಉಪಾಯಗಾರನಾದ ಕುತಂತ್ರಿ, ತಂತ್ರ ಕುಶಲಿಯಾದ, ಥಳಕು ಪಳಕಿನ ಎಂದು ಅರ್ಥ ಬಂದು ಬಿಟ್ಟಿದೆ. ಆಗಾಗ ಜಾಣನಾದ ಎಂಬ ಅರ್ಥದಲ್ಲಿಯೂ ಬಳಸುವುದು ಉಂಟು.

ಈಚೆಗೆ ಪ್ರಪಂಚದ ಎಲ್ಲ ದೇಶಗಳಲ್ಲಿ ಅತ್ಯಂತ ಅಧಿಕ ಪ್ರಮಾಣದಲ್ಲಿ ಪ್ರಯೋಗವಾಗುತ್ತಿರುವ ಕಂಪ್ಯೂಟರ್ ಶಬ್ದವನ್ನು ನೋಡಿ. ಕನ್ನಡದಲ್ಲಿ ಈ ಶಬ್ದಕ್ಕೆ ಗಣಕ ಯಂತ್ರ ಎಂದು ಅನುವಾದ ಮಾಡಿದ್ದಾರೆ. ಆದರೆ Calculator ಶಬ್ದಕ್ಕೂ ಗಣಕಯಂತ್ರವೆಂದೇ ಶಬ್ದವಿದೆ. ಅಲ್ಲದೆ ಕಂಪ್ಯೂಟರೀಕರಣ ಎಂಬ ಶಬ್ದ ಬೇರೆ ಸೃಷ್ಟಿಯಾಗಿದೆ. ಆದುದರಿಂದ ಕಂಪ್ಯೂಟರು ಎಂದೇ ಕನ್ನಡದಲ್ಲಿದ್ದರೆ ಉತ್ತಮ. ಪರಭಾಷೆಯ ಶಬ್ದಗಳು ಕನ್ನಡದ ಧ್ವನಿವ್ಯವಸ್ಥೆಗೆ ಹೊಂದಿಕೊಳ್ಳುವುದಾದರೆ ಅವುಗಳನ್ನು ಹಾಗೆಯೇ ಉಪಯೋಗಿಸುವುದು ಒಳ್ಳೆಯದು. ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಿಗೆ ಸೇರಿದ ಅನೇಕ ಶಬ್ದಗಳನ್ನು ಹಾಗೆಯೇ ಅಮದು ಮಾಡಿಕೊಳ್ಳುವುದು ಒಳ್ಳೆಯದು.

ಲಂಗೋಟಿ ಎಂಬ ಶಬ್ದಕೂಡ ಪರಭಾಷೆಯ ಶಬ್ದ. ನಮಗೆ ಪರಭಾಷೆಯಿಂದ ಬಂದಿದೆ. ನಾವು ಕೌಪೀನವನ್ನು ಬಿಟ್ಟು ಲಂಗೋಟಿಯನ್ನು ಉಪಯೋಗಿಸಲು ಎಂದಿನಿಂದ ಪ್ರಾರಂಭ ಮಾಡಿದೆವೆಂಬುದು ಒಳ್ಳೆಯ ಸಂಶೋಧನೆಗೆ ಗ್ರಾಸವಾಗಿದೆ; ಉಪಯುಕ್ತವಾದ ಅನ್ವೇಷಣೆಯಾಗುತ್ತದೆ. ಹಿಂದಿಯಲ್ಲಿ ಲಂಗೋಟ್, ಲಂಗೋಟಾ ಆಗಿದೆ. ಮರಾಠಿಯಲ್ಲಿ

ಲಂಗುಟಾ, ಲಂಗುಟೀ. ಕನ್ನಡದಲ್ಲಿ ಲಂಗೋಟಿ ಎಂದೇ ಪ್ರಯೋಗವಾಗುತ್ತಿದೆ. ನಮ್ಮ ವಕೀಲ ಅರಬ್ಬಿಯಿಂದ ಬಂದಿದ್ದಾನೆ. ಲೀಟರ್, ಕಿಲೋ ಶಬ್ದಗಳೂ ಫ್ರೆಂಚ್ ಮತ್ತು ಗ್ರೀಕ್ ಭಾಷೆಯಿಂದ ಬಂದಿವೆ. ನೇರವಾಗಿ ಅಲ್ಲದಿದ್ದರೂ ಇಂಗ್ಲಿಷ್ ಮೂಲಕ ಬಂದಿವೆ. ಗ್ರೀಕ್ ಭಾಷೆಯಲ್ಲಿ Khilion ಎಂದರೆ ಸಾವಿರ ಎಂದು ಅರ್ಥ. ನಮ್ಮ ಟೋಪಿ ಮರಾಠಿಯಿಂದಲೂ ನಮ್ಮ ರುಮಾಲು ಪಾರಸಿಯಿಂದಲೂ ನಮ್ಮ ಟವಲು ಫ್ರೆಂಚ್ ಭಾಷೆಯಿಂದಲೂ ಬಂದಿವೆ. ಹೀಗೆ ನಾವು ಅನೇಕ ಭಾಷೆಗಳಿಗೆ ಋಣಿಗಳು. ಆದರೆ ಈ ಸಾಲವನ್ನು ನಾವು ತೀರಿಸಬೇಕಾಗಿಲ್ಲ. ಈ ಆಸ್ತಿ ನಮಗೇ ಬಂದುಬಿಟ್ಟಿದೆ. ನಮ್ಮ ಭಾಷೆಯಿಂದ ಇತರ ಭಾಷೆಗಳಿಗೆ ಹೋಗಬೇಕಾದರೆ ನಾವು ನಮ್ಮ ಸಾಹಿತ್ಯವನ್ನೂ ಭಾಷೆಯನ್ನೂ ಅಷ್ಟರಮಟ್ಟಿಗೆ ಬೆಳೆಸಬೇಕು.

ಕೆಲವು ವೇಳೆ ಬೇರೆ ಭಾಷೆಯ ಪದವನ್ನು ನೇರವಾಗಿ ಆಮದು ಮಾಡದೆ ಇದ್ದಾಗ ಆ ಶಬ್ದವನ್ನು ಕನ್ನಡದ ಶಬ್ದಗಳಿಂದ ಅನುವಾದ ಮಾಡಿ ಹೊಸ ಶಬ್ದವನ್ನು ಸೃಷ್ಟಿ ಮಾಡಿರುವುದೂ ಉಂಟು. ಇದನ್ನು Loan Translation ಎಂದೂ Calque ಎಂದೂ ಇಂಗ್ಲಿಷಿನಲ್ಲಿ ಕರೆಯುತ್ತಾರೆ. ಇದಕ್ಕೆ ದೃಷ್ಟಾಂತಗಳಾಗಿ ಕೆಲವು ಶಬ್ದಗಳನ್ನು ಗುರುತಿಸಲಾಗಿದೆ.

ಇಂಗ್ಲಿಷ್	ಕನ್ನಡದ ಅನುವಾದ
Wire	ತಂತಿ-ತಾರು
Rock oil	ಕಲ್ಲೆಣ್ಣೆ
Circular	ಸುತ್ತೋಲೆ
Lead pencil	ಸೀಸದ ಕಡ್ಡಿ
Match box	ಕಡ್ಡಿ ಪೆಟ್ಟಿಗೆ
Match	ಬೆಂಕಿ ಕಡ್ಡಿ
Pick pocket	ಜೇಬುಗಳ್ಳ
Blotting paper	ಒತ್ತುವ ಕಾಗದ ಇತ್ಯಾದಿ.

ವಿವರಿಸಲು ಕಠಿಣವಾಗುವ ಹಾಗಿರುವ ಕೆಲವು ಆಂಗ್ಲಶಬ್ದಗಳಿವೆ.

Crude oil	ಕುರುಡಾಯಿಲ್
Non returnable trap	ನಾನಿಟ್ರಾಪು
Superintedent	ಸೂಪ್ರೆಂಟ್
Temporary	ಟೆಂಪರ್‌ವರಿ
Pin	ಗುಂಡ್‌ಪಿನ್ನು

ಇಂಗ್ಲಿಷ್ ಭಾಷೆಯ ಕಾಗುಣಿತ ಮತ್ತು ಸರಳ ಇಂಗ್ಲಿಷ್
(English spelling-plain English)

ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ಈ ವಿಷಯವನ್ನು ಸ್ವಲ್ಪ ವಿವರವಾಗಿ ನಿರೂಪಿಸುತ್ತೇನೆ. ಇದರಿಂದ ಕನ್ನಡಿಗರು ಕಲಿಯಬೇಕಾದುದು ಬಹಳವಿದೆ. ಆದುದರಿಂದ ಮುಂದೆ ತಿಳಿಸುವುದನ್ನು ಓದುಗರು ಗಮನಿಸಬೇಕು.

ಇಂಗ್ಲಿಷ್ ಭಾಷೆಯನ್ನು ಮಾತೃಭಾಷೆಯನ್ನಾಗಿ ಆಡುವವರು ಕಲಿಯುವವರು ಆ ಭಾಷೆಯ ಕಾಗುಣಿತದ (Spelling) ಬಗ್ಗೆ ಸರಿಯಾಗಿ ಅರಿತಿರುವುದಿಲ್ಲ. ಇಂಗ್ಲಿಷ್ (Spelling) ತುಂಬ ಅವೈಜ್ಞಾನಿಕವಾಗಿದೆ. ಇದರ ಹಿಂದೆ ಒಂದು ದೊಡ್ಡ ಕತೆಯೇ ಇದೆ.

ತಮ್ಮ ಭಾಷೆಯ ಕಾಗುಣಿತವು ಯದ್ವಾತದ್ವಾ ಅವ್ಯವಸ್ಥೆಗೆ ಒಳಗಾಗಿರುವುದನ್ನು ಕಂಡ ಇಂಗ್ಲಿಷ್ ಭಾಷಾ ವಿದ್ವಾಂಸರು ೧೬ನೆಯ ಶತಮಾನದ ಆದಿಯಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸುಧಾರಣೆಯ ಒಂದು ಆಂದೋಳನವನ್ನೇ ನಡೆಸಿದರು. ಕ್ರಿ.ಶ. ೧೫೬೯ರಲ್ಲಿಯೇ John Hart ಎಂಬಾತನು 'ನಾವು ಉಚ್ಚರಿಸುವುದಕ್ಕೆ ಸಮಾನವಾಗಿರುವಷ್ಟು ಅಕ್ಷರಗಳನ್ನು ಮಾತ್ರ ಉಪಯೋಗಿಸಿ. ನಾವು ಮಾತನಾಡಿದಂತೆಯೇ ಬರೆಯಿರಿ. ಒಂದು ಉಚ್ಚಾರಣೆಗೆ ಬೇರೊಂದು ಅಕ್ಷರವನ್ನು ಉಪಯೋಗಿಸಬೇಡಿ. ನಮ್ಮ ಉಚ್ಚಾರಣೆಗೆ ಸಮನಾದ ಅಕ್ಷರಗಳಿಲ್ಲದಿದ್ದರೆ ಅಂಥ ಪ್ರತಿಯೊಂದು ಉಚ್ಚಾರಕ್ಕೂ ಹೊಸದೊಂದು ಅಕ್ಷರವನ್ನು ನಿರ್ಮಾಣಮಾಡಿ. ಇದರಿಂದ ತಾರ್ಕಿಕವಾದ ಮಾನವನಿಗಾಗಲಿ ದೇವರಿಗಾಗಲಿ ಅಪಚಾರವಾಗುವುದಿಲ್ಲ' ಎಂದು ಪ್ರಚಾರ ಮಾಡಿದನು.

ಕ್ರಿ.ಶ. ೧೭೬೪ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್‌ನು ಜನರು ಉಚ್ಚರಿಸುವ ಧ್ವನಿಗೂ ಅದನ್ನು ಪ್ರತಿನಿಧಿಸುವ ಲಿಪಿಗೂ ಸಂಬಂಧವನ್ನುಂಟುಮಾಡಲು ಒಂದು ಧ್ವನಿಸಮಾನ ವರ್ಣಮಾಲೆಯನ್ನು (Phonetic alphabet) ವೃದ್ಧಿಪಡಿಸಿದನು. ಇಂಗ್ಲಿಷ್ ಕಾಗುಣಿತವನ್ನು ಕುರಿತು ಬರ್ನಾರ್ಡ್‌ಷಾ ಎಂಬ ಮಹಾನಾಟಕಕಾರರು ಪ್ರಚಾರಮಾಡುತ್ತಿದ್ದ ಅಭಿಪ್ರಾಯವಂತೂ ಲೋಕಪ್ರಸಿದ್ಧವಾಗಿದೆ. Fish ಎಂಬ ಶಬ್ದವನ್ನು Ghoti ಎಂದು ಬರೆದರೂ Fish ಎಂದೇ ಉಚ್ಚರಿಸಬಹುದು ಎಂದು ಅವನ ವಾದವಾಗಿತ್ತು. ಏಕೆಂದರೆ Though ಶಬ್ದದ gh=f, Women ಶಬ್ದದ o=i, lotion ಶಬ್ದದ ti=sh ಎಲ್ಲಾ ಒಟ್ಟು ಸೇರಿಸಿದರೆ Fish . ಇತರರು ghoti ಎಂಬುದು ಯಾವ ಉಚ್ಚಾರವನ್ನೂ ಹೊಂದದ ಮೌನದ ಮಾತಾಗಬಹುದು ಎಂದರು. ಏಕೆಂದರೆ though ಶಬ್ದದ, gh,foetus ಶಬ್ದದ o,castle ಶಬ್ದದ t ಮತ್ತು cushion ಶಬ್ದದ i ಒಟ್ಟು ಸೇರಿಸಿದರೆ ಯಾವ ಧ್ವನಿಯೂ ಬರುವದೇ ಇಲ್ಲ.

ಹೀಗೆ ವಾದವಿದ್ದರೂ ಬರ್ನಾಡ್ ಷಾ ನೂತನ ವರ್ಣಮಾಲೆಗಂದೇ ಬಹುದೊಡ್ಡ ಪ್ರಮಾಣದ ಧನದ ದತ್ತಿಯನ್ನು ಸ್ಥಾಪಿಸಿದನೆಂದೂ ಒಬ್ಬ ಪ್ರಸಿದ್ಧ ಭಾಷಾ ವಿಜ್ಞಾನಿ ಅಂಥ ಒಂದು ವರ್ಣಮಾಲೆಯನ್ನು ನಿರ್ಮಾಣ ಮಾಡಿ ಆ ದತ್ತಿಯ ಹಣವನ್ನು ಗಳಿಸಿದನೆಂದೂ ಕೇಳಿದ್ದೇನೆ. ಆದರೆ ಸುಧಾರಿತ ವರ್ಣಮಾಲೆ ಪ್ರಯೋಗಕ್ಕೆ ಬರಲೇ ಇಲ್ಲ.

ಆದರೆ ಇಂಗ್ಲಿಷ್ ಭಾಷೆಯ ಆಡು ಮಾತಿಗೂ ಬರಹಕ್ಕೂ ಇಂಥ ವ್ಯತ್ಯಾಸವಿರದಿದ್ದ ಕಾಲ ಒಂದಿತ್ತು. ೧೪ನೆಯ ಶತಮಾನದಲ್ಲಿ ಇದ್ದ ಬರಹದಲ್ಲಿ ಇದನ್ನು ಕಾಣಬಹುದಾಗಿತ್ತು. ಕ್ರಿ. ಶ. ೧೪೦೦ರಿಂದ ೧೬೦೦ ರ ಅಂತರದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಚಾಸರ್, ಷೇಕ್ ಸ್ಪಿಯರ್ ಅವರ ಬರಹಗಳು ನಿರ್ಮಾಣವಾದ ಸಮಯದಲ್ಲಿ ಇಂಗ್ಲಿಷ್ ಸ್ವರಗಳ ಉಚ್ಚಾರಣೆಯಲ್ಲಿ ಒಂದು ದೊಡ್ಡ ಬದಲಾವಣೆಯಾಯಿತು. ಇಂಗ್ಲಿಷ್ ಭಾಷೆಯ ಚರಿತ್ರೆಯಲ್ಲಿ ಇದನ್ನು The great vowel shift ಎಂದು ಕರೆಯುತ್ತಾರೆ. ವ್ಯಂಜನಗಳ ಉಚ್ಚಾರಣೆಯಲ್ಲಿ ಅಷ್ಟು ಬದಲಾವಣೆಯಾಗಲಿಲ್ಲ. ಮುದ್ರಣ ಕ್ಷೇತ್ರದಲ್ಲಿ ಇಂಗ್ಲಿಷ್ ಶಬ್ದಗಳ ಕಾಗುಣಿತವು ಕ್ರಿ.ಶ. ೧೪೨೧-೧೪೯೧- ಈ ಸಮಯದಲ್ಲಿ ವಿಲಿಯಂ ಕಾಕ್ಸ್‌ಟನ್ ಎಂಬಾತನಿಂದ ನಿರ್ಧಾರಗೊಂಡಿತು. ಬಳಿಕ ನಿಘಂಟುಕಾರರು ಶಬ್ದಗಳ ಕಾಗುಣಿತವನ್ನು ನಿರ್ಧರಿಸಿದರು. ಹೀಗೆ ನಿರ್ಧಾರ ಮಾಡುವಾಗ ಅವರು ಮುಂದಿನ ಕಾಲಮಾನದಲ್ಲಿ ಆಗಬಹುದಾದ ಉಚ್ಚಾರಣೆಯ ಬದಲಾವಣೆಯನ್ನು ನಿರೀಕ್ಷಿಸುವುದು ಸಾಧ್ಯವಿರಲಿಲ್ಲ. ಹೀಗೆ ಶಬ್ದಗಳ ಕಾಗುಣಿತವು ಮುದ್ರಣದಲ್ಲಿ ಶಾಶ್ವತತೆಯನ್ನು ಪಡೆದರೂ ಉಚ್ಚಾರಣೆಯಲ್ಲಿ ವ್ಯತ್ಯಾಸವಾಗುತ್ತಲೇ ಹೋಯಿತು. ಇದರಿಂದ ಬರಹದ ಕಾಗುಣಿತಕ್ಕೂ ಉಚ್ಚಾರಣೆಗೂ ವ್ಯತ್ಯಾಸ ಸ್ಪಷ್ಟವಾಗಿ ಅಧಿಕವಾಗುತ್ತಲೇ ಇತ್ತು. ಆದರೂ ಈಗ ಇಂಗ್ಲಿಷ್ ಭಾಷೆಯ ಶಬ್ದಗಳಿಗೆ ಕಾಗುಣಿತದಲ್ಲಿ ಎರಡು ಬಗೆಯ ವ್ಯವಸ್ಥೆ ಇದೆ. ೧. ಬ್ರಿಟಿಷ್ ಪದ್ಧತಿ ೨. ಅಮೆರಿಕದ ಪದ್ಧತಿ. ಆದರೆ ಈ ಪದ್ಧತಿಗಳಲ್ಲಿರುವ ವ್ಯತ್ಯಾಸ ಮುಖ್ಯವಾಗಿ colour-color, centre-center, cheque-check, programme-program ಮುಂತಾದ ಕೆಲವು ಶಬ್ದಗಳಿಗೆ ಮಾತ್ರ ಸೀಮಿತವಾಗಿದೆ. ಈ ಸಮಸ್ಯೆಯನ್ನು ಕುರಿತು H.W. Fowler ಎಂಬ ವಿದ್ವಾಂಸ ವೈಯಾಕರಣನು ಹೇಳಿರುವ ಮಾತು ಸೂಕ್ತವಾಗಿದೆ.

Let English "better be treated the English way and spelling not to be revolutionised, but amended in detail, here a little and there a little, as abnormalities become intolerable till a result is obtained that shall neither overburden school boys, nor stultify intelligence and not outrage the scholar." ಈ ಮಾತನ್ನು ಬಹು ಜನ ಒಪ್ಪಿರುವುದು ಸಮಾಧಾನದ ವಿಷಯ.

ಇಂಗ್ಲಿಷ್ ಭಾಷೆಯನ್ನು ತುಂಬ ಆಸಕ್ತಿಯಿಂದ ವ್ಯಾಸಂಗಮಾಡಿ ಆದರ ಗೌರವವನ್ನು ಕಾಪಾಡಿಕೊಂಡು ಬಂದಿರುವ ಸ್ಥಿತಿ ಭಾರತದಲ್ಲಿರುವಂತೆ ಇತರ ದೇಶಗಳಲ್ಲಿ ಇಲ್ಲ. ಬೇರೆ ಬೇರೆ ದೇಶಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಉಪಯೋಗಿಸುವುದರಲ್ಲಿ ಏನೇನು ಅಪಾರ್ಥಗಳಾಗುತ್ತಿವೆ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ದೃಷ್ಟಾಂತವಾಗಿ ವಿವಿಧ ದೇಶಗಳ ನಗರಿಗಳಲ್ಲಿ ಪ್ರಸಿದ್ಧ ಹೋಟೆಲುಗಳಲ್ಲಿ ಪ್ರವಾಸಿಗಳಿಗೆ ನೀಡುವ ಸೂಚನೆಯ ಫಲಕಗಳಲ್ಲಿ ಕೆಲವನ್ನು ಮಾತ್ರ ಸಂಗ್ರಹಿಸಿ ಇಲ್ಲಿ ದಾಖಲಿಸಿದೆ.

ಟೋಕಿಯೋ

Special cocktails for the ladies with nuts.

ಬುಕಾರೆಸ್ಟ್

The lift is being fixed for the next day. During that time we regret that you will be unbearable.

ಬೆಲ್ಗ್ರೇಡ್

The flattening of the underwear with pleasure is the job of the chamber maid.

ಜ್ಯೂರಿಚ್

Because of the impropriety of entertaining guests of the opposite sex in bedrooms, it is suggested that the lobby be used for the purpose.

ಮಾಸ್ಕೋ

If this is your first visit to USSR, you are welcome to it.

ಬರ್ನ್

Our wines leave you nothing to hope for.

ಮೆಕ್ಸಿಕೋ

The manager has personally passed all the water served here.

ಹೀಗೆಲ್ಲ ಹಾಸ್ಯಾಸ್ಪದ ಪ್ರಯೋಗಗಳು ಎಷ್ಟು ಇದ್ದರೂ ಇಂಗ್ಲಿಷ್ ಭಾಷೆಯ ಪ್ರಭಾವ ವಿಶ್ವದಲ್ಲಿ ಹೆಚ್ಚುತ್ತಲೇ ಇದೆ. ಇಂಗ್ಲಿಷನ್ನು ಭಾರತದಿಂದ ಗಡಿಪಾರು ಮಾಡುವ ಆಲೋಚನೆ ಮಾಡುವವರು ಈ ವಿಚಾರವಾಗಿಯೂ ಆಲೋಚನೆ ಮಾಡಬೇಕು.

ಇಂಗ್ಲಿಷ್ ಕಾಗುಣಿತದ ಬಗ್ಗೆ ಒಂದು internet ವಿನೋದ

ಈಚೆಗೆ, ಈಗ ತಾನೆ ಯೂರೋಪಿಯನ್ ಯೂನಿಯನ್ನಿಗೆ ಇನ್ನು ಮುಂದೆ ಇಂಗ್ಲಿಷ್ ಭಾಷೆಯೇ ಅಧಿಕೃತ ಭಾಷೆಯಾಗಿರುವಂತೆ ಒಪ್ಪಂದವಾಗಿದೆಯಂತೆ. ಜರ್ಮನರೂ ಅದಕ್ಕೆ ಒಪ್ಪಿದ್ದಾರಂತೆ. ಅದಕ್ಕೆ ಬ್ರಿಟಿಷ್ ಸರಕಾರವು ಇಂಗ್ಲಿಷಿನ ಕಾಗುಣಿತದಲ್ಲಿ ಸ್ವಲ್ಪ ಬದಲಾವಣೆ ಮಾಡಲು ಒಪ್ಪಿದೆಯಂತೆ. ಜರ್ಮನರು ಏಕೆ ಒಪ್ಪಿರಬಹುದು ಎಂಬುದಕ್ಕೆ ಈಚೆಗೆ internet ನಲ್ಲಿ ಬಂದ ವಿನೋದ ವಿವರವನ್ನು ಈ ಕೆಳಗೆ ಮುದ್ರಿಸಿದೆ.

Euro-English

The European Commission has just announced an agreement whereby English will be the official language of the European Union rather than German, which was the other possibility

As part of the negotiations, Her Majesty's Government conceded

that English spelling had some room for improvement and has accepted a 5-year phase -in plan that would be known as "Euro-English".

In the first year, 's' will replace the soft 'c'. Sertainly, this will make the sivil servants jump with joy. The hard 'c' will be dropped in favour of the 'k'. This should clear up konfusion and keyboards kan have one less letter.

There will be growing public enthusiasm in the sekond year when the troublesome 'ph' will be replashed with the 'f'. This will make words like 'fotograf' 20% shorter.

In the third year, public akseptanse of the new spelling kan be expekted to reach the stage where more komplikated changes are possible. Governments will enkourage the removal of double leters which have always been a deterent to akurate speling. Also al wil agre that the horibl mes of the silent 'e' in the languages is digrasful and it should go away.

By the 4th yer peopl will be reseptiv to steps such as replasing 'th' with 'z' and 'w' and 'v'. During ze fifz, ze unesesary 'o' be dropped from vords kontaining 'ou' and similar changes vud of kors be aplid to oza kombinations of letas.

After ziz fifz yer ve vil have a rali sensibl riten styl. Zer vil be no mor trubl or difikultis and evrivm vil find it ezi tu anderstand ech oza. ze.

Zen ve vil take over.

- From the Internet

ಯಾವುದೋ ಒಂದು ವ್ಯವಸ್ಥೆಯ ಏರ್ಪಾಟಾಗಿ ನೂರಾರು ವರ್ಷಗಳ ಹಿನ್ನೆಲೆಯುಳ್ಳ ಒಂದು ಭಾಷೆಯ ಲಿಪಿ ವ್ಯವಸ್ಥೆಯನ್ನು ಸುಧಾರಿಸುವುದು ಎಷ್ಟು ಅಪಾಯಕಾರಿ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಈ ಏರ್ಪಾಟೇನಾದರೂ ಪ್ರಯೋಗಕ್ಕೆ ಬಂದರೆ ಇಂಗ್ಲಿಷಿಗೆ ಎರಡು ಲಿಪಿ ವ್ಯವಸ್ಥೆ ಬಂದು ಗ್ರಂಥಮುದ್ರಣದಲ್ಲಿ ಏರುಪೇರಾಗುವುದಿಲ್ಲವೇ ? ಆಲೋಚಿಸಬೇಕು - ಈ ದೇಶದವರು ?

ಸರಳ ಇಂಗ್ಲಿಷ್, Plain English

ಇಂಗ್ಲಿಷ್ ಭಾಷೆಯಲ್ಲಿ Gobbledygook ಎಂಬ ಒಂದು ಶಬ್ದವಿದೆ. ಇಂಗ್ಲಿಷ್ ನಿಘಂಟುಗಳಲ್ಲಿ ಈ ಶಬ್ದಕ್ಕೆ official jargon, rubbish, nonsense, pomposity ಎಂದು ಅರ್ಥದ ವಿವರಣೆಯಿದೆ. ಇಂಗ್ಲೆಂಡಿನ CHRISSIE MAHER ಎಂಬಾಕೆ ಸರಕಾರದ ಪತ್ರವ್ಯವಹಾರದಲ್ಲಿ, ಅರ್ಜಿಗಳ ನಮೂನೆಗಳಲ್ಲಿ (forms) ಕಾಣಬರುತ್ತಿದ್ದ ಈ Gobbledygookಗೆ ಸಮಾನವಾದ ಭಾಷಾಪ್ರಯೋಗಗಳ ವಿರುದ್ಧವಾದ ಹೋರಾಟ ಮಾಡಲು

Forms Market ಎಂಬ ಒಂದು ಸಂಸ್ಥೆಯನ್ನು ಕಟ್ಟಿದಳು. ಅವಳೂ ಅವಳ ಗೆಳತಿಯರೂ ಒಟ್ಟು ಸೇರಿ ಸರಕಾರೀ ನಮೂನೆಗಳನ್ನು ತಿದ್ದಿ ಪುನಃ ಬರೆದು ಅರ್ಜಿದಾರರಿಗೆ ತೋರಿಸಿದರು. ಹೊಸ form ಗಳು ಸುಲಭವೂ ಸರಳವೂ ಆಗಿದ್ದು ಅರ್ಜಿ ಹಾಕುವವರಿಗೆ ತುಂಬ ಅನುಕೂಲವಾಯಿತು. ೧೯೭೯ರಲ್ಲಿ ಈ ಸಂಸ್ಥೆಯ ಸದಸ್ಯರು ಲಂಡನ್ನಿಗೆ ಪ್ರಯಾಣ ಬೆಳೆಸಿ ಪಾರ್ಲಿಮೆಂಟಿನ ಕೆಳಮನೆ ಮತ್ತು ಮೇಲ್ಮನೆಗಳ ಎರಡೂ ಕಟ್ಟಡಗಳ ಮೆಟ್ಟಿಲುಗಳ ಮೇಲೆ ಸರಕಾರೀ ಅರ್ಜಿಗಳನ್ನು ಚೂರು ಚೂರು ಮಾಡಿ ರಾಶಿ ರಾಶಿಯಾಗಿ ಚೆಲ್ಲಿದರು. ಈ ದೊಡ್ಡ ಆಂದೋಳನಕ್ಕೆ ಭಾರಿ ಪ್ರಚಾರ ದೊರೆಯಿತು. ಆಗ ಪ್ರಧಾನ ಮಂತ್ರಿಯಾಗಿದ್ದ ಮಾರ್ಗರೆಟ್ ಥಾಚರ್ ಅವರೂ ಮುಂದೆ ಪ್ರಧಾನ ಮಂತ್ರಿಯಾದ ಜಾನ್ ಮೇಜರ್ ಅವರೂ ಬೆಂಬಲನೀಡಿದರು. ಸರಕಾರಿ ಅರ್ಜಿಗಳ ಸ್ವರೂಪ ಹೀಗೆ ಸರಳವಾಯಿತು.

೧೯೯೦ರಲ್ಲಿ ಇದೇ ಸಂಸ್ಥೆಯ ಸದಸ್ಯರು ಆಂದೋಳನಕ್ಕೆ ಅಮೆರಿಕಕ್ಕೆ ತೆರಳಿದರು. ಅಲ್ಲಿ Capital ಎಂಬ ಶಾಸನ ಸಭೆಯ ಭವನದ ಮುಂದೆ ಅಮೆರಿಕ ಸರಕಾರದ ಅರ್ಜಿ ನಮೂನೆಗಳನ್ನು ರಾಶಿ ರಾಶಿಯಾಗಿ ಹರಿದು ಇಂಗ್ಲೆಂಡಿನಲ್ಲಿ ನಡೆಸಿದ ಆಂದೋಳನವನ್ನೇ ಪುನರಾವರ್ತಿಸಿದರು. ಈ ಆಂದೋಳನವೂ ತುಂಬ ಯಶಸ್ವಿಯಾಗಿ ಅಮೆರಿಕದ ಸಾಮಾನ್ಯ ಜನರಿಗೆ ಬಹಳ ಉಪಕಾರವಾಯಿತು. ಈಗ ಈ ಸಂಸ್ಥೆಯು ಒಂದು ಕಾರ್ಯಕಾರಿ ಸೇನೆ (Task Force)ಯನ್ನು ಕಟ್ಟಿ, ಸಂಯುಕ್ತ ಸಂಸ್ಥಾನಗಳ ವಿವಿಧ ಸರಕಾರಗಳ, ಕೆನಡಾ, ಆಸ್ಟ್ರೇಲಿಯಾ, ಹಾಂಗ್‌ಕಾಂಗ್, ಮತ್ತು ಸ್ವೀಡನ್‌ಗಳಲ್ಲಿಯೂ ದಕ್ಷಿಣ ಆಫ್ರಿಕದ ಹೊಸ ಸರಕಾರದ ಎದುರಿಗೂ ಆಂದೋಳನಗಳನ್ನು ನಡೆಸಿ ಯಶಸ್ಸನ್ನು ಪಡೆಯುತ್ತಿದೆ. ಈ Task Forceನ ಸಂದೇಶ ಹೀಗಿದೆ:

"Wherever people are struggling to understand information that affects their lives, we are ready to help. We have had 15 years' experience of bullying, persuading and helping officialdom to communicate clearly. It can be done and if you need any help we are here."

ಇಂಗ್ಲೆಂಡ್ ಅಮೆರಿಕಗಳಲ್ಲಿ plain English ಬಗ್ಗೆ ಇಷ್ಟು ದೊಡ್ಡ ಆಂದೋಳನ ನಡೆಯಲು ಕಾರಣವೇನು ಎಂಬುದನ್ನು ಸ್ಪಷ್ಟೀಕರಿಸಲು ೧೯೮೯ ಮೇ ೩೧ ರಂದು The Hindu ಪತ್ರಿಕೆಯಲ್ಲಿ ಪ್ರಕಟವಾದ ಒಂದು ವರದಿಯನ್ನು ಯಥಾವತ್ತಾಗಿ ಈ ಕೆಳಗೆ ಮುದ್ರಿಸಿದೆ.

Plain English not for bankers

Washington, May 30 (AP) - How to solve the Third World's 1.2 million dollar debt problem?

In the jargon of the International Monetary Fund, a prescription might go something like this:

"The enhanced structural adjustment facility will maximise

rescheduling potential for the least developed areas, will set-aides from debtor purchases of the fund's ordinary resources. In terms of special drawing rights, can be devoted to operations on the secondary market and a percentage of quotas will be available for interest support."

What?

Bankers and IMF experts, tackling the issues of Third World debt, really talk that way. Sometimes it may be because they are so wrapped up in their speciality that the terminology seems natural.

In other cases, someone may be trying to hide something.

Mr. Robert J. Schaetzel, President of a private group known as the Council for US International Trade Policy, says even he often has trouble understanding what the experts are talking about.

"Banks have made unwise loans and don't want to admit it." he said. "They try to offload the responsibility, either on the borrowers or on creditor Governments. Its a combination: There's pride in using words few people understand, and you don't bring so much criticism down on your head."

United States Congressman Jim Leach of IOWA, a former diplomat, couldn't resist putting it this way:

"The hocus-pocus of econometrics is analogous to doctor-patient lingnuistics giving the upper hand to the verbosity of verbal syllablisation."

Pressed, he acknowledged that "syllablisation" was his own invention.

"The IMF's particularly arcane language is intended perhaps to create the mystique that surrounds an enigmatic oracle," said Richards Fienberg, Vice-President of the Overseas Development Council.

But Rodnery Elbridge, Professor of International Finance at George Washington University, offered a defence of some of the jargon. He said new words have to be invented all the time to keep pace with financial developments. He cited "securitisation," meaning the issuance of a new form of bond instead of making a loan.

"Five years ago that would not have been a word,"he said."It is now."

Some speculate that the International Monetary Fund's language has something to do with the dignity of European bankers which often exceeds that of US bankers.

Since the fund was set up after World War II, it has always been headed by a banker from Europe. It's sister organisation, the World Bank, has always had a US President. While it too uses Jargon, the bank tends to go in for simpler language and rarely uses its official title-the International Bank for Reconstruction and Development.

— **The Hindu**

ಕನ್ನಡ ದೇಶದ ಸರಕಾರದ ಪ್ರಕಟಣೆಗಳಲ್ಲಿಯೂ ಆಕಾಶವಾಣಿ, ದೂರದರ್ಶನದ ಮಾತುಗಾರಿಕೆಯಲ್ಲಿಯೂ ಸರಕಾರದ ಪತ್ರ ವ್ಯವಹಾರದಲ್ಲಿಯೂ ಹೀಗೆಯೇ ಸರಳ ಕನ್ನಡದ ಉಪಯೋಗಕ್ಕಾಗಿ ಆಂದೋಳನವೇ ನಡೆಯಬೇಕೋ ಏನೋ ಕಾಣೆ! ಅದಕ್ಕೆ ಈ ಚಿಂತನೆ ನಾಂದಿಯಾಗಲಿ !

ಈ ಕಡೆಗೆ ಕನ್ನಡ ಕಾರ್ಯಕರ್ತರೂ ವಿದ್ವಾಂಸರೂ ಪತ್ರಿಕಾ ವರದಿಗಾರರೂ ಪತ್ರಕರ್ತರೂ ರಾಜಕೀಯ ನಿಪುಣರೂ ಬೇಗ ಗಮನಹರಿಸುವ ಅಗತ್ಯವಿದೆ ಎನ್ನಿಸುತ್ತಿದೆ.

ಗ್ರಂಥಸ್ಥ ಭಾಷೆ - ಆಡುನುಡಿ

ಕನ್ನಡದ ಗ್ರಂಥಗಳ ಭಾಷೆಗೂ ಜನರ ಆಡುನುಡಿಗೂ ಅನೇಕ ವ್ಯತ್ಯಾಸಗಳಿವೆ. ಈ ವ್ಯತ್ಯಾಸವು ಓದುಗರಿಗೆ ಆಗಲಿ ಮಾತನಾಡುವವರಿಗೆ ಆಗಲಿ ತಿಳಿಯದೆ ಇರುವಂಥ ವ್ಯತ್ಯಾಸವಲ್ಲ. ಉಚ್ಚಾರಣೆಯಲ್ಲಿ ಒತ್ತು ಇರುವುದು ಅವಧಾರಣೆಗೆ ಅಥವಾ ಕಾಕುವಿಗೆ. ಹೀಗೆ ಲೋಕಾಭಿರಾಮವಾಗಿ ಮಾತನಾಡುವ ಶೈಲಿಯನ್ನು ಬೇರೆ ಭಾಷೆಯೆಂದು ಕರೆಯಲಾಗುವುದಿಲ್ಲ. ಅದು ಗ್ರಂಥಸ್ಥ ಭಾಷೆಯನ್ನು ಕೆಡಿಸುವ ಪ್ರಯತ್ನವಲ್ಲ. ಆಡುನುಡಿಯ ಸೊಗಸು ಅದು, ಒಂದು ಬನಿ, ಒಂದು ಹದ, ಅಂದ, ಚಂದ. ಪ್ರಾಂತೀಯವಾಗಿ ಇಂಥ ಆಡುನುಡಿಗೆ ಒಂದೊಂದು ಕಡೆ ಒಂದೊಂದು ಸೊಗಸು ಪರಂಪರೆಯಿಂದ ಬೆಳೆದು ಬಂದಿದೆ. ಕರ್ನಾಟಕದ ಏಕೀಕರಣವಾದ ಮೇಲೆ ನಿಧಾನವಾಗಿ ಆದರೂ ನಿರ್ಧಾರವಾಗಿ, ಎಲ್ಲ ಕಡೆಯ ಆಡುಮಾತು ಪರಸ್ಪರವಾಗಿ ಅರ್ಥವಾಗಲು ಮೊದಲಾಗಿದೆ. ಆಡುಮಾತಿನ ಸೊಗಸು ಅದಕ್ಕೆ ಇರಲೇಬೇಕು. ಅದನ್ನು ತಿದ್ದಿ ವ್ಯಾಕರಣಬದ್ಧವಾಗಿಸುವುದು ಸರಿಯಲ್ಲ. ಹಾಗೆಯೇ ಗ್ರಂಥಸ್ಥ ಭಾಷಯನ್ನು ಆಡುಮಾತಿನ ರೀತಿಯಲ್ಲಿ ದಾಖಲಿಸುವುದು ಕೇವಲ ಪ್ರಯೋಗವಾಗುತ್ತದೆ. ಅಷ್ಟೆ! ಆದರೆ ಯಶಸ್ವಿಯಾಗುವುದಿಲ್ಲ. ಕೈಲಾಸಂ ಅವರ ಪ್ರಯೋಗ ಅವರ ನಾಟಕಗಳಿಗೆ ಸೀಮಿತವಾಗಿ ನಿಲ್ಲಲಿಲ್ಲವೆ? ಇಂಥ ವ್ಯತ್ಯಾಸ ಎಲ್ಲ ಭಾಷೆಗಳಿಗೂ ಇದೆ. ಭಾಷಾ ಶಾಸ್ತ್ರದಲ್ಲಿ ಇದನ್ನು DIGLOSSIA ಎಂಬ ಹೆಸರಿನಿಂದ ಗುರುತಿಸುತ್ತಾರೆ, ಇಂಗ್ಲಿಷಿನಲ್ಲಿ.

ಆಕಾಶವಾಣಿ, ದೂರದರ್ಶನ ಮತ್ತು ಕನ್ನಡ

ಕನ್ನಡದ ಆಡುಮಾತಿನಲ್ಲಿ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ, ವಾರ್ತಾಪತ್ರಿಕೆಗಳಲ್ಲಿ ಆಗುತ್ತಿರುವ ತಪ್ಪುಗಳು ನಮ್ಮ ಭಾಷೆಗೆ ಗೌರವ ತರುವುದಿಲ್ಲ. ಇವುಗಳನ್ನು ಕೇಳುಗರ, ಓದುಗರ ಮತ್ತು ನೋಡುಗರ ಗಮನಕ್ಕೆ ತರಬೇಕಾದ ಅಗತ್ಯವಿದೆ.

ಇಂಗ್ಲೆಂಡಿನ B.B.C. ಯಲ್ಲಿ ಪ್ರೊ|| ಡ್ಯಾಗ್ ಕ್ಯಾಂಬೇನ್ ಅವರು ೧೯೮೦ರಿಂದ ಪ್ರಸಾರ ಮಾಡುತ್ತಿರುವ Professor Grammar ಎಂಬ ಕಾರ್ಯಕ್ರಮ ಇಂಗ್ಲೆಂಡಿನಲ್ಲಿಯೂ ಇಂಗ್ಲಿಷ್ ಪ್ರಚಾರವಿರುವ ಇತರ ದೇಶಗಳಲ್ಲಿಯೂ ಕೇಳುಗರ ಅಚ್ಚುಮೆಚ್ಚಿನ ಕಾರ್ಯಕ್ರಮವಾಗಿದೆ. ವ್ಯಾಕರಣದ ಬೋಧನೆ ತಲೆಬೇನೆ ತರುವ ಸಾಧನೆ ಎಂದು ಪ್ರಾಸಬದ್ಧವಾಗಿ ಹಾಸ್ಯ ಮಾಡುವವರು ಹೆಚ್ಚು. ಆದರೆ ವ್ಯಾಕರಣವನ್ನು ಕಾವ್ಯಪಾಠದಂತೆ ರಮ್ಯವೂ ಆಕರ್ಷಕವೂ ಆಗಿಸಬಲ್ಲ ಅನೇಕ ವಿದ್ವಾಂಸ ಅಧ್ಯಾಪಕರಿದ್ದಾರೆ ನಮ್ಮ ನಾಡಿನಲ್ಲಿ. ನಮ್ಮ ಆಕಾಶವಾಣಿಯಲ್ಲಿಯೂ, ದೂರದರ್ಶನದಲ್ಲಿಯೂ Professor Grammar ಕಾರ್ಯಕ್ರಮದಂಥ ಕಾರ್ಯಕ್ರಮವನ್ನು ಏರ್ಪಡಿಸುವುದು ತುಂಬ ಫಲಕಾರಿ. ಶಬ್ದ ಶುದ್ಧಿಯನ್ನೂ ಉಚ್ಚಾರಣೆಯ ಸ್ಪಷ್ಟತೆಯನ್ನೂ ರಕ್ಷಿಸುವುದಕ್ಕೆ ಈ ಸಮುದಾಯ ಮಾಧ್ಯಮಗಳು ಪ್ರಯತ್ನಪಡಬೇಕು. ಅಲ್ಲದೆ ವಾಕ್ಯರಚನೆಯ ರೀತಿಗಳು, ನುಡಿಗಟ್ಟುಗಳ ಪ್ರಯೋಗ ಕೌಶಲ, ಅರ್ಥಾಭಿವ್ಯಕ್ತಿ, ಗುಣವಾಚಕಗಳ ಪ್ರಯೋಗ; ಕರ್ತೃ ಕರ್ಮ ಕ್ರಿಯೆಗಳ ಸಂಬಂಧವನ್ನು ಬೆಳೆಸುವ ಕ್ರಮ, ಶೈಲಿಯಲ್ಲಿ ಸದಾ ಹೊಸತನವನ್ನು ಬಿಂಬಿಸುವ ಸಾಮರ್ಥ್ಯ ಇವೆಲ್ಲವನ್ನೂ ಈ ಮಾಧ್ಯಮಗಳು ಪ್ರಚಾರಕ್ಕೆ ಅಳವಡಿಸಬೇಕು. ಬೆಳಗಿನಿಂದ ಸಂಜೆಯವರೆಗೆ ಸಿನೆಮಾ ಧಾರಾವಾಹಿಗಳನ್ನು ಹಾಕಿಬಿಟ್ಟು ತಾವು ಕುಳಿತು ನೋಡುತ್ತಿದ್ದರೆ ವೃತ್ತಿಗೆ ಮರ್ಯಾದೆ ತರುವ ಕೆಲಸವಾಗುವುದಿಲ್ಲ. ಆದರೆ ಇದನ್ನು ಆಯಾ ಬಾಧ್ಯರಿಗೆ ಹೇಳುವರಾರು?

ಕನ್ನಡ ಭಾಷೆ ಮತ್ತು ಶಿಕ್ಷಣ

ಶಿಕ್ಷಣ ಕ್ಷೇತ್ರದ ಮತ್ತು ಕನ್ನಡವನ್ನು ಬೋಧಿಸುವ ಅಧ್ಯಾಪಕರ ದೃಷ್ಟಿಯಿಂದ ಹೇಳಬೇಕಾದ ಕೆಲವು ವಿಷಯಗಳಿವೆ. ಇದಕ್ಕೆ ಮುಖ್ಯ ಕಾರಣ ಕನ್ನಡದ ಅಧ್ಯಾಪಕರು ನನಗೆ ಆಗಿಂದಾಗ ಕಳುಹಿಸುವ ಪ್ರಶ್ನೆಗಳು ಮತ್ತು ನನ್ನಲ್ಲಿಗೆ ಬಂದು ಮಾಡುವ ಚರ್ಚೆಗಳು. ಹೀಗೆ ಬರುವ ಪ್ರಶ್ನೆಗಳಲ್ಲಿ ಮಹಾಪ್ರಾಣಗಳ ಉಚ್ಚಾರಣೆಗೆ, ಕಾಗುಣಿತಕ್ಕೆ, ಪರೀಕ್ಷೆಯ ಪ್ರಶ್ನೆಗಳಿಗೆ ಕೊಡಬೇಕಾದ ಉತ್ತರಗಳಿಗೆ ಸಂಬಂಧಿಸಿದುವೇ ಹೆಚ್ಚು. ಇತರ ವಿಷಯಗಳನ್ನು ಕುರಿತು ಪ್ರಶ್ನೆಗಳು ಇಲ್ಲವೆಂದಲ್ಲ. ಆದರೆ ಅವು ಕಡಿಮೆ.

ಮೊದಲು ಮಹಾಪ್ರಾಣಗಳ ಉಚ್ಚಾರಣೆಯನ್ನು ತೆಗೆದುಕೊಳ್ಳೋಣ. ಈಗ ಮುಂದಿನ ಪುಟಗಳಲ್ಲಿ ಮುದ್ರಣವಾಗಿರುವ ಚಿತ್ರಪಟದ ವಿವರಣೆಯನ್ನು ಚೆನ್ನಾಗಿ ನೋಡಿ ಅರ್ಥ ಮಾಡಿಕೊಳ್ಳಬೇಕು. ಬಳಿಕ ಇರುವ ವಿವರಣೆಯನ್ನು ಓದಿಕೊಂಡು ಅದರಂತೆ ಒಂದೊಂದು ಅಕ್ಷರವನ್ನೂ ಉಚ್ಚಾರಮಾಡಿ ಅದು ಪಟದ ವಿವರಣೆಗೆ ಸರಿಯಾಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಂಡ ಬಳಿಕ ಈ ಚಿತ್ರಗಳ ಮೂಲಕವೇ ಪಾಠ ಮಾಡಬೇಕು.

ಧ್ವನ್ಯಂಗಗಳು

ನಾವು ಮಾತನಾಡುವಾಗ ನಮ್ಮ ಧ್ವನಿಯು ಹುಟ್ಟುವುದು ಹೇಗೆ ಎಂಬುದನ್ನು ನಾವು ತಿಳಿದಿರಬೇಕು. ಇದನ್ನು ಕುರಿತು ನಮ್ಮ ವೈಯಾಕರಣರು ಏನು ಹೇಳಿದ್ದಾರೆ ಎಂಬುದನ್ನು

ಮೊದಲು ತಿಳಿದುಕೊಳ್ಳೋಣ. ಕನ್ನಡದ ವ್ಯಾಕರಣಕಾರರಲ್ಲಿ ಪ್ರಮುಖನಾದ ಕೇಶಿರಾಜನು (ಕ್ರಿ.ಶ. ೧೩ ನೆಯ ಶತಮಾನ) ಈ ಬಗ್ಗೆ ಒಂದು ಸೂತ್ರವನ್ನು ರಚಿಸಿದ್ದಾನೆ.

ಅನುಕೂಲ ಪವನನಿಂ ಜೀ
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ
ಗಿನವೋಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ

ಮಾತನಾಡಬೇಕೆಂಬ ವ್ಯಕ್ತಿಯ ಅಪೇಕ್ಷೆಯಂತೆ ಅನುಕೂಲವಾದ ಗಾಳಿಯ ಸಹಾಯದಿಂದ ನಾಭಿಮೂಲದಲ್ಲಿ ಕಹಳೆಯ ಆಕಾರದಲ್ಲಿ ಶಬ್ದವೆಂಬ ದ್ರವ್ಯವು ಹುಟ್ಟುತ್ತದೆ. ಅದರ ಬಣ್ಣ ಬಿಳಿ. ಆ ದ್ರವ್ಯದ ಕಾರ್ಯವೇ ಶಬ್ದ (ಜೈನರು ಶಬ್ದಕ್ಕೆ ದ್ರವ್ಯತ್ವವನ್ನೂ ಧವಳವರ್ಣವನ್ನು ಆರೋಪಿಸುತ್ತಾರೆ). ಇದರ ಜೊತೆಗೆ ಕೇಶಿರಾಜನು ಮತ್ತೂ ಒಂದು ಸೂತ್ರವನ್ನು ಸೇರಿಸಿದ್ದಾನೆ.

ತನು ವಾದ್ಯಂ ನಾಲಗೆ ವಾ
ದನದಂಡಂ ಕರ್ತೃವಾತ್ಮನವನ ಮನೋವೃ
ತ್ತಿನಿಮಿತ್ತಮಾಗಿ ಶಬ್ದಂ
ಜನಿಯಿಸುಗುಂ ಧವಳವರ್ಣಮಕ್ಷರರೂಪಂ

ದೇಹವೇ ವಾದ್ಯ. ನಾಲಗೆ ಬಾಜನೆ ಮಾಡುವ ಅಂದರೆ ವಾದ್ಯವನ್ನು ನುಡಿಸುವ ಕುಡುಹು (ದಂಡ), ಬಾಜಿಸುವವನು ಆತ್ಮ. ಅವನ ಮನಸ್ಸಿನ ಅಪೇಕ್ಷೆಯಂತೆ ಶಬ್ದವು ಬಿಳಿಯ ಬಣ್ಣದಿಂದ ಅಕ್ಷರದ ರೂಪದಲ್ಲಿ ಉತ್ಪತ್ತಿಯಾಗುತ್ತದೆ.

ಇದು ಆರುನೂರು ವರ್ಷಗಳ ಹಿಂದಿನ ಮಾತು. ಈ ನಾಲ್ಕಾರು ಶತಮಾನಗಳಲ್ಲಿ ಶರೀರಶಾಸ್ತ್ರದ ವಿಜ್ಞಾನಿಗಳು ಬಹುವಾಗಿ ಸಂಶೋಧನೆಗಳನ್ನು ನಡೆಸಿ ಈ ಬಗ್ಗೆ ಖಚಿತವಾದ ವಿವರಗಳನ್ನು ನಿರೂಪಿಸಿದ್ದಾರೆ. ಸಂಗೀತ, ನಾಟಕಾಭಿನಯ, ಭಾಷಣ ಮುಂತಾದ ಎಲ್ಲ ಕ್ರಿಯೆಗಳಿಗೂ ಬೇರೆ ಬೇರೆ ಸಿದ್ಧತೆಗಳು ಬೇಕಾದರೂ ಮೂಲಭೂತವಾಗಿ ಧ್ವನಿನಿರ್ಮಾಣ ಎಂಬುದರ ಕ್ರಿಯೆ ಒಂದೇ. ಧ್ವನಿ ನಿರ್ಮಾಣದಲ್ಲಿ ಕೆಲವು ಅಂಗಗಳು ಸಂಬಂಧ ಹೊಂದಿರುವುದನ್ನು ಅರಿತರೆ ಆಯಾ ಕ್ಷೇತ್ರದ ಸಾಧನೆಯಲ್ಲಿ ತುಂಬ ಸಹಾಯ ಒದಗುತ್ತದೆ.

ಶ್ವಾಸಕೋಶವೂ ವಪೆಯೂ ಶ್ವಾಸ ನಿಯಂತ್ರಣದಲ್ಲಿ ಸಹಾಯ ಮಾಡವ ಅಂಗಗಳು. ಉಸಿರಿನಿಂದ ಧ್ವನಿಯು ಉತ್ಪತ್ತಿಯಾಗುತ್ತದೆ. ತುಂಬು ಉಸಿರಿನ ಉಚ್ಛ್ವಾಸ ನಿಶ್ವಾಸಗಳಿಂದ ಉತ್ತಮವಾದ ಧ್ವನಿ ನಿರ್ಮಾಣವು ಸಾಧ್ಯ. ಇದನ್ನು ನಾವು ನಮ್ಮ ಹತೋಟಿಯಲ್ಲಿ ಇಟ್ಟುಕೊಂಡಿರಬೇಕು.

ಇಲ್ಲಿರುವ ಎರಡು ಚಿತ್ರಗಳ ಸಹಾಯದಿಂದ ಧ್ವನಿ ನಿರ್ಮಾಣದ ಮತ್ತು ಅಕ್ಷರಗಳು ಉತ್ಪತ್ತಿಯಾಗುವ ಸ್ಥಾನಗಳ ಪರಿಚಯವನ್ನು ನಾವು ಮಾಡಿಕೊಳ್ಳಬಹುದು. ಮೊದಲು ಆಯಾ ಅಂಗಗಳನ್ನು ಸಂಖ್ಯೆಯ ಸಹಾಯದಿಂದ ಗುರುತಿಸಿಕೊಳ್ಳಿ.

ವಪೆಯ ತಳಹದಿಯ ಮೇಲೆ ಗಾಳಿಯ ಸ್ತಂಭವು (column) ಸ್ಥಾಪಿತವಾಗಿರುತ್ತದೆ. ಆ ಗಾಳಿಯು ನಮ್ಮ ಧ್ವನ್ಯಂಗಗಳ ಬಳಿಗೆ ಬರಬೇಕಾದರ ಈ ವಪೆಯು ಮೇಲಕ್ಕೆ ಚಲಿಸಬೇಕು.

ನಾವು ಉಸಿರನ್ನು ಒಳಕ್ಕೆ ಎಳೆದುಕೊಂಡಾಗ ನಮ್ಮ ಹೊಟ್ಟೆಯ ಪಕ್ಕೆಗಳು ದೊಡ್ಡದಾಗುತ್ತವೆ. ಗುಮ್ಮಟಾಕಾರದ ವಪೆಯು ಸಮತಳವಾಗುತ್ತದೆ. ಅಂದರೆ ಸಪಾಟಾಗುತ್ತದೆ. ನಾವು ಉಸಿರು ಬಿಟ್ಟಾಗ ವಪೆಯು ಹಿಂದಿನ ಆಕಾರಕ್ಕೆ ಬರುತ್ತದೆ. ಅಂದರೆ ಸಡಿಲಗೊಂಡ ವಪೆಯು ಮೇಲೆದ್ದು ಕೋಶದ ಉಸಿರನ್ನು ಹೊರಕ್ಕೆ ನೂಕುತ್ತದೆ. ಹೀಗೆ ಹೊರಕ್ಕೆ ತಳ್ಳಿದ ಗಾಳಿಯೇ ಧ್ವನಿಯ ನಿರ್ಮಾಣಕ್ಕೆ ಕಾರಣ.

ಗಾಳಿಯು ಮೇಲಕ್ಕೆ ಹೊರಟು ಧ್ವನಿ ತಂತುಗಳನ್ನು ವಿರಳಗೊಳಸಿ ಅವುಗಳ ನಡುವೆ ಮೇಲಕ್ಕೆ ನುಗ್ಗುತ್ತದೆ. ಗಾಳಿಯ ಚಲನೆ ಮತ್ತು ತಂತುಗಳ ಸ್ಥಿತಿಸ್ಥಾಪಕತ್ವ (Elasticity) ಇವುಗಳಿಂದ ಧ್ವನಿ ತಂತುಗಳು ಕಂಪಿಸುತ್ತವೆ. ಈ ಕಂಪನವೇ ಶಬ್ದ ನಿರ್ಮಾಣ. ಗಾಳಿಯಿಂದ ತುಂಬಿದ ಬಲೂನಿನ ಬಾಯಿಯನ್ನು ತೆರೆದಾಗ ಧ್ವನಿ ಹೇಗೆ ಉಂಟಾಗುತ್ತದೆ ಎಂಬುದನ್ನು ಗಮನಿಸಿ. ಹಾಗೆಯೇ ಮಾತಿನ ಧ್ವನಿಯೂ ಉಂಟಾಗುತ್ತದೆ. ಈಗ ಆ ಗಾಳಿಯು ಮುಂದುವರಿದು ಗಂಟಲು, ಬಾಯಿ, ಮೂಗುಗಳ ಮೂಲಕ ಹೊರಹೊಮ್ಮಿ ಮಾತನಾಡುವವನ ಸುತ್ತ ಗಾಳಿಯ ಒತ್ತಡದ ವ್ಯತ್ಯಾಸವನ್ನುಂಟು ಮಾಡುತ್ತದೆ. ಈ ವ್ಯತ್ಯಾಸವನ್ನೇ ಧ್ವನಿತರಂಗಗಳು ಎನ್ನುತ್ತಾರೆ. ಅವು ಕೇಳುವವರ ಕಿವಿಗೆ ತಗುಲಿ ಧ್ವನಿಯು ಅನುಭವಕ್ಕೆ ಬರುತ್ತದೆ.

ಧ್ವನ್ಯಂಗಗಳು ಎಂದರೆ ಧ್ವನಿಯನ್ನು ನಿರ್ಮಾಣ ಮಾಡುವ ಅಂಗಗಳು ಎಂದು ಅರ್ಥ. ಬಾಯಿ ಒಂದು ಕುಹರ. ಅದರ ಒಳಭಾಗದಲ್ಲಿರುವ ಚಲಿಸುವ ಅಂಗಗಳು ಆಕ್ರಮಿಸುವ ಸ್ಥಳಗಳನ್ನು ಅನುಸರಿಸಿ ಬಾಯಿಯ ಆಕಾರವು ಬದಲಾಗುತ್ತದೆ. ಈ ವ್ಯತ್ಯಾಸವು ಉಚ್ಚಾರವಾಗುವ ಶಬ್ದದ ಕಾಕು (Tone) ವನ್ನು ಬದಲು ಮಾಡಬಹುದು. ಅವೇ ನಿರ್ದಿಷ್ಟವಾದ ಧ್ವನಿಯನ್ನೂ ಉಂಟು ಮಾಡಬಹುದು (Produce or articulate). ಈ ಅಂಗಗಳು ಹೀಗಿವೆ. ೧. ನಂಗಿಲು (uvula), ೨. ಮೃದುತಾಲು (soft palate), ೩. ಕಠಿನತಾಲು (hard palate), ೪. ಹಲ್ಲುಗಳು (teeth), ೫. ನಾಲಿಗೆ (tongue), ೬. ತುಟಿಗಳು (lips), ೭. ಮೂಗು (nose). ಇವಲ್ಲದೆ ೮. ನಾಸಾಕುಹರ (nassal passage) ಮತ್ತು ೯. ಬಟವೆಗಳು (Sinuses) ಶ್ವಾಸನಿಗ್ರಹಕ್ಕೂ, ಧ್ವನಿಯ ಅನುಕರಣಕ್ಕೂ ಸಹಾಯಕವಾಗುತ್ತವೆ.

ಧ್ವನಿಯನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಬಹು ಸಂಕೀರ್ಣವಾದ ಕಾರ್ಯ. ಕೆಳಗಿನ ಮಾಂಸಖಂಡಗಳ ಬಿಗಿಯು ಗಂಟಲಿನ ಮೇಲೆ ಪ್ರಭಾವವನ್ನು ಬೀರಬಹುದು. ಕೆಳಗಿನ ದವಡೆಯ ಚಲನೆ, ಮುಖದ ಕೆಲವು ಮಾಂಸ ಖಂಡಗಳು ಕೂಡ ಬಾಯಿಯ ಆಕಾರವನ್ನು ಬದಲಿಸಬಹುದು. ಇದರಿಂದ, ಹೊರಡುವ ಧ್ವನಿಯು ಬದಲಾಗುತ್ತದೆ. ದೇಹದ ಮೇಲ್ಭಾಗವು ಕಂಪಿಸುತ್ತದೆ. ತಲೆಯ ಮತ್ತು ಎದೆಯ ಮೂಳೆಗಳು ಧ್ವನಿವರ್ಧಕಗಳಾಗಬಹುದು.

ಧ್ವನಿಯನ್ನು ಪ್ರಭಾವಯುತವಾಗಿ ಉಪಯೋಗಿಸುವ ಎಲ್ಲರೂ ಈ ಅಂಗಗಳನ್ನು ಸ್ವಾಧೀನದಲ್ಲಿಟ್ಟು ಕೊಳ್ಳಲು ಸಮರ್ಥರಾಗಿರುತ್ತಾರೆ. ಅವರಿಂದ ಭಾಷೆಯ ನಿರ್ದಿಷ್ಟವಾದ ಸ್ಪಷ್ಟವಾದ ಪ್ರಯೋಗ ಸಾಧ್ಯ. ಭಾವಾವೇಗ, ವಿಶೇಷಾರ್ಥಗಳುಳ್ಳ ಶಬ್ದಗಳ ಪ್ರಯೋಗ ಇವುಗಳನ್ನು ಗಮನಿಸಿದರೆ ಈ ಸಾಮರ್ಥ್ಯ ಎಷ್ಟು ಪ್ರೌಢವಾದುದು ಎಂದು ತಿಳಿದು ಬರುತ್ತದೆ.

ಕನ್ನಡದ ಅಕ್ಷರಗಳನ್ನು ಉಚ್ಚಾರಣೆ ಮಾಡುವಾಗ ನಡೆಯುವ ಕ್ರಿಯೆಯನ್ನು ಸ್ವಲ್ಪ ವಿವರವಾಗಿ ತಿಳಿಯೋಣ.

ಈ ಚಿತ್ರಗಳ ವಿವರವನ್ನು ಸಂಖ್ಯೆಗಳ ಸಹಾಯದಿಂದ ಗುರುತಿಸಿಕೊಳ್ಳಿ.

ಕನ್ನಡ ಅಕ್ಷರಗಳು ಇರುವ ಪಟ್ಟಿಯನ್ನು ಪರಿಶೀಲಿಸಿ.


ಕನ್ನಡದ ಅಕ್ಷರಗಳನ್ನು ಅವು ಹುಟ್ಟುವ ಸ್ಥಾನಗಳನ್ನು ಗಮನಿಸಿ ಐದು ವಿಧವಾಗಿ ವಿಂಗಡಿಸಿದ್ದಾರೆ.

೧. ಕಂಠ್ಯ, ೨. ತಾಲವ್ಯ ೩. ಮೂರ್ಧನ್ಯ ೪. ದಂತ್ಯ ೫. ಓಷ್ಠ್ಯ


ಕಂಠ ಎಂದರೆ ಗಂಟಲು. ಅದರಲ್ಲಿ ಉಚ್ಚಾರಗೊಳ್ಳುವ ಅಕ್ಷರಗಳು ಕಂಠ್ಯಗಳು. ತಾಲು ಎಂದರೆ ಅಂಗಳು. ಅಲ್ಲಿ ಉಚ್ಚಾರವಾಗುವ ಅಕ್ಷರಗಳು ತಾಲವ್ಯಗಳು. ಮೂರ್ಧ ಎಂದರೆ ನೆತ್ತಿ. ಅಂಗಳಿನ ಮಧ್ಯಭಾಗ. ಅಲ್ಲಿ ಹುಟ್ಟುವ ಅಕ್ಷರಗಳು ಮೂರ್ಧನ್ಯಗಳು. ದಂತ ಎಂದರೆ ಹಲ್ಲು. ಹಲ್ಲಿನ ಬಳಿ ಉಚ್ಚಾರವಾಗುವ ಅಕ್ಷರಗಳು ದಂತ್ಯಗಳು. ಓಷ್ಠ ಎಂದರೆ ತುಟಿ. ತುಟಿಗಳಲ್ಲಿ ಉಚ್ಚಾರವಾಗುವ ಅಕ್ಷರಗಳು ಓಷ್ಠ್ಯಗಳು. ಈಗ ಅಕ್ಷರಗಳ ಪಟ್ಟಿಯನ್ನು ನೋಡಿ.

ಕನ್ನಡ ಅಕ್ಷರಗಳು ಹುಟ್ಟುವ ಸ್ಥಾನಗಳು

	ಸ್ವರಗಳು	ವ್ಯಂಜನಗಳು							
		ಕರ್ಕಶ ವ್ಯಂಜನಗಳು			ಮೃದು ವ್ಯಂಜನಗಳು				
ಉತ್ಪತ್ತಿ ಸ್ಥಾನಗಳಲ್ಲಿ ಅಕ್ಷರದ ಹೆಸರು		ಊಷ್ಮ ವರ್ಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಂತಸ್ಥ ವರ್ಣ	ಅನುನಾಸಿಕ	ಅವರ್ಗೀಯ ವ್ಯಂಜನ ಮಹಾಪ್ರಾಣ
ಕಂಠ್ಯ	ಅ ಆ ಎ ಏ ಐ ಓ ಔ ಅ: (ವಿಸರ್ಗ)		ಕ	ಖ	ಗ	ಘ	ಙ ಅಂ (ಅನುಸ್ವಾರ)		ಹ
ತಾಲವ್ಯ	ಇ ಈ ಎ ಏ ಐ	ಶ	ಚ	ಛ	ಜ	ಝ	ಞ	ಯ	
ಮೂರ್ಧನ್ಯ	ಋ	ಷ	ಟ	ಠ	ಡ	ಢ	ಣ	ರ ಳ	
ದಂತ್ಯ	-	ಸ	ತ	ಥ	ದ	ಧ	ನ	ಲ ವ	
ಓಷ್ಠ್ಯ	ಉ ಊ ಒ ಓ ಔ		ಪ	ಫ	ಬ	ಭ	ಮ	ವ	



1. ನಾಸಾಕುಹರ, 2. ತುಟಿ, 3. ದಂತ, 4. ದಂತ ಮೂಲ, ಹಲ್ಲಿನ ಏಣು, 5. ಕಠಿನ ತಾಲು, 6. ಮೃದು ತಾಲು, 7. ನಂಗಿಲು, 8. ಜಿಹ್ವಾಗ್ರ, 9. ಜಿಹ್ವಾ ಫಲಕ, 10. ನಾಲಗೆಯ ಹಿಂಭಾಗ, 11. ಜಿಹ್ವಾ ಮೂಲ, 12. ಉಪಜಿಹ್ವೆ, 13. ಅನ್ನನಾಳ, 14. ಶ್ವಾಸನಾಳ, 15. ಧ್ವನಿತಂತುಗಳು, 16. ಧ್ವನಿ ಪೆಟ್ಟಿಗೆ



1. ವಪೆ, 2. ಶ್ವಾಸಕೋಶ, 3. ಶ್ವಾಸನಾಳ
4. ಅನ್ನನಾಳ, 5. ಧ್ವನಿ ತಂತುಗಳು

ಕನ್ನಡದ ಯಾವ ಯಾವ ಅಕ್ಷರಗಳು ಎಲ್ಲೆಲ್ಲಿ ಹುಟ್ಟುತ್ತವೆ ಎಂಬುದನ್ನು ಬೇರೆ ಬೇರೆಯಾಗಿ ಅಲ್ಲಿ ತೋರಿಸಿದೆ. ಇದು ನಿಧಾನವಾಗಿ ಪ್ರತಿಯೊಂದು ಅಕ್ಷರವನ್ನೂ ಉಚ್ಚರಿಸಿ ಅದು ಹುಟ್ಟುವ ಸ್ಥಳವನ್ನು ಗುರುತಿಸುವ ಒಂದು ಪ್ರಯೋಗ. ಬೇಗ ಆಗುವ ಕೆಲಸವಲ್ಲ. ಕೆಲವು ಅಕ್ಷರಗಳು ಎರಡು ಭಾಗಗಳಲ್ಲಿ ಕಂಡುಬರುತ್ತವೆ. ಅವುಗಳ ಉಚ್ಚಾರಣೆಗೆ ಎರಡು ಅಂಗಗಳ ಸಹಾಯವೂ ಬೇಕು ಎಂದು ಅರ್ಥ. ನಮ್ಮ ಭಾಷೆಯಲ್ಲಿಲ್ಲದ ಎಷ್ಟೋ ಧ್ವನಿಗಳು ಪ್ರಪಂಚದ ಇತರ ಭಾಷೆಗಳಲ್ಲಿ ಇವೆ. ಇವೆಲ್ಲವನ್ನೂ ಗುರುತಿಸುವುದಕ್ಕೆ ಭಾಷಾ ಶಾಸ್ತ್ರಜ್ಞರು The International Phonetic Alphabet ಎಂಬ ವರ್ಣಮಾಲೆಯನ್ನು ಸಿದ್ಧಪಡಿಸಿದ್ದಾರೆ. ಅದನ್ನು ಕ್ರಮೇಣ ತಿಳಿದುಕೊಳ್ಳಬಹುದು.

ಕೆಲವು ಪರಿಭಾಷಿಕ ಶಬ್ದಗಳ ವಿವರಣೆ :

೧. **ಊಷ್ಮವರ್ಣ : ಊಷ್ಮ** ಎಂದರೆ ಉಷ್ಣ, ಕಾವು ಎಂದರ್ಥ. ಶ, ಷ, ಸ - ಈ ಅಕ್ಷರಗಳ ಉಚ್ಚಾರದಲ್ಲಿ ಸ್ವಲ್ಪ ಉಷ್ಣ ನಿರ್ಮಾಣವಿದೆ ಎಂಬರ್ಥದ ಶಬ್ದ ಇದು. ಇಂಗ್ಲಿಷಿನಲ್ಲಿ ಇಂಥ ವ್ಯಂಜನಗಳನ್ನು Sibilants ಎಂದು ಕರೆಯುತ್ತಾರೆ. ಇವುಗಳಿಗೆ Whistling consonants ಎಂದೂ ಹೆಸರಿದೆ. ಅಂಗಳು ಮತ್ತು ನಾಲಗೆಗಳ ನಡುವೆ ನುಗ್ಗುವ ಗಾಳಿ ಶಿಲ್ಪಿಯ ಹಾಗೆ ಶಬ್ದವನ್ನುಂಟುಮಾಡಬಹುದು - ತುಂಬ ಗಟ್ಟಿಯಾಗಿ ಉಚ್ಚರಿಸಿದರೆ.

೨. **ಅಂತಸ್ಥವರ್ಣಗಳು** : ಯ, ರ, ಲ, ವ ಅಕ್ಷರಗಳಿಗೆ ಈ ಹೆಸರಿದೆ. ಇಂಗ್ಲಿಷಿನಲ್ಲಿ ಇವನ್ನು Semi vowels ಎಂದು ಕರೆಯುತ್ತಾರೆ. ಇವು ವ್ಯಂಜನವೂ ಸ್ವರವೂ ಆಗಬಹುದಾದ ಗುಣಗಳನ್ನು ಹೊಂದಿವೆ ಎಂದರ್ಥ.

೩. **ಧ್ವನಿಪೆಟ್ಟಿಗೆ, Voice Box :** ಶ್ವಾಸನಾಳದ ಮೇಲು ತುದಿ ಇದು. **Adam's apple** ಎನ್ನುವ ಸಾಮಾನ್ಯ ಹೆಸರು ಇದಕ್ಕೆ ಇದೆ. ಕನ್ನಡದ **ಮೆಟ್ರೆ**. ಇದರಲ್ಲಿ ಧ್ವನಿತಂತುಗಳು ಅಥವಾ ಘೋಷ ತಂತುಗಳು ಇವೆ. Larynx ಎನ್ನುವುದು ಪಾರಿಭಾಷಿಕ ಹೆಸರು. ಇದು ಧ್ವನಿ ತಂತುಗಳನ್ನು ರಕ್ಷಿಸುತ್ತದೆ. ಹೀಗೆ ಇತರ ವಿವರಗಳನ್ನು ತಿಳಿದು ಬರಹದಲ್ಲಿ ಇಟ್ಟುಕೊಂಡಿರಬೇಕು.

ಮಹಾಪ್ರಾಣಗಳ ಉಚ್ಚಾರಣೆಯನ್ನು ಮಾಧ್ಯಮಿಕ ಶಾಲೆಯಿಂದಲೇ ಕಲಿಸಬೇಕು. ಮಹಾಪ್ರಾಣಗಳು ಎಂದರ ಖ ಘ ಛ ಝ ಠ ಢ ಥ ಧ ಫ ಭ ಮತ್ತು ಹ. ಈ ಹನ್ನೊಂದು ಅಕ್ಷರಗಳ ಜೊತೆಗೆ ಶ ಷ ಸ ಎಂಬ ಅಕ್ಷರಗಳನ್ನು ಉಚ್ಚಾರ ಮಾಡುವುದನ್ನು ವಿಶೇಷ ಗಮನವಿಟ್ಟು ಹೇಳಿಕೊಡಬೇಕು.

ಅಕ್ಷರಗಳ ಉತ್ಪತ್ತಿ ಸ್ಥಾನಗಳನ್ನು ಚಿತ್ರಗಳ ಮೂಲಕ ವಿವರಿಸಿದ ಅಧ್ಯಾಪಕರು ಈ ಅಕ್ಷರಗಳನ್ನು ತಾವೇ ಅನೇಕ ಸಲ ಉಚ್ಚರಿಸಬೇಕು. ಬಳಿಕ ಮಹಾಪ್ರಾಣಗಳು ಬರುವ, ಅಲ್ಪಪ್ರಾಣಗಳು ಬರುವ ಎರಡು ಅಥವಾ ಮೂರು ಅಕ್ಷರಗಳ ಶಬ್ದವನ್ನು ಆರಿಸಿ ಒಂದೊಂದು ಜೊತೆಯನ್ನು ಒಂದಾದ ಮೇಲೆ ಮತ್ತೊಂದರಂತೆ ಒಟ್ಟು ತರಗತಿಯೇ ಉಚ್ಚರಿಸುವಂತೆ DRILL ಮಾಡಿಸಬೇಕು. ಇದು DRILL ಪಾಠ. DRILL ಎಂದರೆ ಒಂದೇ ಕಾರ್ಯವನ್ನು ಅನೇಕ

ಸಲ ಮಾಡಿಸಿ ತರಬೇತಿ ಕೊಡುವುದು ಎಂದು ಅರ್ಥ. ಭರತ-ಬಡವ, ಅಖಾಡ-ವಿಕಾರ, ಧನ-ದನ, ಗಾಢ-ಬಾಡ ಇತ್ಯಾದಿ ಆರಿಸಬೇಕು.

'ಭರತ' ಎಂಬುದನ್ನು ತರಗತಿಯ ಅರ್ಧಭಾಗ ಬಲಗಡೆಯವರು ಉಚ್ಚರಿಸಿದಮೇಲೆ **'ಬಡವ'** ಶಬ್ದವನ್ನು ಎಡಗಡೆಯ ಅರ್ಧಭಾಗ ಉಚ್ಚರಿಸಬೇಕು. ಅಧ್ಯಾಪಕ ಅವರೊಡನೆ ಉಚ್ಚರಿಸಬೇಕು. ಹೀಗೆ ಮಾಡಿದರೆ, ಪ್ರತಿ ದಿನ ೧೫ ನಿಮಿಷ ಈ DRILL ಮಾಡಿಸಿ ನೋಡಿ ೧೫ ದಿನಗಳ ಬಳಿಕ ವಿದ್ಯಾರ್ಥಿಗಳು ಹೇಗೆ ಈ ವಿಚಾರದಲ್ಲಿ ಪರಿಣತರಾಗುತ್ತಾರೆ, ಎಂಬುದನ್ನು.

ಪರೀಕ್ಷೆ ಎಂಬುದು ಒಂದು ಅತ್ಯಗತ್ಯವಾದ ಪೀಡೆ. ಏಕೆಂದರೆ ಅದಕ್ಕಿಂತ ಬೇರೆ ಯಾವ ಮೌಲ್ಯ ಮಾಪನವನ್ನೂ ಮಾನವನ ಬುದ್ಧಿ ಇನ್ನೂ ಕಂಡುಹಿಡಿದಿಲ್ಲ. ಅಂಥ ಸಾಧನವನ್ನು ಅನ್ವೇಷಣೆ ಮಾಡುವ ತನಕ ಪರೀಕ್ಷೆಗಳನ್ನು ನಡೆಸುತ್ತಲೇ ಇರಬೇಕು. ಆದರೆ ಅದನ್ನು ನಡೆಸುವ ಮಾರ್ಗದಲ್ಲಿ ಕೆಲವು ಸುಧಾರಣೆಗಳನ್ನು ಮಾಡಲು ಇನ್ನೂ ಸಾಧ್ಯವಿದೆ. ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳುವ ವಿಧಾನದಲ್ಲಿ ಹೆಚ್ಚು ಎಚ್ಚರಿಕೆ ವಹಿಸುವುದು ಸಾಧ್ಯವಿದೆ. ಅದಕ್ಕೆ ಅಧ್ಯಾಪಕವರ್ಗವೂ ಶಿಕ್ಷಣ ಇಲಾಖೆಯೂ ಶ್ರಮವಹಿಸಬೇಕು.

ಪರೀಕ್ಷೆಗಳಲ್ಲಿ ಶಬ್ದಗಳಿಗೆ ಅರ್ಥವನ್ನು ಬರೆಯಿರಿ ಎಂಬ ಒಂದು ಪ್ರಶ್ನೆ ಇದ್ದೇ ಇರುತ್ತದೆ. ಇಂಥ ಪ್ರಶ್ನೆಗಳಲ್ಲಿ ಬರುವ ಶಬ್ದಗಳಿಗೆ ಪಾಠಗಳಲ್ಲಿ ಬರುವ ಅರ್ಥವನ್ನೇ ಬರೆಯಬೇಕೋ ಬೇರೆಯ ಅರ್ಥ ಇದ್ದರೆ ಅದನ್ನೂ ಬರೆಯಬಹುದೋ ಎಂಬುದು ಒಂದು ಸಂದೇಹವಿದೆ. ಒಂದು ಶಬ್ದಕ್ಕೆ ಅನೇಕ ಅರ್ಥಗಳಿರುತ್ತವೆ. ಯಾವ ವಾಕ್ಯದಲ್ಲಿ ಒಂದು ಶಬ್ದ ಪ್ರಯೋಗವಾಗಿದೆಯೋ ಅಲ್ಲಿ ಸಂದರ್ಭಕ್ಕೆ ತಕ್ಕ ಅರ್ಥ ಆ ಪದಕ್ಕೆ ಬರುತ್ತದೆ. ಆದರೆ ಪರೀಕ್ಷೆಯಲ್ಲಿ ವಾಕ್ಯವನ್ನು ಕೊಡುವುದಿಲ್ಲ. ಆ ಪದ ಬರುವ ಸಂದರ್ಭವನ್ನು ತಿಳಿಸಿರುವುದಿಲ್ಲ. ಹೀಗಿರುವುದರಿಂದ ವಿದ್ಯಾರ್ಥಿಗಳು ಆ ಶಬ್ದಕ್ಕೆ ಬರುವ ಯಾವ ಅರ್ಥವನ್ನು ಬರೆದರೂ ಅಂಕಗಳನ್ನು ಕೊಡಬೇಕು. ಏಕೆಂದರೆ ವಿದ್ಯಾರ್ಥಿಗೆ ಆ ಪದದ ಬಗ್ಗೆ ತಿಳಿವಳಿಕೆ ಇದೆ ಎಂದು ಸ್ಪಷ್ಟವಾಗಿದೆ. ಈ ವಿಚಾರದಲ್ಲಿ ಮತ್ತೊಂದು ಸಂದಿಗ್ಧವಿದೆ. ಪಠ್ಯಪುಸ್ತಕಗಳ ಮುದ್ರಣದಲ್ಲಿ ಬಹು ಅವ್ಯವಸ್ಥೆ ಇದೆ, ಕರ್ನಾಟಕದಲ್ಲಿ. ಪಠ್ಯಪುಸ್ತಕಗಳಲ್ಲಿಯೂ ಪಾಠಗಳಿಗೆ ಬರೆದ ಟಿಪ್ಪಣಿಗಳಲ್ಲಿಯೂ ಅನೇಕ ತಪ್ಪುಗಳು ಇರುತ್ತವೆ. ಈ ತಪ್ಪುಗಳನ್ನು ಕಂಡುಹಿಡಿದ ಅಧ್ಯಾಪಕರು ಕೂಡ ತರಗತಿಗಳಲ್ಲಿ ಆ ತಪ್ಪುಗಳನ್ನು ತಿದ್ದುವುದಿಲ್ಲ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಿ ಅನ್ಯಾಯವಾಗುತ್ತದೋ ಎಂಬ ಹೆದರಿಕೆ. ಹೀಗಿರುವುದರಿಂದ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವವರು ಉಪಾಧ್ಯಾಯರೇ ಆಗಬೇಕು. ಆಯಾ ತರಗತಿಗಳಿಗೆ ಪಾಠ ಹೇಳುವವರೇ ಆಗಬೇಕು. ಈ ಬಗ್ಗೆ ಖಚಿತ ಕಾನೂನು ಇರಬೇಕು. ಇಂಥ ಸಮಸ್ಯೆಗಳನ್ನು ಅಧ್ಯಾಪಕರ ಸಮ್ಮೇಳನದಲ್ಲಿ ಚರ್ಚಿಸಿ ಪರಿಹಾರವನ್ನು ಕಂಡು ಹಿಡಿದು ಎಲ್ಲಾ ಶಾಲೆಗಳಿಗೂ ಅಲ್ಲಿರುವ ಅಧ್ಯಾಪಕರಿಗೂ ತಿಳಿಯಪಡಿಸಬೇಕು.

ಹೀಗೆಯೆ ಕನ್ನಡ ಶಬ್ದಗಳ ಕಾಗುಣಿತದ ಬಗ್ಗೆ ಕೆಲವು ಪ್ರಶ್ನೆಗಳು ತಲೆಯೆತ್ತುತ್ತಿವೆ. ಉದಾಹರಣೆಗೆ : ಪುತ್ಥಳಿ-ಪಿತ್ಥ ಎಂಬ ಎರಡು ಶಬ್ದಗಳನ್ನು ತೆಗೆದುಕೊಳ್ಳೋಣ. ಇವು ಎರಡೂ ಸಂಸ್ಕೃತ ಶಬ್ದಗಳು. ಸಂಸ್ಕೃತದಲ್ಲಿ ಆ ಶಬ್ದಗಳ ಸ್ವರೂಪ ಪುತ್ತಲಿ, ಪಿತ್ತ. ಆದರೆ ಕನ್ನಡದಲ್ಲಿ

ಪ್ರಸಿದ್ಧ ಕಾವ್ಯಗಳ ಹಸ್ತ ಪ್ರತಿಗಳಲ್ಲಿ ಕೂಡ ಈ ಎರಡು ಶಬ್ದಗಳು ಪುತ್ಥಳಿ, ಪಿತ್ಥ ಎಂದು ದಾಖಲಾಗಿವೆ. ಇದನ್ನು ಅರಿತೋ ಏನೋ ಅನೇಕರು ಈ ಕಾಗುಣಿತವನ್ನೇ ತಮ್ಮ ಬರಹದಲ್ಲಿಯೂ ರೂಢಿಗೆ ತಂದಿದ್ದಾರೆ. ಕೆಲವರು ವಿದ್ವಾಂಸರು ಕೂಡ ತಮ್ಮ ಬರಹದಲ್ಲಿ ಇವುಗಳನ್ನು ಉಪಯೋಗಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಈ ಕಾಗುಣಿತವನ್ನು ನಾನು ಒಪ್ಪುತ್ತೇನೆ. ಸಂಸ್ಕೃತದಲ್ಲಿಯೇ ಕೆಲವು ಶಬ್ದಗಳಿಗೆ ಎರಡು ಸ್ವರೂಪಗಳಿವೆ-ಕೋಷ-ಕೋಶ ಇತ್ಯಾದಿ. ಇಂಗ್ಲಿಷಿನ ನಿಘಂಟುಗಳಲ್ಲಿ ಕೂಡ Waggon ಎಂದೂ Wagon ಎಂದೂ ಎರಡು ಕಾಗುಣಿತವನ್ನು ದಾಖಲಿಸುತ್ತಾರೆ. ಭಾಷೆಯಲ್ಲಿ ಚಾರಿತ್ರಿಕವಾಗಿ ಆಧಾರವಿದ್ದ ಕೆಲವು ತಪ್ಪುಗಳು ಪ್ರಯೋಗ ಬಲದಿಂದ ಸರಿಯೆನಿಸಿಕೊಳ್ಳುತ್ತವೆ. ಪುತ್ತಲಿ, ಪುತ್ಥಲಿ, ಪುತ್ತಳಿ, ಎಂಬುದನ್ನು ಪಿತ್ತ, ಪಿತ್ಥ ಎಂಬುದನ್ನೂ ನಾನು ಒಪ್ಪುತ್ತೇನೆ.

ದಕ್ಷಿಣ ಕನ್ನಡದಲ್ಲಿಯೂ ಉತ್ತರ ಕನ್ನಡದ ಜಿಲ್ಲೆಯ ಕೆಲವು ಭಾಗಗಳಲ್ಲಿಯೂ ಕೆಲವರು ರುಪಾಯಿ, ಗಂಗಾಬಾಯಿ, ಪೈ ಎಂಬುದನ್ನು ರುಪ್ಯಾ, ಗಂಗಾಬ್ಯಾ, ಪ್ಯಾ ಎಂದು ಬರೆಯುದವನ್ನು ನೋಡಿದ್ದೇನೆ. ಇದು ಪ್ರಚಾರದಲ್ಲಿದ್ದರೂ ಇದು ಸರಿಯಲ್ಲ. ತಪ್ಪು ಎಂದೇ ಹೇಳಬೇಕು. ಏಕೆಂದರೆ ಐತ್ವದಲ್ಲಿ ಏತ್ವ ಸೇರಿರಲೇಬೇಕಾದುದರಿಂದ ಆಕಾರಕ್ಕೆ ಐಕಾರವನ್ನು ಸೇರಿಸುವುದು ಸಾಧ್ಯವಾಗದು. ಆದ್ದರಿಂದ ರುಪಾಯಿ, ಗಂಗಾಬಾಯಿ, ಹತ್ತುಪೈ ಎಂಬುದೇ ಸರಿಯಾದ ಕಾಗುಣಿತ.

ಕಾರ್ಯ, ಸೂರ್ಯ, ಭಾರ್ಯ ಎಂಬುದು ಸಂಸ್ಕೃತದಲ್ಲಿ ಬರೆಯುತ್ತಿರುವ ರೀತಿ. ಕನ್ನಡದಲ್ಲಿ ಕಾರ್‍ಯ, ಸೂರ್‍ಯ, ಭಾರ್‍ಯ ಎಂದು ಬರೆಯುವವರೂ ಇದ್ದಾರೆ. ಕನ್ನಡದಲ್ಲಿ ಎರಡು ಬಗೆಯ ಕಾಗುಣಿತಗಳನ್ನೂ ಒಪ್ಪಬೇಕು. ಆದರೆ ಕಾರ್ ಯ, ಸೂರ್ ಯ ಮುಂತಾದುವು ತಪ್ಪು. ಏಕೆಂದರೆ ವ್ಯಂಜನಗಳನ್ನು ಸೇರಿಸುವುದು ಸುಲಭ ಮತ್ತು ಸಕಾರಣ.

ಅರ್ಕಾರದ ಒತ್ತು - ಇದರು ಗುರುತು ೯ ಎಂಬುದು ಒಂದು ಸಮಸ್ಯೆಯನ್ನು ಒಡ್ಡಿದೆ. ಒಂದು ಅಕ್ಷರದ ಕಾಗುಣಿತವನ್ನು ಪೂರ್ತಿ ಬರೆದ ಬಳಿಕ ೯ ಗುರುತನ್ನು ಹಾಕಬೇಕು. ನಿರ್ದೇಶಕ, ನಿರ್ದೇಶನ ಸೂರ್ಯೋದಯ ಎಂಬುದು ಸರಿ. **ನಿರ್ದೇಶನ** ಸರಿಯಾದರೆ **ಸೂರ್ಯೋದಯ** ಎಂಬುದೂ ಸರಿಯಾಗಬೇಕು ಅಲ್ಲವೆ. ಕಾರ್ಯಾಲಯವನ್ನು ಕಾರ್ಯಾಲಯ ಎಂದು ಬರೆಯಬಹುದೇ ನೋಡಿ. ನಿರ್ದೇಶನ, ನಿರ್ದ್ದೇಶನ ಎರಡೂ ಸರಿ. ಸೂರ್‌ಯೋದಯ ತಪ್ಪು. ಹೀಗೆಯೇ ಮಕಾರದ ಕಾಗುಣಿತದಲ್ಲಿ ಮೀ ಸರಿ ಮಿಾ ತಪ್ಪು. ಏಕೆಂದರೆ ೀ ಎಂಬುದು ಈ ಕಾರದ ಗುರುತು. ಾ ಇದು ಆ ಕಾರದ ಗುರುತು. ಮುದ್ರಣದ ಮೊಳೆಗಳನ್ನು ತಯಾರುಮಾಡುವವರು ತಪ್ಪು ಆಕಾರವನ್ನು ನೀಡಿ ತೊಂದರೆಯನ್ನು ತಂದಿದ್ದಾರೆ. ಈಗಿನ ಕಂಪ್ಯೂಟರ್ ಮುದ್ರಣದಲ್ಲಿ ಇವು ನುಸುಳದಂತೆ ಎಚ್ಚರಿಕೆ ವಹಿಸಬೇಕು.

ಲಕ್ಷ್ಮಣರೇಖೆ, ಜನ್ಮಭೂಮಿ

ಕನ್ನಡದಲ್ಲಿ ಉಪಯೋಗವಾಗುತ್ತಿರುವ ಈ ಎರಡು ಶಬ್ದಗಳ ಬಗ್ಗೆ ಸ್ವಲ್ಪ ವಿವರವಾಗಿ ಬರೆಯುವ ಅಗತ್ಯವಿದೆ. ಇದು ಲಕ್ಷ್ಮಣರೇಖೆ, ಇದನ್ನು ದಾಟಬಾರದು-ಎಂಬಂಥ ಪ್ರಯೋಗಗಳೂ ಮಾತಿನಲ್ಲಿ ಕೇಳಿಬರುತ್ತವೆ. ಇದರ ಬಗ್ಗೆ ಮಾತನಾಡುತ್ತ "ವಾಲ್ಮೀಕಿಯ ರಾಮಾಯಣದಲ್ಲಿ

ಅರಣ್ಯಕಾಂಡದಲ್ಲಿ ಮಾರೀಚನ ವಧೆಯ ಪ್ರಸಂಗದಲ್ಲಿ ಈ ಮಾತು ಬರುತ್ತದೆ. ಮಾರೀಚನು ಸಾಯುವಾಗ, 'ಹಾ! ಸೀತೇ, ಹಾ ! ಲಕ್ಷ್ಮಣಾ' ಎಂದು ಕಿರಿಚಿಕೊಂಡು ಸತ್ತ. ಆಗ ಲಕ್ಷ್ಮಣನನ್ನು ರಾಮನ ಸಹಾಯಕ್ಕೆ ಕಳಿಸಲು ಸೀತೆ ಪ್ರಯತ್ನಪಟ್ಟಾಗ, ಲಕ್ಷ್ಮಣನು ಹಾಗೆ ಹೊರಡುವುದಕ್ಕೆ ಮುಂಚೆ ಒಂದು ಗೆರೆಯನ್ನು ತನ್ನ ಬಾಣದಿಂದ ಎಳೆದು ಇದರಿಂದ ಆಚೆಗೆ ಬರಬೇಡ ಎಂದು ಹೇಳಿ ಹೋದನು"- ಎಂದು ಹೇಳುವುದು ವಾಡಿಕೆ. ಆದರೆ ವಾಲ್ಮೀಕಿಯ ರಾಮಾಯಣದಲ್ಲಿ ಈ ಲಕ್ಷ್ಮಣ ರೇಖೆಯ ಮಾತೇ ಬರುವುದಿಲ್ಲ. ವಾಲ್ಮೀಕಿಯ ತಲೆಗೆ ಇದನ್ನು ಅಂಟಿಸಬಾರದು.

ಹಾಗಾದರೆ ಇದು ಎಲ್ಲಿಂದ ಬಂತು. ಉತ್ತರ ಭಾರತದಲ್ಲಿ ತುಂಬ ಜನಪ್ರಿಯವಾಗಿರುವ ತುಲಸೀದಾಸ ಕೃತ **ರಾಮಚರಿತ ಮಾನಸದ** ಕಡೆ ಹೋಗಿ ಪರಿಶೀಲಿಸೋಣ. ಅರಣ್ಯಕಾಂಡದಲ್ಲಿ ರಾಮಚರಿತ ಮಾನಸದಲ್ಲಿಯೂ ಎಲ್ಲಿಯೂ ಲಕ್ಷ್ಮಣರೇಖೆಯ ದಾಖಲೆ ಇಲ್ಲ. ಆದರೆ ಸೀತೆಯನ್ನು ಒಬ್ಬಳನ್ನೇ ಬಿಟ್ಟು ರಾಮನನ್ನು ಹುಡಕಲು ಲಕ್ಷ್ಮಣನು ಹೊರಡಬೇಕಾದಾಗ ಅವನ ವನದೇವತೆಗಳಿಗೂ ದಿಗ್ದೇವತೆಗಳಿಗೂ ಸೀತೆಯ ರಕ್ಷಣೆಯ ಭಾರವನ್ನು ವಹಿಸಿದ ಕತೆ ಎರಡೂ ರಾಮಾಯಣಗಳಲ್ಲಿಯೂ ಇದೆ. ತುಲಸೀದಾಸರಲ್ಲಿ **ವನದಿಸಿ ದೇವ ಸಂಪಿ ಸಬರಾಹೂ** ಎಂಬ ಸಾಲು ಇದೆ. ಆದರೆ ಲಂಕಾಕಾಂಡದಲ್ಲಿ ಮಂಡೋದರಿಯು ರಾವಣನಿಗೆ ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ **ರಾಮಾನುಜ ಲಘು ರೇಖ ಖಚಾಈ** ಎಂಬ ಸಾಲು ಇದೆ.

ಆದುದರಿಂದ ಲಕ್ಷ್ಮಣನು ರೇಖೆಯನ್ನು ಎಳೆದಿದ್ದಾನೆ ಎಂಬುದನ್ನು ಊಹಿಸಿಕೊಳ್ಳ ಬೇಕಾಗುತ್ತದೆ. ಅದನ್ನು ದಾಟಬಾರದೆಂದು ಹೇಳಿದ್ದನೆಂದೂ ಊಹಿಸಿಕೊಳ್ಳಬೇಕು. ಅಲ್ಲಿಯೂ ಕೂಡ ರಾಮಾನುಜ ರೇಖೆ ಎಂದಿದೆಯೇ ಹೊರತು ಲಕ್ಷ್ಮಣರೇಖೆ ಎಂದಿಲ್ಲ. ತುಲಸೀದಾಸರ ರಾಮಚರಿತಮಾನಸದ ವ್ಯಾಖ್ಯಾನಕಾರರು ತಮ್ಮ ಮಾತಿನ ವೈಭವದಲ್ಲಿ ಲಕ್ಷ್ಮಣರೇಖೆಯನ್ನು ನಿರ್ಮಾಣ ಮಾಡಿ ಆ ಪದಪುಂಜಕ್ಕೆ ಜನಪ್ರಿಯತೆಯನ್ನು ಉಂಟುಮಾಡಿದ್ದಾರೆ. ಹೀಗೆ ಕವಿ ಪ್ರಯೋಗವಲ್ಲದ ನುಡಿಗಟ್ಟಿಗೆ ಪ್ರಭಾವ ಬೆಳೆದುಬಂದ ನುಡಿಗಟ್ಟುಗಳನ್ನು ಕುರಿತು ಒಂದು ಸಂಶೋಧನೆಯನ್ನೇ ಮಾಡಿ ಡಾಕ್ಟೋರೇಟ್ ಪದವಿಯನ್ನು ಪಡೆಯಬಹುದು. ಇಂಥದೇ ಮತ್ತೊಂದು ಶಬ್ದ ಜನ್ಮಭೂಮಿ ಮತ್ತು ಅದು ಜನನಿಗೆ ಸಮಾನವಾಗಿರುವ ಭಾವನೆ. ಕನ್ನಡದಲ್ಲಿ ಬಹು ಪ್ರಚಾರದಲ್ಲಿರುವ ಒಂದು ಸಂಸ್ಕೃತ ಶ್ಲೋಕವಿದೆ.

ಅಪಿಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ॥

"ಚಿನ್ನದಲ್ಲಿ ನಿರ್ಮಿತವಾಗಿರುವ ಲಂಕಾಪಟ್ಟಣವು ಕೂಡ ನನಗೆ ರುಚಿಸುವುದಿಲ್ಲ. ತಾಯಿ ಮತ್ತು ತಾಯಿನಾಡು ಇವೆರಡೂ ಸ್ವರ್ಗಕ್ಕಿಂತ ಹೆಚ್ಚಾದವು" ಎಂಬರ್ಥದ ಈ ಶ್ಲೋಕವು ವಾಲ್ಮೀಕಿ ರಾಮಾಯಣದಲ್ಲಿ ಬರುತ್ತದೆಂದು ಲಕ್ಷ್ಮಣನು ವಿಭೀಷಣನಿಗೆ ಪಟ್ಟಾಭಿಷೇಕ ಮಾಡುವುದಕ್ಕೆ ಮುಂಚೆ ರಾಮನಿಗೆ "ಅಯೋಧ್ಯೆಗೆ ಹೋಗುವುದು ಬೇಡ ಇಲ್ಲೇ ರಾಜ್ಯವನ್ನಾಳಿಕೊಂಡು ಇದ್ದುಬಿಡೋಣ" ಎಂದು ಹೇಳಿದನೆಂದೂ ಅದಕ್ಕೆ ರಾಮನು ನೀಡಿದ ಉತ್ತರ ಈ ಶ್ಲೋಕದಲ್ಲಿದೆ ಎಂದೂ ಕೆಲವರು ಉಪನ್ಯಾಸ ಮಾಡಿದ್ದನ್ನು ನಾನೇ ಕೇಳಿದ್ದೇನೆ.

ಆದರೆ ಈ ಶ್ಲೋಕವೂ ಕೂಡ ವಾಲ್ಮೀಕಿ ರಾಮಾಯಣದಲ್ಲಿಲ್ಲ. ಸಂಸ್ಕೃತವಾದದ್ದರಿಂದ ರಾಮಚರಿತಮಾನಸದ್ದೂ ಅಲ್ಲ. ಲಕ್ಷ್ಮಣನು ಲಂಕೆಯಲ್ಲಿಯೇ ಇರುವ ಅಪೇಕ್ಷೆಯನ್ನು ಹೊಂದಿದ್ದನು ಎಂದು ನಂಬಬೇಕಾದರೆ ಅವನು ಊರ್ಮಿಳೆಯನ್ನು ಸಂಪೂರ್ಣವಾಗಿ ಮರೆತೇ ಇದ್ದನು ಎಂದು ತಿಳಿಯಬೇಕು. ಎರಡನೆಯದಾಗಿ ಜನ್ಮಭೂಮಿಯ ಜನನಿಯ ಹಿರಿಮೆಯನ್ನು ರಾಮನು ಹೇಳಿದನೆಂದು ನಂಬಿದರೆ ಲಕ್ಷ್ಮಣನಿಗೆ ಜನ್ಮಭೂಮಿಯ ಪ್ರೇಮವಿರಲಿಲ್ಲವೆಂಬುದನ್ನೂ ನಂಬಬೇಕು.

ಅಲ್ಲದೆ ಜನ್ಮಭೂಮಿ ಎಂದು ಹೇಳುವ ಅಭಿಪ್ರಾಯವು ರಾಷ್ಟ್ರೀಯ ಭಾವನೆಯನ್ನು ತಿಳಿಸುತ್ತದೆ. ವಿಶ್ವದಲ್ಲಿ ಈ ರಾಷ್ಟ್ರಪ್ರೇಮ Nationalism, Patriotism ಎಂಬ ಭಾವನೆಗಳು ರೂಪು ತಳೆದದ್ದೆ ಚರಿತ್ರೆಯಲ್ಲಿ ಇತ್ತೀಚೆಗೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಇಕ್ಕಟ್ಟಿಗೆ ಸಿಕ್ಕುವ ಶ್ಲೋಕವನ್ನು ವಾಲ್ಮೀಕಿಯ ತಲೆಗೆ ಕಟ್ಟುವುದು ಅನ್ಯಾಯ.

ಆದುದರಿಂದ ಈ ಶ್ಲೋಕವನ್ನು ರಚಿಸಿದವನು ಬಹು ಸಮರ್ಥನಾದ ದೇಶಭಕ್ತನಾದ ಕನ್ನಡದ ಕವಿ. ಅವನು ಸ್ವಾತಂತ್ರ್ಯಸಮರದ ಪ್ರಾರಂಭ ಕಾಲದಲ್ಲಿ ಪ್ರಚಾರಕ್ಕೆಂದೇ ರಚಿಸಿದ ಶ್ಲೋಕವಿದೆಂದು ನಾವು ತೀರ್ಮಾನಿಸಬೇಕು. ಯಕ್ಷಗಾನದ ಜನ್ಮಭೂಮಿಯಾದ ದಕ್ಷಿಣ ಕನ್ನಡದ ಕವಿವರ್ಯನೇ ಆಗಿದ್ದರೆ ನನಗಂತೂ ತುಂಬ ಸಂತೋಷ.

ಕನ್ನಡ ಭಾಷೆ ಇಂದು

೨೧ನೆಯ ಶತಮಾನದ ಹೊಸ್ತಿಲಿನ ಮೇಲೆ ನಿಂತು ಮುಂದಿನ ಎರಡು ಮೂರು ದಶಕಗಳಲ್ಲಿ ಕನ್ನಡ ಭಾಷೆಯ ಸ್ವರೂಪ ಏನಾಗಬಹುದು ಎಂಬ ಕಲ್ಪನೆ ಮಾಡುವುದೂ ಸಾಧ್ಯವಿಲ್ಲ. ಇಂದಿನ ಸ್ಥಿತಿ ಒಲೆಯ ಮೇಲೆ ಅಡುಗೆ ಮಾಡಲು ಇಟ್ಟ ಸಾರು ಕುದಿಯುತ್ತಿರುವಂತೆ ಇದೆ. ಭಾಷಾಭಿವೃದ್ಧಿಯ ಸಮಯದಲ್ಲಿ ಅನೇಕ ವಿಚಿತ್ರಾಂಶಗಳು ಗಮನಕ್ಕೆ ಬರುತ್ತವೆ. ಭಾಷೆ ಬೆಳೆಯುತ್ತದೆ ಎಂದರೆ ಅದಕ್ಕೆ ಹೊಸತನ ಅಂಟಿಕೊಳ್ಳುತ್ತಿದೆ ಎಂದು ಅರ್ಥ. ಆದರೆ ಭಾಷೆ ಎಷ್ಟು ಹೊಸದಾದರೂ ಕೆಲವು ಹಳೆಯ ಅಂಶಗಳೂ ಗಟ್ಟಿಯಾಗಿ ಬೇರೂರಿಬಿಟ್ಟು ಬದುಕಿರುತ್ತವೆ. ಅವುಗಳನ್ನು ಅಲ್ಲಾಡಿಸುವುದಕ್ಕಾಗುವುದಿಲ್ಲ. ಉದಾಹರಣೆಗೆ, ನಮ್ಮ ಕನ್ನಡದ ವಾಕ್ಯದ ಕರ್ತೃ ಕರ್ಮ ಕ್ರಿಯಾಪದಗಳ ಸಂಬಂಧ. ಈ ಮಾತು ಶಬ್ದಗಳಿಗೂ ಅನ್ವಯಿಸುತ್ತದೆ. ಆಧುನಿಕ ಕನ್ನಡದಲ್ಲಿ ಎಲ್ಲ ಹಳೆಯ ಶಬ್ದಗಳೂ ಮರೆಯಾಗುವುದಿಲ್ಲ. ಓಜ, ಕೂಳು, ಅಡಕ, ನೆಗಳು, ನೇಸರ, ತಿಂಗಳು, ಬೆಳಗು, ನಸುಕು ಮುಂತಾದ ಶಬ್ದಗಳು ಮರೆಯಾಗುತ್ತಾ ಬಂದಿರಬಹುದು. ಆದರೆ ಓಡು, ಮಾಡು, ಹಾಡು, ಮುನಿ, ಕೋಡು, ನುಡಿ, ಮಡಗು, ತೊತ್ತು, ತುತ್ತು ಮುಂತಾದ ಪದಗಳು ಮಾತಿನಲ್ಲಿ ಸದಾ ಕಾಣಿಸಿಕೊಳ್ಳುತ್ತಾ ಇಲ್ಲವೆ?

ಹೊಸ ಶಬ್ದಗಳ ಸೃಷ್ಟಿ ಸಮಯದಲ್ಲಿ ಹಳೆಯ ಪದಗಳಿಗೆ ಹೊಸ ಅರ್ಥವು ಸೇರಿಕೊಳ್ಳಬಹುದು. ಪಾಶ್ಚಾತ್ಯರಾದರೆ ಗ್ರೀಕ್, ಲ್ಯಾಟಿನ್ ಭಾಷೆಗಳ ಮರೆಹೋಗುತ್ತಾರೆ. ನಾವು ಸಂಸ್ಕೃತವನ್ನು ಅದೇರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಆ ಕಡೆ ಇಂಗ್ಲಿಷ್‌ನ್ನೂ

ಬಿಟ್ಟು ಈ ಕಡೆ ಸಂಸ್ಕೃತವನ್ನೂ ಬಿಟ್ಟು ನಾವು ಎಡಬಿಡಂಗಿಗಳಾಗಬಾರದು. ಇವುಗಳ ಸಾಂಸ್ಕೃತಿಕ ಬಾಂಧವ್ಯವನ್ನು ಮುಂದುವರಿಸಬೇಕು. ಪದಗಳು ಸಂಸ್ಕೃತಿಯ ಕೋಶಗಳು. ಅವು ಹೇಗಿರಬೇಕೆಂಬುದನ್ನು ಒಂದು ಸುಂದರ ಕವನದಲ್ಲಿ ವರ್ಣಿಸಲಾಗಿದೆ :

Pretty Words

I love bright words, words up and singing early;
Words that are luminous in the dark, and sing;
Warm lazy words, white cattle under trees;
I love words opalescent, cool and pearly;
Like mid summer moths, and honeyed words like bees,
Gilded and sticky, with a little string.

Elinor Wylie

ಪ್ರಾಚೀನ ಕನ್ನಡ ಕವಿಗಳನ್ನು ಬಿಟ್ಟರೆ ಹೊಸಗನ್ನಡದಲ್ಲಿ ಹೊಸ ಶಬ್ದಗಳ ನಿರ್ಮಾಣಕ್ಕೆ ಹೆಸರಾದವರು ತಿರುಮಲೆ ತಾತಾಚಾರ್ಯ ಶರ್ಮರು. ವಿಶ್ವಕರ್ಣಾಟಕದ ಸಂಪಾದಕರಾಗಿ ಅವರು ಚಾಲ್ತಿಗೆ ತಂದ ಎಲ್ಲ ಹೊಸ ಶಬ್ದಗಳನ್ನು ಪಟ್ಟಿಮಾಡಿದರೆ ಅದೇ ಒಂದು ಸಣ್ಣ ನಿಘಂಟಾಗುತ್ತದೆ. ಶೀತಸಮರ, ತಟಸ್ಥದೇಶ, ಸುಗ್ರೀವಾಜ್ಞೆ, ಅಗ್ರಲೇಖನ ಮುಂತಾಗಿ ಹೊಸತನದ ಹೊಳೆಯುವ ಶಬ್ದರತ್ನಗಳನ್ನು ಸೃಷ್ಟಿಸಿದರು. ಇಂಗ್ಲಿಷಿನ Neck tie ಕಂಠಕೌಪೀನ ಎಂಬ ನಿಲ್ಲಲಾರದ ಶಬ್ದವನ್ನೂ ಹುಟ್ಟುಹಾಕಿದರು. ರಾಜಕೀಯದಲ್ಲಿ ಗಟ್ಟಿಗರಾದ ಮುಂದಾಳುಗಳು ಮಾತನಾಡುವಾಗ ಎಷ್ಟೋ ವೇಳೆ ಅವರಿಗೆ ಗೊತ್ತಿಲ್ಲದಂತೆಯೇ ಹೊಸ ಶಬ್ದಗಳು ಎಲ್ಲ ಭಾಷೆಗಳಲ್ಲಿಯೂ ಸೃಷ್ಟಿಗೊಂಡಿವೆ. ಒಬ್ಬ ಲೇಖಕ ಉಪಯೋಗಿಸಿದ Iron curtain ಆಗಲಿ, Ronald Regan ಪ್ರಯೋಗಿಸಿದ Evil empire ಆಗಲಿ ಶಾಶ್ವತವಾಗಿ ನಿಂತುಬಿಡುತ್ತವೆ-Russia ದೇಶದ ಪರ್ಯಾಯ ನಾಮಗಳಾಗಿ. ನೆಹರು ಸೃಷ್ಟಿಸಿದ ಪಂಚಶೀಲ, ಇಂದಿರಾ ಸೃಷ್ಟಿಸಿದ ಗರೀಬಿಹಟಾವೋ, ಕಾಂಗ್ರೆಸ್ಸಿಗರು ಈಚೆಗೆ ಸೃಷ್ಟಿಸಿದ hidden agenda (ಬಚ್ಚಿಟ್ಟ ಕಾರ್ಯಕ್ರಮ) ಉಳಿದುಬಿಡುತ್ತವೆ.

ಹೀಗೆ ಸೃಷ್ಟಿಯಾಗಿ ಇಂಗ್ಲೆಂಡಿನಲ್ಲೆಲ್ಲ ಪ್ರಸಿದ್ಧಿಪಡೆದ ಒಂದು ಶಬ್ದದ ಚರಿತ್ರೆಯನ್ನು ದಾಖಲು ಮಾಡಲು ನನಗೆ ಅಪೇಕ್ಷೆಯಾಗಿದೆ.

ಕಾಲ ೧೯೮೯. ಇಂಗ್ಲೆಂಡಿನ ಶಾಸನಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದ ನೀಲ್ ಕಿನ್ನಾಕ್ (Neil Kinnock) ಎಂಬಾತನು ಸರಕಾರದ ಆರ್ಥಿಕ ಯೋಜನೆಗಳ ಬಗ್ಗೆ BBCಯ 'World at one' ಎಂಬ ಕಾರ್ಯಕ್ರಮದ ಸಂದರ್ಶನದಲ್ಲಿ ಮಾತನಾಡುತ್ತ ಇದ್ದನು. ಸರಕಾರದ ವ್ಯವಹಾರದ ಬಗ್ಗೆ ಅವನಿಗೆ ಬಹಳ ಕೋಪ ಬಂದಿತ್ತು. ಒಂದು ಪ್ರಶ್ನೆಗೆ ಉತ್ತರ ಕೊಡುತ್ತ "I am not going to be bloody **kebbabed** talking about what the alternatives are." ಎಂದು ಉದ್ಗಾರ ಮಾಡಿದನು. ಈ ಸಂದರ್ಶನದಲ್ಲಿ Kebbabed ಎಂಬ ಶಬ್ದ ಇಂಗ್ಲೆಂಡಿನ

ನಿಘಂಟುಕಾರರ ವೃತ್ತದಲ್ಲಿ ಅದ್ಭುತವಾದ ಪ್ರತಿಕ್ರಿಯೆಯನ್ನುಂಟು ಮಾಡಿತು. Oxford University Dictionaryಯ ಹಿಂದಿನ ಸಂಪಾದಕನಾಗಿದ್ದ ಡಾ. ರಾಬರ್ಟ್ ಬರ್ಚ್‌ಫೀಲ್ಡ್ ಎಂಬಾತನು, "I would love to use it. It is perfectly ordinary practice to turn nouns into verbs" ಎಂದು ತೀರ್ಮಾನ ಕೊಟ್ಟನು. Kebab (ಕಬಾಬ್) ಎಂದರೆ ಒಂದು ಕಡ್ಡಿಯ ತುದಿಯಲ್ಲಿ ಸಿಕ್ಕಿಸಿ ಬೇಯಿಸಿದ ಮಾಂಸದ ಚೂರು. ಕಬಾಬ್ ಎಂಬುದು ಪಾರಸಿ ಭಾಷೆಯ ಶಬ್ದ. ಅರ್ಥ ಸುಟ್ಟ ಮಾಂಸ, ಈ ಪದವು ಹಿಂದೀ ಮುಂತಾದ ಭಾಷೆಗಳ ಮೂಲಕ ಇಂಗ್ಲಿಷಿಗೆ ಹೋಗಿ ಅಲ್ಲಿ ನಾಮಪದವಾಗಿ ಪ್ರಯೋಗವಾಗುತ್ತಿತ್ತು. ಅದೂ ಹೊಸ ಶತಮಾನದ ಆದಿಯಲ್ಲಿ. ಹೀಗೆ ಕೋಪದಲ್ಲಿ ಸೃಷ್ಟಿಯಾದ ಕ್ರಿಯಾಪದ ಈ kebbabed.

ಕನ್ನಡ ದೇಶದಲ್ಲಿ ಆಡಳಿತವನ್ನು ಕನ್ನಡದಲ್ಲಿ ನಡೆಸುವ ಉದ್ದೇಶದಿಂದ ಹೊಸ ಶಬ್ದಗಳನ್ನು ಸೃಷ್ಟಿ ಮಾಡಿದರು. ಆಗಲೇ ನಿರ್ಮಾಣವಾದ ವಿಚಿತ್ರಶಬ್ದಗಳು ಅಭಿಯಂತರ, ಆರಕ್ಷಕ, ಅಪರ ಕಾರ್ಯದರ್ಶಿ, ನಿಗಮ, ಆಯುಕ್ತ ಇತ್ಯಾದಿ. ಭಾಷಾ ಚರಿತ್ರೆಯನ್ನರಿಯದ ವಿದ್ವಾಂಸರು ಮಾಡಿದ ಕಾರ್ಯ ಇದು. ನೂರಾರು ವರ್ಷದಿಂದ ರೂಢಿಯಲ್ಲಿದ್ದ, ಸೂಕ್ತವಾಗಿದ್ದ, ಜನತೆಗೆಲ್ಲ ಸುಪರಿಚಿತವಾಗಿದ್ದ, ಪೊಲೀಸು, ಇಂಜಿನೀಯರು, ಕಾರ್ಯದರ್ಶಿ, ಸೆಕ್ರೆಟರಿ, ಕಮಿಷ್‌ನರುಗಳು ಗಾಳಿಯಲ್ಲಿ ತೇಲಿ ಹೋಗಲಿಲ್ಲ. ಈಗಲೂ ಅವೇ ಶಬ್ದಗಳು ಪ್ರಯೋಗದಲ್ಲಿವೆ.

ಪ್ರಪಂಚದಲ್ಲೆಲ್ಲ ನೂತನ ಸೃಷ್ಟಿಯಲ್ಲಿ ಶಬ್ದಗಳ ಮಹಾಜಾಲವೇ ಪ್ರಚಾರಕ್ಕೆ ಬರುತ್ತಿದೆ. ಪ್ರಪಂಚದ ಎಲ್ಲ ಭಾಷೆಗಳೂ ಹೊಸ ಶಬ್ದಗಳನ್ನು ನೇರವಾಗಿ ಆಮದು ಮಾಡುತ್ತಿವೆ. ಈಗಾಗಲೇ ಕನ್ನಡದಲ್ಲಿ ೫೦೦೦ ಎರವಲು ಶಬ್ದಗಳಿವೆ. ಕಂಪ್ಯೂಟರಿನ ಯುಗವಿದು. ವಿಶ್ವವ್ಯಾಪಿಯಾದ ವೈಜ್ಞಾನಿಕ ಸ್ಫೋಟ ನಡೆದಿದೆ. ಕನ್ನಡಕ್ಕೆ ಇವನ್ನು ಅನುವಾದ ಮಾಡಬೇಕೆ? ನೇರವಾಗಿ ಅವುಗಳನ್ನೇ ಉಪಯೋಗಿಸಬೇಕೆ? ಈಗ ಸರಿಯಾದ ಸಮಯ. ವ್ಯಾಪಕವಾದ ಚರ್ಚೆಯಾಗಿ ವಿದ್ವಾಂಸರು, ಜನಸಾಮಾನ್ಯರು, ಭಾಷಾಶಾಸ್ತ್ರ ವಿಶಾರದರು ಬೇಗ ತೀರ್ಪಿತ್ತು ಮಾರ್ಗದರ್ಶನ ಮಾಡಬೇಕು. ನಾನಂತೂ ಕನ್ನಡಕ್ಕೆ ಹೊಂದುವ ಯಾವ ಶಬ್ದವಾದರೂ ನೇರವಾಗಿ ಆಮದು ಮಾಡಲು ಸಿದ್ಧನಾಗಿರುವವನು. ಭಾಷೆಯ ಧ್ವನಿವ್ಯವಸ್ಥೆಗೆ ಹೊಂದದ ಕೆಲವನ್ನು ಅಲ್ಪಸ್ವಲ್ಪ ಬದಲಾವಣೆಯಿಂದ ತಂದುಕೊಂಡುಬಿಡಬೇಕು.

ಇದೇ ಸಮಯದಲ್ಲಿ ಕನ್ನಡಕ್ಕೆ ಹೊಸದೊಂದು ಆಧುನಿಕ ಕನ್ನಡದ ವ್ಯಾಕರಣವನ್ನು ನಿರ್ಮಾಣ ಮಾಡಬೇಕಾದ ಅಗತ್ಯವಿದೆ. ಹಳೆಯ ಕನ್ನಡದ, ನಡುಗನ್ನಡದ, ಹೊಸಗನ್ನಡದ ವ್ಯಾಕರಣಗಳ ನಿಯಮಗಳನ್ನೂ ಮುರಿದು ಭಾಷೆ ಬೆಳೆಯುತ್ತಿದೆ. ಈ ಒಂದೊಂದು ಭಾಗಕ್ಕೂ ಬೇಕಾದ ಸೂತ್ರಗಳನ್ನು ಆಧುನಿಕಗೊಳಿಸಬೇಕು. ರಾಷ್ಟ್ರದ ರಾಜ್ಯಾಂಗ ಸಂವಿಧಾನವನ್ನೇ ತಿದ್ದುಪಡಿಮಾಡುತ್ತಿರುವ ಈ ಸಮಯದಲ್ಲಿ ಎಲ್ಲ ವಿಶ್ವವಿದ್ಯಾನಿಲಯಗಳು ಹೊಸ ವ್ಯಾಕರಣದ ಬಗ್ಗೆ ವಿಚಾರಸಂಕಿರಣಗಳನ್ನು ಏರ್ಪಡಿಸಿ ಬಹಿರಂಗ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಈಗ ಬಳಕೆಗೆ ಬಂದಿರುವ ಈ ಶಬ್ದಗಳನ್ನು ಪರಿಶೀಲಿಸಿ ನೋಡೋಣ :

ದುರ್ಬಳಕೆ, ದುರ್ನಡತೆ, ನಿಶ್ಕರ್ತ, ನಿಶ್ಕರತ್ತು, ಕದ್ದಾಲಿಕೆ, ಮೋಸದಾಟ, ಸಿಂಹುಲಿ, ಮೋಟೆಲ್, ಸ್ವಪ್ಪನೆ, ಜೊತೆಗೆ Mixer = ಕಲಸುಗ, Grinder = ರುಬ್ಬುಗ, Juicer = ಹಿಂಡುಗ, E-mail = ಈ ಮೇಲು, Internet = ಅಂತರ್ಜಾಲ, ಡೆಕ್ಕರು = ಮಾಡಿಬಸ್ಸು.

ಕನ್ನಡದ ಶಬ್ದಗಳಿಗೆ ಹಿಂದೀ ಶಬ್ದಗಳಂತೆ ಅರ್ಧಾಕ್ಷರ ಅಂತ್ಯ ಏಕಿರಬೇಕು. ಅಂಥ ಎಲ್ಲ ಶಬ್ದಗಳನ್ನೂ ಸ್ವರಾಂತವಾಗಿ ಉಪಯೋಗಿಸಬೇಡವೆ? ಪುಷ್ಪಕ್ ಏಕೆ? ಪುಷ್ಪಕ ಎಂದರೆ ತಪ್ಪೆ? ನನ್ನ ಬಳಿ ಇಂಥ ಅನೇಕ ಪ್ರಶ್ನೆಗಳಿವೆ. ಇವನ್ನು ಕೆದಕುವ, ಜನರ ಮುಂದಿಡುವ ಮುಂದಿನ ಅವಕಾಶಕ್ಕೆ ಕಾಯುತ್ತಿದ್ದೇನೆ. ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇನೆ.

ಇಂಗ್ಲಿಷ್ ಭಾಷೆಯಲ್ಲಿ ಆಗಿರುವ ಬದಲಾವಣೆ

ಇದು ಕನ್ನಡದ ಸಾಮಾಜಿಕ ನಿಘಂಟು. ಆದುದರಿಂದ ಜನರು ಸಮಾಜದಲ್ಲಿ ಆಡುವ ಭಾಷೆಗಳಲ್ಲಿ ಆಗುವ ಬದಲಾವಣೆಗಳೇನು ? ಅರ್ಥವ್ಯತ್ಯಾಸಗಳೇನು ? ಇವುಗಳಿಗೆ ಕಾರಣವೇನು ? ಭಾಷೆ ಬೆಳೆಯುತ್ತಿದೆಯೇ? ಭಾಷೆಯನ್ನು ಉಪಯೋಗಿಸುವುದರಲ್ಲಿ ಜನರು ಎಚ್ಚರಿಕೆ ವಹಿಸುತ್ತಿದ್ದಾರೆಯೇ? ಅಡ್ಡಾದಿಡ್ಡಿ ಬೆಳೆಯಲು ಬಿಡುವುದು ಸರಿಯೇ? ಏನಾದರೂ ಮಾರ್ಗದರ್ಶನವನ್ನು ಮಾಡಬೇಕೆ? ಈ ಮುಂತಾಗಿ ಅನೇಕ ಸಮಸ್ಯೆಗಳಿವೆ, ಎಂಬುದನ್ನು ಎಲ್ಲರೂ ಅರಿತಿರಬೇಕು. ಈ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಏನೇನು ಬೆಳವಣಿಗೆಯಾಗಿದೆ ಎಂಬುದನ್ನು ಸ್ವಲ್ಪವಾದರೂ ಅರಿತಿದ್ದರೆ ಒಳ್ಳೆಯದು ಎಂಬ ದೃಷ್ಟಿಯಿಂದ ಮುಂದೆ ಕೆಲವು ವಿವರಗಳನ್ನು ಬಿಡಿಬಿಡಿಯಾಗಿ ತಿಳಿಸಲು ಪ್ರಯತ್ನಪಟ್ಟಿದ್ದೇನೆ. ಕನ್ನಡದಲ್ಲಿಯೂ ಈ ರೀತಿಯ ವ್ಯಾಸಂಗ ನಡೆಯಬೇಕು ಎಂಬುದು ದೃಷ್ಟಿ.

ಎರಡು ಬಗೆಯ ಇಂಗ್ಲಿಷ್

ಅಮೆರಿಕದ ಇಂಗ್ಲಿಷಿಗೂ ಇಂಗ್ಲೆಂಡಿನ ಇಂಗ್ಲಿಷಿಗೂ ಇರುವ ಶಬ್ದ ಪ್ರಯೋಗ ಭೇದವನ್ನು ತೋರಿಸಲು ಒಂದು ಪಟ್ಟಿಯನ್ನು ಹುಡುಕಿ ಇಟ್ಟಿದ್ದೇನೆ.

ಇಂಗ್ಲೆಂಡ್	ಅಮೆರಿಕ
biscuits	cookies
car	auto
chips	french fries
flat	apartment
dustbin	garbage can
holiday	vacation
ill	sick
lorry	truck
pavement	side walk
petrol	gas

tap	faucet
tin	can
trousers	pants
underground	subway
wardrobe	closet

ಬರ್ನಾರ್ಡ್‌ಷಾ ಹೇಳಿರುವ ಮಾತು ಸತ್ಯವಾಗಿದೆ : "Britain and America are one people divided by a common language." ಬ್ರಿಟನ್ ಮತ್ತು ಅಮೆರಿಕ ಎರಡೂ ಒಂದೇ ಜನಾಂಗ ; ಒಂದೇ ಭಾಷೆಯಿಂದ ಬೇರೆಯಾಗಿವೆ.

ಇಂಗ್ಲಿಷ್ ಭಾಷೆಯ ಮಡಿ, ಮೈಲಿಗೆ ಹಾಗೂ ಅಲಂಕಾರಿಕ ಪ್ರಯೋಗ

ಭಾಷೆಯನ್ನು ಸಾಮಾಜಿಕವಾಗಿ ಅಭ್ಯಾಸ ಮಾಡುವುದು ಈಗ ತುಂಬಾ ಅಗತ್ಯವಾಗಿದೆ. ಮಾನವರ ಭಾಷಾ ಪ್ರಯೋಗಗಳಲ್ಲಿ ಅವರ ಮಡಿ ಮೈಲಿಗೆಗಳ ಪ್ರದರ್ಶನ ಹೇಗೆ ವ್ಯಕ್ತವಾಗುತ್ತವೆ ಎಂಬುದರಿಂದ ಅವರು ಎಷ್ಟು ವಸ್ತುನಿಷ್ಠರಾಗಿದ್ದಾರೆ ಎಂಬುದು ಬೆಳಕಿಗೆ ಬರುತ್ತದೆ. ಡಾ. ರಾಬರ್ಟ್ ಬರ್ಚ್‌ಫೀಲ್ಡ್‌ನ Points of view ಎಂಬ ಗ್ರಂಥ ಬಹು ಪ್ರಸಿದ್ಧವಾದುದು. ಆ ಗ್ರಂಥದಲ್ಲಿ ಅವನು ಈ ವಿಚಾರವಾಗಿ ಇಂಗ್ಲಿಷ್ ಭಾಷೆಯ ಅನೇಕ ಚಾರಿತ್ರಿಕ ವಿವರಗಳನ್ನು ನೀಡಿದ್ದಾನೆ. ಉದಾಹರಣೆಗೆ, Toilet ಮತ್ತು WC ಎಂಬ ಶಬ್ದಗಳನ್ನು ತೆಗೆದುಕೊಳ್ಳೋಣ. ಕ್ರಿ.ಶ. ೧೮೦೦ ರಿಂದ ೧೮೯೯ರ ಒಳಗೆ ಈ ಎರಡೂ ಪ್ರಚಾರಕ್ಕೆ ಬಂದುವು. ಕ್ರಿ.ಶ. ೧೬೦೦ ರಿಂದ ೧೬೯೯ರ ವರೆಗೆ closet, commons, gingerbread office, necessary house ಮತ್ತು latrine ಶಬ್ದಗಳು ಉಪಯೋಗವಾಗುತ್ತಿದ್ದುವು. ೧೯೦೦ ರಿಂದ ಈಚೆಗೆ ಬೇರೆ ಬೇರೆ ಶಬ್ದಗಳು ಬಳಕೆಗೆ ಬಂದಿವೆ. ಅಮೆರಿಕದಲ್ಲಿ comfort station, men's room ಮತ್ತು rest room ಇಂಗ್ಲೆಂಡಿನಲ್ಲಿ loo, Geogrpah of the house ಎಂಬುದು ಉನ್ನತ ವರ್ಗದ ಮತ್ತು ಮಧ್ಯಮ ವರ್ಗದ ಶಬ್ದಗಳು. ಶ್ರಮಿಕ ವರ್ಗ ಮತ್ತು ಕೆಳಗಿನ ಮಧ್ಯಮ ವರ್ಗದವರು toilet ಎಂಬುದನ್ನು ಮಾತ್ರ ಉಪಯೋಗಿಸುತ್ತಾರೆ. ಹೀಗೆ ಶಬ್ದ ಪ್ರಯೋಗಗಳು ಬದಲಾಗಿವೆ. Poor ಶಬ್ದ ಈಗ under privileged ಎಂದೂ troublesome children ಎಂಬುದು maladjusted ಎಂದೂ insanity ಎಂಬುದು mental disorder ಎಂದೂ ಬದಲಾಗಿದೆ. Lunatic assylum ಎಂಬುದು mental hospital ಎಂದೂ ಬದಲಾಗಿ ಈಗ Mental Health Institute ಆಗಿದೆ. ಈ ಬದಲಾವಣೆಗಳಲ್ಲಿ ಶಬ್ದವು ಅನ್ವಯಿಸುವ ವರ್ಗಕ್ಕೆ ಅವಮಾನವಾಗದ ಹಾಗೆ ನಾವು ನಡೆದುಕೊಳ್ಳಬೇಕೆಂಬ ಎಚ್ಚರಿಕೆಯ ವ್ಯವಹಾರವಿರುವುದು ಕಾಣಬರುವುದಿಲ್ಲವೆ?

Sexy ಎಂಬ ಶಬ್ದವು ಈಗ ಪ್ರಯೋಗವಾಗುತ್ತಿರುವ ವ್ಯಾಪಕತೆಯನ್ನು ಗಮನಿಸಿ. ಹಿಂದೆ Sexy ಶಬ್ದವನ್ನು ಹೇಳುವುದೇ ಒಂದು ಅಪರಾಧವಾಗಿತ್ತು. ಈಗ ವ್ಯಕ್ತಿಗಳ ವ್ಯಕ್ತಿತ್ವವನ್ನೇ ವಿವರಿಸುವ ಶಬ್ದವಾಗಿದೆ.

ಭಾಷೆಯ ಆಲಂಕಾರಿಕವಾದ ನುಡಿಗಟ್ಟುಗಳು ಕೂಡ ಮಾನಸಿಕ ಸ್ಥಿತಿಯನ್ನು ಅನುಸರಿಸಿ ನಿರ್ಮಾಣಗೊಳ್ಳುತ್ತವ ಎಂಬುದನ್ನು ಗುರುತಿಸಬಹುದು. ೧೯೯೦ರ ದಶಕದಲ್ಲಿ ದಾಖಲೆಯಾದ ಒಂದು ನುಡಿಗಟ್ಟು ಕೊಲ್ಲಿಯ ಯುದ್ಧಕ್ಕೆ (Gulf war) ಸಂಬಂಧಿಸಿದ್ದು. ಈ ಯುದ್ಧವನ್ನು ಸದ್ದಾಂ ಹುಸೇನನು The mother of all battles ಎಂದು ಕರೆದನು. ಆ ಯುದ್ಧದಲ್ಲಿ ಸೋತ ಸದ್ದಾಮನ ಬಾಲ ಮುದುರಿದಾಗ, ಅಮೆರಿಕದ ಸೇನಾ ಇಲಾಖೆಯ ಕಾರ್ಯದರ್ಶಿ ಡಿಕ್ ಚೇನಿ (Dick Cheney) ಆ ಸೋಲನ್ನು The mother of all retreats ಎಂದು ಕರೆದನು. ಈ ಸಂದರ್ಭದಲ್ಲಿ ಪತ್ರಿಕಾ ವರದಿಗಾರರಿಗೆ ಒಂದು ಅವಕಾಶ ಸಿಕ್ಕಿತು. ಅಮೆರಿಕದ ಶಾಸನ ಸಭೆಯಲ್ಲಿ ಈ ಯುದ್ಧದ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಿದಾಗ ಪತ್ರಿಕಾ ವರದಿಗಾರರು ಅದನ್ನು The mother of all briefings ಎಂದು ವಿವರಿಸಿದರು.

ಹಿಂದೆ ಪ್ರಪಂಚದ ಎರಡನೆಯ ಮಹಾಯುದ್ಧ ನಡೆದಾಗ ಜರ್ಮನ್ ಸೇನೆಗಳಿಗೂ ಮಿತ್ರಪಕ್ಷದ ಸೇನೆಗಳಿಗೂ ಮರಳುಗಾಡಿನಲ್ಲಿ ಘೋರ ಯುದ್ಧವು ನಡೆದಿದ್ದಿತು. ಅದನ್ನು The mother of all battles ಎಂದು ಕರೆಯಲಾಗಿತ್ತು. ಸಂಯುಕ್ತ ಸಂಸ್ಥಾನದ ಅಧ್ಯಕ್ಷನಾಗಿದ್ದ ಜಾರ್ಜ್ ಬುಶ್, ಸದ್ದಾಂ ಹುಸೇನನಿಗೆ ಪ್ರತಿ ಸಂದೇಶವನ್ನು ಕಳುಹಿಸಿದಾಗ ಅವನನ್ನು The mother-in-law of all battles ಎಂದು ಸಂಬೋಧಿಸಿದ್ದನು. ಈ ವಿಷಯವು Indian Express (Sunday 3. March 1991) ಪತ್ರಿಕೆಯಲ್ಲಿ ವಿವರವಾಗಿ ವರದಿಯಾಗಿದೆ.

ಎರಡನೆಯ ಮಹಾಯುದ್ಧದಲ್ಲಿ ಜರ್ಮನಿಯು ಇಂಗ್ಲೆಂಡಿನ ಮೇಲೆ ಬಾಂಬುಗಳ ಧಾಳಿ ನಡೆಸಿದಾಗ ಲಂಡನ್ನಿನ St. Paul's Cathedral ಬಳಿ ದೊಡ್ಡ ಬಾಂಬನ್ನು ಹಾಕಿದ್ದರು. ಹಿಟ್ಲರನ ಪ್ರಸಾರ ಮಂತ್ರಿಯಾಗಿದ್ದ ಗೋಬೆಲ್ಸ್ ಎಂಬುವನು ಆ ಬಾಂಬನ್ನು "it was a bomb, a big bomb, a very big bomb, the mother of all bombs" ಎಂದು ವರ್ಣನೆ ಮಾಡಿದ್ದು ವರದಿಯಾಗಿತ್ತು. ಹೀಗೆ ಒಂದು ನುಡಿಗಟ್ಟಿಗೆ ಚಾರಿತ್ರಿಕವಾಗಿ ಎಷ್ಟು ಹಿನ್ನೆಲೆಯಿರುತ್ತದೆ ಎಂಬುದು ಸ್ವಾರಸ್ಯಪೂರ್ಣವಾಗಿರುತ್ತದೆ.

ಕನ್ನಡದ ಬಗ್ಗೆ ಮಾತನಾಡುವುದಾದರೆ ಲೈಂಗಿಕ ಶಬ್ದವೇ ಶಿಷ್ಟಸಂಭಾಷಣೆಯಲ್ಲಿ ವರ್ಜ್ಯವಾಗಿತ್ತು. ಅಶ್ಲೀಲ ಎಂಬುದು ಶಿಷ್ಟ ಪದವಾಗಿತ್ತು. ಈಗ ಲೈಂಗಿಕ ಶಬ್ದವೂ ಲೈಂಗಿಕ ಕ್ರಿಯೆಯೂ ವಿಚಾರ ಸಂಕಿರಣಗಳಲ್ಲಿ ತೀವ್ರಾಸಕ್ತಿಯ ಚರ್ಚೆಗೆ ಒಳಗಾಗುತ್ತವೆ. ಈ ವ್ಯತ್ಯಾಸಕ್ಕೆ ಯಾರು ಕಾರಣ, ಏನು ಕಾರಣ ಎಂಬುದನ್ನು ವೈಜ್ಞಾನಿಕವಾಗಿ ವಿವರಿಸುವ ಅಗತ್ಯವಿದೆ. ಈಗಲೂ ಇದು ಬಹು ನವಿರಾದ ವಿಷಯವೇ ಕೆಲವರಿಗೆ.

ಪ್ರಶ್ನೆಗಳು - ಉತ್ತರಗಳು

ಇಗೋ ಕನ್ನಡ ಅಂಕಣಕ್ಕೆ ಬಂದ ಕೆಲವು ಪ್ರಶ್ನೆಗಳಿಗೆ ನಾನು ನೇರವಾಗಿ ಉತ್ತರ ಕೊಟ್ಟ ಕೆಲವು ವಿವರಗಳನ್ನು ಈ ಭಾಗದಲ್ಲಿ ತಿಳಿಸುತ್ತೇನೆ - ಅವುಗಳಲ್ಲಿರುವ ಸ್ವಾರಸ್ಯದ ಕಾರಣದಿಂದ.

ಆಕ್ರೊನಿಮ್ ಎಂದರೇನು?

ಭಾಷಾಭಿವೃದ್ಧಿಯನ್ನು ಸಾಧಿಸುವ ಅನೇಕ ಮಾರ್ಗಗಳಿವೆ. ಸ್ಥಳಾವಕಾಶವನ್ನು ಹೆಚ್ಚು ಮಾಡಿಕೊಳ್ಳುವುದಕ್ಕಾಗಿ ವಾರ್ತಾ ಪತ್ರಕರ್ತರು ಮಾಡಿಕೊಂಡ ಉಪಾಯದಿಂದ ACRONYM ಶಬ್ದ ಸೃಷ್ಟಿಯಾಗಿದೆ. ದೊಡ್ಡ ದೊಡ್ಡ ಹೆಸರುಗಳನ್ನು ಚಿಕ್ಕದಾಗಿ ಮಾಡುವ ಉಪಾಯ ಇದು. ಗ್ರೀಕ್ ಭಾಷೆಯಲ್ಲಿ Akros=upper+onoma=name ಎಂಬ ಎರಡು ಶಬ್ದಗಳಿಂದ Acronym ಆಗಿದೆ. ಇದಕ್ಕೆ Homonym ಎಂಬ ಶಬ್ದ ಮಾದರಿಯಾಯಿತು. ಅಧಿಕಾರಯುತವಾದ ಹೆಸರಿನಲ್ಲಿರುವ ಶಬ್ದಗಳ ಆದ್ಯಕ್ಷರಗಳನ್ನು ಸೇರಿಸಿ ಮಾಡಿದ ಹೊಸ ಶಬ್ದ ಇದು. UNESCO=United Nation's Educational, Scientific and Cultural Organisation. ಹೀಗೆ UN, UNO, OUD, WHO ಮುಂತಾಗಿ ನೂರಾರು ಆಕ್ರೊನಿಮ್‌ಗಳಿವೆ.

ಕನ್ನಡದಲ್ಲಿ ಕೂಡ ಕವಿಮಂ = ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ. ಕವಿಕಾ = ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ, ಕಸಾಪ = ಕನ್ನಡ ಸಾಹಿತ್ಯ ಪರಿಷತ್ತು-ಹೀಗೆ ಉಪಯೋಗಿಸುತ್ತಿದ್ದಾರೆ. ಆದರೆ ಈಚೆಗೆ ಅಂತರ್ಜಾಲದ (internet) ಅವತಾರವಾದ ಮೇಲೆ ಆಕ್ರೊನಿಮ್‌ಗಳ ಹಾವಳಿ ಅಗಾಧವಾಗಿದೆ. ಎಲ್ಲ ವಾಕ್ಯಗಳನ್ನೂ ಸಂಗ್ರಹಿಸುವ ಪ್ರಯತ್ನ ನಡೆಯುತ್ತಾ ಇದೆ-E-MAIL ಗೆ ಸಹಾಯ ನಿಜ. ಆದರೆ ಮುಂದೆ ಗೊಂದಲವಾಗುತ್ತದೆಯೋ ಏನೋ? ಕಾದು ನೋಡಬೇಕು. ಕೆಲವು ಆಕ್ರೊನಿಮ್‌ಗಳನ್ನು ನೋಡಿ :

AFAIK	=	As for as I know
AMBW	=	All my best wishes
F2F	=	Face to face
GMTA	=	Great men think Alike
Lol	=	Lots of love
TTYL	=	Talk to you later
M o F	=	Male or female

ಸದ್ಯಕ್ಕಂತೂ ಇದು ಹಾಸ್ಯಾಸ್ಪದವಾಗಿದೆ. ಕನ್ನಡದಲ್ಲಿ ಈ-ಮೇಲ್ ಜನಪ್ರಿಯವಾದಾಗ ಇವು ಯಾವ ಸ್ವರೂಪವನ್ನು ಪಡೆಯುವುವೋ ಕಾದು ನೋಡಬೇಕು.

flabbergasted ಎಂದರೇನು?

ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಯದ ಜನರು ಯಾವುದಾದರೂ ಹೊಸ ಇಂಗ್ಲಿಷ್ ಪದವನ್ನು ಕೇಳಿದಾಗ ದಂಗಾಗಿ ಹೋಗುತ್ತಾರೆ. ಶಬ್ದವು ಕೇಳಲು ಸೊಗಸಾಗಿರುವುದರಿಂದ ಅರ್ಥ ತಿಳಿಯದಿದ್ದರೂ ಅದರ ಅರ್ಥವೂ ಚೆನ್ನಾಗಿಯೇ ಇರಬೇಕೆಂದು ನಂಬಿಬಿಡುತ್ತಾರೆ. ಅದನ್ನು ಬಹು ಮುಖ್ಯವಾದ ಸನ್ನಿವೇಶದಲ್ಲಿ ಉಪಯೋಗಿಸಿ ಶಹಬಾಸುಗಿರಿಯನ್ನು ಸಂಪಾದಿಸಲು ಪ್ರಯತ್ನಪಡುತ್ತಾರೆ.

ಹಿಂದೆ Charles ರಾಜಕುಮಾರನೂ Diana ರಾಜಕುಮಾರಿಯೂ ದೆಹಲಿಗೆ ಬಂದಾಗ ಅವರಿಬ್ಬರಿಗೂ ಸ್ವಾಗತಕೋರುವ ಒಂದು ಸಮಾರಂಭವಾಯಿತು. ದೆಹಲಿಯ ಅನೇಕ ಗಣ್ಯರು ಆಸೀನರಾಗಿದ್ದರು. ದೆಹಲಿಯ ಉರ್ದು ಪತ್ರಿಕೆಯ ಪ್ರಸಿದ್ಧ ಸಂಪಾದಕರನ್ನು ಸ್ವಾಗತ ಭಾಷಣ ಮಾಡುವಂತೆ ಆಹ್ವಾನಿಸಿದ್ದರು. ಆ ಭಾಷಣದಲ್ಲಿ ಆ ಸಂಪಾದಕರು ರಾಜಕುಮಾರಿಯನ್ನು ಕುರಿತು ಹೇಳಿದ ಮೊದಲ ವಾಕ್ಯ ಇದು. Your majesty, I am really flabbergasted at meeting you. flabbergasted ಶಬ್ದಕ್ಕೆ Extremely surprised ಎಂದು ಅರ್ಥ. ಸಂಪಾದಕರ ಇಂಗ್ಲಿಷ್ ವಾಕ್ಯಕ್ಕೆ ಅರ್ಥ-ನೀವು ಇಷ್ಟು ಸುಂದರವಾಗಿರುತ್ತೀರಿ ಎಂದು ನಾನು ನಿರೀಕ್ಷಿಸಿರಲಿಲ್ಲ ಎಂದು.

ನಿಘಂಟುಕಾರರಿಗೆ ಭಾಷೆಯಲ್ಲಿರುವ ಎಲ್ಲ ಶಬ್ದಗಳೂ ಚೆನ್ನಾಗಿ ತಿಳಿದಿರುತ್ತದೆಯೇ?

ಹಾಗೆ ಹೇಳುವುದಕ್ಕೆ ಆಗುವುದಿಲ್ಲ. ಎಷ್ಟೋ ವೇಳೆ ಸಾಮಾನ್ಯ ಜನರಿಗೇ ನಿಘಂಟುಕಾರರಿಗಿಂತ ಹೆಚ್ಚು ಶಬ್ದಗಳು ಗೊತ್ತಿರಬಹುದು. ಅಲ್ಲದೆ ಯಾವ ಯಾವ ಶಬ್ದವನ್ನು ಹೇಗೆ ಹೇಗೆ ಉಚ್ಚರಿಸಬೇಕು ಎಂಬ ಬಗ್ಗೆಯೂ ಕೆಲವರು ವಿದ್ವಾಂಸರು ಹೆಚ್ಚು ತಿಳಿದಿರಬಹುದು. ಈ ಬಗ್ಗೆ ಒಂದು ಕಥೆ ಇದೆ. ಅಮೆರಿಕದ ಬಹು ಪ್ರಸಿದ್ಧನಾದ ವೆಬ್ಸಟರ್ ಮಹಾಶಯನು ಆತನು ಸಂಪಾದಿಸಿದ ಬೃಹತ್ ನಿಘಂಟಿನ ಪ್ರಕಟನೆಯ ಸಮಾರಂಭವನ್ನು ಏರ್ಪಡಿಸಿದ್ದನು. ಅಮೆರಿಕದ ಪ್ರಮುಖ ಗಣ್ಯರೆಲ್ಲ ಸಭೆಯಲ್ಲಿ ಗಂಭೀರವಾಗಿ ಕುಳಿತಿದ್ದರು. ಆಗ ಸಭೆಯಲ್ಲಿ ಒಬ್ಬ ಪ್ರಸಿದ್ಧ ವಾಗ್ಮಿ ವಿದ್ವಾಂಸನು ವೆಬ್ಸಟರ್ ಸಂಪಾದಕನನ್ನು ಹೀಗೆ ಕೇಳಿದನು:

"Do you know Mr. Webster, Sugar is the only word in the English Language in which SU is pronounced at Shu? ಅದಕ್ಕೆ ನಿಘಂಟುಕಾರನ ಉತ್ತರ ಇದು:

"ARE YOU SURE"?

ಸ್ತ್ರೀವಾದದಿಂದ ಭಾಷೆಯ ಮೇಲೆ ಆಗುವ ಪರಿಣಾಮವೇನು?

ಕನ್ನಡ ದೇಶದಲ್ಲಿ ಸ್ತ್ರೀ ವಾದವು ಮೊದಲಾಗಿ ಬಹುಕಾಲವಾಗಿದೆ. ಆದರೆ ಕಳೆದ ೧೫ ವರ್ಷಗಳಲ್ಲಿ ಪ್ರಖರವಾಗಿರುವ ಹಾಗೆ ಹಿಂದೆ ಎಂದೂ ಇರಲಿಲ್ಲ. ಸ್ತ್ರೀಯರ ಶೋಷಣೆ ಸಹಸ್ರಮಾನಗಳಿಗಿಂತ ಹೆಚ್ಚು ಕಾಲದಿಂದ ನಮ್ಮ ದೇಶದಲ್ಲಿಯೂ ನಡೆದುಬರುತ್ತಲೇ ಇದೆ. ಇಂದೂ ಅದೇನು ಕಡಿಮೆಯಾಗಲಿಲ್ಲ. ಸುಸಂಸ್ಕೃತ ಜನರ ಮಾತು ಬೇಡ. ಏಕೆಂದರೆ ಅವರೆಲ್ಲರೂ ವಿದ್ಯಾವಂತರೂ ಸ್ತ್ರೀಸಮಾನತೆಯನ್ನು ನಂಬಿದವರೂ ಸ್ತ್ರೀವಾದಕ್ಕೆ ಪೋಷಣೆ ಕೊಡುವವರೂ ಆಗಿದ್ದಾರೆ. ಅವರ ಸಂಖ್ಯೆ ಕಡಿಮೆ. ಆದರೆ ಜನಸಾಮಾನ್ಯರ ದೃಷ್ಟಿ ಇನ್ನೂ ಬದಲಾಗಿಲ್ಲ. ನಗರ ಪ್ರದೇಶವನ್ನು ಬಿಟ್ಟು ಗ್ರಾಮ ಪ್ರದೇಶಕ್ಕೆ ಹೋದರೆ ಸ್ತ್ರೀಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ ಗಂಡಸರು ಇರುವುದು ಸಾಮಾನ್ಯ.

ಭಾಷೆಯ ದೃಷ್ಟಿಯಿಂದ ನೋಡಿದರೆ ನಗರ ಪ್ರದೇಶದಲ್ಲಿರುವ ಸುಸಂಸ್ಕೃತರೂ ವಿದ್ಯಾವಂತೆಯರೂ ಆದವರ ಲೇಖನ, ಕೃತಿ ರಚನೆ, ಸಂಭಾಷಣೆ, ವ್ಯವಹಾರಗಳಲ್ಲೆಲ್ಲ

ತುಂಬ ನವಿರಾದ, ಆನಂದಕಾರಕವಾದ ಸೃಷ್ಟಿಶೀಲತೆ ಕಾಣಬರುತ್ತಿದೆ. ಇದೊಂದು ಹೊಸ ಯುಗಕ್ಕೆ ನಾಂದಿ ಎಂದು ನನ್ನ ಭಾವನೆ. ಇಂಗ್ಲೆಂಡಿನ ಕತೆಯನ್ನು ಸ್ವಲ್ಪ ಗಮನಿಸಬಹುದು.

ಇಂಗ್ಲಿಷ್ ಭಾಷೆಯ ಮೇಲೆ Feminist ವಾದದ ಪ್ರಭಾವ ಅಧಿಕವಾಗಿದೆ. ಆ ಭಾಷೆಯಲ್ಲಿ MAN ಎಂಬ ಮೂರು ಅಕ್ಷರಗಳು ಬರುವ ಕಡೆ ಎಲ್ಲಾ Person ಶಬ್ದವನ್ನು ಹಾಕಬೇಕೆಂಬ ಒತ್ತಾಯ ಬರುತ್ತಿದೆಯಂತೆ. Chairman ಇರುವ ಕಡೆ Chairperson ಎಂದು ಪ್ರಯೋಗಿಸುವುದು ಸಾಧಾರಣವಾಗಿದೆ. Brotherhood of man ಇದ್ದರೆ Human felloship or solidarity ಎಂದು ಬರೆಯಬೇಕಾಗಿದೆ. ಆದರೆ MANDATE, MANAGE, MANGO, MANHOLE, MANUAL, MANURE, MANUFACTURE ಮುಂತಾದ ಶಬ್ದಗಳಿಗೆ ಏನು ಮಾಡುತ್ತಾರೆ, ಕಾದು ನೋಡಬೇಕಾಗಿದೆ. ಇವಂತೂ ಎಲ್ಲವೂ MANಗೆ ಸಂಬಂಧಪಟ್ಟ ಶಬ್ದಗಳಲ್ಲ. ಶಬ್ದಗಳ ವಿಚಾರವನ್ನು ಬಿಟ್ಟರೆ ಸ್ತ್ರೀಸಮಾನತೆಗೆ ಪೋಷಕವಾಗಿ ವಾದ ಮಾಡುವ ಪುರುಷರೇ ಸ್ತ್ರೀಯರಿಗಿಂತ ಹೆಚ್ಚಾಗಿದ್ದಾರೆ ಪಾಶ್ಚಾತ್ಯ ದೇಶಗಳಲ್ಲಿ. ಇದನ್ನು ಒಂದು ಸಭೆಯಲ್ಲಿ ಕಣ್ಣಾರ ಕಂಡು ಈ ಮಾತನ್ನು ದಾಖಲಿಸುತ್ತಿದ್ದೇನೆ.

ಈ ಕೆಲವು ವಿವರಗಳಿಂದ ಭಾಷೆಯ ಅಭ್ಯಾಸಕ್ಕೆ ಎಷ್ಟು ಮುಖಗಳಿವೆ ಎಂಬುದು ಜನಸಾಮಾನ್ಯರ ಗಮನಕ್ಕೆ ಬಂದರೆ ಸಾಕು. ಅಷ್ಟೆ !

೧೬. ಮುದ್ದಣನ ಶಬ್ದಕಲ್ಪ

ಕನ್ನಡ ಸಾಹಿತ್ಯದ ಹತ್ತೊಂಬತ್ತನೆಯ ಶತಮಾನದ ಕೊನೆಗಾಲದ ಪ್ರಸಿದ್ಧ ಕವಿ ಮುದ್ದಣ. ಆತನ ಕಾವ್ಯಗಳ ರಸಸ್ವಾದನೆಗೆ ಅವನ ಶಬ್ದಕಲ್ಪದ ಬಗೆಗೆ ಸಂಪೂರ್ಣವಾದ ತಿಳಿವಳಿಕೆಯಿದ್ದರೆ ಅದೊಂದು ಮಹತ್ತಾದ ಸಹಾಯ. ಅವನ ಕಾವ್ಯಗಳನ್ನು ಓದುವವರು ಕವಿಯ ಶಬ್ದಪ್ರಯೋಗದ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಶಬ್ದಗಳು ಕೇವಲ ಅಕ್ಷರ ಸಮೂಹವಲ್ಲ. ಪ್ರತಿಯೊಂದು ಶಬ್ದದಲ್ಲಿಯೂ ಒಂದೊಂದು ಕಥೆ ಅಡಕವಾಗಿರುತ್ತದೆ. ಆ ಶಬ್ದಗಳನ್ನು ಕವಿಗಳು ಉಪಯೋಗಿಸುವಾಗ ಅವಕ್ಕೆ ಆ ಕವಿಯ ಆತ್ಮದ ಸತ್ವ ತುಂಬಿಕೊಳ್ಳುತ್ತದೆ. ಒಂದೊಂದು ಶಬ್ದದಲ್ಲಿ ಒಂದು ಘಟನೆ, ಒಂದು ಹೊಸ ಭಾವನೆ, ಒಬ್ಬ ವ್ಯಕ್ತಿ ಇತ್ಯಾದಿಗಳು ಅಂತರ್ನಿಹಿತವಾಗಿರುತ್ತವೆ. ಈ ಶಬ್ದಗಳಲ್ಲಿ ಕವಿ ತನಗೂ ತನ್ನ ಸಮಕಾಲೀನರಿಗೂ ಮುಂದಿನ ತಲೆಮಾರಿನವರಿಗೂ ಸಂಬಂಧವನ್ನು ಕಲ್ಪಿಸುವ ತಂತ್ರವನ್ನು ಹೂಡಿರುತ್ತಾನೆ. ಶಬ್ದಗಳ ಚರಿತ್ರೆಯನ್ನು ಮರೆತರೆ ಅಥವಾ ತಿಳಿಯದೆ ಹೋದರೆ ಮಾನವನ ಮನಸ್ಸು ನೂರಾರು ವರ್ಷಗಳು ಮಾಡಿರುವ ಬೌದ್ಧಿಕ ಪ್ರಗತಿಯನ್ನೇ ನಾವು ನಿರ್ಲಕ್ಷಿಸಿದಂತಾಗುತ್ತದೆ.

ರಸಾಸ್ವಾದನೆಗೆ ಸಹಾಯಕವಾಗಲೆಂದೇ **ಮುದ್ದಣ ಪದಪ್ರಯೋಗ ಕೋಶವು** ಸಿದ್ಧವಾಗಿರುವುದರಿಂದ ಇದನ್ನು ಉಪಯೋಗಿಸುವುದಕ್ಕೆ ಮುಂಚೆ ಶಬ್ದನಿರ್ಮಾಣದಲ್ಲಿ ಮುದ್ದಣನು ತೋರಿರುವ ಕೌಶಲವನ್ನು ಕುರಿತು ಮುಮ್ಮಾತಾಗಿ ಕೆಲವು ವಿಷಯಗಳನ್ನು ಹೇಳುವುದು ಒಳ್ಳೆಯದು.

ಕೆಲವು ಶಬ್ದಗಳನ್ನು ಪರಿಶೀಲಿಸೋಣ. ಪಂಕಜ, ಜಲಜ, ಕಂಜ-ಈ ಎಲ್ಲ ಶಬ್ದಗಳಿಗೂ ಕಮಲ ಎಂದರ್ಥ. ಪಂಕಜ=ಕೆಸರಿನಲ್ಲಿ ಹುಟ್ಟಿದ್ದು. ಜಲಜ=ಕಂಜ=ನೀರಿನಲ್ಲಿ ಹುಟ್ಟಿದ್ದು. ಇದನ್ನು ಅರಿತು ಮುದ್ದಣನು ಈ ಹೂವನ್ನು ಕನ್ನಡದಲ್ಲಿ **ನೀರ್ವೂ** ಎನ್ನುತ್ತಾನೆ. ಅದು ಕಮಲವಾಗಬಹುದು, ನೈದಿಲೆ ಅಥವಾ ಉತ್ಪಲ ಅಥವಾ ಕುಮುದ ಆಗಬಹುದು. ಮತ್ತಾವ ನೀರಿನ ಹೂವೇ ಆಗಬಹುದು. ಸಮಯಪರಿಜ್ಞಾನದಿಂದ ನಾವು ಅರ್ಥನಿರ್ಧಾರವನ್ನು ಮಾಡಬೇಕಾಗುತ್ತದೆ.

ಭಾರತ ದೇಶದ ಇತಿಹಾಸಗಳಲ್ಲಿ ಸೂರ್ಯವಂಶದ ಹೆಸರು ಬಹಳ ಪ್ರಸಿದ್ಧವಾದುದು. ಮುದ್ದಣನು ಅದನ್ನು **ನೇಸರ್ಬಟಿ** ಎಂದು ಅನುವಾದಿಸುತ್ತಾನೆ. ನೆಸರ್ = ಸೂರ್ಯ, ಬಟಿ =ವಂಶ. ಕನ್ನಡ ಸಾಹಿತ್ಯದಲ್ಲಿ ಈ ಶಬ್ದವನ್ನು ಮುದ್ದಣನ ಹಿಂದೆ ಯಾರೂ ಬಳಸಿರಲಿಲ್ಲ. ಮುದ್ದಣನೇ ಅದನ್ನು ಟಂಕಿಸಿದಂತಾಯಿತು. ಕಳೆದ ಶತಮಾನದಲ್ಲಿ ಮತ್ತೆ ಈ ಶಬ್ದವನ್ನು

ಉಪಯೋಗಿಸಿದವರು ಕುವೆಂಪು ಅವರು. ತಮ್ಮ ಶ್ರೀರಾಮಾಯಣದರ್ಶನದ ಕವಿಕ್ರತುದರ್ಶನಂ ಎಂಬ ಮೊದಲನೆಯ ಸಂಚಿಕೆಯ ೨೧೪ನೆಯ ಸಾಲಿನಲ್ಲಿ **ನೇಸರ್ಬೆಳಿ** ಎಂದು ಕುಳಸಹಿತವಾಗಿ ಪ್ರಯೋಗಿಸಿದ್ದಾರೆ. ಹೊಸಗನ್ನಡವಾದುದರಿಂದ ಅದೇ ಸರಿಯಾದ ರೂಪವಾಯಿತು. ಎಂದರೆ ಒಬ್ಬ ಹಿಂದಿನ ಕವಿ ಟಂಕಿಸಿದ ಶಬ್ದ ಮುಂದಿನ ತಲೆಮಾರಿನ ಕವಿಗೆ ಪ್ರಿಯವಾಯಿತು ಎಂದರ್ಥ.

ಸಹಸ್ರಾಕ್ಷ ಎಂದರೆ ಇಂದ್ರ. ಮುದ್ದಣನು ಅದನ್ನು **ಮೈಗಣ್ಣನೆಂದು** ಅನುವಾದ ಮಾಡಿದ್ದಾನೆ. ಆದರೆ ಇದು ಪೂರ್ವಕವಿಪ್ರಯೋಗ. ಕಬ್ಬಿಗರ ಕಾವದಲ್ಲಿಯೂ ಜಯನೃಪ ಕಾವ್ಯದಲ್ಲಿಯೂ ಪ್ರಯೋಗವಾಗಿರುವುದಲ್ಲದೆ ಕರ್ಣಾಟಕ ನಿಘಂಟಿನಲ್ಲಿಯೂ **ಮೆಯ್ಗಣ್ಣಂ ಸಹಸ್ರಾಕ್ಷಂ** ಎಂದು ನಿರೂಪಿಸಲಾಗಿದೆ. ಹೀಗೆ ಹಿಂದಿನ ಕವಿಗಳು ಪ್ರಯೋಗಿಸಿರುವ ಶಬ್ದವನ್ನೂ, ತಾನು ಸೃಷ್ಟಿಸುವ ಶಬ್ದವನ್ನೂ ಸೇರಿಸಿ ಮುದ್ದಣನು ತನ್ನ ಶಬ್ದಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾನೆ.

ಸಂಸ್ಕೃತದ ವಿಮಾನ ಮುದ್ದಣನಿಗೆ ಸಾಲದಾಯಿತು. ಅದನ್ನು ಅವನು **ಗಾಳಿದೇರ್** ಎಂದು ಹೊಸದಾಗಿ ಟಂಕಿಸಿದ ಶಬ್ದಕ್ಕೆ ಸಮಾನ ಮಾಡಿದನು. ಈ ಶಬ್ದವೂ ಕುವೆಂಪು ಅವರಿಗೆ ಉತ್ತಮ ಶಬ್ದವಾಗಿ ಕಂಡುಬಂದು ಅವರೂ ಉಪಯೋಗಿಸಿದ್ದಾರೆ.

ಅಗ್ನಿಮುಖ ಎಂದರೆ ಯಾಗಾದಿಗಳಲ್ಲಿ ನೀಡುವ ಆಹುತಿಯನ್ನು ಅಗ್ನಿಯ ಮುಖದಿಂದ ಸ್ವೀಕರಿಸುವ ದೇವತೆ ಎಂದರ್ಥ. ಮುದ್ದಣನಿಗೆ ಅದೇ **ಅಗ್ಗಿಮೊಗ** ಆಯಿತು. **ಮಲೆನಾಡಿಗ** ಎಂದರೆ ಕಪಿ; ಗರುಡ ಎಂಬುದನ್ನು **ಉದ್ದ ಮೂಗಿನ ಪಕ್ಕಿ** ಎಂದು ಅದರ ಆಕಾರವನ್ನೇ ವಿವರಿಸುವ ಶಬ್ದವನ್ನು ಟಂಕಿಸುತ್ತಾನೆ ಈ ಕವಿ. ಇಂಥ ಬಗೆಯ ನಿರ್ಮಾಣದಿಂದ ಹೊಸ ಬಗೆಯ ಆವರಣವೇ ನಿರ್ಮಾಣವಾಗುತ್ತದೆ - ಕಾವ್ಯದಲ್ಲಿ. ಹೀಗೆ ಹೊಸದೊಂದು ಕವಿಶಕ್ತಿಯನ್ನು ಈ ಕವಿ ನಮಗೆ ಪ್ರದರ್ಶಿಸುತ್ತಾನೆ.

ಕನ್ನಡ ಕಾವ್ಯಲೋಕದಲ್ಲಿ ಮಹಾಕವಿಗಳು ತೋರಿರುವ ಶಬ್ದಕಲ್ಪ ಅಸಾಧಾರಣವಾಗಿದೆ. ಶಬ್ದಕಲ್ಪವನ್ನೇ ವಿಷಯುವನ್ನಾಗಿ ಆರಿಸಿಕೊಂಡು ಪ್ರತಿಯೊಬ್ಬ ಕವಿಯುನ್ನೂ ವ್ಯಾಸಂಗಮಾಡಬಹುದು.

ಯಾವ ಪ್ರಯತ್ನವೂ ಇಲ್ಲದೆ ಪ್ರಕೃತಿಸ್ವಭಾವದಿಂದ ಕಾವ್ಯನಿರ್ಮಾಣ ಮಾಡುವ ಪಂಪನಲ್ಲಿ ಕಾಣುವ ಶಬ್ದವ್ಯಾಪಾರದ ಸೊಗಸು ಅವನ ಅಯತ್ನನಿರ್ಮಿತ ಶೈಲಿಯಲ್ಲಿಯೇ ಅಡಗಿದೆ. ರನ್ನ ತನ್ನ ಶಬ್ದಸಂಪತ್ತನ್ನು ಪ್ರಯೋಗಿಸುವಾಗ ಬಾಣಬಿರುಸುಗಳ ಕ್ಷಣಿಕವಾದ ಪ್ರಜ್ವಲನೆಯ ಸೊಗಸನ್ನು ಪ್ರದರ್ಶಿಸುತ್ತಾನೆ. ಪರುಷಾಕ್ಷರ ಎಂದರೆ ಕರ್ಕಶವಾದ ಉಚ್ಚಾರಣೆಯ ಅಕ್ಷರಗಳ ಗೊಡವೆಯೇ ಬೇಡವೆಂದು ನಾಗಚಂದ್ರನು ಕಾವ್ಯರಚನೆ ಮಾಡುತ್ತಾನೆ. ಸಂಸ್ಕೃತ ಕನ್ನಡಗಳ ಮಿಶ್ರಣವೇ ಬೇಡವೆಂದು ನಯಸೇನನು ಒಂದು ಕಂದಪದ್ಯವನ್ನೇ ರಚಿಸಿದ್ದಾನೆ.

ಸಕ್ಕದಮನೆ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ದಗನ್ನಡದೊಳ್ತಂ

ದಿಕ್ಕುವುದೇ ಸಕ್ಕದಮಂ

ತಕ್ಕುದೇ ಬೆರೆಸಲ್ಕೆ ಘೃತಮುಮಂ ತೈಲಮುಮಂ.

ಹೀಗೆ ಹೇಳಿದರೂ ಘೃತ ಯಾವುದು ತೈಲ ಯಾವುದು ಎಂದು ಅವನು ಸ್ಪಷ್ಟಪಡಿಸಲಿಲ್ಲ. ಕ್ರಮಾಲಂಕಾರದ ನಿರ್ಮಾಣದ ನೀತಿಯನ್ನು ಅನುಸರಿಸಿದರೆ ಸಂಸ್ಕೃತ ಘೃತವೂ ಕನ್ನಡ ತೈಲವೂ ಆಗುತ್ತದೆ. ಸಂಸ್ಕೃತಕ್ಕಿಂತ ಕನ್ನಡ ಕಡಿಮೆ ರುಚಿಯುಳ್ಳದ್ದೆಂದು ಹೇಳುವುದು ನಯಸೇನನ ಉದ್ದೇಶವಿರಲಾರದು. ಹೀಗಿದ್ದರೂ ನಯಸೇನನು ಕನ್ನಡ ಸಂಸ್ಕೃತಗಳ ಮಿಶ್ರಣದ ಸೊಗಸನ್ನು ತನ್ನ ಶೈಲಿಯಲ್ಲಿಯೇ ದೃಷ್ಟಾಂತಪಡಿಸಿದ್ದಾನೆ.

ಹೆಜ್ಜೆ ಹೆಜ್ಜೆಗೂ ಉತ್ಪ್ರೇಕ್ಷೆಯಿಲ್ಲದ ಕಾವ್ಯರಚನೆ ಅಸಾಧ್ಯವಾಗುತ್ತದೆ, ಷಡಕ್ಷರಿಗೆ. ಲಕ್ಷ್ಮೀಶನ ಶಬ್ದ ಸೌಂದರ್ಯವಿರುವುದು ಅವನು ಉಪಯೋಗಿಸುವ ಯಮಕ ಪರಂಪರೆಯ ನಾದಸೌಭಾಗ್ಯದಲ್ಲಿ. ಅಂಡಯ್ಯನಿಗೆ ತದ್ಭವಗಳೇ ಬೇಕು. ಮತ್ತೆ ಕೆಲವರಿಗಂತೂ ದೀರ್ಘಸಂಸ್ಕೃತ ಸಮಾಸಸರಣಿಯೇ ಬೇಕಾಗುತ್ತದೆ. ಕುಮಾರವ್ಯಾಸನಿಗೆ ಭಾಷೆ ನಾದ ಬಾಳಿನ ಸೊಗಸನ್ನೆ ಬಿಂಬಿಸಬೇಕು. ಅವನಂತೆ ಶಬ್ದಗಳಿಗೆ ನೂತನ ಅರ್ಥವನ್ನು ತುಂಬುವ, ನಾಮಪದವನ್ನೇ ಕ್ರಿಯಾಪದವನ್ನಾಗಿ ಮಾಡುವ ಕವಿಗಳು ಅಪೂರ್ವ. **ಹನುಮ** ಶಬ್ದವನ್ನೇ **ಹನುಮಿಸು** ಎಂದು ಪ್ರಯೋಗಿಸುವುದಕ್ಕೆ ಅಪೂರ್ವವಾದ ಪ್ರತಿಭೆ ಬೇಕು.

ಮುದ್ದಣನಿಗೆ ಈ ವಿಚಾರದಲ್ಲಿ ಕುಮಾರವ್ಯಾಸ ಗುರುವಾಗುತ್ತಾನೆ. ಮತ್ತೆ ಕೆಲವು ಮುದ್ದಣ ಪ್ರಯೋಗಗಳನ್ನು ನೋಡೋಣ.

ಸಂಸ್ಕೃತ ಸಮಾಸಗಳಲ್ಲಿರುವ ಶಬ್ದಗಳಿಗೆ ಪರ್ಯಾಯಗಳನ್ನು ಜೋಡಿಸುವುದು ಅಲ್ಲಲ್ಲಿ ಕಂಡುಬರುತ್ತದೆ. **ರವಿಕೋಪ** ಎಂಬ ಶಬ್ದವಿದೆ. ಅದೊಂದು ಅಂಕಿತನಾಮ. ಮುದ್ದಣ ಅದನ್ನು **ಭಾನುಕೋಪ, ಸೂರ್ಯಕೋಪ, ಇನಕೋಪ, ಭಾಸ್ಕರಕೋಪ** ಎಂದು ಬದಲಾಯಿಸಿಬಿಡುತ್ತಾನೆ. **ವ್ಯೋಮಕೇಶ** ಎಂದರೆ **ಶಿವ** ತಾನೆ! ಈ ಶಬ್ದ **ಗಗನಕೇಶ, ನಭಕೇಶ, ಪುಷ್ಕರಕೇಶ** ಎಂದು ಬೇರೆಯ ರೂಪಗಳನ್ನು ಪಡದು ಬೇರೆಯ ಶಬ್ದಗಳು ಆಗುತ್ತವೆ. **ಶಿವನಿಗೆ** ಮುದ್ದಣ ಎಷ್ಟು ಬಗೆಯಾಗಿ ಬೇರೆಯ ಹೆಸರುಗಳನ್ನು ಇಟ್ಟಿದ್ದಾನೆ ಎಂಬುದನ್ನು ಪರೀಕ್ಷಿಸುವುದೇ ಒಂದು ವಿನೋದದ ಕ್ರೀಡೆಯಾಗುತ್ತದೆ, ಓದುಗನಿಗೆ. **ಸಿಂಹನಾದ** ಎಂಬುದು **ಹರಿನಾದ** ಎಂದು **ನೃಪ, ಪೃಥ್ವೀಪತಿ** ಎನ್ನುವುದು **ಗೋಮಿನಿಪ** ಎಂದು ವ್ಯತ್ಯಾಸಗೊಳ್ಳುತ್ತದೆ.

ತಾಮಸ ಎಂಬ ಶಬ್ದಕ್ಕೆ ಕನ್ನಡದಲ್ಲಿ **ಜಡತೆ** ಎಂದರ್ಥ. ಮಲಯಾಳಂ ಭಾಷೆಯಲ್ಲಿ ಈ ಶಬ್ದಕ್ಕೆ ತಂಗುವುದು, ನಿಂತು ತಡಮಾಡುವುದು ಎಂದು ಅರ್ಥವಿದೆ. ಆ ಅರ್ಥವನ್ನು ಮುದ್ದಣ ಕನ್ನಡಕ್ಕೆ ಆಮದು ಮಾಡುತ್ತಾನೆ.

ಸಂಸ್ಕೃತದ ಶಬ್ದಗಳು ಎಷ್ಟು ಅಪೂರ್ವವಾಗಿದ್ದರೆ ನಮ್ಮ ಕವಿಗೆ ಅಷ್ಟು ಆನಂದ. ಕ್ಲಿಷ್ಟವಾಗಿದ್ದರೆ ಮತ್ತೂ ಒಳ್ಳೆಯದೆ! ಅದರಿಂದ ಓದುಗರಿಗೆ ವ್ಯಾಯಾಮದ ಅವಕಾಶ ಸಿಗುತ್ತದೆ. **ರಾಕ್ಷಸ** ಬಹು ಸರಳವಾದ, ಎಲ್ಲರಿಗೂ ಗೊತ್ತಿರುವ ಶಬ್ದ. ಆ ಶಬ್ದಕ್ಕೆ ಪರ್ಯಾಯವಾಗಿ **ಪುಣ್ಯಜನ,**

ಯಾತುಧಾನ ಎಂಬ ಶಬ್ದಗಳಿವೆ. ಅಮರಸಿಂಹನ ನಾಮಲಿಂಗಾನುಶಾಸನವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ ಮುದ್ದಣನಿಗೆ ಈ ಶಬ್ದಗಳು ನೆನಪಿಗೆ ಬರುವುದು ಸುಲಭ. ಆದ್ದರಿಂದ ಅವುಗಳನ್ನೇ ಪ್ರಯೋಗಿಸುತ್ತಾನೆ. **ವಾರ್ತೆ ವಾರತೆ**ಯಾಗುತ್ತದೆ. **ವಸುಧೆಪಾಲ** ಎಂದು ತದ್ಭವ ಸಂಸ್ಕೃತವನ್ನು ಸೇರಿಸಿ ಸಮಾಸ ಮಾಡುತ್ತಾನೆ. **ಗಜಗಮನೆ** ಅವನಿಗೆ ಸಾಮಾನ್ಯ ಶಬ್ದ. **ದ್ವಿಪರಾಜಗಮನೆ** ಎಂದರೆ ಹೊಸತನದ ಸೊಗಸು. **ಹರಿಣಾಕ್ಷಿ** ತುಂಬಾ ಸಾಮಾನ್ಯ. ಅದು **ಮೃಗದೃಗುಯುಗೆ** ಆಗುತ್ತದೆ. ಹೀಗೆ ಸಂಸ್ಕೃತಕ್ಕೆ ಹೊಸ ಸಂಸ್ಕೃತವನ್ನು ಹೊಂದಿಸುವ ಅಥವಾ ಸಂಪೂರ್ಣವಾಗಿ ಕನ್ನಡಕ್ಕೆ ಅನುವಾದ ಮಾಡುವ ಈ ಕವಿಯ ಉಪಾಯಗಳು ಕನ್ನಡಕ್ಕೆ ಅನೇಕ ಹೊಸ ಶಬ್ದಗಳನ್ನು ಸೇರಿಸಲು ಸಹಾಯಕವಾಗಿವೆ.

ನೀಲಕಂಠನು ಕರಿಗೊರಲನಾಗುತ್ತಾನೆ. **ನೀಲಗ್ರೀವನೂ** ಆಗುತ್ತಾನೆ. ಇದನ್ನು ಉಪಯೋಗಿಸಿರುವವನು ಇವನೊಬ್ಬನೇ. ಆದರೆ ಉದ್ಭಟದೇವಚರಿತೆಯಲ್ಲಿ ಬಸವಾಂಕ ಕವಿಯು **ಕರ್ಗೊರಳ** ಎಂಬುದನ್ನು ಮುದ್ದಣನಿಗಿಂತ ಮುಂಚೆಯೇ ಪ್ರಯೋಗಿಸಿದ್ದಾನೆ. **ರಾಜಶೇಖರ** ಎಂದರೆ ಚಂದ್ರನನ್ನು ಧರಿಸಿರುವವನು **ಶಿವ**. ಅದನ್ನು ಮುದ್ದಣ **ನೊಸಲರೆದಿಂಗಳ** ಎಂದು ಬದಲಾಯಿಸುತ್ತಾನೆ. **ಕಮಲಾಸನ** ಎಂದರೆ **ಕಮಲ**. ಅದನ್ನು **ಸಿರಿಯ ಕರುಮಾಡ** ಎಂದು ಕನ್ನಡಿಸುತ್ತಾನೆ. **ಮಹಾಬಲ** ಎಂಬುದು **ಮಾರ್ಬಲ**ವಾಗುತ್ತದೆ.

ಜೋಡು ಶಬ್ದಗಳನ್ನು ಉಪಯೋಗಿಸುವ ಸಂದರ್ಭಗಳು ಅನೇಕವಿದೆ. ಉದಾ : **ಮದಗರ್ವ**. ಕನ್ನಡದ ಬೈಗುಳನ್ನು ಬಹು ನವಿರಾದ ಸಂಸ್ಕೃತವಾಗಿ ಮಾರ್ಪಡಿಸಿ ಆ ಶಬ್ದಕ್ಕೆ ಗೌರವವನ್ನು ತಂದುಕೊಡುತ್ತಾನೆ. ಕನ್ನಡದಲ್ಲಿ ನೀರಿಲ್ಲದವನು ಎಂದರೆ ನಪುಂಸಕ. ಮುದ್ದಣನು ಅದನ್ನು **ವಿದ್ರವ** ಎಂದು ಸಂಸ್ಕೃತಮಾಡಿ ಒಂದು ಸೌಮ್ಯೋಕ್ತಿಯನ್ನಾಗಿಸುತ್ತಾನೆ.

ಅಂತೂ ಅನೇಕ ಉಪಾಯಗಳನ್ನು ಹೂಡಿ ತನ್ನ ಕವಿತೆ **ಮುಂತಿಲ್ಲ ಪಿಂತಿಲ್ಲ**ವೆಂದಾಯ್ತು ಎಂದು ಮನೋರಮೆಯಿಂದ ಮೆಚ್ಚುಗೆಯನ್ನು ಗಿಟ್ಟಿಸಿಕೊಳ್ಳುತ್ತಾನೆ.

ಕುಮಾರವಿಜಯ ಯಕ್ಷಗಾನದ ಉಪಾಂತ್ಯ ಪದ್ಯದಲ್ಲಿ,

ಕನ್ನಡನುಡಿಯೆಂದುಪೇಕ್ಷಿಸ

ದಿನ್ನಿದನು ಪ್ರಾಚುರ್ಯಗೊಳಿಸುವ

ಕನ್ನಡಿಗರನು ಪೊರೆವ **ಶಂಕರ**

ಕನ್ನಡಿಗನು

ಎಂದು ಘೋಷಿಸಿ ಶಂಕರನನ್ನೇ ಕನ್ನಡಿಗನನ್ನಾಗಿ ಮಾಡಿದ ಹಿರಿಮೆ ಮುದ್ದಣನದು. ಹೀಗೆ ಹೇಳಲು ಕನ್ನಡದಲ್ಲಿ ಪ್ರಯೋಗದಲ್ಲಿರುವ, ಮುದ್ದಣನಿಗೆ ಖಂಡಿತವಾಗಿ ಪರಿಚಯವಾಗಿದ್ದ **ಕಣ್ಣಡಿಗ** ಎಂಬ ಶಬ್ದದ ಸಾದೃಶ್ಯ ಕಾರಣವಾಗಿರಬೇಕು. **ಕಣ್ಣಡಿಗ** ಎಂದರೆ ಶಿವ = **ಪಾದಗಳಲ್ಲಿ ಕಣ್ಣುಳ್ಳವನು, ಮಹಾವಿಷ್ಣು ನಯನವೇರಿಸಿದ ಕಾಲುಗಳು** ಅವು ಎಂಬುದು ಕನ್ನಡದ ಪ್ರಾಚೀನ ನಿಘಂಟುಗಳಲ್ಲಿಯೇ ಉಲ್ಲೇಖವಾಗಿದೆ.

೧. ಕರ್ಣಾಟಕ ಶಬ್ದಸಾರದಲ್ಲಿ ಮೊದಲನೆಯ ಶಬ್ದದಲ್ಲಿ ಈಶ್ವರನ ೩೩ ಹೆಸರುಗಳ ಪರ್ಯಾಯ ರೂಪಗಳಿವೆ. ಅವುಗಳಲ್ಲಿ **ಕಣ್ಣಡಿಗ** ೨೬ನೆಯದು.

೨. ಕವಿಕಂಠಹಾರ - ೧೧ **ಮಿಗಗ್ಗೈಯಂ** = **ಕಣ್ಣಡಿಗಂ**

೩. ಕರ್ಣಾಟ ಶಬ್ದಮಂಜರಿಯಲ್ಲಿ **ಮಾದೇವ** = **ಕಣ್ಣಡಿಯ**. ಇದಕ್ಕೆ ಅರ್ಥ, ಪಾದದಲ್ಲಿ ಕಣ್ಣುಳ್ಳವನು = ಕಣ್ಣಡಿಗ.

ಒಬ್ಬ ಪ್ರತಿಭಾವಂತ ವಿದ್ಯಾರ್ಥಿಗೆ, ಭಾಷಾಭ್ಯಾಸಂಗಿಗೆ ಮುದ್ದಣನ ಶಬ್ದಕಲ್ಪದಲ್ಲಿ ಅಡಗಿರುವ ಸಂಶೋಧನೆಯಲ್ಲಿ ಒಂದು Ph.D. ಪದವಿ ಕಾದಿದೆ. ಇದು ಯಾರ ಕೈವಶವಾಗುತ್ತದೆ ಎಂಬುದನ್ನು ನಾನು ಕಾದುನೋಡುತ್ತಿದ್ದೇನೆ.

ಮುದ್ದಣನ ಶಬ್ದಕಲ್ಪವನ್ನು ವೈಜ್ಞಾನಿಕವಾಗಿ ಪರ್ಯಾಲೋಚಿಸಲು ಕೆಲವು ಮೆಟ್ಟಿಲುಗಳನ್ನು ಇಲ್ಲಿ ಸೂಚಿಸಲಾಗಿದೆ. ಆಯಾ ಮೆಟ್ಟಿಲಿಗೆ ಸರಿಹೊಂದುವ ಎಲ್ಲ ಶಬ್ದಗಳನ್ನೂ ಕ್ರೋಡೀಕರಿಸಿ ಅಭ್ಯಾಸ ಮಾಡಿದರೆ ಮುದ್ದಣನ ಮನಸ್ಸಿನಲ್ಲಿ ಬೆಳೆದಿದ್ದ ಭಾಷಾಶಾಸ್ತ್ರದ ಆಲೋಚನೆಗಳ ಕಡೆಗೆ ಮಾರ್ಗದರ್ಶನ ಲಭಿಸಬಹುದು.

೧. ಸಂಸ್ಕೃತ ಶಬ್ದಗಳಿಗೆ ಹೊಸಬಗೆಯ ಶಬ್ದಗಳನ್ನು ಸೃಷ್ಟಿಮಾಡುವುದು.

ಮುದ್ದಣನು ಒಂದೇ ಸಂಸ್ಕೃತ ಶಬ್ದಕ್ಕೆ ಎರಡು ಮೂರು ಬಗೆಯ ತದ್ಭವಗಳನ್ನು ರಚಿಸುತ್ತಾನೆ. ಅವುಗಳಲ್ಲಿ ಎಲ್ಲವೂ ಉಳಿಯುತ್ತವೆಯೆ? ಉಳಿದು ಬಂದಿವೆಯೆ? ಇದನ್ನು ಗಮನಿಸಬೇಕು.

ಸನ್ನಾಹ ಶಬ್ದಕ್ಕೆ ಸನ್ನೆಯ, ಸನ್ನಣ;

ಸನ್ಮಾನ ಶಬ್ದಕ್ಕೆ ಸಮ್ಣಣ, ಸಮ್ಮಾನ;

ಮಕುಟ ಶಬ್ದಕ್ಕೆ ಮಗಟ, ಮಗುಡ;

ಶತ್ರುಘ್ನ ಶಬ್ದಕ್ಕೆ ಶತ್ರುಗಣ, ಶತ್ರುಹ;

ಇಂಥ ಅನೇಕ ಪ್ರಯತ್ನಗಳ ಸಾರ್ಥಕತೆಯನ್ನು ಪರಿಶೀಲಿಸಬೇಕು.

೨. ಶಬ್ದಗಳಿಗೆ ಹಳಗನ್ನಡ ಸ್ವರೂಪವನ್ನು ನೀಡಲು ಅವುಗಳನ್ನು ಸಬಿಂದುಕವನ್ನಾಗಿ ಮಾಡುವುದು.

ಮುಸುಡು, ಮುಸುಂಡು, ಮುದ್ದಣನ ಹಳಗನ್ನಡ ಮುಸುಡು ರೂಪದ ಪ್ರಯೋಗವುಳ್ಳ ಕಾಲಕ್ಕೆ ಬಂದಿದ್ದರೆ ಮುಸುಂಡು ಎಂಬ ಪೂರ್ವರೂಪದ ಉಪಯೋಗ ಅಗತ್ಯವಾಗಿತ್ತೆ? ಅಥವಾ ಮುದ್ದಣನು ಬೇಕೆಂದೇ ತನ್ನ ಕಾಲಕ್ಕಿಂತ ಹಿಂದಿನ ಭಾಷಾಸ್ವರೂಪದ ರಚನೆಯಲ್ಲಿ ಆಸಕ್ತಿಯನ್ನು ಹೊಂದಿದ್ದನೆ ?

೩. ಕಾಗುಣಿತದಲ್ಲಿ ಎರಡು ಬಗೆಯ ಬರಹವನ್ನು ಬರೆಯುವುದು.

ಮುಮ್ಮ್ಯ - ಮುಂಮ್ಯ, ರಾವತ - ರಾವುತ್ತ;

ಹುಣ್ಣಿವೆ - ಹುಣ್ಣಿವೆ, ಇದರ ಪ್ರಯೋಜನ ಏನು?

೪. ಒಂದೇ ಶಬ್ದಕ್ಕೆ ಸಂಸ್ಕೃತದಲ್ಲಿಯೇ ಬೇರೆ ಬೇರೆ ರೂಪಗಳನ್ನು ಸೃಷ್ಟಿಸುವುದು. **ಷಣ್ಮುಖ ಷಡ್ಲಪ, ಷಡ್ವಪನ, ಷಡ್ವದನ, ಷಟ್ಕರ.**

೫. ತದ್ಭವಗಳ ಕಡೆಗೆ ಗಮನವಿದ್ದರೂ ಅಪೂರ್ವ ಸಂಸ್ಕೃತ ಶಬ್ದಗಳನ್ನು ಉಳಿಸಿಕೊಂಡಿರುವುದು - **ಸಪ್ತಾಶ್ವ, ಸಪ್ತತಂತು.**

೬. ಕ್ರಿಯಾಸಮಾಸಗಳಲ್ಲಿ ಅರಿಸಮಾಸದ ದೋಷವಿಲ್ಲ ಎಂದು ಪ್ರಾಚೀನ ವ್ಯಾಕರಣಕಾರರೇ ಹೇಳಿದ್ದಾರೆ. ಅದರ ಆಧಾರದ ಮೇಲೆ ಹೊಸ ಶಬ್ದಗಳನ್ನು ಸೃಷ್ಟಿಸುವುದು. **ಶಿರಕಳಚು. ಶರಮಳೆ** ಇತ್ಯಾದಿ.

೭. ಱಱ, ಱಟಿದ ಬಗ್ಗೆ ಮುದ್ದಣನ ಗ್ರಂಥಗಳಲ್ಲಿ ವ್ಯತ್ಯಾಸಗಳಿರುವುದು - ಇದಕ್ಕೆ ಕಾರಣಗಳಾವುವು ?

ಮುದ್ದಣನ ಯಕ್ಷಗಾನಗಳು ರಚಿತವಾಗುತ್ತಿದ್ದಾಗ ಅವನಿಗೆ ಱಱ ಮತ್ತು ಱಟ ಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಇದ್ದಿರಲಾರದು. ಅಥವಾ ಯಕ್ಷಗಾನ ಕೃತಿಗಳಿಗೆ ಹೊಂದಿಸಬಾರದು ಎಂಬ ಆಲೋಚನೆ ಇದ್ದಿರಬೇಕು. ಶ್ರೀರಾಮಪಟ್ಟಾಭಿಷೇಕವನ್ನು ರಚಿಸುವ ಕಾಲಕ್ಕೆ ಆ ಬಗ್ಗೆ ಮುದ್ದಣನು ಒಂದು ಸ್ಪಷ್ಟ ನಿರ್ಧಾರಕ್ಕ ಬಂದಿರಬೇಕು. ಅಲ್ಲಿಂದ ಮುಂದೆ ಎಲ್ಲ ಕಡೆ ಱಱ ಮತ್ತು ಱಟ ಎರಡನ್ನು ವ್ಯವಸ್ಥಿತವಾಗಿ ಪ್ರಯೋಗಿಸಿ ತನ್ನ ಗ್ರಂಥಗಳಿಗೆ ಹಳಗನ್ನಡದ ಗ್ರಂಥಗಳ ನಡುವೆ ಪ್ರಮುಖ ಸ್ಥಾನವನ್ನು ಗಳಿಸುವ ದೃಢವಾದ ನಂಬಿಕೆ ಬಂದಿರಬೇಕು. ಅವನು ಕಿಟ್ಟೆಲ್‌ನ ನಿಘಂಟನ್ನೂ, ಕೇಶಿರಾಜನ ವ್ಯಾಕರಣವನ್ನೂ ದಿನನಿತ್ಯದ ಅಭ್ಯಾಸಗ್ರಂಥವನ್ನಾಗಿ ಮಾಡಿ ಕೊಂಡಿದ್ದನು. ಆದರೂ ಮುದ್ದಣನ ಶೈಲಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವನ ಶೈಲಿಯು ಸಂಪೂರ್ಣವಾಗಿ ಹಳಗನ್ನಡವಲ್ಲವೆಂಬುದೂ ಅಲ್ಲಲ್ಲಿ ಅತಿ ಆಧುನಿಕವಾದ ಪ್ರಯೋಗಗಳು ಇರುವುದೂ ಎದ್ದು ಕಾಣುತ್ತದೆ. ಈ ಗ್ರಂಥದಲ್ಲಿರುವ ಎರಡು ಪ್ರಸ್ತಾವನೆಗಳಲ್ಲಿ ಆ ಬಗ್ಗೆ ಕೆಲವು ವಿವರಗಳಿವೆ.

ಶೈಲಿಯಲ್ಲಿ ಹೊಸತನವಿರಬೇಕು, ಗದ್ಯದಲ್ಲಿ ಕಾವ್ಯಗಳ ಸ್ವಾರಸ್ಯವನ್ನು ತುಂಬ ಬೇಕು ಎಂಬ ಹಂಬಲದಲ್ಲಿ ಮುಳುಗಿ ಮುದ್ದಣನ ದೃಷ್ಟಿ ಹೆಚ್ಚಾಗಿ ಶಬ್ದಗಳ ಕಡೆಗೆ ತಿರುಗಿತು. ಕವಿಕರ್ಮದಲ್ಲಿ ಶಬ್ದಕಲ್ಪವೆನ್ನುವುದು ಒಂದಂಶ ಮಾತ್ರ. ಧ್ವನಿ ಮತ್ತು ಔಚಿತ್ಯಗಳ ಕಡೆಗೂ ಕವಿ ಅಷ್ಟೇ ಗಮನವನ್ನು ನೀಡಿದ್ದರೆ ಅವನ ಕಾವ್ಯಗಳಲ್ಲಿ ಇನ್ನೂ ಹೆಚ್ಚು ಸತ್ವ ತುಂಬಿಕೊಳ್ಳುತ್ತಿತ್ತು. ಇದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕೆ ಅನುಭವದ ಮತ್ತು ವಯಸ್ಸಿನ ಸಹಾಯ ಅಗತ್ಯವಾಗಿತ್ತು. ಅಂಥ ಪ್ರತಿಭೆಯ ಫಲ ಹಸ್ತಗತವಾಗುವ ಹೊತ್ತಿಗೆ ಈ ಕವಿಯ ಬಾಳೇ ಕೊನೆಯಾಯಿತು. ಇದು ಕನ್ನಡನಾಡಿನ ದುರಂತ.

ಈ ಮುದ್ದಣ ಪದಪ್ರಯೋಗ ಕೋಶದಲ್ಲಿ ಮುದ್ದಣನು ಉಪಯೋಗಿಸುವ ಶಬ್ದಗಳಿಗೆ ಅವನ ಗ್ರಂಥಗಳಲ್ಲಿ ಕಂಡುಬರುವ ಅರ್ಥಗಳನ್ನು ಮಾತ್ರ ಸೂಚಿಸಲಾಗಿದೆ. ಇತರ ಅರ್ಥಗಳನ್ನು ನೀಡಿಲ್ಲ. ಒಂದೇ ಸ್ವರೂಪದ ಶಬ್ದವು ಕ್ರಿಯಾಪದವಾಗಿಯೂ ನಾಮಪದವಾಗಿಯೂ ಬೇರೆ ಬೇರೆ ಕಡೆಗಳಲ್ಲಿ ಪ್ರಯೋಗ ಹೊಂದಿದ್ದರೆ ಅವುಗಳಲ್ಲಿ (ಕ್ರಿ), (ನಾ) ಎಂದು ತಿಳಿಸಲಾಗಿದೆ.

ಮುದ್ದಣನ ಎಲ್ಲ ಗ್ರಂಥಗಳಿಗೂ ಸಂಬಂಧಿಸಿದಂತೆ ಈ ಹಿಂದೆ ಮುದ್ದಣ ಭಂಡಾರ ಎಂಬ ಗ್ರಂಥದ ಎರಡು ಸಂಪುಟಗಳಿಗೆ ರಚಿಸಿದ್ದ ಪ್ರಸ್ತಾವನೆಯ ಎರಡು ಭಾಗಗಳನ್ನು ಈ ಕೋಶದ ಪ್ರಾರಂಭದಲ್ಲಿ ಅಳವಡಿಸಿದೆ. ಅದು ಈ ಕೋಶವನ್ನು ಉಪಯೋಗಿಸುವ ಎಲ್ಲರಿಗೂ ಸಹಾಯವಾಗಲಿ ಎಂಬುದು ಉದ್ದೇಶ.

ಓದುಗರು ಮುದ್ದಣನ ಕಾವ್ಯವನ್ನು ಮೆಚ್ಚಿ ಅವುಗಳನ್ನು ಆಸ್ವಾದಿಸಲಿ ಎಂಬುದು ನನ್ನ ಅಭಿಲಾಷೆ.

೧೭. ಕನ್ನಡದಲ್ಲಿ ನಿಘಂಟು ವಿಜ್ಞಾನದ ವ್ಯಾಪ್ತಿ
ಬಗೆಬಗೆಯ ನಿಘಂಟುಗಳು

ಭಾರತೀಯರಿಗೆ ಕಾಶಿರಾಮೇಶ್ವರಗಳು ಪವಿತ್ರ ಕ್ಷೇತ್ರಗಳಾಗಿರುವಂತೆ ನಿಘಂಟುಕಾರರಿಗೆ ಆಕ್ಸ್‌ಫರ್ಡ್ ಪ್ರದೇಶವು ಪವಿತ್ರ ಕ್ಷೇತ್ರವಾಗಿದೆ. ಅಲ್ಲಿರುವ ವಿಶ್ವವಿದ್ಯಾನಿಲಯವು ಇಂಗ್ಲಿಷ್ ಭಾಷೆಯನ್ನು ಅರ್ಥಪೂರ್ಣವಾಗಿ ವಿವರಿಸುವ ಕಾರ್ಯವನ್ನು ಸಮರ್ಥವಾಗಿ ನೆರವೇರಿಸುತ್ತಿದೆ. ವಿಶ್ವದ ಎಲ್ಲೆಡೆಗಳಲ್ಲಿ ಇಂಗ್ಲಿಷ್ ಭಾಷೆಯು ಬೆಳೆಯುತ್ತಿರುವ ರೀತಿಯನ್ನು ತೀವ್ರವಾಗಿ ಗಮನಿಸುವ ಅತಿ ಕಠಿಣ ಕಾರ್ಯವನ್ನು ಅದು ಕೈಗೊಂಡಿದೆ. ೬೦೦ ಜನ ವಿದ್ವಾಂಸರು ವಿಶ್ವದಾದ್ಯಂತ ಈ ಯೋಜನೆಯಲ್ಲಿ ನಿರತರಾಗಿದ್ದಾರೆ. ಪ್ರತಿಯೊಂದು ತಿಂಗಳಿನಲ್ಲಿಯೂ ೧೮೦೦೦ ಹೊಸ ಶಬ್ದಗಳ, ಹೊಸ ನುಡಿಗಟ್ಟುಗಳ, ಹೊಸ ಅರ್ಥಗಳ, ಹೊಸ ಶೈಲಿಯ ದೃಷ್ಟಾಂತಗಳು ಸಂಗ್ರಹಗೊಳ್ಳುತ್ತವೆ. ಒಂದು ಹೊಸ ಶಬ್ದಕ್ಕೆ ಸಾಕಷ್ಟು ಆಧಾರ ದೊರೆತ ಕೂಡಲೆ ನಿಘಂಟು ಶಾಸ್ತ್ರಜ್ಞರಾದ ೧೫೦ ಜನ ವಿಶಿಷ್ಟ ವಿದ್ವಾಂಸರು ಆ ಶಬ್ದದ ಮೂಲವನ್ನೂ ಅರ್ಥವನ್ನು ಕುರಿತು ಪರ್ಯಾಲೋಚನೆಗಳನ್ನು ನಡೆಸುತ್ತಾರೆ. ಈ ವಿದ್ವಾಂಸರು ವಿವಿಧ ಶಾಸ್ತ್ರಗಳಲ್ಲಿ ನಿಷ್ಣಾತರಾಗಿರುವುದರಿಂದ ಹೊಸ ಶಬ್ದದ ಸತ್ವವನ್ನು ಅಳೆಯುವುದು ಅವರಿಗೆ ಸಾಧ್ಯ. ಇವರು ಪರೀಕ್ಷಿಸಿ ಅರ್ಹವೆಂದು ನಿರ್ಧಾರ ಮಾಡಿದ ಶಬ್ದಗಳನ್ನು Oxford Bank of New Wordsನಲ್ಲಿ ಶೇಖರಣೆ ಮಾಡುತ್ತಾರೆ. ಯಾವ ಸಮಯದಲ್ಲಿ ನೀವು ಪರೀಕ್ಷಿಸಿದರೂ, ಈ ಯೋಜನೆಯಲ್ಲಿ ೩೦೦೦ ಹೊಸಪದಗಳು ಚರ್ಚೆಗೆ ಒಳಗಾಗಿರುತ್ತವೆ.

ಒಂದು ಭಾಷೆಯಲ್ಲಿ ಶಬ್ದಗಳು ಹೇಗೆ ಪ್ರಯೋಗವಾಗುತ್ತವೆ? ಅದರ ಸಾಧಾರಣ ಅರ್ಥವೇನು ? ಇಂಥ ಪ್ರಶ್ನೆಗಳಿಗೆ ಅಧಿಕಾರಯುತವಾದ ಉತ್ತರಗಳನ್ನು ನೀಡಲು The British National Corpus ಎಂಬ ೧೦೦ಮಿಲಿಯನ್ ಶಬ್ದಗಳ ಸಂಗ್ರಹವಿದೆ. ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ಎಲ್ಲ ಬಗೆಯ ಬರಹದ ಮತ್ತು ಆಡುಮಾತಿನ ಸಂಗ್ರಹವನ್ನು ಇಲ್ಲಿ ಕಾಣಬಹುದು. ಕಂಪ್ಯೂಟರ್ ಸಹಾಯದಿಂದಲೂ, ಆಧುನಿಕ ವಿಶ್ಲೇಷಣ ವಿಧಾನಗಳ ಸಹಾಯದಿಂದಲೂ ಆಕ್ಸ್‌ಫರ್ಡ್‌ನ ನಿಘಂಟುಕಾರರು ಎಂಥ ಸಂಕೀರ್ಣ ಕ್ಲಿಷ್ಟ ಸಮಸ್ಯೆಗಳನ್ನಾದರೂ ಪರಿಹರಿಸಬಲ್ಲರು. ಅಲ್ಲಿ OWLS ಎಂಬ ಒಂದು ಕೇಂದ್ರವಿದೆ. ಅದು ಗೂಬೆಗಳ ಕೇಂದ್ರವಲ್ಲ. OWLS ಎಂದರೆ, The Oxford Word and Language Service ಇದೊಂದು ಬಹು ಅಪೂರ್ವವಾದ ಶಬ್ದಾರ್ಥ ಸಹಾಯ ಕೇಂದ್ರ. ಉಪಾಧ್ಯಾಯರು, ಲೇಖಕರು, ವಿಶಿಷ್ಟ ಸಂಸ್ಥೆಗಳು ಮತ್ತು ಇತರ ಇಂಗ್ಲಿಷ್ ಭಾಷಾಸಕ್ತರು ಮುಂತಾದ ಎಲ್ಲರ ಪ್ರಶ್ನೆಗಳಿಗೂ

ಉತ್ತರವನ್ನು ಕಳುಹಿಸುತ್ತಾರೆ. ೧೫೦ ವರ್ಷಗಳ ಕಾಲ ಪ್ರಾಮಾಣಿಕರಾದ ವಿದ್ವಜ್ಜನರು ನಡೆಸಿದ ಪ್ರಯತ್ನಗಳಿಂದ ನಿಘಂಟು ಪ್ರಕಟನೆಗೆ ಸೂಕ್ತವಾದ ಲಿಪಿಸ್ವರೂಪ, ಪುಟಗಳ ಡಿಸೈನು, ಸರಿಯಾದ ಮುದ್ರಣದ ಕಾಗದ, ಬೈಂಡಿಂಗ್ - ಇವುಗಳ ಬಗ್ಗೆಯೂ ಶಬ್ದಾರ್ಥಗಳ ನಿಸ್ಸಂದಿಗ್ಧವಾದ ಸೂತ್ರೀಕರಣದ ಬಗ್ಗೆಯೂ ಶಬ್ದಾರ್ಥಗಳ ಸ್ವರೂಪ ನಿರೂಪಣೆಯ ಬಗ್ಗೆಯೂ ವಿಶ್ವಕೋಶದಲ್ಲಿ ಸಿಗುವಷ್ಟು ವಿಷಯಗಳನ್ನು ತಲಪಿಸುತ್ತಾರೆ. CD-ROM ಎಂದರೆ Compact disc read only memory ಎಂಬ ಸಿದ್ಧಸಾಧನದ ಮೂಲಕ ಪ್ರಪಂಚದಲ್ಲಿ ಬೇರೆಲ್ಲಿಯೂ ದೊರಕದ ವಿಷಯ ಸಂಗ್ರಹವನ್ನು ನಾವು ಪಡೆಯಬಹುದು.

Oxford ಪ್ರಕಟಿಸುವ Little Oxford Dictionary ಎಂಬ ಚಿಕ್ಕ ನಿಘಂಟಿನಲ್ಲಿ ಕೂಡ NEW WORDS SURVEY ಎಂಬ ವಿಭಾಗದಲ್ಲಿ ೪೦೦ ಹೊಸ ಶಬ್ದಗಳ ಪರಿಚಯವನ್ನು ಮುದ್ರಿಸಿದ್ದಾರೆ. biogas, biome, biopic, ecocide, growbag, parador, reskill, targa ಮುಂತಾದ ಹೊಸ ಪದಗಳನ್ನು ನಾವಿಲ್ಲಿ ಕಾಣಬಹುದು. ಆ ಶಬ್ದಗಳ ಅರ್ಥವನ್ನೂ ನೀಡಲಾಗಿದೆ.

ಹೀಗೆ ಇಂಗ್ಲಿಷ್ ನಿಘಂಟು ಶಾಸ್ತ್ರ ಬೆಳೆದು ಎಲ್ಲ ಭಾಷೆಗಳಿಗೂ ಮಾರ್ಗದರ್ಶಕವಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಆಗಿರುವ ಈ ಬಗೆಯ ಬೆಳವಣಿಗೆಯನ್ನು ಗಮನಿಸಿದಾಗ, ಕನ್ನಡದಲ್ಲಿ ಏನೇನು ಬೆಳವಣಿಗೆ ಆಗಿದೆ ನೋಡೋಣ ಎಂದು ಅಪೇಕ್ಷೆಯುಂಟಾಗುವದು ನ್ಯಾಯವೇ. ಹಾಗೆ ಚಾರಿತ್ರಿಕವಾಗಿ ಕನ್ನಡ ಭಾಷೆಯ ಬೆಳವಣಿಗೆಯನ್ನು ಗಮನಿಸಿದಾಗ ನಮಗೆ ರೆ. ಫರ್ಡಿನಾಂಡ್ ಕಿಟ್ಟೆಲ್ ಮಾಡಿರುವ ಕಾರ್ಯವನ್ನು ಕಾಣುವ ತನಕ ವೈಜ್ಞಾನಿಕವಾಗಿ ಯಾವ ವಿಶಿಷ್ಟ ಗ್ರಂಥಗಳೂ ಕಾಣಬರುವುದಿಲ್ಲ. ನಿಘಂಟುಗಳು ಎಂಬ ಹೆಸರಿನ ಅನೇಕ ಪುಸ್ತಕಗಳು ಕಂಡು ಬರುತ್ತವೆ ಎಂಬುದು ನಿಜ. ಆ ಪುಸ್ತಕಗಳ ಪರಂಪರೆಗೆ ಸಾವಿರ ವರ್ಷದ ಚರಿತ್ರೆ ಇರವುದೂ ನಿಜ. ಆದರೆ ಭಾಷೆಯನ್ನು ಇತರ ದೇಶಗಳ ಭಾಷೆಯ ಹೋಲಿಕೆಯಲ್ಲಿಟ್ಟು ವ್ಯಾಸಂಗ ಮಾಡಿರುವ ವೈಜ್ಞಾನಿಕ ಪ್ರಯತ್ನಗಳು ಕನ್ನಡದಲ್ಲಿ ಇಲ್ಲವೇ ಇಲ್ಲ. ಇಂಗ್ಲಿಷ್ ಭಾಷೆಯ ಲೇಖನಗಳು ೧೯ನೆಯ ಶತಮಾನದ ದ್ವಿತೀಯಾರ್ಧದಲ್ಲಿ ರಚನೆಗೊಂಡಿವೆ. ಕನ್ನಡ ಭಾಷೆಯ ಬಗ್ಗೆ ವೈಜ್ಞಾನಿಕವಾದ ಆಲೋಚನೆ ಬೆಳೆದುದೇ ಈಚೆಗೆ; ನಿಘಂಟುಗಳ ವಿಚಾರ ಮತ್ತೂ ಈಚೆಗೆ.

ಈಗ ಎಷ್ಟೊಂದು ನಿಘಂಟುಗಳು

ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಕಟವಾದ ಕನ್ನಡ-ಕನ್ನಡ ಬೃಹತ್ ನಿಘಂಟಿನ ಪ್ರಕಟಣೆ ಒಂದು ಮೈಲಿಗಲ್ಲಾಗಿದೆ. ಅದು ಸಂಪೂರ್ಣವಾಗಿ ಪ್ರಕಟವಾಗುವುದಕ್ಕೆ ಮುಂಚೆಯೇ ಕನ್ನಡ ಜನತೆಯ ಅಪೇಕ್ಷೆಯಂತೆ ಪ್ರಕಟವಾದ ಕನ್ನಡ ಸಂಕ್ಷಿಪ್ತ ನಿಘಂಟಿನ ಪ್ರಕಟಣೆಯೂ ಒಂದು ನೆನಪಿಡಬೇಕಾದ ಘಟ್ಟ. ಅದರ ೫೦,೦೦೦ ಪ್ರತಿಗಳು ಬಹುಬೇಗ ಮಾರಾಟವಾಗಿ ಅದು ಮತ್ತೆ ಮರುಮುದ್ರಣವಾದ ಕಥೆ ಕನ್ನಡಿಗರಿಗೆ ನೆನಪಿರಬಹುದು. ಕನ್ನಡ ರತ್ನಕೋಶದ ಒಂದು ಲಕ್ಷ ಪ್ರತಿಗಳು ಬಹುಬೇಗ ಮಾರಾಟವಾದುವು. ಮತ್ತೆ ಸರಕಾರದ ಪುಸ್ತಕ ಪ್ರಾಧಿಕಾರದ ಕಡೆಯಿಂದ ಇನ್ನೊಂದು ಲಕ್ಷ ಪ್ರತಿಗಳ ಮಾರಾಟವಾಯಿತು.

ಹೀಗೆ ಕನ್ನಡ ಭಾಷೆಯ ಬಗ್ಗೆ ಜನರಲ್ಲಿ ಆಸಕ್ತಿಯು ಹೆಚ್ಚುವಂತೆ ಮಾಡಿದ ಈ ನಿಘಂಟು ರಚನೆಯ ಕಾರ್ಯವನ್ನು ಒಂದು ಚಾರಿತ್ರಿಕ ಘಟನೆ ಎಂದು ಪರಿಗಣಿಸಬೇಕಾಗಿದೆ.

ಈಗ ನಾಡಿನಲ್ಲಿ ನಿಘಂಟುಗಳ ಬಗ್ಗೆ ಜನರಲ್ಲಿ ಎಚ್ಚರಿಕೆ ಮೂಡಿದೆ. ಆಸಕ್ತಿ ಹೆಚ್ಚಾಗಿದೆ. ಆದುದರಿಂದ ಅನೇಕ ವಿದ್ವಾಂಸರು ಅವರವರ ವ್ಯಾಸಂಗದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ನಿಘಂಟುಗಳನ್ನು ಪ್ರಕಾಶ ಪಡಿಸುತ್ತಿದ್ದಾರೆ. ನಿಘಂಟು ನಿರ್ಮಾಣ ಎಂದೂ ಸುಲಭದ ಕೆಲಸವಲ್ಲ. ಅದಕ್ಕೆ ಅನೇಕ ವರ್ಷಗಳ ಅಭ್ಯಾಸ, ವ್ಯಾಸಂಗ, ತಡೆಯಿಲ್ಲದ ಕಾರ್ಯೋನ್ಮುಖತೆ - ಇವು ಅತ್ಯಗತ್ಯ. ಒಟ್ಟು ಕನ್ನಡ ಭಾಷೆಯ ಒಂದು ಸರ್ವೇಕ್ಷಣ ನಡೆದರೆ, ಎಷ್ಟೋ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ. ಆದರೆ ಕನ್ನಡದಲ್ಲಿ ಅದು ಸಾಧ್ಯವಾಗಿಲ್ಲ. ಅದಕ್ಕೆ ಅಪಾರ ಹಣವೂ, ಅನೇಕ ವಿದ್ವಾಂಸರ ನೆರವೂ, ಸರಕಾರದ ಬೆಂಬಲವೂ ಬೇಕು. ಇದನ್ನು ಸಾಧಿಸಬಲ್ಲ ಜನನಾಯಕರ ಆಸಕ್ತಿಯೂ ಇರಬೇಕು. ಭಾಷೆಯ ಬಗ್ಗೆ ಈ ಎಲ್ಲವೂ ಒಟ್ಟುಗೂಡುವುದು ನಾಡಿನ ಪುಣ್ಯದಿಂದ. ಆ ಕಾಲಕ್ಕೆ, ಅಂಥ ಜನರಿಗೆ ಕನ್ನಡ ದೇಶ ಕಾಯಬೇಕಾಗಿದೆ.

ಆದರೂ ಈಗ ಆಗುತ್ತಿರುವ ಕಾರ್ಯಸಾಧನೆ ಅಲ್ಪವಾದುದೇನೂ ಅಲ್ಲ. ಆದುದರಿಂದ ಅಂಥ ಸಾಧನೆಗಳಲ್ಲಿ ಕೆಲವನ್ನು ಈ ಲೇಖನದಲ್ಲಿ ಓದುಗರಿಗೆ ಪರಿಚಯ ಮಾಡಲಾಗಿದೆ.

I. ಕನ್ನಡ ಜಾನಪದ ಕೋಶ : ಪ್ರಧಾನ ಸಂಪಾದಕ ಎಚ್.ಎಲ್. ನಾಗೇಗೌಡ

ಕರ್ನಾಟಕ ಜಾನಪದ ಪರಿಷತ್ತು ಬಹು ಪ್ರಯೋಜನಕರವಾದ ಅನೇಕ ಕಾರ್ಯಗಳನ್ನು ನೆರವೇರಿಸುತ್ತಿದೆ. ಈ ಜಾನಪದ ನಿಘಂಟಿನ ಪ್ರಕಟಣೆ ಅಂಥ ಪ್ರಯೋಜನಕರವಾದ ಕಾರ್ಯಗಳಲ್ಲಿ ಬಹು ಮುಖ್ಯವಾದುದು. ಅನೇಕ ಅನುಭವಸ್ಥ ವಿದ್ವಾಂಸರ ನೆರವಿನಿಂದ ಸಿದ್ಧವಾಗಿರುವ ಈ ನಿಘಂಟು ಜಾನಪದ ಜಗತ್ತಿನ ಬಹು ಮುಖ್ಯವಾದ ಪ್ರಕಟಣೆ. ಜಾನಪದ ಕ್ಷೇತ್ರವು ಭಾಷೆಯ ಅಭ್ಯಾಸಕ್ಕೆ ತುಂಬ ನೆರವು ನೀಡುವ ಕ್ಷೇತ್ರ. ಅಲ್ಲಿಯ ಭಾಷೆಯಲ್ಲಿ ವಿಪುಲವಾದ ಶಬ್ದ ಸಂಪತ್ತಿದೆ. ಅಲ್ಲಿಯ ನುಡಿಗಟ್ಟುಗಳ, ಜಾಣ್ನುಡಿಗಳ ನಿರ್ಮಾಣದಲ್ಲಿ ಕುರಿತೋದದ ಪರಿಣತಮತಿಗಳು ತಮ್ಮ ಅನುಭವಸಾರವನ್ನು ತುಂಬಿದ್ದಾರೆ. ಗಾದೆ, ಬೈಗಳು, ಒಗಟು ಇವುಗಳ ಅರ್ಥ ವಿವರಣೆ ಬಹು ನವಿರಾದ ಕೆಲಸ. ಈ ಕೆಲಸವನ್ನು ಶ್ರಮವಹಿಸಿ ನಿರ್ವಹಿಸಿದ್ದಾರೆ. ಈ ನಿಘಂಟಿನಲ್ಲಿ ೧೫,೨೩೫ ಮುಖ್ಯೋಲ್ಲೇಖಗಳು, ೮೬೦ ನುಡಿಗಟ್ಟುಗಳು, ೨೨೫೦ ಗಾದೆಗಳೂ, ೪೧ ಒಗಟುಗಳು, ३೦ ಬೈಗುಳಗಳೂ ನಿರೂಪಿತವಾಗಿವೆ. ಗ್ರಾಮೀಣ ಜೀವನಕ್ಕೆ, ವ್ಯವಸಾಯ ವೃತ್ತಿಗೆ ಅಗತ್ಯವಾದ ಉಪಕರಣಗಳ ಚಿತ್ರ ಸಂಪುಟ ಒಂದು ಇದರಲ್ಲಿ ಕೂಡಿಕೊಂಡಿದೆ. ಈ ಕೋಶ ರಚನೆಗೆ ಸಂಬಂಧಿಸಿದಂತೆ ಅನುಸರಿಸಿದ, ನಿಯಮಗಳನ್ನು ಪ್ರಸ್ತಾವನೆಯಲ್ಲಿ ನಿರೂಪಿಸಲಾಗಿದೆ. ಚಿತ್ರ ಸಂಪುಟದಲ್ಲಿ ಶ್ರೀ ಕೆ. ವಿಠಲಭಂಡಾರಿಯವರು ಎಲ್ಲ ಚಿತ್ರಗಳನ್ನು - ಜಾನಪದದ ಮರಮುಟ್ಟುಗಳು, ವಸ್ತು ವಸ್ತ್ರಾದಿಗಳು, ಸಾಮಾನು ಸರಂಜಾಮುಗಳು - ಇವುಗಳನ್ನು ಅಂದವಾಗಿ ಸ್ವಾಭಾವಿಕವಾಗಿರುವಂತೆ ರಚಿಸಿದ್ದಾರೆ. ಇದರ ನಿರ್ಮಾಣಕ್ಕೆ ಸಂಪಾದಕ ಸಮಿತಿಯವರು ೧೦ ವರ್ಷಗಳ ಕಾಲ ದುಡಿದಿದ್ದಾರೆ. ಅವರ ಶ್ರಮ ಸಾರ್ಥಕವಾಗಿದೆ.

ಇಂಥ ನಿಘಂಟುಗಳ ನಿರ್ಮಾಣ ಮಾಡುವಾಗ, ನಾವು ಗಮನಿಸಬೇಕಾದ ಮುಖ್ಯಾಂಶಗಳು ಕೆಲವಿವೆ. ಕನ್ನಡ ಗ್ರಾಮೀಣಭಾಷೆಗೆ ಪರಭಾಷೆಯ ಶಬ್ದಗಳು ಬಂದು ಹೇಗೆ ಸೇರಿಕೊಂಡಿವೆ ಎಂಬುದೊಂದು. ಗಾದೆಗಳನ್ನು ಜನ ತಮ್ಮ ಉಪಯೋಗಕ್ಕೆ ಹೇಗೆ ತಿರಿಚುತ್ತಾರೆ ಎಂಬುದು ಮತ್ತೊಂದು. ಒಗಟುಗಳ ಜಾಣತನವಲ್ಲಿ ಸೃಷ್ಟಿ ಶೀಲತೆಯ ಪಾತ್ರವೇನು? ಸ್ತ್ರೀಯರ ಆಡುಮಾತಿಗೂ, ಪುರುಷರ ಆಡುಮಾತಿಗೂ ಇರುವ ಸ್ಪಷ್ಟ ವ್ಯತ್ಯಾಸಗಳಾವುವು?

ಶಿಷ್ಟ ಭಾಷೆಯಿಂದ ಆಯ್ದ ಶಬ್ದಗಳ ಪ್ರಯೋಗದಲ್ಲಿ ಯಾವ ರೀತಿಯ ಭಾಷಿಕ ಬದಲಾವಣೆಗಳಾಗುತ್ತವೆ, ಮುಂತಾಗಿ ಪರಿಶೀಲನೆ ಮುಖ್ಯ. ನಿಘಂಟಿಗೆ ಪ್ರವೇಶದಲ್ಲಿ ಒಂದು ಭಾಷಾ ಶಾಸ್ತ್ರ ಸಂಬಂಧಿಯಾದ ಪೀಠಿಕೆಯನ್ನು ಸೇರಿಸಿದರೆ ಬಹು ಪ್ರಯೋಜನಕಾರಿಯಾಗುತ್ತದೆ. ಉದಾಹರಣೆಗೆ ಒಂದು ಶಬ್ದವನ್ನು ನೋಡಿ **ದಂಮುರ್ಗಿ**. ಒಂದು ಗಾದೆಯನ್ನು ನೋಡೋಣ. **'ಎಂಟು ವರ್ಷಕ್ಕೆ ನನ್ನ ಮಗ ದಂಟು ಎಂದ'** ಎಂಬ ಗಾದೆ ಹೇಗೆ ಬದಲಾಗಿದೆ. (ನಿಘಂಟು ನೋಡಿ) ಇಂಥ ಕೆಲವು ವಿವರಗಳನ್ನು ಶಾಸ್ತ್ರ ರೀತಿಯಲ್ಲಿ ಅಭ್ಯಾಸ ಮಾಡಿ ಒಂದು ವಿಸ್ತಾರವಾದ ಪೀಠಿಕೆಯನ್ನು ಸೇರಿಸಬೇಕಾದ ಅಗತ್ಯವಿದೆ. ಜಾನಪದದ ಬೃಹತ್ ನಿಘಂಟಿನ ಯೋಜನೆ ಒಂದು ರೂಪ ಪಡೆಯುತ್ತಿದೆಯಂತೆ. ಅದರ ಸ್ವರೂಪದ ಬಗ್ಗೆ ಆಳವಾಗಿ ಪರಿಶೀಲಿಸಿ ನಾಡಿನ ಎಲ್ಲೆಡೆಯ ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಆ ಯೋಜನೆಗಳನ್ನು ರೂಪಿಸಿ ಸಾರ್ಥಕ ಸಂಪೂರ್ಣ ನಿಘಂಟನ್ನು ಪ್ರಕಟ ಮಾಡುವ ಯೋಜನೆ ಬೇಗ ಪ್ರಾರಂಭಗೊಂಡು, ಸಾಧ್ಯವಾದಷ್ಟು ಬೇಗ ಪರಿಸಮಾಪ್ತಿಗೊಳ್ಳಲಿ.

II. ವೀರಶೈವ ಪಾರಿಭಾಷಿಕ ಪದಕೋಶ : ಸಂ. ಡಾ|| ವಿದ್ಯಾಶಂಕರ

ಇದೊಂದು ಅಗತ್ಯವಾಗಿ ಬೇಕಾಗಿದ್ದ ನಿಘಂಟು. ವೀರಶೈವ ವಚನಗಳ ಇತರ ಸಾಹಿತ್ಯ ಪ್ರಕಾರಗಳ ಆಳವಾದ ವ್ಯಾಸಂಗವನ್ನು ಕೈಗೊಳ್ಳುವವರಿಗೆ ಅನೇಕ ಪಾರಿಭಾಷಿಕ ಶಬ್ದಗಳು ಎದುರಾಗುತ್ತವೆ. ಅವುಗಳ ಅರ್ಥವು ಸ್ಪಷ್ಟವಾಗುವ ತನಕ ವಚನ ಭಾಗಗಳ ಸಂಪೂರ್ಣ ಸ್ವಾರಸ್ಯ ಮಾನದಟ್ಟಾಗುವುದಿಲ್ಲ. ವೀರಶೈವ ಪೂಜಾವಿಧಾನ, ತತ್ವ ನಿರೂಪಣೆ, ಚಾರಿತ್ರಿಕ ಬೆಳವಣಿಗೆ ಇವುಗಳಲ್ಲಿ ಪಾರಿಭಾಷಿಕ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳೂ, ಛಾಯಾಂತರಗಳೂ ಅಲ್ಲಲ್ಲಿ ಕಾಣಬರುತ್ತವೆ. ಅವುಗಳ ಸ್ಪಷ್ಟ ಚಿತ್ರ ಬೇಕಾದಾಗ ಓದುಗ ಯಾರನ್ನು ಆಶ್ರಯಿಸಬೇಕೆಂಬುದೇ ಕಷ್ಟವಾಗಿತ್ತು. ಈಗ ಸ್ವಲ್ಪಮಟ್ಟಿಗೆ ಆ ಕಷ್ಟ ಪರಿಹಾರವಾಗಿದೆ. ಆದರೆ **ಸಾದಾಖ್ಯ, ಪುರಾತನರು, ಯೋಗ, ಆರುಚಕ್ರ** ಮುಂತಾದ ಕಡೆಗಳಲ್ಲಿ ಸ್ಪಷ್ಟವಾದ ವಿವರಗಳು ಸಂಪೂರ್ಣವಾಗಿರಬೇಕು. ಇಲ್ಲದಿದ್ದರೆ ಆ ವಿವರಗಳು ಸಿಕ್ಕುವ ಶಬ್ದದ ಕಡೆಗೆ 'Cross reference' ನೀಡಬೇಕು. ನಿಘಂಟು ನಿರ್ಮಾಣದ ಶಾಸ್ತ್ರವನ್ನು ಅವಲಂಬಿಸಿದ್ದರೆ ಇನ್ನೂ ಹೆಚ್ಚು ಉಪಯುಕ್ತವಾಗುತ್ತಿತ್ತು.

III. ಸಾಂಸ್ಕೃತಿಕ ಪದಕೋಶ – ೧ : ಲೇ. ಡಾ|| ಮಂಜನಾಥ ಬೇವಿನ ಕಟ್ಟಿ

ಜಾನಪದ ದೇವತೆಯಾದ ಮೈಲಾರ ಲಿಂಗನನ್ನು ಕುರಿತ ಒಂದು ಸ್ಥೂಲ ಅಧ್ಯಯನವನ್ನು

ಈ ಪುಸ್ತಕದಲ್ಲಿ ಕಾಣಬಹುದು. ಮೈಲಾರ ಲಿಂಗನ ಮೂಲಸ್ಥಳ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ಅದರ ಹೆಸರೇ ಮೈಲಾರ. ಇಲ್ಲಿಂದ ಹೊರಟು ಈ ದೈವವು ಬಹು ವಿಸ್ತಾರವಾದ ಪ್ರದೇಶದಲ್ಲಿ ವ್ಯಾಪಕವಾಗಿ ಪ್ರಭಾವವನ್ನು ಹೊಂದಿದೆ. ಈ ಪ್ರಭಾವವಿರುವ ಪ್ರದೇಶಗಳ ಒಂದು ಸ್ಥೂಲ ಭೂಪಟವನ್ನು ತಯಾರಿಸಿದ್ದರೆ, ಅಭ್ಯಾಸಕ್ಕೆ ತುಂಬ ಅನುಕೂಲವಾಗುತ್ತಿತ್ತು. ಮೈಲಾರ ಲಿಂಗನ ಹಬ್ಬ ಹರಿದಿನ, ಪೂಜೆ ಉತ್ಸವಗಳ ವಿವರವನ್ನು ಶ್ರೀ ಮಂಜುನಾಥರು ನೀಡಿದ್ದಾರೆ. ಈ ದೈವದ ವ್ಯಾಪ್ತಿಯ ಬಗ್ಗೆ ಅವರಿಗೆ ಚೆನ್ನಾದ ಪರಿಜ್ಞಾನವಿದೆ. ಆದುದರಿಂದಲೇ 'ಇಲ್ಲಿಯ ಅಧ್ಯಯನವು ಆಳವಾದ ಹಾಗೂ ಗಂಭೀರವಾದ ಪ್ರಯತ್ನಗಳಿಂದ ಕೂಡಿದ್ದು ಎಂದು ಹೇಳಲು ಕಷ್ಟ' ಎಂದು ಸೂಚಿಸಿ ಈ ಪುಸ್ತಕದಲ್ಲಿ ಮೈಲಾರಲಿಂಗನ ಸಂಪ್ರದಾಯದಲ್ಲಿ ಬರುವ ಸಾಂಸ್ಕೃತಿಕ ಪದಗಳನ್ನು ಅಕಾರಾದಿಯಾಗಿ ಪರಿಚಯಿಸಿದ್ದಾರೆ. ಮೈಲಾರಲಿಂಗನ ಕಥೆಗೆ ಸಂಬಂಧಿಸಿದ ಆಚರಣೆಗಳ, ವೇಷಗಳ, ಸಾಧನಗಳ ಸುಂದರ ಚಿತ್ರಗಳ ವಿಭಾಗವನ್ನು ಸೇರಿಸಿದ್ದಾರೆ. ಬರವಣಿಗೆ ಸರಳವಾಗಿ ಸ್ಪಷ್ಟವಾಗಿದೆ. ಇದನ್ನೇ ಮುಂದುವರಿಸಿ ಮೈಲಾರ ಲಿಂಗನ ಸಂಪೂರ್ಣ ಚರಿತ್ರೆಯನ್ನು, ಸಾಮಾಜಿಕ ವ್ಯವಹಾರದಲ್ಲಿ ಧಾರ್ಮಿಕ ಜೀವನದಲ್ಲಿ ಆ ದೈವದ ಪ್ರಭಾವವನ್ನು ವಿವರಿಸುವ ಒಂದು ಗ್ರಂಥವನ್ನು ರಚಿಸುವುದು ಕನ್ನಡಕ್ಕೆ ಮಾಡಿದ ದೊಡ್ಡ ಕೊಡುಗೆಯಾಗುತ್ತದೆ. ಆ ಕಡೆ ಲೇಖಕರು ಗಮನಕೊಡಬೇಕು. ಅಂಥ ಗ್ರಂಥವನ್ನು ರಚಿಸಲು ಶಕ್ತರಾಗಿದ್ದಾರೆಂಬುದು ಸ್ಪಷ್ಟ.

IV. ಸಾಂಸ್ಕೃತಿಕ ಪದಕೋಶ - ೨ : ಲೇ. ಡಾ|| ವೆಂಕಟೇಶ ಇಂದ್ವಾಡಿ

ಮಂಟೇ ಸ್ವಾಮಿ ಎಂಬ ಜಾನಪದ ನಾಯಕನ ಕಾಲ ಸುಮಾರು ೧೫ನೆಯ ಶತಮಾನ. ಜಾನಪದ ವಿದ್ವಾಂಸರಾಗಿದ್ದ ಜಿ.ಶಂ. ಪರಮಶಿವಯ್ಯನವರು ಬಹು ಹಿಂದೆ **ಮಂಟೆ ಸ್ವಾಮಿ ಕಾವ್ಯ** ಎಂಬ ಗ್ರಂಥವನ್ನು ಸಂಪಾದಿಸಿದ್ದರು. ಈಚೆಗೆ ಮತ್ತೆ ಕೆಲವರು ಅದೇ ಕಾವ್ಯದ ಬೇರೆ ಬೇರೆ ಪಾಠಗಳನ್ನು ಅನುಸರಿಸಿ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಮಂಟೇಸ್ವಾಮಿಯ ಕಾವ್ಯವನ್ನು ಹಾಡುವ ಅವನ ಅನುಯಾಯಿಗಳು ನೀಲಗಾರರು. ಇವರ ಹಾಡುಗಳಲ್ಲಿ ಕಾವ್ಯ, ಪುರಾಣ, ಚರಿತ್ರೆ, ವರ್ತಮಾನ - ಎಲ್ಲ ಮಿಶ್ರಣವಾಗಿವೆ. ಈ ಪರಂಪರೆ ಉತ್ತರ ಕರ್ನಾಟಕದಲ್ಲಿಯೂ ದಕ್ಷಿಣ ಕರ್ನಾಟಕದಲ್ಲಿಯೂ ಪ್ರಚಾರದಲ್ಲಿದೆ. ಈ ಕಾವ್ಯದಲ್ಲಿ ಬರುವ ಅನೇಕ ಪದಗಳನ್ನು ಅಕಾರಾದಿಯಾಗಿ ಜೋಡಿಸಿ ಅವುಗಳ ಅರ್ಥವನ್ನು ತಿಳಿಸಿರುವ ಪುಸ್ತಕ ಇದು. ಆ ಕಾವ್ಯದ ಓದಿಗೆ ಸಹಾಯಕವಾಗಿದೆ. ಅನೇಕ ಪದಗಳ ಸ್ವರೂಪದ ಬಗ್ಗೆ ಚರ್ಚೆಗೆ ಅವಕಾಶವಿದೆ.

V. ವೃತ್ತಿ ಪದಕೋಶ-ನೇಕಾರ : ಲೇ. ಡಾ|| ಸಾಂಬಮೂರ್ತಿ

ಈ ಪುಸ್ತಕದಲ್ಲಿ ಇರುವ ವಿಷಯವು ಕನ್ನಡ ವಿಶ್ವ ವಿದ್ಯಾಲಯದ ಹೊಸ ನಿರ್ದೇಶನದಲ್ಲಿ ಎಲ್ಲಾ ವಿಭಾಗಗಳಿಗೂ ದೊರೆತಿರುವ ಸ್ವತಂತ್ರ ಘಟಕದ ಅಸ್ತಿತ್ವದ ಪರಿಣಾಮವಾಗಿ ಪ್ರಕಟವಾಗಿದೆ. 'ಕರ್ನಾಟಕದ ವೃತ್ತಿ ಪದ ಮಂಜರಿ' ಯೋಜನೆಯ ಅಂಗವಾಗಿ ಈ ನೇಕಾರ ವೃತ್ತಿ ಪದಕೋಶ ನಮಗೆ ದೊರಕಿದೆ. ಇದನ್ನೂ ಈ ಮಾಲೆಯಲ್ಲಿ ಬರುವ ಎಲ್ಲ ಪ್ರಕಟಣೆಗಳನ್ನು ನಾನು ಸ್ವಾಗತಿಸುತ್ತೇನೆ.

ಕನ್ನಡದಲ್ಲಿ ಒಟ್ಟು ದೇಶದ ಭಾಷಾಸರ್ವೇಕ್ಷಣ ನಡೆಯಬೇಕೆಂಬುದನ್ನು ನನ್ನ ಅನೇಕ ದಿನಗಳ ಹಂಬಲ. ಈ ಬಗ್ಗೆ ನಮ್ಮ ಸರಕಾರಕ್ಕೂ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳಿಗೂ ಸ್ವತಃ ತಿಳಿಸಿ ಒತ್ತಾಯ ತರುತ್ತಿದ್ದೇನೆ. ಅದಕ್ಕೆ ಹಣದ ಅಭಾವವಿದ್ದು ಕಾರ್ಯ ಸಾಧ್ಯವಾಗಿಲ್ಲ. ಈಗಲಾದರೂ ಕನ್ನಡ ವಿಶ್ವವಿದ್ಯಾನಿಲಯದ ವೃತ್ತಿಪದಕೋಶದ ಪ್ರಕಟಣೆಗೆ ಏರ್ಪಾಟು ಮಾಡಿರುವುದು ತುಂಬ ಸಂತೋಷದ ವಿಷಯ. ೫೦ ವರ್ಷಗಳ ಹಿಂದೆಯೇ ಈ ಕೆಲಸವನ್ನು ಆಂಧ್ರಪ್ರದೇಶದಲ್ಲಿ ಕೈಗೊಂಡಿದ್ದರು. ಅಲ್ಲಿ ಪ್ರಕಟವಾದ ವ್ಯವಸಾಯ ವೃತ್ತಿಯ ಪದಕೋಶವು ತುಂಬ ಸೊಗಸಾಗಿ ಪ್ರಕಟವಾಗಿತ್ತು. ಈಚೆಗೆ ಅಲ್ಲಿಯೂ ಇದು ಮುಂದುವರೆಯುತ್ತಿಲ್ಲ. ಕನ್ನಡದಲ್ಲಾದರೂ ಈ ಕೆಲಸ ಮುಂದುವರಿಯಲಿ. ಈ ನೇಕಾರ ಮತ್ತು ಕುಂಬಾರರ ವೃತ್ತಿಯನ್ನು ಕುರಿತ ವಿಮರ್ಶೆಯು ಈ ಹಿಂದೆಯೇ ಪ್ರಕಟವಾಗಿದೆ. ಈಗ ಇದು ವೃತ್ತಿ ಪದಮಂಜರಿಯ ಮೂರನೆಯ ಪುಸ್ತಕ. ನೇಕಾರಿಕೆ ಒಂದು ಕಲೆಗಾರಿಕೆಯುಳ್ಳ ವೃತ್ತಿ. ಇದರ ಚರಿತ್ರೆ ಬಹು ದೊಡ್ಡದು. ಆ ವಿವರದ ಬಗ್ಗೆ ಇಲ್ಲೇನೂ ವಿವರಗಳನ್ನು ನಿವೇದಿಸುವ ಪ್ರಯತ್ನವಿಲ್ಲ. ಆದರೆ ಕರ್ನಾಟಕದಲ್ಲಿ ನೇಕಾರರು ಹೆಚ್ಚಾಗಿ ವಾಸಿಸುವ ಎಲ್ಲ ಕಡೆಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಿ ಮಾಹಿತಿಗಳನ್ನು ಸಂಗ್ರಹಿಸಿ ಆ ಶಬ್ದಗಳನ್ನು ವಿವಿಧ ಭಾಗಗಳಲ್ಲಿ ವಿಂಗಡಿಸಲಾಗಿದೆ. ಅಗತ್ಯವೆನಿಸಿದ ನೇಕಾರಿಕೆಯ ಸಾಧನಗಳ ಚಿತ್ರಗಳನ್ನು ಒದಗಿಸಲಾಗಿದೆ. ಇದರಿಂದ ನಮ್ಮ ಭಾಷೆಯ ಶಬ್ದಗಳು ಎಷ್ಟು ಅಳಿದಿವೆ ಎಂಬುದು ಪತ್ತೆಯಾಗಿ ನಮ್ಮ ಶಬ್ದಗಳನ್ನು ಉಳಿಸುಕೊಳ್ಳುವ ಏರ್ಪಾಟೇನು ಎಂಬುದನ್ನು ಪರಿಶೀಲಿಸಬಹುದು. ಇಲ್ಲಿ ೬೦ ಪುಟಗಳ ಶಬ್ದಗಳ ಪಟ್ಟಿ ಮತ್ತು ಅರ್ಥ - ಇವುಗಳ ಜತೆಗೆ ಸುಮಾರು ೩೦ ಪುಟಗಳ ಚಿತ್ರ - ಇವು ತುಂಬ ಸಹಾಯಕವಾಗಿವೆ.

VI. ವಿವಿಧ ವೃತ್ತಿಪದಕೋಶ – ೪ : ಲೇ. ಡಾ|| ಅಶೋಕ ಕುಮಾರ ರಂಜೇರೆ

ಇದು ಹಂಪೆಯ ಕನ್ನಡ ವಿಶ್ವ ವಿದ್ಯಾಲಯವು ಪ್ರಕಟಿಸುತ್ತಿರುವ ಕರ್ನಾಟಕ ವೃತ್ತಿ ಪದ ಮಂಜರಿಯ ನಾಲ್ಕನೆಯ ಸಂಪುಟ. ಇದರಲ್ಲಿ ಗುಡಿಗಾರ, ನೇಕಾರ ಮತ್ತು ಕೊರಚ, ಮೀನುಗಾರ, ಬಳೆಗಾರ, ಉಪ್ಪಾರ, ಈಡಿಗ ಎಂಬ ಏಳು ವೃತ್ತಿಗಳಲ್ಲಿ ನಿರತರಾದವರನ್ನು ನೇರವಾಗಿ ಕಂಡು ಸಂಪಾದಿಸಿರುವ ಸಂಪುಟ ಇದು. ಡಾ|| ಅಶೋಕ್ ಕುಮಾರ್ ರಂಜೇರೆ ಅವರು ಈ ವೃತ್ತಿಯವರು ಇರುವ ಪ್ರದೇಶಗಳಿಗೆ ಪ್ರಯಾಣ ಮಾಡಿ, ಅವರೊಡನೆ ಇದ್ದು ಶಬ್ದಗಳ ಸಂಗ್ರಹವನ್ನು ಮಾಡಿರುವುದಾಗಿ ಹೇಳಿದ್ದಾರೆ. ಆದರೆ ಈ ವೃತ್ತಿಯವರನ್ನು ಕಂಡಾಗ ಕೇಳಬೇಕಾದ ಪ್ರಶ್ನಾವಳಿಯನ್ನು ತಯಾರು ಮಾಡಿದ್ದರೇ ಇಲ್ಲವೇ ಎಂಬುದು ಅನಿಶ್ಚಿತವಾಗಿದೆ. ಈ ವೃತ್ತಿಯವರ ವೃತ್ತಿ ಪರವಾದ ಸಾಧನೆಗಳನ್ನು ಮಾತ್ರ ಕುರಿತು ಕ್ಷೇತ್ರಕಾರ್ಯವನ್ನು ಸೀಮಿತಗೊಳಿಸಿದ್ದಾರೆ. ಅದು ಅಷ್ಟು ಸರಿಯಾಗುವುದಿಲ್ಲ. ಒಂದು ವೃತ್ತಿಯ ಜೊತೆಗೆ ಅವರು ಸಮಾಜ ಜೀವಿಗಳೂ ಆಗಿರುತ್ತಾರಲ್ಲವೇ? ಎಲ್ಲ ಸಮಾಜದೊಡನೆ ಅವರ ಬಾಳಿನಲ್ಲಿ ಏನು ಸಾಮ್ಯ ವೈಷಮ್ಯಗಳು ಕಾಣುತ್ತವೆ ಎಂಬುದನ್ನು ಅಭ್ಯಾಸ ಮಾಡಬೇಕು. ಆದುದರಿಂದಲೇ ಈ ಕೆಲಸ ಮತ್ತು ಬರಹ ಬಹುಕಾಲವನ್ನು ಹಿಡಿಯತಕ್ಕದ್ದು. ಆದರೆ ಕನ್ನಡದಲ್ಲಿ ಈ ಕೆಲಸವೇ ಪ್ರಾರಂಭವಾಗಿರಲಿಲ್ಲವಲ್ಲ! ಆ ದೃಷ್ಟಿಯಿಂದ ಇದನ್ನು ಪ್ರಾರಂಭದ ಪ್ರಯತ್ನವೆಂದು ತಿಳಿದು ಇದಕ್ಕೆ ಇರುವ ಮಾನ್ಯತೆಯನ್ನು ನೀಡಬೇಕು. ಆಯಾ ವೃತ್ತಿಗಳ ಪದಗಳನ್ನು ದಾಖಲಿಸಿರುವುದರ ಜೊತೆಗೆ ಅವುಗಳ ಚಿತ್ರವನ್ನು

ನೀಡಿರುವುದು ಬಹು ಉಪಯುಕ್ತವಾದ ಸಹಾಯ. ಈ ಪದಗಳ ಸಂಕಲನದಲ್ಲಿ ನಾವು ಕಂಡು ಹಿಡಿಯಬಹುದಾದ ಶಿಷ್ಟ ಪದಗಳೂ ಇವೆ. ಅವುಗಳು ನಮಗೆ ನೇರವಾಗಿ ಕೇಳಿದಾಗ ವೃತ್ತಿಯವರು ಉಚ್ಚರಿಸುವ ಪದದ ಶಿಷ್ಟ ರೂಪ ಬೇಗ ತಿಳಿವಳಿಕೆಗೆ ಬರುವುದಾದರೆ ಅಂಥವುಗಳನ್ನು ಕಂಸಗಳಲ್ಲಿ ಹಾಕಿ ಮುದ್ರಿಸಬಹುದು. ಅನುಮಾನವಿದ್ದರೆ '?' ಚಿಹ್ನೆಯನ್ನು ಹಾಕಿ ತಿಳಿವಳಿಕೆ ನೀಡಬಹುದು. ಒಂದೆರಡು ಉದಾಹರಣೆಗಳನ್ನು ಗುರುತಿಸುತ್ತೇನೆ. ಗುಡಿಗಾರರ 'ನುಮ್ಸು' ಶಬ್ದ **ನುಣುಪಿಸು** ಶಬ್ದದ ಗ್ರಾಮ್ಯರೂಪ. **ಗ್ರಾಂಪ್** ಶಬ್ದ ಇಂಗ್ಲಿಷಿನ Clamp ಶಬ್ದದ ತದ್ಭವ. ಇಂಥ ಅನೇಕ ಶಬ್ದಗಳು ನೇರವಾಗಿ ಸಿಕ್ಕಿ ಬೀಳುತ್ತವೆ. ಭಾಷಾ ದೃಷ್ಟಿಯಿಂದ ಈ ಕೆಲಸವನ್ನು ಮುಂದೆ ಮಾಡಬಹುದಾಗಿದೆ.

VII. ಸಂಕೀರ್ಣ ವೃತ್ತಿ ಪದಕೋಶ : ಲೇ. ಡಾ|| ಎಸ್. ಎಸ್. ಅಂಗಡಿ

ಈ ಪುಸ್ತಕವು ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕ ವೃತ್ತಿಪದಮಂಜರಿಯ ೫ನೆಯ ಸಂಪುಟ. ಇದರಲ್ಲಿ ಕುಂಬಾರ, ಚಮ್ಮಾರ, ಡೋಹರ, ಅಗಸ, ಕ್ಷೌರಿಕ, ಹೂಗಾರ, ಗೋಣಿಗ, ಗಾಣಿಗ ಎಂಬ ಎಂಟು ವೃತ್ತಿಯವರು ಉಪಯೋಗಿಸುವ ವೃತ್ತಿಪರ ಪದಗಳನ್ನು ಸಂಗ್ರಹಿಸಿ ಅಕಾರಾದಿಯಾಗಿ ಮುದ್ರಿಸಿ ಅವುಗಳ ಅರ್ಥವನ್ನು ನೀಡಲಾಗಿದೆ. ನಾಗರಿಕ ಜೀವನದಲ್ಲಿ ಮುಳುಗಿ ಹೋಗಿರುವ ಕ್ಷೌರಿಕ ಮತ್ತು ಅಗಸರ ಹತ್ತಿರ ಬೆಂಗಳೂರಿನಂಥ ನಗರದಲ್ಲಿ ಯಾವ ಕನ್ನಡ ಪದಗಳೂ ದೊರಕುವುದೇ ಇಲ್ಲ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿಯೇ ವಿಷಯಗಳೂ, ಪದಗಳೂ ಸಂಗ್ರಹಗೊಳ್ಳಬೇಕು. ಡಾ|| ಅಂಗಡಿಯವರು ಹಾಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಈ ಸಂಕಲನವನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಮತ್ತೊಂದು ಮಾತನ್ನೂ ಅವರು ಸೇರಿಸಿದ್ದಾರೆ. ವೃತ್ತಿ ಪದಗಳು ಆಯಾ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ ಸ್ವರೂಪಕ್ಕೆ ಹೇಗೆ ಸಂಬಂಧಿಸಿವೆ ಎಂಬುದನ್ನು ಗಮನಿಸಲಾಗಿದೆ, ಎಂದು ಹೇಳಿರುವುದು ಈ ಕಾರ್ಯದಲ್ಲಿ ಅವರ ಎಚ್ಚರಿಕೆಯನ್ನು ಸೂಚಿಸುತ್ತದೆ. ಎಲ್ಲ ಸಂಪುಟಗಳಂತೆ ಇದರಲ್ಲಿಯೂ ಸುಮಾರು ೪೦ ಪುಟಗಳ ಚಿತ್ರಗಳ ಅನುಬಂಧವಿದೆ. ಇವುಗಳ ಸಹಾಯದ ಪ್ರಾಮುಖ್ಯವನ್ನು ಮತ್ತೆ ಮತ್ತೆ ಹೇಳಬೇಕು. ಎಷ್ಟು ವರ್ಣಿಸಿದರೂ ಚಿತ್ರದಿಂದ ತಿಳಿಯುವಷ್ಟು ವಿಷಯ ಮಾತಿನಿಂದ ತಿಳಿಯುವುದಿಲ್ಲ. ಈ ಸಹಾಯಕ್ಕೆ ಓದುಗರು ತುಂಬ ಸಂತೋಷಪಡುತ್ತಾರೆ.

ಎಲ್ಲ ವೃತ್ತಿಗಳ ಶಬ್ದಕೋಶಗಳಲ್ಲಿಯೂ ಎಷ್ಟೊಂದು ಇಂಗ್ಲಿಷ್ ಶಬ್ದಗಳು ಒಳಸೇರಿ ಗಟ್ಟಿಯಾಗಿ ನಿಂತಿವೆ ಎಂಬುದು ಆಶ್ಚರ್ಯದ ವಿಷಯ. ಆ ಇಂಗ್ಲಿಷ್ ಶಬ್ದಗಳಿಗೆ ಹಿಂದೆ ಯಾವ ಶಬ್ದವನ್ನು ಹೇಳುತ್ತಿದ್ದರು ಎಂದು ತಿಳಿಯಲು ಪ್ರಯತ್ನ ಬೇಕು. ಈ ಬಗ್ಗೆ ಒಂದು ಟಿಪ್ಪಣಿ ಇದ್ದರೆ ತುಂಬ ಅನುಕೂಲ.

ಕ್ಷೇತ್ರಕಾರ್ಯ ಸುಲಭವಾದ ಕೆಲಸವಲ್ಲ. ಎಷ್ಟೋ ವೇಳೆ ಈ ಕಾರ್ಯಕ್ಕೆ ಸಹಕಾರವೇ ದೊರಕುವುದಿಲ್ಲ. ಜನರನ್ನು ಒಲಿಸಿಕೊಳ್ಳಬೇಕಾದರೆ ಆಯಾ ಸ್ಥಳದ ವಿದ್ಯಾವಂತರ ಸಹಾಯವನ್ನು ಪಡೆಯಬೇಕು. ಅನೇಕ ಸಲ ಅಗತ್ಯಕ್ಕಿಂತ ಹೆಚ್ಚು ಕಾಲವನ್ನು, ಕೆಲವು ಸಲ ದಿನಗಳನ್ನು ವ್ಯರ್ಥವಾಗಿ ಕಳೆಯಬೇಕಾಗುತ್ತದೆ. ಆದರೆ ಇದು ಭಾಷೆಗೆ ಸಂಬಂಧಿಸಿದ ಬಹುಮೂಲ್ಯವುಳ್ಳ

ಕಟ್ಟಡದ ತಳಪಾಯದ ಕೆಲಸ. ಮಣ್ಣು ಮುಚ್ಚಿದ ಮೇಲೆ ತಳಪಾಯ ಯಾರಿಗೆ ಕಾಣುತ್ತದೆ? ಭಾಷೆಯ ಕೆಲಸವೇ ಅಂಥದು. ಇಂಥ ಕಾರ್ಯವನ್ನು ಯೋಜಿಸಿರುವ ಕನ್ನಡ ವಿಶ್ವವಿದ್ಯಾಲಯವು ಮಾಡುತ್ತಿರುವ ಕಾರ್ಯ ಸಾರ್ಥಕವಾದುದು.

VIII. ಪದ ಸಂಚಯ : ಲೇ. ಬಿ. ಆರ್ ಪ್ರಕಾಶ್ ಮತ್ತು ಎನ್. ಮಧುಸೂದನ್

ಕನ್ನಡದಲ್ಲಿ 'ಥೆಸಾರಸ್' ಬಗೆಯ ನಿಘಂಟುಗಳು ಪ್ರಕಟವಾಗಿಲ್ಲ. ಬಹು ಹಿಂದೆ ದಿ। ಹನಸೋಗೆ ಎಂಬ ಲೇಖಕರು ಪ್ರಕಟ ಪಡಿಸಿದ್ದ ಸಣ್ಣ ಪ್ರಮಾಣದ ಪ್ರಯತ್ನದ ನೆನಪಿದೆ. ಈಗ ಆ ಪುಸ್ತಕವು ದೊರೆಯುವುದಿಲ್ಲ. 'ಥೆಸಾರಸ್' ಬಗೆಯ ನಿಘಂಟುಗಳ ರಚನೆಯೂ, ಪ್ರಕಟನೆಯೂ ಸಾಹಸದ ಕೆಲಸ. ಮೊದಲನೆಯದಾಗಿ ಅದಕ್ಕೆ ಬಹಳ ಕಾಲಬೇಕು, ಬಹಳ ಜನ ಬೇಕು. ಇಂಗ್ಲಿಷಿನಲ್ಲಿ ಕೂಡ Roget's Thesaurus ಪ್ರಕಟವಾದ ಮೇಲೆ ಎಷ್ಟು ಬಗೆಯ Thesaurus ಗಳು ಪ್ರಕಟವಾಗಿವೆ ನೋಡಿ. ಏನೇ ಆದರೂ Thesaurus ಬಗೆಯ ನಿಘಂಟುಗಳಂತೂ ಭಾಷೆಯ ಬೆಳವಣಿಗೆಗೆ ಅತ್ಯಗತ್ಯವಾದುವು. ಒಂದು ಭಾಷೆಯನ್ನು ಅರ್ಥವತ್ತಾಗಿ, ಪ್ರಯೋಜನಕರವಾಗಿ, ಪ್ರಭಾವಶಾಲಿಯಾಗಿ ಆಡುಮಾತಿನಲ್ಲಿ ಪ್ರಯೋಗಿಸುವುದಕ್ಕಾಗಲೀ, ಬರಹದಲ್ಲಿ, ಸೃಷ್ಟಿಶೀಲಕೃತಿಗಳಲ್ಲಿ ಉಪಯೋಗಿಸುವುದಕ್ಕಾಗಲೀ ಇಂಥ ಒಂದು ಗ್ರಂಥ ಇರಬೇಕು. ಪ್ರಾರಂಭದ ಮಾತಗಾರಿಕೆಗೆ, ಲೇಖನಕಲೆಗೆ ಇದರ ಸಹಾಯವಿರಲೇಬೇಕು. ಸಾಕಾದಷ್ಟು ಶಬ್ದ ಸಂಪತ್ತು ದೊರಕಿದ ಮೇಲೆ ಇದರ ಉಪಯೋಗವಿಲ್ಲದೇ ಇರಬಹುದು. ಆದರೂ ವಿದ್ಯಾಭ್ಯಾಸದ ಸಮಯದಲ್ಲಿ ಇಂಥ ಒಂದು ಪುಸ್ತಕ ಮೇಜಿನ ಮೇಲೆ ಇದ್ದೇ ತೀರಬೇಕು. ಕನ್ನಡದಲ್ಲಿ ಈ ಬಗೆಯ ಗ್ರಂಥದ ಕೊರತೆ ಇದೆ.

ಈ ಕೊರತೆಯನ್ನು ತುಂಬಲು ಮಾಡಿದ ಪ್ರಯತ್ನ ಈ ಪದಸಂಚಯದ ಪ್ರಕಟಣೆ. ಇದರಲ್ಲಿ ೩೦ ಪುಟಗಳ ಸಾದೃಶ್ಯಾರ್ಥಕ ಪದಕೋಶವಿದೆ. ಜೊತೆಗೆ ಎರಡನೆಯ ಭಾಗವಾಗಿ ೧೩ ಪುಟಗಳ ಇಂಗ್ಲಿಷ್ ಶಬ್ದಗಳಿಗೆ ಕನ್ನಡ ಅರ್ಥಗಳ ಪಟ್ಟಿ ಇದೆ. ಮೂರನೆಯದಾಗಿ ಎಲ್ಲ ಶಬ್ದಗಳ ಅಕಾರಾದಿಯಾದ ಒಂದು ಅನುಬಂಧದ ಪಟ್ಟಿ ಇದೆ. ಯಾವ ಭಾಷೆಯಲ್ಲಿಯೇ ಆಗಲಿ ಸದೃಶವಾದ ಅರ್ಥಗಳುಳ್ಳ ಹೆಚ್ಚು ಶಬ್ದಗಳು ದೊರಕುವುದಿಲ್ಲ. ಆದುದರಿಂದ **ಸಮಾನಾರ್ಥ ನಿಘಂಟು** ಎನ್ನುವುದು ಉಚಿತವಾಗುವುದಿಲ್ಲ. ಸಾಮಾನ್ಯವಾಗಿ **ಸಮೀಪಾರ್ಥ ನಿಘಂಟು** ಎನ್ನುವುದು ಹೆಚ್ಚು ಉಚಿತವಾಗುತ್ತದೆ. ಇಂಥ ನಿಘಂಟುಗಳ ಉಪಯೋಗದಿಂದ ಒಂದು ಶಬ್ದವನ್ನು ಅದರ ಅರ್ಥಕ್ಕೆ ಸರಿಯಾಗಿ ಪ್ರಯೋಗಿಸುವುದು ಹೇಗೆ ಎಂಬುದು ತಿಳಿಯ ಬರುತ್ತದೆ.

ಈ ಪದ ಸಂಚಯದಲ್ಲಿ ವಿವಿಧ ವರ್ಗಗಳಲ್ಲಿ ಪದಗಳನ್ನು ಸಂಗ್ರಹಿಸಲಾಗಿದೆ. 'ಅವಕಾಶ', 'ಅವಸ್ಥೆ', 'ಕ್ರಿಯೆ' 'ನಿರ್ಮಾಣ', 'ಪರಿಗಣನೆ', 'ಭೌತಿಕ - ಬೌದ್ಧಿಕ ಸಂಬಂಧ', 'ಸಂವಹನ ವ್ಯವಸ್ಥೆ', 'ವೈಜ್ಞಾನಿಕ ಪರಿಭಾಷೆ' ಎಂಬ ವರ್ಗಗಳು ಇವು. ಹೀಗೆ ವರ್ಗೀಕರಣ ಮಾಡಲು ಯಾವ ಕಾರಣಗಳು ಮೂಲವಾಗಿವೆ ಎಂಬುದು ಅಸ್ಪಷ್ಟ. ಬೇರೆಯ ವರ್ಗಗಳಿಲ್ಲವೆ ಎಂಬುದಕ್ಕೆ ಉತ್ತರ ಸುಲಭವಲ್ಲ.

ಹೀಗಿದ್ದರೂ ಈ ಪದ ಸಂಚಯದ ಪ್ರಕಟಣೆಯಿಂದ ಕೆಲವು ಪ್ರಯೋಜನಗಳಿವೆ. ಈ ಬಗೆಯ ಇತರ ಪ್ರಯತ್ನಗಳಿಗೆ ಇದು ಪ್ರಚೋದನೆಯನ್ನು ನೀಡುತ್ತದೆ.

ಈ ನಿಘಂಟಿನ ನಡುವೆ ಬರುವ ಯಾದೃಚ್ಛಿಕವಾದ ಇಂಗ್ಲಿಷ್ ಪದಗಳ ಪಟ್ಟಿಯೂ ಅದರಲ್ಲಿರುವ ಶಬ್ದಗಳ ಕನ್ನಡ ಅರ್ಥಗಳೂ ಈ ನಿಘಂಟಿಗೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದು ವಿಚಾರಣೀಯ.

ಶಬ್ದಗಳು ವ್ಯಾಕರಣ ದೃಷ್ಟಿಯಿಂದ ಯಾವ ಗುಂಪಿಗೆ ಸೇರುತ್ತವೆ ಎಂಬುದನ್ನು ಈ ಸಂಕಲನದಿಂದ ಕಂಡುಹಿಡಿಯಲಾಗುವುದಿಲ್ಲ.

ಪುಸ್ತಕವನ್ನು ಅಂದವಾಗಿ ಮುದ್ರಿಸಲಾಗಿದೆ. ಅಕ್ಷರಗಳ ಸ್ಖಾಲಿತ್ಯವಿಲ್ಲದಿರುವುದು ತುಂಬಾ ಸಂತೋಷದ ವಿಷಯ. ಮತ್ತಷ್ಟು ವ್ಯವಧಾನ ಪಡೆದು ಹೆಚ್ಚು ಶಬ್ದ ಸಂಗ್ರಹವಿರುವ ಗ್ರಂಥದ ಪ್ರಕಟಣೆಗೆ ಇದು ಬುನಾದಿಯಾಗಿದೆ ಎಂದು ಖಚಿತವಾಗಿ ಹೇಳಬಹುದು.

IX. ಮೋಯ ಮಲೆಯಾಳ-ಕನ್ನಡ ಪದಕೋಶ : ಲೇ. ಅಮೃತ ಸೋಮೇಶ್ವರ

ಇದೊಂದು ಹೊಸ ಸಂಶೋಧನೆಯಿಂದ ಮೂಡಿ ಬಂದಿರುವ ವಿಶಿಷ್ಟವಾದ ನಿಘಂಟು. ದಕ್ಷಿಣ ಕನ್ನಡದ ಸಾಂಸ್ಕೃತಿಕ ಜೀವನದಲ್ಲಿ ೫೦ ವರ್ಷ ಸಕ್ರಿಯವಾಗಿ ಭಾಗವಹಿಸಿದ ನಾಟಕಕಾರ, ಸಂಶೋಧಕ, ಶ್ರೀ ಅಮೃತ ಸೋಮೇಶ್ವರ ಅವರು ನಿವೃತ್ತ ಪ್ರಾಧ್ಯಾಪಕರು. ಮೋಯ ಮಲೆಯಾಳ ಅವರ ತಾಯಿನುಡಿ. ಈ ಭಾಷೆಯ ಪರಿಸ್ಥಿತಿ ವಿಚಿತ್ರವಾಗಿದೆ. ಕನ್ನಡದವರು ಇದನ್ನು ಅನ್ಯಭಾಷೆ ಎನ್ನುತ್ತಾರೆ. ಮಲೆಯಾಳಿಗಳು ಇದನ್ನು ಗಡಿನಾಡಿನ ಭಾಷೆ ಎಂದು ಕರೆಯುತ್ತಾರೆ. ವೀರ ಮಲೆಯಾಳಿಗಳು ಇದನ್ನು ಕ್ಷುಲ್ಲಕ ಭಾಷೆ ಎಂದು ಕರೆಯುತ್ತಾರೆ. ಹೀಗಾಗಿ ಆ ಕಡೆ ಮಲೆಯಾಳಿಗಳಿಗೂ ಈ ಕಡೆ ಕನ್ನಡಿಗರಿಗೂ ಬೇಡವಾಗಿ ಸೊರಗುವ ಭಾಷೆಯನ್ನು ತಾಯಿನುಡಿಯಾಗಿ ಬಳಸುವ ಒಂದು ಜನಾಂಗವೇ ಇದೆ. ಮೋಯವೆಂದರೆ ಬೋವಿ. ಅವರ ಜಗತ್ತಿನಲ್ಲಿ ಭಗವತೀ ಆರಾಧನೆ, ಮೀನುಗಾರಿಕೆಯ ಸಾಹಸದ ಬಾಳು ಇವುಗಳು ವ್ಯಾಪ್ತವಾಗಿವೆ. ಈ ಭಾಷೆಯು ಕನ್ನಡ, ತುಳು, ಬ್ಯಾರಿ, ಕೊಡವ ಮುಂತಾದ ಭಾಷೆಗಳಿಂದ ಅಪಾರ ಶಬ್ದಗಳನ್ನು ಬಳಸಿಕೊಂಡಿದೆ. ಜೊತೆಗೆ ಪಾರಸಿ, ಅರಬ್ಬಿ, ಪೋರ್ಚುಗೀಸ್, ಹಿಂದೂಸ್ತಾನಿ, ಮರಾಠಿ ಭಾಷೆಗಳ ಸಹಾಯವನ್ನು ಪಡೆದಿದೆ. ಇವಗಳನ್ನು ಸ್ವೀಕರಿಸುವಾಗ ಮತೀಯವಾದ ಹಿಂದೂ, ಕ್ರೈಸ್ತ, ಮಹ್ಮದೀಯ ಭೇದಗಳಾಗಲಿ, ಭಾರತೀಯ ವಿದೇಶಿಯ ಎಂಬ ಭೇದವಾಗಲಿ ಅಡ್ಡಿಯಾಗಿಲ್ಲ. ಆದರೂ ಇದು ಒಂದು ಸೀಮಿತ ಭೂ ಪ್ರದೇಶದ ಸಣ್ಣ ಸಮುದಾಯದ ತಾಯಿನುಡಿಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇಂಥ ಒಂದು ಉಪಭಾಷೆಯನ್ನು ಆಳವಾಗಿ ಅಧ್ಯಯನ ಮಾಡಿ ಇತರ ಭಾಷೆಗಳ ಜೊತೆಯಲ್ಲಿ ಅದರ ಸಂಬಂಧವನ್ನು ನಿರ್ಧರಿಸಿ ಇದೇ ಸಮಯದಲ್ಲಿ ಮೊಯ ಮಲೆಯಾಳದ ಮೊದಲನೆಯ ಭಾಷಾ ಚರಿತ್ರೆಯನ್ನು ಪ್ರೊ. ಅಮೃತ ಸೋಮೇಶ್ವರರು ರಚಿಸಿದ್ದಾರೆ. ಅದರ ಜೊತೆಗೆ ಸೇರಿಕೊಂಡಂತೆ ಸುಮಾರು ೮೦೦೦ ಮೋಯ ಮಲೆಯಾಳದ ಶಬ್ದಗಳನ್ನು ಸಂಗ್ರಹಿಸಿ ಅಕಾರಾದಿಯಾಗಿ ಜೋಡಿಸಿ ಅವುಗಳ

ಅರ್ಥವನ್ನು ಸೇರಿಸಿ ಒಂದು ಸಣ್ಣ ನಿಘಂಟನ್ನೇ ಸಿದ್ಧ ಪಡಿಸಿದ್ದಾರೆ. ಈ ಭಾಷೆಯಲ್ಲಿ ಮಲೆಯಾಳದ ಜನಪದ ಕಥನಗಳಿಗ ಸಂಬಂಧಿಸಿದ ನುಡಿಗಟ್ಟುಗಳು ಸೇರಿವೆ. ಏಕೆಂದರೆ ಮೋಯ ಮಲೆಯಾಳವನ್ನು ಮಾತನಾಡುವ ಸ್ತ್ರೀಯರಿಗೆ ಅನೇಕ ವಡಕ್ಕನ್ ಪಾಟುಗಳೂ, ಸೊಗಸಾದ ನುಡಿಗಟ್ಟುಗಳೂ ಕಂಠಗತವಾಗಿದ್ದವು. ಭಾಷಿಕವಾದ ಈ ಸಂಪತ್ತನ್ನು ಇಂದಿನ ಆಡುಮಾತಿನಲ್ಲಿಯೂ ಕಾಣಬಹುದಾಗಿದೆ. ಈ ಕಾರಣದಿಂದ ಇಲ್ಲಿನ ಶಬ್ದ ಸಂಕಲನದಲ್ಲಿ ಮೋಯ ಸಮುದಾಯದ ವೃತ್ತಿ, ಪ್ರವೃತ್ತಿ , ವಿಧಿ, ಆರಾಧನೆ, ಆಚರಣೆ ಇವುಗಳೂ ಸೇರಿವೆ. ಮತ್ಸ್ಯ ವ್ಯವಸಾಯದ ದೋಣಿ, ಬಲೆ, ಸಮುದ್ರ, ಗಾಳ, ವಿವಿಧ ಮೀನುಗಳು - ಈ ಪ್ರಪಂಚದ ಎಲ್ಲ ಶಬ್ದಗಳು ಕಾಣಬರುತ್ತವೆ.

ಈ ಬಗ್ಗೆ ಬರೆಯುತ್ತ ಶ್ರೀ ಸೋಮೇಶ್ವರರು ಹೀಗೆ ಹೇಳುತ್ತಾರೆ: ಇಲ್ಲಿ ಸಂಚಯಗೊಂಡ ಕೆಲವು ಪದಗಳಲ್ಲೂ ಪದಗುಚ್ಛಗಳಲ್ಲೂ, ಗಾದೆಗಳಲ್ಲೂ ಕೆಲವರಿಗೆ ತುಸು ಅಶ್ಲೀಲತೆ ಕಾಣಬಹುದೇನೋ! ಶಬ್ದ ಕೋಶದಲ್ಲಿ ಅಶ್ಲೀಲತೆಯ ಮತ್ತು ಮಡಿವಂತಿಕೆಯ ಪ್ರಶ್ನೆ ಏಳುವುದಿಲ್ಲ. ಹಳೆಯ ತಲೆಮಾರಿನ ಮಂದಿ, ಈಗಿನ ದೃಷ್ಟಿಯಲ್ಲಿ ಅಶ್ಲೀಲವೆಂದು ಕಾಣುವ ಮಾತುಗಳನ್ನು ಗಾದೆ ಮುಂತಾದುವುಗಳನ್ನು ಸಹಜವೆಂಬಂತೆ ಎಗ್ಗಿಲ್ಲದೆ ಸರಾಗವಾಗಿ ಆಡುತ್ತಿದ್ದರು. ಎಲ್ಲ ಭಾಷೆಗಳ ಕಥೆಯೂ ಇದೇ ಆಗಿರುವುದರಿಂದ ನಾವು ಈ ಬಗ್ಗೆ ತಲೆ ಕೆಡಿಸಿಕೊಳ್ಳುವ ಯೋಚನೆ ಇರಬಾರದು. ವಿನೋದಕ್ಕಾಗಿ ಅವರು ಮುದ್ರಿಸಿರುವ ಒಂದು ಕೂಡು ನುಡಿಯನ್ನು ಉದಾಹರಿಸುತ್ತೇನೆ : **ಒನಕೆಯನ್ನು ಕೌಪೀನವಾಗಿ ಕಟ್ಟುವುದು ಹುಚ್ಚು ಕೆಲಸ.**

ಈ ಗ್ರಂಥದಲ್ಲಿ ೩೦ ಪುಟಗಳ ಭಾಷಾ ಚರಿತ್ರೆಯೂ, ಸುಮಾರು ೨೫೦ ಪುಟಗಳ ನಿಘಂಟೂ ಸೇರಿಕೊಂಡಿವೆ. ಇದೊಂದು ವಿಶಿಷ್ಟ ಸಂಶೋಧನೆಯಿಂದ ಕೂಡಿದ ನಿಘಂಟು.

X. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ : ಲೇ. ಡಾ।। ವಿಶ್ವನಾಥ

ONOMASTICS ಎಂಬುದು ಹೆಸರುಗಳ ಮೂಲ ಮತ್ತು ಅರ್ಥಗಳನ್ನು ವ್ಯಾಸಂಗ ಮಾಡಲು ಸಹಾಯ ಮಾಡುವ ಶಾಸ್ತ್ರ. ಈ ಶಾಸ್ತ್ರವನ್ನು TOPONYMY, HYDRONYMY ಮತ್ತು ANTHROPONYMY ಎಂದು ಉಪವಿಭಾಗಗಳಾಗಿ ವಿಂಗಡಿಸಿದ್ದಾರೆ. TOPONYMY ಎಂಬುದು ಗ್ರಾಮನಾಮಗಳನ್ನು ಕುರಿತು ವಿವರಿಸಿದರೆ, HYDRONYMY ಎಂಬುದು ನದಿ, ಕೆರೆಕಟ್ಟೆಗಳು ಮುಂತಾದ ಜಲಸಂಬಂಧದ ಹೆಸರುಗಳನ್ನು ವಿವರಿಸುತ್ತದೆ. ANTHROPONYMY ಎಂಬುದು ವ್ಯಕ್ತಿಗಳ ಹೆಸರುಗಳನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳುತ್ತದೆ; ಒಂದೊಂದೂ ಬೇರೆ ಬೇರೆಯಾದ ಕಾರ್ಯಕ್ಷೇತ್ರವಾಗಿ ವ್ಯಾಪಕವಾದ ವ್ಯಾಸಾಂಗವನ್ನು ನಿರೀಕ್ಷಿಸುತ್ತದೆ.

ಕನ್ನಡ ನಾಡಿನಲ್ಲಿ ಈ ಪ್ರಮುಖ ಶಾಸ್ತ್ರವನ್ನು ಕುರಿತು ಸ್ವಲ್ಪ ಕೆಲಸ ನಡೆದಿದೆ. ಗ್ರಾಮನಾಮಗಳ ಅಧ್ಯಯನಕ್ಕೆ ಒಂದು ಸಂಸ್ಥೆಯೆ ಮೈಸೂರಿನಲ್ಲಿ ಸ್ಥಾಪಿತವಾಗಿದೆ. ಕೆಲವರು ವಿದ್ವಾಂಸರು ಗ್ರಂಥಗಳನ್ನು, ಲೇಖನಗಳನ್ನು ರಚಿಸಿದ್ದಾರೆ. ಆದರೆ ಇದು ಕರ್ನಾಟಕದಲ್ಲಿ ಮಾತ್ರವೇ ಅಲ್ಲ, ಭಾರತದ ಎಲ್ಲ ಪ್ರದೇಶಗಳಲ್ಲಿಯೂ ಇನ್ನೂ ಪ್ರೌಢವಾದ ಸಂಶೋಧನ ಕ್ಷೇತ್ರವೆಂದು

ಹೆಸರನ್ನು ಸಂಪಾದಿಸಿಲ್ಲ. ಯುವ ವಿದ್ವಾಂಸರು ಈ ಕ್ಷೇತ್ರಕ್ಕೆ ಕಾಲಿಡಲು ಹಿಂದೆಗೆಯುತ್ತಾರೆ. ಒಂದು ಕಾರಣ ಅವಕಾಶಗಳು ಕಡಿಮೆ, ಎರಡನೆ ಕಾರಣ ಇಲ್ಲಿ ನಡೆದ ಸಂಶೋಧನೆಯ ತೀರ್ಮಾನಗಳನ್ನು ವಿದ್ವಾಂಸರು ಕೂಡಲೆ ಒಪ್ಪವುದಿಲ್ಲ. ಆದರೆ ಇದಕ್ಕೆ ಅವಕಾಶವು ಅಪಾರವಾಗಿದೆ.

ಇಂಥ ಕ್ಷೇತ್ರಕ್ಕೆ ಕಾಲಿಟ್ಟು ಆಸಕ್ತಿಯಿಂದ ದುಡಿದು ಡಾ। ವಿಶ್ವನಾಥ ಅವರು ಅನೇಕ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಆ ಮಟ್ಟಿಗೆ ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ಮೊದಲ ಐದು ಅಧ್ಯಾಯಗಳಲ್ಲಿರುವ ವಿಷಯ ಸಂಗ್ರಹ ವ್ಯಾಪಕವಾಗಿದೆ. ಗ್ರಾಮನಾಮಗಳ ಗ್ಲಾಸರಿಯಂತೂ ಸರಿಯಾಗಿಯೇ ಇದೆ.

ಈ ಹಿನ್ನೆಲೆಯಲ್ಲಿ ಗ್ರಾಮನಾಮಗಳ ಭಾಷಿಕ ಅಧ್ಯಯನದಲ್ಲಿ ಈ ಲೇಖಕರ ಅಭಿಪ್ರಾಯಗಳನ್ನಿಲ್ಲಿ ಒಪ್ಪವುದು ಕಷ್ಟವಾಗುತ್ತದೆ. ಹಾಗೆ ಅವರೂ ನಿರೀಕ್ಷಿಸುವುದಿಲ್ಲವೆಂದು ಈ ಶಾಸ್ತ್ರದ ವಿವರಣೆಯಲ್ಲಿ ಅವರೇ ಸೂಚಿಸಿದ್ದಾರೆ. ಆ ಬಗ್ಗೆ ಇಲ್ಲಿ ವಿಷಯಾಂತರ ಮಾಡಲು ನನಗೆ ಇಚ್ಛೆಯಿಲ್ಲ. ಆದರೆ ಅವರು ಬಹು ವ್ಯಾಪಕವಾದ ವ್ಯಾಸಂಗ ಮಾಡಿ ತೀರ್ಮಾನಗಳನ್ನು ಮಾಡಲು ಸಾಕಾದಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ ಎಂಬುದು ಮಾತ್ರ ಸತ್ಯ.

XI. ಚಿಂತನ ಭಂಡಾರ : ಸಂ. ಡಾ। ಜ್ಞಾನದೇವ್, ಮೊಳಕಾಲ್ಮೂರು

ಈಗಿನ ಜೀವನದಲ್ಲಿ, ಲೋಕಾಭೀರಾಮವಾದ ಮಾತುಕತೆಯಲ್ಲಿ, ಸಂವಾದಗಳಲ್ಲಿ ಸಾಮಾನ್ಯ ಜನರು ವಿವೇಕವು ಸಂಪಾದನೆಯಾಗಬೇಕೆಂದು ಬಯಸುತ್ತಾರೆ. ಕಾಡುಹರಟೆ ಪ್ರಯೋಜನರಹಿತವಾದುದು. ಸಂಭಾಷಣೆ, ಸಂವಾದ ಇವು ಮನಸ್ಸಿಗೆ ಪ್ರಸನ್ನತೆಯನ್ನು ತಂದು ಶುದ್ಧವಾದ ಬಾಳಿಗೆ ಬೇಕಾದ ಮಾರ್ಗದರ್ಶನ ಮಾಡಬೇಕು. ಆದುದರಿಂದಲೇ ವಿದ್ವಾಂಸರೊಡನೆ ಮಾತನಾಡುವಾಗ ಅವರು ಮಾತಿನಲ್ಲಿ ಅನೇಕ ಪೂರ್ವಕವಿಗಳ, ಲೇಖಕರ, ಜ್ಞಾನಿಗಳ ವಾಕ್ಯಗಳನ್ನು ಉದ್ಧಾರ ಮಾಡುವುದನ್ನು ಕಾಣುತ್ತೇವೆ.

ಹೀಗಿರುವುದರಿಂದ ಮಾತುಕತೆಯಲ್ಲಿ ಸಹಾಯವಾಗುವುದಕ್ಕಾಗಿ ಇಂಗ್ಲಿಷ್ ಭಾಷೆಯಲ್ಲಿ Dictionary of Quotations ಎಂಬ ಗ್ರಂಥಗಳು ಪ್ರಕಟವಾಗಿವೆ. ಕನ್ನಡದಲ್ಲಿ ಇಂಥ ಪ್ರಯತ್ನಗಳು ಕಡಿಮೆ. ಈಗ ಪ್ರಕಟವಾಗಿರುವ ಚಿಂತನ ಭಂಡಾರ ಅಂಥ ಒಂದು ಪ್ರಯತ್ನ. ಸಾಮಾನ್ಯವಾಗಿ ಈ ಗ್ರಂಥವು ಉಪಯೋಗಕ್ಕೆ ಬರುವುದಾದರೂ ಇದನ್ನು ಉತ್ತಮಪಡಿಸಲು ಕೆಲವು ಸೂಚನೆಗಳನ್ನು ನೀಡಬಹುದು.

೧. ಎಲ್ಲ ಉದ್ಧಾರಗಳಿಗೂ ಅದರ ಮೂಲವನ್ನು ಪುಟ, ಅಧ್ಯಾಯ, ಸಾಲುಗಳ ಸಂಖ್ಯೆಯೊಡನೆ ಮುದ್ರಿಸಬೇಕು.

೨. ಪ್ರಸಿದ್ಧ ಕವಿಗಳ ಕಾವ್ಯಗಳಿಂದ ಉದ್ಧಾರಮಾಡುವಾಗ ಅವುಗಳಲ್ಲಿ ಯಾವ ಬದಲಾವಣೆಯನ್ನೂ ಮಾಡಬಾರದು. ಓದುಗರಿಗೆ ಅರ್ಥವಾಗಲಿ ಎಂದು ಸಂಗ್ರಹಿಸಬಾರದು. ನಮ್ಮ ಮಾತುಗಳಲ್ಲಿ ಅನುವಾದ ಮಾಡಬಾರದು.

೩. ಪ್ರಸಿದ್ಧವಲ್ಲದ, ಪ್ರಭಾವಬೀರದ ವಾಕ್ಯಗಳನ್ನು ಸೇರಿಸಬಾರದು.

೪. ಸಾಮಾನ್ಯರ ಮಾತುಗಳಲ್ಲಿ ಪ್ರಚಾರದಲ್ಲಿರುವ ಅತಿಸಾಮಾನ್ಯ ಗಾದೆ ಮಾತುಗಳನ್ನು ಬಿಟ್ಟುಬಿಡಬೇಕು

೫. ಬಹು ಕ್ಲಿಷ್ಟವಾದ, ಸಂಕೀರ್ಣವಾದ ವಾಕ್ಯಗಳನ್ನು ಸೇರಿಸಬಾರದು.

ಈ ಲೇಖಕರು ಈ ಗ್ರಂಥದ ಪುನಮುದ್ರಣದಲ್ಲಿ ಈ ಸೂಚನೆಗಳನ್ನು ನೆನಪಿನಲ್ಲಿಟ್ಟರೆ ಗ್ರಂಥಕ್ಕೆ ಬೆಲೆ ಬರುತ್ತದೆ.

XII. ವಿಜ್ಞಾನ ಪದ ವಿವರಣ ಕೋಶ : ಲೇ. ಸಂಪಾದಕ ಸಮಿತಿ ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು.

ನಿಘಂಟು ಕ್ಷೇತ್ರದಲ್ಲಿ ದುಡಿದಿರುವವರಿಗೆ ಮಾತ್ರ ಇಂಥ ಕೋಶಗಳನ್ನು ಸಿದ್ಧಪಡಿಸುವುದು ಎಷ್ಟು ಕಷ್ಟವೆಂದು ತಿಳಿದು ಬರುತ್ತದ. ಕನ್ನಡದಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ಲೇಖನಗಳು, ಚಿಕ್ಕಪುಟ್ಟ ಪುಸ್ತಕಗಳು ಸುಮಾರು ಅರವತ್ತು ವರ್ಷಗಳಿಂದಲೂ ಪ್ರಕಟವಾಗುತ್ತಲೇ ಇವೆ. ವಿಜ್ಞಾನದ ಕ್ಷೇತ್ರವು ಈ ಅರವತ್ತು ವರ್ಷಗಳಲ್ಲಿ ಹಿಂದೆಂದೂ ಆಗದಿದ್ದಷ್ಟು ಬೃಹತ್ಪ್ರಮಾಣದಲ್ಲಿ ಬೆಳೆದಿದೆ. ಈ ವಿಜ್ಞಾನ ಕ್ಷೇತ್ರದ ಆಸ್ಫೋಟವನ್ನು ಅನುಸರಿಸಿ ಎಷ್ಟೋ ಹೊಸ ಶಬ್ದಗಳು ನಿರ್ಮಾಣವಾಗಿವೆ. ಒಂದು ಭಾಷೆಯ ಬೆಳವಣಿಗೆಯಲ್ಲಿ ಜನತೆಗೆ ವಿಷಯ ಪರಿಜ್ಞಾನವನ್ನು ಹೆಚ್ಚಿಸಬೇಕಾದ ಅವಕಾಶ ಒದಗಿದಾಗ ಅದಕ್ಕೆ ಸೂಕ್ತವಾದ ಪಾರಿಭಾಷಿಕ ಪದಗಳ ನಿರ್ಮಾಣ ಆಗಬೇಕು. ಆದರೆ ಇದು ಅಷ್ಟು ಸುಲಭವಾದ ಕೆಲಸವಲ್ಲ. ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ವಾಸಿಸುವ, ಬೋಧಿಸುವ, ಲೇಖನಗಳನ್ನು ಬರೆಯುವ ಜನರು ಒಂದೇ ಬಗೆಯ ಪದಗಳನ್ನು ಉಪಯೋಗಿಸುತ್ತಿರಲಿಲ್ಲ. ಆದುದರಿಂದ ಅಂಥ ಶಬ್ದಕೋಶವೊಂದನ್ನು ತಯಾರಿಸಿದರೆ ಎಲ್ಲ ಕಡೆಯೂ ವೈಜ್ಞಾನಿಕ ಲೇಖನಗಳಿಗೆ ಒಂದೇ ಬಗೆಯ ಪದಸಂಪತ್ತಿ ದೊರೆಯುತ್ತದೆ. ಈ ಉದ್ದೇಶವನ್ನು ಗುರಿಯಾಗಿ ಇಟ್ಟುಕೊಂಡು ನವಕರ್ನಾಟಕದ ಪ್ರಕಾಶನದವರು ಮಾಡಿರುವ ಪ್ರಯತ್ನವಿದು.

ಸುಮಾರು ೧೫ ವರ್ಷಗಳ ಕಾಲ ಹತ್ತಾರು ಜನರು, ವಿಜ್ಞಾನ ವಿಷಯದಲ್ಲಿ ಪ್ರೌಢಿಮೆಯನ್ನು ಸಂಪಾದಿಸಿದ ಬೋಧಕ ಮಿತ್ರರು ಸೇರಿ ಸಿದ್ಧಪಡಿಸಿರುವ ವಿಜ್ಞಾನ ಪದವಿವರಣ ಕೋಶ. ಇದರ ಸಂಪಾದನ ಸಮಯದಲ್ಲಿ ಅವರು ಎದುರಿಸಬೇಕಾಗಿ ಬಂದ ಅಡ್ಡಿ ಆಂತಕಗಳನ್ನು ನಾನು ವಿವರಿಸಲು ಹೋಗುವುದಿಲ್ಲ. ಆದರೆ ಈ ಎಲ್ಲ ಅಡ್ಡಿಗಳನ್ನು ಎದುರಿಸಿ ಈ ಸಾಹಸಕಾರ್ಯವನ್ನು ಸಾಧಿಸಿರುವ ಈ ಸಂಪಾದಕ ಮಂಡಲಿಯ ಒಬ್ಬ ವಿದ್ವಾಂಸರು ಈ ಅವಧಿಯಲ್ಲಿ ಅವಸಾನ ಹೊಂದಿದರೆಂಬುದು ವ್ಯಸನದ ವಿಷಯ.

ಈ ನಿಘಂಟಿನ ಬಗ್ಗೆ ಕೆಲವು ವಿವರಗಳನ್ನು ಓದುಗರು ತಿಳಿದಿರುವುದು ತುಂಬ ಅಗತ್ಯ. ಇದರಲ್ಲಿ ಸುಮಾರು ೧೨,೨೫೦ ವೈಜ್ಞಾನಿಕ ಪಾರಿಭಾಷಿಕ ಪದಗಳು ಸಂಕಲಿತವಾಗಿವೆ. ಪ್ರತಿಯೊಂದು ಪದಕ್ಕೂ ಕನ್ನಡದಲ್ಲಿ ವಿವರವಾದ ವಿಷಯ ನಿರೂಪಣೆಯಿದೆ. ಎಲ್ಲೆಲ್ಲಿ ಅಗತ್ಯವೋ

ಅಲ್ಲೆಲ್ಲ ಬೇಕಾದ ಚಿತ್ರಗಳನ್ನು ಅಳವಡಿಸಲಾಗಿದೆ. ಈ ನಿಘಂಟಿನಲ್ಲಿ ಹೊಸದಾಗಿ ನಿರ್ಮಾಣ ಮಾಡಿರುವ ಪಾರಿಭಾಷಿಕ ಪದಗಳನ್ನು ನಾನು ಕುತೂಹಲದಿಂದ ವ್ಯಾಸಂಗ ಮಾಡಿದ್ದೇನೆ. ಭಾಷೆಯ ವ್ಯಾಕರಣಕ್ಕೆ ಹೊಂದುವಂತೆ ಸಂಸ್ಕೃತದ ಸಹಾಯದಿಂದ ನಿರ್ಮಿಸಿರುವ ಶಬ್ದಗಳು ತುಂಬ ಉಚಿತವಾಗಿವೆ. ಅಗತ್ಯವಾದ ಎಡೆಯಲ್ಲಿ ಇಂಗ್ಲಿಷ್ ಶಬ್ದವನ್ನೇ ಸ್ವೀಕರಿಸಿದ್ದಾರೆ. ಶಬ್ದಗಳನ್ನು ನಾಡಿನ ಎಲ್ಲ ಶಾಲೆ ಕಾಲೇಜುಗಳಲ್ಲಿ ಅಧ್ಯಾಪಕರು ಉಪಯೋಗಿಸುವುದರಿಂದ ವಿಜ್ಞಾನ ಶಬ್ದಗಳ ಒಂದು ನಿಶ್ಚಿತ ಸ್ವರೂಪವನ್ನು ನಾವು ಸಾಧಿಸಬಹುದು. ವಿಜ್ಞಾನದ ಲೇಖಕರು ಕೂಡ ಈ ನಿಘಂಟಿನ ಸಹಾಯವನ್ನು ಪಡೆಯಬಹುದು.

ಕನ್ನಡದಲ್ಲಿ ವೈಜ್ಞಾನಿಕ ಗ್ರಂಥಗಳು ಅಧಿಕ ಸಂಖ್ಯೆಯಲ್ಲಿ ಬರಲು ಈ ನಿಘಂಟು ಸಹಾಯಕವಾಗಿದೆ. ಕ್ರಮವಾಗಿ ಇದನ್ನು ಪರಿಷ್ಕರಿಸಿ, ವಿಸ್ತರಿಸಿ ಇನ್ನೂ ವ್ಯಾಪಕವಾದ ನಿಘಂಟುಗಳನ್ನು ಸಿದ್ಧಪಡಿಸಲು ಸೊಗಸಾದ ತಳಪಾಯವನ್ನು ಈ ಸಂಪಾದಕ ಮಂಡಲಿ ಸಿದ್ಧಪಡಿಸಿದೆ.

ಈ ನಿಘಂಟಿನಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗ ೩೫೯ ಪುಟಗಳ ಪದವಿವರಣ ಕೋಶ. ಎರಡನೆಯ ಬಾಗ ೧೮೦ ಪುಟಗಳಲ್ಲಿ ಅಕಾರಾದಿ ಇಂಗ್ಲಿಷ್ Terminology ಯ ಪಟ್ಟಿಗೆ ಕನ್ನಡದ ಸಮಾನಾರ್ಥಕ ಪದಗಳನ್ನು ಸೇರಿಸಿರುವ ಪದಸೂಚಿ. ಇವೆರಡರ ನಡುವೆ ಅಗತ್ಯವಾದ ೧೦ ಪುಟಗಳ ವೈಜ್ಞಾನಿಕ ವಿಷಯಗಳ ಅನುಬಂಧಗಳನ್ನು ಸೇರಿಸಿದ್ದಾರೆ.

ನಿಜವಾಗಿ ಇದೊಂದು ಸಾಹಸದ ಕಾರ್ಯ. ೧೫ ವರ್ಷಗಳ ಬೌದ್ಧಿಕ ಶ್ರಮ. ಕನ್ನಡನಾಡಿನ ಶಿಕ್ಷಣ ಇಲಾಖೆಯ ಅಧಿಕಾರಿಗಳು ಒಮ್ಮೆ ಇದನ್ನು ಕಣ್ಣಾರೆ ನೋಡಿದರೆ ಈ ಸಾಧನೆಯ ಪರಿಚಯ ಆಗಬಹುದು. ಅವರ ಇಲಾಖೆಗೆ ಕಣ್ಣು ತೆರೆಯಬಹುದು.

XIII. ಪರಮಾರ್ಥ ಪದಕೋಶ : ಸಂ. ಅ. ರಾ. ಸೇ.

ಅಧ್ಯಾತ್ಮ ವಿಜ್ಞಾನದಲ್ಲಿ ಆಸಕ್ತಿ ಇರುವವರ ಸಹಾಯಕ್ಕೆಂದು ಸಿದ್ಧಪಡಿಸಿರುವ ಈ ಪರಮಾರ್ಥ ಕೋಶ ಎಂಬ ಹೆಸರಿನ ವಿಶಿಷ್ಟವಾದ ನಿಘಂಟನ್ನು ಒಂದು ಬೆಲೆ ಬಾಳುವ ಪ್ರಯತ್ನವೆಂದು ಸ್ವಾಗತಿಸಬೇಕು. ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ಈಗೀಗ ಓದುಗರಲ್ಲಿ ಆಸಕ್ತಿ ಬೆಳೆಯುತ್ತಿದೆ. ಅಧ್ಯಾತ್ಮವೆನ್ನುವುದು ಭಾರತದಲ್ಲಿ ಪ್ರಚಾರದಲ್ಲಿರುವ ಮತಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಪ್ರಪಂಚದಲ್ಲಿ ಎಷ್ಟು ಮತಗಳು ಇವೆಯೋ ಅಷ್ಟು ಮತಗಳಲ್ಲಿಯೂ ಅಧ್ಯಾತ್ಮದ ಚರ್ಚೆ ಇದ್ದೇ ಇರುತ್ತದೆ. ಇಂಥ ದಾರ್ಶನಿಕ ವಿಷಯಗಳನ್ನು ಕುರಿತು ಮಾತನಾಡುವಾಗ ಬೇರೆ ಬೇರೆ ಮತಗಳ ಅಭಿಪ್ರಾಯಗಳನ್ನು ಅರಿಯಬೇಕಾದರೆ ಆಯಾ ಮತದ ಪಾರಿಭಾಷಿಕ ಶಬ್ದಗಳ ನಿಶ್ಚಿತಾರ್ಥಗಳನ್ನು ತಿಳಿದಿರಬೇಕಾಗುತ್ತದೆ. ಈ ದೃಷ್ಟಿಯಿಂದ ಆಸಕ್ತರಿಗೆ ಸಹಾಯ ಮಾಡುವ ಯಾವ ನಿಘಂಟೂ ಕನ್ನಡದಲ್ಲಿ ಇರಲಿಲ್ಲ. ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಕೋಶಗಳು ಇಂಗ್ಲಿಷಿನಲ್ಲಿ ಬೇಕಾದಷ್ಟಿವೆ. ಕನ್ನಡದಲ್ಲಿ ನಿಘಂಟು ಶಾಸ್ತ್ರಕ್ಕೂ ನಿಘಂಟುಗಳಿಗೂ

ಅಷ್ಟು ಪ್ರೋತ್ಸಾಹ ಯಾವಾಗಲೂ ಇರಲಿಲ್ಲ. ಈಗಲೂ ಇಲ್ಲ. ಆದರೆ ಶಾಸ್ತ್ರ ಸಾಹಿತ್ಯವು ಬೆಳೆಯಬೇಕಾದರೆ ಇಂಥ ಪ್ರಕಟಣೆಗಳು ತುಂಬ ಸಹಕಾರವನ್ನು ನೀಡುತ್ತವೆ.

ಇಂಥ ಪ್ರಕಟಣೆಯ ಕೊರತೆಯನ್ನು ಗುರುತಿಸಿ ಶ್ರೀ ಅ.ರಾ.ಸೇ. ಅವರ ಪ್ರಧಾನ ಸಂಪಾದಕತ್ವದಲ್ಲಿ ಅನೇಕ ವಿದ್ವಾಂಸರು ಸೇರಿ ಬಹುಶ್ರಮವಹಿಸಿ ಬಹುಕಾಲ ದುಡಿದು ಪರಮಾರ್ಥ ಪದಕೋಶವನ್ನು ಸಿದ್ಧಪಡಿಸಿ ಓದುಗರಿಗೆ ನೀಡಿದ್ದಾರೆ. ನಿಘಂಟು ನಿರ್ಮಾಣದ ಕಷ್ಟವನ್ನು ಜನಸಾಮಾನ್ಯರು ಅರಿತುಕೊಳ್ಳಲಾರರು. ಸರಕಾರಕ್ಕಾಗಲಿ, ವಿಶ್ವವಿದ್ಯಾನಿಯಗಳಿಗಾಗಲಿ ಈ ಕ್ಷೇತ್ರದ ಬಗ್ಗೆ ಅಂಥ ಗೌರವವೇನೂ ಇಲ್ಲ. ಹೀಗಿದ್ದೂ ಈ ವಿದ್ವನ್ಮಂಡಲಿ ಈ ಗ್ರಂಥವನ್ನು ಪ್ರಕಟಪಡಿಸಿರುವುದು ಸಾಹಸದ ಮಾತು.

ಈ ಕೋಶದಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ತ, ಯಹೂದಿ, ಕನ್ಫೂಷಿಯಸ್, ತಾವೋ, ಸೂಫಿ, ಜೈನ, ಬೌದ್ಧ ಮುಂತಾಗಿ ಅನೇಕ ಮತಗಳ ಪಾರಿಭಾಷಿಕ ಪದಗಳ ವಿವರಣೆಗಳಿವೆ. ಆಯಾ ಕ್ಷೇತ್ರದ ಪರಿಣತರು ಈ ಶಬ್ದಗಳ ವಿವರಣೆಗಳನ್ನು ನೀಡಿದ್ದಾರೆ. ಒಂದೊಂದೇ ಮತದ ಪಾರಿಭಾಷಿಕ ಶಬ್ದಗಳೆಲ್ಲವನ್ನೂ ಕ್ರೋಡೀಕರಿಸಬೇಕಾದರೂ ೫೦೦ ಪುಟಗಳು ಸಾಕಾಗುವುದಿಲ್ಲ. ಎಲ್ಲ ವಿವರಗಳನ್ನೂ ಪೂರ್ಣವಾಗಿ ಖಚಿತವಾಗಿ ತಿಳಿಸಬೇಕಾದರೆ ಅದರ ಎರಡರಷ್ಟು ಪುಟಗಳಾದರೂ ಬೇಕಾಗಬಹುದು. ಈ ಸಂಪುಟದಲ್ಲಿ ಈ ಎಲ್ಲ ಮತಗಳಿಗೆ ಸಂಬಂಧಿಸಿದಂತೆ ಆಗಾಗ ಓದುಗರು ಸಂಧಿಸುವ ಶಬ್ದಗಳನ್ನು ಅವಗಳಲ್ಲಿ ಅತಿ ಮುಖ್ಯವಾದವುಗಳನ್ನು ಆರಿಸಿ ಅವುಗಳಿಗೆ ಹ್ರಸ್ವ ಸ್ವರೂಪದಲ್ಲಿ ಬೇಕಾದಷ್ಟು ವಿವರಗಳನ್ನು ನಿರೂಪಿಸಲಾಗಿದೆ. ಇದು ಪ್ರಥಮ ಪ್ರಯತ್ನ. ಈಗಲೂ ಪ್ರಯೋಜನಕಾರಿಯಾಗಿದೆ. ಇದನ್ನು ಮುಂದಿನ ಮುದ್ರಣದಲ್ಲಿ ವಿಸ್ತರಿಸುವ, ಹೆಚ್ಚು ಶಿಸ್ತಿಗೆ ಒಳಪಡಿಸುವ ಉದ್ದೇಶವನ್ನು ಸಂಪಾದಕರು ಮುನ್ನುಡಿಯಲ್ಲಿ ತಿಳಿಸಿದ್ದಾರೆ.

XIV. ಪರಿಸರ ನಿಘಂಟು : ಸಂಪಾದಕರು ಶ್ರೀ ಟಿ. ಎಸ್. ವಿವೇಕಾನಂದ ಮತ್ತು ಶ್ರೀ ಶೇಷಗಿರಿ ಜೋಡಿದಾರ್

ಕನ್ನಡ ಭಾಷೆಯಲ್ಲಿ ಮೊತ್ತ ಮೊದಲಿಗೆ ಪರಿಸರ ವಿಜ್ಞಾನವನ್ನು ಕುರಿತ ನಿಘಂಟು ಮುದ್ರಣವಾಗಿ ಪ್ರಕಾಶನಗೊಂಡಿದೆ. **ಪರಿಸರ** ಬಹುವ್ಯಾಪಕವಾದ ಅರ್ಥವುಳ್ಳ ಶಬ್ದ. ದೇಶದ ಆರ್ಥಿಕ ಪ್ರಗತಿಯನ್ನು ಸಾಧಿಸಬೇಕೆಂಬ ಉತ್ಸಾಹದಲ್ಲಿ ಪರಿಸರದ ಸರ್ವನಾಶವಾಗುತ್ತಿರುವುದರ ಕಡೆಗೆ ಗಮನ ಹರಿಸುವುದು ಮುಖ್ಯ.

ತಂತ್ರಜ್ಞಾನದ ಬೃಹತ್ ಕೈಗಾರಿಕೆಗಳು ಸೃಷ್ಟಿಸುವ ಬೃಹನ್ನಗರಗಳ ಅವೈಜ್ಞಾನಿಕ ವಾತಾವರಣದ ವ್ಯಾಪಕತೆಯಿಂದಲೂ ಅಗಾಧ ಜಲಾಶಯಗಳ ನಿರ್ಮಾಣದಿಂದುಂಟಾದ ಕೆರೆಕಟ್ಟೆ ಕೊಳಗಳ ನಿರ್ನಾಮದಿಂದಲೂ ಜನತೆ ಅಪಾರವಾದ ಹಾನಿಯನ್ನು ಅನುಭವಿಸುತ್ತಿದೆ.

ಪರಿಸರಮಾಲಿನ್ಯ ಎಂಬ ಹೊಸ ಶಬ್ದ ಸೃಷ್ಟಿಯಾಗಿ ಮಾಲಿನ್ಯದ ಅನೇಕ ಅವತಾರಗಳ ಅಪರಿಹಾರ್ಯವಾದ ಅವನತಿಯನ್ನು ಚಿತ್ರಿಸುವುದು ಸಾಧ್ಯವಾಗಿದೆ. ಈಗೀಗ **ಪರಿಸರ ಸಂರಕ್ಷಣೆ** ಎಂಬ ಮತ್ತೊಂದು ಶಬ್ದ ಬೆಳಕಿಗೆ ಬಂದು ಜನರ ಕಿವಿಗೆ ಬೀಳುತ್ತಾ ಇದೆ. ಪರಿಸರ ಸಂರಕ್ಷಣೆಗೆ

ಬೇಕಾದ ತಿಳಿವಳಿಕೆಯೇನು ಎಂಬುದನ್ನು ಜನರಿಗೆ ಪರಿಚಯ ಮಾಡಿಕೊಡುವ ಅನೇಕ ಲೇಖನಗಳು, ಗ್ರಂಥಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿಯೂ ಕೆಲವು ಲೇಖನಗಳು ರಚಿತವಾಗಿದೆ. ಪಠ್ಯಪುಸ್ತಕಗಳಲ್ಲಿ ಪರಿಸರನಾಶದ ಚಿತ್ರವನ್ನು ನೀಡುವ ಪಾಠಗಳೂ ಸೇರಿಕೊಂಡಿವೆ. ಇಂಥ ಸೂಕ್ತವಾದ ಸಮಯದಲ್ಲಿ ಈ ಪರಿಸರ ನಿಘಂಟು ಪ್ರಕಟವಾಗಿದೆ. ಇದು ಒಂದು ಇಂಗ್ಲಿಷ್ ಶಬ್ದಕ್ಕೆ ಒಂದು ಕನ್ನಡ ಶಬ್ದವನ್ನು ನೀಡುವ ಸಾಮಾನ್ಯ ನಿಘಂಟಲ್ಲ. ECOLOGY ಎಂಬ ವಿಜ್ಞಾನಕ್ಕೆ ಹೊಂದಿಕೊಂಡಂತೆ ಇಂಗ್ಲಿಷ್ ಭಾಷೆಯಲ್ಲಿ ಪ್ರಯೋಗವಾಗುತ್ತಿರುವ ಎಲ್ಲ ವೈಜ್ಞಾನಿಕ ಶಬ್ದಗಳಿಗೂ ಶಬ್ದ ಪುಂಜಗಳಿಗೂ ಸಮಾನವಾದ ಕನ್ನಡ ಶಬ್ದಗಳನ್ನು ಶಬ್ದಪುಂಜಗಳನ್ನು ನಿರ್ಮಾಣ ಮಾಡಿ ಆಯಾ ಶಬ್ದಗಳ ವಿಸ್ತಾರವಾದ ವರ್ಣನೆಯನ್ನು ನೀಡವ ವಿಶ್ವಕೋಶದ ಬಗೆಯ ನಿಘಂಟು. ಇದಕ್ಕೆ ವೈಜ್ಞಾನಿಕವಾದ ವಿಸ್ತಾರ ಶಾಸ್ತ್ರ ಜ್ಞಾನವೂ ಉಚಿತವಾದ ಭಾಷಾ ಪಾಂಡಿತ್ಯವೂ ಅತ್ಯಗತ್ಯವಾಗುತ್ತವೆ. ಹೊಸ ಶಬ್ದಗಳಿಗೆ ಸಂಸ್ಕೃತ ಭಾಷೆಯ ಸ್ಪಷ್ಟ ಪರಿಚಯವಿಲ್ಲದೆ ಇದ್ದರೆ ಪ್ರಯತ್ನವು ಸಫಲವಾಗುವುದಿಲ್ಲ.

ಹೀಗೆ ಶಾಸ್ತ್ರ ಜ್ಞಾನ, ಭಾಷಾ ಪರಿಜ್ಞಾನ, ಜನಸೇವೆಯಲ್ಲಿ ಆಸಕ್ತಿ ಈ ಮೂರೂ ಸೇರಿ ಸಿದ್ಧವಾಗಿರುವ ಈ ನಿಘಂಟು ಕನ್ನಡದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಬಹುವಿಧವಾದ ಲೇಖನ ವ್ಯವಸಾಯಕ್ಕೆ ಸಹಾಯ ಮಾಡುವ ಗ್ರಂಥವಾಗಿದೆ. ಪರಿಸರದ ತಿಳಿವಳಿಕೆ ಇಲ್ಲದೆ ಪ್ರಪಂಚದಲ್ಲಾದ ಅನೇಕ ದುರಂತಗಳನ್ನೂ ತಿಳಿವಳಿಕೆಯನ್ನೂ ಪಡೆದುದರಿಂದ ಸ್ಥಾಪಿತವಾದ ಸಂಸ್ಥೆಗಳ ಕಾರ್ಯಕ್ರಮಗಳನ್ನೂ ಈ ನಿಘಂಟು ತಿಳಿಸುತ್ತದೆ. ಇಂದ್ರಪ್ರಸ್ಥ ಪ್ರಕಾಶನವು ಈಗಾಗಲೇ ಹದಿಮೂರು ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿದೆ. ಈ ಪ್ರಕಾಶನದ ಉದ್ದೇಶವನ್ನು ವಿವರಿಸುತ್ತಾ ಶ್ರೀ ಟಿ.ಎಸ್. ವಿವೇಕಾನಂದ ಅವರು ಹೇಳಿದ್ದಾರೆ: "ಅಗತ್ಯವನ್ನು ಅರಿತು ಪುಸ್ತಕಗಳನ್ನು ಹೊರತಂದು ಅವನ್ನು ಜನಕ್ಕೆ ತಲುಪುವಂತೆ ಮಾಡುವುದು, ನಾವು ಕನಸಿರುವ ಬೃಹತ್ ಚಳವಳಿಗೆ ಇವು ಕೆಲವು ಉಪಕರಣಗಳಷ್ಟೆ. ನಾವು ಈವರೆಗೂ ಮಾಡಿರುವ ಕೆಲಸಕ್ಕಿಂತ ಮಾಡಬೇಕಾದ ಕೆಲಸ, ಕ್ರಮಿಸಬೇಕಾದ ಹಾದಿ ಮಹತ್ವದ್ದು."

ನಿಘಂಟಿನಲ್ಲಿರುವ ಚಿತ್ರಗಳೂ ನಕ್ಷೆಗಳೂ ತುಂಬ ಸಹಾಯಕವಾಗಿವೆ. ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಬಹು ಆಕರ್ಷಕವಾದ ಈ ನಿಘಂಟು ಪರಿಸರ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರಿಗೆ ವರದಾನವಾಗಿದೆ.

XV. A Multilingual Dictionary of Kannada - Kannada -English - Tamil-Japanese

ಚೆನ್ನೈನಲ್ಲಿ ಸ್ಥಾಪಿತವಾಗಿರುವ ಇನ್ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್ - ಈ ಸಂಸ್ಥೆ ತಮಿಳು ಭಾಷಾ ಸಾಹಿತ್ಯಗಳ ಸಂಶೋಧನೆಗೆ ಪ್ರಾಧಾನ್ಯ ನೀಡಿದರೂ ತಮಿಳು ಕನ್ನಡ ಸಂಬಂಧವನ್ನು ಕುರಿತ ಕೆಲವು ಕಾರ್ಯಗಳನ್ನು ಕೈಗೊಂಡಿದೆ. ಇವುಗಳಲ್ಲಿ ನಿಘಂಟು ಕಾರ್ಯ ಮುಖ್ಯವಾದುದು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಿದ್ಧವಾದ, ಈಗ ಸಂಪೂರ್ಣವಾಗಿ ಮುದ್ರಿತವಾಗಿ ಪ್ರಕಟವಾಗಿರುವ ಕನ್ನಡ-ಕನ್ನಡ ಬೃಹನ್ನಿಘಂಟನ್ನು ಆಧಾರವಾಗಿ ಬಳಸಿಕೊಂಡು

ಅದನ್ನು ತಮಿಳು, ಇಂಗ್ಲಿಷ್, ಜಪಾನೀಸ್ ಭಾಷೆಗಳಲ್ಲಿ ಅನುವಾದ ಮಾಡಿ ಒಂದು ಬಹುಭಾಷಾ ನಿಘಂಟನ್ನು ತಯಾರು ಮಾಡಲಾಗುತ್ತಿದೆ. ಇದಕ್ಕೆ ಕರ್ನಾಟಕ ಸರಕಾರವೂ ಅಲ್ಪಸ್ವಲ್ಪ ಸಹಾಯ ಮಾಡುತ್ತಿದೆ. ಅಲ್ಲಿ ತಮಿಳಿನ ಕೆಲಸಗಾರರಿಗೆ ನೀಡುತ್ತಿರುವ ಸಂಬಳ ಸಾರಿಗೆ ಕನ್ನಡದ ಕೆಲಸಗಾರರಿಗೆ ಸಿಕ್ಕುತ್ತಿಲ್ಲ. ಆದರೂ ಹಟಹಿಡಿದು ಕನ್ನಡ ಕೆಲಸಗಾರರು ಈ ಕಾರ್ಯದಲ್ಲಿ ಸಹಕಾರ ನೀಡುತ್ತಿದ್ದಾರೆ. ಈಗ ಎರಡು ಸಂಪುಟಗಳು ಪ್ರಕಟವಾಗಿವೆ. 'ಅ' ಕಾರ ಪೂರ್ತಿಯಾಗಿದೆ. ಇದು ೨೦ ಸಂಪುಟಗಳಾಗಬಹುದು. ಈ ನಿಘಂಟಿನ ಸಂಪಾದಕರಾದ ಡಾ। ವಿ. ಗೋಪಾಲಕೃಷ್ಣ ಅವರು ಚೆನ್ನೈನಲ್ಲಿ ನೆಲಸಿ ಕನ್ನಡ ತಮಿಳು ಬಾಂಧ್ಯವಕ್ಕೆ ತುಂಬ ಶ್ರಮಿಸುತ್ತಿದ್ದಾರೆ.

ನಿಘಂಟುಗಳ ಬಗ್ಗೆ ವಿವರಿಸುವಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುತ್ತಿರುವ ಕನ್ನಡ-ಇಂಗ್ಲಿಷ್ ನಿಘಂಟಿನ ಬಗ್ಗೆ ಯಾವ ಪ್ರಕಟನೆಯೂ ಹೊರಬಿದ್ದಿಲ್ಲ. ಪರಿಷತ್ತು ಕನ್ನಡ-ಕನ್ನಡ ನಿಘಂಟನ್ನು ಮುದ್ರಿಸುವುದಕ್ಕೆ ಮೊದಲು ಅದರ ಸ್ವರೂಪವನ್ನು ಕುರಿತು ನಾಡಿನ ಎಲ್ಲ ವಿದ್ವಾಂಸರಿಗೆ ಮಾದರಿ ಪುಟಗಳನ್ನು ಕಳುಹಿಸಿ ಅವರ ಸಲಹೆಗಳನ್ನು ಆಹ್ವಾನಿಸಿ ಅವುಗಳನ್ನು ಅಳವಡಿಸಿಕೊಂಡ ಬಳಿಕ ಮುಂದಿನ ಕಾರ್ಯವನ್ನು ಕೈಗೊಂಡಿತು. ಈ ಕನ್ನಡ-ಇಂಗ್ಲಿಷ್ ನಿಘಂಟಿಗೆ ಅಂಥ ಯಾವ ವಿದ್ವಾಂಸರ ಸಲಹೆಗಳೂ ಬೇಕಾಗಿಲ್ಲವೆಂದು ಕಂಡುಬರುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಕೂಡ ಮಾದರಿ ಪುಟಗಳನ್ನು ಕಳುಹಿಸಿತ್ತು. ಕನ್ನಡ ಸಾಹಿತ್ಯ ಪರಿಷತ್ತಿಗೆ ಈ ಪ್ರಯತ್ನ ಅಷ್ಟು ಹಿತವಾಗಿಲ್ಲದಿರುವುದಕ್ಕೆ ಕಾರಣಗಳು ಕಾಣಬರುವುದಿಲ್ಲ.

ಮುನ್ನೋಟ

ಇನ್ನು ಮುಂದೆ ಪ್ರಕಟವಾಗಬೇಕಾದ ನಿಘಂಟುಗಳ ಬಗೆಗಳಿಗೆ ಕೊನೆಯೇ ಇಲ್ಲ. ಅಷ್ಟು ವ್ಯಾಪಕವಾಗಿ ಅವಕಾಶವಿದೆ. ಮಕ್ಕಳ ನಿಘಂಟುಗಳಿಂದ ಹಿಡಿದು ಬಹು ಭಾಷಾ ವಿದ್ವಾಂಸರ ಅಗತ್ಯಗಳಿಗೆ ಪೂರೈಕೆಯಾಗುವಂತೆ ವಿವಿಧ ರೀತಿಯ ನಿಘಂಟುಗಳು ತಯಾರಾಗಬೇಕು. ಅನೇಕ ದ್ವಿಭಾಷಾ ನಿಘಂಟುಗಳು, ತ್ರಿಭಾಷಾ ನಿಘಂಟುಗಳು ಪ್ರಕಟವಾಗಬೇಕು. ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದ ಸೀಮಿತ ಪ್ರಯೋಜನದ ನಿಘಂಟುಗಳಾಗಬೇಕು. ಈ ವಿಷಯವನ್ನು ಗಮನಿಸಿ ಕರ್ನಾಟಕ ಸರಕಾರವು ವಿದ್ವಾಂಸರ ನೆರವಿನಿಂದ ನಿಘಂಟು ಕ್ಷೇತ್ರದ ಬೆಳವಣಿಗೆಗೆ ಸಹಾಯ ಮಾಡಬೇಕಾಗಿದೆ.

೧೮. ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ನಿಘಂಟು

ಪ್ರಸಿದ್ಧ ಇಂಗ್ಲಿಷ್ ನಿಘಂಟುಕಾರನಾದ ಡಾ। ಜಾನ್‌ಸನ್ನನು ಹೇಳಿದ ಒಂದು ಮಾತು ಈಗಲೂ ಪ್ರಸ್ತುತವಾಗಿದೆ. ಈಗೀಗ ಪ್ರಕಟವಾಗುತ್ತಿರುವ ಕನ್ನಡ ನಿಘಂಟುಗಳನ್ನು ನೋಡಿದರೆ ಈ ಮಾತಿನ ಸತ್ಯ ಮತ್ತಷ್ಟು ಸ್ಪಷ್ಟವಾಗುತ್ತದೆ. ಆ ಮಾತು ಇದು : **"ನಿಘಂಟುಗಳನ್ನು ಗಡಿಯಾರಗಳಿಗೆ ಹೋಲಿಸಬಹುದು. ಅತ್ಯಂತ ಅಬದ್ಧವಾದ ನಿಘಂಟುಕೂಡ ಯಾವ ನಿಘಂಟುಗಳೂ ಇಲ್ಲದಿರುವುದಕ್ಕಿಂತ ಮೇಲು. ಅತ್ಯಂತ ಶ್ರೇಷ್ಠವಾದ ನಿಘಂಟು ಕೂಡ ತೋರಿಸುವ ಅರ್ಥ ನಿಜ, ಸರಿ ಎಂದು ಹೇಳಲಾಗುವುದಿಲ್ಲ."** ಒಬ್ಬ ವಿದ್ಯಾರ್ಥಿಗೆ ತಾನು ಉಪಯೋಗಿಸುತ್ತಿರುವ ನಿಘಂಟು ಮಾತ್ರ ಗೊತ್ತು. ಆದರೆ ಅನೇಕ ನಿಘಂಟುಗಳಿರುತ್ತವೆ ಎಂಬುದು ಅವನಿಗೆ ತಿಳಿಯದೆ ಇರಬಹುದು. ಒಂದು ಉತ್ತಮ ನಿಘಂಟೆಂಬುದು ವಿದ್ಯಾರ್ಥಿಯ ಮೇಜಿನ ಮೇಲೆ ಸದಾ ಇದ್ದರೆ ಅದು ಒಂದು ಸಣ್ಣ ಪುಸ್ತಕ ಭಂಡಾರಕ್ಕೆ ಸಮಾನ. ಆದುದರಿಂದ ವಿದ್ಯಾರ್ಥಿಗಳೂ ನಿಘಂಟುಗಳನ್ನು ಆರಿಸುವಾಗ ಅವುಗಳಲ್ಲಿ ಅವರಿಗೆ ಬೇಕಾದಷ್ಟು ಶಬ್ದಗಳಿವೆಯೇ, ಅವುಗಳ ಅರ್ಥಗಳನ್ನು ಖಚಿತವಾಗಿ ತಿಳಿಸುತ್ತದೆಯೇ, ಅರ್ಥಗಳು ವಿಶ್ವಾಸಾರ್ಹವಾಗಿವೆಯೇ ಮತ್ತು ನಿಸ್ಸಂದಿಗ್ಧವಾಗಿವೆಯೇ ಎಂಬ ವಿಷಯಗಳ ಬಗ್ಗೆ ಹಿರಿಯರಾದ ಅಧ್ಯಾಪಕರಿಂದ ತಿಳುವಳಿಕೆಯನ್ನು ಪಡೆಯಬೇಕು.

ವಿದ್ಯಾರ್ಥಿಗಳು ಸಾಕಷ್ಟು ಶಬ್ದ ಸಂಪತ್ತನ್ನು ಗಳಿಸಿರಬೇಕು. ಶಬ್ದ ಸಂಪತ್ತು ಎಂದರೇನು? ನಿಘಂಟುಗಳನ್ನು ಕಣ್ಣಾರ ನೋಡಿ ಯಾರಾದರೂ ಶಬ್ದಸಂಪತ್ತನ್ನು ಗಳಿಸುವುದು ಸಾಧ್ಯವೇ? ಒಂದು ಶಬ್ದವು ಏನೇನು ಅರ್ಥಗಳನ್ನು ಹೊಂದಿದೆ ಎಂಬುದನ್ನು ನಿಘಂಟು ನಿಜವಾಗಿ ತಿಳಿಸಬಲ್ಲದೆ? ಈ ಪ್ರಶ್ನೆಗಳಿಗೆ ಶಬ್ದಾರ್ಥಶಾಸ್ತ್ರಜ್ಞರು ಉತ್ತರವನ್ನು ಹೇಳಬಹುದು. ಶಬ್ದಗಳೊಡನೆ ನಮ್ಮ ಬಾಳನ್ನು ಜನರ ನಡುವೆಯ ಬಾಳಿಗೆ ಹೋಲಿಸಬಹುದು. ಜನಸಮುದಾಯದಲ್ಲಿ ನಮಗೆ ಮೂರು ಬಗೆಯ ಜನರಿರುವುದು ಕಂಡುಬರುತ್ತದೆ, - **ಗೆಳೆಯರು, ಪರಿಚಿತರು, ಅಪರಿಚಿತರು**. ಶಬ್ದಗಳೂ ಹಾಗೆಯೇ ಮೂರು ತೆರನಾಗಿರುತ್ತವೆ. ಹೀಗಿರುವಾದ ಅಪರಿಚಿತರನ್ನು ಪರಿಚಿತರನ್ನಾಗಿಸಿಕೊಳ್ಳುವುದು. ಪರಿಚಿತರನ್ನು ಗೆಳೆಯರನ್ನಾಗಿ ಮಾಡಿಕೊಳ್ಳುವುದು ಜೀವನದ ಉದ್ದೇಶವಾಗಿರಬೇಕು. ಆಪರಿಚಿತರು ಯಾವಾಗ ಪರಿಚಿತರಾಗುತ್ತಾರೆ, ಪರಿಚಿತರು ಯಾವಾಗ ಸ್ನೇಹಿತರಾಗುತ್ತಾರೆ ಎಂಬುದನ್ನು ನಿರ್ಧಾರವಾಗಿ ಹೇಳಲಾಗುವುದಿಲ್ಲ. ಕೆಲವರಂತೂ ಎಂದು ಪರಿಚಿತರು ಆಗುವುದೇ ಇಲ್ಲ. ಶಬ್ದಗಳೂ ಹಾಗೆಯೇ!

ಒಬ್ಬ ವ್ಯಕ್ತಿಯ ಶಬ್ದ ಸಂಪತ್ತು ಎಂದರೆ ಸಮಯ ಬಂದಾಗ ಹಣದ ನೋಟಿನ ಕಂತೆಗಳನ್ನು ತೆಗೆಯುವಂತೆ, ಆತನು ಮಾತನಾಡುವಾಗ ಎಷ್ಟು ಶಬ್ದಗಳನ್ನು ಸಮರ್ಥವಾಗಿ ಉಪಯೋಗಿಸಬಲ್ಲ ಎಂಬ ಶಬ್ದ ಭಂಡಾರ. ಮಾನವರಿಗೆ ಬುದ್ಧಿ ಶಕ್ತಿ, ಭಾಷಾಜ್ಞಾನ, **ವಾಚಾಳತೆ**, ಬರಹದ ಸಾಮರ್ಥ್ಯ ಇವುಗಳೆಲ್ಲವೂ ಸಮಾನವಾಗಿದ್ದಾಗಲೂ ಶಬ್ದಸಂಪತ್ತು ಅಧಿಕರಾಗಿರುವವನು ಹೆಚ್ಚು ಪರಿಣಾಮಕಾರಿಯಾಗಿ ತನ್ನ ಅಭಿಪ್ರಾಯಗಳನ್ನು ಪ್ರಕಟಿಸಬಲ್ಲವನಾಗಿರುತ್ತಾನೆ.

ಒಬ್ಬ ವಿದ್ಯಾರ್ಥಿಯು ತನ್ನ ಶಬ್ದ ಭಂಡಾರವನ್ನು ಎರಡು ರೀತಿಯಲ್ಲಿ ಅಭಿವೃದ್ಧಿ ಪಡಿಸಿಕೊಳ್ಳಬಹುದು. ಒಂದು-ಸಾಹಿತ್ಯ ಪುರವಣಿಗಳಲ್ಲಿ ಬರುವ "ನಿಮ್ಮ ಶಬ್ದ ಭಂಡಾರವನ್ನು ಹೆಚ್ಚಿಸಿಕೊಳ್ಳಿ" ಪ್ರಕಟಣೆಗಳ ಅಭ್ಯಾಸ. ಹೀಗೆ ಶಬ್ದಗಳನ್ನೂ ಅವುಗಳ ಅರ್ಥವನ್ನು ಗಟ್ಟಿ ಮಾಡಿಕೊಳ್ಳುವವನು ಆ ಶಬ್ದಗಳನ್ನು ಸ್ನೇಹಿತರೆದುರು ಪ್ರದರ್ಶನ ಮಾಡಲು ಕಾಯುತ್ತಾ ಇರುತ್ತಾನೆ. ಇಂಥವನನ್ನು ಅಮೆರಿಕದ ಒಬ್ಬ ನಿಘಂಟುಕಾರನು ಹತ್ತು ಬಣ್ಣ ಬಣ್ಣದ ಗುಂಡಿಗಳನ್ನು ಕೈಯಲ್ಲಿ ಹಿಡಿದು ಯಾವುದಾದರೂ ಒಂದು ಅಂಗಿ ಸಿಕ್ಕಿದರೆ ಸಾಕು ಅದಕ್ಕೆ ಹೊಲಿಗೆ ಹಾಕಿ ಬಿಡಬಹುದು ಎಂದು ಕಾಯುವವನಿಗೆ ಹೋಲಿಸುತ್ತಾನೆ. ಎರಡನೆಯದು - ತುಂಬ ನಿಧಾನವಾದ ಕ್ರಮ. ಮಾತನಾಡುವಾಗ ಮತ್ತು ಬರಹದಲ್ಲಿ ಒಂದು ಶಬ್ದದ ಅರ್ಥ ಏನು ಎಂದು ತಿಳಿಯುವ ಸ್ವಾಭಾವಿಕ ಮಾರ್ಗ. ಇದು ಶ್ರಮದ, ಸಹನೆಯ, ದೀರ್ಘಕಾಲದ ಪ್ರಯತ್ನ. ಆದರೆ ಶಾಶ್ವತವಾಗಿ ಲಾಭಕರವಾದದ್ದು. ಇದು ಏಕಾಗ್ರತೆಯಿಂದ ಇತರರ ಮಾತನ್ನು ಕೇಳುವ ಮತ್ತು ಬಹುವಾಗಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಅವಲಂಬಿಸುತ್ತದೆ. ಇಂಥ ಪ್ರಯತ್ನವಿಲ್ಲದೆ ಶಬ್ದ ಸಂಪತ್ತನ್ನು ಗಳಿಸಬಹುದೆಂಬುದು ಆಗದ ಮಾತು.

ಉತ್ತಮ ಉಪಾಧ್ಯಾಯನ ಸಹಾಯವಿಲ್ಲದೆ ಈ ಮಾರ್ಗ ಸುಗಮವಾಗುವುದಿಲ್ಲ. ಉಪಾಧ್ಯಾಯನೇ ಇಂಥ ಪ್ರಯತ್ನದಲ್ಲಿ ನಿರತನಾಗಿದ್ದು ಶಬ್ದ ಸಂಪತ್ತನ್ನು ಗಳಿಸಿದ್ದರೆ ಆತನು ವಿದ್ಯಾರ್ಥಿಗಳಿಗೆ ಬಹುವಾಗಿ ಸಹಾಯಮಾಡುತ್ತಾನೆ. ದೊಡ್ಡ ಕಾದಂಬರಿಗಳಂಥ ಗ್ರಂಥವನ್ನು ಓದುವಾಗ ಅಲ್ಲಿ ಬರುವ ಹೊಸ ಶಬ್ದಗಳಿಗೆ ಅರ್ಥವನ್ನು ಉಹಿಸಿಕೊಂಡು ಕಥೆಯನ್ನು ಮುಂದಕ್ಕೆ ಓದುವುದನ್ನೂ ನಿಧಾನವಾಗಿ ಓದುವ ಗ್ರಂಥಗಳಲ್ಲಿ ಬರುವ ಹೊಸ ಶಬ್ದಗಳಿಗೆ ನಿಘಂಟಿನ ಸಹಾಯದಿಂದ ಅರ್ಥವನ್ನು ಗ್ರಹಿಸುವ ಮಾರ್ಗವನ್ನೂ ಆತನು ಕಲಿಸುತ್ತಾನೆ. ಶಬ್ದಗಳಿಗೆ ಅರ್ಥವನ್ನು ಊಹಿಸುವುದು, ಸರಿಯಾದ ಮಾರ್ಗವಲ್ಲ. ಆದರೂ ಸಂದರ್ಭದಿಂದ ಮೂಡುವ ಅರ್ಥವನ್ನು ತಿಳಿಯುವುದನ್ನು ನಾವು ಪ್ರೋತ್ಸಾಹಿಸಬೇಕು. ಈಗೀಗ ಸಿನಿಮಾ ಪ್ರಪಂಚದ ಜನಪ್ರಿಯತೆಯಿಂದಾಗಿ ದೂರದರ್ಶನದಲ್ಲಿ ಪ್ರಕಟವಾಗುವ ಅಶುದ್ಧ ಶಬ್ದಗಳ ಅಬದ್ಧ ಉಚ್ಚಾರಣೆಗಳ ಹಾವಳಿ ಹೆಚ್ಚಾಗಿದೆ. ಆದರೆ ಮನೆಯಲ್ಲಿ ಅಜ್ಜ ಅಜ್ಜಂದಿರು ಆಡುವ ಕನ್ನಡ ಮಾತಿನಲ್ಲಿ ಕಾಣುವ ಉಪಮಾನ, ಪ್ರತಿಮೆ, ನುಡಿಗಟ್ಟು, ಹಾಸ್ಯಕರವಾದ ರೂಪಕಗಳು ಮುಂತಾದುವೆಲ್ಲ ಗಾಳಿಯಲ್ಲಿ ತೂರಿ ಹೋಗುತ್ತಿವೆ. ಮನೆಯಲ್ಲಿ ಹೆಂಗಸರ ಮಾತಿನಲ್ಲಿ ವ್ಯಂಗ್ಯ, ಹಾಸ್ಯ, ಧ್ವನಿ, ಕಾಕು ಇವೆಲ್ಲ ಪ್ರಭಾವವನ್ನು ಕಳೆದುಕೊಳ್ಳುತ್ತಿವೆ. ಆತ್ಮೀಯವಾದ ಸುಪರಿಚಿತರ

ಸಹವಾಸದಲ್ಲಿ ಹೊರಹೊಮ್ಮುವ ಸುಸಂಸ್ಕೃತವಾದ ಅಂತರಾರ್ಥವುಳ್ಳ, ಸಮೃದ್ಧ ಚೈತನ್ಯದ ಮಾತಿನ ರೀತಿಯನ್ನು ವಿದ್ಯಾರ್ಥಿಗಳು ಗಮನವಿಟ್ಟು ಕೇಳುವಂತೆ ಉಪಾಧ್ಯಾಯರೂ ಮಾರ್ಗದರ್ಶನ ಮಾಡಬೇಕು. ಇದು ಸಾಧ್ಯವಾಗದೆ ಈಗ ಮನೆಮಾತಿನಲ್ಲಿ ರೂಢಿಯಲ್ಲಿದ್ದ ಅನೇಕ ಶಬ್ದಗಳು ಯುವಕರ ಮಾತಿನಲ್ಲಿ ಕಾಣಬರುವುದಿಲ್ಲ. ಸುಸಂಸ್ಕೃತ ಕುಟುಂಬದಲ್ಲಿ ಕೇಳಿಬರುವ ನಮ್ಮ ಭಾಷೆಯಲ್ಲಿ ನಮ್ಮ ಪ್ರಾಚೀನ ಕವಿಗಳ ವಿದ್ವಾಂಸರ ತಿಳಿವಳಿಕೆಯೆಲ್ಲ ಉಳಿದು ಬಂದಿರುತ್ತದೆ. ಅದು ನಾಶವಾಗಲು ನಾವು ಬಿಡಬಾರದು.

ಹೊಸತನಕ್ಕೆ ಸದಾಬಾಗಿಲು ತೆರೆದಿರಬೇಕು. ಆದರೆ ಭಾಷೆಯ ಕಾಗುಣಿತ ಹೊಸತಾಗಬಾರದು. ಇದನ್ನೆಲ್ಲ ನೆನಪಿನಲ್ಲಿಟ್ಟು ವಿದ್ಯಾರ್ಥಿಗಳಿಗೆ ಸಹಾಯಕವಾಗುವ ಕನ್ನಡ - ಕನ್ನಡ ನಿಘಂಟುಗಳನ್ನು ಸಿದ್ಧಪಡಿಸಬೇಕಾದ ಅಗತ್ಯ ಈಗ ಹೆಚ್ಚಾಗಿದೆ. ವಿದ್ಯಾರ್ಥಿಗಳಿಗೆಂದು ಬೇರೆಯಾಗಿ ಸಿದ್ಧಪಡಿಸುವ ಈ ನಿಘಂಟುಗಳಲ್ಲೂ ಮೂರು ಮಟ್ಟದ ನಿಲವುಗಳನ್ನು ನಾವು ಸಾಧಿಸಬಹುದು.

೧. ಮಾಧ್ಯಮಿಕ ಶಾಲೆಯ ಮಟ್ಟ

೨. ಪ್ರೌಢ ಶಾಲೆಯ ಮಟ್ಟ

೩. ಪದವಿಪೂರ್ವ ಮಟ್ಟ

ಆಯಾಮಟ್ಟದಲ್ಲಿ ಉಪಯೋಗವಾಗುವ ಶಬ್ದಗಳ ಗಣನೆಯನ್ನು ಮಾಡಿ ಶಿಕ್ಷಣ ಇಲಾಖೆಯು ಈಗಾಗಲೆ ಶಬ್ದಗಳ ಪಟ್ಟಿಯನ್ನು ಪ್ರಕಟಮಾಡಿದೆ. ಒಂದು ಶಬ್ದವು ಕನ್ನಡನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಉಚ್ಚಾರಗೊಳ್ಳುತ್ತಾ ಇದೆ. ಇವುಗಳನ್ನು ಕ್ರೋಡೀಕರಿಸಿ ವ್ಯಾಕರಣಶುದ್ಧವಾದ ಶಬ್ದ ಸ್ವರೂಪದ ಜೊತೆಯಲ್ಲಿ ಅವುಗಳನ್ನು ಪರ್ಯಾಯ ರೂಪಗಳಾಗಿ ದಾಖಲಿಸಬೇಕು. ಸೂಕ್ತವಾಗಿ ಅರ್ಥವನ್ನೂ ದಾಖಲಿಸಬೇಕು.

ಮೊದಲೆರಡು ಮಟ್ಟಗಳಲ್ಲಿ ವ್ಯಾಕರಣ ವಿಚಾರಕ್ಕೆ ಹೆಚ್ಚು ಗಮನ ಕೊಡಬೇಕಾಗಿಲ್ಲ. ಮೂರನೆಯ ಮಟ್ಟದಲ್ಲಿ ವ್ಯಾಕರಣ ವಿಚಾರದಲ್ಲಿ ಅಧಿಕವಾದ ವಿವರಗಳನ್ನು ಸ್ಪಷ್ಟವಾದ ಕ್ರಮದಲ್ಲಿ ನಿರೂಪಿಸಬೇಕು.

ಕನ್ನಡಕ್ಕೆ ಬೇಕಾದ ಒಂದು ಥೆಸಾರಸ್ ಅಥವಾ ಸಮೀಪಾರ್ಥ ನಿಘಂಟು ಇನ್ನೂ ತಯಾರಾಗಿಲ್ಲ. ಕೆಲವು ಕಡೆ ಪ್ರಯತ್ನಗಳು ನಡೆಯುತ್ತಿವೆ. ಆದರೆ ನಿರ್ಧಾರವಾದ ವಿದ್ವಾಂಸರ ಪ್ರಯತ್ನ ಯಾವುದೂ ಕಾಣುತ್ತಿಲ್ಲ. ಸಮಾನಾರ್ಥ, ವಿರುದ್ಧ ಅರ್ಥಗಳ ನಿಘಂಟುಗಳು ಪ್ರಕಟವಾಗಬೇಕು. ಹೀಗೆ ಈ ಶಾಲಾ ವಿದ್ಯಾರ್ಥಿಗಳ ನಿಘಂಟು ಕ್ಷೇತ್ರ ತೀರ ಬಡಕಲಾಗಿದೆ. ಈ ಕ್ಷೇತ್ರದಲ್ಲಿ ದುಡಿಯಲು ನಿಸ್ವಾರ್ಥಿಗಳಾದ ಯುವ ಪೀಳಿಗೆಯ ಆಗಮನವನ್ನು ನಿರೀಕ್ಷಿಸುವುದು ಈಗಿನ ಸ್ಥಿತಿಯಾಗಿದೆ.

೧೯. ಶ್ರೇಷ್ಠ ನಿಘಂಟುಕಾರನಾಗಲು ಇರಬೇಕಾದ ಅರ್ಹತೆಗಳು

ಭಾರತ ದೇಶದಲ್ಲಿ ಅನೇಕ ಪ್ರಸಂಗಗಳಲ್ಲಿ ಆಗಾಗ ನಡೆದ ನಿಘಂಟು ವಿಚಾರ ಸಂಕಿರಣಗಳಲ್ಲಿ ಇಪ್ಪತ್ತು ವರ್ಷಗಳ ಕಾಲ ಭಾಗವಹಿಸುವ ಅವಕಾಶ ಸಿಕ್ಕಿದ್ದ ನನಗೆ ಅನೇಕ ನಿಘಂಟುಕಾರರ ಪರಿಚಯವಾದುದು ಒಂದು ಸುದೈವ. ಅಂಥ ಅನೇಕರೊಡನೆ ನಿಘಂಟುಕಾರರ ಅರ್ಹತೆಯ ಬಗ್ಗೆ ಆಗಾಗ ಮಾತುಕತೆಗಳು ನಡೆಯುತ್ತಿತ್ತು. ನನ್ನ ವಿಚಾರ ವಿನಿಮಯಗಳಲ್ಲಿ ಕೇಳಿ ಬಂದ ತೀರ್ಮಾನವನ್ನು ಇಲ್ಲಿ ದಾಖಲು ಮಾಡುತ್ತಿದ್ದೇನೆ. ಇಲ್ಲಿ ಹೇಳಿರುವ ಅರ್ಹತೆಗಳಿಗಿಂತ ಹೆಚ್ಚಾದ ಸಾಮಾರ್ಥ್ಯವುಳ್ಳ ನಿಘಂಟುಕಾರರು ಇರುವುದು ಸಾಧ್ಯವಾದರೆ ಅದು ಆಯಾ ಭಾಷೆಯನ್ನು ಮಾತನಾಡುವವರ ಪುಣ್ಯ.

೧. ಮುಖ್ಯವಾಗಿ ನಿಘಂಟುಕಾರನಿಗೆ ತನ್ನ ಭಾಷೆಯ ಪರಿಚಯವು ಆಳವಾಗಿರುವುದರ ಜೊತೆಗೆ ಆ ವರ್ಗಕ್ಕೆ ಸೇರಿದ ಇತರ ಭಾಷೆಗಳಲ್ಲಿ ಒಂದೆರಡು ಭಾಷೆಗಳ ಪರಿಚಯವಾದರೂ ಇರಬೇಕು. ಆಳವಾದ ವಿದ್ವತ್ತಿಲ್ಲದಿದ್ದರೂ ಆಯಾ ಭಾಷೆಗಳ ನಿಘಂಟುಗಳನ್ನು ಪರಿಶೀಲಿಸಿ ಉಪಯೋಗ ಪಡೆಯುವಷ್ಟು ತಿಳಿವಳಿಕೆ ಇರಬೇಕು. ಕನ್ನಡದ ನಿಘಂಟುಕಾರರಿಗೆ ಸಂಸ್ಕೃತದ ಪರಿಚಯ ಚೆನ್ನಾಗಿರಬೇಕು. ಜೊತೆಗೆ ತೆಲುಗು, ತಮಿಳು, ತುಳು, ಮಲಯಾಳ ಭಾಷೆಗಳ ಪರಿಚಯವಿದ್ದರೆ ಉತ್ತಮ. ಪ್ರಪಂಚದಲ್ಲಿ ನಿಘಂಟು ಶಾಸ್ತ್ರದ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುತ್ತಿರುವಷ್ಟು ಸಾಹಿತ್ಯ ಮತ್ತಾವ ಭಾಷೆಯಲ್ಲಿಯೂ ಪ್ರಚಾರವಾಗುತ್ತಿಲ್ಲ. ಆದುದರಿಂದ ವಿಚಾರಸಂಕಿರಣದಲ್ಲಿ ಸಮಯ ಬಂದಾಗಲೆಲ್ಲಾ ಸಮಾನ ವಿದ್ವಾಂಸರೊಡನೆ ಇಂಗ್ಲಿಷಿನಲ್ಲಿ ವ್ಯವಹಾರಮಾಡುವಷ್ಟು ಇಂಗ್ಲಿಷ್ ಅಂತೂ ಖಂಡಿತ ತಿಳಿದಿರಬೇಕು.

೨. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದರಲ್ಲಿ ಸಾಮಾರ್ಥ್ಯವಿರಬೇಕು. ಇಂಗ್ಲಿಷ್ ನಿಘಂಟುಗಳಲ್ಲಿ ಶಬ್ದಗಳಿಗೆ ವಿವರಣೆ ಸೂಕ್ತವಾಗಿದ್ದು ಅದನ್ನು ಕನ್ನಡ ಭಾಷೆಗೆ ಹಾಗೆಯೇ ಉಪಯೋಗಿಸುವುದು ಸರಿ ಎಂದು ಕಂಡು ಬಂದರೆ ಅಂಥ ಲೇಖನ ಭಾಗಗಳನ್ನು ಕನ್ನಡ ಭಾಷೆಯ ಮರ್ಯಾದೆಗೆ ಅನುಸಾರವಾಗಿ ಅನುವಾದಮಾಡುವ ಶಕ್ತಿ ಧಾರಾಳವಾಗಿರಬೇಕು.

೩. ಕನ್ನಡದಲ್ಲಿ ಲೇಖನಗಳನ್ನು ಬರೆಯುವುದರಲ್ಲಿ ಕೌಶಲವಿರಬೇಕು ಈ ನಿಘಂಟುಕಾರನಿಗೆ. ಆತನು ದೊಡ್ಡಕವಿಯಾಗಲಿ, ಕತೆಗಾರನಾಗಲಿ ಆಗಿರಬೇಕಾಗಿಲ್ಲ. ವಿಷಯಗಳನ್ನು ಸಕ್ರಮವಾಗಿ ಜೋಡಿಸಿ ಸರಳವಾಗಿಯೂ ಸ್ಪಷ್ಟವಾಗಿಯೂ ಸಂಗ್ರಹವಾಗಿಯೂ ನಿರೂಪಿಸುವ ಶಕ್ತಿಯನ್ನು ಗಳಿಸಿಕೊಂಡಿರಬೇಕು. ನಿಘಂಟು ಮುಖ್ಯವಾಗಿ ವಿಷಯಗಳನ್ನು ತಿಳಿಸುವ ಗ್ರಂಥ. ಆದುದರಿಂದ ನಿಘಂಟುಗಳಲ್ಲಿ ಶಬ್ದಗಳ ವಿವರಣೆಗೆಂದು ಬರೆಯುವ ಕಿರು ಲೇಖನಗಳು ಉತ್ತಮ ತರಬೇತಿಯುಳ್ಳ ದಕ್ಷ ಶಿಕ್ಷಕನು ಬರೆದ ಲೇಖನಗಳಂತಿರಬೇಕು. ಇದು ನಿಘಂಟು ನೆರವೇರಿಸುವ ಶಿಕ್ಷಣಕಾರ್ಯ.

೪. ನಿಘಂಟುಕಾರನು ಉತ್ತಮ ನಿಘಂಟಿಗೂ ಸಾಮಾನ್ಯ ನಿಘಂಟುಗಳಿಗೂ ಇರುವ ವ್ಯತ್ಯಾಸವನ್ನು ಕೂಡಲೇ ಗುರುತಿಸುವವನಾಗಿರಬೇಕು. ಸ್ವಂತವಾದ ನಿಘಂಟು ವಿಮರ್ಶೆಯ ತತ್ವವೊಂದನ್ನು ಆತ ತನ್ನ ಕಾರ್ಯದಲ್ಲಿ ಅಳವಡಿಸಿಕೊಂಡಿರಬೇಕು.

೫. ಕನ್ನಡ ನಿಘಂಟುಗಳಲ್ಲಿ ಉಲ್ಲೇಖವಾಗಿರುವ ಅನೇಕ ಶಬ್ದಗಳು ಹಳಗನ್ನಡ ರೂಪಕ್ಕೆ ಸಂಬಂಧಿಸಿರುತ್ತವೆ. ಅವುಗಳಲ್ಲಿ ಕೆಲವೊಮ್ಮೆ ಲಿಪಿಕಾರನ ಕೈತಪ್ಪಿನಿಂದಲೋ ಕಣ್ತಪ್ಪಿನಿದಂಲೋ ಅಬದ್ಧ ರೂಪಗಳು ಬಂದಿರುತ್ತವೆ. ಇಂಥ ಸ್ಖಾಲಿತ್ಯಗಳನ್ನು ವೈಜ್ಞಾನಿಕವಾಗಿ ಸರಿಪಡಿಸುವ ಗ್ರಂಥಸಂಪಾದನೆಯ ಶಾಸ್ತ್ರದಲ್ಲಿ ನಿಘಂಟುಕಾರನು ಪ್ರವೀಣನಾಗಿರಬೇಕು.

೬. ಆಧುನಿಕ ಯುಗದಲ್ಲಿ ಭಾಷಾಶಾಸ್ತ್ರವು ವಿವಿಧ ಮುಖಗಳಲ್ಲಿ ವ್ಯಾಪಕವಾಗಿ ಬೆಳೆದಿದೆ. ಗಣಿತ ಶಾಸ್ತ್ರದ ತಿಳಿವಳಿಕೆಯಿಲ್ಲದಿದ್ದರೆ ಇಂಥ ವಿಷಯಗಳನ್ನು ತಿಳಿಸುವ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲು ಆಗುವುದೇ ಇಲ್ಲ. ಆದ್ದರಿಂದ ಭಾಷಾಶಾಸ್ತ್ರದ ಆಳವಾದ ಜ್ಞಾನದ ಜೊತೆಗೆ ಗಣಿತಶಾಸ್ತ್ರ ಜ್ಞಾನವೂ ನಿಘಂಟುಕಾರನಿಗೆ ಅಗತ್ಯವಾದ ಅರ್ಹತೆಯಾಗುತ್ತದೆ.

೭. ಇವುಗಳ ಜೊತೆಗೆ ಕಾವ್ಯದ ರಸಾಸ್ವಾದನೆಯಲ್ಲಿ ನಿಘಂಟುಕಾರ ತುಂಬ ನೈಪುಣ್ಯವುಳ್ಳವನಾಗಿರಬೇಕು. ಆಗ ಶಬ್ದಗಳ ಅರ್ಥನಿರೂಪಣೆಗೆ ಆತನು ಅತ್ಯುತ್ತಮವಾದ ಕಾವ್ಯಮಯವಾದ ದೃಷ್ಟಾಂತಗಳನ್ನು ಆರಿಸಿ ಶಬ್ದಾರ್ಥವನ್ನು ಸಂದೇಹವಿಲ್ಲದೆ ತೀರ್ಮಾನಿಸುವ ಕಾರ್ಯವನ್ನು ಮಾಡುವುದು ಸುಲಭವಾಗುತ್ತದೆ.

೮. ಕಾವ್ಯಗಳಲ್ಲಿ ಬರುವ ಎಲ್ಲ ಶಾಸ್ತ್ರಗಳ ಸಂಬಂಧ ಮತ್ತು ಶಬ್ದಗಳನ್ನು ವಿವರಿಸಬೇಕಾದರೆ ಆಯಾ ಶಾಸ್ತ್ರಗಳ ಪರಿಚಯವಿರಬೇಕು.

೯. ಕಂಪ್ಯೂಟರ್ ಬಳಸುವ ಮತ್ತು ಇಂಗ್ಲಿಷ್ ಮತ್ತು ಕನ್ನಡ ತಂತ್ರಾಂಶಗಳ ಬಗ್ಗೆ ತಿಳಿವಳಿಕೆ ಬೇಕು.

ಅಧಿಕಾರಾನುಭವ, ಸುಖಭೋಗಾನುಭವ, ಆಧ್ಯಾತ್ಮಿಕ ಜೀವನಾನುಭವ ಮುಂತಾದ ಎಲ್ಲ ಜೀವನಾನುಭವಗಳ ಪರಿಣಾಮವಾಗಿ ದೊರಕುವ ಜ್ಞಾನವೇ ನಿಘಂಟುಕಾರನಿಗೆ ಅಗತ್ಯವಾಗಿರುವ ಜ್ಞಾನ. ಇದನ್ನು **ಕಾವ್ಯಾ ಲೋಕನದ** ಒಂದು ವೃತ್ತ ತುಂಬ ಚೆನ್ನಾಗಿ ವಿವರಿಸುತ್ತದೆ.

ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆಬ
ಲ್ಲರ ಬಗೆಗಲ್ತು ವಸ್ತು ಕೃತಿಯಂ ಸಲೆ ಪೇೞ್ವುದು ಕಲ್ತು ಪೇೞದಂ
ದರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆಬ
ಲ್ಲರ ಬಗೆಗಲ್ತದಾವೆಡೆಗಮಲ್ತದು ಕಲ್ಪಿ ವಲಂ ಕವೀಂದ್ರರಾ ॥ (೨೦೫)

ಇದು ಕವಿಯನ್ನು ಕುರಿತು ಹೇಳಿರುವ ಮಾತು. ಇದನ್ನು ನಿಘಂಟುಕಾರರಿಗೂ ಚೆನ್ನಾಗಿ ಅನ್ವಯಿಸಬಹುದು. ನಿಘಂಟುಕಾರ ಕವಿಯ ಭಾವವನ್ನು ತಿಳಿಸುವ ಸಮರ್ಥ ಸಹೃದಯ ವಿಮರ್ಶಕನಾಗಬೇಡವೆ?

೨೦. ಅನುಬಂಧಗಳು

ನಿಘಂಟು ರಚನೆಗೆ ಸಂಬಂಧಿಸಿದ ಕೆಲ ವಿವಿಕ್ತ ವಿಷಯಗಳು

I. ಅಜ್ಜರ (= ಅಜ್ಜೆಜ್?) ಎಂದರೇನು?

ಕರ್ನಾಟಕ ವಿಶ್ವವಿದ್ಯಾಲಯದ "ಕರ್ನಾಟಕ ಭಾರತಿ"ಯ ರಾಜ್ಯೋದಯ ಸಂಚಿಕೆ (೧೯೭೪)ಯಲ್ಲಿ ಡಾ।। ಚಿದಾನಂದಮೂರ್ತಿಯವರು ಒಂದು ಕಿರುಲೇಖನವನ್ನು ಬರೆದು "**ಅಜ್ಜೆಜ್**" ಎಂಬ ಶಬ್ದದ ಅರ್ಥವನ್ನು ನಿರ್ಧರಿಸಲು ಪ್ರಯತ್ನಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟಿ'ನಲ್ಲಿ ಆ ಶಬ್ದಕ್ಕೆ 'ಬಂಧನ' ಎಂದು ಅರ್ಥವನ್ನು ಕೊಟ್ಟು ಪ್ರಶ್ನೆ ಹಾಕಿರುವುದನ್ನು ಅವರು ಗಮನಿಸಿದ್ದಾರೆ. 'ಬಂಧನ' ಎನ್ನುವುದು ಊಹಿಸಿದ ಅರ್ಥವೆಂದೂ ಅದಕ್ಕೆ ನಿರ್ಧಾರವಾಗಿ ಅರ್ಥಹೇಳಬಹುದಾದ ಮತ್ತೊಂದು ಪದ್ಯವಿದೆಯೆಂದೂ ಹೇಳಿ ಅದನ್ನು ಉದಾಹರಿಸಿದ್ದಾರೆ. ಕಲಚುರ್ಯ ರಾಜನಾದ ಬಿಜ್ಜಳ(೧೧೬೬)ನನ್ನು ವರ್ಣಿಸುವ ಕೆಲವು ಪದ್ಯಗಳಿವೆ. ಅವು ಹೀಗಿವೆ.

ಶ್ರೀಮತ್ಕಳಚುರ್ಯ ಕುಳೋ[೧]
ದ್ದಾಮಂ ನೆಗಟ್ದಿಂ ಧರಿತ್ರಿಯೊಳ್ ಜಯಲಕ್ಷ್ಮೀ
ಧಾಮಂ ಪಾಳಿತ ವಿಬುಧ
ಸ್ತೋಮಂ ಬಿಜ್ಜಳನೃಪಾಳನಹಿತ ಕರಾಳಂ

ಧರೆಯಂ ಪೀಡಿಸಿ ಸೊರ್ಕಿ ದಕ್ಕುದಲೆವಾಯ್ದುದ್ವೃತ್ತರಂ ವೈರಿ ಭೂ
ಪರನುನ್ಮೂಳಿಸಿದಂ ಸ್ವಬಾಹುಬಳದಿಂ ವಿಶ್ವಂಭರಾಭಾರಮಂ
ಪಿರಿದುಂ ತಾಳ್ದಿದನಾತ್ಮಬಾಹುತಳದೊಳ್ ಮಿಕ್ಕನ್ಯಭೂಪಾಳರೊಳ್
ದೊರೆಯೇ ಬಾಷ್ಪವಿಕೀರ್ಣವೈರಿವನಿತಾದೃಕ್ಕಜ್ಜಳಂ ಬಿಜ್ಜಳಂ

ಪರನೃಪರಂಜಿ ತೆತ್ತ ಧನಮುಂ ವನಿತಾಜನಮುಂ ವಿಭೂಷಣಾಂ
ಬರಗಜವಾಜಿಸಂಕುಳಮುಮಲ್ಲದೆ ಮಿಕ್ಕ ನೃಪಾಳರಂತಿರ ಟಿ
ಜ್ಜರ ಪಡೆದಿತ್ತ ರಾಜ್ಯ ವಿಭವಕ್ಕನುರಾಗದ ಮುಯ್ಯನಾಂಪನೇ .
ಸ್ಫುರಿತತರಪ್ರತಾಪನಿಧಿ ಭಾಪ್ಪುರೆ ಬಿಜ್ಜಳಭೂಮಿಪಾಳಕಂ

---

೧. ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ : ಸಂಪುಟ ೧೬, ಸಂಚಿಕೆ ೨, ಜುಲೈ ೧೯೩೨, ಪುಟ ೧೦೦ ಮತ್ತು ಸೌಇಇ XX.

ಧರೆಯೊಳ್ ವಿಕ್ರಮಚಕ್ರವರ್ತಿಯೆನಿಸಿರ್ದಾ ಬಿಜ್ಜಳೋರ್ವೀಶಭೀ
ಕರಭೇರೀರವಮೊರ್ಮೆಯಲ್ ನೆಗೞೆ ಕೇಳ್ದಾ ಗೂರ್ಜರಂ ಕೂಡೆ ಜ
ರ್ಜರನಾದಂ ಕುಸಿದಂ ಖಸಂ ನಡುಗಿ ಕಂಡಂ ಪಾಂಡ್ಯನಂದಂಜಿ ಬ
ರ್ಬರನುರ್ಬ್ಬಿ ಬಿಸುಟೋಡಿದಂ ಭಯದೆ ಪೊಕ್ಕಂ ಮಾಳವಂ ಮಾಳವಂ

ಈ ಪದ್ಯಗಳಲ್ಲಿ ಮೂರನೆಯ ಪದ್ಯದಲ್ಲಿ ಬರುವ 'ಅಜ್ಜರ' ಎಂಬುದು ಚಿದಾನಂದ ಮೂರ್ತಿಗಳು ಹೊಸದಾಗಿ ಗುರುತಿಸಿರುವ ಶಬ್ದ. ಈ ಶಬ್ದಕ್ಕೆ ವಿವರಣೆಯನ್ನು ನೀಡುತ್ತಾ ಅವರು "ಅಜ್ಜರ"ವು ಸಾಲ, ತೆರಿಗೆ, ಕಪ್ಪಕಾಣಿಕೆಗಳಿಗೆ ಸಂಬಂಧಿಸಿದ ಪದವಾಗುತ್ತದೆ ಎಂದು ತೀರ್ಮಾನಿಸಿದ್ದಾರೆ. ಇದಕ್ಕೆ ಪೋಷಕವಾಗಿ ತೆಲುಗಿನ 'ಅಚ್ಚಾರಮು', ಮಲೆಯಾಳದ ಅಚಾರಂ ಎಂಬವು ಜ್ಞಾತಿ ಶಬ್ದಗಳು ಎಂದು ಊಹಿಸಿದ್ದಾರೆ. ಈ ಊಹೆ ಸರಿಯಲ್ಲ ಎಂದು ಹೇಳುವುದು ಈ ಟಿಪ್ಪಣಿಯ ಉದ್ದೇಶ.

ನನ್ನ ವಿವರಣೆ ಈ ರೀತಿ ಇದೆ :

೧. ಇಲ್ಲಿರುವ ಪದ 'ಅಜ್ಜರ' ಅಲ್ಲ; ಅದು 'ಅಜ್ಜ'. 'ಅಜ್ಜರ' ಎಂಬುದು ಅಜ್ಜರ್ ಎಂಬುದರ ಬಹುವಚನ ಷಷ್ಠೀರೂಪ.

೨. 'ಅಜ್ಜರ್' ಎಂಬುದು ಈ ಹಿಂದೆ ಅನೇಕ ಕಡೆಗಳಲ್ಲಿ ಉಪಯೋಗವಾಗಿದೆ.

(ಅ) ವಡ್ಡಾರಾಧನೆಯ ಈ ವಾಕ್ಯವನ್ನೇ ಗಮನಿಸಿ:
"ಎಲ್ಲಾ ಕುಮಾರರ್ಕಳ್ಗಂ ತಾಯ್ ತಂದೆಯಜ್ಜರ್ಕಳ
ಮನೆಯಿಂದಂ ಪೊಸಲುಮುಡಲುಂ ತುಡಲುಂ ತಂಬುಲ-
ಮುಂ ತಿಂಬಡಂಗಳುಂ ಬಂದುವು."[೨]

(ಆ) ಪಂಪಭಾರತದ ಪದ್ಯ ಹೀಗಿದೆ:
ಆದಿಯೊಳವರಂ ಪಿರಿದೊಂ
ದಾದರದಿಂನಡಸಿದಜ್ಜರಪ್ಪುದಱಿಂದಂ
ಕಾದರಿವರವರೊಳವರುಂ
ಕಾದರ್ ನೆರೆದಿವರೊಳೆಂತು ನಂಬುವೆ ನೃಪತೀ[೩]

(ಇ) ಅಜಿತಪುರಾಣದ ಪದ್ಯ ಹೀಗಿದೆ:
ನಿಮಗೆಂದಪ್ಪಡಮಾಮಱಿ
ಯೆ ಮನಃಕ್ಷತಮಾಗಿಯಱಿಯದೆಮ್ಮಿಂದಮಿದಂ

---

೨. ವಡ್ಡಾರಾಧನೆ : ಪುಟ ೧೧೬, ಸಾಲು ೨೦
೩. ಪಂಪಭಾರತ : ಆಶ್ವಾಸ ೧೨, ಪದ್ಯ ೧೮.

ಸಮವಾಯಂ ಮಾಡಿದೊಡಂ
ಕ್ಷಮಿಯಿಪುದೆಂದೆರೆದರಜ್ಜರಂ ಗುಜ್ಜರುಮಂ[೪]

ಹೀಗೆಯೇ ಇತರ ಪ್ರಯೋಗಗಳೂ ಇವೆ. ಇಲ್ಲಿರುವ ಶಬ್ದಗಳು "ಅಜ್ಜ" ಶಬ್ದದ ರೂಪಾಂತರಗಳು. "'ಅಜ್ಜಂ' ಪಿರಿಯನೊಳೆಸೆಗುಂ" ಎಂಬುದು ಕರ್ಣಾಟಕ ನಿಘಂಟಿನ ವಿವರಣೆ. (ಅಜ್ಜನೆಂದರೆ ಅಂತಃಪುರದ ಹಿರಿಯ ವಯಸ್ಸಿನ ಅಧಿಕಾರಿ ಎಂಬ ಒಂದು ಅರ್ಥವೂ ಇದೆ. ಇದು ಇಲ್ಲಿ ಅಪ್ರಕೃತ).

ಮೇಲಿನ ಶಾಸನದಲ್ಲಿ ಪ್ರಯೋಗವಾಗಿರುವುದು ಇದೇ ಶಬ್ದ. ಚಿದಾನಂದ ಮೂರ್ತಿಗಳು ಹೇಳುವಂತೆ "ಅಧಿರಾಜನಾದ ಬಿಜ್ಜಳ ತನ್ನ ಶೌರ್‍ಯದಿಂದ ಶತ್ರುರಾಜರನ್ನು (ಪರನೃಪರ್) ಹೆದರಿಸಿ ಅವರಿಂದ ಹಣ, ಸ್ತ್ರೀಯರು, ಒಡವೆ, ವಸ್ತ್ರ, ಆನೆ, ಕುದುರೆಗಳನ್ನು ಕಾಣಿಕೆಯಾಗಿ ಪಡೆಯುತ್ತಿದ್ದ." ಎನ್ನುವುದಕ್ಕಿಂತ "ಶತ್ರು ರಾಜರು ತಾವೇ ಹೆದರಿಕೆಯಿಂದ, ತಮ್ಮ ರಾಜತ್ವದ ಉಳಿವಿಗೋಸ್ಕರವಾಗಿ ಬಿಜ್ಜಳನ ಬಳಿಗೆ ಬಂದು ಮೇಲೆ ಹೇಳಿದುವುಗಳನ್ನೆಲ್ಲಾ ಒಪ್ಪಿಸುತ್ತಿದ್ದರು. ಅವನು ಅವುಗಳನ್ನು ತನ್ನ ರಾಜ್ಯವಿಭವಕ್ಕೆ ಉಪಯೋಗಿಸುತ್ತಿದ್ದನು." ಎಂದು ಅರ್ಥಮಾಡುವದು ಸರಿ. "ಆ ವೈಭವ ತನ್ನ ಶಕ್ತಿ ಸಾಮರ್ಥ್ಯದ ಫಲವಾಗಿ ಲಭ್ಯವಾದದ್ದು" ಎನ್ನುವ ಮಾತು ಸರಿ. ಆದರೆ ಅಲ್ಲಿಂದ ಮುಂದೆ ಚಿದಾನಂದ ಮೂರ್ತಿಯವರು ಹೀಗೆ ಬರೆಯುತ್ತಾರೆ. "ಆದರೆ ಬೇರೆ ಅಧಿರಾಜರು (ಮಿಕ್ಕನೃಪಾಳರ್) ತಮ್ಮ ಅಧೀನದಲ್ಲಿರುವ ಸಾಮಂತರು ಕಪ್ಪಕಾಣಿಕೆಗಳನ್ನು ಕೊಡಬೇಕೆಂದು ಒತ್ತಾಯ ಪಡಿಸಿದಾಗ ಆ ಸಾಮಂತ ದೊರೆಗಳು ತಮ್ಮ ಪ್ರಜೆಗಳ ಮೇಲೆ ತೆರಿಗೆ ಕಂದಾಯಗಳನ್ನು "ಅಜ್ಜರ ಹಾಕಿ ಅದನ್ನು ತಂದು ಅಧಿರಾಜರಿಗೆ ಒಪ್ಪಿಸುತ್ತಿದ್ದರು." ಎಂಬ ವಿವರಣೆಗೆ ಬುಡವಿಲ್ಲ. ಈ ಪದ್ಯವು ಇತರ ರಾಜರು ಹೇಗೆ ಹಣವನ್ನು ಸಂಪಾದಿಸುತ್ತಿದ್ದರು ಎಂಬ ಬಗ್ಗೆ ಯಾವ ವಿವರಣೆಯನ್ನೂ ಕೊಡುವುದಿಲ್ಲ. ಹಾಗೆ ಅವರು ಯಾರೂ ಸಂಪಾದಿಸುತ್ತಿರಲಿಲ್ಲ. ಅವರಿಗೆ ಇದ್ದದ್ದೇ ಅವರ ಹಿರಿಯರಿಂದ ಬಂದದ್ದು ಎಂದು ಅರ್ಥವಿದೆ. ಬಿಜ್ಜಳನಂತಲ್ಲದೆ ಇತರ ರಾಜರು (ಮಿಕ್ಕ ನೃಪಾಳರ್) "ಅಜ್ಜರ ಪಡೆದಿತ್ತ ರಾಜ್ಯವಿಭವಕ್ಕೆ ಮುಯ್ಯನಾ"ನುತ್ತಿದ್ದರು. ಅವರು ಸ್ವಂತ ಸಂಪಾದನೆ ಮಾಡಲು ಅವರಿಗೆ ಶಕ್ತಿ ಇರಲಿಲ್ಲ. ಅಜ್ಜರು = ಹಿರಿಯರು = (ತಂದೆ) ತಾತ, ಮುತ್ತಾತ, ಮುಂತಾದವರು. ಪುರ್ವಾರ್ಜಿತವಾದ ಪರಂಪರೆಯಿಂದ ಬಂದ ರಾಜ್ಯ ವೈಭವವೇ ಇತರ ರಾಜರ ಹಿರಿಮೆ, ಸ್ವಂತದ್ದಲ್ಲ ಎಂಬುದು ವಿವರಣೆ.

೩. ಇಲ್ಲಿ 'ಅಜ್ಜರ' ಎಂದರೆ 'ಅಜ್ಜರು' ಎಂದೇ ಅರ್ಥ. ಪ್ರಥಮಾ ವಿಭಕ್ತಿಗೆ ಷಷ್ಠೀವಿಭಕ್ತಿ ಪ್ರಯೋಗವಾಗಿದೆ. ಹೀಗೆ ವಿಭಕ್ತಿ ಪಲ್ಲಟವಾಗುವುದು ಹಳಗನ್ನಡದ ಬಹು ಪ್ರಸಿದ್ಧವಾದ ಕಾವ್ಯರಚನಾಮಾರ್ಗದ ಅಂಶ. ಇದಕ್ಕೆ ಎಷ್ಟು ಬೇಕಾದರೂ ಉದಾಹರಣೆಗಳು ಸಿಕ್ಕುತ್ತವೆ. ಶಾಸನಗಳಲ್ಲಿಯೂ ಪ್ರಾಚೀನ ಕಾಲದಿಂದಲೂ ಇಂಥ ಪ್ರಯೋಗಗಳುಂಟು. ಕೆಲವು ದೃಷ್ಟಾಂತಗಳನ್ನು ಪರಿಶೀಲಿಸಬಹುದು.

---

೪. ಅಜಿತಪುರಾಣ : ಆಶ್ವಾಸ ೬, ಪದ್ಯ ೧೦೯.

(i) ನಿಶ್ಶಂಕೆಯಿಂ ನೃಪನ ಪೇಟೆ[೫]

(ii) ತನ್ನಿಟ್ಟ ಚಕ್ರಮದುಂ ನಿಃಪ್ರಭಮಾಗೆ[೬]

(iii) ತನ್ನ ಕಂಡ ಶುಭ ಸ್ವಪ್ನಂಗಳನಱಪೆ[೭]

(iv) ಕೊವುಜಗಟಿಯ ಗವುಣ್ಡ ಬಳ್ಳಜ್ಜನ್ತನ್ನ ಮ(ಮಾ)ಡಿಸಿದ ದೇಗುಲಕೆ ಬಿಟ್ಟಕೆಯಂ[೮]

(v) ಕಪ್ಪುರ ನಾಗಯ್ಯಂ ತನ್ನ ಮಾಡಿಸಿದ ದೇಗುಲಕ್ಕೆ[೯]

(vi) ...ವಯ್ಯಂ ತನ್ನ ಮಾಡಿಸಿದ ಬಸಸಂಕರ ದೇವರ ದೇಗುಲಕೆ[೧೦]

ಆದುದರಿಂದ "ಲಕ್ಷ್ಮೇಶ್ವರ ಶಾಸನದ 'ಅಜ್ಜರ'ವೂ ಹಂಪೆಯ ಶಾಸನದ ಅಜ್ಜೆಱೆಯೂ ಒಂದೆ ಎಂದು ಭಾವಿಸಲು ಪ್ರಬಲ ಅಡ್ಡಿಗಳೇನೂ ಇಲ್ಲ" ಎನ್ನುವ ಮಾತು ಬಿದ್ದುಹೋಗುತ್ತದೆ. ಹಂಪೆಯ ಶಾಸನದಲ್ಲಿ ತಾಯಿ ಮಗನಿಗೆ ಬುದ್ಧಿವಾದ ಹೇಳುವಾಗ ಇತರ ರಾಜ್ಯಗಳಿಂದ ಸಾಲದಹೊರೆಯನ್ನು ತಪ್ಪಿಸು ಎಂದು ಹೇಳಿರಲಾರಳು. ಅಲ್ಲದೆ 'ಇತ್ತ' ಎಂಬ ಕೃದಂತಕ್ಕೆ 'ಅಜ್ಜರ್', ಎಂಬುದು ಕರ್ತೃ ಪದ. 'ಅಜ್ಜರ ಪಡೆ' ಎಂಬ ಕ್ರಿಯಾ ಸಮಾಸಕ್ಕೆ ಬೇರೆ ಯಾವ ಆಧಾರವೂ ಇಲ್ಲ. ತಸ್ಮಾತ್ "ಅಜ್ಜೆಱೆ =?" ಎಂಬುದು ಸರಿ.

೫. ಶಬ್ದಮಣಿದರ್ಪಣ ಸೂ. 145 ಪ್ರಯೋಗ.

೬. ಬೊಪ್ಪಣನ ಶಾಸನ.

೭. ನೇಮಿನಾಥ ಪುರಾಣ 1.133.

೮. Bombay Karnataka Inscriptions Vol. I, Part I, No. 35, Line 3, ಕಾಲ 933.

೯. Ibid. Vol. I, Part I, No. 34, Line 11, ಕಾಲ 925.

೧೦. ಸೌಇಇ XX 24-35.

II. ಕಲಿಯುಗವಿಪರೀತನಲ್ಲ, ಕೇವಲ ಯುಗವಿಪರೀತ - ಬಾದಾಮಿಯ ಶಾಸನಕ್ಕೆ ಒಂದು ಟಿಪ್ಪಣಿ

ಕಪ್ಪೆ ಅರಭಟ್ಟನ್ ಶಿಷ್ಟ ಜನಪ್ರಿಯನ್ ಕಷ್ಟಜನ
ವರ್ಜಿತನ್ ಕಲಿ ಯುಗವಿಪರೀತನ್
ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಂಡನಮ್
ಮೃತ್ಯುಸ್ತತ್ ಕ್ಷಣಿಕೋ ದುಃಖಮ್ಮಾನಭಂಗಂ ದಿನೇ ದಿನೇ
ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿ ಯುಗವಿಪರೀತನ್
ಮಾಧವನೀತನ್ ಪೆಱನಲ್ಲ
ಒಳ್ಳಿತ್ತ ಕೆಯ್ವೊರಾರ್ಪೊಲ್ಲದುಮದಱನ್ತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸನ್ನಿಧ್ಧುಮದು ಬಂದು
ಕಟ್ಟಿದ ಸಿಂಘಮನ್ ಕೆಟ್ಟೊದೇನೆಮಗೆನ್ದು
ಬಿಟ್ಟವೊಲ್ಕಲಿಗೆ ವಿಪರೀತಂಗಹಿತರ್ಕಳ್
ಕೆಟ್ಟರ್ಮೇಣ್ ಸತ್ತರವಿಚಾರಮ್

ಸುಮಾರು ಕ್ರಿ.ಶ. ೭೦೦ಕ್ಕೆ ಸೇರಿದ ಈ ಶಾಸನ ಬಿಜಾಪುರದಲ್ಲಿ ಬಾದಾಮಿ ತಾಲ್ಲೂಕಿಗೆ ಸೇರಿದುದೆಂಬುದು ಕನ್ನಡ ಶಾಸನಗಳನ್ನು ಅಭ್ಯಾಸ ಮಾಡುವವರೆಲ್ಲರಿಗೂ ತಿಳಿದ ವಿಷಯ. ಇದರ ಬಗ್ಗೆ ಅನೇಕ ಚರ್ಚೆಗಳಾಗಿವೆ. ಇದರಲ್ಲಿ 'ಕಪ್ಪೆ ಅರಭಟ್ಟ' ಎಂಬ ಒಬ್ಬನನ್ನು ಸ್ತುತಿಸಿದೆ. ಈ ಹೆಸರಿನ ಬಗ್ಗೆಯೂ ನಿರ್ಧಾರವಾಗಿ ಏನೂ ಹೇಳುವಂತಿಲ್ಲ. ತ್ರಿಪದಿಯ ಪ್ರಯೋಗದ ದೃಷ್ಟಿಯಿಂದಲೂ ಅತಿ ಪ್ರಾಚೀನವಾದ ಈ ಶಾಸನದ ಪದ್ಯಗಳಲ್ಲಿ ಅರ್ಥದ ತೊಡಕುಗಳಿಲ್ಲದೆ ಇಲ್ಲ. ಇಲ್ಲಿರುವ ಸಂಸ್ಕೃತ ಶ್ಲೋಕದ ಬಗ್ಗೆ ಯಾವ ತೊಂದರೆಯೂ ಇಲ್ಲ. ಅದರ ಅರ್ಥವೂ ಸ್ಪಷ್ಟ.

- ಇದರ ಕನ್ನಡ ಭಾಗದಲ್ಲಿರುವ ತೊಂದರೆಗಳ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚಿಸಿದ್ದಾರೆ. 'ಮಾಧುರ್ಯ' ಎಂಬ ಪದವು ಬಹುವ್ರೀಹೀ ಸಮಾಸದಂತಿರುವ ಒಂದು ಪದ; ಮಾಧುರ್ಯವುಳ್ಳವನು (ಪ್ರೀತಿಯಿಂದ ಮಾತನಾಡುವವನು) ಎಂಬ ಅರ್ಥವನ್ನೂ ಕೊಡುತ್ತದೆ. ಅದರಲ್ಲಿ 'ಧುರ್ಯ' ಎಂಬ ಪದವನ್ನು ಹುಡುಕಲು ಪ್ರಯತ್ನಿಸಬೇಕಾಗಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕಿಂತ ಪ್ರಮುಖವಾಗಿರುವ ಮತ್ತೊಂದು ವಿಚಾರದ ಕಡೆಗೆ ವಿದ್ವಾಂಸರ ಗಮನವನ್ನೆ ಸೆಳೆಯುವುದು ಈ ಕಿರು ಟಿಪ್ಪಣಿಯ ಉದ್ದೇಶ.

ಕಪ್ಪೆ ಅರಭಟ್ಟನಿಗೆ, ' ಕಲಿಯುಗ ವಿಪರೀತ' ಎಂಬ ಬಿರುದಿದ್ದಿತೆಂಬ ಭಾವನೆ ಶಾಸನ ಅಧ್ಯಯನ ಮಾಡುವ ಕೆಲವರಲ್ಲಿ ಬೇರೂರಿದೆ. ಇದಕ್ಕೆ ಆಧಾರವಿಲ್ಲವೆಂಬುದು ನನ್ನ ದೃಷ್ಟಿ. ಈ ಶಾಸನದ ಸಂಸ್ಕೃತ ಶ್ಲೋಕವೊಂದನ್ನು ಬಿಟ್ಟರೆ ಮಿಕ್ಕ ಎಲ್ಲ ಪದ್ಯಗಳಲ್ಲಿಯೂ ' ವಿಪರೀತ' ಎಂಬ ಶಬ್ದ ಬರುತ್ತದೆ. ಮೊದಲನೆಯದರಲ್ಲಿ 'ಕಲಿಯುಗ ವಿಪರೀತ'. ಎರಡನೆಯದರಲ್ಲಿ 'ಕಲಿಗೆ ವಿಪರೀತ', ಮೂರನೆಯದರಲ್ಲಿ 'ಕಲಿಗೆ ವಿಪರೀತ'. ಈ ಮೂರು ಪದ್ಯಗಳಲ್ಲಿ ಮೊದಲ ಪದ್ಯದ ಅನ್ವಯ ಹೀಗೆ:

ಕಪ್ಪೆ ಅರಭಟ್ಟನು, "ಸಾಧುಗೆ ಸಾಧು,
ಮಾಧುರ್ಯಂಗೆ ಮಾಧುರ್ಯಂ,
ಬಾಧಿಪ್ಪ ಕಲಿಗೆ ಕಲಿ,
ಯುಗವಿಪರೀತನೀತನ್,
ಮಾಧವನೀತನ್ ಪೆಱನಲ್ಲ."

ಆದುದರಿಂದ "ಕಲಿಯುಗ ವಿಪರೀತ" ಎಂದು ಶಾಸನದ ಆರಂಭದಲ್ಲಿ ಬರುವ ಶಬ್ದ ಸಮುಚ್ಚಯವು ಬಿರುದಲ್ಲ. ಕೇವಲ ವರ್ಣನೆ. ಅಲ್ಲಿ 'ಕಲಿ' ಎಂಬುದೂ "ಯುಗ ವಿಪರೀತನ್" ಎಂಬುದೂ ಎರಡು ಬೇರೆ ಬೇರೆ ಪ್ರಥಮಾ ವಿಭಕ್ತಿಯ ರೂಪಗಳು.

ಕಪ್ಪೆ ಅರಭಟ್ಟನು ಮಹಾ ಪರಾಕ್ರಮಿಯೆಂಬುದನ್ನು ವರ್ಣಿಸುವುದು ಶಾಸನದ ಉದ್ದೇಶ. ಅವನಲ್ಲಿ ಸಾಧು ಗುಣ, ಮಾಧುರ್ಯದ ಗುಣ, ಕಲಿಯ ಗುಣ - ಈ ಮೂರೂ ಸೇರಿದ್ದುವು. ಹೀಗಿರುವುದು ಕಾಲ ಧರ್ಮಕ್ಕೆ ವಿರುದ್ಧವಾದುದು. ಸಾಮಾನ್ಯವಲ್ಲದ್ದು; ಬಹು ಅತಿಶಯವಾದುದು. ಮಾಧವನು ಅಂದರೆ ಶ್ರೀ ಕೃಷ್ಣನು ಇದೇ ರೀತಿಯ ಗುಣಗಳಿಂದ ಕೂಡಿ ತನ್ನ ಕಾಲದಲ್ಲಿ ಬಹು ಅಸಾಮಾನ್ಯನಾಗಿದ್ದನು; ಇತರರಿಂದ ಬೇರೆಯಾಗಿದ್ದನು. ಹಾಗೆಯೇ ಈತನೂ ಆ ಗುಣಗಳಿಗೆ ಆಶ್ರಯವಾಗಿದ್ದನು ಆದುದರಿಂದ ಕಾಲ ಧರ್ಮಕ್ಕೆ (ಯುಗ) ವಿರುದ್ಧವಾದಂಥ ಮಹಾಶಯನೂ ಆಗಿದ್ದನೆಂಬುದು ಮಾತ್ರ ಶಾಸನದ ಅರ್ಥ.

ಎರಡನೆಯ ಪದ್ಯದಲ್ಲಿ ಸ್ವಲ್ಪ ಪಾಠ ಕ್ಲಿಷ್ಟತೆಯಿದೆ. 'ಪೊಲ್ಲದುಂ' ಎನ್ನುವುದು 'ಪೊಲ್ಲರು' ಎಂದಿರಬಹುದು. ಆಗ ಅನ್ವಯ ಹೀಗಾಗುತ್ತಿದೆ. 'ಪೊಲ್ಲರುಂ' ಆರ್ ಒಳ್ಳಿತ್ತ ಕೆಯ್ವೊರ್. ಆದಱಿನ್ತೆ ಕಲಿಗೆ ಬಲ್ಲಿತ್ತು. ವಿಪರೀತ ಪುರಾಕೃತಂ ಅದು ಇಲ್ಲಿ ಬಂದು ಸನ್ನಿಕ್ಕುಂ (ಸನ್ನಿಧಿಸಿರ್ಕುಂ). ಅಂದರೆ ಸ್ವಾಭಾವಿಕವಾಗಿ ಕೆಟ್ಟವರಾಗಿರುವವರು ಒಳ್ಳೆಯದನ್ನು ಎಂದು ತಾನೇ ಮಾಡುತ್ತಾರೆ?

ಹಾಗೆಯೇ ಪರಾಕ್ರಮಿಗೆ 'ಬಲ್ಲಿತ್ತು' ಆಗಿರುವುದು ಶೌರ್ಯವನ್ನು ಪ್ರದರ್ಶಿಸುತ್ತಿರುವುದೇ ಗುಣ. ಹೀಗಿದ್ದೂ ಆತ ಸಾಧು ಮತ್ತು ಮಾಧುರ್ಯ ಗುಣ ಪೂರ್ಣ.

ಇಂಥವನೂ ಇತರರನ್ನು ಕೊಂದಿರಬೇಕಾದರೆ ಅದಕ್ಕೆ ಕಾರಣವಿರಬೇಕು. ಆ ಕಾರಣವನ್ನು ಮೂರನೆಯ ಪದ್ಯದಲ್ಲಿ ವಿವರಿಸಿದೆ.

"ಕಟ್ಟಿರುವ ಸಿಂಹವನ್ನು ಬಿಚ್ಚಿ ಬಿಟ್ಟರೆ ನಮಗೇನು ಅದರಿಂದ ತೊಂದರೆಯಾದೀತು." ಎಂದು ಸಿಂಹವನ್ನು ಬಿಚ್ಚಿ ಬಿಡುವ ಮುರ್ಖರಂತೆ 'ಅವಿಚಾರಂ' (ವಿವೇಕವಿಲ್ಲದೆ, ವಿಚಾರ ಮಾಡದೆ) ಕಪ್ಪೆ ಅರಭಟ್ಟನಿಗೆ ಅಹಿತರಾದವರು ಕೆಟ್ಟದ್ದನ್ನು ಮಾಡಿದರು. ವಿಪರೀತ ಗುಣವುಳ್ಳ ಕಲಿಯನ್ನು ಎದುರಿಸಿ ಸತ್ತುಹೋದರು.

ಹೀಗೆ ವಿವರಣೆ ಸಾಧ್ಯವಾದುದರಿಂದ ಕಪ್ಪೆ ಅರಭಟ್ಟನು ಯುಗವಿಪರೀತನಾದವನು. ತಾನು ಬದುಕಿದ್ದ ಕಾಲದಲ್ಲಿ ಅವನಂಥವರು ಯಾರು ಇರಲಿಲ್ಲ. ಅವನನ್ನು ಶ್ರೀ ಕೃಷ್ಣ ಸಂಥವರಿಗೆ ಮಾತ್ರ ಹೋಲಿಸಬಹುದು.

ಕಪ್ಪ ಅರಭಟ್ಟನು **ಕಲಿಯುಗ ವಿಪರೀತ**ನೆಂಬ ಬಿರುದನ್ನು ಹೊಂದಿರಲಿಲ್ಲ ವೆಂಬುದು ಈ ರೀತಿ ಸ್ಪಷ್ಟವಾಗುತ್ತದೆ.

III. ನಡೆದೇಗುಲ - ಒಂದು ಚರ್ಚೆ

ಬೆಂಗಳೂರು ವಿಶ್ವವಿದ್ಯಾಲಯವು ದಿವಂಗತ ರಾ. ನರಸಿಂಹಾಚಾರ್ಯರ ಶಾಸನ 'ಪದ್ಯಮಂಜರಿ'ಯನ್ನು ಪುನರ್ಮುದ್ರಣ ಮಾಡಿ ಪುಣ್ಯ ಕಟ್ಟಿಕೊಂಡಿದೆ. ಬಹು ದಿನದಿಂದ ವಿದ್ವಾಂಸರಿಗೆ ಅಲಭ್ಯವಾಗಿದ್ದ ಈ ಪುಸ್ತಕ ಈಗ ಸುಲಭವಾಗಿ ದೊರಕುತ್ತದಾದುದರಿಂದ ಅನೇಕರಿಗೆ ಇದರಿಂದ ತುಂಬ ಉಪಯೋಗವಾಗಿದೆ.

ಈ ಪುನರ್ಮುದ್ರಣವನ್ನು ಓದುತ್ತಿದ್ದಾಗ ನನಗೆ ಕಂಡು ಬಂದ ಒಂದು ಪದ್ಯದ ಅರ್ಥವನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಕಿರುಟಿಪ್ಪಣಿಯನ್ನು ಬರೆದಿದ್ದೇನೆ.

ಚಟ್ಟ ಎಂಬ, ನಾರಸಿಂಹ (I) ನ ಮಗನ ಹಿರಿಮೆಯನ್ನು ವರ್ಣಿಸುವ ಪದ್ಯವೊಂದು ಇದರಲ್ಲಿದೆ. 'ಚಟ್ಟನು' ಒಂದು ದೇವಸ್ಥಾನವನ್ನು (ಚಟ್ಟೇಶ್ವರ ದೇವಾಲಯವನ್ನು) ಕಟ್ಟಿಸಿದ್ದನ್ನು ಆ ಪದ್ಯ ವರ್ಣಿಸುತ್ತದೆ. ಪದ್ಯ ಹೀಗಿದೆ :—

ಪಲರಂ ರಕ್ಷಿಸಿ ಮತ್ತಂ
ಪಲವಂ ನಡೆದೇಗುಲಂಗಳಂ ಮಾಡಿಸಿದಂ
ನೆಲನೆಲ್ಲಮಱಿಯೆ ಚಟ್ಟಂ
ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ

ಶಾಸನ ಪದ್ಯಮಂಜರಿಯಲ್ಲಿ ಇದು ೮೦೬ನೆಯ ಪದ್ಯ.

ಹೊಸ ಮುದ್ರಣಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ಡಾ।। ಚಿದಾನಂದಮೂರ್ತಿ ಅವರು ಈ ಪದ್ಯವನ್ನು ಉದ್ಧರಿಸಿ ಅದರ ಕಾವ್ಯಮಯತೆಯನ್ನು ವಿವರಿಸಿದ್ದಾರೆ. ಈ ಸಂದರ್ಭದಲ್ಲಿ 'ನಡೆದೇಗುಲ' ಎಂಬ ಪದಕ್ಕೆ ಅವರು ಕೊಟ್ಟಿರುವ ಅರ್ಥ ಹೀಗಿದೆ. ಅವನು ಎರಡು ಬಗೆಯ ದೇವಾಲಯಗಳನ್ನು ನಿರ್ಮಿಸಿದ- ಒಂದು ಬಗೆಯವು ನಡೆದೇವಾಲಯಗಳು ಇನ್ನೊಂದು ಬಗೆಯದು ನೆಲೆದೇಗುಲ. ಆ ನಡೆದೇಗುಲಗಳು ಯಾವು ಅಲ್ಲ - ಕಷ್ಟದಲ್ಲಿ ಸಿಲುಕಿ ಸೋತು ಬಿದ್ದು ಹೋದವರಿಗೆ ರಕ್ಷಣೆ ಕೊಟ್ಟು ಅವರು ಮನುಷ್ಯರಂತೆ ತಲೆ ಎತ್ತಿ ಓಡಾಡುವ ಹಾಗೆ ಮಾಡಿದನಲ್ಲಾ ಆ ಜನರೇ ನಡೆದೇಗುಲಗಳು, ಇನ್ನೊಂದು ನೆಲೆದೇಗುಲ.... ಇಲ್ಲಿ ಮನುಷ್ಯರನ್ನು ನಡೆದೇಗುಲಗಳೆಂದು ವರ್ಣಿಸಿ, ಅವನು ಮಾಡಿದ ಧರ್ಮಕಾರ್ಯಗಳಲ್ಲಿ ಅವನ ಸಾಮಾಜಿಕ ಸೇವೆಗೆ ಪ್ರಾಧಾನ್ಯ ಕೊಟ್ಟಿದ್ದರ ಔಚಿತ್ಯವನ್ನು ಗಮನಿಸಬೇಕು. ಹೀಗೆ ವಿವರಿಸಿ ಈ ಪದ್ಯವನ್ನು ಬಸವಣ್ಣನ 'ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆ ಬಡವನಯ್ಯಾ' ಎಂಬ ಪ್ರಸಿದ್ಧ ವಚನಕ್ಕೆ ಹೋಲಿಸಿದ್ದಾರೆ. (ಪ್ರಸ್ತಾವನೆ xxxiv)

ಇಲ್ಲಿನ ವಿವರಣೆ ಸಂಪೂರ್ಣವಾಗಿ ದಾರಿ ತಪ್ಪಿದೆ ಎಂದು ತಿಳಿಸುವುದಕ್ಕಾಗಿ ಈ ಟಿಪ್ಪಣಿ. ಈ ಪದ್ಯದಲ್ಲಿ ಮೂರು ವಿಷಯಗಳಿವೆ.

೧. ಪಲರಂ ರಕ್ಷಿಸಿದ್ದು.

೨. ಪಲವಂ ನಡೆದೇಗುಲಂಗಳಂ ಮಾಡಿಸಿದ್ದು.

೩. ಒಂದು ನೆಲೆದೇಗುಲವನ್ನು ಎತ್ತಿಸಿದ್ದು.

'ಪಲರಂ', 'ಪಲವಂ' ಎಂಬೆರಡು ಪದಗಳೂ ಯಾವ ವಿಧದಲ್ಲಿಯೂ ಒಂದೇ ಅರ್ಥವನ್ನು ಕೊಡತಕ್ಕವುಗಳಲ್ಲ. 'ಪಲರು' ವ್ಯಕ್ತಿವಾಚಕ, ಪಲವು ವಸ್ತುವಾಚಕ. ಆದುದರಿಂದ ಇಲ್ಲಿನ ಅರ್ಥವೇ ಬೇರೆ. ಚಟ್ಟನು ದಾನಿಯಾಗಿದ್ದ. ಅನೇಕರಿಗೆ ದಾನ ಮಾಡಿ ರಕ್ಷಿಸಿದ. ಅದು ತಾನೇ ಮಾಡಿದ್ದು. ಎರಡನೆಯದು ಮಾಡಿಸಿದ್ದು. ಮೂರನೆಯದು ಮಾಡಿಸಿದ್ದೇ. ಆದುದರಿಂದ ಇಲ್ಲಿ ಎರಡು ಬಗೆಯ ದೇಗುಲಗಳಿವೆ. ಒಂದು ಚಲಿಸುವುದು ಮತ್ತೊಂದು ನಿಂತಿರುವುದು.

ಚಲಿಸುವ ದೇಗುಲ ಎಂದರೆ ತೇರು; ರಥ. ನಾವೆಲ್ಲ 'ರಥೋತ್ಸವ' ಎಂಬ ಶಬ್ದವನ್ನು ಕೇಳಿದ್ದೇವೆ. ರಥೋತ್ಸವವನ್ನು ನೋಡಿದ್ದೇವೆ. ಚಟ್ಟನು ಬೇರೆ ಬೇರೆ ದೇವಸ್ಥಾನಗಳಿಗೆ ಅಂಥ ಅನೇಕ ತೇರುಗಳನ್ನು ನಿರ್ಮಾಣ ಮಾಡಿಸಿದ ಮತ್ತು ಚಟ್ಟೇಶ್ವರವೆಂಬ ಒಂದು ದೇವಸ್ಥಾನವನ್ನು ಕಟ್ಟಿಸಿದ. ಅಷ್ಟೇ ಅದರ ಅರ್ಥ. ಮನುಷ್ಯರನ್ನು ನಡೆದೇಗುಲವೆಂದು ಕರೆದು ಅವರು ದೇವಸ್ಥಾನಗಳಂತೆ ಅಂತರಂಗದಲ್ಲಿ ದೈವಸ್ವರೂಪವನ್ನು ಪಡೆದ ಶ್ರೇಷ್ಠ ವ್ಯಕ್ತಿಗಳಾಗುವಂತೆ ಮಾಡಿ ಎಂಬ ಅರ್ಥ ದೂರಾರ್ಥವನ್ನು ಹುಡುಕಿದಂತೆ ಆಗಿ ಪದ್ಯಕ್ಕೆ ತಪ್ಪು ಅರ್ಥ ಮಾಡಿದಂತಾಗುತ್ತದೆ. ಬಸವಣ್ಣನ ವಚನದ ಹಿರಿಮೆ ಈ ಪದ್ಯದಲ್ಲಿಲ್ಲ. ಇಲ್ಲಿ ಕಾವ್ಯಮಯತೆಯೂ ಇಲ್ಲ. ಇದೊಂದು ಸಾಧಾರಣ ಹೇಳಿಕೆಯುಳ್ಳ ಹೊಗಳಿಕೆಯ ಪದ್ಯ ಅಷ್ಟೆ!

ನಡೆದೇಗುಲ - ಒಂದು ಮರುಪ್ರತಿಕ್ರಿಯೆ

'ನಡೆದೇಗುಲ' ಎಂಬ ಪದಕ್ಕೆ ಡಾ॥ ಚಿದಾನಂದಮೂರ್ತಿಯವರು ಮಾಡಿರುವ ಅರ್ಥ ಸರಿಯಾದುದಲ್ಲ ಎಂದು ನಾನು 'ಸಾಧನೆ' ೮-೪ (ಪು. ೧೪೮-೧೪೯) ರಲ್ಲಿ ಬರೆದ ತುಂಬ ಚಿಕ್ಕ ಟಿಪ್ಪಣಿಗೆ ಐದು ಪುಟಗಳನ್ನು ದೀರ್ಘವಾದ ಪ್ರತಿಕ್ರಿಯೆಯನ್ನು ಅವರು 'ಸಾಧನೆ' (೯-೨, ಪು. ೧೪೦-೧೪೫) ಯಲ್ಲಿ ಪ್ರಕಟಿಸಿದ್ದಾರೆ. ಅವರ ಈ ಲೇಖನದಲ್ಲಿರುವ ಮತ್ತೊಂದು ತಪ್ಪನ್ನು ತೋರಿಸಿ ಕೆಲವು ಸಂಶಯಗಳಿಗೂ ಉತ್ತರ ಕೊಡುವುದು ಈ ಲೇಖನದ ಪ್ರಯತ್ನ.

೧. ಪರಿಷತ್ತಿನ ನಿಘಂಟಿನಲ್ಲಿ ಈ ಹಿಂದೆ ನಾನು ಸೂಚಿಸಿರುವ ಅರ್ಥವಿದೆಯೆಂಬುದನ್ನು ನಾನು ಸ್ಮರಿಸದೆ ಇರುವುದು ಒಂದು ಕೊರತೆ ಎಂದು ಡಾ॥ ಮೂರ್ತಿಯವರ ಅಭಿಪ್ರಾಯ. ನಾನು ಪ್ರಾರಂಭಿಸಿದ ಈ ಚರ್ಚೆ ವ್ಯಕ್ತಿಯ ಸ್ತರದಲ್ಲಿ ಮಾತ್ರ ನಡೆಯಲಿ; ನಾವಿಬ್ಬರೂ ಅಲ್ಲಿ ಸದಸ್ಯರಾಗಿರುವುದರಿಂದ ಅದರ ಹೊರತಾಗಿ ಚರ್ಚೆಯಾಗಲಿ ಎಂಬುದು ನನ್ನ ಉದ್ದೇಶ.

೨. ಚಿದಾನಂದಮೂರ್ತಿಯವರ ಮತ್ತೊಂದು ಮಾತು ಇದು :— ಆ ಉಕ್ತಿಗೆ ಆ ಪದ್ಯದ ಸಂದರ್ಭದಲ್ಲಿ ನಾನು ಕೊಟ್ಟಿರುವ ಅರ್ಥವೇ ಸರಿಯಾದುದು ಮತ್ತು ಸೊಗಸಾದುದು

ಎಂಬುವುದರಲ್ಲಿ ನನಗೆ ಅನುಮಾನವೇ ಇಲ್ಲ..." ನನ್ನ ಲೇಖನ ಅವರ ಅನುಮಾನವನ್ನು ಕುರಿತದ್ದಲ್ಲ. ನನ್ನ ಸಂದೇಹವನ್ನು ಕುರಿತದ್ದು. ಒಬ್ಬ ವಿದ್ವಾಂಸರು "ನನಗೆ ಅನುಮಾನವೇ ಇಲ್ಲ" ಎಂದು ಹೇಳಿಬಿಟ್ಟರೆ ಮತ್ತೆ ಇತರರೆಲ್ಲರೂ ಈ ನಿಶ್ಚಲನಿರ್ಧಾರಕ್ಕೆ ಒಪ್ಪಿ ಸುಮ್ಮನಿರಬೇಕೆಂಬುದು ವಿದ್ವತ್ತಿನ ಪ್ರಪಂಚದಲ್ಲಿ ಸರ್ವಾಧಿಕಾರತ್ವದ ಪ್ರತಿಬಿಂಬವಾಗುತ್ತದೆ. ಬಹುಶಃ ಇದು ತಪ್ಪು ಎಂಬುದು ನನ್ನ ಅನಿಸಿಕೆ.

೩. 'ನಡೆದೇಗುಲ' ಎಂಬ ಉಕ್ತಿ ಬಂದಿರುವ ಕ್ರಿ.ಶ. ೧೧೬೧ರ ಶಾಸನದಲ್ಲಾಗಲೀ, ಅದಕ್ಕೆ ಹಿಂದಿನಿಂದಾಗಲಿ ದೇವಸ್ಥಾನದಲ್ಲಾಗಲೀ ರಥಗಳಿದ್ದುವೆಂಬುದನ್ನು ಸಾಧಿಸಿ ತೋರಿಸುವುದೇ ಕಷ್ಟವಾಗಿರುವಾಗ .. ಎಂಬುದು ಒಂದು ವಾಕ್ಯ ಭಾಗ. ಇದು ಪರಿಶೀಲನಾರ್ಹ. ಇದಕ್ಕೆ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯ. ಭಾರತದ ಪ್ರಾಚೀನ ಶಾಸನಗಳನ್ನು ಅಭ್ಯಾಸ ಮಾಡುತ್ತಿದ್ದಾಗ ನಾನು ಹಿಂದೆ ಅಭ್ಯಾಸ ಮಾಡಿದ್ದ ಒಂದು ಚೋಳ ಶಾಸನ ನನ್ನ ನೆನಪಿಗೆ ಬಂತು. ಒಂದನೆಯ ಕುಲೋತ್ತುಂಗನ ಕ್ರಿ.ಶ. ೧೧೧೮ ರ ಒಂದು ಶಾಸನ ಉಯ್ಯಕ್ಕೊಂಡನ್ ತಿರಮಲೈ ಎಂಬಲ್ಲಿದೆ. ಜಾತಿಗಳ ಮತ್ತು ಅವರ ಕರ್ತವ್ಯಗಳನ್ನು ವಿವರಿಸುವ ಈ ಶಾಸನ ಬಹು ಪ್ರಧಾನವಾದುದು ಎಂದು ವಿದ್ವಾಂಸರು ಭಾವಿಸಿದ್ದಾರೆ. ಇದರಲ್ಲಿ 'ರಥಕಾರ' ಎಂಬ ಒಂದು ಶಬ್ದವಿದೆ. ಇದು ಒಂದು ಜಾತಿಯ ಹೆಸರು. ಇವರ ಕೆಲಸವೇನೆಂಬುದು ಆ ಶಾಸನದಲ್ಲಿಯೇ ವಿವೃತವಾಗಿದೆ. ದೇವಾಲಯದ ಬಂಡಿಗಳನ್ನು ರಥಗಳನ್ನು ಕಟ್ಟುವುದು, ದೇವಸ್ಥಾನದ ಗೋಪುರಗಳನ್ನೂ ವಿಗ್ರಹಗಳನ್ನೂ ಮಾಡುವುದು, ಯಜ್ಞ-ಯಾಗಾದಿಗಳ ಕರ್ಮಕಾಂಡಕ್ಕೆ ಬೇಕಾದ ಮರದ ಸೌಟು ಮೊದಲಾದುವನ್ನು ಸಿದ್ಧಪಡಿಸುವುದು, ಮಂಟಪಗಳನ್ನು ಕಟ್ಟುವುದು ಮುಂತಾದುವು ಅವರ ಕೆಲಸ. ಇವೆಲ್ಲವೂ ಬಡಗಿಗಳ ಕೆಲಸವೆಂಬುದು ಇತರ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ನನಗೂ ಇದು ಸರಿಯೆಂದು ಕಂಡುಬರುತ್ತದೆ. ಇವರು ಕಟ್ಟುತ್ತಿದ್ದ ಬಂಡಿ, ರಥ ಮೊದಲಾದುವು ಯಾವ ಯುದ್ಧಕ್ಕೂ ಬೇಕಾದುವಲ್ಲ. ದೇವಸ್ಥಾನಕ್ಕೆ ಬೇಕಾದುವು. ಅಂದರೆ ದೇವರ ಉತ್ಸವಕ್ಕೆ ಬೇಕಾದುದು ಎಂಬುದು ತರ್ಕಬದ್ಧವಾದುದು. ತಮಿಳುನಾಡಿನಲ್ಲಿ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ರಥಕಾರರೆಂಬ ಒಂದು ಜಾತಿಯ ಸೇವಕರ ಪಂಗಡವೇ ಇದ್ದರೆ ಪಕ್ಕದ ಪ್ರದೇಶಗಳಲ್ಲೂ ದೇವರ ಉತ್ಸವಕ್ಕೆ ದೇವಾಲಯಗಳಲ್ಲಿ ರಥಗಳನ್ನೂ ಇಡುತ್ತಿದ್ದರು ಎಂಬುದು ವಿವಾದಾಸ್ಪದ ವಿಷಯವಲ್ಲ. ನಾನು ಹೇಳುವ ಈ ಶಾಸನವು ಚಟ್ಟಯನ ಕ್ರಿ.ಶ. ೧೧೬೧ರ ಶಾಸನಕ್ಕಿಂತ ಸುಮಾರು ೫೦ ವರ್ಷದಷ್ಟು ಹಿಂದಿನದು.* ಮೂರ್ತಿಯವರು ಹೇಳುವ ಕ್ಷೇತ್ರೋತ್ಸವಾದಿಗಳೆಲ್ಲ ಇಂಥ ಉತ್ಸವಗಳಿಗೆ ಸಂಬಂಧಿಸಿದುದು. ತಿರುನಾಳ್ಪೋರ ಮಹಾತ್ಮೆಯ ಉತ್ಸವವೂ ಇಂಥದೇ.

೪. ಈ ಪದ್ಯದಲ್ಲಿ "ಮತ್ತಂ" ಎಂಬುದನ್ನು ಪದ್ಯದ ಆರಂಭಕ್ಕೆ ಅನ್ವಯಿಸಿಕೊಳ್ಳಬೇಕು ಎಂಬುದು ಮೂರ್ತಿಯವರ ಮತ್ತೊಂದು ಸೂಚನೆ. ಕನ್ನಡ ಕಾವ್ಯ ಸಂಪ್ರದಾಯದಲ್ಲಿ 'ಮತ್ತಂ' ಎಂಬ ಪದ ಎರಡು ಬೇರೆ ಬೇರೆ ವಿಷಯಗಳನ್ನು ಸೂಚಿಸುವಾಗ ಮಾತ್ರ ನಡುವೆ ಬರುತ್ತದೆ. ಪ್ರಕೃತ ಶಾಸನದಲ್ಲಿ ಹಿಂದಿನ ಪದ್ಯದಲ್ಲಿಯೇ 'ಶಂಭು ಮಂದಿರಮನೆತ್ತಿಸಿದಂ' ಎಂದು

* Early Chola Temples (Pub. Orient Longmans, 1971), pp 153-154.

ಪೂರ್ಣಗೊಳ್ಳುವ ವಾಕ್ಯವಿದೆ. ಈ ಪದ್ಯದಲ್ಲಿಯೂ ನೆಲದೇಗುಲದ ಪ್ರಸ್ತಾಪವಿದೆ. ಆದುದರಿಂದ 'ಮತ್ತಂ' ಎನ್ನುವುದನ್ನು ಸ್ಥಾನಪಲ್ಲಟಗೊಳಿಸುವುದು ತಪ್ಪಾಗುತ್ತದೆ. ನನ್ನ ಅಭಿಪ್ರಾಯವು ಸ್ಪಷ್ಟವಾಗಬೇಕಾದರೆ ಪ್ರಕೃತ ಪದ್ಯದ ಹಿಂದೆ ಮುಂದೆ ಇರುವ ಕೆಲವು ಪದ್ಯಗಳನ್ನಾದರೂ ಓದಬೇಕು. ಅದಕ್ಕೋಸ್ಕರ ಆ ದೊಡ್ಡ ಶಾಸನದ ಪ್ರಕೃತಭಾಗವಾದ ಹನ್ನೆರಡು ಪದ್ಯಗಳನ್ನು ಇಲ್ಲಿ ಕೆಳಗೆ ಓದುಗ ವಿದ್ವಾಂಸರ ಗಮನಕ್ಕೆ ತರುವ ಉದ್ದೇಶದಿಂದ ಉದ್ಧಾರ ಮಾಡುತ್ತಿದ್ದೇನೆ. (ಇಲ್ಲಿ ಕವಿ ಹೇಳುತ್ತಿರುವುದ ಎರಡೇ ಮುಖ್ಯವಾದ ವಿಷಯಗಳು. ಒಂದು, ಶಂಭುಮಂದಿರ ನಿರ್ಮಾಣ; ಎರಡು, ಕೆರೆಯ ನಿರ್ಮಾಣ - ಈ ಮಾತು ಎಷ್ಟು ಸಲ ಬಂದಿದೆ ನೋಡಿ. ಮಿಕ್ಕದ್ದೆಲ್ಲ ಪ್ರಾಸಂಗಿಕ - ಈ ಎರಡಕ್ಕೆ ಪೋಷಕ ಅಷ್ಟೇ ಎನ್ನುವುದು ಗತಾರ್ಥವಾಗುತ್ತದೆ ಸ್ಪಷ್ಟವಾಗಿ):

ಪಿರಿದುಂ ಚಿತ್ರಾನ್ವಿತವಂ
ಬರಸಂಗತವುತ್ತರೋತ್ತರಂ ತಾನೆನಲು
ರ್ವ್ವರೆ ತಣಿಯಲ್ಪೊಂ
ಗಜೆವುದು ಚಟ್ಟಯನ ಹಸ್ತವಪ್ರತಿಹಸ್ತಂ ೧

ಚಟ್ಟನೆ ದಾನಿ ಚಟ್ಟನೆ ಮಹಾಗುಣಿ ಚಟ್ಟನೆ ಶೌರ್ಯಸಾಗರಂ
ಚಟ್ಟನೆ ಭೋಗಿ ಚಟ್ಟನೆ ಪಸಾಯಿತನೆಲ್ಲಿಯುಮೆಂತು ನೋಳ್ಪಡಂ
ಚಟ್ಟನೆ ಶೌಚಿ ಚಟ್ಟನೆ ದೃಢಭೃತಿ ಚಟ್ಟನೆ ಸತ್ಯಸಂಗತಂ
ಚಟ್ಟನೆ ಮಾನಿ ಚಟ್ಟನೆ ಮಹಾಪ್ರಭು ಚಟ್ಟನೆ ಮಂದರಸ್ಥಿರಂ ೨

ಪಿರಿದುಂ ಭ್ರಾಂತಿಂದೆ ನಾಲ್ಕುಂ ಕಡಲ ಕಡೆವರಂ ನೋಡಿದೆಂ ನೋಡ(ಡಿ) ಬಂದೆಂ
ಸಿರಿಯಿಂದಂ ಶೀಲದಿಂದಂ ಸನಯವಿನಯದಿಂ ದಾನದಿಂ ಧರ್ಮ್ಮದಿಂದಂ
ಗುರದೇವಬ್ರಾಹ್ಮಣಾಳೀ ಪರಿಚರಣಭವದ್ಭಕ್ತಿಯಿಂ ಶಕ್ತಿಯಿಂದಂ
ದೊರೆಯಂ ಚಟ್ಟಂಗೆ ಕಾಣೆಂ ಗಳಪಲಳಿಯೆ ನಾಂ ಚಾಗದಿಂ ಭೋಗದಿಂದಂ ೩

ಹರಹಾಸಂ ದರಹಾಸವಾಗೆ ಹಿಮವತ್ಕುತ್ಕೀಳಮುಂ ಶಂಭುಭೂ
ಧರಮುಂ ತುಂಗಕುಚಂಗಳಾಗೆ ಮುಖವಾಗಲ್ಚಂದ್ರಮಂ ಚಿಂನದಾ
ವರಣಂ ದುಗ್ಧ ಸಮುದ್ರವಾಗೆ ದಶನಂ ದಿಗ್ದಂತಿದಂತಂಗಳಾಗಿರೆ
ತಾರಾಸಖಿ ಕೂಸಚಟ್ಟನ ಯಶಃ ಶ್ರೀ ಲೋಕದೊಳ್ ವರ್ತ್ತಿಪಳ್ ೪

ಅನ್ತೆನಿಸಿ ನೆಗಳ್ದ ಚಟ್ಟನ
ಕಾನ್ತೆ ಮನಃಕಾಂತೆ ಕನ್ತುಕಾಂತೆಯ ರೂಪಿಂ
ಕಾಂತತನುಕಾಂತಿಜಿತಶಶಿ
ಕಾಂತೆ ಮಹಾದೇವಿ ದೇವಿಯೆನಿಪಳ್ಗುಣದಿಂ ೫

ಚರಣಾಬ್ಜಂ ಬೆರಲುಂಗುಟಂ ನಖಕುಳಂ ಮೇಂಗಾಲ್ಮಡಂ ಜಂಘೆಗಳ್
ವರವೃತ್ತೋರುನಿತಂಬಬಿಂಬಮಧರಂ ವಕ್ಷೋರುಹಂ ತೋಳ್ತಳಂ
ಕೊರಲೋಷ್ಠಂ ಸುಲಿಪಲ್ ಕಪೋಳಫಳಕಂ ಕಣ್ಬುರ್ವು ಕರ್ಣ್ಣಂ ನೊಸಲ್
ವರನೀಳಾಳಕವೊಪ್ಪವೊಪ್ಪಿದಳೀ ಮಾದೇವಿ ಮಾದೇವಿವೋಲ್ ೬

ನರತುರಗಾಳಿಯಿಂ ಗಜರಥಾವಳಿಯಿಂ ಪೊಸ ಪೊಂನ ರಾಶಿಯಿಂ
ಸ್ಥಿರಪರಿಪೂರ್ಣ್ಣವಾಯ್ತಿದುವೆ ರಾಜ್ಯವದೇವುದು ಬೆಳ್ಳಿಬೆಟ್ಟು ಬೆ
ಳ್ಕರಿಪುದು ಕೆಮ್ಮನೆಂದು ರಜತಾದ್ರಿಯಿನಿಲ್ಲಿಯೆ ಬಂದು ನಿಲ್ವಿನಂ
ಗಿರಿಪತಿ ಶಂಭುಮಂದಿರವನೆತ್ತಿಸಿದಂ ಗುಣಿ ಕೂಸಚಟ್ಟಿಯಂ ೭

ಪಲರಂ ರಕ್ಷಿಸಿ ಮತ್ತಂ
ಪಲವಂ ನಡೆದೇಗುಲಂಗಳಂ ಮಾಡಿಸಿದಂ
ನೆಲನೆಲ್ಲಮಱಿಯೆ ಚಟ್ಟಂ
ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ ೮

ತೊಱೆಯಾಗಿ ಹೋಗೆ ಕೃಪೆಯಿಂ
ಕೆಱೆಯಾಗಿರ್ಪ್ಪಂತು ಪಲರು ಮುಂ ಕಟ್ಟಿಸಿರ್ದ
ಕೆಱೆಗಳೊಳಿದೊಂದು ಕೆಱೆಯೆನೆ
ಕೆಱೆಯಂ ಕಿಱುಗೂಸು ಚಟ್ಟೆಯಂ ಕಟ್ಟಿಸಿದಂ ೯

ಪಿರಿದಾಯಾಸದಿನರ್ಥಮಂ ನೆರೆಪಿದಂ ಚಟ್ಟಮ್ಬೊಲಿಂತೀಶಮಂ-
ದಿರಮಂ ಪೂರ್ಣ್ಣತಟಾಕಮಂ ನಿಜಯಶೋರ್ಥಂ ಮೇರುವಾರಾಸಿ ಸು-
ಸ್ಥಿರವಪ್ಪಂತಿರೆ ಮಾಳ್ಪುದುಂತುಂ ಚಪಳಂ ತಾನರ್ಥವೆಂದಾಗಳುಂ
ನಿರುತಂ ಚಟ್ಟಸಮುದ್ರಂ ಆರ್ದ್ದಱೆಪುಗುಂ ವ್ಯಾಲೋಳಕಲ್ಲೋಳದಿಂ ೧೦

ಕೆಱೆಗಂ ದೇಗುಲಕಂ ತಾ
ನಱಿಸಿದ ಧನಂ ಅನಿತುಂ ಎನಿಸಿ ಜಸದಿಂ ಚಟ್ಟಂ
ನೆಱೆದಂ ಬಱುದೊಱೆವೋದುದು
ಕೆಱೆಗಂ ದೇಗುಲಕವಾಗದುಳಿದವರರ್ಥಂ ೧೧

ಪುಟ್ಟಿದ ಪೊನ್ನಿರದೆಂತುಂ
ಕಟ್ಟಿಪುದದಱಿಂದೆ ಕೆಱೆಯುಮಂ ದೇಗುಲಮಂ
ಕಟ್ಟಿಪುದೆತ್ತಿಪುದೆನಲೀ
ಚಟ್ಟಂ ಗುರುವಾದನಖಿಳಧರಣೀತಳದೊಳ್ ೧೨

(ಎಕ V, ಬೇಲೂರು. ೧೯೩-೮೪; ೧೧೬೧)

೫. ಮಹಾಪ್ರಭು ಚಟ್ಟ ಸುವರ್ಣ ವೃಷ್ಟಿಯನ್ನು ಕರೆಯುವಂಥ 'ಪೊಂಗಱೆಯುವ' ಮಹಾವ್ಯಕ್ತಿ. ಹೊನ್ನಿನ ಮಳೆಗರೆಯುವ ದಾನಿ ಈತ. ಅವನ ಅನೇಕ ಗುಣಗಳ ಪಟ್ಟಿಮಾಡಿ ಅಲ್ಲಿ ಕವಿಯು "ದಾನದಿಂ ಧರ್ಮ್ಮದಿಂದಂ ಗುರುದೇವ-ಬ್ರಾಹ್ಮಣಾಳೀಪರಿಚರಣಭವದ್ಭಕ್ತಿಯಿಂ ಶಕ್ತಿಯಿಂದಂ ದೊರೆಯಂ ಚಟ್ಟಂಗೆ ಕಾಣೆಂ" ಎಂಬ ಮಾತನಾಡಿದ್ದಾನೆ. ಆದುದರಿಂದ ಚಟ್ಟನು ದಾನದಿಂದಲೂ ಧರ್ಮದಿಂದಲೂ ಅನೇಕರನ್ನು ತಣಿಸಿದ, ತೃಪ್ತಿಪಡಿಸಿದ. ಆದರೆ ಅದರ ಪರಿಣಾಮವಾಗಿ ದಾನ ಪಡೆದವರೆಲ್ಲಾ ತಲೆಯೆತ್ತಿ ನಡೆದರು ಎಂಬುದು ದೂರಾನ್ವಯ. ಅದರ ಸೂಚನೆ ಕೂಡ ಈ ಶಾಸನದಲ್ಲಿ ಎಲ್ಲಿಯೂ ಇಲ್ಲ. ನನ್ನಿಂದ ದಾನ ಪಡೆದಮೇಲೆ ಹೀಗೇ ನಡೆದುಕೊಳ್ಳಬೇಕೆಂದು ಅವನು ಮುಂಚೆ ಪ್ರತಿಜ್ಞೆ ಪಡೆದು ದಾನ ಮಾಡಲಿಲ್ಲ. ಅಷ್ಟೇ ಅಲ್ಲ, ಸುಪಾತ್ರಗಳಿಗೆ ದಾನಮಾಡಿದ್ದಾನೆನ್ನುವುದೂ ಸುವ್ಯಕ್ತ. ಹೊಸ ದೇವಸ್ಥಾನವನ್ನು ಕಟ್ಟಿಸಿ ರಥೋತ್ಸವಾದಿಗಳಿಗೆ ಏರ್ಪಡಿಸಿದುದರಿಂದ ಅನೇಕರಿಗೆ ಶಾಶ್ವತವಾದ ಜೀವನೋಪಾಯ ಸಿಕ್ಕಿತು ಎಂಬುದು ಇಲ್ಲಿಯ ಅರ್ಥ.

೬. " 'ಪಲರಂ', 'ಪಲವಂ' = (many) ಎಂಬ ಒಂದೇ ಪ್ರಮಾಣಸೂಚಕ ಪದವೂ ಗಮನಾರ್ಹ" ಎನ್ನುತ್ತಾರೆ ಮೂರ್ತಿಯವರು. ಹನ್ನೆರಡನೇ ಶತಮಾನದ ಶಾಸನದ ಅರ್ಥಕ್ಕೆ ಇಂಗ್ಲಿಷ್ ಪದದ ವ್ಯಾಪ್ತಿಯ ಅರ್ಥವನ್ನು ಸೂಚಿಸುವುದೂ ಕೂಡ ಒಂದು ವಾದಾಂಶವಾಗಲಾರದು. ಕನ್ನಡ ಶಬ್ದಗಳಲ್ಲಿ ಎದ್ದು ಕಾಣುವ ಲಿಂಗಭೇದ ಇಂಗ್ಲಿಷ್‌ನಲ್ಲಿಲ್ಲ.

೭. ಚರ್ಚಾಸ್ಪದವಾಗಿರುವ ಮೇಲಿನ ೮ನೇ ಪದ್ಯದ ಮುಂದಿನ ಪದ್ಯವನ್ನು ಮುದ್ರಿಸಿ ಅದರಲ್ಲಿ ಸ್ವಲ್ಪ ಗ್ರಂಥ ಸಂಪಾದನೆ ಮಾಡಿ ಆ ಪದ್ಯವೂ ತಮ್ಮ ಅರ್ಥಕ್ಕೆ ಪುಷ್ಟಿಕೊಡುತ್ತದೆ ಎಂದು ಮೂರ್ತಿಯವರು ಹೇಳುತ್ತಾರೆ. ಅವರು ಅರ್ಥದ ಮತ್ತು ಛಂದಸ್ಸಿನ ದೃಷ್ಟಿಯಿಂದ ತಿದ್ದಿದ ಪದ್ಯ ಹೀಗಿದೆ : (ತಿದ್ದಿರುವುದನ್ನು ಕಂಸಗಳಲ್ಲಿ ಸೂಚಿಸಿದೆ).

"ತೊಱೆಯಾಗಿ ಹೋಗೆ ಕೃಪೆಯಿಂ
ಕೆಱೆಯಾಗಿರ್ಪ್ಪಂತು (ಪಲರುಮಂ ಕಟ್ಟಿಸಿದಂ)
ಕೆಱೆಗಳೊಳಿದೊಂದು ಕೆಱೆಯೆನೆ
ಕೆಱೆಯಂ ಕಿಱುಗೂಸು ಚಟ್ಟೆಯಂ ಕಟ್ಟಿಸಿದಂ"

ಈ ಪದ್ಯದಲ್ಲಿ 'ಪಲರುಮಂ' ಎಂದು ಸಮುಚ್ಚಯ ಪ್ರತ್ಯಯವನ್ನು ಉಪಯೋಗಿಸಲು ಕಾರಣವೇ ಇಲ್ಲ. 'ಪಲರಂ' ಸಾಕಾಗಿತ್ತು. ಇನ್ನು ಅರ್ಥ! ಇದಕ್ಕೆ ಅರ್ಥವನ್ನು ಕೊಡುತ್ತ ಅವರು ವಿವರಿಸುತ್ತಾರೆ : "ತೊರೆಯಾಗಿ ಹರಿದುಹೋಗುತ್ತಿದ್ದ ಹಲವರನ್ನು ಕೃಪೆಯಿಂದ ಕೆರೆಗಳನ್ನಾಗಿ ಕಟ್ಟಿಸಿದ. (ಸಾಮಾನ್ಯ) ಕೆರೆಗಳಲ್ಲಿ ಇದೊಂದು ಕೆರೆಯೆನ್ನುವಂತೆ ಚಟ್ಟ ಒಂದು ಕೆರೆಯನ್ನು ಕಟ್ಟಿಸಿದ." ಅಂದರೆ ಹಿಂದೆ 'ಹಲವರನ್ನು ಹಲವು 'ನಡೆದೇಗುಲ'ಗಳಾಗಿ ಮಾಡಿಸಿದ. ಇಲ್ಲಿ 'ತೊರೆಯಾಗಿ ಹರಿದುಹೋಗುತ್ತಿದ್ದ ಹಲವರನ್ನು ಒಂದೇ ಕೆರೆಯಾಗಿ ಕಟ್ಟಿಸಿದ'. 'ಜನ ತೊರೆಯಾಗಿ ಹರಿದು ಹೋಗುವುದು'; 'ಹಲವರನ್ನು ಕೆರೆಯಾಗಿ ಕಟ್ಟಿಸುವುದು' ಎಂದರೆ ಏನೋ ದೇವರೇ ಬಲ್ಲ. ಈ ಪರಸ್ಪರ ಕಲ್ಪನೆಯ ಅರ್ಥ ನನಗೆ ಗೋಚರವಾಗುವುದಿಲ್ಲ.

೮. ಆ ಹೊಗಳುವ ಕವಿ ಸಾಮಾನ್ಯ ಕೆರೆಗಳಲ್ಲಿ ಇದೊಂದು ಕೆರೆ ಎಂದು ಹೇಳುತ್ತಾನೆಯೇ! ಅವನು ಅಷ್ಟು ಪೆದ್ದನೆ? ಪದ್ಯದಲ್ಲಿ ಸಂಪಾದನ ಕ್ಲೇಶವಿದೆ. ಆದರೆ ಅದನ್ನು ಹೀಗೆ ಸಂಪಾದಿಸಬೇಕೆಂಬುದು ನನ್ನ ಅಭಿಪ್ರಾಯ :

"ತೊಱೆಯಾಗಿ ಹೋಗೆ ಕೃಪೆಯಿಂ
ಕೆಱೆಯಾಗಿರ್ಪನ್ತು (ಪಲರುಮುಂ ಕಟ್ಟಿಸಿರ್ದರ್)
ಕೆಱೆಗಳೊಳಿದೊಂದು ಕೆಱೆಯೆನೆ
ಕೆಱೆಯಂ ಕಿಱುಗೂಸು ಚಟ್ಟೆಯಂ ಕಟ್ಟಿಸಿದಂ"

ಹೀಗೆ ಸಂಪಾದಿಸಿದರೆ ಪದ್ಯದ ಛಂದಸ್ಸೂ ತಪ್ಪುವುದಿಲ್ಲ, ಅರ್ಥವೂ ಸುಸ್ಪಷ್ಟವಾಗುತ್ತದೆ. ಪದ್ಯದ ಅರ್ಥ ಹೀಗೆ : 'ತೊರೆಯಾಗಿ ಹರಿದುಹೋಗುತ್ತಿದ್ದ ನೀರು ನಿಲ್ಲುವಂತೆ ಅನೇಕರು ಈ ಹಿಂದೆಯೇ ಕೆರೆಗಳನ್ನು ಕಟ್ಟಿಸಿದ್ದರು. ಆದರೆ ಅಂಥ ಕೆರೆಗಳಲ್ಲೆಲ್ಲಾ ಇದು ಒಂದೇ ನಿಜವಾದ ಹೆಸರಿಗೆ ತಕ್ಕ ಕೆರೆ ಎನ್ನುವಂತೆ ಕೆರೆಯನ್ನು ಚಟ್ಟ ಕಟ್ಟಿಸಿದ.' ಮೇಲೆ ಮುದ್ರಣವಾಗಿರುವ ಪದ್ಯಗಳಲ್ಲಿ ೧೦ನೇ ಪದ್ಯದಲ್ಲಿ ಇರುವ ಪೂರ್ಣತಟಾಕ = ನೀರು ತುಂಬಿರುವ ಕೆರೆ ಎಂಬುದು ನನ್ನ ಅರ್ಥವನ್ನು ಪುಷ್ಟೀಕರಿಸುತ್ತದೆ. ಹಾಗಲ್ಲದೆ ಈ ಪದ್ಯಕ್ಕೂ ಹೊಸ ಅರ್ಥ ಕಲ್ಪಿಸಿ "ಮನುಷ್ಯರೆಂಬ ಕೆರೆಗಳು" ಎಂಬ ರೂಪಕವಿದೆ ಎನ್ನುವುದು ಮೊದಲಿನ ತಪ್ಪಿನ ಜೊತೆಗೆ ಮಾಡುವ ಮತ್ತೊಂದು ತಪ್ಪಾಗುತ್ತದೆ.

೯. ಇನ್ನೊಂದು ಮಾತು. 'ನಡೆದೇಗುಲ = ತೇರು' ಎಂದರೆ ಈ ದಿನಗಳಲ್ಲಿ ದೊಡ್ಡ ದೇವಸ್ಥಾನಗಳಲ್ಲಿ ಜನರೆಲ್ಲರೂ ಸೇರಿ ಜಾತ್ರೆಗಳಲ್ಲಿ ಎಳೆಯುವ ತುಂಬ ಎತ್ತರದ ತೇರುಗಳೇ ಆಗಬೇಕೆಂದೇನೂ ಇಲ್ಲ. ದೇವಸ್ಥಾನದ ಪ್ರಾಕಾರದಲ್ಲಿ ಉತ್ಸವಮೂರ್ತಿಯನ್ನು ಬಂಡಿಯ ಮೇಲೆ ಕೂರಿಸಿ ಮಾಡಿಸುವ ಉತ್ಸವವೂ ತೇರಿನ ಉತ್ಸವವೇ. ಇಂದೂ ಇದು ಅನೇಕ ದೇವಸ್ಥಾನಗಳಲ್ಲಿ ಬಳಕೆಯಲ್ಲಿದೆ. ಪ್ರಾಕಾರದ ಸುತ್ತ ಎಳೆಯುವ ಬಂಡಿಯ ಮೇಲೆ ಮಂಟಪಾದಿಗಳನ್ನು ಕಟ್ಟಿ ಉತ್ಸವಮೂರ್ತಿಗಳನ್ನು ಕೂರಿಸುವುದಕ್ಕಾಗಿ ರಥಕಾರರು ಸಾಧನಗಳನ್ನು ಮಾಡುತ್ತಿದ್ದರು. ಇದು ಮಂಟಪ, ಪಲ್ಲಕ್ಕಿ, ಇತರ ವಾಹನಗಳು ಮುಂತಾದುವು. ದೇವಸ್ಥಾನದಲ್ಲಿ ಉತ್ಸವಮೂರ್ತಿಗಳು ಇರುವುದು ಮೂರ್ತಿಗಳನ್ನು ಇವುಗಳಲ್ಲಿ ಕೂರಿಸಿ ಮೆರವಣಿಗೆ ಮಾಡುವುದಕ್ಕಾಗಿಯೇ. ಉತ್ಸವಮೂರ್ತಿ ಎಷ್ಟು ಹಳೆಯದು ಎಂಬುದನ್ನು ನೋಡಿದರೆ ಉತ್ಸವಗಳೆಷ್ಟು ಹಳೆಯದು ಎಂದು ಗೊತ್ತಾದೀತು

೧೦. ದೇವಸ್ಥಾನವೂ ರಥೋತ್ಸವವೂ ಜಾನಪದ ಮೂಲದಿಂದ ಬೆಳೆದು ಬಂದ ವ್ಯವಸ್ಥೆಗಳು. ಎರಡು ಕಲ್ಲುಗಳನ್ನು ನೆಟ್ಟು ಮೇಲೊಂದು ಅಡ್ಡಕಲ್ಲನಿಟ್ಟು ಒಳಗೆ ಗುಂಡಗಿರುವ ಕಲ್ಲನ್ನು ಕೂರಿಸಿ ಹೂವು, ಕುಂಕುಮ, ಅರಿಸಿನಗಳಿಂದ ಪೂಜಿಸುವ ಪದ್ಧತಿ ಹೇಗೆ ಬೃಹದ್ದೇವಾಲಯಗಳ ಸ್ಥಾಪನೆಗೆ ಮೂಲವೋ ಹಾಗೆಯೇ ಈಗಿನ ದೊಡ್ಡ ತೇರಿಗೆ ಹಿಂದಿನ ಸಣ್ಣ ಬಂಡಿಯೆ ಮೂಲ. ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಬಂಡಿಯಲ್ಲಿ ಮೆರವಣಿಗೆ ಮಾಡುವ ಪದ್ಧತಿ ಇರುವುದು ಎಲ್ಲರಿಗೂ ತಿಳಿದಿರುವ ವಿಷಯ. ಇಂಥ ಜಾನಪದ ಪದ್ಧತಿಗಳು

ದೇವಸ್ಥಾನಗಳಲ್ಲಿ ಸುಸಂಸ್ಕೃತರ ಪದ್ಧತಿಗಳಾಗಿ ಬೆಳೆದುಬಂದಿವೆ. ಮಾನವಶಾಸ್ತ್ರವನ್ನು ಅಭ್ಯಾಸ ಮಾಡಿರುವ ಎಲ್ಲರೂ ತಿಳಿದುಕೊಂಡಿರುವ ವಿಷಯ ಇದು. ಈ ವಿಷಯವನ್ನು ವಿಸ್ತಾರಪಡಿಸುವುದಕ್ಕೆ ಬೇರೆ ಲೇಖನವನ್ನು ಬರೆಯಬೇಕು.

೧೧. ಕೊನೆಯದಾಗಿ ಹೇಳಬೇಕಾದ ಮತ್ತೊಂದು ಮಾತು ಇದೆ. ಶಿಲ್ಪಶಾಸ್ತ್ರದಲ್ಲಿ 'ಚಲಾಲಯ', 'ಸ್ಥಿರಾಲಯ' ಎಂಬ ಎರಡು ಮಾತುಗಳು ಬರುತ್ತವೆ. ಚಲಾಲಯವೇ ನಡೆದೇಗುಲ = ಬಂಡಿ, ತೇರು ; ಸ್ಥಿರಾಲಯವೇ ನೆಲೆದೇಗುಲ = ದೇವಸ್ಥಾನ, ದೇವಾಲಯ. ಶಿಲ್ಪಶಾಸ್ತ್ರದ ಜ್ಞಾನವನ್ನು ಹೊಂದಿದ್ದ ಕವಿ ಆ ಸಂಸ್ಕೃತ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಸೃಷ್ಟಿಸಿದ್ದಾನೆ. 'ನೆಲೆದೇಗುಲ' ಎಂಬ ಪದ ಎಷ್ಟು ಹಳೆಯದು. ಹಾಗಾದರೆ ಅದನ್ನೂ ಮೂರ್ತಿಯವರು ಪರಿಶೀಲಿಸಲಿ ! ಆಗ ಈ ಶಾಸನಕ್ಕೆ ಹಿಂದೆ ಸ್ಥಿರವಾದ ದೇವಾಲಯಗಳೂ ಇರಲಿಲ್ಲವೆಂದು ಹೇಳಬೇಕಾದೀತು.

೧೨. ಮೂರ್ತಿಯವರು ಹೇಳಿರುವ ಒಂದು ಮಾತು ನನ್ನ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡಿತು. ಆ ಮಾತು ಹೀಗಿದೆ : "ಹೀಗೆ ಯಾವ ದೃಷ್ಟಿಯಿಂದ ನೋಡಿದರೂ 'ನಡೆದೇಗುಲ'ಕ್ಕೆ ನಾನು ಕೊಟ್ಟಿರುವ ಅರ್ಥ ಮೊದಲನೆಯದಾಗಿ ಸರಿಯಾದುದು ಮತ್ತು ಎರಡನೆಯದಾಗಿ ಸೊಗಸಾದುದು. ಶ್ರೀ ಜಿ. ವೆಂಕಟಸುಬ್ಬಯ್ಯನವರ ಅರ್ಥ ಸರಿಯೂ ಅಲ್ಲ, ಸೊಗಸಂತೂ ಕಂಡಿತ ಅಲ್ಲ." ಇಷ್ಟೊಂದು ದೃಢವಾದ ನಿರ್ಧಾರವಾದ ಯುವಕ ಬಿಸಿರಕ್ತದ ಸ್ವನಿಶ್ಚಯದ ಮಾತನ್ನು ವಯಸ್ಸಾದ ನಾನು ಆಡಲಾರೆ. ಯಾವ ಅರ್ಥ ಸರಿಯೆಂಬುದನ್ನು ಇತರ ವಿದ್ವಾಂಸರು ನಿಶ್ಚಯಿಸಬೇಕು.

(ಈ ಪತ್ರವು ಪ್ರಕಟವಾದ ಮೇಲೆ ವಿದ್ವಾಂಸರ ವಲಯದಲ್ಲಿ ನಾನು ನೀಡಿದ ಅಭಿಪ್ರಾಯ ಸರಿಯಾದುದೆಂದು ತೀರ್ಮಾನವಾಗಿ ಪತ್ರವ್ಯವಹಾರಕ್ಕೆ ಪೂರ್ಣವಿರಾಮವಾಯಿತು).

IV. ಸಂಕ್ಷಿಪ್ತ ಕನ್ನಡ ನಿಘಂಟು : ಆ ಮಾದರಿ ನಿಘಂಟಿನ ರಚನೆಯ ಬಗ್ಗೆ ವಿವರಗಳು

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಯ ಉಪಾಧ್ಯಕ್ಷನಾಗಿದ್ದಾಗ ಒಂದು ಸಂಕ್ಷಿಪ್ತ ನಿಘಂಟನ್ನು ಸಿದ್ಧಪಡಿಸುವ ಕಾರ್ಯ ನನ್ನದಾಯಿತು. ಹಿಂದೆ ಕನ್ನಡದಲ್ಲಿ ಇಂಥ ನಿಘಂಟು ಪ್ರಕಟವಾಗಿರಲಿಲ್ಲ. OXFORD ABRIDGED DICTIONARY ಮಾದರಿಯಲ್ಲಿ ಇದನ್ನು ತಯಾರಿಸಲಾಗಿದೆ. ಕನ್ನಡಕ್ಕೆ ಈ ಮಾದರಿ ಹೊಸದಾದ್ದರಿಂದ ಅದನ್ನು ಸಿದ್ಧಪಡಿಸುವುದಕ್ಕೆ ಕೆಲವು ಸೂತ್ರಗಳನ್ನು ನಿರ್ಮಾಣ ಮಾಡಬೇಕಾಯಿತು. ನಿಘಂಟು ಸಮಿತಿಯ ಸದಸ್ಯರೊಡನೆ ಚರ್ಚಿಸಿ ಕೆಲವು ಮಾದರಿಗಳನ್ನು ನಿರ್ಮಿಸಿ, ಕೊನೆಗೆ ಈ ನಿಘಂಟು ಇರುವ ರೀತಿಗೆ ಸಮಿತಿಯ ಒಪ್ಪಿಗೆಯನ್ನು ಪಡೆಯಲಾಯಿತು. ಈ ಬಗೆಯ ನಿಘಂಟು ಕನ್ನಡಕ್ಕೆ ಹೊಸದಾಗಿದ್ದುದರಿಂದ ಅದನ್ನು ತಯಾರಿಸಲು ರೂಪಿಸಿಕೊಂಡ ಸೂತ್ರಗಳು ನಿಘಂಟುಗಳ ಬಗ್ಗೆ ತಿಳಿವಳಿಕೆ ಬೇಕಾಗುವ ವರಿಗೆ ಒಂದು ದಾಖಲೆಯಾಗಿರಲಿ ಎಂಬ ಉದ್ದೇಶದಿಂದ ಈ ಗ್ರಂಥದಲ್ಲಿ ಈ ಭಾಗವನ್ನು ಅಳವಡಿಸಲಾಗಿದೆ.

ಈಗ ಈ ನಿಘಂಟು ಸಿಕ್ಕುವುದಿಲ್ಲ. ಅವರ ಸ್ವರೂಪವನ್ನು ಬದಲಾಯಿಸಿ ಹೊಸರೂಪವನ್ನು ಕೊಡಲಾಗಿದೆ. ಆದುದರಿಂದ ಈ ಮಾದರಿಯ ನಿಘಂಟು ಕ್ಷೇತ್ರದಲ್ಲಿ ನಡೆದ ಪ್ರಯತ್ನ ಒಂದರ ದಾಖಲೆ ಇರಲಿ ಎಂಬುದು ಈ ಲೇಖನದ ಉದ್ದೇಶ :

ಈ ನಿಘಂಟಿನಲ್ಲಿ ಕೊಟ್ಟಿರುವ ಎಲ್ಲ ಶಬ್ದಗಳನ್ನೂ ಮುಖ್ಯ ಉಲ್ಲೇಖಗಳನ್ನಾಗಿಯೇ ಮಾಡಿದ್ದರೆ ಈ ನಿಘಂಟನ್ನು ಉಪಯೋಗಿಸುವವರಿಗೆ ಹೆಚ್ಚು ಸುಲಭವಾಗುತ್ತಿತ್ತು ಎಂಬುದೇನೋ ನಿಜ. ಆದರೆ ನಿಘಂಟಿನ ಗಾತ್ರವೂ ಬೆಲೆಯೂ ದುಪ್ಪಟ್ಟಾಗುತ್ತಿದ್ದುವು. ಈಗ ಅಳವಡಿಸಿರುವ ರೀತಿಯಲ್ಲಿಲ್ಲದೆ ಶಬ್ದಗಳನ್ನು ಬೇರೆಬೇರೆಯಾಗಿಯೇ ರೂಪಿಸಿದ್ದರೆ ಒಟ್ಟು ಸುಮಾರು ಒಂದು ಲಕ್ಷ ಉಲ್ಲೇಖಗಳು ಎಣಿಕೆಗೆ ಸಿಗುತ್ತಿದ್ದುವು. ಈಗ ಎಣಿಸಿದರೆ ೨೪೧೬೭ ಮುಖ್ಯ ಉಲ್ಲೇಖಗಳೂ ೧೦೧೫೧ ಸಮಾಸಪದಗಳೂ ಇವೆ. ಅಂದರೆ ಒಟ್ಟು ೩೪೩೧೮ ಶಬ್ದಗಳು ಇಲ್ಲಿ ಎಣಿಕೆಗೆ ಸಿಗುತ್ತವೆ ಎಂದಾಯಿತು. ಆಳವಾಗಿ ಪರಿಶೀಲಿಸಿದರೆ ಸುಮಾರು ಒಂದು ಲಕ್ಷ ಶಬ್ದಗಳು ಇಲ್ಲಿ ಅಳವಡಿಕೆಗೊಂಡಿವೆ. ನಿಘಂಟಿನ ಸಂಪೂರ್ಣ ಪ್ರಯೋಜನ ಹೊಂದುವವರು ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಈಗ ನಿಘಂಟು ಜನತೆಯ ಮುಂದೆ ಇದೆ. ಇದನ್ನು ಉಪಯೋಗಿಸುವುದಕ್ಕೆ ಮುಂಚೆ ಈ ನಿಘಂಟಿನ ನಿರ್ಮಾಣದಲ್ಲಿ ನಾವು ಅನುಸರಿಸಿರುವ ಕ್ರಮವನ್ನು ಕುರಿತು ಕೆಲವು ವಿವರಣೆಗಳನ್ನು

ಕೊಡುವುದು ಉಚಿತವಾಗಿದೆ. ಈ ಮುಂದಿನ ಭಾಗವನ್ನು ಓದಿದ ಬಳಿಕ ಈ ನಿಘಂಟಿನ ಬಳಕೆ ಸುಲಭವೂ ಪ್ರಯೋಜಕವೂ ಆಗುತ್ತದೆ. ಜನಸಾಮಾನ್ಯರಾಗಲಿ ವಿದ್ಯಾರ್ಥಿಗಳಾಗಲಿ ಈ ಭಾಗವನ್ನು ಓದದೆ ಶಬ್ದಗಳಿಗೆ ಅರ್ಥವನ್ನು ಹುಡುಕಹೊರಟರೆ ಸಂಶಯಕ್ಕೆ ಈಡಾಗಬಹುದು. ಆದುದರಿಂದ ಪ್ರಾರಂಭದಲ್ಲಿ ಈ ಭಾಗವನ್ನು ಓದಬೇಕೆಂದು ಎಲ್ಲರಿಗೂ ಸೂಚಿಸಲಾಗಿದೆ. ಇದು ಅವರಿಗೆ ಮಾರ್ಗದರ್ಶಕವಾಗುತ್ತದೆ. ನಿಘಂಟನ್ನು ಉಪಯೋಗಿಸುವವರಿಗೆ ಬಹುಮುಖ್ಯವಾಗಿ ಗೊತ್ತಿರಬೇಕಾದುವು ಈ ನಿಯಮಗಳು.

ಈ ನಿಘಂಟನ್ನು ಸಿದ್ಧಪಡಿಸಿರುವ ಕ್ರಮ

೧. ಕರ್ನಾಟಕದಲ್ಲಿ ಜನರು ಮಾತನಾಡುವ ಹಾಗೂ ಬರೆಯುವ ಕನ್ನಡ ಭಾಷೆಯಲ್ಲಿ ಇತರ ಅನೇಕ ಭಾಷೆಯ ಶಬ್ದಗಳು ಬಂದು ಸೇರಿಕೊಂಡಿವೆ. ಅವುಗಳಿಂದ ಕನ್ನಡವು ಶಕ್ತಿಯುಕ್ತವಾಗಿರುವುದಲ್ಲದೆ ಆ ಶಬ್ದಗಳು ಅಚ್ಚಕನ್ನಡ ಶಬ್ದಗಳಷ್ಟೇ ಪ್ರಭಾವಶಾಲಿಯಾಗಿವೆ. ಅವುಗಳನ್ನೂ ಈ ನಿಘಂಟಿನಲ್ಲಿ ಸೇರಿಸಲಾಗಿದೆ.

ಉದಾ : ಹಿಂದಿ : ಅಮಾನಿ. ಪೋರ್ಚುಗೀಸ್ : ಅಲ್ಮೈರ.
ಇಂಗ್ಲಿಷ್ : ಬೀರು. ಮರಾಠಿ : ಉತಾವಳಿ ಇತ್ಯಾದಿ

೨. ಕನ್ನಡ ಕಾವ್ಯ ಪ್ರಯೋಗಗಳಲ್ಲಿ ಕಂಡುಬರುವ, ಹೆಚ್ಚು ಉಪಯೋಗದಲ್ಲಿರುವ ಗಿಡ, ಮರ, ಮೂಲಿಕೆಗಳ ಹೆಸರುಗಳನ್ನು ಈ ನಿಘಂಟಿನಲ್ಲಿ ಸೇರಿಸಲಾಗಿದೆ.

ಉದಾ : ಆಲ, ತೇಗು, ಮತ್ತಿ

೩. ಕನ್ನಡ ದೇಶದಲ್ಲಿ ಪ್ರಾದೇಶಿಕವಾಗಿ ಮಾತ್ರ ಉಪಯೋಗದಲ್ಲಿರುವ ಅನೇಕ ಶಬ್ದಗಳಿವೆ. ಇಂಥವು ಕೆಲವು ಕೋಶಗಳಲ್ಲಿ ಮಾತ್ರ ಸೇರಿಕೊಂಡಿವೆ. ಅವುಗಳನ್ನು ಈ ನಿಘಂಟಿನಲ್ಲಿ ಕೈಬಿಡಲಾಗಿದೆ. ದೇಶ್ಯ, ಅನ್ಯದೇಶ್ಯ, ಸಂಸ್ಕೃತ ಮುಂತಾಗಿ ವಿವಿಧ ಮೂಲವನ್ನು ಹೊಂದಿರುವ, ಆದರೆ ರೂಪಸಾಮ್ಯವಿರುವ ಶಬ್ದಗಳನ್ನು ಒಂದೇ ಮುಖ್ಯ ಉಲ್ಲೇಖವನ್ನಾಗಿ ಕೊಡಲಾಗಿದೆ.

ಉದಾ : **ಕರಿ (ಕ್ರಿ)**. ೧. ಸುಟ್ಟು ಕರಿಕಾಗು ; ಸೀದುಹೋಗು. ೨. ಹುರಿ ; ಸುಡು. ೩. ಎಣ್ಣೆ ಅಥವಾ ತುಪ್ಪದಲ್ಲಿ ಬೇಯಿಸು. (ನಾ). ೪. ಕರಿಕು ; ಸೀದುಹೋಗುವಿಕೆ. ೫. ಕರಿಯ ಬಣ್ಣ ; ಕಪ್ಪು. ೬. ಅಶುಭ ; ಅಮಂಗಳ. ೭. ಸಸ್ಯಕ್ಕೆ ಬರುವ ಒಂದು ಬಗೆಯ ರೋಗ. ೮. ಆನೆ, ೯. ವಿಷ್ಣು.

ಚರ್ಚು (ಕ್ರಿ). ೧. ಮಗುವನ್ನು ಕಂಕುಳಲ್ಲಿ ಎತ್ತಿಕೊಳ್ಳು. (ನಾ), ೨. ಕ್ರಿಶ್ಚಿಯನ್ನರ ದೇವಾಲಯ.

೪. ಕನ್ನಡ ಗ್ರಂಥಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ಮತ್ತು ಕೆಲವು ವೇಳೆ ವಿಶೇಷಾರ್ಥವಿರುವ ಸಂಸ್ಕೃತ ಶಬ್ದಗಳನ್ನು ಈ ನಿಘಂಟಿನಲ್ಲಿ ಕಾಣಬಹುದು. ಆದರ ಕೇವಲ ಪಾರಿಭಾಷಿಕ ಶಬ್ದಗಳನ್ನು

ಇಲ್ಲಿ ಸೇರಿಸಿಲ್ಲ. ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ ಮುಂತಾದ ಶಾಸ್ತ್ರಗಳಿಗೆ ಸಂಬಂಧಿಸಿದ ಶಬ್ದಗಳಿಗೆ ಇತರ ಅರ್ಥಗಳೂ ಇರುವುದಾದರೆ ಅಂಥ ಶಬ್ದಗಳನ್ನು ಸೇರಿಸಿಕೊಳ್ಳಲಾಗಿದೆ. ಅಲ್ಲದೆ ಪ್ರಸಿದ್ಧವಾಗಿರುವ, ಸಾಹಿತ್ಯದಲ್ಲಿ ಆಗಿಂದಾಗ ಉಪಯೋಗವಾಗುವ ಉಪಮೆ, ದೀಪಕ, ರೂಪಕ ಮುಂತಾದ ಶಬ್ದಗಳನ್ನು ಕೊಡಲಾಗಿದೆ.

೫. ಒಂದು ಶಬ್ದಕ್ಕೆ ಅನೇಕ ರೂಪಗಳಿರುವಾಗ ಶಿಷ್ಟರೂಪಗಳನ್ನು ಒಪ್ಪಿಕೊಂಡು ಅತಿ ಗ್ರಾಮ್ಯವಾದ ರೂಪಗಳನ್ನು ಬಿಡಲಾಗಿದೆ.

ಉದಾ : ಕುಳ್ಳು × = ಕುರುಳ್ (ಳು) ✓

ನೆಳ್ಳು × = ನೆರಳ್(ಳು) ✓

೬. ಒಂದು ಶಬ್ದದ ಹೆಚ್ಚು ಪ್ರಚಲಿತವಾಗಿರುವ ರೂಪಕ್ಕೆ ಅರ್ಥವನ್ನು ಕೊಟ್ಟು ಓದುಗರಿಗೆ ಸೌಲಭ್ಯವನ್ನುಂಟುಮಾಡುವ ದೃಷ್ಟಿಯಿಂದ ಪರ್ಯಾಯಶಬ್ದಗಳಿಗೆ '=' ಚಿಹ್ನೆಯನ್ನು ಹಾಕಿ, ಆ ಎರಡು ರೂಪಗಳಿಗೂ ಭಾಷಾಶಾಸ್ತ್ರ ದೃಷ್ಟಿಯಿಂದ ಸಂಬಂಧವಿರುವುದನ್ನು ಸೂಚಿಸಲಾಗಿದೆ.

ಉದಾ : ಚುಚ್ಚು ೧. = ಚುರ್ಚು. ೨. ಎತ್ತಿಕಟ್ಟು ; ಪ್ರಚೋದಿಸು. ೩. ರಂಧ್ರ ಮಾಡು. (ನಾ). ೪. ಇರಿತ ; ತಿವಿತ. ೫. ಬಯ್ಗುಳು ; ನಿಂದೆ.

ಚುರ್ಚು (ಕ್ರಿ). ೧. (ಆಯುಧ, ಮುಳ್ಳು ಮೊದಲಾದುವುಗಳಿಂದ) ತಿವಿ, - ಚುಚ್ಚು. ೨. ಸುಡು ; ದಹಿಸು.

೭. ಒಂದು ಶಬ್ದಕ್ಕೆ ಅರ್ಥಗಳನ್ನು ಸೂಚಿಸುವಾಗ, ಕ್ರಿಯಾವಾಚಕ, ನಾಮವಾಚಕ, ಗುಣವಾಚಕ, ಸರ್ವನಾಮ, ಅವ್ಯಯ, ಪ್ರತ್ಯಯ -ಎಂಬ ಅನುಕ್ರಮವನ್ನು ಅನುಸರಿಸಲಾಗಿದೆ.

೮. ಕನ್ನಡದಲ್ಲಿ 'ಇಸು' ಪ್ರತ್ಯಯವು ಅನೇಕ ಶಬ್ದಗಳಿಗೆ ಸೇರುತ್ತದೆ. 'ಇಸು' ಸೇರಿದಾಗ ಎರಡು ಬೇರೆಬೇರೆ ಶಬ್ದಗಳು ಒಂದೇ ರೂಪವನ್ನು ಪಡೆಯಬಹುದು. ಇಂಥ ಸಂದರ್ಭಗಳಲ್ಲಿ ಆ ಎರಡನ್ನೂ ಒಂದೇ ಮುಖ್ಯ ಉಲ್ಲೇಖವನ್ನಾಗಿ ಕೊಡಲಾಗಿದೆ.

ಉದಾ : ಕುಪ್ಪಳಿಸು

ಕುಪ್ಪಳಿ + – ಇಸು

ಕುಪ್ಪಳ + – ಇಸು

ಚೂರಿಸು

ಚೂರ್ + – ಇಸು

ಚೂರು + – ಇಸು

ಸಂಸ್ಕೃತ ಶಬ್ದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸಿದಾಗ ಆ ಶಬ್ದಗಳಲ್ಲಿ ಅಕ್ಷರ ಲೋಪವುಂಟಾಗುವುದು. ಅಂಥವುಗಳು ಸಾಧಿತಧಾತುಗಳು. ಅವುಗಳನ್ನು ಮುಖ್ಯಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ.

ಉದಾ : ಚುಂಬನ + – ಇಸು = ಚುಂಬಿಸು.

ಸಮರ್ಥನ + – ಇಸು = ಸಮರ್ಥಿಸು.

೯. ಸಂಸ್ಕೃತದಲ್ಲಿರುವ ದೀರ್ಘಸ್ವರಾಂತ ಶಬ್ದಗಳನ್ನು ಸಾಮಾನ್ಯವಾಗಿ ಕನ್ನಡದಲ್ಲಿ ಅಲ್ಪಪರಿವರ್ತನೆಯೊಡನೆ ಉಪಯೋಗಿಸುತ್ತಾರೆ. ಅವುಗಳಿಗೆ ಸಮಸಂಸ್ಕೃತ ಎಂದು ಹೆಸರು. ಅವುಗಳನ್ನು ಮುಖ್ಯಉಲ್ಲೇಖಗಳನ್ನಾಗಿ ಕೊಡಲಾಗಿದೆ.

ಉದಾ : ಕದಲೀ — ಕದಳಿ

ಗಂಗಾ — ಗಂಗೆ

ಮಾಲಾ — ಮಾಲೆ

ಈ ಕಾರಣದಿಂದಲೇ ಇಂಥ ಪದಗಳೊಡನೆ ಕೂಡಿಕೊಂಡು ಆದ ಸಮಾಸಪದಗಳನ್ನು ಮುಖ್ಯ ಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ.

ಉದಾ : ಕದಳೀಗರ್ಭ

ಗಂಗಾಧರ

ಮಹೀಧರ

ಸಂಸ್ಕೃತ ಭಾಷೆಯಲ್ಲಿ ಅನ್, ಅನು, ನಿರ್, ಪರಿ, ಪ್ರತಿ ಮುಂತಾದ ವಿವಿಧ ಉಪಸರ್ಗಗಳಿಂದ ಕೂಡಿದ ಶಬ್ದಗಳು ವಿಪುಲವಾಗಿವೆ. ಕನ್ನಡದಲ್ಲಿ ಹೆಚ್ಚು ಉಪಯೋಗದಲ್ಲಿರುವವನ್ನು ಮಾತ್ರ ಈ ನಿಘಂಟಿನಲ್ಲಿ ಆರಿಸಿಕೊಂಡು ಮುಖ್ಯ ಉಲ್ಲೇಖಗಳನ್ನಾಗಿ ಕೊಡಲಾಗಿದೆ.

— ಜ, — ಪ, — ರುಹ ಮುಂತಾದುವು ಸೇರಿ ಆಗಿರುವ ಸಂಸ್ಕೃತ ಸಾಧಿತಪದಗಳನ್ನು ಮುಖ್ಯ ಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ.

ಉದಾ : ಅಧಿಪ

ಜಲಜ

ಪಂಕರುಹ

ಜಗತ್, ವಿರಾಟ್, ಹರಿತ್ ಮುಂತಾದ ವ್ಯಂಜನಾಂತ ಸಂಸ್ಕೃತ ಶಬ್ದಗಳನ್ನು ಬೇರೆಯಾಗಿ ಕೊಡದೆ ಅವುಗಳೊಡನೆ ಇತರ ಪದಗಳು ಸೇರಿ ಆಗಿರುವ ಸಮಾಸಗಳನ್ನೇ ಮುಖ್ಯ ಉಲ್ಲೇಖಗಳನ್ನಾಗಿ ಕೊಡಲಾಗಿದೆ.

ಉದಾ : ಜಗತ್ಕರ್ತೃ

ವಿರಾಟ್ಪುರುಷ

ಹರಿನ್ಮಣಿ

೧೦. ಎಲ್ಲ ಕನ್ನಡ ಸಮಾಸಪದಗಳನ್ನೂ ಮುಖ್ಯಉಲ್ಲೇಖಗಳನ್ನಾಗಿ ಕೊಟ್ಟಿಲ್ಲ. ಸಮಾಸದ ಮೊದಲನೆಯ ಪದವನ್ನು ಮುಖ್ಯಉಲ್ಲೇಖವನ್ನಾಗಿ ಮಾಡಿ ಅದರ ಕೆಳಗೆ ಆ ಶಬ್ದಕ್ಕೆ ಸಮಾಸದಲ್ಲಿ ಸೇರುವ ಇತರ ಶಬ್ದಗಳನ್ನು ಅಕಾರಾದಿಯಾಗಿ ಕೊಟ್ಟು, ಅರ್ಥವನ್ನು ಸೂಚಿಸಲಾಗಿದೆ. ಇಂಥ ಸಮಾಸಗಳಲ್ಲಿ ವ್ಯಾಕರಣ ಪ್ರಕ್ರಿಯೆಯಿಂದ ಉಂಟಾಗುವ ಆದೇಶ ಸ್ವರೂಪವನ್ನು ಕಂಸ ಚಿಹ್ನೆಗಳಲ್ಲಿ ಸೂಚಿಸಲಾಗಿದೆ.

ಉದಾ: ಅಂದ ~ (೦)ಕೊ(ಗೊ)ಳಿಸು

ಚುಕ್ಕಿ ~ ಕು(ಗು)ವರ

ಹೀಗೆ ನಿರ್ದೇಶಿಸದೆ ಬಿಟ್ಟ ಸ್ಥಳಗಳಲ್ಲಿ ಸಂಧಿಗಳ ಸಾಮಾನ್ಯ ನಿಯಮಗಳನ್ನು ಅನುಸರಿಸಿ ಸಮಾಪದಗಳನ್ನು ಗುರುತಿಸಿಕೊಳ್ಳಬೇಕು. ಸಾಮಾನ್ಯವಾಗಿ ಬಹುವ್ರೀಹಿ ಸಮಾಸಗಳನ್ನೂ ಹಾಗೂ ಮೂಲರೂಪದಿಂದ ತೀರ ಭಿನ್ನವಾದ ಶಬ್ದ ರೂಪಗಳ್ನು ಮುಖ್ಯ ಉಲ್ಲೇಖಗಳನ್ನಾಗಿಯೇ ಕೊಡಲಾಗಿದೆ.

ಉದಾ: ಬೆಂಗದಿರ ಕಟ್ಟಚ್ಚು

ಮುಕ್ಕಣ್ಣ ನಿಟ್ಟುಪವಾಸ

೧೧. ಸಮಾಸಪದಗಳನ್ನು ಕೊಡುವಾಗ ಪರಶಬ್ದವು ಮೂಲತಃ 'ಱ' ಸಹಿತ ಶಬ್ದವಾಗಿದ್ದು, ಅದಕ್ಕೆ ಆಧುನಿಕ ಪ್ರಯೋಗಗಳು ಮಾತ್ರ ಇದ್ದರೆ ಅಂಥ ಶಬ್ದಗಳನ್ನು ರೇಫ ಸಹಿತವಾಗಿಯೇ ಕೊಡಲಾಗಿದೆ. ಇದೇ ನಿಯಮವನ್ನು ೞ ಮತ್ತು ಕುಳಗಳಲ್ಲಿಯೂ ಅನುಸರಿಲಾಗಿದೆ.

ಉದಾ: ತಳ ~ ಊ(ವೂ)ರು = ೧. ನೆಲೆಯಾಗಿ ನಿಲ್ಲು; ಸ್ಥಿರವಾಗಿ ವಾಸಮಾಡು.
೨. ಬೀಡುಬಿಡು; ಉಳಿದುಕೊಳ್ಳು.

ಗಂಟು ~ ಬೀಳು = ೧ ಗಂಟುಗಂಟಾಗು; ಗೋಜಾಗು
೨. ಬೆನ್ನು ಹತ್ತು; ಅಂಟಿಕೊಳ್ಳು; ಸಮನಾಗು; ಸರಿಯಾಗು.

ಗಾಳಿ ~ ಕೋಳಿ = ವಾಯುವಿನ ದಿಕ್ಕನ್ನು ಸೂಚಿಸುವುದು; ಗಾಳಿಹುಂಜ.

ಇಲ್ಲಿ ಊಱು, ಬೀಱ್, ಕೋಟಿ ಎಂಬುದೇ ಮೂಲರೂಪಗಳಾಗಿದ್ದರೂ ಈ ಸಮಾಸಗಳು ನಿರ್ಮಾಣವಾಗುವ ಹೊತ್ತಿಗೆ ಅವು ಸಾಮಾನ್ಯರೇಫದಿಂದ ಕೂಡಿದ್ದುವು. ಕುಳಸಹಿತವಾಗಿದ್ದವು ಎಂದರ್ಥ.

೧೨. ಕಿಱಿದು, ಪೊನ್, ಬಾನ್ ಮುಂತಾದ ಮೂಲಶಬ್ದಗಳಿಗೆ ಸಮಾಸದಲ್ಲಿ ಆದೇಶವಾಗಿ ಬರುವ **ಕಿಱ್, ಕಿಱು, ಪೊಂ, ಬಾಂ** ಮುಂತಾದ ರೂಪಗಳು ಕನ್ನಡದಲ್ಲಿ ಸಹಜವಾಗಿ ಶಬ್ದಗಳಲ್ಲ. ಹಾಗಿದ್ದರೂ ಅನಕೂಲತೆಯ ದೃಷ್ಟಿಯಿಂದ ಅವುಗಳಿಗೂ ಮುಖ್ಯ ಉಲ್ಲೇಖಗಳ ಸ್ಥಾನವನ್ನೇ ಕೊಟ್ಟು ಕೆಳಗೆ ಅಕಾರಾದಿಯಾಗಿ ಇತರ ಸಮಾಸಪದಗಳನ್ನು ಸೂಚಿಸಲಾಗಿದೆ.

ಉದಾ: **ಪೊಂ (ನಾ).** ಹೊನ್ನು ; ಬಂಗಾರ. ~ ಬೆಸ = ಚಿನ್ನದ ಕೆಲಸ.

೧೩. ಕನ್ನಡದಲ್ಲಿ ಬಿಂದು ಸಹಿತವಾಗಿಯೂ ಬಿಂದುರಹಿತವಾಗಿಯೂ ಇರುವ ಕೆಲವು ಶಬ್ದಗಳಿಗೆ ಸಮಾನವಾದ ಅರ್ಥ ಇರುವುದುಂಟು. ಆ ಬಗೆಯ ಶಬ್ದಗಳನ್ನು ಕೊಡುವಾಗ ಬಿಂದುವಿಗೆ ಕಂಸವನ್ನು ಹಾಕಿ ಎರಡನ್ನೂ ಒಂದೇ ಮುಖ್ಯ ಉಲ್ಲೇಖವನ್ನಾಗಿ ಮಾಡಲಾಗಿದೆ.

ಉದಾ: **ನೂ(ಂ)ಕು**

ಮಲ(ಂ)ಗು

ಮತ್ತೆ ಕೆಲವು ಸಂದರ್ಭಗಳಲ್ಲಿ ಬಿಂದುಸಹಿತವಾದ ಶಬ್ದಕ್ಕೂ ಬಿಂದುರಹಿತವಾದ ಶಬ್ದಕ್ಕೂ ಅರ್ಥವ್ಯತ್ಯಾಸವಿರುತ್ತದೆ. ಅಂಥವುಗಳನ್ನು ಬೇರೆ ಬೇರೆಯಾಗಿಯೇ ಕೊಡಲಾಗಿದೆ.

ಉದಾ : ಅಡಂಗು

ಅಡಗು

೧೪. ಸಮಾಸಪದಗಳನ್ನು ಕೊಡುವಾಗ ಕೇವಲ ಒಂದೇ ಅಕ್ಷರದಲ್ಲಿ ವ್ಯತ್ಯಾಸವಿರುವ ಸಮಾನಾರ್ಥಕ ರೂಪಗಳನ್ನು ಕಂಸದಲ್ಲಿ ಸೇರಿಸಿ ಒಟ್ಟಿಗೆ ಸೂಚಿಸಲಾಗಿದೆ.

ಉದಾ : ಬ್ರಹ್ಮ ~ ಚರ್ಯ (ರ್ಯೆ)

ಮಂತಣ ~ ಶಾ(ಸಾ)ಲೆ.

೧೫. **ರ ಮತ್ತು ಱ** : 'ಱ' ದಿಂದ ಕೂಡಿದ ಕನ್ನಡ ಪದಗಳು ಕಾಲಕ್ರಮದಲ್ಲಿ ಸರೇಫವಾಗಿವೆ. ಇಂಥ ಸಂದರ್ಭಗಳನ್ನು ಸೂಚಿಸುವುದಕ್ಕ 'ಱ' ಕೂಡಿದ ಶಬ್ದಗಳಿಗೆ ಮೂಲಾರ್ಥವನ್ನು ಕೊಟ್ಟಿದೆ. ಸಾಮಾನ್ಯರೇಫದ ಪದಗಳಿಗೆ ಬೇರೆ ಅರ್ಥಗಳಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಕೊಟ್ಟು '=' ಚಿಹ್ನೆಯ ಮೂಲಕ ಎರಡು ರೂಪಗಳಿಗೂ ಇರುವ ಭಾಷಾ ಸಂಬಂಧವನ್ನು ಓದುಗರ ಗಮನಕ್ಕೆ ತಂದಿದೆ; ಇಂಥ ಶಬ್ದಗಳ ಜೊತೆಯಲ್ಲೇ ಅದ ಸಮಾಸಪದಗಳನ್ನು ಕೂಡ ಆಯಾರೂಪಗಳ ಕೆಳಗೆ ಕೊಡಲಾಗಿದೆ.

ಉದಾ (i): **ನೆರೆ (ಕ್ರಿ).** ೧. ಗುಂಪುಸೇರು; ಒಟ್ಟಾಗು. ೨. ಸಂಭೋಗಿಸು ೩. ಕೂದಲು ಬೆಳ್ಳಗಾಗು. ೪. = **ನೆಱೆ.** (ನಾ) ಸಮೂಹ; ಗುಂಪು. ೬. ಕೂದಲು ಬೆಳ್ಳಗಾಗುವಿಕೆ. ೭. ಸಮೀಪ; ಅಕ್ಕ ಪಕ್ಕ. (ಗು). ೮. ಸಮೀಪದ ~ ಊ(ಯೂ,ವೂ) ರು = ಪಕ್ಕದ ಊರು.

ನೆಱೆ(ರೆ) (ಕ್ರಿ) ೧. ಪೂರ್ಣವಾಗು; ಪೂರ್ತಿಗೊಳ್ಳು ೨. ಪ್ರಾಯಕ್ಕೆ ಬರು; ಋತುಮತಿಯಾಗು. ೩. ಅಧಿಕವಾಗು ; ಹೆಚ್ಚಾಗು ; ಉಕ್ಕು. (ನಾ). ೪. ಮಹಾಪೂರ; ತುಂಬು ಪ್ರವಾಹ. ೫. ಪೂರ್ಣವಾದುದು. (ಅ). ೬. ಚೆನ್ನಾಗಿ ; ಪೂರ್ಣವಾಗಿ ~ ತಿ(ದಿ)ಂಗಳ್ = ಪೂರ್ಣಚಂದ್ರ; ಹುಣ್ಣಿಮೆಯ ಚಂದ್ರ

ಸಾಮಾನ್ಯರೇಫದ ಮತ್ತು ಶಕಟರೇಫದ ಶಬ್ದಗಳಿಗೆ ಸಮಾನಾರ್ಥಗಳಿಗೆ ಅವೆರಡನ್ನೂ ಒಟ್ಟಿಗೆಯೇ ಕೊಟ್ಟಿದೆ. ಓದುಗರ ಸೌಲಭ್ಯಕ್ಕಾಗಿ ಶಕಟರೇಫವುಳ್ಳ ಶಬ್ದಗಳಿಗೆ ಸಾಮಾನ್ಯ ರೇಫವನ್ನು ಕಂಸದಲ್ಲಿ ಸೂಚಿಸಲಾಗಿದೆ.

ಉದಾ (ii): **ಬಱ(ರ)ಡು (ನಾ).** ೧. ನಿಸ್ಸಾರವಾದುದು; ಪೊಳ್ಳು. ೨. ಗೊಡ್ಡು; ಬಂಜೆತನ. ೩. ಬಯಲು; ಶೂನ್ಯತೆ.

೧೬. **ಳ ಮತ್ತು ೞ** : ಳ ಅಥವಾ ೞ ಇವುಗಳಿಂದ ಶಬ್ದಗಳಿಗೂ ಮೇಲಿನ ರ ಮತ್ತು ಱ ನಿಯಮವೇ ಅನ್ವಯವಾಗುತ್ತದೆ.

ಉದಾ (i): ಕೊಳೆ ೧. ಕೊೞೆ. ೨. ಪ್ರಗತಿ ಇಲ್ಲದೆ ಇದ್ದ ಸ್ಥಾನದಲ್ಲಿಯೇ ಇರು. ~ ಹಾಕು = ೧. ಕೊಳೆಯುವಂತೆ ಮಾಡು. ೨. ತಡೆದು ನಿಲ್ಲಿಸು; ಪ್ರಗತಿಯಿಲ್ಲದೆ ಇರಿಸು.

ಕೊೞೆ(ಳೆ) (ಕ್ರಿ). ೧. ಕೆಟ್ಟುನಾರು. (ನಾ). ೨. ಕೊಳೆತುದು; ಹೊಲಸು. ~ ಪಾ(ವಾ)ವು = ಒಂದು ಜಾತಿಯ ಹಾವು; ಕೊಳಕು ಮಂಡಲ.

ಉದಾ (ii): ಗೊೞ(ಳ) ಸು (ನಾ). ಕುಣಿಕೆ ; ಕೊಂಡಿ.

೧೭. ವ್ಯಂಜನಾಂತ, ಉಕಾರಾಂತ ಮತ್ತು ಲಕಾರಸಹಿತ, ಳಕಾರಸಹಿತ ಶಬ್ದಗಳಿಗೆ ಅರ್ಥಸಾಮ್ಯವಿದ್ದಲ್ಲಿ ಒಂದೇ ಮುಖ್ಯ ಉಲ್ಲೇಖವನ್ನಾಗಿ ಕೊಡಲಾಗಿದೆ.

ಉದಾ : **ನವಿಲ್ (ಲು) (ನಾ).** ಒಂದು ಜಾತಿಯ ಪಕ್ಷಿ ; ಮಯೂರ.

ನಲಿ(ಳಿ) ನ (ನಾ). ತಾವರೆ ; ಕಮಲ

೧೮. ಅರ್ಥವ್ಯತ್ಯಾಸ ಕಂಡುಬಂದ ಶಬ್ದಗಳನ್ನು ಬೇರೆ ಬೇರೆಯಾಗಿ ಕೊಟ್ಟು ಅವುಗಳಿಗಿರುವ ಸಂಬಂಧವನ್ನು ಸೂಚಿಸಲಾಗಿದೆ.

ಉದಾ: **ಪಾರ್ (ಕ್ರಿ)** ೧. ನಿರೀಕ್ಷಿಸು ; ಎದುರುನೋಡು. ೨. ಆಶಿಸು; ಹಾರೈಸು. ೩. ಲಕ್ಷಿಸು ; ಗಮನಿಸು.

• **ಪಾರು** ೧. = ಪಾರ್. ೨.= ಪಾೞು.(ನಾ) ೩. ದಡ ; ತೀರ ೪. ಸೂರಿನ ಇಳಿಜಾರು ಭಾಗ.

ನಲ (ನಾ). ೧. ಪೊಳ್ಳಾದ ಬಿದಿರು. ೨. ಕಂಪು ; ವಾಸನೆ ೩. ನಿಷಧ ದೇಶದ ಒಬ್ಬ ದೊರೆಯ ಹೆಸರು. ೪. ಆರುವತ್ತು ಸಂವತ್ಸರಗಳಲ್ಲಿ ಒಂದು ನಳ ೧. = ನಲ ೨. = ನಲ್ಲಿ.

೧೯. ಙ, ಞ, ಳ, ೞ - ಈ ಅಕ್ಷರಗಳಿಂದ ಮೊದಲಾಗುವ ಪದಗಳು ಕನ್ನಡದಲ್ಲಿ ಸಿಗುವುದಿಲ್ಲ. ಆದುದರಿಂದ ಈ ಅಕ್ಷರಗಳು ಬೇರೆಯಾಗಿ ಉಲ್ಲೇಖಗೊಂಡಿಲ್ಲ. ಆದರೆ ಉಳಿದ ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿ ಎಷ್ಟನೆಯ ಅಕ್ಷರವಾಗುತ್ತವೆಂಬುದನ್ನು ಸೂಚಿಸುವಾಗ ಇವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

೨೦. ಈ ನಿಘಂಟಿನಲ್ಲಿ ಪದಗಳ ಅಕಾರಾದಿ ಹೀಗಿದೆ :

ಸ್ವರ, ಅನುಸ್ವಾರ, ವಿಸರ್ಗ, ವರ್ಗೀಯಾಕ್ಷರಗಳು ಮತ್ತು ಅವರ್ಗೀಯಾಕ್ಷರಗಳು. ಅವರ್ಗೀಯಾಕ್ಷರಗಳನ್ನು ಕೊಡುವಾಗ ಸಾಮಾನ್ಯ ರೇಫದನಂತರ ಶಕಟರೇಫವನ್ನೂ ಕುಳದ ನಂತರ 'ೞ' ವನ್ನು ಕೊಡಲಾಗಿದೆ.

ಉದಾ : ಅ

ಅಂಕ

ಅಂತಃಪುರ

ಅಂತಃಸ್ಥ

ಅಂತಕ

ಅಕಚ

ಅರೋಚಿ

ಅಱ(ರ)

ಅರ್ಕ

ಅಳ್ಕೆರ್ದೆ

ಅೞ್(ಳ್, ೞು, ೞು)

೨೧. ವಿರಾಮ ಚಿಹ್ನೆಗಳು : ಇತರ ಚಿಹ್ನೆಗಳು :

ಪೂರ್ಣ ವಿರಾಮ :— ಮುಖ್ಯ ಉಲ್ಲೇಖಗಳ ವ್ಯಾಕರಣಸ್ವರೂಪವನ್ನು ನಿರ್ದೇಶಿಸಿದ ಅನಂತರವೂ ಅರ್ಥಚ್ಛಾಯೆಯನ್ನು ತೋರಿಸುವ ೧, ೨, ೩ ಎಂಬ ಸಂಖ್ಯೆಗಳ ಮುಂದೆಯೂ ಒಂದು ಅರ್ಥವು ಪೂರೈಸಿದಾಗಲೂ **ಪೂರ್ಣವಿರಾಮ**ವನ್ನು ಬಳಸಲಾಗಿದೆ.

ಉದಾ: ಮೋಡೆ (ನಾ). ದಡ್ಡ ಹೆಂಗಸು.

ಅರ್ಧವಿರಾಮ :— ಒಂದೇ ಬಗೆಯ ಅರ್ಥದ ಛಾಯೆ ಇರುವಾಗ ಎರಡು ಅರ್ಥಗಳ ನಡುವೆ ಈ ಚಿಹ್ನೆಯನ್ನು ಬಳಸಿದೆ.

ಉದಾ: ದುಬಾರಿ (ನಾ) ತುಟ್ಟಿ; ಹೆಚ್ಚುಬೆಲೆ.

ದುಂಡುಕಂಸ :— ಈ ಚಿಹ್ನೆಯನ್ನು ನಾಲ್ಕು ಕಡೆಗಳಲ್ಲಿ ಉಪಯೋಗಿಸಲಾಗಿದೆ.

(i) ಮುಖ್ಯ ಉಲ್ಲೇಖಗಳಾದ ಶಬ್ದಗಳು ವ್ಯಾಕರಣದಲ್ಲಿ ಕ್ರಿಯಾಪದ, ನಾಮಪದ, ಗುಣವಾಚಕ, ಅವ್ಯಯ ಮುಂತಾದ ಯಾವ ವಿಭಾಗಕ್ಕೆ ಸೇರಿದೆ ಎಂಬುದನ್ನು ಸೂಚಿಸುವಾಗ—

ಉದಾ: ಬಿಡಾರ (ನಾ). ತಂಗುವ ಸ್ಥಳ.

(ii) ಱ, ೞ ಅಕ್ಷರಗಳ ನಡುವೆ ಸಾಮಾನ್ಯ ರೇಫ, ಕುಳ ಅಕ್ಷರಗಳನ್ನು ಸೂಚಿಸುವಾಗ—

ಉದಾ: **ಮೂಱು(ರು)** (ನಾ). ಒಂದು ಸಂಖ್ಯೆ

ಮುೞು(ಳು) (ಕ್ರಿ).ಮುಳುಗು ; ಅಡಗು

(iii) ಒಂದು ಶಬ್ದವು ಬಿಂದು ಸಹಿತವಾಗಿಯೂ ಬಿಂದು ರಹಿತವಾಗಿಯೂ ಇದ್ದು ಅದನ್ನು ಒಂದೆಡೆಯಲ್ಲಿಯೇ ಸೂಚಿಸುವಾಗ ಬಿಂದು ವಿಕಲ್ಪವೆಂದು ಸೂಚಿಸಲು—

ಉದಾ: ಮೂ(ಂ) ಕು (ನಾ). ಗಾಡಿ ಹೊಡೆಯುವವನು ಗಾಡಿಯಲ್ಲಿ ಕುಳಿತುಕೊಳ್ಳುವ ಸ್ಥಳ; ಮೂಕಿ.

(iv) ಪದಗಳಿಗೆ ಅರ್ಥವನ್ನು ಕೊಡುವಾಗ ಅರ್ಥಸ್ಪಷ್ಟತೆಗಾಗಿ ಸೇರಿದ ಕೆಲವು ಪದಗಳನ್ನು ಕಂಸದೊಳಗೆ ಸೂಚಿಸಲಾಗಿದೆ.

ಉದಾ: ಮೊರೆ (ಕ್ರಿ) (ತುಂಬಿಯಂತೆ), ಧ್ವನಿಮಾಡು - ಝೇಂಕರಿಸು. ೨. (ವಾದ್ಯದಂತೆ) ಶಬ್ದಮಾಡು, - ಘೋಷಿಸು.

"∼" ಈ ಚಿಹ್ನೆಯು ಬಂದಾಗ ಮುಖ್ಯಉಲ್ಲೇಖಕ್ಕೆ ಮತ್ತೊಂದು ಶಬ್ದ — ಈ ಚಿಹ್ನೆಯ ಮುಂದೆ ಬಂದಿರುವ ಶಬ್ದ — ಸೇರಿ ಸಮಾಸವಾಗಿದೆ ಎಂದರ್ಥ.

ಉದಾ: ಪಸದನ (ನಾ). ೧ ಅಲಂಕಾರ ; ಪ್ರಸಾಧನ. ೨. ಆಭರಣ. ~ (ಂ)ಕೊ(ಗೊ)ಳ್ = ಅಲಂಕರಿಸಿಕೊಳ್ಳು.

"=" ಒಂದು ಶಬ್ದಕ್ಕೆ ಸಮಾನಾರ್ಥವಿರುವ ಇನ್ನೊಂದು ಶಬ್ದದ ಮುಂದೆಯೂ ಪರ್ಯಾಯ ಶಬ್ದಗಳ ಮುಂದೆಯೂ ಈ ಚಿಹ್ನೆಯ ಉಪಯೋಗಗೊಂಡಿದೆ.

ಉದಾ: ಪಸಾಯನ = ಪಸಾಯ

", –" ಒಂದು ಶಬ್ದಕ್ಕೆ ಕೊಡುವ ಅರ್ಥಗಳಲ್ಲಿ ಕೊನೆಯ ಪದದ ಬದಲು ಮತ್ತೊಂದು ಪದವನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗಿದೆ. ಅಂದರೆ ', –' ಇರುವ ಸ್ಥಳದಲ್ಲಿ ಹಿಂದಿನ ಅರ್ಥದ ಮೊದಲ ಭಾಗವನ್ನು ಸೇರಿಸಿಕೊಳ್ಳಬೇಕು.

ಉದಾ : ತೆರೆ ೧. = ತೆಱೆ. (ನಾ). ೨. ಅಲೆ ; ತರಂಗ ೩. ಚರ್ಮದ ಮಡಿಕೆ — ಸುಕ್ಕು

೨೨. **ಅಕ್ಷರಗಳ ಗಾತ್ರ** : ಮುಖ್ಯಉಲ್ಲೇಖಗಳನ್ನು ೧೦ ಪಾಯಿಂಟ್ ದಪ್ಪ ಅಕ್ಷರಗಳಲ್ಲೂ ಅರ್ಥಗಳನ್ನು ೧೦ ಪಾಯಿಂಟ್ ದಪ್ಪ ಸಣ್ಣ ಅಕ್ಷರಗಳಲ್ಲೂ ಮುದ್ರಿಸಲಾಗಿದೆ.

V. ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ ನಿರ್ಮಾಣ ಒಂದು ಹಳೆಯ ದಾಖಲೆ

[ಕನ್ನಡವು ನಿದ್ರೆ ಮಾಡುತ್ತಿದ್ದಾಗ **ಕನ್ನಡ ಮಾತು ತಲೆ ಎತ್ತುವ ಬಗೆ** ಎಂಬ ಒಂದು ಪ್ರಸಿದ್ಧ ಉಪನ್ಯಾಸವನ್ನು ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ನೀಡಿದ್ದರು. ಇದು ನಡೆದುದು ೧೯೧೧ರಲ್ಲಿ. ಅಲ್ಲಿಂದ ಮುಂದೆ ಆಗಾಗ ಕನ್ನಡಿಗರ ಸಮ್ಮೇಳನಗಳು ನೆರವೇರುತ್ತಿದ್ದವು. ಅವುಗಳ ಚಾರಿತ್ರಿಕ ದಾಖಲೆಗಳು ಈಗ ದೊರಕುವುದಿಲ್ಲ. ಇಂಥ ಒಂದು ಸಮ್ಮೇಳನದಲ್ಲಿ **ಕನ್ನಡ ಶಾಸ್ತ್ರ ಗ್ರಂಥಗಳಲ್ಲಿ ಉಪಯೋಗಿಸಬಹುದಾದ ಪಾರಿಭಾಷಿಕ ಶಬ್ದಗಳ ನಿರ್ಣಯ** ಎಂಬ ವಿಷಯವನ್ನು ಕುರಿತು ೧೯೧೫ ರಲ್ಲಿ ಧಾರವಾಡದ ಟ್ರೈನಿಂಗ್ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿದ್ದ ಆರ್. ಎಂ. ಮಹಿಷಿ ಬಿ.ಎ. ಅವರು ಬರೆದು ಓದಿದ ಒಂದು ಉಪನ್ಯಾಸವು ನನ್ನ ಹಳೆಯ ಕಡತಗಳಲ್ಲಿ ದೊರಕಿದೆ. ಅದು ಒಂದು ದಾಖಲೆಯಾಗಿ ಉಳಿಯಲೆಂದು ಈ ಪುಸ್ತಕದಲ್ಲಿ ಅನುಬಂಧವಾಗಿ ಸೇರಿಸಿದ್ದೇನೆ.]

"ಕನ್ನಡಿಗರ ಸಮ್ಮೇಳನ" ವೆಂಬ ಕರ್ಣಾಟಭಾಷಾ ವಿದ್ವತ್ಸಮಾಜಕ್ಕೆ ವಿಜ್ಞಾಪನೋಪನ್ಯಾಸವು

ಅಧ್ಯಕ್ಷರೆ, ಮಹನೀಯರೆ,

ನಮ್ಮೆಲ್ಲರ ಮಾತೃಭಾಷೆಯಾದ ಕನ್ನಡಭಾಷೆಯ ಪುನರುಜ್ಜೀವನಕ್ಕಾಗಿ ಸದ್ಯಕ್ಕೆ ತಾವೆಲ್ಲರು ಮಾಡುವ ಪ್ರಯತ್ನಗಳು ತುಂಬ ಶ್ಲಾಘನೀಯವಾಗಿದೆ. ಈ ನಮ್ಮ ಹಿಂದು-ದೇಶದಲ್ಲಿ ಇಂಗ್ಲಿಷ್ ಸಾಮ್ರಾಜ್ಯವು ನೆಲೆಗೊಂಡು ೧೦೦ಕ್ಕಿಂತ ಹೆಚ್ಚು ವರ್ಷಗಳಾದವು. ಈ ಅವಧಿಯಲ್ಲಿ ರಾಜರ ಭಾಷೆಯದ ಇಂಗ್ಲಿಷ್ ಭಾಷೆಗೆ ಈ ದೇಶದಲ್ಲಿ ಒಂದು ಬಗೆಯ ಪ್ರಾಧಾನ್ಯ ವುಂಟಾದದ್ದು ಸ್ವಭಾವಿಕವು. ಇಂಗ್ಲಿಷ್ ಭಾಷೆಗೆ ಹೆಚ್ಚು ಹೆಚ್ಚು ಮಹತ್ವ ವುಂಟಾದಂತೆ ದೇಶಭಾಷೆಗಳಿಗೆ ಸಾಕಾಷ್ಟು ಉತ್ತೇಜನವು ದೊರೆಯದೆ, ಅವು ಹೀನಾವಸ್ಥೆಯನ್ನು ಹೊಂದುತ್ತ ನಡೆದಿರುವದು ತಮ್ಮೆಲ್ಲರಿಗೆ ಗೊತ್ತಿದ್ದ ವಿಷಯವೇಸರಿ. ಲಾರ್ಡ್ 'ಉಯಿಲ್ಯಮ್ ಬೆಂಟಿಂಕ್' ರವರು ಈ ದೇಶದ ಗವ್ಹರ್ನರ್ ಜನರಲ್ ರಾಗಿದ್ದ ಕಾಲದಲ್ಲಿ ಲಾರ್ಡ್ 'ಮೆ ಕಾಲೆ' ಎಂಬವರು ಈ ದೇಶದ ಜನರ ಶಿಕ್ಷಣವು ಇಂಗ್ಲಿಷ್ ಭಾಷೆಯ ಮುಖಾಂತರವೇ ನಡೆಯಬೇಕೆಂದೂ, ಇಂಗ್ಲಿಷ್ ಭಾಷೆಗೆ ಶಿಕ್ಷಣ ಕ್ರಮದಲ್ಲಿ ಅಗ್ರಸ್ಥಾನವು ದೊರೆಯತಕ್ಕದೆಂದೂ ಗೊತ್ತುಪಡಿಸಿ ಆ ಧೋರಣಕ್ಕೆ ಅನುಗುಣವಾದ ಶಿಕ್ಷಣಕ್ರಮವನ್ನು ಪ್ರಚಾರದಲ್ಲಿ ತರುವದಕ್ಕೆ ಕೈಲಾದಮಟ್ಟಿಗೆ ಪ್ರಯತ್ನ ಮಾಡಿದರೆಂಬುದು, ಸನ ೧೮೩೫ನೆಯ ಇಸವಿಯ ಮಾರ್ಚ್ ೭ನೆ ತಾರೀಖಿನ ದಿವಸ ಮಾಡಿದ ರೆಝುಲೇಶನದಿಂದ ಗೊತ್ತಾಗುವದು. ಈ ತರದ ಶಿಕ್ಷಣ ಕ್ರಮವು ಈ ದೇಶದಲ್ಲಿ ಸುಮಾರು ೨೦ ವರ್ಷಗಳ ವರೆಗೆ ಅಮಲಿನಲ್ಲಿದ್ದರೂ ಬೆರಳುಗಳಿಂದ ಎಣಿಸುವಷ್ಟು ಸ್ವಲ್ಪ

ಜನರು ಮಾತ್ರ ಇಂಗ್ಲಿಷ್ ಭಾಷೆಯನ್ನು ಸಾಂಗವಾಗಿ ಕಲಿತು ಅದರಲ್ಲಿ ಪ್ರಾವೀಣ್ಯವನ್ನು ಹೊಂದಿದರು. ಉಳಿದ ಕೋಟ್ಯವಧಿ ಜನರು ಇಂಗ್ಲಿಷ್ ಭಾಷೆಯನ್ನು ಅಭ್ಯಾಸ ಮಾಡಲಾರದೆ, ತಮ್ಮ ಸ್ವಂತ ಪ್ರಯತ್ನದಿಂದ ತಮ್ಮ ತಮ್ಮ ಪ್ರಾಂತಗಳ ಭಾಷೆಯನ್ನು ಕಲಿತುಕೊಂಡು ಅವುಗಳಲ್ಲಿರುವ ಸ್ವಾರಸ್ಯವನ್ನು ಅರಿತುಕೊಂಡು ಅಷ್ಟರಿಂದಲೇ ಸಂತುಷ್ಟರಾಗಿದ್ದರು. ಇಂಗ್ಲಿಷ್ ಭಾಷೆಯು ಈ ದೇಶದ ಭಾಷೆಗಳನ್ನು ಮೂಲೆಗೊತ್ತಿ ಅವುಗಳ ಸ್ಥಳವನ್ನು ಆಕ್ರಮಿಸಿಕೊಳ್ಳಲಾರದೆಂಬ ವಿಷಯವನ್ನು ಲಾರ್ಡ್ ಹ್ಯಾಲಿಫಾಕ್ಸ್‌ರವರು ಸನ್ ೧೮೫೪ರಲ್ಲಿ ಕೋರ್ಟ ಅಫ ಡಾಯರೆಕ್ಟರರಿಗೆ ತಿಳುಹಿಸಿದರು. ಅವರು ಈ ದೇಶದ ಪರಿಸ್ಥಿತಿಯ್ನು ಪೂರ್ಣವಾಗಿ ವಿಮರ್ಶಿಸಿ, ಈ ದೇಶದ ಜನರೆಲ್ಲರೂ ಪರಭಾಷೆಯಾದ ಇಂಗ್ಲಿಷನ್ನು ಕಲಿಯಲಾರರೆಂದೂ, ಇಂಗ್ಲಿಷ್ ಭಾಷೆಯನ್ನು ಕಲಿಯಲಿಚ್ಛಿಸುವವರಿಗೆ ಮಾತ್ರ ಈ ಭಾಷೆಯನ್ನು ಕಲಿಸುವ ವ್ಯವಸ್ಥೆ ಮಾಡಬೇಕೆಂದೂ, ಇತರರು ತಮ್ಮ ತಮ್ಮ ದೇಶಭಾಷೆಗಳನ್ನು ಕಲಿಯುವಂತೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದೂ, ದೇಶಭಾಷೆಗಳ ಮುಖಾಂತರ ಇಂಗ್ಲಿಷ್ ಭಾಷೆಯನ್ನು ಕಲಿಸುವುದು ಉತ್ತಮವಾದ ಪದ್ಧತಿಯೆಂದೂ, ಅದರಿಂದ ದೇಶಭಾಷೆಗಳಿಗೂ ಉತ್ತೇಜನವು ದೊರೆಯುವುದೆಂದೂ ನಿರ್ಣಯಿಸಿದರು. ಇದರಿಂದ, ಇಂಗ್ಲಿಷ್ ಭಾಷೆಯ ಪ್ರಚಾರದಿಂದ ದೇಶಭಾಷೆಗಳು ನಾಮಶೇಷವಾಗಬಹುದೆಂಬ ಭೀತಿಯು ಇಲ್ಲದಂತಾಯಿತು.

ಈ ದೇಶದ ಶಿಕ್ಷಣ ಕ್ರಮದಲ್ಲಿ ಸರಕಾರದ ಧೋರಣವು ಯಾವದೇ ಇರಲಿ, ಪರಭಾಷೆಯಿಂದ ಇಂಗ್ಲಿಷ್ ಭಾಷೆಯು ಪ್ರತಿಯೊಂದು ಹಳ್ಳಿಯವರೆಗೆ ಹೋಗಿ ಮುಟ್ಟುವುದು ಅಸಂಭವನೀಯವಾದದ್ದೆಂಬ ಸಂಗತಿಯು ಕಳೆದ ೫೦ ವರ್ಷಗಳ ಅನುಭವದಿಂದ ಸಿದ್ಧವಾಗಿದೆ. ಮತ್ತು ಕಾವ್ಯ, ನಾಟಕ, ತರ್ಕ, ಮಿಮಾಂಸೆ ಮೊದಲಾದ ಹಲವು ವಿಷಯಗಳನ್ನೊಳಗೊಂಡಿರುವ ಗ್ರಂಥಗಳಿಂದ ತುಂಬಿದ ಈ ದೇಶದ ಭಾಷೆಗಳು ಯಾವ ತರದ ಹೀನದೆಶೆಯಲ್ಲಾದರೂ ತಮ್ಮ ತಲೆಯನ್ನೆತ್ತಲು ಪ್ರಯತ್ನಿಸುವದು ಸ್ವಾಭಾವಿಕವಿದೆ.

ಇತ್ತಿತ್ತಲಾಗಿ ಈ ದೇಶದ ಜನರ ವಿಚಾರಸರಣಿಯಲ್ಲಿ ಒಂದು ಬಗೆಯ ಕ್ರಾಂತಿಯಾದದ್ದು ಕಂಡುಬರುವದು. ಇಂಗ್ಲಿಷ್ ಭಾಷೆಯನ್ನು ಮನೆಯಲ್ಲಾಡುವ ಭಾಷೆಯನ್ನು ಮಾಡಿಕೊಡಂಥವರು ಕೂಡ ತಾವು ಇಂಗ್ಲಿಷ್ ಭಾಷೆಯನ್ನು ಎಷ್ಟು ದಿವಸಗಳವರೆಗೆ ಅಭ್ಯಾಸ ಮಾಡಿದರೂ ಈ ಭಾಷೆಯ ಮರ್ಮವೂ, ಸಾಂಪ್ರಾದಾಯಗಳೂ ತಮಗೆ ಅವಗತವಾಗಿಲ್ಲವೆಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಿರುವರು. ಕೆಲವರು ಇಂಗ್ಲಿಷ್ ಭಾಷೆಯನ್ನು ಬಾಲಕರ ಶಿಕ್ಷಣ ಕ್ರಮದಲ್ಲಿ ದೇಶಭಾಷೆಗಳ ಮುಖಾಂತರ ಕಲಿಸಬೇಕೆಂದು ಖಂಡಿತವಾಗಿ ಹೇಳತೊಡಗಿದ್ದಾರೆ. ಬೇರೆ ಕೆಲವರು ದೇಶೋನ್ನತಿಗೆ ತಮ್ಮ ಮಾತೃಭಾಷೆಯ ಉನ್ನತಿಯೇ ಕಾರಣವೆಂದು ಪೂರ್ಣವಾಗಿ ನಂಬಿದ್ದಾರೆ. ಇದರಿಂದ ದೇಶಭಾಷೆಗಳ ಪುನರುಜ್ಜೀವನದ ಕಾಲವು ಸಮಿಪದಲ್ಲಿದೆಯೆಂದು ನಂಬಬೇಕಾಗುವದು.

ಯಾವದೊಂದು ದೇಶವು ಉನ್ನತಾವಸ್ಥೆಗೆ ಬರುವದಕ್ಕೆ ಆ ದೇಶದ ಭಾಷೆಯು ಉನ್ನತಿಯಾಗುವಂತೆ ಮಾಡಿ ಆ ಭಾಷೆಯ ದ್ವಾರದಿಂದ ಕಲಾಕೌಶಲ್ಯ, ವ್ಯಾಪಾರ ಉದ್ಯೋಗಗಳಿಗೆ

ಅವಶ್ಯವಾದ ವಿಷಯಗಳ ಜ್ಞಾನವನ್ನು ಎಲ್ಲಾ ಜನರಿಗೆ ಮಾಡಿಕೊಡಬೇಕೆಂಬ ಸಂಗತಿಯು ಸರ್ವಸಮ್ಮತವಾಗಿರುವದು. ಈ ಇಪ್ಪತ್ತನೆಯ ಶತಮಾನದಲ್ಲಿ ಎಲ್ಲ ಸುಧಾರಿಸಿದ ರಾಷ್ಟ್ರಗಳ ಜನರು ಐಹಿಕ ಸುಖಸಾಧನಗಳಿಗೆ ಅತ್ಯವಶ್ಯವಾದ ಶಾಸ್ತ್ರೀಯ ಜ್ಞಾನಕ್ಕೆ ಕೇವಲ ಭಾಷಾ ವಿಷಯಕ್ಕೆ ಸಂಬಂಧಪಟ್ಟ ಜ್ಞಾನಕ್ಕಿಂತ ಹೆಚ್ಚು ಮಹತ್ವವನ್ನು ಕೊಟ್ಟಿರುವವರು. ಶಾಸ್ತ್ರೀಯ ಜ್ಞಾನದ ಪ್ರಸಾರವು ಹೆಚ್ಚಾಗಿ ಆದ ರಾಷ್ಟ್ರಗಳೆಲ್ಲ ಸದ್ಯಕ್ಕೆ ತಮ್ಮಲ್ಲುಂಟಾದ ಕಲಾಕೌಶಲ್ಯದ ಅಭಿವೃದ್ಧಿಯಿಂದ ಸಂಪತ್ತುಗಳಾಗಿರುವವರಿಂದ ಅವು ಬಲಾಢ್ಯ ರಾಷ್ಟ್ರಗಳಲ್ಲಿ ಎಣಿಸಲ್ಪಡಹತ್ತಿವೆ. ಈ ಶಾಸ್ತ್ರೀಯ ಜ್ಞಾನವು ಪ್ರಸಾರವಾಗದಿರುವ ದೇಶಗಳು ಪರಾವಲಂಬಿಗಳಾಗಿರುವವು. ಅಲ್ಲಿಯ ಜನರ ಸೃಷ್ಟಿಯು ತಮ್ಮ ಹಿತಕ್ಕೋಸ್ಕರ ಒದಗಿಸಿಕೊಟ್ಟ ಪದಾರ್ಥಗಳ ಉಪಯೋಗವನ್ನು ಅರಿಯದೆ, ಮೂಢತನದಿಂದ ಅವುಗಳನ್ನು ಪರದೇಶದವರಿಗೆ ಸ್ವಲ್ಪ ಬೆಲೆಗೆ ಮಾರಿ, ಅವರನ್ನು ಧನವಂತರನ್ನಾಗಿ ಮಾಡುತ್ತಾ ತಾವು ಹೀನದೆಶೆಯಲ್ಲಿಯೇ ಉಳಿದಿರುವರು; ಇಲ್ಲವೆ ಪರದೇಶದವರ ಆಳಾಗಿ ದುಡಿಯುತ್ತಿರುವರು.

ನಮ್ಮ ದೇಶದಲ್ಲಿ ಶಾಸ್ತ್ರೀಯ ಜ್ಞಾನವು ಹಬ್ಬಬೇಕೆಂದು ಇಂಗ್ಲಿಷ್ ಸರಕಾರದವರು ಕೈಲಾದ ಮಟ್ಟಿಗೆ ಪ್ರಯತ್ನಿಸುತ್ತಿರುವುದು ನಿಜವು. ಆದರೆ ಆ ಜ್ಞಾನದ ಪ್ರಸಾರವು ಇಂಗ್ಲಿಷ್ ಭಾಷೆಯ ಮುಖಾಂತರ ಆಗುವಂತೆ ಸದ್ಯಕ್ಕೆ ಏರ್ಪಾಡು ಇರುವುದರಿಂದ ಅದರ ಗತಿಯು ಕುಂಠಿತವಾಗಿರುವುದು ಮತ್ತು ಅನೇಕರಿಗೆ ಆ ಜ್ಞಾನದ ಅರ್ಜನೆಯು ದುಃಸಾಧ್ಯವೂ ಆಗಿರುವುದು. ಶಾಸ್ತ್ರೀಯ ವಿಷಯಗಳ ನಿಜವಾದ ಜ್ಞಾನವು ನಮ್ಮ ಜನರಲ್ಲಿ ನೆಲೆಗೊಳ್ಳಬೇಕಾದರೆ ಅದು ಪ್ರಾಥಮಿಕ ಶಿಕ್ಷಣದ ಒಂದು ಅಂಗವಾಗಲಿಕ್ಕೆ ಬೇಕು. ಮತ್ತು ಅದರ ಉಪಯುಕ್ತವಾದ ಭಾಗಗಳನ್ನು ಪ್ರಯೋಗಗಳ ಸಹಾಯದಿಂದ ಕಲಿಸಲಿಕ್ಕೆ ಅನುಕೂಲವಾಗುವಂಥ ಉದ್ಗ್ರಂಥಗಳು ದೇಶ ಭಾಷೆಯಲ್ಲಿ ಬರೆಯಲ್ಪಡಬೇಕು. ಸದ್ಯಕ್ಕೆ ನಮಗೆ ಉಪಲಬ್ಧವಾದ ಗ್ರಂಥಗಳೆಲ್ಲ ಇಂಗ್ಲಿಷ್ ಭಾಷೆಯಲ್ಲಿರುವದರಿಂದ ಆ ಭಾಷೆಯನ್ನರಿತಂಥ ಪಂಡಿತ ಜನರಿಂದ ಬೇರೆ ಬೇರೆ ಶಾಸ್ತ್ರೀಯ ವಿಷಯಗಳ ಮೇಲೆ ಬೇರೆ ಬೇರೆ ಗ್ರಂಥಗಳನ್ನು ದೇಶಭಾಷೆಯಲ್ಲಿ ಬರೆಯಿಸಬೇಕಾಗುವದು. ಇದು ಶ್ರಮಸಾಧ್ಯವಿರುವದು. ದೇಶಭಾಷೆಗಳಲ್ಲಿ ಸಾಕಷ್ಟು ಪಾರಿಭಾಷಿಕ ಶಬ್ದಗಳು ಇಲ್ಲದಿರುವದರಿಂದ ಆ ಗ್ರಂಥಗಳನ್ನು ಬರೆಯುವದಕ್ಕೆ ಮೊದಲು ಒಂದೊಂದು ವಿಷಯದಲ್ಲಿ ಬರತಕ್ಕ ಪಾರಿಭಾಷಿಕ ಶಬ್ದಗಳ ಕೋಶವನ್ನು ದೇಶಭಾಷೆಯಲ್ಲಿ ಸಿದ್ಧಪಡಿಸಿ ಗ್ರಂಥಕರ್ತರು ಆ ಶಬ್ದಗಳನ್ನೇ ತಮ್ಮ ಗ್ರಂಥಗಳಲ್ಲಿ ಉಪಯೋಗಿಸಬೇಕೆಂಬ ನಿರ್ಬಂಧವನ್ನು ಮಾಡಿಕೊಡಬೇಕು. ಹೀಗೆ ಮಾಡದಿದ್ದರೆ ಒಬ್ಬೊಬ್ಬರು ತಮ್ಮ ಮನಬಂದಂತೆ ಒಂದೊಂದು ವಿಧವಾದ ಪಾರಿಭಾಷಿಕ ಶಬ್ದಗಳನ್ನು ರಚಿಸಿಕೊಂಡು ಅವುಗಳನ್ನು ತಮ್ಮ ಗ್ರಂಥಗಳಲ್ಲಿ ಉಪಯೋಗಿಸುತ್ತ ಹೋದರೆ ಇತರರಿಗೆ ಅವರ ಗ್ರಂಥಗಳು ದುರ್ಬೋಧವಾಗುವುವು ಸ್ವಾಭಾವಿಕವು. ಆದ್ದರಿಂದ ಈ ತರದ ಕೆಲಸವನ್ನು ಯಾವದೊಂದು ಸಂಘದವರು ಮಾಡಬೇಕಾಗುವದು. ಈ ತರದ ಕೋಶವನ್ನು ಸಿದ್ಧಪಡಿಸುವ ಕೆಲಸವನ್ನು ಉತ್ತರ ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ವಿದ್ವಾಂಸರು ಈ ಮೊದಲು ಮಾಡಿರುವರು. ಅವರು ಮಾಡಿದ ಪ್ರಯತ್ನಕ್ಕೆ ಎಷ್ಟು ಮಟ್ಟಿಗೆ ಯಶಸ್ಸು ಬಂದಿರುವದೆಂಬುದನ್ನು ಸ್ವಲ್ಪದಲ್ಲಿ ಹೇಳುವೆನು.

ಪ್ರೊಫೆಸರ್ ಟಿ.ಕೆ. ಗಜ್ಜರವರು ಬಡೋದೆಯಲ್ಲಿಯ "ಕಲಾ ಭವನ"ವೆಂಬ ಔದ್ಯೋಗಿಕ ಶಾಲೆಯ ಮುಖ್ಯ ಚಾಲಕರಿರುವಾಗ ಶ್ರೀಮಾನ್ ಮಹಾರಾಜರಾದ ಸಯಾಜಿರಾವ ಗಾಯಕವಾಡ ಪ್ರಭುಗಳು ಉಪಯುಕ್ತವಾದ ಶಾಸ್ತ್ರಗಳ ಮೇಲೆ ಮರಾಠಿ ಭಾಷೆಯಲ್ಲಿಯೂ, ಗುಜರಾಥಿ ಭಾಷೆಯಲ್ಲಿಯೂ, ಗ್ರಂಥಗಳನ್ನು ಬರಿಸಿ ಪ್ರಸಿದ್ಧ ಪಡಿಸುವದಕ್ಕಾಗಿ ಸನ್ ೧೮೮೮ನೆಯ ಇಸವಿಯಲ್ಲಿ ೫೦,೦೦೦ ರೂಪಾಯಿ ಮಂಜೂರು ಮಾಡಿ ಆ ಕೆಲಸವನ್ನು ಪ್ರೊ. ಗಜ್ಜರವರಿಗೆ ಒಪ್ಪಿಸಿದರು. ಪ್ರೊ. ಗಜ್ಜರವರು ಒಂದು ವರ್ಷದ ಅವಧಿಯಲ್ಲಿ ೫ ಪುಸ್ತಕಗಳನ್ನು ಬರೆಸಿ ಪ್ರಸಿದ್ಧಿ ಪಡಿಸಿದರು. ಸನ್ ೧೮೯೧-೯೨ನೆಯ ವರ್ಷದ ಕಲಾಭವನ ರಪೋರ್ಟಿನಲ್ಲಿ ಪ್ರೊ. ಗಜ್ಜರವರು ಬರೆದದ್ದೇನಂದರೆ-"ಈ ವರ್ಷದಲ್ಲಿ ಇಷ್ಟು ಸ್ವಲ್ಪ ಪುಸ್ತಕಗಳನ್ನು ಮಾತ್ರ ಬರೆಸಿರುವದಕ್ಕೆ ಮುಖ್ಯ ಕಾರಣವು, ದೇಶಭಾಷೆಯಲ್ಲಿ ತಕ್ಕ ಪಾರಿಭಾಷಿಕ ಶಬ್ದಗಳು ಇಲ್ಲದಿರುವುದೇ. ಪಾರಿಭಾಷಿಕ ಶಬ್ದಗಳನ್ನು ರಚಿಸಿಕೊಳ್ಳುವದು ಸುಲಭವೆಂದು ನನಗೆ ಕಂಡು ಬಂದಿದ್ದರೂ, ಆ ಕೆಲಸವು ಕಷ್ಟ ಸಾಧ್ಯವಾದದ್ದೆಂಬುದು ಪ್ರತ್ಯಕ್ಷ ಅನುಭವದಿಂದ ಕಂಡು ಬಂದಿರುವದು. ಪಾರಿಭಾಷಿಕ ಶಬ್ದಗಳನ್ನು ರಚಿಸಿಕೊಳ್ಳುವುದರಲ್ಲಿ ಬರುವ ತೊಂದರೆಗಳನ್ನು ವಿಚಾರಪೂರ್ವಕವಾಗಿ ದೂರ ಮಾಡಬೇಕಾಗುವದು. ಸದ್ಯಕ್ಕೆ ನಮಗೆ ಉಪಲಬ್ಧವಾಗಿರುವ ಕೋಶಗಳಿಂದ ಎಷ್ಟು ಮಾತ್ರವೂ ಸಹಾಯವಾಗುವಂತಿಲ್ಲ. ಪಾರಿಭಾಷಿಕ ಶಬ್ದಗಳ ಕೋಶವನ್ನು ಸಿದ್ಧಪಡಿಸುವದಕ್ಕೆ ತಕ್ಕಷ್ಟು ಕಾಲಾವಧಿಯು ಬೇಕು. ಯುರೋಪೀಯ ಭಾಷೆಗಳಲ್ಲಿ ರೂಢವಾಗಿರುವ ಎಷ್ಟೋ ವಿಚಾರಗಳಿಗೆ ಸಮಾನವಾದ ವಿಚಾರಗಳು ನಮ್ಮಲ್ಲಿಲ್ಲದ್ದರಿಂದ ಆ ತರದ ವಿಚಾರಗಳನ್ನು ನಮ್ಮ ಭಾಷೆಯಲ್ಲಿ ಸಮಾವೇಶಮಾಡಿಕೊಳ್ಳಬೇಕಾದರೆ ಅವಕ್ಕೆ ಅನುಗುಣವಾದ ಹೊಸ ಹೊಸ ಶಬ್ದಗಳನ್ನು ತಜ್ಞರ ಸಹಾಯದಿಂದ ರಚಿಸಿ ಕೊಳ್ಳಬೇಕಾಗುವದು." ಇತ್ಯಾದಿ.

ಮುಂದೆ ಕೆಲವು ದಿವಸಗಳ ತರುವಾಯ ಪ್ರೊ. ಗಜ್ಜರರವರು ಕೆಲವು ಆಗಂತುಕ ಕಾರಣಗಳಿಂದ ಕಲಾಭವನಕ್ಕೆ ತಮಗಿದ್ದ ಸಂಬಂಧವನ್ನು ಬಿಡಬೇಕಾಯಿತು. ಅಂದಿನಿಂದ ಮರಾಠಿ, ಗುಜರಾಥಿ ಭಾಷೆಗಳಲ್ಲಿ ಪಾರಿಭಾಷಿಕ ಶಬ್ದಗಳನ್ನು ರಚಿಸುವ ಕೆಲಸವು ನಿಂತು ಹೋಯಿತು.

ದೇಶಭಾಷೆಯಲ್ಲಿ ಶಾಸ್ತ್ರೀಯ ವಿಷಯಗಳ ಮೇಲೆ ಗ್ರಂಥಗಳನ್ನು ಬರೆಸುವ ಕೆಲಸವನ್ನು ಕಲಕತ್ತೆಯಲ್ಲಿ ಸ್ಥಾಪಿತವಾದ 'ವಂಗ ಸಾಹಿತ್ಯ ಪರಿಷದ್' ಎಂಬ ಸಂಘದವರು ಪ್ರಾರಂಭಿಸಿದರು. ಇವರು ರಸಾಯನ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಮತ್ತು ಭೂಗೋಲ ಶಾಸ್ತ್ರ ಇವುಗಳನ್ನು ಬರೆಯುವುದಕ್ಕೆ ಅವಶ್ಯವಾದ ಪಾರಿಭಾಷಿಕ ಶಬ್ದಗಳನ್ನು ಗೊತ್ತುಪಡಿಸಿ ಅವುಗಳ ಕೋಶವನ್ನು ಮಾಡಿಕೊಂಡರು. ಇಷ್ಟರಲ್ಲಿಯೇ ಆ ಸಂಘದ ಸಭಾಸದರಲ್ಲಿ ಅಂತಃಕಲಹವು ಪ್ರಾರಂಭವಾಯಿತು. ಅವರಲ್ಲಿಯೇ ಕೆಲವರು ಬೇರೆಯಾಗಿ "ವಂಗಸಾಹಿತ್ಯಸಭಾ' ಎಂಬ ಬೇರೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯಿಂದ ಹೇಳಿಕೊಳ್ಳುವಂಥ ಯಾವ ಬಗೆಯ ಉಪಯುಕ್ತ ಕೆಲಸವೂ ಆಗಲಿಲ್ಲ.

ದೇಶಭಾಷೆಯಲ್ಲಿ ಪಾರಿಭಾಷಿಕ ಶಬ್ದಗಳನ್ನು ರಚಿಸುವ ಉದ್ದೇಶದಿಂದ ಮನಮುಟ್ಟಿ ಕೆಲಸಮಾಡಿದವರೆಂದರೆ - ಬನಾರಸದಲ್ಲಿ ಸ್ಥಾಪಿಸಲ್ಪಟ್ಟ "ನಾಗರೀ ಪ್ರಚಾರಿಣೀ" ಸಭೆಯವರು.

ಈ ಸಭೆಯು ಸನ್ ೧೮೯೩ರಲ್ಲಿ ಸ್ಥಾಪಿಸಲ್ಪಟ್ಟಿತ್ತು. ಸನ್ ೧೮೯೮ರಲ್ಲಿ ಈ ಸಭೆಯವರು ಒಂದು ಸಬ್ ಕಮಿಟಿಯನ್ನು ನಿಯಮಿಸಿ ಆ ಕಮಿಟಿಗೆ ರಸಾಯನಶಾಸ್ತ್ರ, ಭೂಗೋಲಶಾಸ್ತ್ರ, ಗ್ಣಣಿತಶಾಸ್ತ್ರ, ಪದಾರ್ಥ ವಿಜ್ಞಾನಶಾಸ್ತ್ರ, ಅರ್ಥಶಾಸ್ತ್ರ, ಜೋತಿಷ್ಯಶಾಸ್ತ್ರ, ಇವುಗಳನ್ನು ಬರೆಯುವುದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳನ್ನು "ವೆಬ್‌ಸ್ಟರ್ ಇಂಟರ್ ನ್ಯಾಷನಲ್ ಡಿಕ್ಷನರಿ"ಯಿಂದ ಆರಿಸಿ ತೆಗೆಯುವ ಕೆಲಸವನ್ನು ಒಪ್ಪಿಸಿಕೊಟ್ಟರು. ಆ ಕೆಲಸವು ಪೂರ್ಣವಾದ ಬಳಿಕ ಒಂದೊಂದು ಶಾಸ್ತ್ರಕ್ಕೆ ಸಂಬಂಧಪಟ್ಟ ಶಬ್ದಗಳ ಪಟ್ಟಿಯನ್ನು ಆಯಾ ಪಂಡಿತರ ಕಡೆಗೆ ಕಳುಹಿಸಿ ಹಿಂದಿ ಭಾಷೆಯಲ್ಲಿ ಅವುಗಳಿಗೆ ಪ್ರತಿಶಬ್ದಗಳನ್ನು ಬರೆಯಿಸುವ ವ್ಯವಸ್ಥೆ ಮಾಡಿದರು. ಈ ಪ್ರಯತ್ನದಿಂದ "ಹಿಂದಿ ವೈಜ್ಞಾನಿಕ ಕೋಶ" ಎಂಬುದು ಸಿದ್ಧವಾಗಿರುವದು. ಈ ಕೋಶದಲ್ಲಿ ೧೦೦ಕ್ಕೆ ೯೦ ಶಬ್ದಗಳು ಸಂಸ್ಕೃತ ಭಾಷೆಯು ಸಹಾಯದಿಂದ ರಚಿಸಿಕೊಂಡಂಥವೇ ಇರುವವು. ಈ ಕೆಲಸಕ್ಕಾಗಿ ನಾಗರೀ ಪ್ರಚಾರಿಣೀ ಸಭೆಯವರು ಕರ್ನಾಟಕ ಪ್ರಾಂತದೊಳಗಿನ ಶಾಸ್ತ್ರಜ್ಞರ ಸಹಾಯವನ್ನು ಬೇಡದಿದ್ದ ಸಂಗತಿಯು ಸಖೇದಾಶ್ಚರ್ಯಕರವಾಗಿರುವದು.

ಸದ್ಯಕ್ಕೆ ಕನ್ನಡ ಭಾಷೆಯಲ್ಲಿ ಜ್ಯೋತಿಷ್ಯ ಶಾಸ್ತ್ರ , ರಸಾಯನ ಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರ, ಗಣಿತ ಶಾಸ್ತ್ರ , ಪ್ರಾಣಿ ಶಾಸ್ತ್ರ, ಶಾರೀರಧರ್ಮ ಶಾಸ್ತ್ರ, ಭೂಗರ್ಭ ಶಾಸ್ತ್ರ, ವನಸ್ಪತಿಶಾಸ್ತ್ರ, ಭೂಗೋಲ ಶಾಸ್ತ್ರ, ಅರ್ಥ ಶಾಸ್ತ್ರ ಇವೇ ಮೊದಲಾದ ಶಾಸ್ತ್ರಗಳ ವಿಷಯವಾಗಿ ಗ್ರಂಥಗಳಾಗುವದು ಅವಶ್ಯವಿರುವುದು. ಇವುಗಳಲ್ಲಿ ಜ್ಯೋತಿಷ್ಯ ಶಾಸ್ತ್ರ, ಗಣಿತ ಶಾಸ್ತ್ರ, ಭೂಗೋಲ ಶಾಸ್ತ್ರ, ವನಸ್ಪತಿಶಾಸ್ತ್ರ, ಅರ್ಥಶಾಸ್ತ್ರ, ಇವುಗಳ ವಿಷಯವಾಗಿ ಗ್ರಂಥಗಳನ್ನು ಬರೆಯುವುದಕ್ಕೆ ಬೇಕಾಗುವ ಪಾರಿಭಾಷಿಕ ಶಬ್ದಗಳು ಕನ್ನಡ ಮತ್ತು ಸಂಸ್ಕೃತ, ಈ ಭಾಷೆಗಳಲ್ಲಿ ದೊರೆಯುವುವದು. ರಸಾಯನ ಶಾಸ್ತ್ರವು ಕೇವಲಯುರೋಪೀಯ ಶಾಸ್ತ್ರವಿರುವದರಿಂದ ಅದರ ಪಾರಿಭಾಷಿಕ ಶಬ್ದಗಳನ್ನು ಇಂಗ್ಲಿಷ್ ಭಾಷೆಯಿಂದಲೇ ಆರಿಸಿಕೊಳ್ಳಬೇಕಾಗುವದು. ರಸಾಯನಿಕ ಪದಾರ್ಥಗಳೂ ಅಸಂಖ್ಯವಾಗಿರುವದರಿಂದ ಪ್ರತಿಯೊಂದಕ್ಕೆ ಪಾರಿಭಾಷಿಕ ಶಬ್ದವನ್ನು ರಚಿಸಿಕೊಳ್ಳುವದು ಆಗುವದಿಲ್ಲ. ಒಂದುವೇಳೆ ಶ್ರಮಪಟ್ಟು ಅಂಥ ಶಬ್ದಗಳನ್ನು ರಚಿಸಿಕೊಂಡರೂ ವ್ಯವಹಾರದಲ್ಲಿ ಅವುಗಳ ಉಪಯೋಗವೇನೂ ಆಗದೆ ಗ್ರಂಥವೂ ಮಾತ್ರ ದುರ್ಬೋಧವಾಗುವದು.

ಪದಾರ್ಥವಿಜ್ಞಾನ ಶಾಸ್ತ್ರವನ್ನು ಬರೆಯುವದಕ್ಕೆ ಬೇಕಾಗುವ ಶಬ್ದಗಳಲ್ಲಿ ಮುಕ್ಕಾಲು ಪಾಲು ಶಬ್ದಗಳು ಕನ್ನಡ ಭಾಷೆಯಲ್ಲಿ ದೊರೆಯುವವು. ಉಳಿದವುಗಳನ್ನು ಇಂಗ್ಲಿಷ್ ಭಾಷೆಯಿಂದ ಇದ್ದ ರೂಪದಲ್ಲಿಯೇ ತೆಗೆದುಕೊಳ್ಳಬೇಕಾಗುವದು.

ಶಾರೀರಧರ್ಮ ಶಾಸ್ತ್ರ — ಈ ಶಾಸ್ತ್ರದಲ್ಲಿ ಬರೆಯುವದಕ್ಕೆ ಬೇಕಾಗುವ ಶಬ್ದಗಳಲ್ಲಿ ಮುಕ್ಕಾಲು ಪಾಲು ಶಬ್ದಗಳು ಕನ್ನಡ ಭಾಷೆಯಲ್ಲಿ ದೊರೆಯುವವು. ಉಳಿದವುಗಳನ್ನು ಇಂಗ್ಲಿಷ್ ಭಾಷೆಯಿಂದ ಇದ್ದ ರೂಪದಲ್ಲಿಯೇ ತೆಗೆದುಕೊಳ್ಳಬೇಕಾಗುವದು.

ಪ್ರಾಣಿಶಾಸ್ತ್ರ ಮತ್ತು ಭೂಗರ್ಭಶಾಸ್ತ್ರ — ಇವುಗಳನ್ನು ಇಂಗ್ಲಿಷ್ ಮಾದರಿಯಂತೆ ರಚಿಸಿಕೊಳ್ಳಬೇಕು. ಸಾಧ್ಯವಿದ್ದ ಮಟ್ಟಿಗೆ ಕನ್ನಡ ಶಬ್ದಗಳನ್ನು ಉಪಯೋಗಿಸಿ ಉಳಿದವುಗಳನ್ನು ಇಂಗ್ಲಿಷ್ ಭಾಷೆಯಿಂದ ಆರಿಸಿಕೊಳ್ಳಬೇಕು.

ಮೇಲೆ ಹೇಳಿದ ಶಾಸ್ತ್ರೀಯ ಗ್ರಂಥಗಳನ್ನು ಬರೆಸುವದಕ್ಕೆ ಮುಂಚೆ ಆಯಾ ಗ್ರಂಥಗಳಲ್ಲಿ ಬರಬಹುದಾದ ಪಾರಿಭಾಷಿಕ ಶಬ್ದಗಳ ಕೋಶವನ್ನು ಕನ್ನಡದಲ್ಲಿ ಸಿದ್ಧಪಡಿಸಿ ಪ್ರಸಿದ್ಧಿ ಪಡಿಸಬೇಕು. ಇದಕ್ಕೋಸ್ಕರ ನಾಗರೀ ಪ್ರಚಾರಿಣೀ ಸಭೆಯವರು ಮಾಡಿದಂತೆ ಮೊದಲು ಇಂಗ್ಲಿಷ್ ಕೋಶಗಳ ಸಹಾಯದಿಂದ ಒಂದು ಕೋಶವನ್ನು ಸಿದ್ಧ ಪಡಿಸಿ ಅದರಲ್ಲಿರುವ ಶಬ್ದಗಳನ್ನು ಬೇರೆ ಬೇರೆ ವಿಭಾಗಗಳಾಗಿ ವಿವರಿಸಿ ಒಂದೊಂದು ಭಾಗವನ್ನು ಒಂದೊಂದು ಶಾಸ್ತ್ರವನ್ನು ಬಲ್ಲವರ ಕಡೆಗೆ ಕಳುಹಿಸಿ ಅವುಗಳ ಬದಲು ದೇಶಭಾಷೆಯ ಪಾರಿಬಾಷಿಕ ಶಬ್ದಗಳನ್ನು ಅವರಿಗೆ ರಚಿಸಲಿಕ್ಕೆ ಹೇಳಬೇಕು. ಹೀಗೆ ಆರಿಸಿಕೊಂಡ ಜನರಲ್ಲಿ ಕೆಲವರು ಧಾರಾವಾಡ ಕರ್ಣಾಟಕದವರೂ, ಕೆಲವರು ಮೈಸೂರಿನವರೂ, ಉಳಿದವರು ಮಂಗಳೂರಿನವರೂ ಇರುವದು ಅವಶ್ಯವು. ಈ ವ್ಯವಸ್ಥೆಯಿಂದ ಗ್ರಂಥಕರ್ತರು ಉಪಯೋಗಿಸುವ ಪಾರಿಭಾಷಿಕ ಶಬ್ದಗಳು ಕನ್ನಡ ಭಾಷೆಯನ್ನಾಡುವ ಎಲ್ಲ ಜನರಿಗೂ ಒಂದೇ ರೂಪದಲ್ಲಿ ಓದುವದಕ್ಕೆ ಅನುಕೂಲವಾಗಿ ಬೇರೆ ಬೇರೆ ಭಾಗಗಳಲ್ಲಿರುವ ಕನ್ನಡ ಭಾಷೆಗೆ ಏಕರೂಪತೆಯು ಬರುವದಕ್ಕು ಅನುಕೂಲವಾದಂತಾಗುವದು.

ಧಾರ್ವಾಡ ಕರ್ಣಾಟಕದ ವತಿಯಿಂದ ಪಾರಿಭಾಷಿಕ ಶಬ್ದಗಳನ್ನು ರಚಿಸುವ ಕೆಲಸವನ್ನು ಧಾರವಾಡ ವಿದ್ಯಾವರ್ಧಕ ಸಂಘಕ್ಕೆ ಒಪ್ಪಿಸಬಹುದು. ಇದೇ ಕೆಲಸಕ್ಕಾಗಿ ಬೆಂಗಳೂರಲ್ಲಾಗಲಿ, ಮೈಸೂರಿನಲ್ಲಾಗಲಿ ಒಂದು ಸಂಘವನ್ನೂ, ಮಂಗಳೂರಲ್ಲಿ ಒಂದು ಸಂಘವನ್ನು ಸ್ಥಾಪಿಸುವ ವ್ಯವಸ್ಥೆಯಾಗಬೇಕು. ಈ ಕೆಲಸಕ್ಕೆ ಇಂದಿನಿಂದ ಆರಂಭವಾದರೆ ಅದು ಫಲದ್ರೂಪವಾಗಲಿಕ್ಕೆ ೫-೬ ವರ್ಷಗಳು ಬೇಕಾಗುವವು.

ತಾವು ಸದ್ಯಕ್ಕೆ ಮಾಡುತ್ತಿರುವ ಪ್ರಯತ್ನದಿಂದ ಕನ್ನಡ ಭಾಷೆಯ ಅಭಿವೃದ್ಧಿಯು ಆಗುವದಲ್ಲದೆ ಭಾವಿ ಪ್ರಜೆಗಳ ಕಲ್ಯಾಣದ ಕೆಲಸದಲ್ಲಿ ಇದರ ಉಪಯುಕ್ತತೆಯು ಹೆಚ್ಚಾಗುವದೆಂದು ನಾನು ತುಂಬ ನಂಬಿರುವೆನು.

ಮಹನೀಯರೇ, ನನ್ನ ಅಲ್ಪ ಮತಿಗೆ ತೋರಿದ ಕೆಲವು ವಿಷಯಗಳನ್ನು ತಮ್ಮೆದುರಿಗೆ ಇಟ್ಟಿರುವೆನು. ಅವುಗಳಲ್ಲಿ ಗ್ರಾಹ್ಯಾಂಶವೇನಾದರೂ ಇದ್ದ ಪಕ್ಷದಲ್ಲಿ ಅದನ್ನು ಹಂಸಕ್ಷೀರನ್ಯಾಯದಿಂದ ಸ್ವೀಕರಿಸೋಣವಾಗಬೇಕೆಂದು ತಮ್ಮೆಲ್ಲರನ್ನು ಪ್ರಾರ್ಥಿಸಿ ಈ ವಿಷಯವನ್ನು ಮುಗಿಸುತ್ತೇನೆ.

ತಮ್ಮ ವಿಧೇಯ
ಆರ್.ಎಂ. ಮಹಿಷಿ

VI. ಕನ್ನಡ ಪತ್ರಿಕಾ ಪದಕೋಶದ ಕತೆ

ಕನ್ನಡದಲ್ಲಿ ಮೊದಲ ವಾರ್ತಾ ಪತ್ರಿಕೆಯೊಂದು ಪ್ರಕಟವಾಗಿ ಸುಮಾರು ನೂರರುವತ್ತು ವರ್ಷಗಳಾಗಿವೆ. ಹರ್ಮನ್ ಫ್ರೆಡರಿಕ್ ಮೋಗ್ಲಿಂಗ್ ಎಂಬ ಬಾಸೆಲ್ ಮಿಷನ್ ಪಾದ್ರಿಯು ಕ್ರಿ.ಶ. ೧೮೩೩ರಲ್ಲಿ ಪ್ರಕಟಿಸಿದ 'ಮಂಗಳೂರು ಸಮಾಚಾರ' ಎಂಬುದೇ ಕನ್ನಡದ ಮೊದಲ ಪತ್ರಿಕೆ. ಇದು ಹದಿನೈದು ದಿನಗಳಿಗೊಮ್ಮೆ ಪ್ರಕಟವಾಗುತ್ತಿತ್ತು. ಇದರಲ್ಲಿ ಊರಿನ ವರ್ತಮಾನಗಳಿಗೂ ಸ್ವಲ್ಪ ಸ್ಥಳಾವಕಾಶವಿತ್ತು. ಇದನ್ನು ಗಮನಿಸಿದರೆ ಪ್ರಜೆಗಳ ದೃಷ್ಟಿಗೂ ಅವರ ಅಭಿಪ್ರಾಯಕ್ಕೂ ಪ್ರಾಧಾನ್ಯ ಕೊಡಬೇಕೆಂಬ ಉದ್ದೇಶವು ಮೋಗ್ಲಿಂಗ್ ಪ್ರಾದಿಗೂ ಪ್ರಧಾನವಾಗಿ ಕಂಡುಬಂದಿತ್ತೆಂಬುದು ಸ್ಪಷ್ಟ. ಅಂದಿನಿಂದ ಇಂದಿನವರೆಗೆ ಪತ್ರಿಕಾ ವ್ಯವಸಾಯವು ಬೆಳೆದು ಬಂದಿರುವುದನ್ನು ಪರಿಶೀಲಿಸಿದರೆ, ಪತ್ರಿಕಾ ವೃತ್ತಿಗೆ ಕ್ರಮೇಣ ಗೌರವವು ಬೆಳೆದಿರುವುದೂ ಜತೆಗೆ ಬಾಧ್ಯತೆಯು ಹೆಚ್ಚಿರುವುದೂ ಎದ್ದು ಕಾಣುತ್ತದೆ. ನಮಗೆಲ್ಲ ತಿಳಿದಿರುವಂತೆ ವೃತ್ತಪತ್ರಿಕೆಗಳ ಮುಖ್ಯ ಉದ್ದೇಶವೇ ದೇಶದ ಜನ ಜೀವನವನ್ನು ಹಸನುಗೊಳಿಸುವುದು. ಲೌಕಿಕ ಜೀವನವು ಹಸನಾಗಬೇಕಾದರೆ ಜನತೆಯಲ್ಲಿ ತಿಳಿವು ಹೆಚ್ಚಬೇಕು, ಅವರಿಗೆ ಸುತ್ತ ಮುತ್ತಣ ಪ್ರದೇಶಗಳಲ್ಲಿಯೂ ದೇಶ ವಿದೇಶಗಳಲ್ಲಿಯೂ ನಡೆಯುತ್ತಿರುವ ವ್ಯವಹಾರಗಳೂ ನೆಲಸಿರುವ ವಿದ್ಯಮಾನಗಳೂ ಪರಿಚಯವಾಗುತ್ತಿರಬೇಕು. ನಮ್ಮದೇ ಆದ ಸರಕಾರವು ನಮ್ಮ ಯೋಗಕ್ಷೇಮಗಳ ನಿರ್ವಹಣೆಯಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸುತ್ತಿದೆಯೋ ಇಲ್ಲವೋ ಎಂಬ ವಿವೇಕದ ಅರಿವು ಹರಡಬೇಕು. ಪ್ರಪಂಚವನ್ನೇ ವಿಶಾಲವಾಗಿಸುವ ತಿಳಿವಳಿಕೆಯ ಕ್ಷೇತ್ರವು ಕೂಡ ವಿಸ್ತಾರವಾಗುತ್ತಾ ಹೋಗಬೇಕು. ಇವು ಎಲ್ಲವೂ ಸಾಧ್ಯವಾಗುವಂತೆ ಮಾಡುವ ಬಾಧ್ಯತೆಯನ್ನು ಹೊರುವುದು ಪತ್ರಿಕೆಗಳ ಕರ್ತವ್ಯ. ಸಂಗ್ರಹವಾಗಿ ಸೂಚಿಸಿರುವ ಈ ವಿಷಯವು ಚಿಂತಿಸುತ್ತಾ ಹೋದಷ್ಟು ವ್ಯಾಪಕವಾಗುತ್ತದೆ.

ಈ ಉದ್ದೇಶವನ್ನು ಸಾಧಿಸುವುದರಲ್ಲಿ ಕನ್ನಡ ಪತ್ರಿಕಾ ಪ್ರಪಂಚವು ಹೆಣಗಾಡಿ ಯಶಸ್ಸನ್ನು ಸಾಧಿಸಿದೆ ಎನ್ನುವುದು, ಈಗಿನ ನಮಗೆ, ಸಮಾಧಾನ ತರುವ ವಿಷಯವಾಗಿದೆ. ನಮ್ಮ ಹಿಂದಿನ ಪತ್ರಕರ್ತರ ಕಾರ್ಯ ಕನ್ನಡ ಜನರ ಹೆಮ್ಮೆಗೆ ಸಮರ್ಥಕವಾಗಿದೆ. ಇನ್ನೂ ಮುಂದೆ ಮಾಡುತ್ತಲೇ ಇರಬೇಕಾದ ವ್ಯಾಪಕ ಕಾರ್ಯವನ್ನು ನೆನೆದರೆ ನಮಗೆ ಒಮ್ಮೆಯೇ ದಿಗ್ಭ್ರಮೆಯಾಗಬಹುದು. ಮುಂದುವರಿದ ದೇಶಗಳಲ್ಲಿ ಆಗುತ್ತಿರುವ ಪತ್ರಿಕಾ ವ್ಯವಸಾಯವನ್ನು ನೆನೆದರೆ "ನಾವು ಸಾಧಿಸಬೇಕಾದ್ದು ಅಗಾಧವಾಗಿದೆ" ಎನ್ನಿಸದೆ ಇರದು.

ಆದರೂ ಕರ್ನಾಟಕದಲ್ಲಿ ಬೆಳೆದಿರುವ ಪತ್ರಿಕಾ ಅಭಿವೃದ್ಧಿಯನ್ನು ಗಮನಿಸಿದಾಗ ನಾವು ನಿರಾಶರಾಗಬೇಕಾದುದಿಲ್ಲ ಎಂಬುದು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಕರ್ನಾಟಕದಲ್ಲಿ ಆಗಿಹೋದ ಮಹಾ ಪತ್ರಕರ್ತರ ನೆನಪು ನಮಗೆ ಧೈರ್ಯವನ್ನು ನೀಡುತ್ತದೆ. ಖ್ಯಾತ ನಾಮರಾದ

ಎಂ. ವೆಂಕಟಕೃಷ್ಣಯ್ಯ (೧೮೪೪-೧೯೩೪), ಡಿ.ವಿ. ಗುಂಡಪ್ಪ (೧೮೮೭-೧೯೭೫), ವೀರಕೇಸರಿ ಸೀತಾರಾಮಶಾಸ್ತ್ರಿ (೧೮೯೩-೧೯೭೧), ಪಿ.ಆರ್. ರಾಮಯ್ಯ (೧೮೯೪-೧೯೭೦), ತಿರುಮಲೆ ತಾತಾಚಾರ್ಯ ಶರ್ಮ (೧೮೯೭-೧೯೭೩), ಬೆಟಗೇರಿ ಕೃಷ್ಣಶರ್ಮ (೧೯೦೪-೧೯೭೩), ದಿವಾಕರ ರಂಗನಾಥರಾಯ (೧೯೦೪-೧೯೯೦), ಸಿದ್ಧವ್ವನಹಳ್ಳಿ ಕೃಷ್ಣ ಶರ್ಮ (೧೯೦೪-೧೯೭೩), ಕಡೆಂಗೋಡ್ಲು ಶಂಕರ ಭಟ್ಟ (೧೯೦೪-೧೯೬೮), ವಿ.ಬಿ. ನಾಯಕ (೧೯೦೭-೧೯೮೨), ಮೊಹರೆ ಹನುಮಂತರಾವ್ (೧೮೯೨-೧೯೬೦) ದಿನಕರದೇಸಾಯಿ, ಬಿ.ಎನ್. ಗುಪ್ತ, ಕುಡ್ಪಿ ವಾಸುದೇವ ಶೆಣೈ ಇವರೇ ಮೊದಲಾದ ಅಸಂಖ್ಯಾತರು ತಮ್ಮ ತಮ್ಮ ದುಡಿಮೆಯ ಪ್ರಭಾವವನ್ನು ಬೀರಿ ಹೋಗಿದ್ದಾರೆ. ಇವರೆಲ್ಲರ ಸಾರ್ಥಕ ಸೇವೆಯು ನಮಗೆ ಹೆಮ್ಮೆಯನ್ನುಂಟುಮಾಡಿದರೆ ಆಶ್ಚರ್ಯವೇನಿಲ್ಲ.

ಕನ್ನಡ ಭಾಷೆಯ ಬೆಳವಣಿಗೆಗೆ ಇವರೆಲ್ಲರ ಕಾರ್ಯ ತುಂಬ ಸಹಾಯವನ್ನು ಮಾಡಿದೆ, ಇವರಲ್ಲದೆ ಇಂದಿಗೂ ಪತ್ರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಅನೇಕ ಹಿರಿಯರೂ ಕಿರಿಯರೂ ಇಂದೂ ಕನ್ನಡದ ಸರ್ವತೋಮುಖವಾದ ಅಭಿವೃದ್ಧಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕಳೆದ ಶತಮಾನದ ಕನ್ನಡ ಭಾಷೆಯ ಬೆಳವಣಿಗೆಯನ್ನು ಬೇರೆ ಬೇರೆ ಮಜಲುಗಳಲ್ಲಿ ಗುರುತಿಸಬಹುದು. ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಕ್ರೈಸ್ತ ಮಿಷನರಿಗಳು ಮಾಡಿದ ಪ್ರಯತ್ನವು ಮೊದಲ ಹಂತ. ಇದು ಆ ಶತಮಾನದ ಕೊನೆಯವರೆಗೂ ಮುಂದುವರಿದಿತ್ತು. ಕನ್ನಡದ ಬಗ್ಗೆ ಈ ಸಮಯದಲ್ಲಿ ಸ್ವಲ್ಪ ಎಚ್ಚರ ಮೂಡಿಬಂದುದು ನಿಜ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಸ್ವಾತಂತ್ರ್ಯದ ಹೋರಾಟ ರೂಪುಗೊಳ್ಳುತ್ತಿದ್ದ ಕಾಲ - ಈ ಮೂರು ಮಜಲುಗಳಲ್ಲಿ ಕನ್ನಡವು ಬೇರೆ ಬೇರೆ ರೀತಿಯಲ್ಲಿ ಬೆಳೆದಿದೆ. ಸ್ವಾತಂತ್ರ್ಯದ ಕನಸಿನ ಕಾಲದ ನವೋದಯದ ಮನೋವೃತ್ತಿಯಿಂದ ಬಂದ ಸಾಹಿತ್ಯದ ಪರಿಣಾಮವಾಗಿ ಕನ್ನಡಕ್ಕೆ ಒಂದು ಹೊಸತನ ಬಂತು. ಬರಹದಲ್ಲಿ ನವೀನತೆ ತಲೆದೋರಿತು. ಕೇವಲ ಮತೀಯವಾಗಿದ್ದ ಬರಹ ತುಂಬ ಬದಲಾವಣೆ ಹೊಂದಿ ಸಾರ್ವಜನಿಕ ಕಳಕಳಿಯಿಂದ ಕೂಡಿಕೊಂಡಿತು. ಆಗ ಸಾಹಿತ್ಯ ಹೆಚ್ಚು ಜನಪ್ರಿಯವಾಯಿತು. ಕತೆ, ಕಾದಂಬರಿಗಳು ಜನರ ವಾಚನಾಭಿರುಚಿಯನ್ನು ಬೆಳೆಸಿದವು. ಸ್ವಾತಂತ್ರ್ಯದ ಹೋರಾಟ ಪ್ರಖರವಾಗುತ್ತಿದ್ದಂತೆಯೇ ದೇಶದ ಪ್ರಾಚೀನತೆ, ಚರಿತ್ರೆಯ ಏಳು ಬೀಳುಗಳು, ರಾಜಕೀಯ ಕ್ಷೋಭೆ ಮುಂತಾದುವುಗಳ ತಿಳಿವಳಿಕೆ ಹರಡಿ ಒಟ್ಟು ಭಾರತದ ಐಕ್ಯದ ದೃಷ್ಟಿ ಹೆಚ್ಚಿತು. ಹೋರಾಟದ ಸಾಹಿತ್ಯವು ಅಪಾರವಾಗಿ ಬೆಳೆಯಿತು. ಸ್ವಾತಂತ್ರ್ಯ ಬಂದ ಮೇಲೆ ವೈಜ್ಞಾನಿಕ ಅಸ್ಫೋಟನವಾಗಿ ಎಲ್ಲ ಕ್ಷೇತ್ರಗಳ ಅರಿವಿನ ವಿಸ್ತಾರ ಅಧಿಕವಾಯಿತು. ಇಂಗ್ಲಿಷ್ ಭಾಷಾಸಾಹಿತ್ಯದ ಪ್ರಭಾವದಿಂದಲೇ ಸ್ವಾಭಾವಿಕವಾಗಿಯೇ ಕನ್ನಡವೂ ನವೀಕರಣಕ್ಕೆ ಒಳಗಾಯಿತು. ಈ ನವೀಕರಣ, ಕರ್ನಾಟಕದ ಭಾಗಗಳು ಬೇರೆ ಬೇರೆ ರಾಜಕೀಯ ವಿಭಾಗಗಳಿಗೆ ಸೇರಿದ್ದರಿಂದ, ಒಂದೇ ಬಗೆಯಾಗಲಿಲ್ಲ. ನವೀಕರಣವು ಬೇರೆ ಬೇರೆಯಾಗಿಯೇ ರೂಪುಗೊಂಡಿತು.

ದಂಡಿಯಾತ್ರೆಯ ೧೯೩೦ರ ಸಮಯದಿಂದ ೧೯೪೭ರವರೆಗೆ ರಾಜಕೀಯ ಆಂದೋಲನದಿಂದ ಕನ್ನಡವು ಬೆಳೆದ ಬಗ್ಗೆ ಒಂದು ರೀತಿಯಾದರೆ ೧೯೪೭ರಿಂದ ಈಚಿನ

ಅರ್ಧ ಶತಮಾನದ ಕತೆಯೇ ಬೇರೆ. ವಿದೇಶಗಳ ಸಂಪರ್ಕ, ವಿಜ್ಞಾನಗಳ ಅರಿವಿನ ವಿಸ್ತಾರ, ಪಾಶ್ಚಾತ್ಯ ಸಾಹಿತ್ಯಗಳ ವ್ಯಾಸಂಗ, ಬೇರೆ ದೇಶಗಳಲ್ಲಿ ಆದ ಸಾಹಿತ್ಯ ಪ್ರಕಾರಗಳ ನೂತನ ಅವಿಷ್ಕಾರಗಳು - ಇವುಗಳ ಪರಿಣಾಮವಾಗಿ ಕನ್ನಡ ಸಮೃದ್ಧವಾಗಿ ಬೆಳೆದಿದೆ. ಈಗಂತೂ ಕನ್ನಡ ಲೇಖಕರು ಚಳಿಬಿಟ್ಟು, ಮೈಕೊಡವಿ, ಎಲ್ಲ ಹೊಸತನವನ್ನು ಸ್ವೀಕರಿಸಿ ಪ್ರಯೋಗಶೀಲತೆಯನ್ನು ಪ್ರದರ್ಶಿಸುತ್ತಿದ್ದಾರೆ. ನೂತನ ಶಬ್ದಗಳು ಅಪಾರ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿವೆ. ವೈಜ್ಞಾನಿಕ ಶಬ್ದಗಳನ್ನು ಅನಾಮತ್ತಾಗಿ ಉಪಯೋಗಿಸಲು ಜನರು ಮುಂದಾಗುತ್ತಾರೆ. ಇಂಗ್ಲಿಷಿನಲ್ಲಿ ಹೊಸದಾಗಿ ಹುಟ್ಟಿರುವ ಶಬ್ದವನ್ನು ಅದೇ ಸ್ವರೂಪದಲ್ಲಿ ಕನ್ನಡದಲ್ಲಿ ಬಳಸಲು ಸ್ವಲ್ಪವೂ ಹಿಂಜರಿಯುವುದಿಲ್ಲ. ಜೀವನದ ಹೊಸತನಕ್ಕೂ ಉಡುಪಿನ, ಉಪಕರಣಗಳ, ಆಹಾರದ ಹೊಸತನಕ್ಕೂ ಸ್ವಲ್ಪವೂ ಹಿಂದೆಗೆಯುವುದಿಲ್ಲ. ಮ್ಯಾಕ್ಸಿಯನ್ನುಟ್ಟು ಗ್ರೈಂಡರಿನಲ್ಲಿ ದೋಸೆ ಹಿಟ್ಟು ಮಾಡಿ, ಕುಕ್ಕರಿನಲ್ಲಿ ಕುಕ್ಕುಮಾಡಿ, ಕಂಪ್ಯೂಟರಿನ ಮುಂದೆ ಬಿಸಿಯಾಗುತ್ತಾರೆ. Mixer, Mixy, Grinder, Maxi, Mini, Hanky, Nighty ಗಳು ಎಲ್ಲರ ಬಾಯಲ್ಲೂ ಓಡಾಡುತ್ತವೆ. ಸ್ವಲ್ಪ ಮಂದಗಾಮಿಗಳು Mixer ಗೆ **ಕಲಸುಗ** ಎಂದೂ Grinderಗೆ **ರುಬ್ಬುಗ** ಎಂದೂ ಹೊಸ ಕನ್ನಡ ಶಬ್ದಗಳನ್ನು ಸೃಷ್ಟಿಸುತ್ತಾರೆ. ಇದೆಲ್ಲ ಮಾತಿನಲ್ಲಿ ಚಲಾವಣೆಯಲ್ಲಿದ್ದರೆ ಯಾರಿಗೂ ತೊಂದರೆಯಿಲ್ಲ. ಬರಹದ ಕ್ಷೇತ್ರಕ್ಕೆ ಬಂದಾಗ, ಅದೂ ಪಾರಿಭಾಷಿಕ ಶಬ್ದಗಳ ಪ್ರಯೋಗಕ್ಕೆ ಬಂದಾಗ, ಇಷ್ಟೊಂದು ಸ್ವಾತಂತ್ರ್ಯ ಸಾಧ್ಯವಿಲ್ಲ. ಪಾರಿಭಾಷಿಕ ಎನ್ನುವುದು ಪರಿಭಾಷೆ ಎಂಬ ಶಬ್ದದ ಗುಣವಾಚಕ. ಪರಿಭಾಷೆ ಎಂಬುದು ಯಾವದಾದರೂ ವಿಶಿಷ್ಟವಾದ ಕಲೆ, ವಿಜ್ಞಾನ, ಮಾನವಿಕಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಪ್ರಯೋಗದಲ್ಲಿರುವ ವಿಶಿಷ್ಟಾರ್ಥದ ಶಬ್ದವ್ಯವಸ್ಥೆ. ಆ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರದಿದ್ದರೆ ಶಬ್ದಗಳ ನಿಷ್ಕೃಷ್ಟಾರ್ಥಕ್ಕೆ ಚ್ಯುತಿ ಬರುತ್ತದೆ. ಹಾಗಾಗದಂತೆ ಪರಿಹಾರೋಪಾಯಗಳನ್ನು ಮೊದಲಿನಿಂದಲೂ ಕಂಡುಕೊಳ್ಳದಿದ್ದರೆ ಭಾಷೆಯಲ್ಲಿ ಅವ್ಯವಸ್ಥೆಯಾಗುತ್ತದೆ. ಕನ್ನಡ ದೇಶದಲ್ಲಿ ಎಲ್ಲ ಭಾಗಗಳಲ್ಲಿಯೂ ಪಾರಿಭಾಷಿಕ ಶಬ್ದಗಳು ಏಕರೀತಿಯಲ್ಲಿ ಪ್ರಯೋಗವಾಗಬೇಕು. ರಾಜಕಾರಣ, ಆಡಳಿತ, ಕಾನೂನು, ವಿಜ್ಞಾನ, ರಕ್ಷಣಾ ಇಲಾಖೆ, ಆರ್ಥಿಕಕ್ಷೇತ್ರ, ಸಂಶೋಧನೆ, ಕೃಷಿ, ಸಾಗಾಣಿಕೆ, ಪ್ರವಾಸೋದ್ಯಮ, ನೌಕಾಶಾಸ್ತ್ರ ಇತ್ಯಾದಿ ಎಲ್ಲ ಕ್ಷೇತ್ರಗಳಿಗೆ ಈ ಮಾತು ಅನ್ವಯಿಸುತ್ತದೆ. ಬೀದಿ ಮಾತು ಬೇರೆ ; ಕಚೇರಿಯ ವ್ಯವಸ್ಥೆ ಬೇರೆ; ಆಡು ಮಾತು ಬೇರೆ, ಆಡಳಿತ ಸೂತ್ರ ಬೇರೆ.

ಪತ್ರಿಕಾ ಪ್ರಪಂಚದಲ್ಲಿ ವಾರಪತ್ರಿಕೆಗಳಿಗೂ ದಿನ ಪತ್ರಿಕೆಗಳಿಗೂ ತುಂಬ ವ್ಯತ್ಯಾಸಗಳಿವೆ. ವಾರಪತ್ರಿಕೆಯು ಹೆಚ್ಚು ಸಾಹಿತ್ಯಿಕವಾದುದರಿಂದ ಅದನ್ನು ಸಿದ್ಧ ಪಡಿಸುವ ಸಂಪಾದಕ ವರ್ಗಕ್ಕೆ ಹೆಚ್ಚು ಸಮಯವಿರುತ್ತದೆ. ಆದುದರಿಂದ ವಾರಪತ್ರಿಕೆಯ ಸಂಪಾದಕ ವರ್ಗದವರು ಭಾಷೆಯ ಶೈಲಿಗೆ, ವಾಕ್ಯರಚನೆಗೆ ಹೆಚ್ಚು ಸೌಂದರ್ಯವನ್ನು ಅಳವಡಿಸಲು ಗಮನಕೊಡುತ್ತಾರೆ. ಅವರು ಉಪಯೋಗಿಸುವ ಹೊಸ ಶಬ್ದಕ್ಕೆ ಜನರ ಒಪ್ಪಿಗೆ ಪಡೆಯಲು ಸತತವಾಗಿ ಶ್ರಮಿಸಬಹುದು.

ಆದರೆ ದಿನಪತ್ರಿಕೆಯ ವಿಷಯ ಹಾಗಲ್ಲ. ಸ್ವಾತಂತ್ರ್ಯಸಂಗ್ರಾಮದ ಕಾಲದಲ್ಲೂ ಅಷ್ಟೇ, ಈಗಲೂ ಅಷ್ಟೇ ! ದಿನಪತ್ರಿಕೆಯ ಸಂಪಾದಕರು ದೇಶದಲ್ಲಿ ಪ್ರಚಾರಗೊಳ್ಳುವ ಹೊಸ

ಅಭಿಪ್ರಾಯಗಳಿಗೂ ನೂತನ ಭಾವನೆಗಳಿಗೂ ಸರಿಯಾದ ಶಬ್ದವನ್ನು ಕ್ಷಣಾರ್ಧದಲ್ಲಿ ಹುಡುಕಬೇಕು. ಕನ್ನಡದಲ್ಲಿ ಸಿದ್ಧವಾದ ಶಬ್ದ ಇಲ್ಲದಿದ್ದಾಗ ಸಂಪಾದಕರೂ, ಬಾತ್ಮೀದಾರರೂ, ಉಪಸಂಪಾದಕರೂ ತಮ್ಮೆಲ್ಲ ವ್ಯುತ್ಪತ್ತಿಯನ್ನು ಪರೀಕ್ಷೆಗೆ ಒಳಗುಮಾಡಿ ನೂತನ ಶಬ್ದವನ್ನು ಸೃಷ್ಟಿಮಾಡುತ್ತಾರೆ. ಹಾಗೆ ಜೀವತಳೆದ ಎಷ್ಟೋ ಶಬ್ದಗಳು ಉಳಿದು ಬದುಕುತ್ತವೆ. ಹೀಗೆ ಭಾಷೆ ಅಭಿವೃದ್ಧಿಯಾಗುವುದು ನಿಜ. ತಿರುಮಲೆ ತಾತಾಚಾರ್ಯಶರ್ಮರು Ordinance ಶಬ್ದಕ್ಕೆ **ಸುಗ್ರೀವಾಜ್ಞೆ** ಎಂದು ಶಬ್ದವನ್ನು ಸೃಷ್ಟಿಸಿದಾಗ, ರಾಳ್ಳಪಳ್ಳಿ ಅನಂತ ಕೃಷ್ಣ ಶರ್ಮರು Radio ಶಬ್ದಕ್ಕೆ **ಆಕಾಶವಾಣಿ** ಎಂಬುದನ್ನು ಸೂಚಿಸಿದಾಗ, ಇಂಥ ನಿರ್ಮಾಣ ಕಾರ್ಯ ನಡೆಯಿತು. ಹೀಗೆ ಹುಟ್ಟಿದ ಶಬ್ದಗಳು ಶಾಶ್ವತವಾಗಿ ಉಳಿದುಬಿಡುತ್ತವೆ; ನಿಜ.

ಆದರೆ ಪಾರಿಭಾಷಿಕ ಶಬ್ದಗಳ ಕತೆಯೇ ಬೇರೆ. ಒಂದು ವಸ್ತುವಿಗೆ, ಒಂದು ಭಾವನೆಗೆ ಕನ್ನಡ ನಾಡಿನ ಎಲ್ಲ ಕಡೆ ಪಾರಿಭಾಷಿಕವಾದ ಒಂದೇ ಶಬ್ದವನ್ನು ಉಪಯೋಗಿಸುವುದು ಸಾಧ್ಯವಾದರೆ ಭಾಷೆಗೆ ನಿಷ್ಕೃಷ್ಟತೆ ಬರುತ್ತದೆ, ಶಬ್ದಕ್ಕೆ ಒಂದು ಗಟ್ಟಿತನ ಉಂಟಾಗುತ್ತದೆ.

ಸಾಹಿತ್ಯ ಗ್ರಂಥಗಳಲ್ಲಿ ವಿದ್ವಾಂಸರ ಲೇಖನಗಳಲ್ಲಿ ಇಂಥ ಶಬ್ದಗಳಿಗೆ ಬೇರೆ ಬೇರೆ ರೂಪಗಳು ಬರಬಹುದು. ಅದು ಲೇಖಕರ ಶೈಲಿಯ ವಿಚಾರವಾಗುತ್ತದೆ. .ಅದರಿಂದ ಭಾಷೆಯ ಸೌಂದರ್ಯಕ್ಕೆ ಅವಕಾಶವೂ ಒದಗಬಹುದು. ಆದರೆ ಜನಸಾಮಾನ್ಯರನ್ನು ಪ್ರತಿದಿನವೂ ಮುಟ್ಟುವ ವೃತ್ತ ಪತ್ರಿಕೆಗಳಿಗೆ, ಏಕೀಕೃತ ಕರ್ನಾಟಕದ ಎಲ್ಲೆಡೆಗಳಲ್ಲಿ ಒಂದೇ ಸ್ವರೂಪದ ಪಾರಿಭಾಷೆ ಶಬ್ದಗಳಿರಬೇಕು. ಇದನ್ನು ಸಾಧಿಸುವ ಕಾರ್ಯ ವೃತ್ತಪತ್ರಿಕೆಗಳಿಗೆ ಮಾತ್ರ ಸಾಧ್ಯ. ಇದು ಸಾಧ್ಯವಾದರೆ ಈ ಪಾರಿಭಾಷಿಕ ಶಬ್ದಗಳ ಸತ್ವದಿಂದ ಪತ್ರಿಕಾ ಲೇಖನಗಳನ್ನು ಸರಳವಾದ, ಸ್ಪಷ್ಟವಾದ ನಿಷ್ಕೃಷ್ಟವಾದ ರೀತಿಯಲ್ಲಿ ರಚಿಸುವುದು ಸುಲಭ. ಪತ್ರಿಕಾ ಲೇಖನಗಳನ್ನು ಓದುವಾಗ ಪಕ್ಕದಲ್ಲಿ ನಿಘಂಟುಗಳನ್ನು ಇಟ್ಟುಕೊಂಡಿರಬೇಕಾದ ಪ್ರಮೇಯವನ್ನು ತಪ್ಪಿಸಬಹುದು.

ಇನ್ನೂ ಒಂದು ಮುಖ್ಯವಾದ ವಿಷಯವಿದೆ. ಈಗಿನ ಕನ್ನಡ ಭಾಷೆಯ ಎಲ್ಲ ಬಗೆಯ ಲೇಖನಗಳನ್ನೂ ಪರಿಶೀಲಿಸಿದರೆ ಕನ್ನಡಕ್ಕೆ ಹೊಸದೊಂದು ವ್ಯಾಕರಣವನ್ನು ರಚಿಸಬೇಕಾದ ಅಗತ್ಯವಿದೆ ಎಂಬುದು ಗೋಚರವಾಗುತ್ತದೆ. ಎಲ್ಲ ಬೆಳೆಯುವ ಭಾಷೆಗಳಿಗೂ ಇಂಥ ಪರಿಸ್ಥಿತಿ ಒದಗುವುದು ಆಶ್ಚರ್ಯಕರವಲ್ಲ. ಹೊಸ ವ್ಯಾಕರಣವನ್ನು ರಚಿಸುವದು ಭಾಷಾಶಾಸ್ತ್ರಜ್ಞನ ಕೆಲಸ; ಈಗೀಗ ಇದರ ಬಗ್ಗೆ ಭಾಷಾಶಾಸ್ತ್ರಜ್ಞರು ಕೆಲವರು ಚರ್ಚೆಮಾಡುತ್ತಾ ಇದ್ದಾರೆ. ಒಟ್ಟು ವ್ಯಾಕರಣವೇ ಅಲ್ಲದಿದ್ದರೂ ಒಳ್ಳೆಯ ಲೇಖನಗಳಾದರೂ ಇಷ್ಟರಲ್ಲೇ ಬರಬಹುದು. ಆದರೆ ಹೊಸ ವ್ಯಾಕರಣ ಬರುವ ತನಕ ಲೇಖನ ವ್ಯವಸಾಯವನ್ನು ನಿಲ್ಲಿಸಲಾಗುವುದಿಲ್ಲವಲ್ಲ ! ಆದುದರಿಂದ ಪತ್ರಿಕಾ ವೃತ್ತಿಯವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇಂಥ ಪ್ರಯತ್ನಕ್ಕೆ ಈಗ ಪ್ರಕಟವಾಗಿರುವ ಪತ್ರಿಕಾ ಪದಕೋಶವು ಸ್ವಲ್ಪ ಸಹಾಯವನ್ನು ನೀಡಬಹುದು.

ವೃತ್ತಪತ್ರಿಕೆಗಳಿಗೆ ಬರುವ ವರ್ತಮಾನಗಳೂ ವಿಷಯ ಸಂಗ್ರಹವೂ ಪ್ರಮುಖವಾಗಿ ಇಂಗ್ಲಿಷ್ ಭಾಷೆಯ ಮೂಲಕವೇ ಬರುತ್ತವೆ. ಪಾಶ್ಚಾತ್ಯರ ರಾಜಕೀಯ, ಆರ್ಥಿಕ ಮತ್ತು ಆಡಳಿತಾತ್ಮಕ ಆಲೋಚನೆಗಳೂ ಅವರ ಲೌಕಿಕ ವ್ಯವಹಾರಗಳೂ ನಮಗೆ ಚೆನ್ನಾಗಿ

ಅರ್ಥವಾಗಬೇಕಾದರೆ ಇಂಗ್ಲಿಷ್ ಭಾಷೆಯ ತಿಳಿವಳಿಕೆಯೂ ಚೆನ್ನಾಗಿಯೇ ಇರಬೇಕು. ಇಂಗ್ಲಿಷ್ ಭಾಷೆಯ ವೃತ್ತಪತ್ರಿಕೆಗಳಲ್ಲಿ ಕೆಲವು ಭಾರತದಲ್ಲಿಯೇ ಉತ್ತಮವಾಗಿ ಕಾರ್ಯವನ್ನು ನಿರ್ವಹಿಸುತ್ತಿವೆ. ಅಂಥ ಪತ್ರಿಕೆಗಳನ್ನೂ ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳ ದಿನಪತ್ರಿಕೆಗಳನ್ನೂ ಪರಿಶೀಲಿಸಿ ನಮ್ಮ ದೇಶಕ್ಕೆ ಉಚಿತವಾದ ವಿಷಯಗಳನ್ನು ಆಯ್ಕೆ ಮಾಡಬಹುದು. ವಿಷಯ ಸಂಗ್ರಹಕ್ಕಿಂತ ಹೆಚ್ಚಾಗಿ, ನಾವು ಈ ಪತ್ರಿಕೆಗಳಿಂದ ಕಲಿಯಬೇಕಾದುದು ಅವು ಇಂಗ್ಲಿಷ್ ಭಾಷೆಯನ್ನು ಎಷ್ಟು ಪರಿಣಾಮಕಾರಿಯಾಗಿ ಉಪಯೋಗಿಸುತ್ತಿವೆ ಎಂಬುದನ್ನು. ದೂರದರ್ಶನ ಮತ್ತು ಇತರ ಅನೇಕ ವಿದ್ಯುನ್ಮಾನ ಮಾಧ್ಯಮಗಳ ಮೂಲಕವೂ ಅನೇಕ ಹೊಸ ಶಬ್ದಗಳು ಕೇಳಿಬರುತ್ತವೆ. ಆ ಕಡೆಗೂ ನಮ್ಮ ಗಮನ ಹರಿಯಬೇಕು.

ಕನ್ನಡ ಭಾಷೆಯನ್ನು ನಾವು ಇನ್ನೂ ಹೆಚ್ಚು ಸಮರ್ಥವಾಗಿ ಮಾಡಲು ಕೆಲವು ಮಾರ್ಗಗಳನ್ನು ಅನುಸರಿಸಬಹುದು. ತುಂಬ ಮಡಿಯಾದರೆ ಭಾಷೆ ಬೆಳೆಯುವುದಿಲ್ಲ. ಆದುದರಿಂದ ಪ್ರಚಾರಕ್ಕೆ ಬಂದಿರುವ ಯಾವ ಇತರ ಭಾಷೆಯ ಶಬ್ದದ ಬಗ್ಗೆಯೂ ವಿರೋಧವಿರಬಾರದು. ಕೆಲವು ಇಂಗ್ಲಿಷ್ ಶಬ್ದಗಳನ್ನು ಹಾಗೆಯೇ ಪ್ರಯೋಗಿಸಬಹುದು.

ರಾಜಕೀಯವಾದ ಏರುಪೇರುಗಳಾದಾಗ ಭಾಷೆಗೆ ಹೊಸತನ ಬರುತ್ತದೆ. ಹೊಸ ಶಬ್ದಗಳು, ಹೊಸ ನುಡಿಗಟ್ಟುಗಳೂ ಸೃಷ್ಟಿಯಾಗುತ್ತವೆ. ಆಗ ಹಳೆಯ ಶಬ್ದಗಳಿಗೆ ಹೊಸ ಅರ್ಥಗಳು ಬರುವುದುಂಟು. ಭಾರತದಲ್ಲಿ ಸಮ್ಮಿಶ್ರ ಸರಕಾರವೂ ಬಿ.ಜೆ.ಪಿ. ನೇತೃತ್ವದ ಸರಕಾರವೂ ಸ್ಥಾಪಿತವಾದ ಸಂದರ್ಭಗಳಲ್ಲಿ ಹೊಸ ಅರ್ಥಗಳನ್ನು ಪಡೆದ ಶಬ್ದಗಳನ್ನೂ ನುಡಿಗಟ್ಟುಗಳನ್ನೂ ಗಮನಿಸಿ. Equal Distance, Equidistant, Unconditional Support, Outside Support, Inside Support , Issue Based Support, Hidden Agenda ಇತ್ಯಾದಿ ಈ ಶಬ್ದಗಳನ್ನು ಕನ್ನಡದಲ್ಲಿ ಸಮಾನಾಂತರ ದೂರ, ಸಮಾನ ದೂರ, ಬೇಷರತ್ತು ಬೆಂಬಲ, ನಿಶ್ಶರ್ತ ಬೆಂಬಲ, ಷರತ್ತುರಹಿತ ಬೆಂಬಲ, ಹೊರಗಿನಿಂದ ಬೆಂಬಲ, ಒಳಗಿನಿಂದಲೇ ಬೆಂಬಲ, ವಿಷಯಾಧಾರಿತ ಬೆಂಬಲ, ಬಚ್ಚಿಟ್ಟ ಕಾರ್ಯಕ್ರಮ, ಅಗೋಚರ ಕಾರ್ಯಕ್ರಮ ಮುಂತಾಗಿ ಅನುವಾದ ಮಾಡಲಾಯಿತು. ಇಂಥ ಸಂದರ್ಭಗಳಲ್ಲಿಯೂ ಒಂದೇ ಸ್ವರೂಪದ ನುಡಿಗಟ್ಟುಗಳಿದ್ದರೆ ಎಷ್ಟೊಂದು ಅನುಕೂಲ! ಆದರೆ ಅದು ಕೂಡಲೆ ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪಕಾಲ ಕಳೆಯಬೇಕಾಗುತ್ತದೆ. ಪಾರಿಭಾಷಿಕ ಶಬ್ದಗಳು ರೂಪುಗೊಳ್ಳುವುದು ಹೀಗೆ. ಇದೇ ರೀತಿಯಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಹೊಸ ಪ್ರಯೋಗಗಳು ಉತ್ಪನ್ನವಾಗುತ್ತವೆ. ಅವುಗಳನ್ನು ತೂಗಿನೋಡಿ ಒಂದು ರೂಪವನ್ನು ಪತ್ರಿಕೆಗಳು ಸಿದ್ಧಪಡಿಸಬೇಕು.

ಕನ್ನಡ ಪತ್ರಿಕಾಕರ್ತರು ಈ ಶತಮಾನದ ಆದಿಯಿಂದಲೂ ಹೊಸ ಶಬ್ದಗಳನ್ನು ಸೃಷ್ಟಿಸುವ ಈ ಕಾರ್ಯವನ್ನು ಮಾಡುತ್ತಿದ್ದಾರೆ. ಇಂಗ್ಲಿಷ್ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಸೃಷ್ಟಿಸುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಇಂಗ್ಲಿಷ್ vocabulary ಎಂಬ ಶಬ್ದವನ್ನು **ಒಕ್ಕಬಿಲೇರಿ** ಎಂದು ಉಪಯೋಗಿಸಿದ ನಿದರ್ಶನವೂ ಉಂಟು, ಪಂಚಭಾಷೀಯ **ಒಕ್ಕಬಿಲೇರೆ** (೧೮೮೭) ಷಡ್‌ಭಾಷೀಯ **ಒಕ್ಕಬಿಲೇರು** (ಪುನಮುದ್ರಣ ೧೯೫೭) ಎಂಬುವು ಇಂಥ ಹಳೆಯ ಪ್ರಯತ್ನಗಳು. ಕೆಲವು ಶಾಸ್ತ್ರಗ್ರಂಥಗಳಿಗೆ ಪಾರಿಭಾಷಿಕ ಶಬ್ದಕೋಶಗಳೂ ಪ್ರಕಟವಾಗಿವೆ.

ಈಚೆಗೆ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಸುಮಾರು ೫೦ ಇಲಾಖಾ ನಿಘಂಟುಗಳು ತಯಾರಾಗಿವೆ. ಅದೇ ಇಲಾಖೆಯು ಆಡಳಿತ ಪದಕೋಶವನ್ನು ಸಿದ್ಧಪಡಿಸಿ ಅದನ್ನು ಪರಿಷ್ಕರಿಸಿ ಮತ್ತೆ ಪ್ರಕಟಿಸಿದೆ. ಆದರೆ ಪತ್ರಿಕಾ ಪದಕೋಶದ ಆಲೋಚನೆ ಹೊಳೆದದ್ದು ಕನ್ನಡ ನಾಡು ಏಕೀಕರಣಗೊಂಡ ಪ್ರಾರಂಭದಲ್ಲಿ, ೧೯೫೬ರಲ್ಲಿ.

೧೯೪೯ನೇ ಇಸವಿಯಲ್ಲಿ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಬೆಂಗಳೂರು ಮುದ್ರಣವು ಪ್ರಾರಂಭವಾಯಿತು. ಅದೇ ವರ್ಷ ದಿವಾಕರ ರಂಗನಾಥರಾಯರು ಬೆಂಗಳೂರಿನಲ್ಲಿ ಒಂದು ಸಭೆಯನ್ನು ಕರೆದು ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ ಸ್ವರೂಪ ನಿರ್ಧಾರದ ಬಗ್ಗೆ ಚರ್ಚೆಮಾಡಲು ಅವಕಾಶ ಮಾಡಿದರು. ೨೫-೭-೧೯೪೯ರಂದು ಸೇರಿದ ಈ ಸಭೆಯಲ್ಲಿ ತಿರುಮಲೆ ತಾತಾಚಾರ್ಯಶರ್ಮ, ಟಿ.ಎಸ್. ರಾಮಚಂದ್ರರಾವ್, ಎಸ್. ಸೋಮಯಾಜಿ, ಆರ್.ಬಿ. ಕುಲಕರ್ಣಿ, ಡಾ|| ಎ.ಎಂ. ನಟೇಶ್, ಎನ್.ಎಸ್. ವೆಂಕೋಬರಾವ್ ಮುಂತಾದವರಿದ್ದರು.

ದಿವಾಕರ ರಂಗನಾಥರಾಯರು ಸಭೆಯ ಉದ್ದೇಶವನ್ನು ವಿವರಿಸಿ ಕನ್ನಡ ಪದ ಪ್ರಯೋಗಗಳನ್ನು ಏಕರೂಪಕ್ಕೆ ತರುವುದರ ಅಗತ್ಯವನ್ನು ವಿವರಿಸಿದರು. ಮುಖ್ಯವಾಗಿ ಪತ್ರಿಕೆಗಳು ಏಕರೂಪ ಪದಗಳನ್ನು ಬಳಕೆಗೆ ತರುವ ಪ್ರಯತ್ನ ಮಾಡಬೇಕೆಂದು ನಿವೇದಿಸಿದರು. ಈ ಜಗತ್ತಿನಲ್ಲಿಯ ದೇಶ, ನಗರ, ವ್ಯಕ್ತಿಗಳ ಹೆಸರುಗಳ ವಿಷಯದಲ್ಲಿ ಆಕಾಶವಾಣಿಯ ಉಚ್ಚಾರವನ್ನು ಅನುಸರಿಸಬಹುದು. ಕನ್ನಡ ಪದಗಳಲ್ಲಿ ಏಕರೂಪತೆಯನ್ನು ತರುವುದು ನಮ್ಮ ಉದ್ದೇಶವಾಗಿರಬೇಕೆಂದು ಸೂಚಿಸಿದರು. ಸಭೆಗೆ ಬಂದವರೆಲ್ಲ ಈ ಕಾರ್ಯವನ್ನು ಸಂತೋಷದಿಂದ ಸ್ವಾಗತಿಸಿ ತಮಗೆ ಸರಿಯೆನಿಸಿದ ಸೂಚನೆಗಳನ್ನಿತ್ತರು. (ಪತ್ರಿಕಾ ನಿಘಂಟು ೧೯೭೫, ಲೋಕ ಶಿಕ್ಷಣ ಟ್ರಸ್ಟ್ ಪ್ರಕಾಶನ, ಹುಬ್ಬಳ್ಳಿ, ಬೆಂಗಳೂರು). ಈ ಕಾರ್ಯವನ್ನು ಮುಂದುವರಿಸಲು ಅದೇ ಸಭೆಯಲ್ಲಿ ಸುಮಾರು ೧೦೦೦ ಇಂಗ್ಲಿಷ್ ಶಬ್ದಗಳನ್ನು ಕಲೆಹಾಕಲಾಯಿತು. ಅವುಗಳಿಗೆ ಸರಿ ಎನಿಸಿದ ಕನ್ನಡ ಶಬ್ದಗಳನ್ನು ಜತೆಗೂಡಿಸಲಾಯಿತು. ಈ ಕೆಲಸದಲ್ಲಿ ವಿಶ್ವಕರ್ನಾಟಕದ ತಿರುಮಲೆ ತಾತಾಚಾರ್ಯ ಶರ್ಮರು ಶಬ್ದಗಳ ಒಂದು ಪಟ್ಟಿಯನ್ನೇ ಒಪ್ಪಿಸಿದ್ದರು.

ಇಷ್ಟಾದ ಬಳಿಕ ಈ ಶಬ್ದ ಸಂಗ್ರಹಕ್ಕೆ ಕೊನೆಯ ರೂಪವನ್ನು ಕೊಡುವ ಕಾರ್ಯವನ್ನು ಎಲ್.ಗುಂಡಪ್ಪನವರಿಗೆ ವಹಿಸಲಾಯಿತು. ಅವರು ತಮ್ಮ ಕಾರ್ಯವನ್ನು ಪೂರೈಸಿದ ಮೇಲೆ ೧೯೭೫ರಲ್ಲಿ ಇದು ಮುದ್ರಣವಾಯಿತು ಇದೇ ಕನ್ನಡದ ಮೊದಲ ಪತ್ರಿಕಾ ನಿಘಂಟು. ಇದನ್ನು ಸಿದ್ಧಪಡಿಸಿದ ಸಂಪಾದಕ ಸಮಿತಿಯಲ್ಲಿ ಇದ್ದವರು ಇವರು :

ಅಧ್ಯಕ್ಷರು :
ಶ್ರೀ ರಂಗನಾಥ ದಿವಾಕರರಾಯರು

ಸದಸ್ಯರು :

ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ	ಶ್ರೀ ಟಿ.ಎಸ್. ರಾಮಚಂದ್ರ ರಾವ್
ಶ್ರೀ ಟಿ. ಸಿದ್ಧಪ್ಪ	ಶ್ರೀ ಎನ್. ಸೋಮಯಾಜಿ
ಶ್ರೀ ಎಲ್. ಗುಂಡಪ್ಪ (ಸಂಪಾದಕರು)	ಶ್ರೀರಾಮಚಂದ್ರ ಜೋಶಿ (ಸಂಚಾಲಕರು)

ಇದರಲ್ಲಿ ಸುಮಾರು ೨೦೦೦ ಶಬ್ದಗಳಿವೆ. ಈ ನಿಘಂಟಿನ ಹಿನ್ನೆಲೆಯ ವರದಿಯಲ್ಲಿ ಈ ಉಲ್ಲೇಖವಿದೆ : "ಇದು ದೊಡ್ಡ ನಿಘಂಟಲ್ಲ, ಕೇವಲ ಕೆಲ ಶಬ್ದಗಳ ಸಂಗ್ರಹ, ದೋಷಗಳು, ಅಪೂರ್ಣತೆ ಇದರಲ್ಲಿ ಕಂಡುಬರಬಹುದು. ಇನ್ನೂ ಅನೇಕ ಶಬ್ದಗಳು ಹಾಗೇ ಉಳಿದಿರಬಹುದು ಕಾಲಕ್ರಮೇಣ ಇಂಥ ದೋಷಗಳನ್ನು ಸರಿಪಡಿಸಬಹುದು. ಆದರೆ ಈಗ ನಿಮ್ಮ ಕೈಗೆ ಕೊಡುತ್ತಿರುವ ಚಿಕ್ಕ ಶಬ್ದಸಂಗ್ರಹ ಪತ್ರಿಕೆಗಳಲ್ಲಿ ಸಾಧ್ಯವಾದಷ್ಟು ಏಕರೂಪ ಪದಗಳ ಬಳಕೆಗೆ ಸಹಾಯಕವಾಗುವುದೆಂದು ನಂಬಿದ್ದೇನೆ." ಇಂಥ ಚಿಕ್ಕ ನಿಘಂಟು ಸಿದ್ಧವಾಗಲೂ ಆರು ವರ್ಷಗಳು ಬೇಕಾದವು. ಈ ಚಿಕ್ಕನಿಘಂಟನ್ನು ಬಿಡುಗಡೆಮಾಡುವ ಗೌರವವನ್ನು ದಿ|| ದಿವಾಕರ ರಂಗನಾಥರಾಯರು ನನಗೆ ಕೊಟ್ಟರೆಂಬುದು ನನಗೆ ಸಂತೋಷದ ನೆನಪು.

೧೯೬೫ರಲ್ಲಿ ಪ್ರಕಟವಾದ ಈ ಪತ್ರಿಕಾ ನಿಘಂಟು ಕನ್ನಡಿಗರ ಕೈಸೇರಿದ ಮೇಲೆಯೂ ಇಂಥ ಮತ್ತೊಂದು ಪ್ರಯತ್ನ ಪಡೆಯಬೇಕಾದರೆ ಕನ್ನಡ ನಾಡು ಮೂವತ್ತ ಮೂರು ವರ್ಷಗಳ ಕಾಲ ಕಾಯಬೇಕಾಯಿತು.

ಈಗ ಕರ್ನಾಟಕ ಪತ್ರಿಕಾ ಅಕಾಡೆಮಿಯು ಪ್ರಕಟಿಸಿರುವ ಈ ಪತ್ರಿಕಾ ಪದಕೋಶದಲ್ಲಿ ಸುಮಾರು ೨೫೦೦೦ ಉಲ್ಲೇಖಗಳಿವೆ. ಪತ್ರಿಕಾ ವೃತ್ತಿಯ ಅಗತ್ಯಗಳನ್ನು ಗಮನಿಸಿದರೆ ಇದು ಕೂಡ ಸಣ್ಣ ನಿಘಂಟೇ ನಿಜ! ಇದಕ್ಕೆ ಮತ್ತು ೧೦೦೦೦ ಶಬ್ದಗಳನ್ನೂ ಅವುಗಳ ಸಂಬಂಧದ ನುಡಿಗಟ್ಟುಗಳನ್ನೂ ಸೇರಿಸಿದರೆ ಸುಮಾರು ೫೦೦೦೦ ಉಲ್ಲೇಖಗಳ ಹೆಚ್ಚು ಉಪಯುಕ್ತವಾದ ಪತ್ರಿಕಾ ಪದಕೋಶ ಸಿದ್ಧವಾಗುತ್ತದೆ.

ಪತ್ರಿಕಾ ಸಂಪಾದಕರೂ, ಪತ್ರಿಕಾಕರ್ತರೂ, ಪತ್ರಿಕಾ ಪ್ರತಿನಿಧಿಗಳೂ, ಪತ್ರಿಕಾ ವರದಿಗಾರರೂ ಈ ಪದಕೋಶವನ್ನು ಪರಿಶೀಲಿಸಿ ಲೋಪದೋಷಗಳನ್ನು ತಿಳಿಸಿ ಮತ್ತೇನು ಸೇರಬೇಕೆಂಬ ಬಗ್ಗೆ ಸೂಚನೆಗಳನ್ನು ನೀಡಿದರೆ ಅವುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ ಮುಂದಿನ ಮುದ್ರಣದಲ್ಲಿ ಹೆಚ್ಚು ಪ್ರಯೋಜನಕರವಾದ, ಇದಕ್ಕೆ ದೊಡ್ಡದಾದ ಪತ್ರಿಕಾ ಪದಕೋಶವನ್ನು ಪ್ರಕಟಿಸಲು ಪ್ರಯತ್ನ ಮಾಡಬಹುದು.

VII. ಕನ್ನಡ ಶಬ್ದ ಸೃಷ್ಟಿಗೆ ಕಣಜವಾಗಿರುವ ಸಂಸ್ಕೃತ

ಬಹು ಹಿಂದೆ ಭಾರತದ ಕೆಲವು ಪ್ರದೇಶಗಳಲ್ಲಾದರೂ ಸಂಸ್ಕೃತವು ಜನತೆಯ ಆಡುಬಾಷೆಯಾಗಿ ಪ್ರಚಾರದಲ್ಲಿದ್ದಿರಬೇಕು. ಮೂರು ಸಾವಿರ ವರ್ಷಕ್ಕೂ ಹಿಂದಿನ ಕಾಲಕ್ಕೆ ಸಲ್ಲುವ ಅಭಿಪ್ರಾಯ ಇದು. ಈ ಭಾಷೆಯೇ ವ್ಯಾಪಕವಾಗಿ ಪ್ರಚಾರಕ್ಕೆ ಬಂದುದರ ಪರಿಣಾಮವಾಗಿ ಪ್ರಾಕೃತಗಳು ಬೆಳೆದು ಕ್ರಮವಾಗಿ ಉತ್ತರ ಭಾರತದ ಅನೇಕ ಭಾಷೆಗಳು ಅಸ್ತಿತ್ವಕ್ಕೆ ಬಂದಿರಬೇಕು. ಹೀಗೆ ಬೆಳೆದ ಹಿಂದಿ, ಪಂಜಾಬಿ, ಸಿಂಧಿ, ರಾಜಸ್ಥಾನಿ, ಬಂಗಾಳಿ, ಮರಾಠಿ, ಗುಜರಾತಿ ಮುಂತಾದ ಭಾಷೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಸಮರ್ಥವಾದ ವ್ಯಾವಹಾರಿಕ ಭಾಷೆಗಳಾಗಿ ಇಂದಿಗೂ ಉನ್ನತಿಯನ್ನು ಪಡೆದು ಪ್ರಪಂಚದ ಭಾಷಾವರ್ಗಗಳಲ್ಲಿ ಗೌರವದ ಸ್ಥಾನವನ್ನು ಗಳಿಸಿವೆ. ಹಿಂದಿನಂತೆ ಇಂದು ವ್ಯಾಪಕವಾಗಿ ಜನತೆಯಲ್ಲಿ ಆಡುಮಾತಾಗಿ ಪ್ರಚಾರದಲ್ಲಿ ಇಲ್ಲದಿದ್ದರೂ ಸಂಸ್ಕೃತವು ಈ ಎಲ್ಲ ಭಾಷೆಗಳ ಬೆಳವಣಿಗೆಗಳ ಬೆನ್ನೆಲುಬಾಗಿ ಶಾಶ್ವತವಾದ ಸಂಪದ್ಯುಕ್ತವಾದ ಜೀವಂತ ಭಾಷೆಯಾಗಿದೆ.

ಭಾರತದ ದಕ್ಷಿಣದಲ್ಲಿ ದ್ರಾವಿಡ ಭಾಷೆಗಳು ಜನತೆಯ ಮಾತೃಭಾಷೆಯಾಗಿದ್ದು ಬಹುವಾಗಿ ಪ್ರವರ್ಧಮಾನಕ್ಕೆ ಬಂದಿವೆ. ಈ ಭಾಷೆಗಳ ಬೆಳವಣಿಗೆಗೂ ಸಂಸ್ಕೃತವು ನೇರವಾಗಿ ಸಹಾಯವನ್ನು ನೀಡಿ ಅವುಗಳ ಶಬ್ದಸಂಪತ್ತಿಗೂ ಸಾಹಿತ್ಯದ ಶ್ರೇಷ್ಠತೆಗೂ ಅತ್ಯವಶ್ಯವಾದ ಹಿನ್ನೆಲೆಯಾಗಿ ನಿಂತಿದೆ. ಪಾಶ್ಚಾತ್ಯ ಸಾಹಿತ್ಯಗಳ ಪ್ರಭಾವವು ದಕ್ಷಿಣ ದೇಶದ ಸಾಹಿತ್ಯಗಳ ಮೇಲೆ ಅಪಾರ ಪ್ರಭಾವವನ್ನು ಬೀರಿರುವುದು ನಿಜ. ಈ ಪ್ರಭಾವದಿಂದ ಆಯಾ ಸಾಹಿತ್ಯಗಳಲ್ಲಿ ವಿಷಯ ವೈವಿಧ್ಯವೂ ಅಧಿಕವಾಗಿದೆ. ಇಷ್ಟಾದರೂ ದಕ್ಷಿಣದ ಭಾಷೆಗಳ ಬೆಳವಣಿಗೆಗೆ ಇಂದೂ ಸಂಸ್ಕೃತದ ಅಗತ್ಯವಿರುವುದು ಸ್ಪಷ್ಟ.

ಸಂಸ್ಕೃತದ ಸಾಹಿತ್ಯದ ಪರಿಣಾಮ ಕನ್ನಡ ಸಾಹಿತ್ಯದ ಮೇಲೆ ಎಷ್ಟಾಗಿದೆ ಎಂಬುದನ್ನು ಸ್ವಲ್ಪದರಲ್ಲಿ ವಿವರಿಸಲಾಗುವುದಿಲ್ಲ. ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಪೂರ್ಣವಾಗಿ ಅನುವಾದ ಮಾಡುವುದಕ್ಕೆ ೨೦ನೆಯ ಶತಮಾನದ ತನಕ ಕಾಯಬೇಕಾದುದು ನಿಜವಾದರೂ ಕನ್ನಡದ ಪ್ರಾಚೀನ ಕವಿಗಳೆಲ್ಲರೂ ಸಂಸ್ಕೃತ ಕವಿಗಳಿಂದ ನೇರವಾಗಿ ಪ್ರಭಾವಿತರಾಗಿದ್ದಾರೆ. ಹಳೆಗನ್ನಡದ ಹಿರಿಯ ಕವಿಗಳೆಲ್ಲ ಉಭಯ ಭಾಷಾ ವಿಶಾರದರಾಗಿದ್ದರು. ಪಂಪನ ವಿಕ್ರಮಾರ್ಜುನ ವಿಜಯವಾಗಲಿ, ಕುಮಾರವ್ಯಾಸನ ಭಾರತ ಕಥಾ ಮಂಜರಿಯಾಗಲಿ, ರಾಮಾಯಣ ಮಹಾಭಾರತಗಳಿಂದಲೂ ಕಾಳಿದಾಸಾದಿ ಕವಿಗಳಿಂದಲೂ ವಸ್ತುಗಳನ್ನೂ ವರ್ಣನೆಯನ್ನೂ ಆರಿಸಿಕೊಂಡಿದ್ದರೂ ಅವುಗಳ ಜೊತೆಗೆ ತಮ್ಮ ಸ್ವಂತಿಕೆಯನ್ನೂ ಮೆರೆದಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಕನ್ನಡದಲ್ಲಿ ಕಾಣುವ ಮಾರ್ಗದೇಸಿಗಳ ಸಮ್ಮಿಶ್ರಣದ ಸೊಗಸು ಎಂಥದು ಎಂಬುವನ್ನು ಪಂಪನ ಒಂದು ಪದ್ಯದಿಂದ ದೃಷ್ಟಾಂತಪಡಿಸಬಹುದು.

ಬಗ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದೊಂದು ದೇಸಿಯೊಳ್
ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧವೊ

ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಳಲ್ದು ತುಂ

ಬಿಗಳಿನ ತುಂಬಿ ಕೋಗಿಲೆಯೆ ಬಗ್ಗಸೆ ಸುಗ್ಗಿಯೊಳೊಪ್ಪುವಂತೆವೋಲ್ (೧-೮)

ಮಾರ್ಗ ಎಂದರೆ ಸಂಸ್ಕೃತ, ದೇಸಿ ಎಂದರೆ ಕನ್ನಡ. 'ದೇಸಿ' ಶಬ್ದಕ್ಕೆ ಸೌಂದರ್ಯ ಎಂಬ ಅರ್ಥವೂ ಇದೆ. ಹೀಗೆ ಕನ್ನಡ ಸಾಹಿತ್ಯ ಸಂಸ್ಕೃತದ ಮಿಶ್ರಣದಿಂದ ಸೌಂದರ್ಯವನ್ನು ಸಂಪಾದಿಸಿಕೊಂಡಿದೆ; ವಸ್ತು ವೈವಿಧ್ಯವನ್ನೂ ಸಾಧಿಸಿದೆ. ಸಂಸ್ಕೃತ ಸಾಹಿತ್ಯದ ಪ್ರಭಾವದ ಮಾತು ಇದು.

ಸಾಹಿತ್ಯವನ್ನು ಬಿಟ್ಟು ಇತರ ಶಾಸ್ತ್ರೀಯ ವಿಚಾರಗಳನ್ನು ಸ್ವಲ್ಪ ಪರಿಶೀಲಿಸೋಣ.

ಸಂಸ್ಕೃತದಲ್ಲಿ ಶಬ್ದಶಾಸ್ತ್ರಕ್ಕೆ ವ್ಯಾಕರಣ ಎಂದೇ ಹೆಸರು. ಈ ಶಾಸ್ತ್ರದ ವ್ಯಾಸಂಗದಿಂದ ಸಂಸ್ಕೃತ ಭಾಷೆಯಲ್ಲಿ ಅನೇಕ ಶಾಖೆಗಳು ಬೆಳೆದಿವೆ. ವ್ಯಾಕರಣಕಾರರೇ ವಿದ್ವಾಂಸರಲ್ಲಿ ಮೊದಲಿಗರೆಂದೂ, ಸರ್ವವಿದ್ಯೆಗಳಿಗೂ ವ್ಯಾಕರಣವೇ ಮೂಲವೆಂದೂ ಆನಂದವರ್ಧನನು ಹೇಳುತ್ತಾನೆ. ಈ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಪಾಣಿನಿಯಿಂದ ಹಿಡಿದು ಪತಂಜಲಿ, ಕಾತ್ಯಾಯನ, ಭರ್ತೃಹರಿ, ಹೇಮಚಂದ್ರ ಇತ್ಯಾದಿ ಎಷ್ಟೊಂದು ವಿದ್ವಾಂಸರ ಕೃತಿಗಳು ಸಂಸ್ಕೃತದಲ್ಲಿವೆ. ಇವುಗಳಲ್ಲಿ ಕನ್ನಡಕ್ಕೆ ಎಷ್ಟು ಇಳಿದು ಬಂದಿವೆ? ಅಲಂಕಾರಶಾಸ್ತ್ರ ಗ್ರಂಥಗಳಂತೆ ವ್ಯಾಕರಣ ಗ್ರಂಥಗಳು ಕನ್ನಡಕ್ಕೆ ಬಂದಿಲ್ಲ.

ಕೋಶ ರಚನೆಗೂ ಸಂಸ್ಕೃತವೇ ಮೊದಲು. ಶಬ್ದಕೋಶಗಳಲ್ಲಿ ಶಬ್ದ ಸಂಯೋಜನೆಯು ವಿವಿಧವಾಗಿದೆ. ಅಮರ ಕೋಶದಂಥ ಒಂದು ಗ್ರಂಥ ಕನ್ನಡಕ್ಕೆ ಟೀಕಾಸಹಿತ ದೊರೆತಿದೆ. ಆದರೆ ಬಹು ಪ್ರಧಾನ ನಿಘಂಟುಗಳಾದ ಹಾರಾವಳಿ, ವೈಜಯನ್ತೀ ಮುಂತಾದವು ಕನ್ನಡ ಭಾಷೆಗೆ ಸಂಪೂರ್ಣವಾಗಿ ಪರಿಚಿತವಾಗಿಲ್ಲ. ಹಲಾಯುಧನ ಅಭಿಧಾನರತ್ನಮಾಲಾ ಅನುವಾದವಾಗಿದೆ ಅಷ್ಟೆ!

ಸಂಸ್ಕೃತದ ತತ್ವಶಾಸ್ತ್ರ ಕ್ಷೇತ್ರ ಬಹು ವಿಸ್ತಾರವಾದುದು. ಕನ್ನಡ ಜನಸಾಮಾನ್ಯರಿಗೆ ಭಗವದ್ಗೀತೆಯನ್ನು ಪರಿಚಯ ಮಾಡುವ ಕೆಲವು ಗ್ರಂಥಗಳಿವೆ. ಆದರೆ ಮಠಗಳಿಂದ ಪ್ರಕಟವಾದ ವಿದ್ವಾಂಸರಿಗೆಂದು ರಚಿತವಾದ ಗ್ರಂಥಗಳನ್ನು ಬಿಟ್ಟರೆ, ಸಾಮಾನ್ಯ ಜನತೆಗೆ ತತ್ವಶಾಸ್ತ್ರದ ವಿಸ್ತಾರವನ್ನು ಪರಿಚಯ ಮಾಡುವ ಗ್ರಂಥಗಳು ಕಡಿಮೆ. ಧರ್ಮಶಾಸ್ತ್ರದಲ್ಲಿ ಡಾ. ಕಾಣೆಯವರ ಪುಸ್ತಕ ಕನ್ನಡಕ್ಕೆ ಅನುವಾದವಾಗಿದೆ, ನಿಜ. ಆದರೆ ಎಷ್ಟು ಸ್ಮೃತಿಗಳು ಕನ್ನಡದಲ್ಲಿ ಪ್ರಕಟವಾಗಿವೆ? ಅರ್ಥಶಾಸ್ತ್ರದ ವಿಚಾರದಲ್ಲಿ, ನೀತಿಶಾಸ್ತ್ರ ಗ್ರಂಥಗಳ ಅನುವಾದದಲ್ಲಿ, ಆಯುರ್ವೇದ ಗ್ರಂಥಗಳ ವಿಷಯದಲ್ಲಿ ನಾವು ಸಾಕಾದಷ್ಟು ಸಾಧನೆ ಮಾಡಿಲ್ಲ.

ಇಷ್ಟೆಲ್ಲವನ್ನೂ ಉಲ್ಲೇಖಿಸುವುದಕ್ಕೆ ಒಂದು ಕಾರಣವಿದೆ. ಇಂದು ಭಾರತೀಯ ಜನಜೀವನದಲ್ಲಿ ಪಾಶ್ಚಾತ್ಯ ವಿಜ್ಞಾನ ಸಂಶೋಧನೆಗಳಿಂದಲೂ ಕಂಪ್ಯೂಟರ್ ವಿಜ್ಞಾನದಿಂದಲೂ ಸಾವಿರಾರು ಶಬ್ದಗಳು ಹೊಸದಾಗಿ ನಿರ್ಮಾಣವಾಗುತ್ತಿವೆ. ಇವುಗಳಲ್ಲಿ ಕನ್ನಡ ಭಾಷೆಗೆ ಕೆಲವನ್ನು ನಾವು ನೇರವಾಗಿಯೇ ತರಬಹುದು. ಅವುಗಳ ಅನುವಾದದ ಅಗತ್ಯವಿಲ್ಲ. ಆದರೆ ಕೆಲವು ಶಬ್ದಗಳಿಗೆ ಸರಿಯಾದ ಕನ್ನಡ ಶಬ್ದಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಕನ್ನಡದಲ್ಲಿ ನೂತನ ಶಬ್ದಗಳು ನಿರ್ಮಾಣವಾಗಬೇಕಾದರೆ ಸಂಸ್ಕೃತ ಭಾಷೆಯ ಸಹಾಯ ಅತ್ಯಗತ್ಯವಾಗುತ್ತದೆ. ಈ ದೃಷ್ಟಿಯಿಂದ ಸಂಸ್ಕೃತದಲ್ಲಿ ಆಳವಾದ ತಿಳಿವಳಿಕೆಯುಳ್ಳ ವೈಯಾಕರಣರು ಬೇಕಾಗುತ್ತಾರೆ. ನೂರು ಶ್ಲೋಕಗಳನ್ನು ಬಲ್ಲವನು ಪಂಡಿತನೆಂಬ ಗಾದೆ ಮಾತನ್ನು ಇನ್ನು ನಂಬಲಾಗುವುದಿಲ್ಲ. ಕನ್ನಡ ನಾಡಿನಲ್ಲಿರುವ ಸಂಸ್ಕೃತ ವಿದ್ವಾಂಸರು ಕನ್ನಡದ ಬೆಳವಣಿಗೆಗೆ ಅನೇಕ ವಿಧಗಳಲ್ಲಿ

ಸಹಾಯ ಮಾಡಬಹುದು. ಅವರವರ ಕ್ಷೇತ್ರಗಳಲ್ಲಿ ಪರಿಣತರಾದ ಸಂಸ್ಕೃತ ವಿದ್ವಾಂಸರು ಅವರ ವ್ಯಾಸಾಂಗ ಸಮಯದಲ್ಲಿ ಸ್ವಲ್ಪ ಸಮಯವನ್ನು ಕನ್ನಡದ ಬೊಕ್ಕಸಕ್ಕೆ ಸಂಸ್ಕೃತ ಗ್ರಂಥಗಳನ್ನು ಅನುವಾದ ಮಾಡಿ ತರಲು ಉಪಯೋಗಿಸಬೇಕು.

ಕನ್ನಡದ ಬೆಳವಣಿಗೆಯ ದೃಷ್ಟಿಯಿಂದ ಈ ಮಾತುಗಳನ್ನು ನಾನು ಹೇಳುತ್ತಿದ್ದೇನೆ. ಸಂಸ್ಕೃತಕ್ಕೆ ಸಂಬಂಧಿಸಿದಂತೆ ಒಂದು ಸಪ್ತಾಹವನ್ನು ಆಚರಿಸಬೇಕೆಂಬ ಕೇಂದ್ರ ಸರಕಾರದ ಉದ್ದೇಶ ಸ್ತುತ್ಯವಾದುದು. ಆದರೆ ಸರಕಾರದ ಸುತ್ತೋಲೆಯಲ್ಲಿ ಸಂಸ್ಕೃತ ಪುಸ್ತಕಗಳ ಪ್ರದರ್ಶನ ಸಂಸ್ಕೃತ ವಿಜ್ಞಾನ ಪ್ರದರ್ಶನ, ಭಾಷಣಗಳು, ಸರಳ ಸಂಸ್ಕೃತದ ಬಗ್ಗೆ ಚರ್ಚೆ ಇತ್ಯಾದಿಗಳು ಇರಬೇಕೆಂದು ತಿಳಿಸಲಾಗಿದೆ. ಹೀಗೆ ಮಾತ್ರ ಮಾಡಿದರೆ ಈ ಸಾಪ್ತಾಹಿಕ ಕಾರ್ಯಕ್ರಮದ ಪ್ರಭಾವ ವ್ಯಾಪಕವಾಗಿರುವುದಿಲ್ಲ. ಭಾರತದ ಎಲ್ಲ ಭಾಷೆಗಳ ಮೇಲೆಯೂ ಸಂಸ್ಕೃತದ ಪ್ರಭಾವ ದಟ್ಟವಾಗಿದೆ. ಆಯಾ ಭಾಷೆಗಳ ಪ್ರಮುಖ ಸ್ಥಳಗಳಲ್ಲಿ ಆಯಾ ಭಾಷೆಯ ಮೇಲೆ ಸಂಸ್ಕೃತವು ಬೀರಿರುವ ಪ್ರಭಾವವನ್ನು ಎತ್ತಿ ತೋರಿಸುವ ಕಾರ್ಯ ಅಗತ್ಯವಾಗಿ ಆಗಬೇಕು. ಅಷ್ಟೇ ಅಲ್ಲ, ಮುಂದೆಯೂ ಹೀಗೆ ಸಂಸ್ಕೃತವು ಆ ಭಾಷೆಯ ಒಟ್ಟು ಸಂಪತ್ತನ್ನು ಹೆಚ್ಚಿಸಲೂ ಹೊಸ ಶಬ್ದಗಳನ್ನು ನಿರ್ಮಾಣ ಮಾಡಲೂ ಸಹಾಯವನ್ನು ಒದಗಿಸಬಲ್ಲದು ಎಂಬುದನ್ನು ಸಾಧಾರವಾಗಿ ಜನರಿಗೆ ಪರಿಚಯ ಮಾಡಿಕೊಡಬೇಕು.

ಇದರಿಂದ ಭಾರತದ ಎಲ್ಲ ಭಾಷಾವಲಯಗಳಲ್ಲಿಯೂ ಸಂಸ್ಕೃತದ ಬಗ್ಗೆ ಆಸಕ್ತಿ ಬೆಳೆದು ದೇಶಭಾಷಾಭಿವೃದ್ಧಿಯ ಬಗ್ಗೆ ವಿಶ್ವಾಸವು ಬೆಳೆಯುತ್ತದೆ. ಸಂಸ್ಕೃತ ವಿದ್ವಾಂಸರು ದೇಶ ಭಾಷೆಗಳಿಗೆ ಅಗತ್ಯವಾದ ಶಾಸ್ತ್ರಸಾಹಿತ್ಯವನ್ನು ಅನುವಾದ ಮಾಡಿ ದೇಶಭಾಷೆಯ ಜ್ಞಾನಕೋಶವನ್ನೂ ಶಬ್ದ ಸಂಪತ್ತನ್ನೂ ಅಧಿಕಗೊಳಿಸಬಹುದು. ಹೀಗೆ ಮಾಡುವುದರಿಂದ ದೇಶಭಾಷೆಗೆ ಹೊಸ ಗ್ರಂಥಗಳು ಬರುತ್ತವೆ. ಆಯಾ ಸಂಸ್ಕೃತ ವಿದ್ವಾಂಸರು ದೇಶ ಭಾಷೆಯ ಬೆಳವಣಿಗೆಗೆ ದುಡಿಯುವ ವ್ಯಕ್ತಿಗಳಾಗಿ ಜನತೆಯಲ್ಲಿ ವ್ಯಾಪಕವಾದ ಗೌರವಕ್ಕೆ ಪಾತ್ರರಾಗುತ್ತಾರೆ. ಇದು ದೇಶಭಾಷೆಗೆ ಆಗುವ ಹೊಸ ಸೇವೆ. ಮಾತೃಭಾಷೆಯ ಋಣವನ್ನು ತೀರಿಸಿದ ತೃಪ್ತಿ ಸಂಸ್ಕೃತ ವಿದ್ವಾಂಸರಿಗೆ ಉಂಟಾಗುತ್ತದೆ.

ಭಾಷಾ ವಿದ್ವಾಂಸರನ್ನು ಸಮಾಜದಲ್ಲಿಯೇ ಶಿಕ್ಷಣ ಶಾಲೆಗಳಲ್ಲಿಯೊ ಕೀಳಾಗಿ ಕಾಣುತ್ತಿದ್ದ ಕಾಲ ಒಂದಿತ್ತು. ಈಗಲೂ ಅದು ಮುಂದುವರಿಯದಂತೆ ಎಚ್ಚರಿಕೆಯಿಂದ ಇರಬೇಕಾದುದು ಎರಡು ಭಾಷೆಗಳ ವಿದ್ವಾಂಸರ ಹೊಣೆಯಾಗುತ್ತದೆ.

ದೇಶಭಾಷೆಗೆ ಸಂಸ್ಕೃತದ ಸತ್ವವನ್ನು ತಂದು ಕೊಡುವ ವಿದ್ವಾಂಸರು ಕನ್ನಡ ಲೇಖಕರಾಗಿ ಪ್ರಕಾಶಕ್ಕೆ ಬರುತ್ತಾರೆ - ಇಂಥವರು ಮಾಡುವ ಕಾರ್ಯ ದೇಶಭಾಷೆಗೂ ಆ ಭಾಷೆಯ ಲೇಖಕರಿಗೂ ಅಪಾರ ಸಹಾಯವಾಗುತ್ತದೆ.

ಕನ್ನಡದಲ್ಲಿ ಈಗೀಗ ಇಂಥ ವಿದ್ವತ್ಕಾರ್ಯಗಳು ನೆರವೇರುತ್ತಾ ಇವೆ. ಹಾಗೆ ಸಂಸ್ಕೃತದಿಂದ ಕನ್ನಡಕ್ಕೆ ಸತ್ವ ತುಂಬಿದ ವಿದ್ವಾಂಸರನ್ನು ಜನತೆಯೂ ಸರಕಾರವೂ ಗೌರವಿಸುತ್ತಾ ಇವೆ. ಈ ಸೌಜನ್ಯ ಬೆಳೆಯಬೇಕು. ಎಲ್ಲೋ ಕೆಲವರು ಸಂಸ್ಕೃತವೂ ಇಂಗ್ಲಿಷೂ ಕನ್ನಡದ ಬೆಳವಣಿಗೆಗೆ ಮಾರಕವೆಂಬ ಅಭಿಪ್ರಾಯವನ್ನು ಹೇಳುತ್ತಾ ಇದ್ದವರೂ ಈಗ ತುಂಬ ಬದಲಾವಣೆಯಾಗಿದ್ದಾರೆ. ಸಂಸ್ಕೃತ ಶಾಸ್ತ್ರ ಸಾಹಿತ್ಯವನ್ನು ಕನ್ನಡಕ್ಕೆ ತಂದಷ್ಟೂ ಕನ್ನಡದ ಜ್ಞಾನಕೋಶ ವಿಸ್ತಾರವಾಗುತ್ತದೆ. ಕನ್ನಡಕ್ಕೆ ಸಂಸ್ಕೃತ ಶಾಸ್ತ್ರ ಗ್ರಂಥಗಳನ್ನು ತರುವ ಸಂಸ್ಕೃತ ವಿದ್ವಾಂಸರ ಬಳಗ ಬೆಳೆಯಲಿ. ಸಂಸ್ಕೃತ ಸಾಪ್ತಾಹವು ಸಂಸ್ಕೃತದ ಮತ್ತು ದೇಶ ಭಾಷೆಗಳ ಬಾಂಧವ್ಯವನ್ನು ಬೆಳೆಸುವುದರಲ್ಲಿ ಯಶಸ್ವಿಯಾಗಲಿ.

VIII. ಕೋಟದವರ ಚಾಟೂಕ್ತಿಗಳು

'ಕೋಟದವರು' ಎಂದು ಪ.ನ. ಮಯ್ಯ ಅವರು ಪಿಎಚ್.ಡಿ. ಪದವಿಗಾಗಿ ರಚಿಸಿದ ಮಹಾ ಪ್ರಬಂಧವನ್ನು ನಾನು ಓದಿದ್ದೇನೆ. ಆ ವಿಸ್ತಾರವಾದ ಸಂಶೋಧನೆಗಳಿಂದ ಕೂಡಿದ ಗ್ರಂಥವನ್ನು ಓದಿದ ಮೇಲೆ ಅಲ್ಲಿರುವ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದ ಈ ಭಾಷಿಕ ಅಧ್ಯಯನವು ಬೇರೊಂದು ಕ್ಷೇತ್ರದ ವಿವರಣಾತ್ಮಕ ರಚನೆಯಾಗಿರುವುದು ಸ್ವತಃ ವೇದ್ಯವಾಗುತ್ತದೆ. ಬಹು ಹಿಂದೆ ಪ್ರೊ। ಬಿ.ಎಚ್. ಶ್ರೀಧರ್ ಅವರು 'ಕುಂದಗನ್ನಡ' ಎಂಬ ಒಂದು ಲೇಖನವನ್ನು ಬರೆದು ಕುಂದಾಪುರದ ಸುತ್ತಣ ಭಾಷೆಯ ವೈಶಿಷ್ಟ್ಯವನ್ನು ನಮಗೆ ಪರಿಚಯಮಾಡಿಕೊಟ್ಟಿದ್ದರು. ಈಚೆಗೆ ಈ ಕುಂದಾಪುರದ ಕನ್ನಡ ಭಾಷೆಯನ್ನು ಉಪಯೋಗಿಸಿ ರಚಿಸಿದ ಸಣ್ಣಕತೆ ಮುಂತಾದ ಬರಹಗಳು ನಮಗೆ ಆದರ ಬಗ್ಗೆ ಹೆಚ್ಚು ಕುತೂಹಲವನ್ನು ಉಂಟುಮಾಡಿದವು. ಕೋಟದವರ ಭಾಷೆಯೂ ವಿಶಿಷ್ಟವಾದದ್ದು. ಕನ್ನಡದ ಭಾಷೆಯ ಹಲವು ಬಗೆಯ ಪ್ರಕಾರಗಳಲ್ಲಿ ಇದೂ ಒಂದು. ಚಾಟೂಕ್ತಿ ಎಂದರೆ ಸ್ವಾರಸ್ಯವುಳ್ಳ ಮಾತು, ಹೇಳಿಕೆ. ಶ್ರೀವಿಜಯನು ಹೇಳಿದ ಕನ್ನಡಂಗಳ್ ಶಬ್ದವನ್ನು ಈ ವೈವಿಧ್ಯಗಳು ನೆನಪಿಗೆ ತರುತ್ತವೆ. ಸ್ಥೂಲವಾಗಿ ಪರಿಶೀಲಿಸಿದರೂ ಈ ಗ್ರಂಥದಲ್ಲಿ ಸಂಗ್ರಹಿತವಾಗಿರುವ ಚಾಟೂಕ್ತಿಗಳು ಕನ್ನಡ ನಾಡಿನ ಎಲ್ಲ ಕಡೆ ಪ್ರಚಾರದಲ್ಲಿರುವುದು ಕಾಣಬರುತ್ತದೆ. ಆದರೆ ಅವುಗಳ ರಚನೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿಲ್ಲದೆ ಇಲ್ಲ. ಎಷ್ಟೋ ವೇಳೆ ಈ ಅಲ್ಪಭಾಷಿಕ ವ್ಯತ್ಯಾಸದಿಂದಲೇ ವಿಸ್ತಾರವಾದ ಅರ್ಥವ್ಯತ್ಯಾಸವೂ ಕಾಣುವುದುಂಟು. ಈ ಅರ್ಥವ್ಯತ್ಯಾಸಗಳ ನಿರೂಪಣೆ ಅಲ್ಲಲ್ಲಿ ಈ ಗ್ರಂಥದಲ್ಲಿ ಕಾಣಬರುತ್ತದೆ.

ಇದು ಒಂದು ಬಗೆಯ ಚಾಟೂಕ್ತಿ ನಿಘಂಟಾಗಿ ನನಗೆ ಕಂಡುಬರುತ್ತದೆ. ಆದುದರಿಂದ ಇದನ್ನು ಮೂಲವಾಗಿ ಇಟ್ಟು ಸಂವಾದಿಯಾದ ಇತರ ಪ್ರದೇಶಗಳ ಚಾಟೂಕ್ತಿಗಳ ಸ್ವರೂಪಗಳನ್ನು ಸಂಗ್ರಹಿಸಿ ಅವುಗಳಲ್ಲಿ ಕಾಣಬಹುದಾದ ಭಾಷಿಕ ವ್ಯತ್ಯಾಸಗಳ ವಿಶ್ಲೇಷಣೆ ಮಾಡುವುದು ಆಸಕ್ತಿಯನ್ನು ಕೆರಳಿಸುವ ಸಂಶೋಧನೆಯಾಗಬಹುದು. ಆದರೆ ಇಂಥ ಸಂಶೋಧನ ಕಾರ್ಯವು ಒಂದು ಗುಂಪಿನ ಕೆಲಸವಾಗುತ್ತದೆ. ಆಗ ಭಾಷೆಯ ಸರ್ವೇಕ್ಷಣವು ಎಷ್ಟು ಅಗತ್ಯವಾಗಿದೆ ಎಂಬ ಅಂಶವು ಹೆಚ್ಚು ಸ್ಪಷ್ಟವಾಗಿ, ಕನ್ನಡ ಭಾಷೆಯ ಸಂಶೋಧನೆಗೆ ಹೆಚ್ಚು ಒತ್ತು ಬೀಳಬಹುದು.

ಡಾ। ಮಯ್ಯ ಅವರ ಈ ಅಧ್ಯಯನ ಅಂಥ ಇತರ ವ್ಯಾಪಕ ಭಾಷಿಕ ಸಂಶೋಧನೆಗಳಿಗೆ ಕಾರಣವಾಗಲಿ ಎಂದು ನಾನು ಆಶಿಸುತ್ತೇನೆ. ಕನ್ನಡ ಭಾಷೆಯ ಬಗ್ಗೆ ಸಂಶೋಧನೆಯು ಬೆಳೆಯಬೇಕಾಗಿರುವ ಈ ಸಂದರ್ಭದಲ್ಲಿ ಈ ಗ್ರಂಥವನ್ನು ರಚಿಸಿದ ಲೇಖಕರ ಕಾರ್ಯ ಅಭಿನಂದನಾರ್ಹವಾಗಿದೆ.

IX. ಪಠ್ಯಪುಸ್ತಕದಿಂದ 'ಋ'ಕಾರದ ಎತ್ತಂಗಡಿ

ಭಾಷೆ ಬಹು ಪವಿತ್ರವಾದುದು. ಅದು ಪುಸ್ತಕದ ಭಾಷೆ ಎಂದೂ ಆಡುಭಾಷೆ ಎಂದೂ ಎರಡು ರೂಪಗಳಲ್ಲಿ ಪ್ರಯೋಗವಾಗುತ್ತದೆ. ಗ್ರಾಂಥಿಕ ಭಾಷೆ ವ್ಯಾಕರಣ ಶುದ್ಧವಾದದ್ದು. ಅದು ಕೆಲವು ಭಾಷಾಸೂತ್ರಗಳಿಗೆ ಅನುಸಾರವಾಗಿರುತ್ತದೆ. ಅದರಲ್ಲಿ ತಪ್ಪುಗಳಿರುವುದಿಲ್ಲ. ಆಡುಭಾಷೆ ಸಾಮಾನ್ಯರು ಮಾತನಾಡುವ ಭಾಷೆ. ಇದರಲ್ಲಿ ಉಚ್ಚಾರಣೆಯ ಸ್ಖಾಲಿತ್ಯಗಳೂ ವಾಕ್ಯರಚನೆಯಲ್ಲಿ ಏರುಪೇರುಗಳೂ ಇರುತ್ತವೆ. ವಿದ್ವಾಂಸರು ಮಾತನಾಡುವಾಗ ಕೂಡ ಇಂಥ ಕೆಲವು ಸ್ಖಾಲಿತ್ಯಗಳು ಅಲ್ಪ ಪ್ರಮಾಣದಲ್ಲಿ ತಲೆಹಾಕಬಹುದು. ಅದು ಆಡುಮಾತಿನ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ವಿಷಯ. ಆಡುಮಾತಿನಲ್ಲಿರುವ ಸ್ವಾತಂತ್ರ್ಯ ಗ್ರಾಂಥಿಕ ಭಾಷೆಗೆ ಇರುವುದಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ನಾವು ಆಡುಭಾಷೆಯ ಮೂಲಕ ಗ್ರಾಂಥಿಕ ಭಾಷೆಯನ್ನು ಕಲಿಸುತ್ತೇವೆ. ಪ್ರಾಚೀನ ಗ್ರಂಥಗಳಿಂದ ಹಿಡಿದು ಇತ್ತೀಚಿನ ಗ್ರಂಥಗಳವರೆಗೆ ಭಾಷೆ ಹೇಗೆ ಬೆಳೆದಿದೆ ಎಂಬುದನ್ನು ಆಡುಭಾಷೆಯಲ್ಲಿಯೇ ತಿಳಿಸಿಕೊಡುತ್ತೇವೆ. ಮಾತು ಕಿವಿಗೆ ಕೇಳಿಸತಕ್ಕದ್ದು, ಬರಹ ಕಣ್ಣಿಗೆ ಕಾಣತಕ್ಕದ್ದು. ಲಿಪಿ ಉಚ್ಚಾರಗಳಿಗೆ ಸಂಕೇತ. ಎಲ್ಲ ಭಾಷೆಗಳಿಗೂ ಹೀಗೆ ಚಾಕ್ಷುಷ, ಶ್ರಾವಣ ಎಂಬ ಎರಡು ರೂಪಗಳಿರುತ್ತವೆ. ಕೆಲವು ಕ್ಷುಲ್ಲಕ ಭಾಷೆಗಳಿಗೆ ಲಿಪಿಗಳೇ ಇರುವುದಿಲ್ಲ. ಅಂಥ ಭಾಷೆಗಳನ್ನು ಮಾತನಾಡುವವರು ಇತರ ಭಾಷೆಗಳ ಲಿಪಿಗಳನ್ನು ಉಪಯೋಗಿಸುವುದೂ ಉಂಟು. ಈ ಬಗೆಯ ಲಿಪಿಸಮೂಹವನ್ನು **ವರ್ಣಸಮಾಮ್ನಾಯ** ಎಂದು ಕರೆಯುತ್ತಾರೆ.

ಸಂಸ್ಕೃತ ಭಾಷೆಯಲ್ಲಿ ಉಚ್ಚಾರವಾಗುವ ಎಲ್ಲ ಧ್ವನಿಗಳಿಗೂ ಲಿಪಿಸಂಕೇತಗಳಿವೆ. ಆದುದರಿಂದಲೇ ಸಂಸ್ಕೃತ ವರ್ಣಸಮಾಮ್ನಾಯವು ಅತ್ಯಂತ ವೈಜ್ಞಾನಿಕವಾದ ವರ್ಣಮಾಲೆಯಿಂದ ಕೂಡಿದೆ ಎನ್ನುತ್ತಾರೆ ವಿದ್ವಾಂಸರು. ಕನ್ನಡದ ಜನ ಈ ವೈಜ್ಞಾನಿಕವಾದ ವರ್ಣಮಾಲೆಯನ್ನೇ ಕನ್ನಡಕ್ಕೆ ಹೊಂದಿಸಿಕೊಂಡಿದ್ದಾರೆ. ಇದು ನಡೆದುದು ಅನೇಕ ಶತಮಾನಗಳ ಹಿಂದೆ.

ಅಕ್ಷರಗಳನ್ನು ಅಥವಾ ವರ್ಣಗಳನ್ನು ಎರಡು ಮುಖ್ಯ ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಅವು ಸ್ವರಗಳು, ವ್ಯಂಜನಗಳು. ಶತಮಾನಗಳಿಂದ ಈ ಸ್ವರಗಳು, ವ್ಯಂಜನಗಳು ಗ್ರಂಥಗಳಲ್ಲಿ ಪ್ರಯೋಗಗೊಂಡಿವೆ. ಈ ಹಿನ್ನೆಲೆಯಲ್ಲಿ ಕನ್ನಡ ವರ್ಣಮಾಲೆಯಲ್ಲಿ 'ಋ' ಎಂಬ ಹ್ರಸ್ವಸ್ವರಕ್ಕೆ ಶಾಶ್ವತವಾದ ಸ್ಥಾನವನ್ನು ನೀಡಲಾಗಿದೆ. ಇದ್ದಕ್ಕಿದ್ದಂತೆ, ನೂರಾರು ವರ್ಷಗಳವರೆಗೆ ಬಾಳಿದ ಈ 'ಋ' ಸ್ವರಾಕ್ಷರಕ್ಕೆ ಇತ್ತೀಚೆಗೆ **ಆಸನಕಂಪವುಂಟಾಗಿದೆ**. ಪ್ರಾಥಮಿಕ ಶಾಲೆಯ ಪಠ್ಯಪುಸ್ತಕಗಳಲ್ಲಿ ಅದನ್ನು ಈಗ ಇಲ್ಲವಾಗಿಸಿದ್ದಾರೆ. ಪಂಚಾಂಗ ಹೋದರೆ ನಕ್ಷತ್ರ ಹೋಗುತ್ತದೆಯೇ? ಎಂದು ಒಂದು ಗಾದೆ ಇದೆ. ಹಾಗೆ ಈ ಅಕ್ಷರ ಫೀನಿಕ್ಸ್ ಪಕ್ಷಿಯಂತೆ ತನ್ನ ಬೂದಿಯಿಂದೆದ್ದು ಪ್ರೌಢಶಾಲೆಯ

ಪಠ್ಯಪುಸ್ತಕಗಳಲ್ಲಿ ಹೊಸಜೀವನ ಪಡೆದು ಬದುಕಿಬಿಟ್ಟಿತು. 'ಗಣೇಶನು ಚಿಕ್ಕೆರೆಯಲ್ಲಿ ಬಿದ್ದ ದೊಡ್ಡಕೆರೆಯಲ್ಲಿ ಎದ್ದ' ಎಂದಂತೆ **ಋ** ಪ್ರೌಢಶಾಲೆಯ ಪಠ್ಯಪುಸ್ತಕಗಳಲ್ಲಿ 'ಧಿಂರಂಗ' ಎಂದು ಕಾಣಿಸಿಕೊಳ್ಳುತ್ತಿದೆ.

ಶಿಕ್ಷಣ ಇಲಾಖೆಯ ಎರಡು ಅಂಗಗಳಲ್ಲಿ ಇಂಥ ವ್ಯತ್ಯಾಸವುಂಟಾಗಿ ನಾಡಿನಾದ್ಯಂತ ಉಪಾಧ್ಯಾಯ ವರ್ಗದವರು ಆಶ್ಚರ್ಯಪಡುತ್ತಿದ್ದಾರೆ. ಸತ್ತ 'ಋ'ಕಾರಕ್ಕೆ ಸಂಜೀವಿನಿ ಔಷಧಿಯನ್ನು ನೀಡದ ಮಹಾತ್ಮನಾರು? ತಿಳಿಯದು. ಅಂತೂ ಇದೊಂದು ಶಿಕ್ಷಣ ಇಲಾಖೆಯ ಚಮತ್ಕಾರ.

ಕನ್ನಡಕ್ಕೆ 'ಋ'ಕಾರವೂ 'ೃ' ವಟ್ರಸುಳಿಯೂ ಅತಿ ಅಗತ್ಯವಾದವುಗಳು. ಇವುಗಳನ್ನು ಕಿತ್ತುಹಾಕುವುದು ಭಾಷೆಗೆ ಮಾಡುವ ಅಪರಾಧ. ಕನ್ನಡ ಸಂಸ್ಕೃತಿಗೆ ಕಳಂಕ. ಅದು ವರ್ಣಮಾಲೆಯೆಂಬ ಸುಂದರಿಯ ಮುಖದಿಂದ **ರಾಜದಂತ**ಗಳನ್ನು ಕಿತ್ತಂತೆ ಕುರೂಪಕ್ಕೆ ಕಾರಣವಾಗುತ್ತದೆ. (ರಾಜದಂತವೆಂದರೆ ಬಾಯಿಯಲ್ಲಿರುವ ಮೇಲುಸಾಲಿನ ದಂತಗಳ ಮಧ್ಯದಲ್ಲಿರುವ ಮುಂಬಲ್ಲುಗಳು). ಕ್ರಿ.ಶ. ೪೫೦ ಹಲ್ಮಿಡಿ ಶಾಸನದಲ್ಲಿ **ಮೃಗೇಶ** ಎಂಬ ಶಬ್ದವಿದೆ. ಈಚೆಗೆ ನಮ್ಮ ಪ್ರಸಿದ್ಧ ಕವಿ ಎಚ್. ಎಸ್. ವೆಂಕಟೇಶಮೂರ್ತಿಯವರು **'ಋತುವಿಲಾಸ'** ಎಂಬ ಗ್ರಂಥವನ್ನು ರಚಿಸಿದ್ದಾರೆ. ಹೀಗೆ ೧೫೦೦ ವರ್ಷಗಳ ಕಾಲ ಈ **ಋ** ಅಕ್ಷರವು ದೃಢವಾಗಿ ನಿಂತಿದೆ. ಕೆಲವರ ಪ್ರಕಾರ **ಋ** ಬರೆಯುವುದು ಕಷ್ಟವಂತೆ! ಅದಕ್ಕಿಂತ ಹೆಚ್ಚು ಕಷ್ಟವಾದ **ಣ, ಞ, ಙ** ಎಂಬುವನ್ನು ಏಕೆ ಬಿಡಬಾರದು? ಅದು ಉಚ್ಚಾರಣೆಗೆ ಕಷ್ಟವಂತೆ. ಹಾಗಾದರೆ **ವಿಜ್ಞಾನ** ಶಬ್ದವನ್ನು ಕೆಲವರು **ವಿಗ್ನಾನ** ಎಂದೇ ಉಚ್ಚರಿಸುತ್ತಿದ್ದಾರೆ. ಜ್ಞ ಅಕ್ಷರವನ್ನು ಏಕೆ ಬಿಡಬಾರದು? ಈ ಪ್ರಶ್ನೆಗಳಿಗೆ ಉತ್ತರವಿಲ್ಲ.

ಋ ಇರುವ ಎಲ್ಲ ಸಂಸ್ಕೃತ ಶಬ್ದಗಳನ್ನು ತದ್ಭವಗಳನ್ನಾಗಿ ಮಾಡಿ **ರು** ಎಂಬ ಅಕ್ಷರವನ್ನೇ ಉಪಯೋಗಿಸಬಹುದಂತೆ! ಇದು ಹಾಸ್ಯಾಸ್ಪದ.

ಕೆಲವು ಉದಾಹರಣೆಗಳನ್ನು ನೋಡೋಣ :

ಋತ ಎಂದರೆ ಸತ್ಯ, ಧರ್ಮ

ರುತ ಎಂದರೆ ಪಕ್ಷಿಗಳ ಕೂಜನ

ಋತುಸಂಧಿ ಎಂದರೆ ಅಮಾವಾಸ್ಯೆ

ರುತುಸಂಧಿಗೆ ಅಮಾವಾಸ್ಯೆ ಎಂದು ಅರ್ಥವಾಗುತ್ತದೆಯೇ?

ಅಮೃತ ಎಂಬ ಶಬ್ದವನ್ನು **ಅಮ್ರುತ** ಎಂದೋ **ಅಂರುತ** ಎಂದೋ ಬರೆದರೆ ಮೊದಲನೆಯ **ಅ** ಕಾರಕ್ಕೆ ಎರಡು ಮಾತ್ರೆಯ ಸತ್ವ ಬಂದು ಛಂದಸ್ಸು ಕೆಡುತ್ತದೆ. ಏನು ಮಾಡೋಣ!

ಋತು ಶಬ್ದಕ್ಕೆ ಅನೇಕ ಅರ್ಥಗಳಿವೆ :-

೧. ಎರಡು ತಿಂಗಳುಗಳು, ೨. ಮಾಸ, ೩. ಸ್ತ್ರೀಯರ ಮುಟ್ಟು, ೪. ಗರ್ಭ ಧರಿಸುವ ಕಾಲ, ೫. ವಿಷ್ಣು, ೬. ಶಿವ.

ರುತು ಶಬ್ದಕ್ಕೆ ಈ ಅರ್ಥಗಳು ಬರುತ್ತವೆಯೇ?

ಋತಿ ಎಂದರೆ ಕಲ್ಯಾಣ, ಮಂಗಳ

ರುತಿ ಎಂದರೆ ಧ್ವನಿ, ಮಾತು.

ಹೀಗೆ ಅನೇಕ ಉದಾಹರಣೆಗಳನ್ನು ನೀಡಿ ವ್ಯತ್ಯಾಸಗಳನ್ನು ತಿಳಿಸಬಹುದು.

ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದಲ್ಲಿ ಹಿಂದಿನ ಕವಿಗಳ ರಚನೆಗಳಲ್ಲಿದ್ದ 'ಋ' ಅಕ್ಷರವನ್ನು ತಿದ್ದಿ '**ರು**' ಅಕ್ಷರವನ್ನಾಗಿ ಮಾಡಿದ್ದಾರಂತೆ. ನಮ್ಮ ಹಿರಿಯ ಕವಿಗಳು ರಚಿಸಿರುವ ಕಾವ್ಯಭಾಗಗಳನ್ನು ಹೀಗೆ ಬದಲಾಯಿಸುವುದು, ಎಳಸುಬುದ್ಧಿ, ಒರಟು ಧಾರ್ಷ್ಟ್ಯ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ **ನಾಲ್ಕುಂ ವೇದಗಳೊಳೆ ನಾಲ್ಕುಂ ಋಚಂಗಳಂ ಪೇೞ್ದು** ಎಂದಿದೆ. (೫-೭೦ ವಚನ) ಇಲ್ಲಿಯ **ಋಚ**ವನ್ನು **ರುಚ** ಎಂದು ಬದಲಾಯಿಸಲು ಸಾಧ್ಯವೇ? ಕುವೆಂಪುರಚಿತ **ನಾಡಗೀತೆ**ಯಲ್ಲಿ ಬರುವ **ಜಯ ಹೇ ರಸಋಷಿಗಳ ಬೀಡೆ!** ಎಂಬ ಭಾಗದಲ್ಲಿರುವ ರಸಋಷಿಯನ್ನು **ರಸರುಷಿ** ಎಂದು ಮುದ್ರಿಸಲು ಆದೀತೆ? ಬೇಂದ್ರೆಯವರ **ಗಂಗಾವತರಣ** ಎಂಬ ಕವನ **ಋಷಿಯ ತೊಡೆಯಿಂದ** ಎಂಬುದನ್ನು **ರುಷಿಯ ತೊಡೆಯಿಂದ** ಎಂದು ಬದಲಾಯಿಸುವ ಹಕ್ಕು ಯಾರಿಗಿದೆ?

ಋಕಾರ ನಿರ್ಮೂಲನ ಯಜ್ಞವನ್ನು ನಿಲ್ಲಿಸುವ ಕೆಲಸವನ್ನು ನಮ್ಮ ಸಮರ್ಥ ಸರಕಾರ ಕೂಡಲೇ ಕೈಗೊಳ್ಳಬೇಕು. ಕನ್ನಡದ ವರ್ಣಮಾಲೆಯಲ್ಲಿ ಏನಾದರೂ ವ್ಯತ್ಯಾಸವಾಗಬೇಕಾದರೆ ಅದಕ್ಕೆ ಶಾಸನಸಭೆಯ ಅಂಗೀಕಾರ ಬೇಕು. ಭಾಷಾ ವಿದ್ವಾಂಸರನ್ನೂ, ಸಾಹಿತ್ಯ ವಿದ್ವಾಂಸರನ್ನೂ, ಒಟ್ಟಿನಲ್ಲಿ ತಿಳಿದವರನ್ನೂ ಸಭೆ ಸೇರಿಸಿ ತೀರ್ಮಾನವನ್ನು ಮಾಡಬೇಕೆಂಬುದು ಸಾರ್ವಜನಿಕರ ದೃಷ್ಟಿ. ತಮಗಿಲ್ಲದ ಅಧಿಕಾರವನ್ನು ಚಲಾಯಿಸಲು ಯಾರಿಗೂ ಅವಕಾಶ ಕೊಡಬಾರದು. ಇಲ್ಲದ ಅಧಿಕಾರದ ದುರುಪಯೋಗವನ್ನು ದಮನ ಮಾಡಬೇಕು. "I am Sir Oracle" ಎಂಬ ವರ್ತನೆಯನ್ನು ತೊಲಗಿಸಬೇಕು.

ಶತಮಾನಗಳಿಂದ ಕಂಗೊಳಿಸುತ್ತಿರುವ ಕನ್ನಡ ವರ್ಣಮಾಲೆಯನ್ನು ವಿರೂಪಗೊಳಿಸುವ ಹಕ್ಕು ಯಾರಿಗೂ ಇಲ್ಲ. ನಾಡಿನ ವಿದ್ವಾಂಸರ ಪ್ರತಿನಿಧಿ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ 'ಋ' ಕಾರವನ್ನು ಉಳಿಸಿಕೊಳ್ಳಬೇಕು ಎಂಬ ತೀರ್ಮಾನವಾಗಿದ್ದರೂ ಈ ಅಕ್ಷರದ ಶವಸಂಸ್ಕಾರಕ್ಕೆ ಸಿದ್ಧರಾದವರನ್ನು ಯಾವ ಹೆಸರಿನಿಂದ ಗುರುತಿಸಬೇಕು?

ನಮ್ಮಲ್ಲಿ ಅನೇಕ ಪಾಪಗಳಿವೆ. ಬ್ರಹ್ಮಹತ್ಯೆ, ಶಿಶುಹತ್ಯೆ, ಪ್ರಾಣಿಹತ್ಯೆ, ಆತ್ಮಹತ್ಯೆ ಇತ್ಯಾದಿ. ಇವುಗಳ ಜೊತೆಗೆ ಅಕ್ಷರಹತ್ಯೆಯೆಂಬ ಮತ್ತೊಂದು ಪಾಪವನ್ನು ನಿರ್ಮಾಣ ಮಾಡುವುದು ಸರಿಯೆ?

X. ಇಂದು ಬಳಕೆಯಲ್ಲಿರುವ ಕನ್ನಡ

ಭಾಷೆ ಎನ್ನುವುದು ಬಹಳ ಸೂಕ್ಷ್ಮವಾದ ವಿಚಾರ. ಮಾನವ ಜನಾಂಗಗಳ ನಡುವೆ ಇರುವ ಅತ್ಯಂತ ಪ್ರಮುಖವಾದ ವ್ಯವಹಾರ ಮಾಧ್ಯಮ. ಮೊದಲನೆಯದಾಗಿ ಇದೊಂದು ಮಾನವನ ಚಟುವಟಿಕೆ. ಪ್ರಾಣಿಗಳಲ್ಲಿಯೂ ಒಂದು ವಿಧವಾದ ಚಟುವಟಿಕೆ ಇದ್ದರೂ ಅದರ ಸಂಪೂರ್ಣ ವಿವರ ನಮಗಿನ್ನೂ ತಿಳಿಯದು. ಒಂದು ಭಾಷೆಯನ್ನು ಮಾತನಾಡುವ ಜನಸಮುದಾಯದಲ್ಲಿ ಎಲ್ಲರೂ ಅದೇ ಭಾಷಯನ್ನು ವ್ಯವಹಾರ ಮಾಧ್ಯಮವನ್ನಾಗಿ ಉಪಯೋಗಿಸುತ್ತಾರೆ. ಭಾಷೆ ಕೇವಲ ವ್ಯವಹಾರ ಮಾಧ್ಯಮವಲ್ಲ. ಅದು ವೈಯಕ್ತಿಕ ಅಭಿಪ್ರಾಯಗಳ ಅಭಿವ್ಯಕ್ತಿಗೂ ಆಧಾರವಾಗಿರುತ್ತದೆ. ಪಂಚೇಂದ್ರಿಯಗಳ ಕ್ರಿಯೆಯಂತೆ ಮಾತನಾಡುವ ಕ್ರಿಯೆಯು ಸ್ವಾಭಾವಿಕವಾಗಿ ಆವಿಷ್ಕಾರಗೊಳ್ಳುವುದಿಲ್ಲ. ಅದನ್ನು ನಾವು ಕಲಿತುಕೊಳ್ಳಬೇಕು, ಈಜನ್ನು ಕಲಿಯುವಂತೆ. ಈ ಮಾತಿನ ವ್ಯವಸ್ಥೆಗೆ ಪೂರಕವಾಗಿ ಬರಹ ಮುಂತಾದ ಲಿಪಿ ಸಂಜ್ಞೆಗಳೂ ಅದಕ್ಕೆ ಉಂಟು. ಇಂಥ 'ಭಾಷೆ' ಎಂಬ ವಿಷಯದ ಬಗ್ಗೆ ವಿದ್ವಾಂಸರು ವ್ಯಾಪಕವಾಗಿ ಸಂಶೋಧನೆಗಳನ್ನು ನಡೆಸಿದ್ದಾರೆ.

ಮಕ್ಕಳು ಕಾಲಮಾನದಲ್ಲಿ ಮಾತನಾಡುವುದನ್ನು ಗಮನಿಸಿ ಕೆಲವು ಘಟ್ಟಗಳನ್ನು ಗುರುತಿಸಬಹುದು.

೧. ೩ರಿಂದ ೬ ತಿಂಗಳವರೆಗೆ ಗೊಂದಲದ ಧ್ವನಿ ನಿರ್ಮಾಣ.

೨. ೬ರಿಂದ ೯ ತಿಂಗಳವರೆಗೆ ಸಂಜ್ಞೆಗಳಿಗೆ ಪ್ರತಿಕ್ರಿಯೆ; ಧ್ವನಿ ನಿರ್ಮಾಣ ಪ್ರಯತ್ನ.

೩. ೯ರಿಂದ ಮುಂದೆ ೧೨ರವರೆಗೆ ಅನುಕರಣೆ, ಮೊದಲ ಶಬ್ದಗಳ ಉಚ್ಚಾರ.

೪. ೧೫ ತಿಂಗಳವರೆಗೆ ಸ್ವಾಧೀನಕ್ಕೆ ಬಂದ ಮಾತು. ಇಪ್ಪತ್ತು-ಮೂವತ್ತು ಶಬ್ದಗಳಲ್ಲಿ ಸ್ವಾಧೀನ.

೫. ೨ ವರ್ಷಗಳಲ್ಲಿ ಹೇಳಿದ ಮಾತುಗಳನ್ನು ಅರ್ಥಮಾಡಿಕೊಳ್ಳುವುದು.

೬. ೪ ವರ್ಷಗಳಲ್ಲಿ ಮಾತಿನ ಬಗ್ಗೆ ಸಂಪೂರ್ಣ ತಿಳಿವಳಿಕೆ - ಮಾತಾಳಿಯಾಗುವ ಗುಣ.

ಹೀಗೆ ಮಕ್ಕಳು ಎಷ್ಟು ಮಾತುಗಳನ್ನು ಚೆನ್ನಾಗಿ ಕೇಳಿಸಿಕೊಳ್ಳುತ್ತವೆಯೋ ಅಷ್ಟನ್ನೂ ಉಚ್ಚರಿಸಲು ಕಲಿಯುತ್ತವೆ. ಅಂದರೆ ಅಷ್ಟುಮಟ್ಟಿಗೆ ಮಕ್ಕಳು ಭಾಷೆಯನ್ನು ಸ್ವಾಧೀನಪಡಿಸಿಕೊಳ್ಳುತ್ತವೆ ಎಂದರ್ಥ. ಹೀಗೆ ಭಾಷೆಯನ್ನು ಕಲಿಯುವುದು ಸಾಮಾಜಿಕ ಮತ್ತು ಮಾನಸಿಕ ವ್ಯವಹಾರ. ಈ ಕಲಿಕೆಯು ತಪ್ಪು ಮಾಡಿ ತಿದ್ದಿಕೊಳ್ಳುವುದರಿಂದ ಹಿಡಿದು ವ್ಯವಸ್ಥಿತವಾಗಿ

ಕಲಿತು ಅದರಲ್ಲಿ ಪ್ರಾವೀಣ್ಯವನ್ನು ಪಡೆಯುವವರೆಗೂ ದೀರ್ಘಕಾಲದ್ದಾಗಿರುತ್ತದೆ. ಪ್ರಪಂಚದಲ್ಲಿ ಹೀಗೆ ಅನೇಕ ಭಾಷೆಗಳು ಜನತೆಯಲ್ಲಿ ಪ್ರಚಾರದಲ್ಲಿವೆ. ಒಟ್ಟು ಸುಮಾರು ಹತ್ತುಸಾವಿರ ಭಾಷೆಗಳಿವೆಯೆಂದು ಹೇಳುತ್ತಾರೆ. ಒಂದು ಕೋಟಿಗಿಂತ ಹೆಚ್ಚು ಜನರು ಮಾತನಾಡುವ ಭಾಷೆಗಳ ಸಂಖ್ಯೆಯೇ ಎರಡು ಸಾವಿರದಷ್ಟಿದೆ ಎನ್ನುತ್ತಾರೆ. ಮಿಕ್ಕ ಭಾಷೆಗಳಲ್ಲಿ ಎಷ್ಟೋ ಭಾಷೆಗಳು ಪ್ರತಿವರ್ಷ ಸಂಪೂರ್ಣವಾಗಿ ಇಲ್ಲವಾಗುತ್ತಿವೆ. ಇನ್ನೊಂದು ಐವತ್ತು ವರ್ಷಗಳಲ್ಲಿ ಅವೆಲ್ಲವೂ ನಿರ್ನಾಮಗೊಳ್ಳುತ್ತವೆ ಎಂದು ನಿರೀಕ್ಷಿಸಲಾಗಿದೆ. ಮಹಾಪ್ರಭಾವವುಳ್ಳ ಭಾಷೆಗಳ ಆಕ್ರಮಣದಿಂದ ಹೀಗಾದರೆ ಅದೇನೂ ಆಶ್ಚರ್ಯವಲ್ಲ.

ಆಫ್ರಿಕನ್ ಗುಂಪಿಗೆ ಸೇರಿರುವ ಆರುನೂರೆಂಬತ್ತು ಭಾಷೆಗಳಿವೆ. ಅಮೆರಿಕನ್ ಇಂಡಿಯನ್ ಭಾಷೆಗಳು ಸುಮಾರು ಐನೂರು ಇವೆ. ಮಲಯಾ ಸಂಬಂಧೀ ಭಾಷೆಗಳು ನಾನೂರು ಇವೆ. ಇಂಡೋ-ಯೂರೋಪಿಯನ್ ಭಾಷೆಗಳು ನೂರೈವತ್ತು ಇವೆ. ಕನ್ನಡವನ್ನೂ ಸೇರಿಸಿ ಜನರು ಮಾತನಾಡುವ ದ್ರಾವಿಡ ಭಾಷೆಗಳು ಹತ್ತು ಇವೆ. ಭಾಷಾವರ್ಗಗಳಲ್ಲಿ ಅತ್ಯಂತ ಕಡಿಮೆ ಮಾತನಾಡುವ ಜನರು ಇರುವುದೇ ಈ ದ್ರಾವಿಡ ಭಾಷಾವರ್ಗದಲ್ಲಿ. ಅದರಲ್ಲಿರುವ ಹತ್ತು ಭಾಷೆಗಳಲ್ಲಿ ಕನ್ನಡವೂ ಒಂದು. ಕನ್ನಡವನ್ನು ಮಾತನಾಡುವವರ ಒಟ್ಟು ಸಂಖ್ಯೆ ಈಗ ನಾಲ್ಕು ಕೋಟಿಯಿರಬಹುದು.

ನಮ್ಮ ಭಾಷೆಯನ್ನು ಶಾಶ್ವತವಾಗಿ ಉಳಿಸಿಕೊಳ್ಳಬೇಕಾದರೆ ನಾವು ಎಷ್ಟು ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು, ಎಷ್ಟು ಒಮ್ಮತದಿಂದ - ಆತ್ಮೀಯತೆಯಿಂದ ಅದರ ರಕ್ಷಣೆಯನ್ನು ಮಾಡಬೇಕೆಂಬುದು ಈ ವಿವರಗಳಿಂದ ನಮ್ಮ ಕನ್ನಡಿಗರಿಗೆ ಮನೋಗತವಾಗುತ್ತದೆ.

ಒಂದು ಭಾಷೆ ಬದುಕಿ ವಿಶ್ವಮಾನ್ಯತೆಯನ್ನು ಪಡೆಯಬೇಕಾದರೆ ಅದರಲ್ಲಿ ಯಾವ ಚೈತನ್ಯವಿರಬೇಕು ಎಂಬ ಬಗ್ಗೆ ಚಿಂತನೆ ಮಾಡಬೇಕಾದ ಆವಶ್ಯಕತೆಯಿದೆ. ಭಾಷೆಯ ಜೀವಾಳ ಅದರ ಸಾಹಿತ್ಯದಲ್ಲಿದೆ. ಮಹಾ ಉದ್ದೇಶಗಳುಳ್ಳ, ವಿಶ್ವಕ್ಕೆಲ್ಲ ಅನ್ವಯಿಸುವ, ಶಾಶ್ವತ ಆಸಕ್ತಿಯನ್ನು ಬೆಳೆಯಿಸುವ ಸತ್ವ ಯಾವ ಸಾಹಿತ್ಯದಲ್ಲಿ ಇರುತ್ತದೆಯೋ ಅದು ಬದುಕುತ್ತದೆ. ಈಗೀಗ ಸಾಹಿತ್ಯವೆನ್ನುವ ಶಬ್ದವನ್ನು ಎಲ್ಲ ಬಗೆಯ ಮುದ್ರಿತ ವಿಷಯಗಳಿಗೂ ಅನ್ವಯಿಸುತ್ತಾರೆ. ಇದು ತಪ್ಪು. ಸರ್ವ ಜನಾದರಣೀಯವಾದ ಪ್ರತಿಭಾಜನ್ಯವಾದ ಗದ್ಯ-ಪದ್ಯ ರಚನೆಗೆ ಮಾತ್ರ ಈ ಮಾತನ್ನು ಉಪಯೋಗಿಸಬೇಕು. ಅದರಲ್ಲಿ ಅತ್ಯಂತ ಸುಂದರವಾದ, ಸತ್ಯವಾದ ಮೌಲ್ಯಗಳು ಗಾಢವಾಗಿ ವ್ಯಕ್ತಿಗತವಾಗಿ ಜೀವನದ ವಿವಿಧ ಸಂದರ್ಭಗಳಿಗೆ ಹೊಂದುವಂತೆ ಅಭಿವ್ಯಕ್ತವಾಗಿರಬೇಕು. ಈಗಿನ ನಾಗರಿಕತೆಯ ಸಂದರ್ಭದಲ್ಲಿ ಇತರ ಎಲ್ಲ ಕಲೆಗಳಿಗಿಂತಲೂ ಸಾಹಿತ್ಯವೇ ಅತ್ಯಂತ ಮುಖ್ಯವಾದುದು. ಪ್ರತಿಭೆಯು ದಾಖಲಿಸುವ ಇಂಥ ಕೃತಿಗಳು ಸಾರ್ವಕಾಲಿಕವಾದವು. ಇಂಥ ಕೃತಿಗಳು ನಿರ್ಮಾಣವಾಗಬೇಕಾದರೆ ಜನತೆಯ ಬಾಳಿನಲ್ಲಿ ಅಂಥ ಸತ್ವ ತುಂಬಿರಬೇಕು. ಹೀಗೆ ಬಾಳೂ ಕೃತಿಯೂ ಪರಸ್ಪರ ಸಂಬಂಧವುಳ್ಳವಾದರೂ ಬಾಳು ಮೊದಲು ಚೆನ್ನಾಗಿರಬೇಕು ಎಂಬುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು!

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನೂ ಭಾಷೆಯನ್ನೂ ನಾವು ಪರಿಶೀಲಿಸುತ್ತ ಇರಬೇಕು. ಕನ್ನಡ ಸಾಹಿತ್ಯವೆನ್ನುವುದು ಕ್ರಿ.ಶ.ದ ಪ್ರಾರಂಭದಿಂದಲೂ ಆಡುನುಡಿಯಲ್ಲಿದ್ದು ಐದನೆಯ ಶತಮಾನದಿಂದ ಶಾಸನಗತವಾಗಿ ಬೆಳೆದು ಒಂಭತ್ತನೆಯ ಶತಮಾನದ ಹೊತ್ತಿಗೆ 'ಕವಿರಾಜಮಾರ್ಗ'ವೆಂಬ ಶ್ರೀವಿಜಯ ನಿರ್ಮಿತವಾದ ಮಹತ್ತಿನ ಗ್ರಂಥದವರೆಗೆ ಗುಪ್ತವಾಗಿ ಮುಂದುವರಿದಿದೆ. ಶಾಸ್ತ್ರವಿಚಾರಗಳು ಅಧಿಕವಾಗಿರುವ ಈ ಗ್ರಂಥದಲ್ಲಿ ಧರ್ಮಸಹಿಷ್ಣುತೆ ಎಂಬುದು ಎಷ್ಟು ಪ್ರಧಾನವಾದ ಜೀವನ ಮೌಲ್ಯವೆಂಬುದನ್ನು ತುಂಬ ಸೊಗಸಾಗಿ ವರ್ಣಿಸಲಾಗಿದೆ. ಹತ್ತನೆಯ ಶತಮಾನದಲ್ಲಿ ಕನ್ನಡದ ಸುವರ್ಣಯುಗವೆನ್ನುವಂತಹ ಹೆಸರನ್ನು ತಂದ ಪಂಪರನ್ನಾದಿ ಕವಿಗಳ ಕೃತಿಗಳು ರಚಿತವಾದವು. ಹರಿಹರ-ರಾಘವಾಂಕರ ಕೃತಿಗಳಿಂದಲೂ ಬಸವಾದಿವಚನಕಾರರ ರಚನೆಗಳಿಂದಲೂ ಮುಂದಿನ ಕಾಲ ಪ್ರಖರವಾಗಿತ್ತು. ಹರಿದಾಸರ ಮತ್ತು ಕುಮಾರವ್ಯಾಸನ ಕೃತಿಗಳಿಂದ ಹದಿನೈದನೆಯ ಶತಮಾನ ಬಹು ಪ್ರಖರವಾದ ಪ್ರಭಾವವನ್ನು ಬೀರಿತು. ಇಪ್ಪತ್ತನೆಯ ಶತಮಾನಕ್ಕೆ ಹಿಂದಿನ ಒಂದೆರಡು ಶತಮಾನಗಳ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ತೇಜಸ್ಸಿನಿಂದ ಕೂಡಿರಲಿಲ್ಲ.

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡದ ನವೋದಯವುಂಟಾಗಿ ಹೊಸಗನ್ನಡದ ಸುವರ್ಣಯುಗವೆಂಬ ಹೆಸರು ಆ ಶತಮಾನಕ್ಕೆ ಬಂತು. ಇಪ್ಪತ್ತೊಂದನೆಯ ಶತಮಾನ ಈಗ ತಾನೆ ಪ್ರಾರಂಭವಾಗಿದೆ. ಎಲ್ಲ ದೃಷ್ಟಿಯಿಂದ ಈ ಶತಮಾನವು ಹಿಂದಿನ ಯುಗವನ್ನು ಮೀರಿಸಿ ಯಶಸ್ಸು ಪಡೆಯುವ ಸತ್ವವನ್ನು ಹೊಂದಿರುವಂತೆ ಕಾಣಬರುತ್ತಿದೆ. ಲೇಖಕರ ಪಡೆಗಳೂ ಲೇಖಕಿಯರ ದಳಗಳೂ ಕಾರ್ಯಪ್ರವೃತ್ತವಾಗಿವೆ. ಭವಿಷ್ಯ ತುಂಬ ಹೊಂಬಣ್ಣದಿಂದ ಕೂಡಿದೆ.

ಭಾಷೆಯ ವಿಚಾರವನ್ನು ಮತ್ತಷ್ಟು ತೀಕ್ಷ್ಣವಾದ ದೃಷ್ಟಿಯಿಂದ ಪರಿಶೀಲಿಸಬೇಕಾಗಿದೆ. ಕನ್ನಡ ಭಾಷೆಗೂ ಭವ್ಯವಾದ ಚರಿತ್ರೆಯೇ ಇದೆ. ಇದರಲ್ಲಿ ಅನುಮಾನವಿಲ್ಲ. ಸದಾ ಪರಿವರ್ತನಶೀಲವಾಗಿರುವುದೇ ಭಾಷೆಯ ಲಕ್ಷಣ. ವ್ಯತ್ಯಾಸ, ಬದಲಾವಣೆ, ಬೆಳವಣಿಗೆ ಎಂಬ ಯಾವ ಹೆಸರಿನಿಂದ ಕರೆದರೂ ನಮ್ಮ ಭಾಷೆ ಬೆಳೆಯುತ್ತಿದೆ ಎಂದೇ ಅರ್ಥ. ಕನ್ನಡದ ಭಾಷೆಯು ನಮಗೆ ದೊರೆತಿರುವ ಅತಿ ಪ್ರಾಚೀನ ಕಾಲವನ್ನು ಗಮನಿಸಿ ಆ ಕಾಲದ ಕನ್ನಡವನ್ನೇ ಪೂರ್ವದ ಹಳಗನ್ನಡ ಎಂದು ಕರೆಯುತ್ತಾರೆ. ಅಲ್ಲಿಂದ ಮುಂದೆ ಬಂದ ೯-೧೦ನೆಯ ಶತಮಾನದಿಂದ ೧೪ನೆಯ ಶತಮಾನದವರೆಗಿನ ಕನ್ನಡ ಭಾಷೆಯನ್ನು ಹಳಗನ್ನಡ ಎಂದು ಕರೆಯಬಹುದು. ೧೪ನೆಯ ಶತಮಾನದಿಂದ ಮುಂದಿನ ೧೭ನೆಯ ಶತಮಾನದವರೆಗಿನ ಕನ್ನಡ ಭಾಷೆಯನ್ನು ನಡುಗನ್ನಡ ಎಂದು ಕರೆಯಬಹುದು. ಅಲ್ಲಿಂದ ಈಚೆಗೆ ಕಾಣಬರುವ ಕನ್ನಡವನ್ನು ಹೊಸಗನ್ನಡ ಎಂದು ಕರೆಯುತ್ತಾರೆ. ಈ ಬೇರೆ ಬೇರೆ ಕಾಲದ ಕನ್ನಡ ಭಾಷೆಗಳಿಗೆ ಅದರದೇ ಆದ ಕೆಲವು ಲಕ್ಷಣಗಳಿವೆ. ಅವುಗಳ ವ್ಯಾಕರಣದ ವಿವರಣೆಯನ್ನು ವಿವರಿಸಲು ಇಲ್ಲಿ ಸರಿಯಾದ ಅವಕಾಶವಿಲ್ಲ. ಅಲ್ಲದೆ ಅದು ತುಂಬ ದೀರ್ಘವಾದ ವಿವರಣೆಯಾಗುತ್ತದೆ.

೨೦ನೆಯ ಶತಮಾನದ ಆದಿಭಾಗದಿಂದ ಕನ್ನಡದ ಭಾಷೆಯ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಇದು ಹೊಸಗನ್ನಡವೇ ಇರಬಹುದು. ಆದರೂ ಹಿಂದಿನ

ಶತಮಾನದಿಂದ ಬೇರೆಯೇ ಆಗಿ ನಿಲ್ಲುವ ಗುಣವನ್ನು ಈ ಕಾಲದ ಕನ್ನಡ ಪಡೆದಿದೆ. ಅನೇಕ ವಿಧದಲ್ಲಿ ಹಿಂದಿನ ಕನ್ನಡಕ್ಕಿಂತ ಇದು ಬೇರೆಯಾದುದರಿಂದ ಈ ಶತಮಾನದ ಕನ್ನಡವನ್ನು ೨೧ನೆಯ ಶತಮಾನದಲ್ಲಿ ಇಂದಿನ ಕನ್ನಡದ ಜೊತೆ ಸೇರಿಸಿ ಅದನ್ನು **ಆಧುನಿಕ ಕನ್ನಡ** ಎಂದು ಕರೆಯಬಹುದೇನೋ? ಆದರೆ ಈ ಆಧುನಿಕ ಕನ್ನಡದಲ್ಲಿ ಇತ್ತೀಚಿನ ಒಂದು ದಶಕದಲ್ಲಿ ಆಗಿರುವ ಕೆಲವು ವ್ಯತ್ಯಾಸಗಳು ಕನ್ನಡವನ್ನು ಪ್ರೀತಿಸುವ ಓದುಗರಿಗೆ ತುಂಬ ಆತಂಕವನ್ನು ತಂದಿದೆ.

ಕನ್ನಡ ನಾಡು ಏಕೀಕೃತವಾಗುವುದಕ್ಕೆ ಮುಂಚೆ ಕನ್ನಡ ಭಾಷೆಯನ್ನು ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಹೈದರಾಬಾದ್ ಕನ್ನಡ ಎಂದು ವಿವಿಧವಾಗಿ ಗುರುತಿಸುತ್ತಿದ್ದರು. ಈ ವಿಭಾಗಗಳಿಗೆ ವಿಶಿಷ್ಟವಾದ ಶಬ್ದ ಸ್ವರೂಪಗಳೂ ಸ್ವರಾಘಾತಗಳೂ ಇದ್ದವು. ಇವುಗಳನ್ನು ಗುರುತಿಸಿದ ಒಡನೆ ಮಾತನಾಡುವವನು ಯಾವ ಭಾಗಕ್ಕೆ ಸೇರಿದವನು ಎಂದು ಹೇಳಿಬಿಡಬಹುದಾಗಿತ್ತು. ಏಕೀಕರಣದ ತರುವಾಯ ಎಲ್ಲ ಕಡೆ ಒಂದೇ ಬಗೆಯ ಭಾಷೆಯನ್ನು ತರಬೇಕೆಂಬ ಆತುರದಲ್ಲಿ ಶಾಲೆಗಳ ಪಠ್ಯಪುಸ್ತಕಗಳನ್ನು ತಯಾರಿಸಿದರು. ಅದರಲ್ಲಿ ಎಲ್ಲ ಕಡೆಯ ಶಬ್ದೋಚ್ಚಾರಗಳನ್ನು ಕಾಗುಣಿತಗಳನ್ನು ಸೇರಿಸಿ ಎಲ್ಲ ಕಡೆಯಲ್ಲಿಯೂ ಗೊಂದಲವನ್ನು ಉಂಟುಮಾಡಲಾಯಿತು. ಬಾಲಕರಿಗೆ ಯಾವ ಶಬ್ದದ ಯಾವ ಸ್ವರೂಪ ಸರಿ ಎಂಬುದು ತಿಳಿಯದಾಯಿತು. ಯಾವುದು ಕಾಲಕ್ರಮದಲ್ಲಿ ನಿಧಾನವಾಗಿ ಸಿದ್ಧಗೊಳ್ಳಬೇಕೋ ಅದನ್ನು ಸರ್ವಾಧಿಕಾರದ ಮೂಲಕ 'ಏಕ್‌ದಂ' ಸಾಧಿಸಲು ಮಾಡಿದ ಪ್ರಯತ್ನ ಸೋಲನ್ನು ಅನುಭವಿಸಿತು. ಈಗ ಶಾಲೆಗಳ ಅಧ್ಯಾಪಕರು ನಿಸ್ಸಹಾಯಕರಾಗಿದ್ದಾರೆ.

ಗ್ರಂಥಗಳಲ್ಲಿ ಗ್ರಾಂಥಿಕರೂಪಗಳನ್ನು ಸಾಧಿಸುವುದು ಸುಲಭವಾಗಿತ್ತು. ಗ್ರಾಂಥಿಕ ರೂಪವೆಂದರೆ ವ್ಯಾಕರಣದಿಂದ ಸಾಧಿತವಾದ ರೂಪ. ಇದು ತಡವಾಗಿಯಾದರೂ ಎಲ್ಲ ಕಡೆಯಲ್ಲೂ ಪ್ರಚಾರದಲ್ಲಿರುವ ಶಬ್ದಗಳನ್ನು ಎಲ್ಲ ಕಡೆಯ ಜನರಿಗೂ ಪರಿಚಯಮಾಡಿಕೊಡುತ್ತಿತ್ತು. ಗ್ರಾಮ್ಯವನ್ನು ಕಡಿಮೆ ಮಾಡಿ ಗ್ರಾಂಥಿಕ ಭಾಷೆಯನ್ನು ಒಂದು ಸ್ವರೂಪಕ್ಕೆ ತರುವುದು ಸಾಧ್ಯವಾಗಿತ್ತು. ಆ ವಿಧಾನವನ್ನು ಅನುಸರಿಸಲಿಲ್ಲ. ಗ್ರಾಮೀಣ ಭಾಷೆಯೇ ಭಾಷೆಯ ನಿಜವಾದ ಸ್ವರೂಪ, ಗ್ರಾಂಥಿಕ ಭಾಷೆಯೇ ಕೃತಕ ಎಂಬ ವಾದವೊಂದು ಎದ್ದು ಮತ್ತಷ್ಟು ಗೊಂದಲವನ್ನುಂಟುಮಾಡಿತು.

ಕನ್ನಡದ ಸ್ವರಗಳು ಎಲ್ಲ ದ್ರಾವಿಡ ಸ್ವರಗಳಂತೆ ತುಂಬ ದುರ್ಬಲವಾದವು. ಈ ಕಾರಣದಿಂದ ಒಂದೊಂದು ಪದಗಳಿಗೂ ಪರ್ಯಾಯ ರೂಪಗಳು ಹಚ್ಚಿದವು. ಇವುಗಳಲ್ಲಿ ಯಾವುದು ಸರಿ ಎಂಬುದನ್ನು ಜನಸಾಮಾನ್ಯರು ನಿರ್ಧರಿಸಲು ಅಸಮರ್ಥರಾಗಿದ್ದರು. ವಿದ್ವಾಂಸರೂ, ಲೇಖಕರೂ, ಉಪಾಧ್ಯಾಯರೂ ಈ ವಿಚಾರದಲ್ಲಿ ನಿರುತ್ಸಕರಾಗಿ ಸುಮ್ಮನಿದ್ದುಬಿಟ್ಟರು. ಇವೆಲ್ಲದರ ಪರಿಣಾಮವಾಗಿ ಬರಹದಲ್ಲಿ ಅವ್ಯಾಕರಣ ಪ್ರಯೋಗಗಳೂ ನೂತನ ವಿಚಿತ್ರ ಶಬ್ದಗಳೂ ಸೃಷ್ಟಿಯಾದವು. **ಸೃಜನಶೀಲ**, **ಆಧುನೀಕರಣ**, **ಅಗಲೀಕರಣ**, **ಉದ್ದೀಕರಣ** ಮುಂತಾದ ಶಬ್ದಗಳು ಅಶುದ್ಧ ಪ್ರಯೋಗಗಳಾದರೂ ಉಳಿಯುವ ಸಾಧ್ಯತೆಗಳನ್ನು ಹೊಂದಿದವು. **ಸೃಜನಶೀಲ** ಶಬ್ದವಂತೂ ಎಲ್ಲ ಲೇಖಕರ ಪ್ರೀತಿ-ಗೌರವಗಳನ್ನು ಪಡೆದ

ಶಬ್ದವಾಯಿತು. 'ಈಕರಣ' ಎಂಬ ಪ್ರತ್ಯಯವನ್ನು ಹತ್ತಿಸಿ ಯಾವ ಹೊಸ ಶಬ್ದವನ್ನು ಬೇಕಾದರೂ ಸಿದ್ಧಪಡಿಸಬಹುದೆಂಬ ನಂಬಿಕೆ ಬೆಳೆದುಬಿಟ್ಟಿತು. ಔದ್ಯೋಗೀಕರಣ, ಕೈಗಾರಿಕೀಕರಣ, ಡಾಂಬರೀಕರಣ ಇತ್ಯಾದಿಗಳನ್ನು ಏಕೆ ಉಪಯೋಗಿಸಬಾರದೆಂದು ಕನ್ನಡದ ಅಧ್ಯಾಪಕರೇ ಕೇಳುತ್ತಾರೆ. **ಆಧುನಿಕಗೊಳಿಸು, ಅಗಲಗೊಳಿಸು, ಉದ್ದಮಾಡು** ಮುಂತಾದುವು ಇರುವಾಗ ಆಧುನೀಕರಣಕ್ಕೆ ಹೇಗೆ ಗೌರವ ನೀಡಬೇಕು. ಇನ್ನೊಂದು ಪದ **ಮಾರ್ಗೋಪಾಯ** ಎಲ್ಲೆಲ್ಲೂ ಹರಡುತ್ತಾ ಇದೆ. **ಮಾರ್ಗ, ಉಪಾಯ** ಎರಡಕ್ಕೂ ಹತ್ತಿರದ ಅರ್ಥವಿರುವಾಗ ಇವೆರಡನ್ನೂ ಸೇರಿಸಿ, ಅನುಚಿತವಾದ ಶಬ್ದವನ್ನು ನಿರ್ಮಾಣ ಮಾಡಲಾಗಿದೆ. ಇದು ಇಂಗ್ಲಿಷ್ ಭಾಷೆಯಲ್ಲಿ ಅಧಿಕವಾಗಿ ಪ್ರಯೋಗದಲ್ಲಿರುವ ways and means ಎಂಬ ನುಡಿಗಟ್ಟಿನ ಕನ್ನಡ ಅನುವಾದ. ಇಂಗ್ಲಿಷಿನಲ್ಲಿ ಎರಡು ಶಬ್ದಗಳಿರುವುದು ಸ್ಪಷ್ಟ. ಕನ್ನಡದಲ್ಲಿ **ಮಾರ್ಗೋಪಾಯವನ್ನು** ಎಂದು ಹೇಳುವಾಗ ಆ ಶಬ್ದದಲ್ಲಿ ಎರಡು ಶಬ್ದಗಳಿರುವುದು ಗುರುತಿಸಲಾಗದಂತಿದೆ. ಜನರು ಅದನ್ನು ಒಂದೇ ಶಬ್ದವೆಂದು ತಿಳಿದು ಉಪಯೋಗಿಸುತ್ತಾರೆ, ಇದು ತಪ್ಪು. **ಊಟ-ಉಪಚಾರ** ಎನ್ನುವುದು **ಊಟೋಪಚಾರ** ಆಗಿದೆ. ಅದರ ಸಾಮ್ಯದ ಮೇಲೆ **ಬಾಯೋಪಚಾರ** ಎಂಬ ಶಬ್ದವನ್ನೂ ಅಧಿಕಾರಿಗಳು ಉಪಯೋಗಿಸುತ್ತಿದ್ದಾರೆ. ಡೈರಿ ಹಾಲಿನ ಚೀಲದ ಮೇಲೆ **ಪಾಶ್ಚೀಕೃತ** ಹಾಲು ಎಂದಿದೆ. ನ್ಯಾಯವಾಗಿ **ಪಾಶ್ಚರೀಕೃತ** ಎಂದಿರಬೇಡವೆ? ಅವರಿಗೆ ಹೇಳುವವರು ಯಾರು?

ಅನ್ಯಭಾಷೆಗಳಿಂದ ಉಪಯುಕ್ತ ಶಬ್ದಗಳನ್ನು ಎರವಲಾಗಿ ಪಡೆಯುವುದು ಭಾಷೆಯ ಶಬ್ದಸಂಪತ್ತನ್ನು ಹೆಚ್ಚಿಸುವ ಒಂದು ಮಾರ್ಗ. ಆದರೆ ಎಲ್ಲ ಶಬ್ದಗಳನ್ನೂ ಇತರ ಭಾಷೆಗಳಿಂದಲೇ ತರಬೇಕಾಗಿಲ್ಲ. ಈಗೀಗ ಅನಗತ್ಯವಾಗಿ ಭಾಷಣದಲ್ಲಿಯೂ ಲೇಖನದಲ್ಲಿಯೂ ಇಂಗ್ಲಿಷ್ ಶಬ್ದಗಳನ್ನು ತುಂಬುತ್ತಿರಲಾಗಿದೆ, ಕನ್ನಡದಲ್ಲಿ ಪ್ರಚಾರದಲ್ಲಿರುವ **ಸಾರ್ವಜನಿಕ, ಮಾಧ್ಯಮ** ಎಂಬ ಶಬ್ದಗಳು ಇದ್ದರೂ Public, Medium ಎಂಬುವೇ ಪ್ರಚಾರವಾಗುತ್ತಿವೆ.

ಇಂಥ ಕಲಸುಮೆಲೋಗರದಿಂದ ಕನ್ನಡ ಭಾಷೆ ಈಗ ಬಳಲುತ್ತಿದೆ. ಹೀಗಾಗುವುದಕ್ಕೆ ಇರುವ ಮೂಲಕಾರಣವೇನು ಎಂಬುದು ಶಿಕ್ಷಣ ಇಲಾಖೆಗೆ ಗೊತ್ತಿದೆ. ಗೊತ್ತಿದ್ದರೂ ಆ ದಿಕ್ಕಿನಲ್ಲಿ ಯಾರೂ ಏನೂ ಮಾಡದ ಸ್ಥಿತಿಯನ್ನು ಆ ಇಲಾಖೆ ತಂದುಕೊಂಡಿದೆ. ಶಾಲೆಗಳಲ್ಲಿ ಕನ್ನಡ ಪಾಠ ಮಾಡುವವರಿಗೆ ಯಾವ ವಿಶಿಷ್ಟ ತರಬೇತಿಯೂ ಬೇಕಿಲ್ಲ. ಅವರಿಗೆ ಕನ್ನಡದಲ್ಲಿ ಬಂದಿರುವ ಅಂಕಗಳೂ ಗಣನೆಗೆ ಬರುವುದಿಲ್ಲ. B.Ed. ಕಾಲೇಜುಗಳಲ್ಲಿ ಕನ್ನಡ ಪಾಠ ಮಾಡಲು ಸೇರುವ ವಿದ್ಯಾರ್ಥಿಗಳಿಗೆ ಪದವಿ ಪರೀಕ್ಷೆಯಲ್ಲಿ ಐಚ್ಛಿಕ ಕನ್ನಡವನ್ನು ಕಲಿತಿರಬೇಕೆಂಬ ನಿಯಮವೂ ಇಲ್ಲ. ಮೊದಲ ಭಾಷೆಯಾಗಿ ಕಲಿತರೆ ಸಾಕು ಎಂದು ಅಂಥವರಿಗೆ B.Ed. ತರಗತಿಗಳಿಗೆ ಪ್ರವೇಶವನ್ನು ನೀಡುತ್ತಾರೆ. ಅಂಥವರಿಗೆ ಕನ್ನಡದ ವ್ಯಾಕರಣದಲ್ಲಿ ವರ್ಣಸಮಾಮ್ನಾಯವೂ ಚೆನ್ನಾಗಿ ಗೊತ್ತಿರುವುದಿಲ್ಲ. ಅಂಥವರು ಪ್ರಾರಂಭದಲ್ಲಿ ಮಕ್ಕಳಿಗೆ ಸರಿಯಾದ ಉಚ್ಚಾರಣೆಯನ್ನಾಗಲಿ ಕಾಗುಣಿತವನ್ನಾಗಲಿ ಕಲಿಸಲಾರರು. ಅಲ್ಲಿ ಶಿಕ್ಷಣದ ಪರಿಸ್ಥಿತಿ ಸರಿಯಾಗುವ ತನಕ ಈಗಿನ ಗೊಂದಲ ಸರಿಯಾಗುವುದಿಲ್ಲ. ಸಮೂಹ ಮಾಧ್ಯಮಗಳಿಂದ ಆಗುತ್ತಿರುವ ಅನಾಹುತ ಇನ್ನೂ ತೀವ್ರತರವಾದುದು. ವಾರ್ತಾಪತ್ರಿಕೆಗಳಿಗೆ ಉಪಸಂಪಾದಕರಾಗಿ ನೇಮಕವಾಗುವವರು ಪತ್ರಿಕೋದ್ಯಮವೆಂಬ (Journalism) ಶಿಕ್ಷಣವನ್ನು ಪಡೆದವರು. ಅವರಿಗೆ ಇಂಗ್ಲಿಷ್ ಭಾಷೆಯಲ್ಲಿ

ಸ್ವಲ್ಪ ಶಿಕ್ಷಣವಾಗಿರುತ್ತದೆ. ಕನ್ನಡದ ಬಗ್ಗೆ ಅವರಿಗೆ ಏನೇನೂ ತಿಳಿವಳಿಕೆಯಿರುವುದಿಲ್ಲ. ಅಂಥವರೇ ಕನ್ನಡ ವಾರ್ತಾಪತ್ರಿಕೆಗಳ ಸಾಪ್ತಾಹಿಕ ಪುರವಣಿಯನ್ನು ಸಿದ್ಧಪಡಿಸುವವರು. ಇನ್ನು ಭಾಷೆಯೆಂಬುದು ವಾರ್ತಾಪತ್ರಿಕೆಗೆ ಅಷ್ಟು ಮುಖ್ಯವಲ್ಲ. ದಪ್ಪಕ್ಷರದ ಶಿರೋನಾಮೆಗಳನ್ನು (Headlines) ನೀಡಿದರೆ ಸಾಕು. ಕಾಗುಣಿತವೂ ತಪ್ಪು, ಪದವೂ ತಪ್ಪು. ಆಕಾಶವಾಣಿ, ದೂರದರ್ಶನದ ವರ್ತಮಾನವನ್ನು ಓದುವವರು ಮಾಡುವ ತಪ್ಪುಗಳು ಅಗಾಧ. ಮೊನ್ನೆ ದೂರದರ್ಶನದಲ್ಲಿ **ಕಾರ್ಯಕ್ರಮ** ಎಂಬುದನ್ನು **ಕಾರ್ಯಕರ್ಮ** ಎಂದು ದಪ್ಪ ಅಕ್ಷರಗಳಲ್ಲಿ ಪ್ರದರ್ಶಿಸಿದರು. ಇದು ಯಾವ ಕರ್ಮ?

ಈ ಎಲ್ಲ ಸಂಸ್ಥೆಗಳಲ್ಲಿಯೂ ಆಯಾ ದಿನದ ವಾರ್ತಾಪತ್ರಿಕೆ, ಆಯಾ ದಿನದ ವಾರ್ತಾಪ್ರಸಾರ ಇವುಗಳನ್ನು ಓದಿ, ಕೇಳಿ ತಪ್ಪುಗಳನ್ನು ಆಮೂಲಾಗ್ರವಾಗಿ ತಿದ್ದುವ ಸಾಮರ್ಥ್ಯವುಳ್ಳ ಎಂ.ಎ. ಪದವೀಧರರನ್ನು ಈ ಕೆಲಸಕ್ಕಾಗಿಯೇ ನೇಮಿಸಬೇಕು. ಅವರ ಕಾರ್ಯಸಾಮರ್ಥ್ಯವನ್ನು ಸರಿಯಾಗಿ ಪರೀಕ್ಷಿಸಿ ನೇಮಕ ಮಾಡಬೇಕು. ಇಲ್ಲಿ ಪ್ರಭಾವಗಳಿಗೆ ಅವಕಾಶವಿರಬಾರದು.

ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿಗಳ ಪ್ರದರ್ಶನದಲ್ಲಿ ಗ್ರಾಮೀಣ ಉಚ್ಚಾರಣೆಯು ತಾನೇತಾನಾಗಿ ತಾಂಡವವಾಡುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಈ ಧಾರಾವಾಹಿಗಳನ್ನು ತಯಾರಿಸುವವರೇ ಬೇಕಾದ ಏರ್ಪಾಟುಗಳನ್ನು ಮಾಡಬೇಕು.


ಕನ್ನಡದಲ್ಲಿ ಲೇಖನಗಳ ಗ್ರಂಥಗಳ ಪ್ರವಾಹವೇ ಹರಿದುಬರುತ್ತಿದೆ. ಇವುಗಳ ಅರ್ಹತೆಯನ್ನು ಪರೀಕ್ಷಿಸಿ ಬೆಲೆ ಕಟ್ಟುವವರು ಕಡಿಮೆ. ಹುಚ್ಚು ಹೊಳೆ ಹರಿಯುತ್ತಿದೆ, ಕಟ್ಟೆಕಟ್ಟುವವರಿಲ್ಲ. ಅಂಥವರಿಲ್ಲದಿದ್ದರೆ ಬೆಳೆದ ಫಸಲುಗಳಿಗೂ ಹುಳು ಹತ್ತಬಹುದು.

ನಮ್ಮ ಸೋದರ ಸಾಹಿತ್ಯಗಳ ವಿದ್ವಾಂಸರೊಡನೆ ಮಾತನಾಡುವಾಗ ಆಯಾ ಭಾಷೆಗಳಲ್ಲಿ ಆಗುತ್ತಿರುವ ಇಂಥ ಅನೇಕ ತಪ್ಪುಗಳನ್ನು ಅವರೂ ಗುರುತಿಸಿರುವುದು ಪರಿಚಯವಾಗುತ್ತದೆ. ಇದರಿಂದ ತಿಳಿದುಬರುವುದೇನೆಂದರೆ ಎಲ್ಲ ಭಾರತೀಯ ಭಾಷೆಗಳಲ್ಲಿಯೂ ಕುದಿತಕ್ಕೆ ಒಳಗಾಗಿರುವ ಪರಿಸ್ಥಿತಿ ಇದೆ. ಇದನ್ನು ಸರಿಪಡಿಸುವ ಮಾರ್ಗ ತೋರದೆ ಎಲ್ಲರೂ ಕಂಗಾಲಾಗಿದ್ದಾರೆ. ಸಾಹಿತ್ಯ ಸಮ್ಮೇಳನಗಳಲ್ಲಿ, ಆಗಿಂದಾಗ ನಡೆಯುವ ಭಾಷಾಸಂಕಿರಣಗಳಲ್ಲಿ ಭಾಷೆಯ ಬೆಳವಣಿಗೆಯು ತೆಗೆದುಕೊಳ್ಳಬೇಕಾದ ಮಾರ್ಗಗಳನ್ನು ಕುರಿತು ಚರ್ಚೆಗಳೂ ತೀರ್ಮಾನಗಳೂ ಹೆಚ್ಚಬೇಕು. ಮುಂದಿನ ಸಮ್ಮೇಳನಗಳಲ್ಲಿ ಇದು ಸಾಧ್ಯವಾದೀತೆ ಎಂಬುದನ್ನು ಕಾದುನೋಡಬೇಕು. ಒಟ್ಟಿನಲ್ಲಿ ಈ ವಿಷಯವು ಗಂಭೀರವಾದುದೆಂಬುದನ್ನು ನಾವು ತಿಳಿದುಕೊಳ್ಳಬೇಕು. ಪರಿಹಾರೋಪಾಯಗಳನ್ನು ಅನುಸರಿಸಬೇಕು.

ಆಯ್ದ ಗ್ರಂಥಸೂಚಿ

Ghatage, A.M. etal	**Studies in Historical Sanskrit Lexicography** (1973)
Hayakawa, S.I.	**Language in Thought and Action** (1941)
Katre, S.M.	**'Indo-Aryan Lexicography' in the Poona Orientalist** (1937)
Misra, B.G. Ed.	**Lexicography in India** (1930)
Ogden C.K. and Richards I.A.	**The meaning of meaning** (1952)
Raja K. Kunjunni	**Indian Theories of Meaning** (1969)
Zgusta, Ladislav	**Manual of Lexicography (1971)**
Georg Autenrieth Translated by Robert-Keep	**Homeric Dictionary** (1984 Ed.) (First published in 1871)
Pei M.	**The World's Chief Languages** (1949)
Robins R.H.	**General Linguistics** (1971)

ಮುದ್ರಿತವಾಗಿರುವ ಎಲ್ಲ ಪ್ರಮುಖ ಕನ್ನಡ ನಿಘಂಟುಗಳು.



ನಿಘಂಟು ವಿಜ್ಞಾನವು ಕಳೆದ ಶತಮಾನದ ಕೊನೆಕೊನೆಗೆ ಶಾಸ್ತ್ರೀಯ ವಿಧಾನವಾಗಿ ರೂಪು ಪಡೆಯಿತಷ್ಟೆ. ಹೀಗೆ ರೂಪುಗೊಟ್ಟವರಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಸಾಹಸ, ನಡೆಸಿದ ಪ್ರಯತ್ನ, ಮಾಡಿದ ಕೆಲಸ ಸ್ಮರಣೀಯ ಹಾಗೂ ಅನನುಕರಣೀಯ. ತಮ್ಮ ಬಹುಬಗೆಯ ಕೃತಿಗಳ ಮೂಲಕ ಈ ಶಾಸ್ತ್ರವನ್ನು ಕ್ರಿಯಾತ್ಮಕಗೊಳಿಸಿದ್ದಾರೆ. ನಿಘಂಟು ಶಾಸ್ತ್ರವು ಇಂದು ಅನಿವಾರ್ಯವೂ ಅಗತ್ಯವೂ ಆದ ಶಾಸ್ತ್ರವಾಗಿ ಕನ್ನಡ ಸಂಸ್ಕೃತಿ ಸಂದರ್ಭದಲ್ಲಿ ಬೆಳೆಯುತ್ತಿದೆ.

'ಕನ್ನಡ ನಿಘಂಟು ಪರಿವಾರ' ಗ್ರಂಥವು ನಿಘಂಟು ವಿಜ್ಞಾನಕ್ಕೆ ಸಂಬಂಧಿಸಿದ ಬಹುಮುಖ್ಯ ವಿಚಾರಗಳನ್ನು ಕುರಿತು ಬಹು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ, ವ್ಯಾಖ್ಯಾನಿಸುತ್ತದೆ. ಇದು ಪ್ರಧಾನವಾಗಿ ವಿಶ್ಲೇಷಣೆ ಮತ್ತು ವ್ಯಾಖ್ಯಾನವನ್ನು ಹೊಂದಿದೆ. ಇಂದು ನಿಘಂಟು ಶಾಸ್ತ್ರವು ಪರಿಚಯಾತ್ಮಕ ನೆಲೆಯಿಂದ ಹೊರಬಂದಿದೆಯಷ್ಟೆ. ಅದು ವಿವಿಧ ಶಾಸ್ತ್ರಗಳ ಜತೆ ಹೊಸ ಬಗೆಯ ವ್ಯಾಖ್ಯಾನಗಳಿಗೆ ತೊಡಗಿದೆ. ಹಿರಿಯ ವಿದ್ವಾಂಸರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರೇ ಹೊಸ ಬಗೆಯ ವ್ಯಾಖ್ಯಾನಗಳಿಗೆ ತೊಡಗಿರುವುದು ವಿಶೇಷ ಅಂಶವಾಗಿದೆ. ಅವರು ಈಗಾಗಲೇ ನಾಡಿನಲ್ಲೇ 'ಇಗೊ ಕನ್ನಡ'ದ ಮೂಲಕ ಮನೆಮಾತಾಗಿ 'ಭಾಷೆ'ಯೆಂಬ ಮಾಧ್ಯಮದ ಮೂಲಕ ಭಾಷೆ ಮತ್ತು ಸಂಸ್ಕೃತಿಗಳ ಅನುಸಂಧಾನ ಕುರಿತು ಚಿಂತಿಸುತ್ತಿದ್ದಾರೆ. ಆ ಚಿಂತನೆಯ ಫಲವನ್ನು ನಾಡು ಪಡೆಯುತ್ತಿದೆ. ಈ ಗ್ರಂಥವು ಇಂಥ ಚಿಂತನದ ಮುಖ್ಯ ಎಳೆಗಳನ್ನೆಲ್ಲ ಒಳಗೊಂಡಿದೆ.

ISBN : 81-7713-124-9
ಬೆಲೆ ರೂ. ೨೦೦/-

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು